ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಭಾಷಿಕ ಸಾಹಿತ್ಯ

೧



# ಉತ್ತರ ಕರ್ನಾಟಕದ
# ಕನ್ನಡ ಜನಪದ ಒಡಪುಗಳು

ಸಂ. ಡಾ. ಶಾಂತಾ ಇಮ್ರಾಪೂರ

**ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೩೮**

**ಪದ್ಯ ಸಾಹಿತ್ಯ ಪ್ರಕಾರ – ೨**

## ಉತ್ತರ ಕರ್ನಾಟಕದ

# ಕನ್ನಡ ಜನಪದ ಒಡಪುಗಳು


ಸಂಪಾದಕರು

**ಡಾ. ಶಾಂತಾ ಇಮ್ರಾಪೂರ**



**ಕರ್ನಾಟಕ ಸರ್ಕಾರ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

**ಬೆಂಗಳೂರು – ೫೬೦ ೦೦೨**

**'Uttarara Karnatakada Janapadaa Odapugalu'** Edited by **Dr. Shanta Imrapur,** Professor, Institute of Kannada Studies, Karnataka University, Dharwad-3. Published by K.A.Dayananda, Director, Dept. of Kannada and Culture, Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

**ಆವೃತ್ತಿಯ ಹಕ್ಕು** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
**ಪ್ರಥಮ ಮುದ್ರಣ** : ೨೦೧೪
**ಪುಟಗಳು** : liv + ೪೨೬ = ೪೮೦
**ಪ್ರತಿಗಳು** : ೧೦೦೦
**ಬಿಡಿ ಪ್ರತಿ ಬೆಲೆ** : ರೂ. ೫೦/-
Print : 2014
Pages : liv + 426 = 480
Copies : 1000
Price : Rs. 50/-

ಪ್ರಕಾಶಕರು :
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ. ಅವರಿಂದ ಪ್ರಕಟಿತ
**ಸಹಕಾರ : ಶ್ರೀ ಬಿ.ಎನ್. ಪರಡ್ಡಿ,** ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

**ಮುದ್ರಕರು :**
**ಗೀತಾಂಜಲಿ ಗ್ರಾಫಿಕ್ಸ್**
ನಂ. ಬಿ–71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್, 6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

## ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

### ಸಂಪಾದಕ ಸಮಿತಿ


ಅಧ್ಯಕ್ಷರು

**ಪ್ರೊ. ಹಿ.ಶಿ. ರಾಮಚಂದ್ರೇಗೌಡ**

ಸದಸ್ಯರು

**ಡಾ. ಸೋಮಶೇಖರ ಇಮ್ರಾಪುರ**

**ಡಾ. ಎಚ್.ಜೆ. ಲಕ್ಕಪ್ಪಗೌಡ**

**ಡಾ. ಎಂ. ಪ್ರಭಾಕರ ಜೋಶಿ**

**ಡಾ. ತೀ.ನಂ. ಶಂಕರನಾರಾಯಣ**

**ಶ್ರೀಮತಿ ಶಾಂತಿನಾಯಕ**

**ಡಾ. ಅರವಿಂದ ಮಾಲಗತ್ತಿ**

**ಡಾ. ಮ.ಗು. ಬಿರಾದಾರ**

**ಪ್ರೊ. ಎ.ವಿ. ನಾವಡ**

**ಡಾ. ವೆಂಕಟೇಶ ಇಂದ್ವಾಡಿ**

ಸದಸ್ಯ ಕಾರ್ಯದರ್ಶಿ

**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ.,

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು

**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**

ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

**ನಾಡೋಜ ಬೆಳಗಲ್ಲು ವೀರಣ್ಣ**

ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

**ಟಿ. ತಿಮ್ಮೇಗೌಡ**

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

## ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
**ಶ್ರೀ ಪಿ.ಎನ್. ಶ್ರೀನಿವಾಸಚಾರಿ,** ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
**ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ಜಂಟಿ ನಿರ್ದೇಶಕರು (ಆಡಳಿತ)

**ಶ್ರೀ ಬಲವಂತರಾವ್ ಪಾಟೀಲ್**
ಜಂಟಿ ನಿರ್ದೇಶಕರು (ಸು.ಕ.)

**ಶ್ರೀ ಬಿ.ಎನ್. ಪರಡ್ಡಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

**ಶ್ರೀ ಎನ್. ಹರಿಕುಮಾರ್**
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸಿದ್ಧರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪

ದಿನಾಂಕ : ೦೪-೦೨-೨೦೧೪

# ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.

ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಆಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

**ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್** ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.



**ಸಿದ್ಧರಾಮಯ್ಯ**

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೬೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮-೦೧-೨೦೧೪

# ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ. ಅಪ್ರಸ್ತುತವಾಗಿರುವುದನ್ನು

ಇಂದಿನ ದಿನಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ **“ವೇದ ಸುಳ್ಳಾದರೂ ಗಾದೆ ಸುಳ್ಳಾಗದು”** ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.

**ಉಮಾಶ್ರೀ**

# ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ–ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳ ಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ-ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ-ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಥೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆ ಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲದೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತೀಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು

ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನು ಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ

ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನ ಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಕ್ಷರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

**ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಅಧ್ಯಕ್ಷರ ಮಾತು

## ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ  ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ  ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ

ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

## ಮಾತಿನ ಸರಣಿ : ಮುತ್ತಿನ ಬೆಲೆ

### ಬಿ. ಎಂ. ಶ್ರೀಕಂಠಯ್ಯ

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೩೭)**

**ಬೆಟಗೇರಿ ಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ಗೀಮಠ**

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ. ಪರಮಶಿವಯ್ಯ**

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

– ೩ –

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯುನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯುದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯುಗಳು ಮೈಸೂರು ವಿಶ್ವವಿದ್ಯಾಲಯುದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯುವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ - ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ

ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ. ವೀರಣ್ಣ, ಬಿ.ಎಸ್. ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೬೬ರಲ್ಲಿ ತರೀಕೆರೆಯಲ್ಲಿ, ೧೯೬೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ

ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇ ಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ

ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

**– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ

ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ–ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು

ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು

ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ– ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೋ ಅಂದಿನಿಂದ ಜನಪದ

ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

## ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ
## ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ–ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ

ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಆರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ

'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು

ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ

ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦–೦೨–೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಪರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಅರಿಕೆ

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಗಳು ಸಂಯುಕ್ತವಾಗಿ ಹಮ್ಮಿಕೊಂಡಿರುವ ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆಯ ಅಡಿಯಲ್ಲಿ ನನಗೆ ಕನ್ನಡ ಜನಪದ ಒಡಪುಗಳು ವಿಷಯವಾಗಿ ಸಂಪುಟ ಸಿದ್ಧಪಡಿಸುವ ಸದಾವಕಾಶ ದೊರತುದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೂ, ಜಾನಪದ ಅಕಾಡೆಮಿಯ ಅಧ್ಯಕ್ಷರು ಮತ್ತು ರಿಜಿಸ್ಟ್ರಾರ್ ಅವರಿಗೂ, ಸಂಪುಟ ಪ್ರಕಟಣ ಯೋಜನೆಯ ಅಧ್ಯಕ್ಷರಾದಿ ಎಲ್ಲ ಸದಸ್ಯರಿಗೂ ನನ್ನ ಕೃತಜ್ಞತೆಗಳು. ಅದಲ್ಲದೆ ಈ 'ಒಡಪು' ಸಂಪುಟವನ್ನು ಪರಿಶೀಲಿಸಿ ಸಲಹೆ-ಸೂಚನೆಗಳನ್ನಿತ್ತ ಡಾ. ಸೋಮಶೇಖರ ಇಮ್ರಾಪೂರ ಅವರಿಗೂ ನಾನು ಋಣಿಯಾಗಿದ್ದೇನೆ.

ಇದೇ ಯೋಜನೆಯಡಿಯಲ್ಲಿ ನನ್ನ 'ಕನ್ನಡ ಗಾದೆಗಳು' ಸಂಪುಟ ಪ್ರಕಟವಾಗಿದೆ. ಇದೀಗ 'ಕನ್ನಡ ಒಡಪುಗಳು' ಸಂಪುಟ ಸಿದ್ಧಗೊಂಡಿದೆ. ಪ್ರಸ್ತುತ ಒಡಪುಗಳ ಸಂಗ್ರಹ ಬಹು ವರ್ಷಗಳಿಂದ ನಡೆದಿದೆ. ೧೯೭೭ರಲ್ಲಿ ನನ್ನದೇ ಆದ 'ಜನಪದ ಒಡಪುಗಳು' ಸಂಗ್ರಹ (ಶಾಂತಕುಮಾರಿ ಪಾಟೀಲ) ಪ್ರಕಟಗೊಂಡಿದೆ. ಅದೇ ಆಸಕ್ತಿಯ ಫಲವಾಗಿ ಈ 'ಒಡಪು' ಬೃಹತ್ ಸಂಪುಟ ಸಿದ್ಧವಾಗಿದೆ. ನನಗೆ ಒಡಪು ಹೇಳಿದ ಅದೆಷ್ಟೋ ಹಿರಿಯ ಮಹಿಳೆಯರು ಇಂದು ಮರೆಯಾಗಿದ್ದಾರೆ. ಅವರೆಲ್ಲರಿಗೂ ನನ್ನ ಗೌರವದ ನಮಸ್ಕಾರಗಳು ಸಲ್ಲುತ್ತವೆ. ಇಲ್ಲಿಯ ಒಡಪುಗಳೆಲ್ಲವೂ ಉತ್ತರ ಕರ್ನಾಟಕದಲ್ಲಿ ನಡೆಸಿದ ಕ್ಷೇತ್ರಕಾರ್ಯದ ಫಲವಾಗಿವೆ. ಉತ್ತರ ಕರ್ನಾಟಕದ ಧಾರವಾಡ, ಹಾವೇರಿ, ಗದಗ, ಕೊಪ್ಪಳ, ರಾಯಚೂರು, ಬೆಳಗಾಂವ, ಗುಲಬರ್ಗಾ ಜಿಲ್ಲೆಗಳ ಕ್ಷೇತ್ರಕಾರ್ಯದಿಂದಾಗಿ ೩೫೫೧ ಒಗಟುಗಳನ್ನು ಸಂಗ್ರಹಿಸಲು ಸಾಧ್ಯವಾಗಿದೆ. ಇದೇ ಕೊನೆಯಲ್ಲ. ಅಗಿದಷ್ಟೂ-ಸಂಗ್ರಹಿಸಿದಷ್ಟೂ ಮುಗಿಯದ ನಿಧಿ ಅದು. ಇಲ್ಲಿಯ ಒಡಪುಗಳೆಲ್ಲ ಉತ್ತರ ಕರ್ನಾಟಕದವುಗಳಾದರೂ, ಕರ್ನಾಟಕದ

ಇತರ ಪ್ರದೇಶಗಳಿಂದ ಬಂದಿರುವುದೂ ಗಮನಾರ್ಹ. ವೈವಾಹಿಕ ಸಂಬಂಧ, ವಲಸೆ ಇನ್ನಾವುದೇ ಕಾರಣವಿರಬಹುದು.

ಈ ಸಂಪುಟಕ್ಕೆ ಒಡಪು ಹೇಳಿ ಸಹಕರಿಸಿದ ಆತ್ಮೀಯರಾದ ಸಹೋದರಿಯರಿಗೂ, ಸಹೋದರರಿಗೂ, ನನ್ನ ವಿದ್ಯಾರ್ಥಿಗಳಿಗೂ ಮತ್ತು ಸಹಕರಿಸಿದ ಎಲ್ಲ ಸಹೃದಯರಿಗೂ ನನ್ನ ನೆನಿಕೆಗಳು.

೧೫ ಡಿಶಂಬರ್ ೨೦೧೩ **– ಶಾಂತಾ ಇಮ್ರಾಪೂರ**
‘ಚಿತ್ತಾರ’ ನಿರ್ಮಲ ನಗರ ಸಂಪಾದಕರು
೧೨ನೇ ಅಡ್ಡರಸ್ತೆ, ಧಾರವಾಡ–೩.

# ಪ್ರಸ್ತಾವನೆ

ಎಲ್ಲ ದೇಶಗಳಲ್ಲಿ ಪ್ರಸಿದ್ಧವಾದ ಜನಪದ ಸಾಹಿತ್ಯ ಪ್ರಕಾರಗಳಾದ ಗೀತ, ಗಾದೆ, ಕಥೆ, ಒಗಟುಗಳ ಹಾಗೆ ಗದ್ಯಪದ್ಯ ಮಿಶ್ರಿತವಾದ ಈ ಒಡಪುಗಳದ್ದೂ ಒಂದು ವಿಶೇಷ ಪ್ರಕಾರ. ಮೈಸೂರು ಭಾಗದ ಕೆಲವು ವಿದ್ವಾಂಸರು ಇವುಗಳಿಗೆ 'ಪ್ರಶ್ನೆ ರಹಿತ ಒಗಟು' ಎಂದು ಕರೆದಿರುವುದರ ಔಚಿತ್ಯ ತಿಳಿಯದು. ಒಡಪುಗಳು ಒಗಟುಗಳಿಗಿಂತ ವಿಶೇಷವಾದ ಗುಣಲಕ್ಷಣ, ಉದ್ದೇಶವನ್ನೊಳಗೊಂಡು ಕರ್ನಾಟಕದಲ್ಲಿ ಅದೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವುದು ಸರ್ವಶ್ರುತ. ಒಗಟು, ಒಡಪು ಮತ್ತು ಒಡಬು ಪ್ರಕಾರಗಳಲ್ಲಿ ಇರುವ ಸಾಮ್ಯ ವೈಷಮ್ಯಗಳನ್ನು ಅಧ್ಯಯನ ಮಾಡಿದ ಹಲವಾರು ವಿದ್ವಾಂಸರು ಒಗಟುಗಳಂತೆ ಒಡಪುಗಳನ್ನು ಗಂಭೀರವಾದ ಅಧ್ಯಯನಕ್ಕೆ ಪರಿಗಣಿಸಿದಂತೆ ತೋರುವುದಿಲ್ಲ.

ಒಗಟುಗಳಂತೆ ಒಡಪುಗಳಲ್ಲೂ ಉಪಮಾನ ಉಪಮೇಯಗಳಿವೆ. ಒಡಪುಗಳೂ ಸಹ ಅರ್ಥಸಂದಿಗ್ಧತೆಯನ್ನುಂಟುಮಾಡಬಲ್ಲವು. 'ಒಡಪು' ಉಪಮಾನವಾದರೆ, ಹೇಳದಿರುವ ಗಂಡ ಇಲ್ಲವೆ ಹೆಂಡತಿಯ ಹೆಸರೇ ಉಪಮೇಯವೆನಿಸುವುದು. ಒಗಟುಗಳ ಲಕ್ಷಣವಾದ ಬೆಡಗು, ಒಡಪಿನ ಲಕ್ಷಣವೂ ಹೌದು. ಶರಣರ ಬೆಡಗಿನ ವಚನಗಳ ಮಾದರಿಯನ್ನೇ ಅದೆಷ್ಟೋ ಒಡಪುಗಳು ಅನುಕರಿಸುವುದುಂಟು. 'ಒಗಟು' ಉತ್ತರಾಪೇಕ್ಷಿಯಾದರೆ, 'ಒಡಪು' ಹೆಸರಿನಾಪೇಕ್ಷಿ. 'ಒಗಟು' ಕಲ್ಪನಾಶಕ್ತಿ, ಪ್ರತಿಭೆ, ಸಾದೃಶ್ಯ ಪರಿಜ್ಞಾನ, ಜಾಣ್ಮೆ ಪರೀಕ್ಷೆಗೆ ಒರೆಗಲ್ಲಾದರೆ, ಒಡಪುಗಳೂ ಕೂಡಾ ಇವೆಲ್ಲ ಗುಣಲಕ್ಷಣಗಳನ್ನು ಹೊಂದಿ ಪರಂಪರೆಯುದ್ದಕ್ಕೂ ಜನಪ್ರಿಯವಾಗುತ್ತ ಬಂದಿವೆ. ಒಡಪುಗಾರರ ಜಾಣ್ಮೆ ಪರೀಕ್ಷೆಗೆ ಕಾರಣವಾಗುವ ಅನೇಕ ಶ್ರೇಷ್ಠತಮ ಒಡಪುಗಳು ಈ ಸಂಗ್ರಹದಲ್ಲಿವೆ. ಉದಾಹರಣೆಗೆ 'ಉಭಯತರ 'ಒಗಟು–ಒಡಪು' ಭಾಗವನ್ನು ಗಮನಿಸಬಹುದು. ಅಷ್ಟೇ ಅಲ್ಲ, ಒಡಪುಗಳು ಒಗಟುಗಳಿಗಿಂತಲೂ ವಾಸ್ತವಿಕ ಬದುಕಿನಾನುಭವವನ್ನು ಅನಾವರಣಗೊಳಿಸಬಲ್ಲ ಸಮರ್ಥ ಮಾಧ್ಯಮ ವೆನ್ನುವುದು ಮನವರಿಕೆಯಾಗುತ್ತದೆ. ಒಟ್ಟಾರೆ ಜನಪದ ಸಂಸ್ಕೃತಿಯನ್ನೆ ಬಿತ್ತರಿಸುವ ಒಡಪುಗಳು, ಒಡವ ಬಲ್ಲಿದರೆನ್ನದೇ ಎಲ್ಲ ರಸಿಕರನ್ನು ರಂಜಿಸುತ್ತ ಬಂದಿವೆ. ಗಾದೆಗಳಂತೆ ಒಡಪುಗಳೂ ಸಹ ಬದುಕಿನ ನಿತಾಂತ ಸತ್ಯವನ್ನೇ ಸಾರಿ

ಹೇಳುತ್ತವೆ. ಸಂಸಾರದ ನೋವು–ನಲಿವು, ಸುಖ–ದುಃಖ, ಒಳ ಬೇಗುದಿಗಳ ಮಾನಸಿಕ ತಲ್ಲಣಗಳನ್ನು ಪ್ರಕಟಿಸುವಲ್ಲಿ ಸಫಲವಾಗಿದ್ದು, ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಬಲವಾದ ಆಕರ ಸಾಮಗ್ರಿಗಳನ್ನು ಒದಗಿಸುತ್ತವೆ.

ಇನ್ನು 'ಒಡಪು' ಮತ್ತು ಒಡಬು'ಗಳ ನಿಷ್ಪತ್ತಿಯಲ್ಲಿ ಸಾಮ್ಯತೆ ಇದ್ದರೂ, ಆಯಾ ಪ್ರಕಾರಗಳ ಸ್ವರೂಪ, ಲಕ್ಷಣ ಹಾಗೂ ಉದ್ದೇಶ, ಧೋರಣೆ, ಪ್ರಯೋಜನಗಳು ತೀರಾ ಭಿನ್ನವಾಗಿವೆ. 'ಒಡಪು'ಗಳು ಸಾಮಾಜಿಕ ಮತ್ತು ಒಂದರ್ಥದಲ್ಲಿ ಮನರಂಜನೆಯ ಗುಣವನ್ನು ಹೊಂದಿದ್ದರೆ, 'ಒಡಬು'ಗಳು ಧಾರ್ಮಿಕ ಸನ್ನಿವೇಶಗಳಲ್ಲಿ ಮಾತ್ರ ಬಳಸಲ್ಪಡುತ್ತಿವೆ. ಪುರವಂತಿಕೆಯವರು ಅಥವಾ ವೀರಗಾಸೆಯುವರು ಒಡಬು ಹೇಳುವ ವಿಧಿವಿಧಾನದ ಮೂಲಕ ಪ್ರದರ್ಶನಗೊಳಿಸುತ್ತಾರೆ. ಭಕ್ತಿಯೇ ಅಲ್ಲಿಯ ಪ್ರಧಾನ ಆಶಯವಾಗಿದೆ. ಹೆಚ್ಚಾಗಿ ಬೆಡಗಿನ ವಚನಗಳಂತೆ ಕಥಾರೂಪದಲ್ಲಿ ಸಾಗುವ ಇವುಗಳಲ್ಲಿ ಮುಖ್ಯವಾಗಿ ಅಂಬಿಗರ ಚೌಡಯ್ಯನ ವಚನಗಳು 'ಒಡಬು' ಆಗಿ ಬಳಸಲ್ಪಡುತ್ತವೆ. ಒಟ್ಟಾರೆ ಒಗಟು, ಒಡಬು ಹಾಗೂ ಒಡಪುಗಳು ಶಬ್ದೋತ್ಪತ್ತಿಯಲ್ಲಿ ಸಾಮ್ಯತೆ ಕಂಡುಬಂದರೂ ಅವೆಲ್ಲವೂ ವಿಶೇಷವಾದ ಲಕ್ಷಣಗಳಿಂದ ಬೇರೆಯಾಗಿಯೇ ಪ್ರಚುರವಾಗಿವೆ ಎಂಬುದಂತೂ ಸ್ಪಷ್ಟ. ಆದರೂ ಜನಪದ ಸಾಹಿತ್ಯ ಪ್ರಕಾರಗಳಾದ ಇವೆಲ್ಲ ಒಂದಕ್ಕೊಂದು ಪೂರಕ ಸಂಬಂಧ ಹೊಂದಿದ್ದರೂ, 'ಒಡಪು'ಗಳು ಹೇಗೆ ವಿಶೇಷ ಅರ್ಥವಂತಿಕೆಯಿಂದ ಗಮನ ಸೆಳೆಯುತ್ತವೆ ಎಂಬುದನ್ನು ನೋಡಬಹುದು.

ಉದಾಹರಣೆ : ಒಗಟು–ಒಡಪು ಆಗುವ ಮಾದರಿಯನ್ನು ಗಮನಿಸಬಹುದು.

***'ಬಣ್ಣದ ಸೀರಿ ಉಟಗೊಂಡು***
***ಮಣ್ಣಾಗ ಕುಂತಾಳ ......'***

ಇದು ಹೆಂಡತಿಯ ಹೆಸರನ್ನು ಹೇಳುವ ಗಂಡನ ಒಡಪು. ಇದು ಒಗಟಿನಲ್ಲಿ ಬಳಕೆಯಾಗಿ ಒಡಪಿನ ಅರ್ಥವಂತಿಕೆಯ ವಿಶೇಷತೆಗೆ ಕಾರಣವಾಗಿದೆ. ಇಲ್ಲಿಯ ಒಗಟಿನ ಉತ್ತರ 'ಗಜ್ಜರಿ', 'ಬಣ್ಣದ ಸೀರೆ ಉಟಗೊಂಡು ಮಣ್ಣಲ್ಲಿ ಕುಳಿತಿರುವ ಹೆಂಡತಿ'ಯನ್ನು ಅಪಹಾಸ್ಯಕ್ಕೆ ಗುರಿಮಾಡುವ ಗಂಡನ ಉದ್ದೇಶ ಈ ಉಪಮಾನದಿಂದ ಅರ್ಥಪೂರ್ಣವೆನಿಸಿದೆ 'ಕುಂತಾಳ' ಎನ್ನುವ ಸ್ತ್ರೀಲಿಂಗ ಪದ ಮಾತ್ರ ಬಳಕೆಯಾಗಿರುವುದು ಗಮನಾರ್ಹ.

ಅರ್ಥಧ್ವನಿಗೆ ಕಾರಣವಾಗುವ ಇನ್ನೊಂದು ಒಗಟು–ಒಡಪನ್ನು ಉದಾಹರಿಸಬಹುದು.

*'ಕರಿ ಸೀರಿ ಗರತಿ*
*ಗಿಡದ ಮ್ಯಾಗ ಇರತಿ*
*ಕರದರ ಬರತಿ*
*ಹೆಸರ ಹೇಳಿದ್ರ ನಗತಿ'.....*

ಇದೂ ಕೂಡಾ ಗಂಡನ ಒಡಪು. ಮೊದಲಿನ ಮೂರು ಸಾಲು ಒಗಟು. ಅದರ ಉತ್ತರ ನೀರಲಹಣ್ಣು. ನಾಲ್ಕನೆಯ ಸಾಲು ಹೆಚ್ಚಿಗೆ ಕೂಡಿಸಿದಾಗ ಅದು ಒಡಪಿನ ಸ್ವರೂಪ ಧರಿಸುತ್ತದೆ. ಒಗಟಿನ ಉತ್ತರವನ್ನು ಹಾಗೂ ಆತನ ಹೆಂಡತಿಗೆ ಆರೋಪಿಸಿದ್ದು–ಹೆಂಡತಿ ನೀರಲ ಹಣ್ಣಿನಂಥ ಕಪ್ಪಾದವಳು. ಕರೆದರೆ ಕೂಡಲೇ ಬರುವಂಥವಳು ಎಂಬುದೇ ಇಲ್ಲಿಯ ಅರ್ಥಧ್ವನಿ. 'ನೀರಲಹಣ್ಣು ಕಪ್ಪಾದರೂ ಸಿಹಿ ಬಹಳ' ಎಂಬ ಗಾದೆಯನ್ನು ಧ್ವನಿಸುತ್ತದೆ. ಈ ಒಡಪು ಅರ್ಥಧ್ವನಿಯಿಂದ ಸಂಪನ್ನವಾಗಿರುವುದು ಒಗಟಿನ ಮಹತ್ತಿಗೂ ಕಾರಣವಾಗುತ್ತದೆ. ಇಂಥ ಒಡಪುಗಳಿಗೆ 'ಒಗಟಾತ್ಮಕ ಒಡಪು' ಎಂದು ಕರೆಯಲಾಗಿದೆ.[೧]

ಇನ್ನು ಗಾದೆ ಹಾಗೂ ಒಡಪುಗಳಿಗೂ ಇರುವ ನಿಕಟ ಸಂಬಂಧ ಗಮನಾರ್ಹವಾದುದು. ಇದರಿಂದಾಗಿ ಒಡಪುಗಳೂ ಸಹ ಗಾದೆಯ ಸತ್ವವನ್ನು 'ಒಡಪು' ಅಭಿವ್ಯಕ್ತಿಯಲ್ಲಿ ಬಳಸಿಕೊಳ್ಳುವ ಜಾನಪದರ ಅಗಾಧ ಜಾಣ್ಮೆಯನ್ನು ಗುರುತಿಸಬಹುದು. ಇಲ್ಲಿ 'ಗಾದೆ' ವ್ಯಾಖ್ಯಾನಾಪೇಕ್ಷಿಯೆನಿಸಿದರೆ, 'ಒಡಪು' ಉತ್ತರಾಪೇಕ್ಷಿಯಾಗಿ ವಿಶೇಷ–ಅರ್ಥವಂತಿಕೆಗೆ ಕಾರಣವಾಗುತ್ತದೆ.

*"ರಾತ್ರಿ ಬಂದ ಮಳೆ*
*ರಾತ್ರಿ ಬಂದ ಅಳಿಯ ಹೋಗೂದಿಲ್ಲ*
*ನನ್ನಾತ ...... ಅವಳ ಮನೀಗೆ ಹೊಕ್ಕ*
*ಹೊಳ್ಳಿ ಮನೀಗೆ ಬರೂದಿಲ್ಲ"*

ಇದು ದುರಾಚಾರಿ ಗಂಡನ ಸ್ವಭಾವದ ಬಗ್ಗೆ ಹೇಳುವ ಹೆಂಡತಿಯ ಒಡಪು. ಇಲ್ಲಿ ಮೊದಲಿನ ಎರಡು ಸಾಲು ಗಾದೆ ಮಾತು. ಅದು ಸತ್ಯವನ್ನೇ ಹೇಳುತ್ತದೆ. ಒಡಪಿನ ಕೊನೆಯ ಎರಡು ಸಾಲು ಕೂಡಾ ಗಂಡ ಮನೆಗೆ ಬರೂದಿಲ್ಲವೆಂಬ ಸತ್ಯವನ್ನೇ ಹೇಳುತ್ತದೆ. ಹೀಗಾಗಿ ಗಾದೆ ಮತ್ತು ಒಡಪುಗಳಲ್ಲಿಯ ಸಾವಯವ ಸಂಬಂಧದಲ್ಲಿ ಒಡಪು ಅರ್ಥಪೂರ್ಣವಾಗಿರುವುದು ಗಮನಾರ್ಹವೆನಿಸುವುದು. ಇಂಥ ಮಾದರಿಯ ಒಡಪುಗಳಿಗೆ ವಿದ್ವಾಂಸರು 'ಗಾದೆ–ಒಡಪು' ಎಂದು ಕರೆದಿದ್ದಾರೆ.[೨]

---

[೧] ಡಾ. ಸೋಮಶೇಖರ ಇಮ್ರಾಪೂರ, ಕನ್ನಡ ಆಯ್ದ ಒಗಟುಗಳು. – ಪ್ರಸ್ತಾವನೆ

[೨] ಡಾ. ಸೋಮಶೇಖರ ಇಮ್ರಾಪೂರ ಕನ್ನಡ ಆಯ್ದ ಒಗಟುಗಳು. – ಪ್ರಸ್ತಾವನೆ

ಹೀಗೆ ಒಗಟು, ಗಾದೆ ಹಾಗೂ ಒಡಪುಗಳಿಗೆ ಇರುವ ಪೂರಕ ಸಂಬಂಧ ದಿಂದಾಗಿ ಒಡಪುಗಳ ಮೌಲ್ಯವು ಅಧಿಕವಾಗುವುದನ್ನು ಗಮನಿಸಬಹುದು. ಈ ಒಡಪಿನ ಬಗ್ಗೆ ಇನ್ನೂ ಸಾಂಸ್ಕೃತಿಕ ಅಧ್ಯಯನಗಳು ಹೆಚ್ಚಾಗಿ ನಡೆಯಬೇಕಾಗಿದೆ. ಒಡಪುಗಳ ವಸ್ತು, ಅಭಿವ್ಯಕ್ತಿಯ ವೈವಿಧ್ಯ, ಲಯವಿನ್ಯಾಸ ಹಾಗೂ ಕಾವ್ಯಾತ್ಮಕ ಗುಣದಿಂದಾಗಿ ಸುಶೀಕ್ಷಿತರು, ಅಶಿಕ್ಷಿತರೆನ್ನದೇ ಎಲ್ಲರ ಬಾಯಲ್ಲೂ ನಲಿದಾಡುತ್ತಿವೆ. ಒಡಪುಗಳಲ್ಲಿ ಗಾದೆಗಳಂತೆ ನೀತಿ ಬೋಧೆ ಇಲ್ಲವೆಂತಲ್ಲ. ಅವು ಏಕಕಾಲಕ್ಕೆ ನೀತಿಯುನ್ನೂ, ಧರ್ಮವನ್ನೂ, ಮನರಂಜನೆಯನ್ನು ನೀಡಬಲ್ಲವು. ಒಡಪುಗಳು ರೂಪಕಗಳನ್ನು ಬಳಸಿಕೊಂಡು ಭಾವಗೀತೆಯಂತೆ ಗಮನ ಸೆಳೆಯಬಲ್ಲವು.

'ಒಡಪು' ಎಂದರೆ ಒಡವೆ ಇದ್ದ ಹಾಗೆ. ಅಂದರೆ ಅದಕ್ಕೆ ವಿಶೇಷಣ ವೆಂದೂ ಹೇಳಬಹುದು. ಒಡೆ ಎಂದರೆ ಬಿಚ್ಚ ಹೇಳು ಎಂದರ್ಥ. ಒಡಪಿಟ್ಟು ಹೇಳು ಎಂದಾಗ ಗಂಡನ ಇಲ್ಲವೆ ಹೆಂಡತಿಯ ಹೆಸರನ್ನು ವಿಶೇಷಣ ಹಚ್ಚಿ ಹೇಳು ಎನ್ನುವುದೇ ಆಗಿದೆ. ಅದೇನಿದ್ದರೂ ಗಂಡನ ಅಥವಾ ಹೆಂಡತಿಯ ಹೆಸರು, ಒಡಪಿನ ಕೊನೆಯ ಸಾಲಿನ ಕೊನೆಗೆ ಬರುವುದೇ ಹೆಚ್ಚು. ಒಡಪುಗಳ ಮಧ್ಯದ ಸಾಲುಗಳಲ್ಲೂ ಬರಬಹುದು. ಒಟ್ಟಿನಲ್ಲಿ ಒಡಪಿನ ಲಯ ವಿನ್ಯಾಸದ ಮೇಲೆ ಹೆಸರುಗಳ ಸ್ಥಾನ ನಿರ್ಧರಿತವಾಗುತ್ತದೆ; ಒಡಪುಗಳಲ್ಲಿ ಬಳಕೆಯಾಗಿರುವ ವಸ್ತು ಸಾಮ್ರಾಜ್ಯ ಬಹಳ ದೊಡ್ಡದು. ತನ್ನ ಸುತ್ತಲಿನ ಪರಿಸರವನ್ನೊಳಗೊಂಡು ಮಾನವೀಯ ಸಂಬಂಧಗಳಂತೆ-ಪ್ರಕೃತಿಯೊಂದಿಗೆ ಹೊಂದಿಕೊಳ್ಳುವ ರೀತಿ ಅನುಪಮವೆನಿಸುತ್ತದೆ. ಒಂದೊಂದು ಒಡಪು ಆಧ್ಯಾತ್ಮ ನಿಲುವಿಗೇರಿ, ಬೆಡಗಿನ ವಚನದ ಪರಿಭಾಷೆ ಧರಿಸುವುದುಂಟು.

ಉದಾ :

*"ಕಲ್ಲ ಸಕ್ಕರಿ ಖಾರಾ ಅರದ*
*ಊದಿನ ಕಡ್ಡಿ ಉರಿ ಮಾಡಿ*
*ರುದ್ರಾಕ್ಷಿ ಒಣಗಿ ಮಾಡಿ*
*ನಾ ನೀಡೇ ನೀಡತೀನು*
*ಅಂವಾ ಉಂಡs ಉಣತಾನ ...."*

ಇಂಥ ಒಡಪುಗಳು ಅಧ್ಯಾತ್ಮದ ಪಾರಿಭಾಷಿಕ ಅರ್ಥವನ್ನೇ ಅಪೇಕ್ಷಿಸುತ್ತವೆ.

ನಾನು ನಡೆಸಿದ ಕ್ಷೇತ್ರಕಾರ್ಯದಲ್ಲಿ ಒಡಪು ಹೇಳಿ ಸಹಕರಿಸಿದವರು ಗ್ರಾಮೀಣ ಪರಿಸರದಲ್ಲಿ ಬೆಳೆದ ಅಶಿಕ್ಷಿತರಾದರೂ ಸುಸಂಸ್ಕೃತ ಮಹಿಳೆಯರು

ಪರಂಪರೆಯನ್ನು ಗೌರವಿಸುವವರು. ಅದಲ್ಲದೇ ನಗರದಲ್ಲಿ ಬೆಳೆದು ನಾಗರಿಕ ಸಮಾಜವನ್ನು ಕಂಡು ಓದು ಬರಹ ಬಲ್ಲ ಸುಸಂಸ್ಕೃತರು–ಆಧುನಿಕರು. ಈ ಎರಡು ಬಗೆಯ ಪ್ರತಿಭಾನ್ವಿತ ಮಹಿಳೆಯರನ್ನು, ಅದೇ ಊರಿನ, ನನಗೆ ಪರಿಚಯವಿದ್ದ ಅನೇಕ ಸಹೋದರರನ್ನು ಸಂಪರ್ಕಿಸಿದ್ದೇನೆ. ಇದು ಒಂದು ವರ್ಷದ ಕೆಲಸವಲ್ಲ. ನಿಧಾನವಾಗಿ ಹತ್ತಾರು ವರ್ಷಗಳಿಂದ ನಡೆಸಿದ ಆಸಕ್ತಿಯ ಕೆಲಸವಾಗಿದೆ.

ಹೆಂಡತಿಯಾದವಳಿಗೆ ಗಂಡನೇ ಪರದೈವವಾಗಿ ಕಾಣಿಸುವುದು ಗ್ರಾಮೀಣ ಪರಿಸರದಲ್ಲಿ ಸಾಮಾನ್ಯವಾಗಿ ಕಂಡುಬರುವ ವಿಚಾರ. ಇದು ಅವರ ಬಹುಮಟ್ಟಿನ ಒಡಪುಗಳಲ್ಲೂ ಕಾಣಿಸಿಕೊಂಡಿದೆ. ಮಂಗಲ ಪ್ರಸಂಗಗಳಲ್ಲಿ ಮುತ್ತೈದೆಯರು ಕೂಡಿದರೆ ಸಾಕು ಒಡಪುಗಳು ವಿಜೃಂಭಿಸುತ್ತದೆ. ಅವರ ಸಂಸಾರದ ನೋವು–ನಲಿವು, ಸುಖ–ದುಃಖ, ಕೆಟ್ಟಗಂಡ, ಕೆಟ್ಟ ಅತ್ತೆ–ಮಾವ, ಭಾವ, ನೆಗೆಣ್ಣಿ, ಮೈದುನ, ಅಕ್ಕ ತಂಗಿ ಇತ್ಯಾದಿ ಕೌಟುಂಬಿಕ ಪರಿಸರದ ಬಗೆಗಿನ, ಪ್ರೀತಿ, ಗೌರವ, ಅಗೌರವ, ಅನುಕಂಪ, ಸಿಟ್ಟು, ಸೆಡವು, ಕ್ರೋಧ, ಕೊಂಕು, ವಿಡಂಬನೆ, ಬಿಂಕ, ಬೆಡಗು, ಬಿನ್ನಾಣ ಇತ್ಯಾದಿ ತರತಮ ಭಾವನೆಗಳೆಲ್ಲ ಒಡಪುಗಳಲ್ಲಿ ಗರಿಗೆದರುತ್ತವೆ. ಕುಟುಂಬದಲ್ಲಿ ಅತ್ತೆ–ಸೊಸೆಯರ ಸಂಬಂಧ ಗೊತ್ತೇ ಇದೆ. ಅತ್ತೆ–ಮಾವಾ ಬೇಡ, ಗಂಡ ಮಾತ್ರ ಸದ್ಗುಣಿ ಎಂಬ ಭಾವ.

ಉದಾ :

*"ಅತ್ತಿ ಅಡ್ನಾಡಿ ಮಾವಾ ಮರಗೇಡಿ*
*ನನಗಂಡ ಸದ್ಗುಣಿ ....."*

*"ಆರು ಸೇರು ಪತ್ರಿ ದಳ*
*ಮೂರು ಸೇರು ಹೂವಿನ ಎಸಳ*
*ಸಿಂಹಾಸನದ ಮ್ಯಾಲ ಕೂತಗೊಂಡು*
*ಶಿವಪೂಜಿ ಮಾಡ್ತಾರ ...."*

"ಒಳ್ಳೆಯವರ ಮಗಳಂತ ಹೊಳ್ಳಿ ಹೊಳ್ಳಿ ನೋಡುವ ಗಂಡನೇ ದಾರಿ ಬಿಟ್ಟರೆ ಆಗ –

*"ಶಿವನ ಜೆಡಿ ಏರಿ ಕುಂತಳು ಗಂಗಿ*
*ಪಾರಿಜಾತ ಹೂವಿಗೆ ಬಡಿದಾಡಿದರು ಅಕ್ಕತಂಗಿ*
*........... ರಿಗೆ ಗಂಟು ಬಿದ್ದಾಳ ಬೇಬರ್ಸಿ ತುಂಗಿ"*

ಗಂಡನಿಗೆ ಮನಿ ಹೆಂಡತಿಯೇ ಬೇಸರಾದಾಗ –

*"ನೀರಿಲ್ಲದ ಮನಿ ಇಲ್ಲ*
*ನನ್ನಾಕಿಗೆ ತಲಿಯಿಲ್ಲ ...."*

ಎನ್ನಬೇಕೆ? ಹೀಗೆಯೇ ಪಟಿಂಗ ಗಂಡ, ಅಂಥ ಗಂಡನ ಸ್ವಭಾವವನ್ನು ಅರಗಿಸಿಕೊಳ್ಳದ ಹೆಂಡತಿ. ಈ ಸಂಗತಿಗಳಿಗೆ ಸಂಬಂಧಿಸಿದ ಒಡಪುಗಳು ಈ ಸಂಗ್ರಹದಲ್ಲಿ ಹೇರಳವಾಗಿವೆ. ಆದರೂ ಕೌಟುಂಬಿಕ ಬಾಂಧವ್ಯದಲ್ಲಿರುವ ಸುಮಧುರ ಭಾವನೆ, ಸುಮಧುರ ಪ್ರೀತಿ–ಗೌರವದ ಸಂಬಂಧಗಳನ್ನು ಅಭಿವ್ಯಕ್ತಗೊಳಿಸಿದ ಒಡಪುಗಳೂ ಇಲ್ಲಿ ಸಾಕಷ್ಟಿವೆ.

ಆದರೆ ಗಂಡಿನ ಒಡಪುಗಳಲ್ಲಿ ಅತಿಯಾದ ನಾಜೂಕುತನವನ್ನು ಕಾಣುವಂತಿಲ್ಲ. ಅಪಹಾಸ್ಯ, ಕೊಂಕು, ವಿಡಂಬನೆ, ಹೊಡಕರಿಸುವ ಒಡಪುಗಳೇ ಹೆಚ್ಚು. ಹೆಂಡತಿಯನ್ನು ಪ್ರೀತಿ ಗೌರವದಿಂದ ಕಾಣುವ ಒಡಪುಗಳ ಸಂಖ್ಯೆ ಕಡಿಮೆ., 'ಅಗಸಿ ಇಲ್ಲದ ಊರಿಲ್ಲ, ನನ್ನವಳನ್ನು ಬಿಟ್ಟು ನಾನಿಲ್ಲ' – ಇಂಥ ನಿರ್ಮಲವಾದ ಆರೋಗ್ಯಕರ ಒಡಪುಗಳೂ ಬಂದಿವೆ. ಒಟ್ಟಿನಲ್ಲಿ ಹೆಣ್ಣಿನ ಮೇಲೆ ದೌರ್ಜನ್ಯ–ದಬ್ಬಾಳಿಕೆ ನಡೆಸುತ್ತ ಬಂದ ಪುರುಷ ವರ್ಗದ ನಡತೆ ಇಂದಿಗೂ ಮುಂದುವರೆದಂತಾಗಿದೆ ಎನ್ನುವುದಕ್ಕೆ ಈ ಗಂಡಿನ ಒಡಪುಗಳೇ ಸಾಕ್ಷಿಯೆನ್ನುವಂತಾಗಿದೆ. ಅವಳು ತನ್ನ ಹೆಂಡತಿ, ಅಗೌರವ–ಅಪಹಾಸ್ಯಕ್ಕೆ ಈಡು ಮಾಡಬಾರದೆಂಬ ವಿವೇಕವೂ ಗಂಡನ ಒಡಪುಗಳಲ್ಲಿ ಕಾಣಸಿಗದು. ಎಂಥ ಕಟುಕ ಗಂಡನಾದರೂ ಮಹಾದೇವನೆಂದು ತಿಳಿದ ಹೆಂಡತಿಯ ದೊಡ್ಡ ಗುಣವೇ ಅವಳಿಗೆ ಮುಳುವಾದಂತೆ ತೋರುತ್ತದೆ. ಅವಳೂ ಗಂಡನ ದೌರ್ಬಲ್ಯವನ್ನು ಸಭಿಕರೆದುರೇ ಬಹಿರಂಗಗೊಳಿಸುವಷ್ಟು ಸಮರ್ಥಳಾಗಿರುವುದನ್ನು ಆಕೆಯ ಅನೇಕ ಒಡಪುಗಳಲ್ಲಿ ಕಾಣಬಹುದು. ಹೆಣ್ಣು ತನ್ನ ದಾಸಿ ಎಂಬ ಮನೋಭಾವನೆಯಿಂದಾಗಿ ಇಲ್ಲಿಯ ಗಂಡಿನ ಅನೇಕ ಒಡಪುಗಳು ಯಾವುದೇ ರೀತಿಯ ಅಧ್ಯಯನಕ್ಕಾಗಿ ಒಳಪಡುವಂತಿಲ್ಲವೆಂಬುದು ವಿಚಾರಾರ್ಹ ಸಂಗತಿಯಾಗುತ್ತದೆ.

ಉದಾ :

*"ಗಣಕೀಲೆ ಹೊಡೆದರೆ*
*ಕುಣಕೊಂತ ಬರ್ತಾಳೆ ....*

*"ಭೀಮನ ಹೆಂಡತಿ ಹಿಡಂಬಿ*
*ನನ್ನ .... ಈಕಿ ನನ್ನ ಕೈಯೊಳಗಿನ ಗೊಂಬಿ"*

*"ತವರ ಮನಿ ಅಂದ್ರ ನಗತಾಳ*
*ಅತ್ತಿಮನಿ ಅಂದ್ರ ಅಳ್ತಾಳ ...."*

*ಪ್ರೀತಿ ನೀತಿ ಎರಡೂ ಇಲ್ಲ*
*ನಮ್ಮ ... ಕಿಗೆ ತಲೇನ ಇಲ್ಲ.*

*"ಕತ್ತಲದಾಗ ಕುಂತಗೊಂಡು*
*ಕಡಬ ತಿಂತಾಳ .....*

*ಕಜ್ಜಿ ಇದ್ದವರಿಗೆ ಲಜ್ಜಿ ಇಲ್ಲ*
*ನನಗೂ ನನ್ನಾಕಿಗೂ ಸಜ್ಜು ಇಲ್ಲ ...."*

ಒಂದೊಂದು ಸಲ ಹೆಂಡತಿಯನ್ನು ಪ್ರೀತಿಯಿಂದ ಕಂಡ ಒಡಪುಗಳೂ ಇವೆ.

ಉದಾ :

*"ಇಟ್ಟರೆ ತೊಟ್ಟರೆ ಪುಟ್ಟಕ್ಕ ಚಂದ*
*ಏನೂ ಇಲ್ದ ನನ್ನಾಕಿ ಚೆಂದ ....*

ಒಟ್ಟಾರೆ ಹೆಂಡತಿಯು ಒಡಪುಗಳ ಭಾವ ವಿಲಾಸ, ಗಂಡನ ಒಡಪುಗಳಿಗಿಲ್ಲ, ಹಾಸ್ಯ ಅಪಹಾಸ್ಯವಾಗಬಾರದು. ಔಚಿತ್ಯವು ಅನೌಚಿತ್ಯವೆನಿಸಬಾರದು. ಗಂಡ, ಹೆಂಡತಿಯ ಒಡಪುಗಳಲ್ಲಿ ಕೆಲವೊಂದು ಅಶ್ಲೀಲ ಪದಗಳೂ ಬಳಕೆಯಾಗಿದ್ದವು. ಅವುಗಳನ್ನು ಈ ಸಂಪುಟದಲ್ಲಿ ಅನಿವಾರ್ಯವಾಗಿ ಕೈಬಿಟ್ಟಿದ್ದೇನೆ. ಅಶ್ಲೀಲತೆಯೂ ಅಧ್ಯಯನದ ಭಾಗವಾಗಿದ್ದರೂ ಸಾಹಿತ್ಯದಲ್ಲಿ ಅದರಲ್ಲೂ ಜನಪದ ಸಾಹಿತ್ಯದಲ್ಲಿ ಶೀಲ-ಅಶ್ಲೀಲತೆ ತೊಡಕು ಇಲ್ಲವೆಂಬ ಭಾವನೆ ಇದ್ದಾಗಲೂ ಆರೋಗ್ಯಕರವಾದ ದೃಷ್ಟಿಯಿಂದ ಇದರಲ್ಲಿ ಸೇರಿಸಿಲ್ಲ.

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಸಂಚರಿಸಿ ಬಂದಿದ್ದೇನೆ. ಧಾರವಾಡ, ಗದಗ, ಹಾವೇರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಗುಲಬರ್ಗಾ, ಬೆಳಗಾವಿ ಇತ್ಯಾದಿ ಅನೇಕ ಭಾಗಗಳಲ್ಲೂ ಪ್ರವಾಸ ಕೈಕೊಂಡಾಗ ಸಂಗ್ರಹಿತ ಒಡಪುಗಳ ಮೊತ್ತವೇ ಈ ಸಂಪುಟವಾಗಿದೆ. ನನ್ನ ಗಮನಕ್ಕೆ ಬಂದಿರುವಂತೆ ಇದೀಗ ಸುಮಾರು ೨೦-೨೫ ಒಡಪುಗಳ ಸಂಗ್ರಹವಾದರೂ ಪ್ರಕಟವಾಗಿವೆ. ಅವುಗಳ ಯಾದಿಯನ್ನು ಕೊನೆಗೆ ಕೊಡಲಾಗಿದೆ. ಪ್ರಸ್ತುತ ಒಡಪು ಸಂಪುಟದಲ್ಲಿ ಹೆಂಡತಿಯ ಒಡಪುಗಳು, ಗಂಡನ ಒಡಪುಗಳು ಹಾಗೂ ಉಭಯುತರ ಸಂವಾದ ಒಗಟು ಒಡಪುಗಳೆಂದು ಮೂರು ಭಾಗ ಮಾಡಿಕೊಳ್ಳಲಾಗಿದೆ. ಈ ಒಡಪು ಸಂಪುಟದಲ್ಲಿ ಕೆಲವೊಂದು ಕಡೆ ಪುನರುಕ್ತವಾಗುವ ಸಾಧ್ಯತೆಯೂ ಇದೆ. ಭಾಷಿಕ ದೃಷ್ಟಿಯಿಂದ ಅವುಗಳನ್ನು ಉಳಿಸಿಕೊಂಡಿದ್ದೇನೆಂಬ ಸಮಾಧಾನ ನನ್ನದು.

ಈಗಾಗಲೇ ತಿಳಿಸಿದಂತೆ ಎರಡು ಬಗೆಯ ವಿಭಿನ್ನ ನೆಲೆಯ ಮಹಿಳೆಯರಿಂದ ಒಡಪು ಸಂಗ್ರಹಿಸಿದ್ದೇನೆ. ಗ್ರಾಮೀಣ ಪರಿಸರದಿಂದ ಪರಂಪರೆಯುದ್ದಕ್ಕೂ ಬೆಳೆದು ಬಂದು ಹಿರಿ ಕಿರಿಯ ಮಹಿಳೆಯರು ಒಂದೆಡೆಗಿದ್ದರೆ, ಓದು ಬರಹ ಬಲ್ಲ ನಾಗರಿಕ ಸಮಾಜದಲ್ಲಿರುವ ಮಹಿಳೆಯರು ಇನ್ನೊಂದೆಡೆಗೆ ಈ ಈರ್ವರ ಒಡಪುಗಳಲ್ಲಿ ಸಾಕಷ್ಟು ಭಿನ್ನತೆ ಇರುವುದು ಸಾಮಾನ್ಯ., ಈ ಸಂಪುಟದ ಒಡಪುಗಳಲ್ಲಿ ಈ ಅಂತರವನ್ನು ಸೂಕ್ಷ್ಮವಾಗಿ ಗಮನಿಸಬಹುದು. ನಗರವಾಸಿಗಳಿಂದ ಬಂದ ಅಕ್ಷರಸ್ಥರ ಒಡಪುಗಳಲ್ಲಿ ಸಾಮಾನ್ಯವಾಗಿ ಪೌರಾಣಿಕ, ಸಾಹಿತ್ಯಿಕ, ಧಾರ್ಮಿಕ, ಅಲ್ಲದೇ ದಾನಿಗಳ, ಸಮಾಜ ಸುಧಾರಕರ, ರಾಜಕೀಯ ಮುತ್ಸದ್ಧಿಗಳ, ವಚನಕಾರರ, ದಾಸರ, ರಾಮಾಯಣ–ಮಹಾಭಾರತಗಳ ಅನೇಕಾನೇಕ ವಿಷಯಗಳು ಅಭಿವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ. ಆದರೆ ಅಶಿಕ್ಷಿತರಾದ ಗ್ರಾಮೀಣ ಪರಿಸರದಿಂದ ಬಂದಿರುವ, ಓದು ಬರಹ ಬಾರದವರಿಂದ ಸಂಗ್ರಹಿತವಾದ ಒಡಪುಗಳಲ್ಲಿ ಬದುಕಿನಾನುಭವದ ಅಭಿವ್ಯಕ್ತಿ ಅನುಪಮವಾಗಿದೆ. ಕಷ್ಟಕಾರ್ಪಣ್ಯಗಳೊಂದಿಗೆ ಮೇಳೈಸುವ ನಿಸರ್ಗ, ಮಳೆ, ಬೆಳೆ, ಹೂ ಬಳ್ಳಿ, ಸರೋವರ, ಸಮುದ್ರ, ಗ್ರಾಮದೇವತೆಗಳು, ಐತಿಹ್ಯ, ಪೌರಾಣಿಕ ಸಂಗತಿಗಳು ರಾಮಾಯಣ ಮಹಾಭಾರತದ ಪ್ರಸಿದ್ಧ ಪಾತ್ರಗಳು. ಹೀಗೆ ಅವರ ಒಡಪುಗಳಲ್ಲಿ ಬದುಕು ಹಾಗೂ ಸೃಷ್ಟಿಯ ಸಮನ್ವಯ ದೃಷ್ಟಿ ಗೋಚರಿಸುತ್ತದೆ. ಈ ಎರಡೂ ಬಗೆಯ ಮಹಿಳೆಯರು ಸುಸಂಸ್ಕೃತರೆ ಎಂಬುದನ್ನು ಮರೆಯುವಂತಿಲ್ಲ. ಗ್ರಾಮೀಣ ಜನಪದರ ಕಲ್ಪನಾ ಲೋಕವಾಗಲಿ, ಸಹಜ ಪ್ರತಿಭೆಯಾಗಲಿ ನಾಗರಿಕ ಸಮಾಜದ ಓದು ಬರಹದ ಮಹಿಳೆಯರ ಒಡಪುಗಳಲ್ಲಿ ಕಾಣುವುದು ದುರ್ಲಭವೆಂದೇ ಹೇಳಬಹುದು. ಆದ್ದರಿಂದಲೇ ಗ್ರಾಮೀಣ ಪರಿಸರದ ಒಡಪುಗಳೇ ಹೆಚ್ಚು ಶುದ್ಧ ಒಡಪುಗಳೆಂದು ಹೇಳಬಹುದು. ಕಾರಣ ಅಲ್ಲಿ ಜೀವನವಿದೆ, ಜೀವಂತಿಕೆ ಇದೆ.

ಉದಾಹರಣೆಗೆ ಕೆಲವೊಂದು ನಾಗರಿಕ ಹಾಗೂ ಕೆಲವು ಗ್ರಾಮೀಣ ಪರಿಸರದ ಒಗಟುಗಳನ್ನು ಗಮನಿಸಬಹುದು.

ನಾಗರಿಕ ಒಡಪು :

*"ಕನ್ನಡದ ಕಡುಗಲಿ ಕುಮಾರರಾಮ*
*ನಾನು ..... ರ ಮದುವೆಯಾದೆ ಪ್ರೇಮಪೂರ್ವಕ"*

*"ಕನ್ನಡದ ಕವಿ ಆದಿ ಕವಿ ಪಂಪ*
*ಹೂದೋಟದಲ್ಲಿ ನನ್ನವರೊಂದಿಗಿರುವೆ – ಸಂಪ ...."*

*"ಅಕ್ಕಮಹಾದೇವಿಗೆ ಚಿಕ್ಕಂದಿನಲ್ಲಿ*
*ದೊರೆತದ್ದು ವೈರಾಗ್ಯ*
*ನಮ್ಮ .... ವರ ಹೆಸರು ಹೇಳುವ*
*ವ್ಯಾಳೆ ಬಂದದ್ದು ನನ್ನ ಸೌಭಾಗ್ಯ".*

*"ಆಲದ ಮರದ ಮ್ಯಾಲ*
*ಕೃಷ್ಣ ಕೂತದ್ದು ಚಮತ್ಕಾರ*
*ನಮ್ಮ .... ರ ಹೆಸರ ಹೇಳ್ತೀನಿ*
*ಎಲ್ಲರಿಗೂ ನನ್ನ ನಮಸ್ಕಾರ".*

## ಗ್ರಾಮೀಣ ಪರಿಸರದ ಒಡಪು

*"ಚಂದ್ರಾಮನ ಕೂಡ ಸಲಿಗೆ ಮಾಡ್ತಾರ*
*ನನ್ನ ಕೈಮಾಡಿ ಕರೀತಾರ ....."*

*"ನಕ್ಷತ್ರದ ಮ್ಯಾಲ ಕುಂತ*
*ಅಕ್ಷರಾ ಬರೀತಾರ ...."*

*"ಬಂಗಾರದ ಹಗ್ಗ ಬೆಳ್ಳಿ ತೊಟ್ಟಿಲ*
*ಕಂದನ್ನ ತೂಗಿ ಮುಂದಕ ಬರತಾರ ...."*

*"ಚಿಕ್ಕ ಚಿಕ್ಕ ನೀರಿಗಿ ಚಾರಾಣಿ ಕುಬುಸ*
*ವಜ್ರದವಾಲಿ ಗೆಜ್ಜೀ ಟೋಕಿ*
*ಮರಾಳವಂಕಿ, ಮುರಗಿ ಸರಗಿ*
*ಹತ್ತು ಮಂದ್ಯಾಗ ಕುಂತ ನತ್ತ ಮಾಡಿಸ್ತಾರ ...."*

*"ಆರು ಸೇರು ಅವಲಕ್ಕಿ*
*ಮೂರು ಸೇರಿ ಮಂಡಕ್ಕಿ*
*ಧೋತರದಾಗ ಕಟಗೊಂಡು*
*ಪಾತರದಾಕಿ ಮನೀಗೆ ಹೋಗ್ತಾರಾ ...."*

*"ಕಣದಾಗ ಕಂಕಿ, ಕೈಯಾಗ ಒಂಕಿ*
*ನನ್ನ .... ರಿಗೆ ನಾ ಕಂಡ್ರ ಬಾಳ ಬೆಂಕಿ".*

ಹೀಗೆಲ್ಲಾ ಅದೆಷ್ಟೋ ಒಡಪುಗಳು ಹೆಣ್ಣು ಮಕ್ಕಳ ಪ್ರಾಮಾಣಿಕ ಅನಿಸಿಕೆಗೂ, ಅವರ ಕಲ್ಪನಾಶಕ್ತಿಗೂ, ಅವರು ಹೊಲಮನೆಗಳಲ್ಲಿ ನೋಡಿದ ವಸ್ತುವಿನೊಡನೆ ವ್ಯಕ್ತಿಯ ಗುಣವನ್ನು ತಳಕು ಹಾಕುವ ಜಾಣ್ಮೆಯನ್ನು ಗಮನಿಸಿದರೆ, ನಗರ ವಾಸಿಗಳ ಒಡಪುಗಳು ಕಳಾ ಹೀನವೆನಿಸುತ್ತವೆ, ಗ್ರಾಮೀಣರು ನಿಸರ್ಗದೊಂದಿಗೆ ಪಡೆದ ಅನುಭೂತಿಯೇ ಅವರ ಒಡಪುಗಳಿಗೆ ಅನನ್ಯತೆ ತಂದಿದೆ. ಅವರ ಒಡಪುಗಳಲ್ಲಿ ಧರ್ಮ, ನೀತಿ, ರಸಿಕತೆ, ಶೃಂಗಾರ ಲಾಸ್ಯವಾಗುತ್ತದೆ. ಬದುಕಿನ ವಿಶೇಷ ಸಂದರ್ಭದಲ್ಲಿ ಒಡಪುಗಳು ಉಕ್ಕಲೇರುತ್ತವೆ.

ಈ ಸಂಪುಟದ ಕೊನೆಯ ಭಾಗದಲ್ಲಿರುವ 'ಉಭಯುತರ ಒಗಟು ಒಡಪು'ಗಳು ಹೆಂಡತಿ–ಗಂಡಂದಿರ ಜಾಣ್ಮೆ ಪರೀಕ್ಷೆಗೆ ನಿದರ್ಶನವಾಗಿವೆ. ದಂಪತಿಗಳೀರ್ವರ ಒಗಟು ಸದೃಶ ಸಂಭಾಷಣೆಯಲ್ಲಿ ಯಾವುದೇ ಕೊಂಕು ಬಿಂಕಿಲ್ಲದ ಸುಂದರ ಅಭಿವ್ಯಕ್ತಿಯಿದೆ. ಆಧ್ಯಾತ್ಮವೂ ಅಲ್ಲಲ್ಲಿ ನುಸುಳುವುದುಂಟು. ಬೆಡಗಿನ ವಚನಗಳ ಸ್ವರೂಪವನ್ನು ಹೊಂದಿರುವುದು ಇಲ್ಲಿಯ ಒಡಪುಗಳಿಂದ ಸ್ಪಷ್ಟವಾಗುತ್ತದೆ.

ಉದಾ :

*"ಬಾಯೀಲೆ ತಿನ್ನೋದು ಬೆನ್ನೀಲೆ ಕಾರೋದು*
*ನಾಡನಾರ್‍ಯಾರು ವನವನದು ಹಾಡೋದು*
*ಇದರರ್ಥ ಬಿಡಿಸ್ಹೇಳ ನನ ರಾಜಾ ....."*

*ಇದಕ ಉತ್ತರ ಅದ್ಯಾವ ಸೋಜಿಗವು*
*'ಬೀಸುವಕಲ್ಲು' ಅಲ್ಲೇನ ನನ ರಾಣಿ ....*

ಹೀಗೆಯೇ ಸತಿಪತಿಯರು ವಾದಕ್ಕೆ ಪ್ರತಿವಾದವಾಗಿ ಒಗಟನ್ನು ಬಿಡಿಸುವಲ್ಲಿಯ ದಾಂಪತ್ಯದ ರಸಿಕತೆ ಮೇಲ್ಮಟ್ಟದ್ದಾಗಿದೆ.

ಒಟ್ಟಾರೆ ಒಡಪುಗಳು ಏಕಪದಿಯಿಂದ ರಗಳೆಯ ಧಾಟಿಯಲ್ಲಿ ಸಾಗುವ ಸುದೀರ್ಘ ರಚನೆಗಳೂ ಸಂಸ್ಕೃತಿಯ ಅಧ್ಯಯನಕ್ಕೆ ಆಕರಗಳಾಗುತ್ತವೆ. ಕೆಲವೊಂದು ಪೌರಾಣಿಕ ಒಡಪುಗಳಲ್ಲಿಯ ಸನ್ನಿವೇಶಗಳಾಗಲಿ, ವಿಶೇಷವಾಗಿ ಜೈನಧರ್ಮಕ್ಕೆ ಸೇರಿದ ವಿಶಿಷ್ಟ ಹೆಸರುಗಳಾಗಲಿ, ಅವರೆಲ್ಲ ನಡೆಸಿದ ಪವಾಡ ಸದೃಶ ಘನಕಾರ್ಯವಾಗಲಿ – ಒಡಪುಗಳಲ್ಲಿ ಉಕ್ತವಾಗಿದೆ. ಅವೆಲ್ಲವೂ ಗಂಭೀರವಾದ ಅಧ್ಯಯನಕ್ಕೆ ಒಳಗಾಗಬೇಕಾದ ಅವಶ್ಯಕತೆ ಇದೆ. ಅವರು ಹೇಳಿದ ಪೌರಾಣಿಕ ಉದಾಹರಣೆಗಳಲ್ಲಿ ತಪ್ಪು ತಡೆಗಳೂ ಇರಬಹುದು. ಅಂತೆಯೇ ಇಂಥವುಗಳ ಅಧ್ಯಯನ ಅಗತ್ಯ.

ಕನ್ನಡ ಒಡಪುಗಳ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಧ್ಯಯನ ಕುರಿತು ಕರ್ನಾಟಕ ವಿಶ್ವವಿದ್ಯಾಲಯದಿಂದ ಒಂದೆರಡು ಸಂಶೋಧನ ಪಿಎಚ್.ಡಿಗಳು ಬಂದಿವೆ. ಒಡಪುಗಳ ಬಗೆಗೆ ಸಂಗ್ರಹಿತವಾದ ಗ್ರಂಥಗಳಲ್ಲಿ ವಿದ್ವಾಂಸರು ಪ್ರಸ್ತಾವನೆಗಳನ್ನು ಬರೆದಿದ್ದಾರೆ. ಅಲ್ಲಲ್ಲಿ ಒಡಪುಗಳನ್ನು ಕುರಿತ ಸಣ್ಣಪುಟ್ಟ ಬರಹಗಳೂ ಬಂದಿವೆ. ಇದಿಷ್ಟೇ ಸಾಲದು. ಅಂತರ್‌ಶಿಸ್ತೀಯ ಅಧ್ಯಯನದಿಂದ ಜನಾಂಗದ ಅಥವಾ ಪ್ರಾದೇಶಿಕವಾದ ವಿಶಿಷ್ಟ ಸಂಸ್ಕೃತಿಯ ಪರಿಚಯವಾಗುವುದು ಅಗತ್ಯ.

**– ಸಂಪಾದಕರು**

# ಪರಿವಿಡಿ


೧. ಹೆಂಡತಿಯ ಒಡಪುಗಳು ೧–೨೫೦

೨. ಗಂಡನ ಒಡಪುಗಳು ೨೫೧–೪೦೦

೩. ಉಭಯುತರ ಸಂವಾದ ಒಗಟು–ಒಡಪುಗಳು ೪೦೧–೪೧೦

೪. ಒಡಪು ಹೇಳಿದವರು ೪೧೧–೪೧೬

೫. ಪ್ರಕಟಿತ ಒಡಪು ಸಂಗ್ರಹಗಳು ೪೧೭–೪೧೮

೬. ಕೆಲವು ದೇಶಿ ಶಬ್ದಾರ್ಥಗಳು ೪೧೯–೪೨೫

## ೧. ಹೆಂಡತಿಯ ಒಡಪುಗಳು

೧. ಅತ್ತಿ ಹೆಸರು ಅತ್ತಿ ಹೂವು
ಮಾವನ ಹೆಸರು ಮಲ್ಲಿಗೆ ಹೂವು
ನನ್ನ ಹೆಸರು ಸಂಪಗಿ ಹೂವು
ನನ್ನ ಗಂಡನ ಹೆಸರು ಕ್ಯಾದಗಿ ಹೂವು ...

೨. ಅಡಕಿ ತಿಂದ್ರ ಖಡಕ ಆಗ್ತಾನ
ಲಾವಂಗ ತಿಂದ್ರ ಲಾಲ ಆಗ್ತಾನ
ಹೂವಿನಂಥ ಹುಡುಗಿ ಕಂಡು ಹುಬ್ಬುಹಾರಿಸ್ತಾನ ...

೩. ಹಂಚಿನಮನಿ ಹುಡುಗಾ
ಅವನ ಕೈಯಾಗ ಬೆಳ್ಳಿ ಕಡಗಾ
ಹೊಡಿ ಬಿಚ್ಚಿದ ಹೊಲಕ ಖಡಕಿನಿಂದ ಹೋಗ್ತಾರ ...

೪. ಆರು ಸೇರು ಎಳ್ಳು
ಮೂರು ಸೇರು ಜೊಳ್ಳು
ನಮ್ಮವರು ಹೇಳಿದ್ದೆಲ್ಲ ಸುಳ್ಳು ...

೫. ಅರಗಿನ ಅಡ್ಡುಣಗಿ ಮುರುಗಿನ ಬಾಚುಣಕಿ
ಅರಮನ್ಯಾಗ ಕುಂತಗೊಂಡು ಆಳು ಮಕ್ಕಳನ್ನ ಕರೀತಾರ ...

೬. ಅರಗಿಳಿ ಎತಿಗೊಂಡು ಅರ್ತಿಲೆ ನಗತಾನ
ನನ್ನಾಕಿ ಅಂತಾನ ಹೆಸರೆತ್ತಿ ಕರೀತಾನ ...

೭. ಅಕ್ಕಮಹಾದೇವಿ ಶ್ರೀಶೈಲಕ್ಕೆ ಹೋದದ್ದು
ಮಲ್ಲಿಕಾರ್ಜುನನ ದರ್ಶನಕ್ಕಾಗಿ
ನಾನು ನಮ್ಮವರ ಹೆಸರ ಹೇಳುವೆನು ನಿಮ್ಮೆಲ್ಲರ ಪ್ರೇಮಕ್ಕಾಗಿ ...

೮. ಅಡಿಕೆ ಒಡೆಯಲು ಬೇಕು ಅಡಕೊತ್ತು
ಮೂಗಿಗೆ ಬೇಕು ಮುತ್ತಿನ ನತ್ತು
ಸುಖ ಜೀವನಕ ಬೇಕು ಧನ ದೌಲತ್ತು
ನನಗೆ .... ರೇ ಸರ್ವ ಸಂಪತ್ತು.

೯. ಅಹಿಂಸಾ ಪರಮೋಧರ್ಮವೇ ಜೈನಧರ್ಮ
ಮಹಾವೀರರು ಸಾರಿದರು ದಯಾಧರ್ಮ
ನಮ್ಮ ..... ರು ಜೈನ ಪುರಾಣ ಓದಿ ತಿಳಿದರು ಧರ್ಮದ ಮರ್ಮ.

೧೦. ಅನೀತಿಯಿಂದ ನಡೆದರೆ ಆಗುವುದು ಸಮಾಜದಿಂದ ಬಹಿಷ್ಕಾರ
ನನ್ನ ಪತಿ ..... ರಿಗೆ ಮಾಡುದೆ ಭಕ್ತಿಯಿಂದ ನಮಸ್ಕಾರ.

೧೧. ಅರಸರಲ್ಲಿರುವುದು ಸಿಂಗರಿಸಿದ ಆನೆ
ದೇವೇಂದ್ರನಲ್ಲಿರುವುದು ಬಿಳಿ ಆನೆ
ನನ್ನ ..... ರ ಕೈಹಿಡಿದ ನಾನೇ ಭಾಗ್ಯವಾನೆ.

೧೨. ಆರು ಸೇರು ಪತ್ರಿದಳ
ಮೂರು ಸೇರು ಹೂವಿನ ಎಸಳ
ಸಿಂಹಾಸನದ ಮ್ಯಾಲ ಕೂತ್ಗೊಂಡು
ಶಿವಪೂಜಿ ಮಾಡ್ತಾರ .....

೧೩. ಅತ್ತೀಹೆಸರು ಅತ್ತಿಕಾಯಿ
ಮಾವನ ಹೆಸರು ಮಾವಿನ ಕಾಯಿ
ನನ್ನ ಹೆಸರು ಸುಲಗಾಯಿ
ಸುಲಗಾಯಿ ಮುಂದ ಸುಳದಾಡತಾರ ....

೧೪. ಅಂಗಕ್ಕೆ ಆಚಾರವೇ ಚೆಲುವು
ಆತ್ಮನಿಗೆ ಅರಿವೇ ಚೆಲುವು
......ರಿಗೆ ನನ್ನ ಸೇವಾ ಧರ್ಮವೇ ಚೆಲುವು.

೧೫. ಅಳೆಯಲು ಬೇಕು ಮಾಪು
ತಾಂಬೂಲಕ್ಕೆ ಬೇಕು ಬಡೆಸೋಪು
......ರ ಸ್ನಾನಕ್ಕೆ ಬೇಕು ಮೈಸೂರು ಸೋಪು.

೧೬. ಅಗ್ನಿದೇವನ ಹೆಂಡತಿಯ ಹೆಸರು ಸ್ವಾಹಾ
.....ರ ಕೈಯಲ್ಲಿ ಕೊಡುವೆನು ಬಿಸಿ ಚಹಾ.

೧೭. ಆಂಗೈಯಾಗ ಅರಗಿಳಿ
ಮುಂಗೈಯಾಗ ಮೂರು ಗಿಳಿ
ಪಂಜರದಾಗ ಕುಂತಗೊಂಡು ಪಗಡಿ ಆಡತಾರ ...

೧೮. ಅಂಗೈಯಾಗ ರೊಟ್ಟಿ ಹಿಡಿಕೊಂಡು
ಮುಂಗೈ ಹಿಡದು ಮಾರಿ ನೋಡತಾರ ...

೧೯. ಅಕ್ಕಮಹಾದೇವಿಗೆ ಚಿಕ್ಕಂದಿನಲ್ಲಿ ದೊರೆತದ್ದು ವೈರಾಗ್ಯ
...ರ ಹೆಸರು ಹೇಳುವ ವ್ಯಾಳೆ ಬಂದದ್ದು ನನ್ನ ಸೌಭಾಗ್ಯ.

೨೦. ಅಂದದಿಂದ ಹೇಳುವೆ ಅರುಹಂತರ ಹೆಸರು
ಶೀಲದಿಂದ ಹೇಳುವೆ ಸಿದ್ದರ ಹೆಸರು
ಆಧಾರದಿಂದ ಹೇಳುವೆ ಆಚಾರ್ಯರ ಹೆಸರು
ಉದಾರದಿಂದ ಹೇಳುವೆ ಉಪಾಧ್ಯಾಯರ ಹೆಸರು
ಸಮಾಧಾನದಿಂದ ಹೇಳುವೆ ಸಾಧುಗಳ ಹೆಸರು
ಭಕ್ತಿಯಿಂದ ಹೇಳುವೆ .....ರ ಹೆಸರು.

೨೧. ಅಂಕಿ ಇರೂದು ಲೆಕ್ಕಕ್ಕ
.....ರು ಇರೂದು ನನ್ನ ಪಕ್ಕಕ್ಕ.

೨೨. ಅಂಗೈಗೆ ಅರಿಷಿಣ ಬೊಟ್ಟಿಟ್ಟು
ಮುಂಗೈಗೆ ಬಂಗಾರ ಬಳೆ ತೊಟ್ಟು
ಗಂಗಾಳದಾಗ ರಂಗೋಲಿ ಹಾಕ್ಕೊಂತ ಹೋದರ
ಸಂದ್ಯಾಗನಿಂತು ಸಿಳ್ಳು ಹಾಕತಾರ ...

೨೩. ಅಶ್ವತ್ಥಾಮ ಪಾಂಡವರ ನಿರ್ಮೂಲನೆಗಾಗಿ
ಉತ್ತರೆಯ ಗರ್ಭಕ್ಕೆ ಬಿಟ್ಟನು ಬ್ರಹ್ಮಾಸ್ತ್ರ
ಅದಕ್ಕೆ ಪ್ರತಿಯಾಗಿ ಅರ್ಜುನನು ಬಿಟ್ಟನು ಪಾಶುಪತಾಸ್ತ್ರ
ನಮ್ಮ ....ರ ಕೈಗೆ ಶೋಭಿಸುವುದು ನಾ ಕೊಡುವ ಕರವಸ್ತ್ರ.

೨೪. ಅಂಬುಧಿಗೆ ಆನಂದ ಚಂದಿರನ ಉದಯ
ನನ್ನ ....ರಿಗೆ ಸದಾನಂದ ನನ್ನ ಹೃದಯ.

೨೫. ಆಕಾಶದಲ್ಲಿ ಹೊಳೆಯುವುದು ನಕ್ಷತ್ರ
ಬೀಗತನದಲ್ಲಿ ವಿಚಾರಿಸುವುದು ಕುಲಗೋತ್ರ
ನನ್ನ ಕೊರಳಲ್ಲಿ ಶೋಭಿಸುವುದು ...ರು ಕಟ್ಟಿದ ಮಂಗಳಸೂತ್ರ.

೨೬. ಆಕಾಶಲ್ಲಿರುವವನು ಚಂದ್ರ
ದೇವಲೋಕದೊಡೆಯ ಇಂದ್ರ
....ರೇ ನನಗೆ ಇಂದ್ರ ಚಂದ್ರ.

೨೭. ಆಕಾಶದಲ್ಲಿ ಕರಿಮೋಡ ತೇಲುವವು ಒಂದಾಗಿ
ನಮ್ಮವ ....ರ ಕೂಡ ನಾ ಬಂದೀನಿ ಚಂದಾಗಿ.

೨೮. ಆಕಾಶದತುಂಬ ನಕ್ಷತ್ರ
ಕೈಮಾಡಿ ಕರಿತಾರ ಹತ್ತಿರ ...

೨೯. ಆ ಕಡೆ ಈ ಕಡೆ ಯಾ ಕಡೆ ನೋಡಿದ್ರೂ ಏನು ಮಾಡಿದ್ರೂ
ಪಾತಾಳಗಡೆ ಬಿಟ್ರೂ ಸಿಗದವರು ನನ್ನ ರಾಯರು ......
ನನ್ನ ತಂಗಿ ಮನ್ಯಾಗ ಸಿಕ್ಕ್ರು.

೩೦. ಆ ಜಾತಿ ಈ ಜಾತಿ ಭೂಮಿ ತಾಯಿಗಿಲ್ಲ
ಮಡಿ ಮೈಲಿಗಿ ಅನ್ನೂದು ನೀರಿಗಿಲ್ಲ
ಮುತ್ತಿನಂಥಾ ....ರು ನನಗ ಹ್ಯಾಂಗ್ ಸಿಕ್ಕರೊ ದೇವರೇ ಬಲ್ಲ.

೩೧. ಇನ್ನೂರು ರೂಪಾಯಿ ಪಗಾರ
ನಾಲ್ಕು ಮಂದೀ ಸಂಸಾರ
ಚಿನ್ನದಂಥ ನನಗಂಡ .... ಚಕ್ಕಂದ ಆಡ್ತಾರ.

೩೨. ಕಾಸಿಪಟ್ಟಣಕ್ಕ ಇನ್ನೊಂದು ಹೆಸರು ಬನಾರಸ
....ರು ಪ್ರೀತಿಯಿಂದ ತಿನ್ನುವರು ನಾ ಕೊಟ್ಟ ಅನಾನಸ್.

೩೩. ಈಶ್ವರನ ಒಲುಮೆ ದೊರಕುವದು ಭಕ್ತಿ ಬಲದಿಂದ
ಹನುಂತನು ಲಂಕೆಗೆ ಹಾರಿದ್ದು ಶಕ್ತಿ ಬಲದಿಂದ
ನಾನು ನನ್ನ ಪತಿ .... ರಾಯರ ಒಲುವೆ ದೊರಕಿದ್ದು ಪ್ರೇಮದಿಂದ.

೩೪. ಈಶ್ವರ ಸಿಕ್ಕಾನ ಪಾರ್ವತಿಯ ಬಲೆಗೆ
ನಾ ಮಾತ್ರ ಸಿಕ್ಕೀನಿ .....ರ ಸೋಲಿಗೆ.

೩೫. ಈಗಿನ ಜನ ಹಣದಾಸೆಗೆ ಮಾರುವರು ಹೋಟು
ತಿನ್ನೂ ದೀನಸಾ ಆಗ್ಯಾದ ಭಾರೀ ಭಾರೀ ರೇಟು
ನಮ್ಮ ...... ರಾಯರು ಹಾಕ್ಯಾರ ಮದುವೆ ಸೂಟು.

೩೬. ಆಲದ ಮ್ಯಾಲ ಕೃಷ್ಣ ಕೂತದ್ದು ಚಮತ್ಕಾರ
ನಾ ಹೆಸರ ಹೇಳೀನಿ ..... ಎಲ್ಲರಿಗೂ ನಮಸ್ಕಾರ.

೩೭. ಅತ್ತೀ ಎಲ್ಲರಿಗೂ ಬಾಳ ಹಸಾ
ಆಕಿ ತೆಲಿಮ್ಯಾಲ ತುಂಬೈತಿ ಕಸಾ
ನಮ್ಮ .....ರ ಹೆಸರ ಹೇಳ್ತೇನಿ
ಕುಡದಾಂಗ ಹಣ್ಣಿನ ರಸಾ.

೩೮. ಈಗಿನ ಗಂಡಸೂರು ಮಾರಿಕೊಂತಾರ ವರದಕ್ಷಿಣೆಗಾಗಿ
......ರು ನನ್ನ ಕೈ ಹಿಡದದ್ದು ತಮ್ಮ ಸಂರಕ್ಷಣೆಗಾಗಿ

೩೯. ಈಗಿನ ಕಾಲದಾಗ ಹರಟೆ ಹೊಡಿಯಾಕ ಯಾರಿಗೂ ಇಲ್ಲ ವಾಳ್ಯಾ
......ರಿಗೆ ನಾ ಪ್ರೀತಿಯಿಂದ ಕೊಡುವೆನು ತಾಂಬೂಲ ವೀಳ್ಯಾ

೪೦. ಉಡುಪಿಯಲ್ಲಿ ದರ್ಶನಕ್ಕಾಗಿದೆ ಕನಕನ ಕಿಂಡಿ
......ರು ನನ್ನ ಕರೀಲಿಕ್ಕೆ ತಂದಾರ ಕೊಲ್ಲಾರಿ ಬಂಡಿ.

೪೧. ಉಂಗುರುಗೂದಲ ಬಂಗಾರ ಬೇತಾಲಿ
ಬೆಳ್ಳಿ ಮೋಟಾರದಾಗ ಕೂತಗೊಂಡು
....ರು ಬೆಂಗಳೂರಿಗೆ ಕರೀತಾರ.

೪೨. ಊರ ಹೊರಗ ನಿಂತಾನ ಬಲವಾನ ಹನುಮಂತ
ಆಚಾರ ವಿಚಾರದಲ್ಲಿ ನಿಷ್ಠೆಯುಳ್ಳವನೇ ಶೀಲವಂತ
ನನ್ನ .....ರೇ ನನ್ನ ಜೀವನದ ಚಂದ್ರಕಾಂತ.

೪೩. ಊರಿನ ಹೊಲಕ ಹೊಂದಿ ಇರಬೇಕು ಹೊಳಿ
ಹೊಲಾ, ತುಂಬಿರಬೇಕು ನಳನಳಿಸೊ ಬೆಳಿ
....ರಿಗೆ ಯಾವಾಗಲೂ ನಂದs ಕಳಕಳಿ.

೪೪. ಊಟದಲ್ಲಿ ಉಪ್ಪಿನ ಕಾಯಿ ಇದ್ದರ ರುಚಿ
ತಾಂಬೂಲದಲ್ಲಿ ಸುಣ್ಣ ಇದ್ದರ ರುಚಿ
.....ರ ಅಭಿರುಚಿಗೆ ತಕ್ಕಂತೆ ನಾನಿದ್ದರ ಬಾಳೇಕ ರುಚಿ.

೪೫. ಅಕ್ಕ ಮಾಡ್ಯಾಳ ಅವರೀಕಾಯಿ ಪಲ್ಯ
ತಂಗಿ ಮಾಡ್ಯಾಳ ತೊಗರಿಕಾಳ ಪಲ್ಯ
ಎಲ್ಲರೂ ಸುಲಿದಾರ ಕಡಲಿಕಾಯಿ
ನಮ್ಮ ....ರು ತಿಂದಾರ ಹಸೆ ಮೆಣಸಿನಕಾಯಿ.

೪೬. ಅಕ್ಕಿ ಅನ್ನ ಮಾಡಿ ಮೆಕ್ಕಿ ಉಪ್ಪಿನಕಾಯಿ ಮಾಡಿ
ಊಟಕ ಬಾ ಅಂತ ತಾಟು ಹಾಕಿದ್ರ
ಅತ್ತಿ ಕರಕೊಂಡು ಅಕ್ಕರ್ತಿಲೆ ಊಟಾ ಮಾಡ್ತಾರ ...

೪೭. ಅಣ್ಣನ ಮನಿ ಮಡಿಗಿ ಚೆಂದ
ತಮ್ಮನ ಮನಿ ಕಿಡಕಿ ಚೆಂದ
ನಮ್ಮಾವ್ರು ಕಟ್ಟಿಸ್ಯಾರ ಬಂಗಾರ ಮನಿ
ಬಂಗಾರ ಮನ್ಯಾಗ ಕುಂತ ಬಂಗಾರ ಗಟ್ಟಿ ಎಣಿಸತಾರ ...

೪೮. ಅಂಡ್ಯಾಳ ಒಲಿ ಹೂಡಿ
ಊದಿನ ಕಡ್ಡಿ ಉರಿಮಾಡಿ
ಕಂಡ್ಯಾಳ ತೆವಿ ಇಟ್ಟು
ಜಾಜಿಕಾಯಿ ಹೋಳಿಗಿ ಮಾಡಿ
ಗಂಗಾನದಿ ನೀರು ಹಂಡೇಕ ಹಾಕಿ
ಘಮ್ ಅನ್ನೂ ಅಡಿಗಿ ಮಾಡಿ
ಅಲ್ಲೂ ಇಲ್ಲೂ ಎಲ್ಲಾ ನೋಡ್ದೆ
ಎಲ್ಲೆ ಹೋದರಂತ ಹೊರಗಬಂದ್ರ
ಬಣ್ಣದ ಬಂಕದಾಗ ಬರಕೊಂತ ಕುಂತಾರ ...

೪೯. ಆನಿ ಅಂಬಾರಿ ಹತ್ತಿ ಬರತಾರ
ನಕ್ಷತ್ರದಾಗ ಕುಂತು ಅಕ್ಷರ ಬರೀತಾರ ....

೫೦. ಅತ್ತೆ ಮಾವಾ ಸತಿಪತಿ
ಸಣ್ಣ ಮೈದುನಾ ಗಣಪತಿ
ದೊಡ್ಡ ಮೈದುನಾ ಲಕ್ಷಾಧಿಪತಿ
ನಾನು .....ರು ಶಿವಪಾರ್ವತಿ.

೫೧. ಅಂಗಳ ತುಂಬಾ ಆಣಿಕಲ್ಲು
ಗಂಗಾಳ ತುಂಬ ಮಲ್ಲಿಗೆ ಹೂವು
ಅಂಗಳದಾಗ ನಿಂತು ಗುಂಗುರುಗೂದಲ ತಿದ್ದಿಕೋತ
ಗಂಗಾಬಾಯಿ ಬಾ ಅಂತಾರಾ ....

೫೨. ಎಳ್ಳ ಹೂವಿನ ಸೀರಿ
ಬೆಳ್ಳಿ ಕಾಲುಂಗರ
ಒಳ್ಳೆಯವರ ಮಗಳಂತ
ಕಣ್ಣು ಹೊಡೀತಾರ ...

೫೩. ಹಾವಿನ ಹುತ್ತ ಇರೂದು ಅಡಿವ್ಯಾಗ
....ರ ಹೆಸರ ಹೇಳುವೆನು ನಿಮ್ಮ ಮನ್ಯಾಗ.

೫೪. ಅಣೇದ ಬಂಗಾರ
ಪುಣೇದ ಪತ್ತಾರ
ನವರಾತ್ರ್ಯಾಗ ಎದ್ದ
ಸರಗಿ ಮಾಡಿಸ್ತಾರ ....

೫೫. ಮುತ್ತಿನಂಥ ಜೋಳ, ರತ್ನದಂಥ ಗೋಧಿ
ಅತ್ತಿ ಮಾವಾರ ಹೊಟ್ಟೇಲೆ ಮುತ್ತಿನಂತೋರು ಹುಟ್ಟ್ಯಾರ ...

೫೬. ಅತ್ತಿ ಅಡ್ನಾಡಿ
ಮಾವಾ ಮುರಗೇಡಿ
ನನ ಗಂಡ ಸದ್ಗುಣಿ ...

೫೭. ಅಡಕಿ ಅಂಗಡಿ, ಕಿಡಕಿ ಬಾಗಿಲ
ಅಂಗಡ್ಯಾಗ ಕೂತಗೊಂಡು ಅಡಕಿ ತಿಂತಾನ ...

೫೮. ಊಟಾ ಮಾಡಿ ತೋಟಕ್ಕ ಹೋಗಂದ್ರ
ಕೋಟು ತೊಟಗೊಂಡು ನಾಟಕ್ಕ ಹೋಗ್ತಾರ ....

೫೯. ಉಡಾಕ ತರಲಿಲ್ಲ
ಇಡಾಕ ತರಲಿಲ್ಲ
ದುಡಿಯಾಕ ಹೋಗಂದ್ರ
ಹೊಡಿಯಾಕ ಬರ್ತಾನ ....

೬೦. ಅಂಗಳದಾಗ ರಂಗೋಲಿ
ನೀರಿನ್ಯಾಗ ಚಕೋರಿ
....ರೆ ನನಗೆ ಧೋರಿ

೬೧. ಅತ್ತೆಯ ಮನೆಗೆ ಅಕ್ಕರೆಯ ಮಗಳಾದೆ
ಮಾವನಿಗೆ ನಾನು ಮುದ್ದಿನ ಸೊಸೆಯಾದೆ
ನಾ ಕೊಟ್ಟ ಮನೆಗೆ ಕೀರುತಿ ಕಳಸಾದೆ
.....ರ ಪಿರುತೀಯ ಸತಿಯಾದೆ.

೬೨. ಅಂಗೀಗೆ ತೋಳಿಲ್ಲ
ಧೋತರಕ ಧಡಿ ಇಲ್ಲ
.....ರಿಗೂ ನನಗೂ ತಾಳಿಲ್ಲ.

೬೩. ಅಂಗಳದ ನಿಂತಾರ
ಸಂತೀಗೆ ಹೋಗೂ ಜನಾ ಕರೆದು
ಪಂಚಾಯತಿ ಮಾಡ್ತಾರ ....

೬೪. ಆರು ಸೇರು ಅಳ್ಳಿಟ್ಟು
ಮೂರು ಸೇರು ತಂಬಿಟ್ಟು
ವಾರೀಗಿ ಕುಂತು ಮ್ಯಾರಿ ಮಾಡ್ತಾರಾ ...

೬೫. ಆರು ಸೇರು ಪುಟಾಣಿ
ಮೂರು ಸೇರು ಬೆಲ್ಲ
ಪಾವಡದಾಗ ಕಟಿಗೊಂಡ
ಪಾತರಗಿತ್ತಿ ಮನಿಗೆ ಹೋಗ್ತಾನ ...

೬೬. ಅಚ್ಚೇರ ಅಡಿಕಿ
ಪಂಚೀಸ ಎಲಿ
ಕಚಪಚ ತಿಂದು
ಪಿಚಿ ಪಿಚಿ ಉಗುಳ್ತಾನ ...

೬೭. ಆರು ಕೊಡದ ಅಂಬಲಿ
ಮೂರು ಕೊಡದ ಮಜ್ಜಿಗಿ
ನಾ ಇಕ್ಕಲಿಲ್ಲ ಅವಾ ಸೊಕ್ಕಲಿಲ್ಲ
ನನ್ನ ಕೈಗುಣ ಅವನ ಮೈಗುಣ ...

೬೮. ಉದ್ದಿನ ಒಡಿ ತಿಂದು
ತೆಗ್ಗಿನ ನೀರು ಕುಡಿದು
ಮದ್ದುಗುಣಕಿ ಗಿಡ ಕಡಿದು
ಮನಿಗಿ ಬಂದು ಮುಸಿ ಮುಸಿ ಅಂತಾನ ...

೬೯. ಉಪ್ಪಿಲ್ದ ಉಪ್ಪಿಟ್ಟು
ಬೆಲ್ಲ ಇಲ್ಲದ ತಂಬಿಟ್ಟು
ಗಪ್ಪನ ತಿಂದು ತೆಂಬ ಏರತಾರ ....

೭೦. ಎತ್ತು ಏರಿಗೆ ಹೋದ್ರ
ನಮ್ಮ ....ರು ಕೇರಿಗೆ ಹೋಗ್ತಾರ.

೭೧. ಊರೂರಿಗೂ ದೂರ ಹರದಾರಿ
ಹರಿದಾರಿಗೊಂದು ಕೋರ್ಟು
ಕೋರ್ಟಿನ್ಯಾಗೊಂದು ಕಚೇರಿ
ಕಚೇರ್ಯಾಗ ಕುಂತು ವಿಚಾರ ಮಾಡ್ತಾರ ....

೭೨. ಊಟಕ್ಕ ನೂರು ಉಪ್ಪಿನಕಾಯಿ
ತೋಟಕ್ಕ ನೂರು ವಿಳೇದ ಎಲಿ
ಊಟಕ್ಕ ಬಾ ಅಂದ್ರ ನಾಟಕಕ್ಕ ಹೋಗ್ತಾರ ....

೭೩. ಊರ ಮುಂದ ತೆಂಗಿನ ತೋಟ
ಅದರಾಗ ಅದಾವ ಚಿನ್ನದ ಗರಿ
ನನ್ನ ....ರು ನನ್ನದೊರಿ
ಊರಿಗೆ ಹೊಂಟಾರ ಕರಿ

೭೪. ಊರ ಹೊರಗೆ ಮುರುಘಾಮಠಾ
ಅದರ ಮೇಲೆ ಗಂಗಾಜಲಾ
ನಾನು .....ರ ಹೆಸರ ಹೇಳುವೆನು
ಮಾಡಬೇಡರಿ ಹಟಾ.

೭೫. ಎಲಿ ಅಡಕಿ ಹಾಕ್ಯಾರ
ಮೇಲಿನ ಕಿಡಿಕ್ಯಾಗ ನಿಂತಾರ
ಸೀತಾನಂಥ ಹುಡುಗಿ ಕಂಡು
ಸೋತಿನಂತ ಸೆರಗ ಹಿಡಿತಾರ ...

೭೬. ಎಡಕ್ಕೆ ಎಣ್ಣಿ ದೀವಿಗಿ
ಬಲಕ್ಕೆ ತುಪ್ಪದ ದೀವಿಗಿ
ಬಂಗಾರ ಮಣಿಮ್ಯಾಲ ಕುಂತಗೊಂಡು
ಶಿವಪೂಜೆ ಮಾಡ್ತಾರ ....

೭೭. ಎರೆಯ ಸೀಮೆಯಲ್ಲಿ ಬೆಳೆಯುವುದು ಮೃದು ಗೋದಿ
ಕಾಂಗ್ರೆಸ್ಸಿನವರು ಹಗಲಿರುಳು ತೊಡುವುದು ಖಾದಿ
ನಾನು ನಮ್ಮ .....ರ ಹೆಸರ ಹೇಳುವೆನು ಬಿಡ್ರಿ ಹಾದಿ.

೭೮. ಎಳ್ಳು ಹೂವಿನ ಸೀರಿ
ಬೆಳ್ಳಿ ಕಾಲುಂಗರ
ಒಳ್ಳೆಯವರ ಮಗಳಂತ
ಹೊಳ್ಳೊಳ್ಳಿ ನೋಡ್ತಾರ ....

೭೯. ಲಕೋಟೆಗೆ ಹಚ್ಚುವುದು ಜಾಲಿಯ ಅಂಟು
ನನ್ನತ್ತೆ ತಿಜೋರಿಯಲ್ಲಿರುವದು ಬಂಗಾಗ ಗಂಟು
ನನಗೂ .....ರಿಗೂ ಇರುವುದು ಜನ್ಮ ಜನ್ಮಾಂತರದ ನಂಟು

೮೦. ಎಂಟು ರೊಟ್ಟಿ ಸೊಂಟಕ್ಕೆ ಕಟ್ಟಿ
ಪಂಟ ಬಡಕೋತ ರೆಂಟಿ ಹೊಡಿತಾರ ...

೮೧. ಏನು ಬರೀತಾರೊ ಬರೆದೇ ಬರೀತಾರ
ನನ್ನ ಮುಂದಕ್ಕ ಕರೀತಾರ
ಮಾತಿನ್ಯಾಗ ಮುತ್ತು ರತ್ನಾ ಸುರುವಿ
ಮೋಡಿ ಮಾಡಿ ಮುತ್ತು ಕೇಳತಾರ ....

೮೨. ಕಣ್ಣಿಗೆ ಕಪ್ಪಿನ ಆಸೆ
ಹೆಣ್ಣಿಗೆ ತವರಿನ ಆಸೆ
ನನ್ನ ..... ರಿಗೆ ನನ್ನ ಆಸೆ.

೮೩. ಆಕಳ ಹುಟ್ಟಿದ್ದು ಆಕಾಶದಾಗ
ದೇವರು ಹುಟ್ಟಿದ್ದು ದೇವಸ್ಥಾನದಾಗ
.......ರ ಲಗ್ನ ಆದದ್ದು ನನ್ನ ಚಿಕ್ಕ ವಯಸ್ಸಿನ್ಯಾಗ.

೮೪. ಎರಿ ಹೊಲ ಕರಿ ಎತ್ತು
ಸವಾರಿ ಗ್ಯಾಡ್ಯಾಗ ಕೂತಗೊಂಡು
ಸರದಾರನಾಂಗ್ ಬರ್ತಾನ ...

೮೫. ಕರಿ ಕೋಟು
ಕಾಲಾಗ ಬೂಟು
ಪ್ಯಾಟೀಗೆ ಹೋಗಿ
ಪೇಟಿ ಬಾರಿಸ್ತಾರ ....

೮೬. ಒಕ್ಕಲುತನಾ ಮಾಡತಾರ
ಹಕ್ಕಿ ಪಕ್ಕಿ ಹೊಡಿತಾರ
ರೊಕ್ಕ ಇಲ್ಲಂತ ಬಿಕ್ಕೊಂಡು ಕುಂತಾರ ....

೮೭. ಗಿಡದ ತುಂಬಾ ಮಲ್ಲಿಗಿ
ಗಡಿಗಿ ತುಂಬಾ ಕ್ಯಾದಗಿ
ಜಾಜ ಮಲ್ಲಿಗಿ ಸೂಜಿ ಮಲ್ಲಿಗಿ ಬೇಕಂತ
ಜೂಜು ಆಡಾಕ ಹೋಗ್ತಾರ ....

೮೮. ವಜ್ರದೋಲಿ, ಗೆಜ್ಜೀ ಟೀಕಿ
ಮುರದಾಳ ವಂಕಿ, ಮುರುಗಿಸರಾ
ನತ್ತು ಬುಗುಡಿ ಮಾಡಸಂದ್ರ
ಹತ್ತು ಮಂದಿ ಕೂಡಸ್ತಾರ ....

೮೯. ಕಾಮರತಿ ರೂಪ ಚೆಂದ
ಕಾಮ ಕಸ್ತೂರಿ ತಿಲಕ ಚೆಂದ
ನಮ್ಮ ......ರಿಗೆ ನಾನೇ ಚೆಂದ.

೯೦. ಗಿಡದಾಗ ಗಿಣಿ ಚೆಂದ
ಭೂಮಿಗೆ ಬೆಳಿ ಚೆಂದ
ಮುಗಿಲೀಗೆ ಚಂದ್ರ ಚೆಂದ
ನಮ್ಮ ......ರ ಗುಣ ಚೆಂದ.

೯೧. ಕರ್ನಾಟಕ ಆಯ್ತು ಏಕೀಕರಣ
......ರು ನನಗೆ ಮಾಡಿದರು ಹೊಸ ನಾಮಕರಣ.

೯೨. ಮುತ್ತು ಮಾರತಾರ, ಮುತ್ತು ತರತಾರ
ಮುತ್ತಿನಂಥಾ ಮಾತ್ಹೇಳಿ ಮುತ್ತು ಕೊಡ್ತಾರಾ ....

೯೩. ಬೆಳದಿಂಗಳ ಬೆಳಕ
ಕಲ್ಲ ಸಕ್ಕರಿ ಹಳಕ
ನಕ್ಷತ್ರದ ಮ್ಯಾಲ ಕುಂತ ಅಕ್ಷರ ಬರೀತಾರ ....

೯೪. ಸಣ್ಣಕ್ಕಿ ತರವಲ್ಲ, ದೊಡ್ಡಕ್ಕಿ ಉಣವಲ್ಲ
ಇದ್ದದ್ದ ನೀಡಿದರ ಎದ್ದೆದ್ದು ಹೋಗ್ತಾನ.

೯೫. ನೈಲಾನ್ ಅಂಗಿ ತೊಟ್ಟಾರ
ದಡಿ ಧೋತರ ಉಟ್ಟಾರ
ಝುರಿಕಿ ಜೋಡು ಮೆಟ್ಟ್ಯಾರ
ವಿಭೂತಿಗಂಧ ಹಣಿಗೆ ಇಟಗೊಂಡು
ಭಕ್ತಿಯಿಂದ ಬಸವಣ್ಣಗ ಹೋಗತಾರ ....

೯೬. ನೆಲುವಿನ ಮ್ಯಾಲ ಮೊಸರು
ನನ್ನ ತಂಗಿ ಆಗ್ಯಾಳ ಬಸರು
ನಂದೇನಿಲ್ಲ ಕಸರು
ನಾನು ನನ್ನ ತಂಗಿ ಹೇಳೂದು
ಒಂದs ಗಂಡನ ಹೆಸರು ...

೯೭. ಮೂಗಿನ್ಯಾಗ ನತ್ತ, ಕೊಳ್ಳಾಗ ಮುತ್ತ
ಮಾಲೀಗಿ ಹೋದಾವ ಬರಲಿಲ್ಲ ಆಯ್ತು ಹೊತ್ತು
ನನಗ ಗೊತ್ತು ನನ್ನಾವನ ಗತ್ತು ....

೯೮. ಜೋಳದ ಕಿಚಡಿ, ಮಜ್ಜಿಗಿ ಸಾರು
ನೀಡಾಕ ಹೋದ್ರ ಹೊಡಿಯಾಕ ಬರ್ತಾನ ....

೯೯. ಕರ್ನಾಟಕಕ್ಕೆ ನೀಲಗಿರಿ ಇರುವುದು ತೆಂಕಣ
........ರ ಹೆಸರ ಹೇಳಿ ಬಿಚ್ಚುವೆನು ಕಂಕಣ.

೧೦೦. ಕನ್ನಡದಲ್ಲಿ ಮೊದಲು ಎಂಬುದಕ್ಕೆ ಇರುವುದು
ಇನ್ನೊಂದು ಅರ್ಥ ಆದಿ
......ರ ಹೆಸರ ಹೇಳುವೆನು ಬಿಡಿರಿ ಹಾದಿ.

೧೦೧. ಕಸ್ತೂರಿಯಂಥ ಕನ್ನಡ ಮಾತು ಹೇಳತಾ
ಕಣ್ಣು ಹೊಡಿತಾ ಕಂದನ್ನ ಕರೀತಾರ ....

೧೦೨. ಕಣ್ವಋಷಿ ತಪೋವನದಲ್ಲಿ ಶಕುಂತಲೆ
ಗೆಳತಿಯ ಸಂಗಡ ಆಡುತ್ತಿದ್ದಳು ಆಟ
ಆ ಕಾಲದಲ್ಲಿ ದುಷ್ಯಂತನಿಗೆ ಕಂಡಿತು
ಶಕುಂತಲೆಯ ಕಣ್ಣೋಟ
ನಮ್ಮ .....ರ ಹೆಸರ ಹೇಳುವೆನು
ನಿಲ್ಲಿಸರಿ ನಿಮ್ಮ ಹುಡುಗಾಟ.

೧೦೩. ಕರಿಕೋಟು ಕಾಲಾಗ ಬೂಟು
ಕಾರಗಾಡಿ ತಗೊಂಡು ಕರಿಯಾಕ ಬರತಾರ ....

೧೦೪. ಕೊಡ್ಡ ಕಾಲ್ಮರಿ ಕರೆಗೊಂಗಡಿ
ಹದಿನಾರೆತ್ತಿನಹಳಿಬಂಡಿ
ಹೊಡಕೋತ ಹೊಳ್ಳಿ ಹೊಳ್ಳಿ ನೋಡ್ತಾರ ....

೧೦೫. ಕಮಲಗಳಿಗೆ ಇರುವವು ಸಹಸ್ರದಳ
ಹೊಲದಾಗ ಬಿದ್ದಾವ ಕರೆಕಬ್ಬಿನ ಗಳ
..........ರಿಗೆ ಹಚ್ಚುವೆನು ಸುಗಂಧ ಪರಿಮಳ

೧೦೬. ಕರ್ನಾಟಕದ ರಾಜಧಾನಿ ಬೆಂಗಳೂರು
ಸಮುದ್ರದ ದಂಡೆಮ್ಯಾಲಿರುವುದು ಮಂಗಳೂರು
......ವರು ನೌಕರಿ ಮಾಡೂದು ಮೈಸೂರು.

೧೦೭. ಕನ್ನಡದ ಕವಿ ಕುವೆಂಪು
ಬೆಳದಿಂಗಳ ಊಟ ಬಲು ಸಂಪು
.....ರಿಗೆ ನಾ ಮಗ್ಗಲಿದ್ದರ ಭಾರಿ ಇಂಪು.

೧೦೮. ಬೆಳವಲ ನಾಡಿನ ಮುಖ್ಯ ಆಹಾರ ರೊಟ್ಟಿ
........... ರಿಗೆ ತಿಂದಮ್ಯಾಲ ಕೊಡುವೆ ಪಾನಪಟ್ಟಿ.

೧೦೯. ಕತ್ತೆ ಅಂತ ಬಯ್ತಾರಾ, ಮತ್ತ ಮುಂದಕ್ಕ ಕರೀತಾರ
ಸುತ್ತಮುತ್ತ ನೋಡ್ತಾರಾ, ಮತ್ತ ಮುತ್ತ ಕೊಡ್ತಾರಾ ....

೧೧೦. ಕಣ್ಣಿಗೆ ಕಾಡಿಗೆ ಚೆಂದ
ಹೆಣ್ಣಿಗೆ ರೂಪ ಚೆಂದ
ಸುಣ್ಣದ ಮನಿಗೆ ಚೆಂದ
.........ರಿಗೆ ನನ್ನ ಕಣ್ಣ ಚೆಂದ.

೧೧೧. ಕನ್ನಡ ನಾಡು ಪುಣ್ಯದ ಬೀಡು
ಭಜನೆಯಲ್ಲಿರುವವು ಭಕ್ತಿಹಾಡು
.......ವರ ಪ್ರೀತಿಗಿಲ್ಲ ಎಂದೂ ಕೇಡು.

೧೧೨. ಕನ್ನಡದ ಕಡುಗಲಿ ಎಚ್.ಎಂ. ನಾಯಕ
ಪ್ರೇಮಪೂರ್ವಕ ಹೇಳುವೆ
ನನ್ನಾತನೆ ನನಗೆ ನಾವಿಗ ....

೧೧೩. ಚಂದ್ರಕಾಳಿ ಸೀರಿ ತಂದ
ಚಂದ ಮಡಚಿ ಸೊಳಿಗೆ ಕೊಟ್ಟ ....

೧೧೪. ಹುಡಗೂರು ಕೈಯಾಗ ಹೂವಿನ ಬುಟ್ಟಿ
ನಮ್ಮ ಕೈಯಾಗ ಜೋಳದ ರೊಟ್ಟಿ
ಹಿರೇರ ಕೈಯಾಗ ಬಾನದ ಬುಟ್ಟಿ
ನನ್ನಾತನ ಕೈಯಾಗ ಪಾನಪಟ್ಟಿ ....

೧೧೫. ನೀರಿಗೆ ಹೋಗೂ ರಂಬಿ ನೋಡ
ರಂಭಿ ತೆಲಿಮ್ಯಾಲಿನ ಸಿಂಬಿ ನೋಡ
ಸಿಂಬಿ ಮ್ಯಾಲಿನ ಕೊಡನೋಡ
ಕೊಡದ ಮ್ಯಾಲಿನ ಟೊಂಗಿ ನೋಡ
ಟೊಂಗಿ ಮ್ಯಾಲಿನ ಗಿಣಿ ನೋಡ
ಗಿಣಿ ಬಾಯಾಗಿನ ತೆನಿ ನೋಡ
ತೆನಿಯಾಗಿರು ಮುತ್ತಿನಂಥ ಕಾಳನೋಡ
ಮುತ್ತಿನಂಥ ಕಾಳ ಹಿಡದು ಮುತ್ತುಕೊಡತಾರ ....

೧೧೬. ಬೆಂಗಳೂರು ಮುತ್ತು ಮಂಗ್ಳೂರು ಹವಳ
ಹುಬ್ಬಳ್ಳಿ ಬಂಗಾರ, ಧಾರ್‍ವಾಡ ಪತ್ತಾರ
ಹೊಸ ಹೇಣತಿ ಅಂತ ಹಂತೇಲೆ ಕರೆದು
ಯಾ ಸಾಮಾನು ಬೇಕಂತ ಕೈಹಿಡದ ಕೇಳ್ತಾರಾ ....

೧೧೭. ಲವಂಗ ಮೆಣಸಿನಕಾಯಿ ತಿಂತಾನ
ನೀರು ಕುಡುದು ನೆಟೆ ನಿಂತಾನ
ಯಾಕಂತ ಕೇಳಿದರೆ ಉಸ್ ಅಂತ ಮೈಮ್ಯಾಲ ಬೀಳ್ತಾನ ...

೧೧೮. ಕಲ್ಲಪಡಿ ನಾಗರ ಹೆಡಿ
ಮನಿ ಮುಂದ ದೇವರಗುಡಿ
ಜೆಡಿ ಬಿಟಗೊಂಡು ಜಳಕಕ್ಕ ಹೋಗ್ತಾರಾ .....

೧೧೯. ಕೈಯಾಗ ಕೊಡಿ, ಉಟ್ಟಾರ ಮಡಿ
ಬಣ್ಣದಂಚಿನ ಧೋತರ ಧಡಿ
ಗುಡುಗುಡಿಸೇದಿ ಗುದುಮುರುಗಿ ಹಾಕ್ತಾರ ....

೧೨೦. ಚೊಗಚಿ ಹೂವು, ಚಿನ್ನದ ಬಾಗಲ
ಬಾಗಲದಾಗ ಕುಂತs ಬಾಬಾ ಅಂತಾರ ....

೧೨೧. ಮಾತು ಬೆಳ್ಳಿ ಮೌನ ಬಂಗಾರ ಅಂತಾರ
ಮಾತು ಹೇಳಿಕೋತ ಮುಂದಕ ಬರತಾರ ....

೧೨೨. ಬುಟ್ಟಿ ಕಡಬು ಗಟ್ಟಿ ತುಪ್ಪ
ಕುತ್ತ ಉಂಡು ಕುಸೀಲೆ ಹೋಗ್ತಾನ ...

೧೨೩. ಮ್ಯಾಲ ನೋಡಿದರ ಬೆಳಕು
ಒಳಗ ನೋಡಿದರ ಹುಳುಕು
.....ರ ಬಾಯಿ ಮಾತ್ರ ಹರಕು

೧೨೪. ಹರಿದಿದ್ದ ಹಳ್ಳ ನಿಂತಿದ್ದ ತೀರ್ಥ
.......ರಿಗೆ ನಾ ಏನು ಹೇಳಿದರೂ ವ್ಯರ್ಥ.

೧೨೫. ಕ್ಯಾದಗಿ ಹೂವಿನ ಕಂಪಿನವರು
ಮಲ್ಲಿಗೆ ಹೂವಿನ ಬಣ್ಣದವರು
ಎಲ್ಲಮ್ಮನಂಥ ಮಡದಿ ಕರಕೊಂಡು
ಮಲ್ಲಿಕಾರ್ಜುನನ ಗುಡಿಗೆ ಹೋಗ್ತಾರಾ ....

೧೨೬. ಕಾಸಿಯಲ್ಲಿರುವದು ವಿಶ್ವೇಶ್ವರ
ಹಂಪಿಯಲ್ಲಿರುವದು ವಿರೂಪಾಕ್ಷೇಶ್ವರ
ನನ್ನ ಪ್ರೇಮಮಂದಿರದಲ್ಲಿರುವನೇ ಹೃದಯೇಶ್ವರ .....

೧೨೭. ಕಾಶ್ಮೀರದಿಂದ ಬರುವದು ರೇಶ್ಮಿಯಂಥ ಉಣ್ಣಿ
..... ರಿಗೆ ಹಚ್ಚಿವೆನು ಸುಗಂಧಭರಿತ ಎಣ್ಣಿ.

೧೨೮. ಕಾವೇರಿ ನದಿಗೆ ಕಟ್ಟಿದರು ಕನ್ನಂಬಾಡಿ
..... ರೊಂದಿಗೆ ಸರಸದಿಂದಿರುವೆನು ನಲಿದಾಡಿ.

೧೨೯. ಕಾದಂಬರಿಯಲ್ಲಿರುವವು ಕಾಲ್ಪನಿಕ ಕಥೆ
..... ಹೆಸರ ಹೇಳಲು ನನಗಿಲ್ಲ ವ್ಯಥೆ.

೧೩೦. ಕಾಂಗ್ರೆಸ್ ಸರಕಾರ ಮಾಡಿದ್ದು ವರದಕ್ಷಿಣೆ ಪ್ರತಿಬಂಧ
........ ರಿಗೆ ನಾನಾಗಿ ಪಡೆದಿರುವೆ ಪ್ರೇಮಬಂಧ.

೧೩೧. ಕಾರ ಹುಣ್ಣಿಮೆ ದಿವಸ ಹರಿಯುವುದು ಕರಿ
ನಾ ಕೈಹಿಡಿದ .............ರೇ ನನ್ನ ದೊರಿ.

೧೩೨. ಕಿತ್ತೂರಿಗೆ ಚೆನ್ನಮ್ಮರಾಣಿ
ಬೆಳವಡಿಗೆ ಮಲ್ಲಮ್ಮರಾಣಿ
ಝೂಂಸಿಗೆ ಲಕ್ಷ್ಮಿಬಾಯಿ ರಾಣಿ
....ರಿಗೆ ನಾನೇ ರಾಣಿ.

೧೩೩. ಕೀಚಕನು ದ್ರೌಪತಿಯನ್ನು ಪೀಡಿಸಿದನು ಬಗೆ ಬಗೆಯಾಗಿ
ನನ್ನ .... ರಾಯರ ಹೆಸರು ಹೇಳುವೆನು ನಿಮ್ಮೆಲ್ಲರ ಸಲುವಾಗಿ

೧೩೪. ಕೂಸಿಗೆ ತಾಯಿ ಬೇಕು
ಅರಮನೆಗೆ ರಾಣಿ ಬೇಕು
.........ರಿಗೆ ನಾನೇ ಬೇಕು.

೧೩೫. ಕೊಟ್ಟು ಕುದಿಯಾವಲ್ಲ
ಗುಟ್ಟು ಹೇಳಾವಲ್ಲ
ಕೆಟ್ಟು ಬಾಳಾವಲ್ಲ
ನನ್ನ ಬಿಟ್ಟು ಯಾರನ್ನೂ ನೋಡಾವಲ್ಲ ....

೧೩೬. ಹುಬ್ಬಳ್ಳಿಯಲ್ಲಿರುವುದು ಸಿದ್ಧಾರೂಡಮಠ
..... ವರಿಗೆ ಇರುವುದು ಭಕ್ತಿಪಾರಾಯಣದ ಹಠ.

೧೩೭. ಕೋಳಿಗಳು ಕೂಗುವುದು ಬೆಳಗಿನಲ್ಲಿ
ಮದುವೆಗಳು ನಡೆಯುವುದು ಶುಭ ಗಳಿಗೆಯಲ್ಲಿ
ನಾನು ನನ್ನವರ ಹೆಸರ ಹೇಳುವೆನು
ಈ ಮಂಗಳ ಕಾರ್ಯದಲ್ಲಿ ...

೧೩೮. ಎಣ್ಣಿ ಹಚಿಗೊಂಡು ಎರಕೊಂತಾರ
ಬೆಣ್ಣಿ ಹಚಿಗೊಂಡು ರೊಟ್ಟಿ ತಿಂತಾರ
ಮಜ್ಜಿಗಿ ಕಟದೀನಿ ಉಣ್ಣಂದ್ರ
ಗುಜ್ಜರ ಮನಿಗೆ ಹೋಗಿ ಮಜ್ಜನ ಮಾಡ್ತಾರ ....

೧೩೯. ಹಾಲಮೇಲಿನ ಕೆನಿ
ಹವಳ ಮುತ್ತಿನ ಗೊನಿ
ಅತ್ತಿ ಮಾವನವರ ಹೊಟ್ಟೇಲೆ
ಮುತ್ತಿನಂತೋರ ಹುಟ್ಯಾರ ...

೧೪೦. ಭಾರತ ಮಾತೆ ಭಾರತಿ
ಕಥೆ ನಡೆಸಾವ ಸಾರಥಿ
ನನ್ನ ಪತಿರಾಯರದು ನಾಡತುಂಬ ಕೀರುತಿ ....

೧೪೧. ಜರದ ರುಂಬಾಲಾ ಧಡಿ ಅಂಚು ಧೋತರಾ
ಕೊರದ ಈಬತ್ತಿ ಕೂಡಿದ ಮಂದ್ಯಾಗ
ಕುಂತ ನ್ಯಾಯಾ ಹರೀತಾರ ....

೧೪೨. ಗೋದಿ ತಂಬಿಟ್ಟು ಮೆಂತೇದ ಹಿಟ್ಟು
ಎಂಥವರ ಮಗಳಂಥ ಸಂತಸ ಪಡತಾರ ....

೧೪೩. ಬಂಗಾರ ತೊಟ್ಟಿಲ, ಬೆಳ್ಳಿ ಹಗ್ಗ
ಕಂದನ್ನ ತೂಗಿ ಮುಂದಕ ಬರತಾರ ....

೧೪೪. ಬೆಳ್ಳಿ ಒಲಿ ಹೂಡಿ ಬಂಗಾರ ಪಾತ್ರಿ ಇಟ್ಟು
ಊದಿನ ಕಡ್ಡಿ ಉರಿ ಮಾಡಿ
ಬುಕ್ಕಿಟ್ಟಿನ ರೊಟ್ಟಿ ಮಾಡಿ
ಮಲ್ಲಿಗೆ ಹೂವಿನ ಸಾರು ಮಾಡಿ
ಊಟಕ್ಕ ಬಾ ಅಂದ್ರ ಪ್ಯಾಟೀಗೆ ಹೋಗ್ತಾರ ....

೧೪೫. ಕಾಡಿಗಿ ರೊಟ್ಟಿ, ಬ್ಯಾಡಗಿ ಮೆಣಸಿನಕಾಯಿ ಕೂಡಲ ನೀರು
ಊಟಕ್ಕೆ ಕರದರ ಸ್ವಾಟಿ ತಿರುವತಾನ ....

೧೪೬. ಸಣ್ಣಕ್ಕಿ ಅನ್ನ, ಮೊಸರಿನ ಬಾನ
ಕವಳಿಸಾರು, ಹವಳದ ಪಲ್ಲೆ
ಬಗ್ಗಿ ಬಗ್ಗಿ ಉಂಡು ಮೂಗು ಹಿಗ್ಗಿಸತಾನ ....

೧೪೭. ಸರಸೋತಿ ಪೂಜೆ ವಿದ್ಯೆಗಾಗಿ
ಲಕ್ಷ್ಮೀಯ ಪೂಜೆ ಸಂಪತ್ತಿಗಾಗಿ
ಪತಿದೇವರ ಪೂಜೆ ಮಾಂಗಲ್ಯಕ್ಕಾಗಿ ....

೧೪೮. ಗಗನಕ್ಕೆ ಚಂದ್ರಮನೇ ಚೆಂದ
ನಾರಿಗೆ ಗುಣವೇ ಚೆಂದ
ನಮ್ಮವರಿಗೆ ನಾನೇ ಚೆಂದ ....

೧೪೯. ಸಕ್ರಿ, ತಾಟು, ಉತ್ತತ್ತಿ ಬೋಟು
ಚಿಟಬಾಳಿ ಹಣ್ಣು ರಸಭರಿತ ಕಬ್ಬು
ಚಿಕ್ಕಿ ಮೂಡುಮುಂದ
ಚಿನಿವಾಲರ ಪಾಳ್ಯಾಗ
ಪಾತರದಾಕಿ ಕರಕೊಂಡು ಪಗಡಿ ಆಡ್ತಾರ ....

೧೫೦. ಬೆಕ್ಕೀಗೆ ಬೆಣ್ಣಿ ಜೀವಾ
ಹೆಗ್ಗಣಕ ಕಾಳ ಜೀವಾ
ಅತ್ತೀಗೆ ಮಗಳು ಜೀವಾ
ನಮ್ಮವರಿಗೆ ನಾನೇ ಜೀವಾ ....

೧೫೧. ಎಂಟು ರೊಟ್ಟಿ ತಿಂದು
ಎಂಟು ರೊಟ್ಟಿ ಸೊಂಟಕ್ಕ ಕಟಿಗೊಂಡು
ರಂಟೆ ಹೊಡಿಯೂದು ಬಿಟ್ಟು
ಹೇಣ್ತಿಕೂಡ ಪಂಟ ಹೊಡೀತಾರ ...

೧೫೨. ಹಲ್ಲಿಲ್ಲ ಕಡ್ಲಿ ಇಲ್ಲ
ಬಗರಿ ಇಲ್ಲ ಜಾಳಿಗಿ ಇಲ್ಲ
ಬಚ್ಚ ಬಾಯಿಲೆ ಒಮ್ಮೆ ಕಟಂ ಅಂತಾರ
ಒಮ್ಮೆ ರುಂ ರುಂ ಅಂತಾರ ....

೧೫೩. ಅಂಗಿಮ್ಯಾಲ ಅಂಗಿ ಚೆಂದಲ್ಲ
ರಂಭಿಮ್ಯಾಲ ರಂಭಿ ಚೆಂದಲ್ಲ
ಗೊಂಬಿಯಂಥ ಹೇಣ್ತಿ ಬಿಟ್ಟು
ಮುಳ್ಳು ಕಂಟೀಗೆ ಕಣ್ಣಿಟ್ಟಾರ ....

೧೫೪. ಜಾತ ಮುತ್ತ, ಮೂಗಿನ ನತ್ತ
ಜಾಣ ಹೆಂಡತಿ ಅಂತ ಮ್ಯಾಣೀದ ಮ್ಯಾಲ ತರತಾರ ...

೧೫೫. ಕೊಡೋದು ಕೊಡತಾರ, ಬರೋದು ಬಿಡತಾರ
ರೊಕ್ಕಿಲ್ಲಂತ ಬಿಕ್ಕಿ ಬಿಕ್ಕಿ ಅಳತಾರ ....

೧೫೬. ಕೈಯಲ್ಲಿ ಹಿಡಿದಿರುವೆ ತುಪ್ಪದ ಆರುತಿ
ಪೂಜೆಯ ನಂತರ ಹಾಡುವರು ಮಂಗಳಾರತಿ
ನಾನು ನಮ್ಮವರ ಹೆಸರ ಹೇಳಲು ಕೊಡಿರಿ ಅನುಮತಿ ...

೧೫೭. ಕೈಯಲ್ಲಿ ಕೈಕೊಟ್ಟು ಸಪ್ತಪದಿಯಲಿ ನಿಂತೆ
ಹಿಂದೆ ಸಾಗುವೆ ನಿಮ್ಮ ನೆರಳಿನಂತೆ .....

೧೫೮. ಗಣಪತಿಗೆ ಬೇಕು ಮಡಿಯಿಂದ ಮಾಡಿದ ಮೋದಕ
......ರಿಗೆ ಬೇಕು ತಾಸಿಗೊಮ್ಮೆ ಲಿಂಬೆಹಣ್ಣಿನ ಪಾನಕ.

೧೫೯. ಕೈಯಲ್ಲಿ ಇರುವುದು ಕಾಸು
ಮನೆಯಲ್ಲಿ ಇರುವುದು ಗ್ಯಾಸು
ನನ್ನವರು ನನ್ನ ಬಿಡರು ಒಂದು ತಾಸು ....

೧೬೦. ಗದಗ ಬೆಟಗೇರಿ ಬಣ್ಣದ ಹುರಿ
ಖರೀದಿಗೆ ಬರ್‍ತಾರ ಮುಂಬೈದೊರಿ
ಬಾಗಿಲದಾಗ ನಿಂತಾರ ಮಾತಿನ ಸಿರಿ
ಬಾಳಿಗೊನಿ ಹಿಡದಾರ
ಬಾಳುಳ್ಳವರ ಮಗಳಂತ ಬಲಕ ಸರಿತಾರ ....

೧೬೧. ಸ್ವಾತಂತ್ರ್ಯಕ್ಕೂ ಮೊದಲು ಕಂಪನಿ ಕಾರಭಾರಾ
ನಮ್ಮನಿಯಾಗ .... ರದೇ ದರ್ಭಾರಾ.

೧೬೨. ದೀಪಕ ಎಣ್ಣಿಬೇಕು, ಕೂಪಕ್ಕೆ ನೀರು ಬೇಕು
ಕೋಪಕ್ಕೆ ಶಾಂತಿಬೇಕು, ನಮ್ಮವರಿಗೆ ನಾನೇ ಬೇಕು ....

೧೬೩. ಬಚ್ಚಲ ಇಲ್ಲದ ಮನಿ ಅಲ್ಲ
ಕೆಚ್ಚಲ ಇಲ್ಲದ ಎಮ್ಮಿ ಅಲ್ಲ
ನನ್ನಾತನಾಂಗ ಪಿರಿಪಿರಿ ತಿರಗೋನು ಗಂಡಸಲ್ಲ ...

೧೬೪. ಬಾ ಅಂದ್ರ ಬರ್ತಾನ
ಹೋಗಂದ್ರ ಹೋಗ್ತಾನ
ಕುಂದ್ರುಅಂದ್ರ ಕುಂದ್ರತಾನ
ಏಳ್ ಅಂದ್ರ ಏಳತಾನ
ಇಂಥಾವನ್ನ ಕಟಿಕೊಂಡು ಏನ್ ಸಾಯ್ಲಿ ....

೧೬೫. ಬಾಳೇ ಬದುಕು ಬಿಟ್ಟಾರ
ಗುಡಿ ಗುಂಡಾರ ಹಿಡದಾರ
ಕೂಳ್ ತಿಂದು ಕುತಗಿ ಮ್ಯಾಲ ಕುಂದರತಾರ ....

೧೬೬. ಮಲ್ಲಿಗಿ ಹೂವಿನಂಥಾ ಅನ್ನ ಮಾಡಿ
ಕಸ್ತೂರಿಯಂಥ ತುಪ್ಪಾ ನೀಡಿ
ಹೊಂದಿಸಿ ಗಂಗಾಳಕ ಹಾಕಿದರ
ಹೊಂದಗೇಡಿ ಜಗಳಾ ತಗೀತಾನ ....

೧೬೭. ನಾ ಚೆಂದ, ನನ್ನ ಗೆಳೆತ್ಯಾರು ಚೆಂದ
ನನ್ನೂರು ಚೆಂದ ಊರಾನ ತ್ವಾಟ ಚೆಂದ
ಚೆಂದನ್ನೂದ ಹಾಸಿ ಹೊಚ್ಚಿದಾಗ
ನನ್ನಾತ .... ನನಗ ಚೆಂದಗೇಡಿ ಅನಬೇಕ?

೧೬೮. ಮಡಿಮ್ಯಾಗಮಡಿ, ಸವತಿಕಾಯಿ ಮಿಡಿ
ಮಗಳೀಗೆ ಹಾಕ್ತೀನಿ ಜೆಡಿ
ತೋಟಕ್ಕ ಹೋಗೂನು ನಡಿ ಅಂದ್ರ ಸಿಳ್ಳು ಹಾಕ್ತಾರ ....

೧೬೯. ಸಜ್ಜಿ ರೊಟ್ಟಿ ಮಾಡಿ, ಗಜ್ಜರಿ ಪಲ್ಲೆ ಮಾಡಿ
ನೀಡಾಕ ಹೋದ್ರ
ಮಜ್ಜಿಗಿ ಸಾರು ಬೇಕಂತ
ಮನಿ ತುಂಬಾ ಹಾರ್ಯಾಡತಾನ ....

೧೭೦. ಸಾಲಾ ಮಾಡಿ ಮೂಲ್ಯಾಗ ಕುಂದರತಾರ ....

೧೭೧. ಹಸರ ಹಾಗಲಕಾಯಿ
ಬಿಳಿ ಬೆಂಡಿಕಾಯಿ
ಬಿಸಿಲಿಗೆ ನಿಂತು ಹಂಡೆ ಮಜ್ಜಿಗಿ ಕೇಳ್ತಾರ ....

೧೭೨. ಊರಾಗ ನೀರಿನ ಬರ
ಮನ್ಯಾಗ ಅತ್ತಿಗೆ ಜ್ವರ
ಈದ್ಯೆತಿ ಮನಿ ಆಕಳ ಕರಾ
ನಮ್ಮ .... ರಿಗೆ ಅವರದೇ ಕಾರಭಾರಾ ....

೧೭೩. ಪಾರೋತಿ ನಮ್ಮತ್ತಿ
ಶಿವ್ರಾಯ ನಮ್ಮಾಂವಾ
ನಾಜೂಕಿನ ನೆಗೆಣ್ಣ್ಯಾರು
ರುಕ್ಮಿಣಿ ಗೆಳತಿ
ಪಾರಜಾತ ಹೂ ಪಾವುಡದಾಗ ಕಟಿಗೊಂಡು
ನನ್ನ ಕಂಡ ನಕಲಿ ಮಾಡಿತಾರ ....

೧೭೪. ಹಸಗೇಡಿ ಗೆಳೆತನ, ಮಾನಗೇಡಿ ಒಗೆತನ
ಮಾಡಿ, ಮಾಡಿ ನನ್ನ ಗಂಡ ತಂದ ನನಗ ಬಡತನ .....

೧೭೫. ಹಳೇದು ತಗೀತಾರ, ತಾವು ಮಾಡಿದ್ದು ಮರೀತಾರ
ವರದಕ್ಷಿಣ ತರಲಿಲ್ಲಂತ ಆವುಡಗಚ್ಚಿ ಹೊಡಿತಾರ ....

೧೭೬. ಸಂದುಕದಾಗ ಸರಗಿ
ಟ್ರಂಕಿನ್ಯಾಗ ಟೀಕಿ
ತಂದು ಕೊಡ ಮಾರಾಯಾ ಅಂದ್ರ
ತಾಯಿ ಮಾರಿ ನೋಡತಾನ ....

೧೭೭. ಬಾದಾಮಿ ಬನಶಂಕರಿ ಜಾತ್ರಿ ಪ್ರಸಿದ್ಧ
ಜಾತ್ರೀಗಿ ಹೋಗಿ ಹೊಂಡದಾಗ ಮುಳುಗತಾರ
ನಾಟಕದಾಕಿ ಕೂಡ ಲಲ್ಲ ಹೊಡೀತಾರ ....

೧೭೮. ರಾಜಾ ಹ್ಯಾಂಗ ಹಾಂಗ ಪ್ರಜಾ
ಮಠಾ ಹ್ಯಾಂಗ ಹಾಂಗ ಭಕ್ತಾ
ನೆಲಾ ಹ್ಯಾಂಗ ಹಾಂಗ ಬೆಳಿ
ನಾನು ಹಾಂಗ್ಯ ಹಾಂಗ ನಮ್ಮನಿಯಾತ ....

೧೭೯. ಒಂದು ಗಳಾ ಸೀಳಿ
ಒಂಬತ್ತು ತೊಟ್ಟಿಲಾ ಮಾಡಿ
ತೊಟ್ಟಿಲಿಗೊಂದು ಕೂಸಾಗಿ
ಕುಲಾಯಿ ತರಾಕ ಕರ್ನೂಲಿಗೆ ಹೋಗ್ಯಾರ .....

೧೮೦. ಸುಗ್ಗಿಯಲ್ಲಿ ಕಟ್ಟುವರು ಹಂತಿ
ಪಾಂಡವರ ತಾಯಿಯ ಹೆಸರು ಕುಂತಿ
.......ರ ಹೆಸರ ಕೇಳಾಕ ಮಾಡ್ತಿರ್‍ಯಾಕ ವಿನಂತಿ?

೧೮೧. ಏ ಬಾ ಅಂತಾರ, ಹುಡುಗಾಟಾ ಮಾಡ್ತಾರಾ
ಅತ್ತ ಇತ್ತ ನೋಡ್ತಾರ, ಸಟ್ನ ಕೈ ಹಿಡಿತಾರ ....

೧೮೨. ಥಾಲ್ಯಾಗ ಥಾಲಿ, ಹೂವಿನ ಮಾಲಿ ಹಾಕಿ
ಪೇರಲ ತೋಟದಾಗ ಪಗಡಿ ಆಡತಾರ ....

೧೮೩. ಜಾಜಿ ಮಲ್ಲಿಗಿ, ಸೂಜಿ ಮಲ್ಲಿಗಿ
ದುಂಡು ಮಲ್ಲಿಗಿ, ಆಕಾಶ ಮಲ್ಲಿಗಿ
ಎಲ್ಲಾ ಮಲ್ಲಿಗಿ ತಗೊಂಡು ನಾ ಇದ್ದಲ್ಲಿಗೆ ಬರತಾರ ....

೧೮೪. ಉಣ್ಣೂದು ಡಬರಿ ಹುಗ್ಗಿ
ತಿನ್ನೂದು ಇಪ್ಪತ್ತು ಕಡಬು
ಉಪವಾಸ ಅದೀನಂತ ತಪಸ್ಸು ಮಾಡತಾರ ....

೧೮೫. ಸಂತಿ ಮಾಡಲಿಲ್ಲ, ಸಾಮಾನು ತರಲಿಲ್ಲ
ಸರಕ್ಕನ ಉಂಡು ಹರಗಾಕ ಹೋಗಂದ್ರ
ತಿರಗಾಕ ಹೋಗತಾನ ....

೧೮೬. ಹಸರ ಹಾಗಲಕಾಯಿ
ಕಸಗ ಬೆಂಡಿಕಾಯಿ
ಕುಸರ ತೊಂಡಿಕಾಯಿ
ಹಸು ಮಗನ್ನ ಎತಿಗೊಂಡು
ಬಿಸಲಾಗ ನಿಂತಾರ ....

೧೮೭. ಸಕಲ ಗುಣ ಸಂಪನ್ನ
ಅತ್ತಿ ಮಾವ ಹೇಳ್ತಾರ ರನ್ನ
...... ರ ಕಾಲಾಗ ನಾನಾಗೀನಿ ಸಣ್ಣ.

೧೮೮. ಹಾಲ ಮೇಲಿನ ಕೆನಿ
ಹವಳ ಮುತ್ತಿನ ಗೊನಿ
ನನ್ನ ..... ರು ರಾಶಿ ಮಾಡಿದ ಜ್ವಾಳ ಮುತ್ತಿನ ತೆನಿ.

೧೮೯. ಎತ್ತು ಹೇರಿಗೆ ಬೇಕು
ಎಮ್ಮೆ ಹೈನಕೆ ಬೇಕು
ಅಕ್ಕಿ ಉಣ್ಣಲು ಬೇಕು
ನಾ ಬೇಕು ನಮ್ಮ ಹಿರಿಯಾಗ ....

೧೯೦. ಗುರು ಇದ್ರ ಮಠ ಚೆಂದ
ಹಿರ್‍ಯಾರು ಇದ್ದ್ರ ಮನಿ ಚೆಂದ
ನದಿ ಇದ್ದ್ರ ಊರು ಚೆಂದ
ನನ್ನ ರಾಯ ..... ಗೆ ನಾನೇ ಚೆಂದ.

೧೯೧. ಮಾವಿನ ಮಿಡಿ, ನಾಗರ ಹೆಡಿ
..... ರಿಗೆ ನಾನೇ ಅಪರೂಪದ ಜೋಡಿ.

೧೯೨. ನಾರಿಗೆ ಬಸಿರು ಚೆಂದ
ಮನೆಗೆ ಮಗು ಚೆಂದ
ನನ್ನ ..... ರ ಹೆಸರು ಚೆಂದ.

೧೯೩. ಕಣ್ಣಿಗೆ ಕಾಡಿಗೆ ಚೆಂದ
ಹಣೆಗೆ ಕುಂಕುಮ ಚೆಂದ
ಗುಡಿಗೆ ಗೋಪುರ ಚೆಂದ
ಜಾತ್ರೀಗೆ ಜನಾ ಚೆಂದ
ತವರೀಗೆ ತಾಯಿ ಚೆಂದ
ನನ್ನ ಮನಿಗೆ ಅತ್ತಿ ಮಾವಾ ಚೆಂದ
ಊರಿಗೆ ಪಂಚರು ಚೆಂದ
ಪಂಚರ ನಡುವೆ ಕುಂತು ಪಂಚಾಯ್ತಿ ಮಾಡೂದು ಚೆಂದ ....

೧೯೪. ಕೈಯಾಗ ಮಗೂ ಬಾಯಾಗ ನಗೂ
ಮಗನ್ನ ಎತಿಗೊಂಡು ಮುದ್ದು ಮಾಡ್ತಾರ ....

೧೯೫. ಆರು ಸೇರು ಅವಲಕ್ಕಿ
ಮೂರು ಸೇರು ಮಂಡಕ್ಕಿ
ಧೋತರದಾಗ ಕಟಿಗೊಂಡು ಪಾತರದಾಕಿ ಮನಿಗೆ ಹೋಗ್ತಾನ ....

೧೯೬. ಬಿಳಿ ಜ್ವಾಳದ ರೊಟ್ಟಿ, ಕಿರಕಸಾಲಿ ಪಲ್ಯ
ಬೇಸ್ಯಾಗ ತಿಂದು ತಿರಬೋಕಿ ಹುಡುಕತಾನ ....

೧೯೭. ಕಣದಾಗ ಕಂಕಿ, ಕೈಯಾಗ ಒಂಕಿ
........ರಿಗೆ ನನ್ನ ಕಂಡ್ರೆ ಭಲೆ ಬೆಂಕಿ.

೧೯೮. ಗಂಗಾಸ್ನಾನ ತುಂಗಾಪಾನ
ಸತಿಯರ ಕೈಯಾಗ ಗಂಡನ ಮಾನ
......ರ ಹೆಸರು ಹೇಳಾಕ
ನನಗ ಬಲು ಅಭಿಮಾನ.

೧೯೯. ಗಂಧಬೋದಿನ ಮೇಲೆ ಸುಗಂಧದಾ ಬಾಟಲಿ
ನನ್ನ ಕೈಯಾಗ ಸೇರು ಬಂಗಾರದ ಪಾಟಲಿ
ನಾನು ನನ್ನವ ..... ರ ಪ್ರೇಮ ಕೂಡಿತು ಗಂಗಾತಟದಲಿ.

೨೦೦. ಗಾನವಿದ್ಯೆಯು ಲೇಸು, ಮಾನವತಿ ಸತಿ ಲೇಸು
ನನಗೆ ನನ್ನ .....ರ ಪಾದಸೇವೆಯೇ ಲೇಸು.

೨೦೧. ಗಾಂಧಿಯವರು ಬಡ ಮುದುಕಿಯನ್ನು ಕಂಡಾಗ
ಅವರ ಕಣ್ಣಲ್ಲಿ ನೀರು ಬಂತು ದಳ ದಳ
......ರ ಹೆಸರು ಹೇಳುವೆನು ಕನ್ನಡದಲ್ಲಿ ಝುಳ ಝುಳ.

೨೦೨. ಗಾಂಧೀಜಿ ಅವರು ಆಂಗ್ಲರೊಡನೆ ಹೋರಾಡಿದ್ದು
ದೇಶದ ಮಾನಕ್ಕಾಗಿ
ನಾನು .....ರ ಹೆಸರ ಹೇಳುವೆನು
ನಿಮ್ಮೆಲ್ಲರ ಪ್ರೇಮಕ್ಕಾಗಿ.

೨೦೩. ಗಾಂಧೀಜಿ ಉಟ್ಟಿದ್ದು ಮೂರು ಮೊಳದ ಪಂಜಿ
ನನ್ನ ರಾಯರು ಉಣ್ಣೋದು ಅಕ್ಕಿ ಗಂಜಿ
.....ರ ಹೆಸರು ಹೇಳುವೆನು ಈ ಮೂರೂ ಸಂಜಿ.

೨೦೪. ಗಾಂಧೀಜಿ ಅವರು ಬೋಧಿಸಿದ್ದು ಶಾಂತಿ
ಸುಭಾಸರು ಮಾಡಿದ್ದು ಕ್ರಾಂತಿ
.....ರ ಸೇವೆ ಮಾಡುವುದೇ ನನಗಿರುವ ಭ್ರಾಂತಿ.

೨೦೫. ಗಿಡಗಳು ಚಿಗಿಯುವುದು ವಸಂತ ಕಾಲದಲ್ಲಿ
ಹಿಮ ಬೀಳುವುದು ಚಳಿಗಾಲದಲ್ಲಿ
.....ರು ಈಗ ಇರುವುದು ಚಳವಳಿಯಲ್ಲಿ.

೨೦೬. ಗಿಡಕ ಹಣ್ಣು ಚೆಂದ, ಬಳ್ಳಿಗೆ ಹೂವು ಚೆಂದ
ಸರೋವರಕ ಕಮಲ ಚೆಂದ, ಗೂಡಿಗೆ ಹಕ್ಕಿ ಚೆಂದ
.....ರ ಕ್ಕಿಂತ ನಮ್ಮನಿಗೆ ಮಗನೇ ಚೆಂದ.

೨೦೭. ಗುಲಾಬಿ ತೋಟದಾಗ ಊಟಾ ಮಾಡಿ
ಸ್ವಾಟಿ ತಿರುವಿಕೋತ ಪ್ಯಾಟೀಗೆ ಹೋಗ್ತಾನ ....

೨೦೮. ಗೌಡನ ಮಗಳಾದೆ
ಕುಲಕರ್ಣಿ ಸೊಸೆಯಾದೆ
ಸ್ವಂತದಿಂದ ಸರಸೋತಿಯಾದೆ
.....ರಿಗೆ ನಾ ಪ್ರೇಮದ ಸತಿಯಾದೆ.

೨೦೯. ಗುಲಗಂಜಿ ಗುಂಪು
ಮಲ್ಲಿಗೆ ಹೂವಿನ ಕಂಪು
ನನಗಿಂತ .......ರು ಬಾಳ ಕೆಂಪು.

೨೧೦. ಗೋಪಿಕಾ ಸ್ತ್ರೀಯರು ಕೃಷ್ಣನ ಮುಂದೆ ಮಾಡಿದ್ದು ನಾಚು
ನಮ್ಮ .............ರ ಕೈಯಲ್ಲಿ ಕಟ್ಟುವೆ ರಿಸ್ಟವಾಚು.

೨೧೧. ಚಹದೊಡನೆ ತಿನ್ನುವುದು ಬಿಸ್ಕತ್ತು
ಶ್ರೀಮಂತರಲ್ಲಿರುವುದು ಧನಸಂಪತ್ತು
..... ರ ಮದುವೆಯಾದಾಗಲೆ
ನನ್ನ ರೊಟ್ಟಿ ತುಪ್ಪದಲ್ಲಿ ಬಿತ್ತು.

೨೧೨. ಚಹಕ್ಕೆ ಬೇಕು ಸಕ್ಕರೆ ಪುಡಿ
ಮುಖ ನೋಡಿಕೊಳ್ಳಲು ಬೇಕು ಕಾಜಿನ ಕನ್ನಡಿ
ನಾಡೆಲ್ಲ ಮಾತನಾಡುವುದು ಕನ್ನಡ ನುಡಿ
..........ರೇ ನನಗೆ ದೇವರು ಮಾಡಿದ ಜೋಡಿ.

೨೧೩. ಚಹಕ್ಕೆ ಮೊದಲು ಬೇಕು ಬಿಸಿಯಾದ ಉಪ್ಪಿಟ್ಟು
ಮಕ್ಕಳಿಗೆ ಬೇಕು ಕೊಲ್ಹಾಪುರ ಬೆಲ್ಲದ ತಂಬಿಟ್ಟು
ನನ್ನ ಪತಿ ..... ರು ತಿನ್ನೋದು ತುಪ್ಪದಲ್ಲಿ ಮಾಡಿದ ಅಳ್ಳಿಟ್ಟು.

೨೧೪. ಇಂದಿನ ರಾಜಕೀಯ ಐತಿ ತೂರಿಕೊಂಡಷ್ಟು
ಸಮಾಜಕ್ಕೆ ಬೇಕು ಒಕ್ಕಟ್ಟು
ಅಜ್ಜಿ ಮುತ್ತಜ್ಜಿ ಹಲ್ಲಿಗೆ ತಿಕ್ಕಲಾಕಬೇಕು ಹಲ್ಲಿಟ್ಟು
ಎಲ್ಲರೇಟು ಗಗನಕ್ಕೆ ಏನಿದರ ಹಿಕಮತ್ತು
.....ರ ಹೆಸರು ಹೇಳುದಕ್ಕೂ ಬರತೈತಿ ಬಿಕ್ಕಟ್ಟು.

೨೧೫. ಚಹ ಕುಡಿಯೋದು ಕಪ್ಪು
ಸಾರಿಗೆ ಹಾಕೋದು ಉಪ್ಪು
ಕೊನೀಗೆ ಬರೂದು ಮುಪ್ಪು
ನನಗ ಸದಾ ........ರ ನೆಪ್ಪು.

೨೧೬. ಚಿಕ್ಕ ಚಿಕ್ಕ ನೀರಿಗೆ
ಚಾರಾಣೆ ಕುಬುಸ
ವಜ್ರದ ವಾಲಿ, ಗೆಜ್ಜಿ ಟೀಕಿ
ಮರಾಳವಂಕಿ, ಮುರುಗಿಸರಗಿ
ಹತ್ತು ಮಂದ್ಯಾಗ ಕುಂತು ನತ್ತ್‌ಮಾಡಿಸ್ತಾರ ....

೨೧೭. ಚಿಕ್ಕೀ ಹೊಳಪು ಹೊಳೆದಾಗ
ತಂಗಾಳಿ ತಂಪು ತಗಲಿದಾಗ
ನಗೆ ಮುಗುಳು ಅರಳುವದು ಬಿಳಿ ಮಲ್ಲಿಗೆ
ನನ್ನ .................ರ ಹೆಸರು ಹೇಳಲು ಬಂದೆ ನಿಮ್ಮಲ್ಲಿಗೆ.

೨೧೮. ಜವಾಹರಲಾಲನೆಹರು ನಮ್ಮ ಭಾರತದ ಪ್ರಧಾನಮಂತ್ರಿ
ನಾನು ...............ರ ಸಂಸಾರಕ್ಕೆ ನಾನೇ ಗೃಹಮಂತ್ರಿ

೨೧೯. ಜನಿವಾರ ಹರಿದು ಜಾತ್ರೀಗೆ ಹೋಗ್ತಾರ
ಜಾತಿ ಬ್ಯಾಡಂತ ಜಗಳಾ ಮಾಡ್ತಾರ .....

೨೨೦. ಜೀವಕ್ಕ ಜೀವಾ ಕೂಡಿದರ ಜತ್ತು
ಅವೆರಡು ತೊಳದ ಹೊಳೆಯೂ ಮುತ್ತು
ನನ್ನ ................ರ ಬಾಯಾಗಿಡುವೆ ಕೈತುತ್ತು.

೨೨೧. ಜನನ ಮರಣ ಇಲ್ಲದ್ದು ನಿರ್ವಾಣ
ಇದರ ಜೊತೆಗೆ ಹೇಳಿದರು ಮಹಾವೀರರು ಅನಂತಜ್ಞಾನ
..............ರಿಗೆ ಮಾಡುವೆ ಸಾಷ್ಟಾಂಗ ಪ್ರಣಾಮ.

೨೨೨. ಜಗತ್ತಿಗೆಲ್ಲ ಬೆಳಕು ನೀಡುವನು ರವಿ
ಹಾಡಲು ಕವಿತೆ ಬರೆಯುವನು ಕವಿ
ನನ್ನ ...........ರ ಹೆಸರ ಹೇಳುವೆನು ಬೆಲ್ಲಕ್ಕಿಂತ ಸವಿ.

೨೨೩. ಮಹಾತ್ಮರು ತಿಳಿಸುವರು ದರ್ಶನ ಪಾಠ
................ ರು ಹೇಳುವರು ನನಗೆ ನೀತಿಪಾಠ.

೨೨೪. ಜೈನರು ದೇವರಿಗೆ ಕರೆಯುತ್ತಾರೆ ಜಿನ
.....................ರು ಗೆದ್ದರು ರೋಗ ರುಜಿನ.

೨೨೫. ಜೈನರು ಪಾಲಿಸಬೇಕು ಸಂಜೆ ಅಣುವ್ರತ
ಸೀತಾದೇವಿ ಇದ್ದಳು ಪತೀವ್ರತ
...............ರು ಹಿಡಿದಿದ್ದಾರೆ
ಜೈನ ಮಂದಿರಕ್ಕೆ ಹೋಗುವ ವ್ರತ.

೨೨೬. ಅಪರಿಗ್ರಹ ಮಾರ್ಗ ಬೋಧಿಸಿದರು ಶರಣರು
ನಾನು ವಿನಯದಿಂದ ಹೇಳುವೆ ಅವರ ಹೆಸರು ........

೨೨೭. ನುಡಿದಂತೆ ನಡೆ ಎಂದರು ಶಿವಶರಣರು
ನಾನು ಹೇಳಿದ್ದನ್ನು ಕೇಳು ಎಂದರು ನಮ್ಮವರು .......

೨೨೮. ಜೋಕಾಲಿ ಜೀಕುವುದು ನಾಗರಪಂಚಮಿಯಲ್ಲಿ
ಆಯುಧಪೂಜೆ ಮಾಡುವುದು ಮಹಾನವಮಿಯಲ್ಲಿ
ನಾನು ........ ರ ಪಾದಕ್ಕೆರಗುವೆನು ಬನ್ನಿ ಮುಡಿವಲ್ಲಿ.

೨೨೯. ಜೋಪಾನ ಮಾಡಿದ್ದಕ್ಕೆ ಹೇಳುವೆ ತಂದೆ ತಾಯಿಯ ಹೆಸರು
ಆತ್ಮೀಯತೆಯಿಂದ ಕಾಣುವುದಕ್ಕೆ ಹೇಳುವೆ ಅಣ್ಣ ತಮ್ಮಂದಿರ ಹೆಸರು
ಅಕ್ಕರೆಗಾಗಿ ಹೇಳುವೆ ಅಕ್ಕ ತಂಗಿಯರ ಹೆಸರು
ಸಹನೆಯಿಂದ ಸಹಕರಿಸಿದ್ದಕ್ಕೆ ಹೇಳುವೆ ಗೆಳತಿಯರ ಹೆಸರು
ಒಲುಮೆಯಿಂದ ಕಾಣುವುದಕ್ಕೆ ಹೇಳುವೆ ನಮ್ಮವರ ಹೆಸರು ....

೨೩೦. ಡಾಕ್ಟರರು ಮಾಡುವುದು ಇಂಜಕ್ಷನ್ನು
ಹುಬ್ಬಳ್ಳಿ ರೈಲ್ವೆ ಸ್ಟೇಶನ್ನಿಗನ್ನುವರು ಜಂಗಶೆನ್
ನನ್ನವ ........... ರು ಹುಡುಕ್ಯಾಡಿ ಮಾಡಿದ್ದಾರೆ ನನ್ನ ಸಿಲೆಕ್ಷನ್.

೨೩೧. ತಲೆ ಬೋಳಿಸಿದರೆ ಜೈನ ಮುನಿಯಾಗಲಾರ
ವೇದ ಮಂತ್ರಾಕ್ಷರ ಕಲಿತರೆ ಬ್ರಾಹ್ಮಣನಾಗಲಾರ
ಪಂಚಾಚಾರ ಪಾಲಿಸಿದರೆ ವೀರಶೈವನಾಗಲಾರ
ಆತ್ಮಶುದ್ಧಿಯಿದ್ದರೆ ಸಿಗುವುದು ಪರಮಾತ್ಮನ ಸಾಕ್ಷಾತ್ಕಾರ.
................ರ ಹೆಸರ ಹೇಳಿ ಮಾಡುವೆ ಭಕ್ತಿಪೂರ್ವಕ ನಮಸ್ಕಾರ.

೨೩೨. ತಾಲಿ ಮ್ಯಾಲೆ ತಾಲಿ, ಹೂವಿನ ಮ್ಯಾಲಿ
ಹೂವಿನಂಥ ಹುಡುಗೀ ಕಂಡು ಹುಬ್ಬ ಹಾರಿಸ್ತಾನ .......

೨೩೩. ತಾಂಬೂಲಕ್ಕೆ ಬೇಕು ವೀಳ್ಯೆದೆಲೆ
ಊಟಕ್ಕೆ ಬೇಕು ಬಾಳೇ ಎಲೆ
...........ರ ಕೊರಳಿಗೆ ಹಾಕುವೆ ಹೂವಿನ ಮಾಲೆ.

೨೩೪. ತಿನ್ನಲು ಬೇಕು ನಂಜನಗೂಡಿನ ರಸಬಾಳೆ ಹಣ್ಣು
ನನ್ನ .........ರ ಸುಂದರ ಮುಖ ನೋಡಲು ಸಾಲವು ನನ್ನೆರಡು ಕಣ್ಣು.

೨೩೫. ತೋಳಿಗೆ ವಂಕಿ ಚೆಂದ
ಬೀಗರಿಗೆ ಬಿಗುವು ಚೆಂದ
ಮೂಗಿಗೆ ನತ್ತು ಚೆಂದ
ನಮ್ಮವರು ..........ರಿಗೆ ಹಚ್ಚಿದ ಗಂಧ ಚೆಂದ.

೨೩೬. ಮುಗಿಲಿಗೆ ಚಂದ್ರ ಭೂಷಣ
ತೋಟಕ್ಕೆ ತೆಂಗು ಭೂಷಣ
................ರಿಗೆ ಪ್ರೀತಿಯಿಂದ ಹಚ್ಚುವೆನು ಅರಿಷಿಣ.

೨೩೭. ಮುಂಜಾನೆ ಕೇಳುವುದು ಕೋಗಿಲೆಯ ಸುಸ್ವರ
............ರಿಗೆ ಹಾಕುವೆನು ತವರು ಮನೆಯ ಚೈನ ಸರ.

೨೩೮. ದಸರೆಯ ಹಬ್ಬದಲ್ಲಿ ಕೊಡುವುದು ಬನ್ನಿ ಬಂಗಾರ
................ ರು ಬನ್ನಿ ಕೊಡಾಕ ಹೋಗ್ತಾರ ಆಗಿ ಶೃಂಗಾರ.

೨೩೯. ದುಡಿಯಲು ಬೇಕು ಮೈಯಲ್ಲಿ ಶಕ್ತಿ
ಗುರು ಹಿರಿಯರಲ್ಲಿರಬೇಕು ಶ್ರದ್ಧಾಭಕ್ತಿ
..............ರ ಪಾದಸೇವೆಯಿಂದ ನನಗೆ ಲಭಿಸುವುದು ಜೀವನ್ಮುಕ್ತಿ

೨೪೦. ದುಷ್ಟರ ಕೂಡ ಮಾತು ಬಿಡಬೇಕು
ಶಿಷ್ಟರ ಕೂಡ ವಂಚನೆ ಬಿಡಬೇಕು
ಎಷ್ಟು ಕಷ್ಟ ಬಂದ್ರೂ ನನ್ನ ....... ರಾಯರ ಕೂಡ ನಾ ನಲಿದಾಡಬೇಕು

೨೪೧. ದುಶ್ಯಾಸನನು ದ್ರೌಪತಿಯ ಸೀರೆ ಸೆಳೆವ ಕಾಲಕ್ಕೆ
ಶ್ರೀಕೃಷ್ಣ ಕಾಯ್ದನು ಅವಳ ಮಾನ
ದುಶ್ಯಾಸನಿಗಾಯ್ತು ಘೋರ ಅಪಮಾನ
.................ರ ಹೆಸರು ಹೇಳಿದರೆ ನನಗೆ ಸಿಗುವುದು ಬಹುಮಾನ.

೨೪೨. ದೇವಿ ಮಹಾತ್ಮೆ ಬಲ್ಲವರು ಹುರುಕಡ್ಲಿ ಅಜ್ಜನವರು
ಭಾರತದ ಸಂಸ್ಕೃತಿಯನ್ನು ಪರದೇಶದಲ್ಲಿ ಬೆಳಗಿಸಿದವರು ವಿವೇಕಾನಂದರು
ನನ್ನ ........... ರೇ ನನಗೆ ಇಂದ್ರನ ಮಹಾಸತಿ ಸುಖ ತಂದು ಕೊಟ್ಟರವರು

೨೪೩. ಕೋಸಿ ಕೊಕಪಲ್ಯ ಮಾಡಲು ಬೇಕು ಬಟಾಟೆ
ನನ್ನ ..................ರ ಹೆಸರ ಹೇಳುವೆನು
ಮಾಡಬೇಡರಿ ಗಲಾಟಿ.

೨೪೪. ದೇವರಿಗೆ ಬೇಕು ತೆಂಗಿನಕಾಯಿ
ಊಟಕ್ಕೆ ಬೇಕು ಉಪ್ಪಿನಕಾಯಿ
ಗುಳುಂಬಕ್ಕೆ ಬೇಕು ಮಾವಿನಕಾಯಿ
ನನ್ನ ................ರಿಗೆ ಬೇಕು ಸುಲಗಾಯಿ.

೨೪೫. ದೇವರಿಗೆ ಅರ್ಪಿಸುವುದು ಹರಕೆ
ದೇವರ ಪೂಜೆಗೆ ಬೇಕು ಕರಿಕೆ
ಬಡವರಿಗೆ ಬೇಕು ಮಣ್ಣಿನ ಕುಡಿಕೆ
ದೇಹದಲ್ಲೇನಿದೆ ಬರೀ ಎಲುಬಿನ ತಡಿಕೆ
ನನ್ನ ..... ರಿಗೆ ಹಗಲು ಸದಾ ತೂಗಡಿಕೆ.

೨೪೬. ದೇಹವೆಂಬುದು ದೇವಾಲಯ ಎಂದರು ಶರಣರು
ನಡೆ–ನುಡಿ ಮೀರಿ ನಡೆದವರು ಗುಣಹೀನರು
ನಮ್ಮ ............ರು ದಾನ ಧರ್ಮದಲ್ಲೇ ಧನ್ಯರು.

೨೪೭. ಬನದ ಹುಣ್ಣಿಮೆ ಬಂತು ಎಲ್ಲಮ್ಮ ಸಿಂಗಾರ
ಅಮ್ಮನಿಗೆ ತೊಡಿಸ್ಯಾರ ಬಂಗಾರ ಅಂಗಿ
................ರ ಹೆಸರ ಹೇಳುವೆ ಮಾತಂಗಿ ತಂಗಿ.

೨೪೮. ನಮ್ಮಾವನ ಕೈಹಿಡಿದಾಗ ನಾ ಇನ್ನೂ ಬಾಲಿ
ನಮ್ಮಪ್ಪ ಕೊಟ್ಟಿದ್ದ ನನಗ ಬೆಳ್ಳಿ ತಾಲಿ
ನಾ....................ರಿಗೆ ಹಾಕ್ತೇನಿ ಗಂಧದಾ ಮಾಲಿ.

೨೪೯. ನಮ್ಮೂರು ಬಲು ಒಕ್ಕಟ್ಟು
ನಮ್ಮ ಮನಿಯಾಗ ಬಲು ಬಿಕ್ಕಟ್ಟು
ನಾ .......................ರಿಗೆ ಕೊಡ್ತೇನಿ ಬಿಸಿ ಉಪ್ಪಿಟ್ಟು.

೨೫೦. ನಮ್ಮ ಮದುವೆ ಆಯ್ತು
ಗುರು ಹಿರಿಯರ ಕೃಪೆಯಿಂದ
ನಾನು ......................ರ ಸತಿಯಾದೆ ಅಂದಿನಿಂದ.

೨೫೧. ನಂಜನಗೂಡಿನ ರಸಬಾಳೆ ಹಣ್ಣು
ನವಲೂರು ಪೇರಲ ಹಣ್ಣು
ನನ್ನ ...................ರಿಗೆ ನಾನೇ ಅಚ್ಚುಮೆಚ್ಚಿನ ಹೆಣ್ಣು.

೨೫೨. ಮುಗಲಾಗ ನಡದೈತಿ ಕರಿ ಮೋಡದ ಸಂತಿ
ಮಠದಾಗ ನಡದೈತಿ ಊಟದ ಪಂತಿ
ಕಣದಾಗ ಕಟ್ಟ್ಯಾರ ಎತ್ತಿನ ಹಂತಿ
ಮಲಗಿದಾವನ್ನ ಎಬ್ಬಿಸಿದರ ಕೊಟ್ಟಾನ ಕಂತಿ ...............

೨೫೩. ನಾರಿಯರ ಹೆಣಿಲಾಗ ಇರೂದು ಹೂವು
ನಮ್ಮ ................ರಿಗೆ ಬಂದೈತಿ ಮಂಗಬಾವು.

೨೫೪. ಮುಂಗೈ ಹಿಡದು ಮುಂದಕ ಕರೀತಾರ
ಮಂದ್ಯಾಗ ನನ್ನಗಲ್ಲಾ ಕಡಿತಾರ ........

೨೫೫. ಬೆಳಗಾಗಲು ಕೂಗುವುದು ಕೋಳಿ
ಸಮಾರಂಭದಲ್ಲಿ ಊದುವುದು ಕಾಳಿ
ನಮ್ಮ ..................ರು ಬೇಸತ್ತ್ರ ಹಾಕ್ತೀನಿ ಬೀಸಣಕಿ ಗಾಳಿ.

೨೫೬. ನರಸಿಂಹರಾಜಪುರದ ಸಿಂಹಗದ್ದೆ ಓರಣ
ಜ್ವಾಲಮ್ಮ ದೇವತೆಯ ಬಾಗಿಲಲ್ಲಿರುವುದು ಬಂಗಾರ ತೋರಣ
....................ರ ಹೆಸರ ಹೇಳುವೆ ಆರುತಿ ಮಾಡಿದ ಕಾರಣ.

೨೫೭. ನಮ್ಮ ದೇಶದ ಹೆಸರು ಭಾರತ
ಸ್ವಾತಂತ್ರ್ಯಕ್ಕಾಗಿ ಸಿದ್ಧವಿರಬೇಕು ಅನವರತ
ಇದು ನನ್ನ ಪತಿ ......................ರದು ಇದೆ ಇದಕೆ ಅಭಿಮತ.

೨೫೮. ನಾಯಿ ಕಣ್ಣು ಬೆಕ್ಕಿನ ಮ್ಯಾಲ
ಬೆಕ್ಕಿನ ಕಣ್ಣು ಇಲಿ ಮ್ಯಾಲ
ನಮ್ಮ .................... ರಾಯರ ಕಣ್ಣು ನನ್ನ ಮ್ಯಾಲ.

೨೫೯. ನಾಲ್ಕು ಮೂಲೆಗೂ ನಾಲ್ಕು ಬಿಲವಾರದ ಹಂಡೆ
ನಡುವೆ ಮುತ್ತಿನಾ ಗೊಂಡೆ
ನಾನು ...................... ರಿಂದ ಎಲ್ಲ ಸುಖಕಂಡೆ.

೨೬೦. ನಾರಿಗೆ ಒಪ್ಪುವುದು ನಾಗಜೆಡಿ
ಅದಕ್ಕೆ ಒಪ್ಪುವುದು ಮಲ್ಲಿಗಿ ಮುಡಿ
....................ರ ಬಾಯಿಗೆ ಒಪ್ಪುವುದು ರಸಿಕ ನುಡಿ.

೨೬೧. ನಾವೆಲ್ಲ ಮಲಗುವುದು ಗಾದಿಯ ಮೇಲೆ
ಮಕ್ಕಳಾಡುವುದು ಬೀದಿಯ ಮೇಲೆ
ಸೂರ್ಯನು ಹುಟ್ಟುವುದು ಕೋಳಿ ಕೂಗಿದ ಮೇಲೆ
ನಮ್ಮ .............. ರು ಊಟ ಮಾಡುವುದು ಸ್ನಾನ ಮಾಡಿದ ಮೇಲೆ.

೨೬೨. ನಾರಿಗೆ ಗುಣವೇ ಶೃಂಗಾರ
ಮನುಷ್ಯನಿಗೆ ಶೀಲವೇ ಶೃಂಗಾರ
ದಂಪತಿಗಳಿಗೆ ಸಹನೆಯೇ ಶೃಂಗಾರ
ನನ್ನ ................ ರಿಗೆ ನಾನೇ ಶೃಂಗಾರ.

೨೬೩. ನಾಗೇಂದ್ರನಿಗೆ ಒಪ್ಪುವುದು ಮಣ್ಣಿನ ಗುಡಿ
ಮುತ್ತೈದೆಯರಿಗೆ ಒಪ್ಪುವುದು ಮಲ್ಲಿಗೆ ಜೆಡಿ
............ರಿಗೆ ಒಪ್ಪುವುದು ಕನ್ನಡ ನುಡಿ.

೨೬೪. ನಾನು ಮುಡಿಯುವುದು ಸೇವಂತಿಗೆ ಹೂವು
ಎಲ್ಲರಿಗೂ ಬೇಕು ಗುಲಾಬಿ ಹೂವು
ಮಾಲೆಯಲ್ಲಿ ಇರುವುದು ನಾನಾ ವಿಧ ಹೂವು
.....................ರ ಹೆಸರು ಹೇಳ್ತೀನಿ ದಾರಿ ಬಿಡ್ರಿ ನೀವು.

೨೬೫. ನೀರಿನಲ್ಲಿ ಕಾಣುವುದು ನೆರಳು
ನಾರಿಯರು ಹಾಕುವುದು ಹೆರಳು
ನನ್ನಾತ ........... ಊರಿಗೆ ಹೋದರ
ಕರೀತೈತಿ ನನ್ನ ಕರುಳು.

೨೬೬. ನೂರಜಹಾನಳು ಬುದ್ಧಿವಂತೆ
ತನಗಾಗದವರನ್ನು ಕೂಡ್ರಿಸಿದಳು ಗೊಂಬೆಯಂತೆ
ನಮ್ಮ ......................ರ ಹೆಸರ ಹೇಳುವೆನು ಸರ್ವರೂ ಕೇಳುವಂತೆ.

೨೬೭. ನೊಸಲಿಗೆ ವಿಭೂತಿಯೇ ಸಿಂಗಾರ
ಮುತ್ತೈದೆಗೆ ತಾಳೀ ಭಾಗ್ಯವೇ ಬಂಗಾರ
ನನ್ನ ..................ರ ಪಾದಧೂಳಿಯೇ ನನಗೆ ಆಧಾರ.

೨೬೮. ಹಾಲು ಎರೆದಾಗ ಪೂಜಾ ಆಗತೈತಿ
ನೀರು ಎರೆದಾಗ ಗಿಡಾ ಬೆಳಿತೈತಿ
ಧಾರಿ ಎರೆದಾಗ ಲಗ್ನ ಆಗತೈತಿ
...................ರು ನಕ್ಕರಂದ್ರ
ನನಗ ಸ್ವರ್ಗಸಿಕ್ಕಾಂಗ ಆಗತೈತಿ.

೨೬೯. ಪರಿಮ್ಯಾಲ ಪರಿ ಈರುಳ್ಳಿ ಗರಿ
ಹಾಂ ನನ್ನ ಗಂಡಗ ಹೆಸರು ಕೇಳಾಕಿ,
ಮಾರಿಗೆ ಮೂರು ಬರಿ
ಅಯ್ಯ ನಮ್ಮ ...........ರು ಬಂದs ಬಿಟ್ರು
ಹಂದರದ ಒಳಗ ಕರಿ.

೨೭೦. ಕೃಷ್ಣನು ಯಮುನಾ ನದಿ ತೀರದಲ್ಲಿ
ಗೋಪಿಯರ ಸಂಗಡ ಆಡತಿದ್ದಾ ಕ್ರೀಡಾ
ನಾ.............ರಿಗೆ ಕೊಡುವೆ ಬಿಸಿ ಬಿಸಿ ಚಾ ಚೂಡಾ.

೨೭೧. ತಿಮ್ಮಪ್ಪನಿಗಿದೆ ಕೋಟಿ ಕೋಟಿ ಹೊನ್ನು
ನಾ ...............ರ ಪ್ರೇಮ ಪತ್ರ ಸ್ಫೂರ್ತಿಗೆ
ಕೊಡುವೆ ಕಿಮ್ಮತ್ತಿನ ಪೆನ್ನು.

೨೭೨. ಪಾಂಡವರು ಅರಗಿನ ಮನೆಯಿಂದ ಪಾರಾದರು
ಹಿಡಂಬಾ ವನಕ್ಕೆ ಬಂದು ಹಿಡಂಬಾಸುರನನ್ನು ಕೊಂದರು
ಹಿಡಂಬೆಯನ್ನು ಲಗ್ನವಾಗಿ ಏಕಚಕ್ರಾಧಿಪತಿ ಪಟ್ಟಣಕ್ಕೆ ಬಂದರು
ತಾಯಿಯ ವಚನದಂತೆ ಬಂಡಿ ಅನ್ನವನುಂಡರು
ಬಕನ ಕೊಂದು ದೂರಮಾಡಿದರು ಬ್ರಾಹ್ಮಣನಿಗೆ ಬಂದ ಆಪತ್ತು
ನಾ ................ರಿಗೆ ಇಡುವೆ ಪ್ರೀತಿಯಿಂದ ಪಾಯಸದ ತುತ್ತು.

೨೭೩. ಪಾಪವೆನ್ನುವುದು ಆತ್ಮದ ಶತ್ರು
ಪುಣ್ಯವೆನ್ನುವುದು ಆತ್ಮದ ಮಿತ್ರ
ನನ್ನ .......... ಯರ ವಚನದಲ್ಲಿ ನನ್ನದೇ ಪಾತ್ರ.

೨೭೪. ಬನಶಂಕರಿಯ ಮೂಗಿನಲ್ಲಿರುವುದು
ವಜ್ರದರಳಿನ ನತ್ತು
.................ರ ತುಟಿಯ ಮೇಲಿರುವುದು
ಸದಾ ಅಮೃತದ ಮುತ್ತು.

೨೭೫. ಬಸವಣ್ಣನ ಗುಡಿ ಮುಂದಿರುವುದು ನಾಗರ ಹೆಡಿ
ಅದಕ್ಕೆ ಒಪ್ಪಿರುವುದು ಕ್ಯಾದಗಿ ಹೊಡಿ
ನಾ....................ರ ಹೆಸರು ಹೇಳ್ತೀನಿ ದಾರಿ ಬಿಡಿ.

೨೭೬. ಬಂಗಾರದ ಹಗ್ಗ ಬೆಳ್ಳಿ ತೊಟ್ಟಿಲ
ಕಂದನ ತೂಗಿ ಮುಂದಕ ಬರತಾರ .....

೨೭೭. ಮಲ್ಲಿ ಕೈಯಾಗ ಹೂವಿನ ಬುಟ್ಟಿ
ಮಕ್ಕಳ ಕೈಯಾಗ ಮಸರಾ ರೊಟ್ಟಿ
ಮಾವನ ಕೈಯಾಗ ಚಿಂದಿ ಬಟ್ಟಿ
.....................ರು ಕೈಯ್ಯಾಗ ಬಂಗಾರ ಘಟ್ಟಿ.

೨೭೮. ಪುಟಾಣಿ ಬೆಲ್ಲ ಹಸಿಕೊಬ್ರಿ ತಿಂತಾರ
ಮಜ್ಜಿಗಿ, ಹಳ್ಳದ ನೀರು ಕುಡಿತಾರ
ನನ್ನ ಕಂದ್ರ ಡುರಕಿ ಹೊಡೀತಾರ ...............

೨೭೯. ನಡೆ ನುಡಿ ಸುದ್ದ, ಮನಿಸುದ್ಧ ಗುಣಸುದ್ಧ
ನನ್ನ ಮೋಡಿ ನೋಡಿ ಮುಳು ಮುಳು ನಗತಾನ .....

೨೮೦. ಮೊದಲ ಇದ್ವು ಹಳಿ ಬಂಡಿ
ಈಗಿನವು ಚಕ್ಕಡಿ ಬಂಡಿ
ಮತ್ತೆ ಬಂದಾವು ಉಗಿ ಬಂಡಿ
................ರ ಅಂಗೀಗೆ ಹಚ್ಚತೇನಿ ಹವಳದ ಗುಂಡಿ.

೨೮೧. ರಸ್ತೇದ ಮನಿ, ಸಿಸ್ತೀನ ನಡಿಗಿ ಹಿಡೀತಾರ
ನಡ ರಾತ್ರ್ಯಾಗ ಕದ್ದು ನಾರೇರ ಮನಿಗಿ ಹೋಗ್ತಾರ ....

೨೮೨. ಅತ್ತಿ ಮಾವಾ ಬಂಗಾರ
ಅವರ ಮಗಾ ಸರದಾರ
ಸರದಾನ ಹೇಣ್ತಿ ಅಂತ
ಸರಗಿ ಮಾಡ್ಸಾಕ ಹೋಗ್ತಾರ ....

೨೮೩. ಮೂಡಲ ಸೀಮಿ ಎತ್ತ
ಮುತ್ತಿನ ಗೊಂಡೆ ಜತಗಿ
ಬೆನ್ನಿಗೆ ಕನ್ನಡಿ ಝೂಲ
ಕೊಂಬಿಗೆ ಬೆಳ್ಳಿ ಕೋಡಣಸ
ನಾಲ್ಕೂ ಕಾಲೀಗೆ ಗೆಜ್ಜೆ ತೋಡೇವು
ಚಿತ್ತಾರದ ಛತ್ರಿ ನೆರಳಾಗ ಜಾತ್ರೀಗೆ ಹೋಗ್ತಾರ ....

೨೮೪. ಮುಂಬೈ ದೊಡ್ಡ ಬಂದರ
ಲಗ್ನಕ ಹಾಕ್ಯಾರ ಹಂದರ
ನಮ್ಮಾತ ನನಗಿಂತ ಸುಂದರ ....

೨೮೫. ಮೂಡಲಗಿ ಹೋರಿ, ಬೆಳ್ಳಿ ಹಗ್ಗ
ಚೆಂದಗ ಕೂಳು ಮಾಡಿ ಹಾಕಿದರ
ಅಂತಾನ ನನಗs ಥೇಟ್ ಕಗ್ಗ ....

೨೮೬. ಕಲ್ಲಪಡಿ, ನಾಗರ ಹೆಡಿ,
ಜೆಡಿ ಬಿಟಗೊಂಡ ಜಳಕಕ್ಕ ಹೋಗ್ತಾರ ....

೨೮೭. ಅಲ್ಲಿ ಬೆಳಕು ಇಲ್ಲಿ ಬೆಳಕು
ಎಲ್ಲಾ ಕಡೆಗೂ ಬೆಳಕೇ ಬೆಳಕು
ನನಗ ಗೊತ್ತು .........ರ ಹುಳುಕು.

೨೮೮. ಹೇಮರೆಡ್ಡಿ ಮಲ್ಲಮ್ಮ ಅತ್ತೆಯ ಮನೆಯಲ್ಲಿ
ಸವೆದದ್ದು ಸಾಣೆಕಲ್ಲಾಗಿ
ನನ್ನ ..... ರಾಯರ ಹೆಸರ ಹೇಳುವೆನು
ಶಿವನಗೌಡರ ಸೊಸೆಯಾಗಿ

೨೮೯. ಬಂಗಾರಪಾಟ್ಲಿ ಕೊಟ್ಟಿಲ್ಲ
ಸರಗಿ ಗಿರಗಿ ಇಟ್ಟಿಲ್ಲ
ನನ್ನ ಸಾಹುಕಾರ್ರ ಹೆಸರ
ಸದರಿನ್ಯಾಗ ಹೇಳ್ತಿನಿ ....

೨೯೦. ಸ್ವತಂತ್ರ ಬಂದಾಗಿತ್ತು ಬಿಕ್ಕಟ್ಟು
ಈಗ ದೇಶಕ ಬೇಕು ಒಕ್ಕಟ್ಟು
.........ರ ಹೆಸರ ಹೇಳ್ತೀನಿ ಕೇಳ್ರಿ ಚಿತ್ತಗೊಟ್ಟು.

೨೯೧. ಹೆಣ್ಣು ಹುಟ್ಟಿದ್ದು ಆರತಿಗಾಗಿ
ಗಂಡು ಹುಟ್ಟಿದ್ದು ಕೀರುತಿಗಾಗಿ
ನಾನು ........ರ ಹೆಸರು ಹೇಳೂದು
ನಿಮ್ಮ ಪ್ರೀತಿಗಾಗಿ.

೨೯೨. ಹೆಪ್ಪು ಹಾಕಿದ್ರ ಹಾಲು ಮೊಸರು
ಬೀಜಾ ಬಿತ್ತಿದ್ರ ಹೊಲಾ ಹಸರು
.............ರ ಹೆಸರು ಹೇಳುದಕ
ನನಗಿಲ್ಲ ಯಾವ ಕಸರು.

೨೯೩. ಮಕ್ಕಳು ಓದೋದು ಸಾಲಿ
ಹೊಟ್ಟಿಗೆ ದುಡಿಯೋದು ಕೂಲಿ
ಬರ ಬಂದ್ರ ಊರೆಲ್ಲ ಖಾಲಿ
ಹೂಗಾರ ಕಟ್ಟೂದು ಮಾಲಿ
ಮನಿಗೆ ಹಾಕೋದು ಕೀಲಿ
ನನ್ನ .............ರ ಹೆಸರು
ಕೇಳು ಗೆಳತಿ ಸುಶೀಲಿ.

೨೯೪. ಹನುಮಂತನು ಲಂಕೆಗೆ ಹೋಗಿದ್ದು
ಸೀತಿಯನ್ನು ಕಂಡು ಉಂಗುರ ಕೊಡುವುದಕ್ಕಾಗಿ
ನಾನು ..........ರ ಹೆಸರು ಹೇಳುವೆ
ನಿಮ್ಮೆಲ್ಲರ ಪ್ರೀತಿ ವಿಶ್ವಾಸಕ್ಕಾಗಿ.

೨೯೫. ಸಾವಿರ ಸಾವಿರ ಮಂದ್ಯಾಗ ಕೇಳ್ರಿ
ಅತ್ತಿ ಮಾವರ ಹೆಸರು
ನೂರು ನೂರು ಮಂದ್ಯಾಗ ಕೇಳ್ರಿ
ತಂದೆ ತಾಯಿ ಹೆಸರು
ಕೇಳ್ರಿ ಕೇಳ್ರಿ ಮೈದುನರ ಹೆಸರು
ಕೇಳ್ರಿ ನಾದಿನಿ ನೆಗೆಣ್ಣೆಯರ ಹೆಸರು
ಹತ್ತು ಮಂದ್ಯಾಗ ಚಿತ್ತಗೊಟ್ಟು ಕೇಳ್ರಿ
ನನ್ನ ಸೌಭಾಗ್ಯದ ಹೆಸರು ............

೨೯೬. ಚಿತ್ತಾರದ ಕೌದಿ ಹಾಸ್ಯಾರ
ಹುಲಿಮನಿ ಚಕ್ಕಾ ಒಗದಾರ
ಪಕ್ಕನೆ ಪೆನ್ಸಿಲ್ಲು ಹಿಡದಾರ
ಮಕ್ಕಳ ಕರಕೊಂಡು ಲೆಕ್ಕ ಮಾಡ್ತಾರ ....

೨೯೭. ಬಸವಣ್ಣನವರು ಸಮಾಜ ಸುಧಾರಣೆಯ ಮಿತ್ರ
ನೆಹರು ಮಗಳು ಇಂದಿರೆಗೆ ಬರೆದರು ಪ್ರಸಿದ್ಧ ಪತ್ರ
.............ರು ನನಗೆ ಕಟ್ಟಿದರು ದೈವದೆದುರು ಮಂಗಳಸೂತ್ರ.

೨೯೮. ಪಂಪನು ವರ್ಣಿಸಿದ್ದು ಬನವಾಸಿ
ಗಂಗಾನದಿಯ ಮೇಲಿರುವುದು ಪುಣ್ಯಸ್ಥಳ ಕಾಸಿ
...............ರ ಹೆಸರ ಹೇಳುವೆನು ತಾಳ್ಮೆ ವಹಿಸಿ.

೨೯೯. ಮಡಿಮಡಿಯೆಂದು ಮೂರು ಮೊಳ ಹಾರುವವರು
ಪರಸ್ತ್ರಿ ಪರಧನಕ್ಕೆ ಆಶೆ ಪಡುವವರ ಬಲ್ಲೆ
ನನ್ನ .................ರು ನಿಜಕೆ ಸದ್ಗುಣವುಳ್ಳವರು.

೩೦೦. ಪಂಚಮಿಗೆ ಕರಿಲಾಕ ಅಣ್ಣ ಬರಲಿಲ್ಲ
.............ರು ಕತ್ತಲಾದ್ರೂ ಮನಿಗೆ ಬರಲಿಲ್ಲ.

೩೦೧. ಬಂಗಾರ ತರಲಿಲ್ಲ ಸಿಂಗಾರ ಬಿಡಲಿಲ್ಲ
ಬೆಕ್ಕಿನಾಂಗ ಸಪ್ಪಳಿಲ್ದ ಮನೀಗೆ ಬರತಾರ ....

೩೦೨. ಗಾಂಧೀಜಿ ದೇಶಕ್ಕಾಗಿ ಮಾಡಿದರು ಸತ್ಯಾಗ್ರಹ
................ ರು ಮಾಡ್ತಾರ ಎದ್ಯಾದಕೋ ಆಗ್ರಹ.

೩೦೩. ಹಣ್ಣಲ್ಲ ಕಾಯಲ್ಲ
ಮಣ್ಣಲ್ಲ ಗಿಣ್ಣಲ್ಲ
ಸುಣ್ಣ ತರ್ರಿ ಅಂದ್ರ
ಬಾರಿ ಹಣ್ಣು ತರತಾರ .....

೩೦೪. ಕೋಚಲಾಪೂರ ಎಲಿ
ಮಾಚಕನೂರ ಬಲಿ
ಇಲಿ ಹೊಡಿರಿ ಅಂದ್ರ
ಹೊಟ್ಟೆಶೂಲಿ ಅಂತ ನೆವಾ ತಗೀತಾರ ....

೩೦೫. ಕರಕರ ಅವಲಕ್ಕಿ ತಿಂದು
ಕಿರಿ ಕಿರಿ ಮಾಡ್ತಾರ ......

೩೦೬. ದಿಲ್ಲಿ ನಮ್ಮ ದೇಶದ ರಾಜಧಾನಿ
ಮ್ಯಾಗ ಮ್ಯಾಗ ಬದಲ ಆಗತಾರ ಪ್ರಧಾನಿ
ನನಗ .........................ರೆ ಮಹಾಜ್ಞಾನಿ

೩೦೭. ನಮ್ಮನಿಯಾಗ ಐತಿ ಆಕಳ ಕರ
ದೇವರ ಮನ್ಯಾಗ ದೇವರ ಕೊರಳಾಗೈತಿ ಕಸ್ತೂರಿ ಸರ
ನನ್ನ ..... ರು ಮೇಲಿಟ್ಟ ಪ್ರೀತಿಗಿಲ್ಲ ಬರ.

೩೦೮. ಕಾಗದ ಕತ್ತರಿಸೂದು ಕತ್ತರಿ
ಹೂಗಾರ ಹಂಚತಾನ ಪತ್ತರಿ
ನಾ..............ರ ಹೆಸರ ಹೇಳ್ತೀನಿ
ಬೀಗರೆ ಬಸ್ ಹತ್ತಿ.

೩೦೯. ಕೆನಿ ಮೊಸರ ಕಡೆದರೆ ಬರುವುದು ಬೆಣ್ಣಿ
ಬೆಣ್ಣೆ ಕಾಸಿ ತುಪ್ಪಾ ತುಂಬಿದಕಂತಾರ ಭರಣಿ
ಕ್ರಿಕೆಟ ಆಟದಾಗ ಹೆಚ್ಚು ಗೆದ್ರ ಅಂತಾರ ಸರಣಿ
..............ರ ಹೆಸರ ಕೇಳಿ ಖುಷಿಪಟ್ಟದ್ದಕ
ನಿಮಗಿದೋ ಬೆಲ್ಲದ ಕರಣಿ.

೩೧೦. ವಸಂತ ಕಾಲದಲ್ಲಿ ಗಿಡ ಬಿಡುವವು ಹೂ ಮುಗುಳು
ನಾನು ................. ರ ಹೆಸರ ಹೇಳುವೆ ಗೌಡರ ಹಿರೇ ಮಗಳು

೩೧೧. ಆರು ಕಟ್ಟು ಮೂರು ಕಟ್ಟು
ಹುಡುಗೂರು ತಿಂತಾವು ತಂಬಿಟ್ಟು
...............ರ ಹೆಸರ ಕೇಳಿದವರ ಹೆಡಮುರುಗಿಕಟ್ಟು

೩೧೨. ಆರೆಡಂಬರು ಬಂದಾರ
ಮುತ್ತಿನ ತೇರೆ ಹೊಡದಾರ
..............ರು ನನ್ನ ಕತ್ತೆತ್ತಿನೋಡ್ತಾರಾ
ಹತ್ತಿ ವ್ಯಾಪಾರ ಮಾಡ್ತಾರಾ

೩೧೩. ಗದ್ದ್ಯಾಗ ಇರೂದು ಕೆಸರು
ಗಡಿಗ್ಯಾಗ ಇರುದು ಮೊಸರು
ನಮ್ಮವರದು ಐತಿ ನಾಡತುಂಬ ಹೆಸರು .....

೩೧೪. ಹಾವೇರಿ ಹೆಸರಾಗಿರುವುದು ಯಾಲಕ್ಕಿ
ಬುಡುಬಡಿಕ್ಯಾ ಶಕುನ ಕಟ್ಟುವುದು ಹಾಲಕ್ಕಿ
ಸುಳ್ಳು ಹೇಳಿದರೆ ..............ರಿಗೆ ಕೊಡ್ತೀನಿ ಗಂಡಕ್ಕಿ.

೩೧೫. ಹಂಪಿ ತೇರು ಪ್ರಸಿದ್ಧ
.................ರು ಹೇಳುದಕ ನಾನೆಲ್ಲಾ ಸಿದ್ಧ.

೩೧೬. ಬಾದಾಮಿ ಬಾನಾ, ಬೆಂಡಿಗೇರಿ ಬದ್ನಿಕಾಯಿ
ಸಾಂಗ್ಲಿಸಾರು, ನರಗುಂದ ನೀರು
ಖುಶೀಲೆ ಉಂಡು ಕುಣಕೊಂತ ಹೋಗ್ತಾನಾ ....

೩೧೭. ಬಂಗಾರ ಬಳಿ ಇಟ್ಟೆ
ಬೆಳ್ಳಿ ರುಳಿ ತೊಟ್ಟೆ
ನನ್ನ ಬೈತಲೆ ನೋಡಿ ಬೇತ ಮಾಡ್ತಾರಾ ....

೩೧೮. ಬಂದಿ ಕುಬುಸಾ
ಬಂಗಾರ ವಂಕಿ
ಬಂದಾಳ ಇಲ್ಲಂತ
ಮಂದ್ಯಾಗ ಹುಡುಕತಾರ ....

೩೧೯. ಬಂಧು ಬಳಗವುಳ್ಳವರು
ಸುಂದರ ಮುಖದವರು
ಗಂಧಾ ಹಚಿಗೊಂಡು
ಮಂದ್ಯಾಗ ಮೋಜ ಮಾಡ್ತಾರಾ ....

೩೨೦. ಬಚ್ಚಲಿಲ್ಲದ ಮನಿ ಅಲ್ಲಾ
ಕೆಚ್ಚಲಿಲ್ಲದ ಎಮ್ಮೆ ಅಲ್ಲಾ
..............ರು ನನ್ನ ಬಿಟ್ಟು
ಹೊರಗ ಹೋಗುದಿಲ್ಲಾ.

೩೨೧. ಬರ ಬರ ಬಂದಾರ
ಬಾಗಿಲದಾಗ ನಿಂತಾರ
ಬಾಳಿಗೊನಿ ತಂದಾರ
ಬಾಯಾಗಿಡು ಅಂತಾರ ....

೩೨೨. ಬೆಳ್ಳಿ ಕೂರಿಗಿ, ಬಂಗಾರ ಶೆಡ್ಡಿ
ಮುತ್ತುವುಡಿ ಕಟಿಗೊಂಡು ಮುತ್ತ ಕೊಡ್ತಾರ .....

೩೨೩. ಭಾವಿಯಲ್ಲಿರುವದು ನೀರಿನ ಸೆಲಿ
ದೃಷ್ಟಿಗಾಗಿ ಮಕ್ಕಳಿಗೆ ಹಚ್ಚುವದು ಕಾಡಿಗೆ ಕಲಿ
ನಾನು ............ ರಿಗೆ ಮೆಚ್ಚಿ ಹಾಕುವೆನು ಹೂವಿನ ಮಾಲಿ.

೩೨೪. ಅಕಬರನ ಆಸ್ಥಾನದಲ್ಲಿ ಬೀರಬಲ್ಲ ನವರತ್ನ
ನನ್ನ ಬಾಳಿಗೆ ...............ರೇ ಕರ್ನಾಟಕ ರತ್ನ.

೩೨೫. ಬಿಸಿ ಅನ್ನ ಹಸಿ ಸಾರು
ಅಗಳು ಬಿಡದೇ ಉಂಡು, ಆಫೀಸಿಗೆ ಹೋಗ್ತಾರಾ .....

೩೨೬. ಬೆಳ್ಳಿ ಗುಂಡ ಒಲಿ
ಬಂಗಾರ ತಪೇಲಿ
ಊದಿನ ಕಡ್ಡಿ ಉರಿಮಾಡಿ
ಸೇವಂತಿಗಿ ಸಾರು ಕಾಸಿದರ
ಮೂಸಿಗೊಂತ ಹಾಸ ಹೊಯ್ತಾರಾ ....

೩೨೭. ಬೆಳದಿಂಗಳ ಹೊಳಿ, ಹೊರಗ ಮಳಿ
ಛಳಿ ಅಂತ ನನ್ನ ಬಲಗೈ ಹಿಚಗತಾರ ....

೩೨೮. ಬೆಳ್ಳಿ ಹಗ್ಗ, ಬಂಗಾರ ತೊಟ್ಟಿಲ
ಚಿನ್ನದಂಥಾ ಕೂಸಿನ ಕೂಡ ಚಕ್ಕಂದ ಆಡ್ತಾರಾ ....

೩೨೯. ಭಕ್ತಿ ಇರಬೇಕು ದೇವರಲ್ಲಿ
ಗೌರವ ಇರಬೇಕು ಗುರುಹಿರಿಯರಲ್ಲಿ
ನಂಬಿಕೆ ಇರಬೇಕು ಶಾಸ್ತ್ರದಲ್ಲಿ
ಸದಾ ವಿನಯ ಇರಬೇಕು ನನ್ನವರಲ್ಲಿ ....

೩೩೦. ಭ್ರಮರಗಳಿಗಾನಂದ ಹೂವಿನ ಮಕರಂದ
............... ರಿಗೆ ಒಪ್ಪುವುದು ಹಣೆಗೆ ಶ್ರೀಗಂಧ

೩೩೧. ಭಕ್ತರು ಮಾಡುವುದು ದೇವರ ಧ್ಯಾನ
ಅತಿಥಿಗಳು ಬಂದಾಗ ಮಾಡುವುದು ಸನ್ಮಾನ
ನಮ್ಮ ............ರು ಸಿಟ್ಟಿಗೆದ್ದಾಗ
ಪ್ರೇಮದಿಂದ ಮಾಡುವೆ ಸಮಾಧಾನ.

೩೩೨. ಭಾರತದಲ್ಲಿರುವುದು ಪ್ರಜಾರಾಜ್ಯ
ಗಾಂಧೀಜಿ ಯೋಚಿಸಿದ್ದು ರಾಮರಾಜ್ಯ
ಸಾಧಕರು ಕೈಲಾಸಕ್ಕಾಗಿ ನಡೆಸುವುದು ಶಿವಸಾಯುಜ್ಯ
ನನ್ನ ............. ರಾಯರ ಪಾದಸೇವೆಯೇ ನನಗೆ ಅತಿಪೂಜ್ಯ.

೩೩೩. ಮಹಾತ್ಮ ಗಾಂಧಿಯವರ ಕನಸಿನ ಕೂಸು ಗ್ರಾಮೋದ್ಯೋಗ
................ರು ತಪ್ಪದೇ ನಡೆಸುತ್ತ ಬಂದ ಕಾಯಕ ನಿರುದ್ಯೋಗ.

೩೩೪. ಭಾರತ ಇರುವುದು ಶಾಂತಿ ಸತ್ಯ ಅಹಿಂಸೆ ತಳಹದಿಯ ಮೇಲೆ
ನಾನು ನಡೆದಿರುವುದು .............. ರ ಪ್ರೇಮ ಶಕ್ತಿಯ ಮೇಲೆ

೩೩೫. ನನ್ನ ಮಾವನವರು ನಡೆಸಿರುವರು ಭರ್ಜರಿ ವ್ಯಾಪಾರ
ನನ್ನ ..... ರು ನಡೆಸಿರುವುದು ಅವರ ಹಣದ ಮೇಲೆ ಒಣ ಕಾರಭಾರ.

೩೩೬. ಈಗ ಭರತದಲ್ಲಿರುವುದು ಕಾಂಗ್ರೆಸ್ ಸರಕಾರ
ಕರ್ನಾಟಕದಲ್ಲಿರುವುದು ಬಿಜೆಪಿ ಸರಕಾರ
ನಡುವೆ ಅತ್ತಿತ್ತ ಹಾರಾಡುವುದು ದಳ ಸರಕಾರ
ಇವರ್‍ಯಾರಿಗೂ ಬೇಕಿಲ್ಲ ಜನರ ಸುಖ ಸಂಸಾರ
ನಮ್ಮ ............... ರಿಗೆ ಇಷ್ಟ ಬಡಜನರ ಉಪಚಾರ.

೩೩೭. ಮೊಟ್ಟ ಮೊದಲು ಉಗಿಯಂತ್ರ
ಕಂಡು ಹಿಡಿದವನು ಜಾರ್ಜಸ್ಟಿಪನ್‌ಸನ್
ನನ್ನ ............... ರಿಗೆ ಕೊಡುವೆನು
ಹುಡುಗಾಟದ ಗನ್.

೩೩೮. ಜರಾಸಂಧನನ್ನು ಕೊಂದುದಕ್ಕಾಗಿ
ಭೀಮಸೇನನಿಗೆ ಬಂತು ಬಡಿವಾರ
ನಾ ................. ರಿಗೆ ಕೊಡುವೆ
ಮುದ್ದು ಮುತ್ತಿನಾಹಾರಾ

೩೩೯. ಭೂಲೋಕದಿಂದ ಅಮೃತವೃಷ್ಟಿ ತಂದದ್ದು ಗರುಡಪಕ್ಷಿ
ನಾನು .................ವರ ಹೆಸರ ಹೇಳುವೆನು ನಾಗಲಿಂಗನ ಸಾಕ್ಷಿ.

೩೪೦. ಮನಿಗೆ ಮಕ್ಕಳು ಚೆಂದ
ಬಸರೀಗೆ ಹಸರು ಬಳೆ ಚೆಂದ
ತೋಟದ ಗಿಡಕ ಗಿಳಿ ಚೆಂದ
ನನ್ನ .......... ರಿಗೆ ಕುಡಿಮೀಸಿ ಚೆಂದ.

೩೪೧. ಬಸವಣ್ಣನವರು ಮಾಡಿದ್ದು
ಜಾತಿ ಇಲ್ಲದ ಸಮಾಜ ರಚನೆ
............ರು ಮಾಡೂದು ಇಸ್ಪೀಟು ಭಜನೆ.

೩೪೨. ಮದುವೆಗೆ ಬೇಕು ಹಂದರ
ಕೋಟೆಯ ಸುತ್ತಬೇಕು ಕಂದರ
ನನ್ನ ಗಂಡನೇ ನನಗೆ ಅತಿ ಸುಂದರ .....

೩೪೩. ಮದುವೆಯಲ್ಲಿ ವಧು ವರರಿಗೆ ಕಟ್ಟುವರು ಕೈಗೆ ಕಂಕಣ
ದೊಡ್ಡ ಮನೆಗೆ ಇರಬೇಕು ನಾಲ್ಕಾರು ಅಂಕಣ
ನನ್ನ ಪತಿ ...............ರ ಹೆಸರು ಹೇಳುವುದೇ ನನಗೆ ಭೂಷಣ.

೩೪೪. ಮಗುವಿನ ಮುಖ ನೋಡಿ ಮುದ್ದಾಡುವುದೇ ತಾಯಿಗೆ ಆನಂದ
ಸತಿಪತಿ ಮುಖ ಮುಖ ನೋಡಿ ಮುದ್ದಾಯಾಡುವುದೇ ಆನಂದ
............. ರಿಗೆ ಎಣ್ಣೆ ಮಜ್ಜನ ಮಾಡಿಸುವುದೇ ನನಗೆ ಪರಮಾನಂದ.

೩೪೫. ಮಹಾತ್ಮಗಾಂಧಿ ಹೆಸರು ಮೋಹನಕರಮಚಂದ
ಭಾರತ ಸ್ವಾತಂತ್ರ್ಯಕ್ಕಾಗಿ ಮಡಿದಾವ ಭಗತಸಿಂಗ
...........ರಿಗೆ ಇಲ್ಲ ನನ್ನ ಬಿಟ್ರ ಯಾರ್‍ಯಾರ್ದು ಹಂಗ.

೩೪೬. ಮಂಗ್ಯಾಗ ಬಾಲ ಬೇಕು
ಅಜ್ಜಗ ಕೋಲ ಬೇಕು
ಬುದ್ಧಿ ಹೇಳುದಕ ತಂದಿಬೇಕು
ನಮ್ಮ ...............ರಿಗೆ ನಾ ಬೇಕು.

೩೪೭. ಮಗು ಬೆಳಸಾಕ ತಾಯಿ ಬೇಕು
ವಿದ್ಯೆ ಕಲಿಸಾಕ ಗುರು ಬೇಕು
ಹಬ್ಬ ಹುಣ್ವೀಗೆ ಅಕ್ಕ ತಂಗೇರ ಬೇಕು
ಮಾಲಿ ಮಾಡಾಕ ಹೂವು ಬೇಕು
.................. ರು ನನಗ ಬೇಕು.

೩೪೮. ಮಕಮಲ್ಲ ಅಂಗಿ, ಮಸ್ರಾಯಿ ಧೋತರ ಉಟಗೊಂಡು
ಒಲ್ಲೆ ಅಂದ್ರೂ ಮಲ್ಲಿಕಾರ್ಜುನಗ ಕರಕೊಂಡು ಹೋಗ್ತಾರ ....

೩೪೯. ಹಿಂದಿಯಲ್ಲಿ ಎಪ್ಪತ್ತೆರಡಕ್ಕೆ ಅನ್ನುವರು ಬಾಹತ್ತರ
ನಮ್ಮ ............. ರಾಯರ ಕೈಗೆ ನಾ ಹಚ್ಚುವೆನು ಅತ್ತರ.

೩೫೦. ಮಹಾತ್ಮಗಾಂಧಿ ಸರಳ ಸಾದಾ ಸದ್ಗುಣಗಳ ಖಣಿ
ನಮ್ಮ ............ ರಾಯರಿಗೆ ಊರ್ತುಂಬಾ ಕರಿತಾರ ದೊಡ್ಡ ಧಣಿ.

೩೫೧. ಮರಾಠಿಯಲ್ಲಿ ಮುಂಜಾನೆಗೆ ಅನ್ನುವರು ಸಕಾಳಿ
ಈಗ ನಮ್ಮ .............ರ ಹೆಸರು ಹೇಳಲು ಮುಗಿಯಿತು ನನ್ನ ಪಾಳಿ.

೩೫೨. ಮಾಲೆ ಕಟ್ಟಲು ಮಲ್ಲಿಗೆ ಹೂವಿಗೆ ಹಾಕುವೆನು ಮಲಕು
..................ಗೆ ಹಚ್ಚುವೆನು ಕುಂಕುಮದ ತಿಲಕು.

೩೫೩. ಮರದ ತುಂಬಾ ಮಲ್ಲಿಗಿ
ಫಳಿ ತುಂಬಾ ತುಂಬ ಕ್ಯಾದಗಿ
ಜಾಜಮಲ್ಲಿಗೆ ಹಿಡಕೊಂಡು
ಜೂಜು ಆಡಾಕ ಹೋಗ್ತಾರ .....

೩೫೪. ಮಹಾವೀರರು ತಪಸ್ಸು ಮಾಡಿದ್ದು ಮೂವತ್ತು ವರ್ಷ
................ರ ಹೆಸರು ಹೇಳೂದು ನನಗೆ ಹರ್ಷ.

೩೫೫. ಮಲ್ಲಿಗೆ ಹೂವಿನ ಮಂದಾರ
ಶ್ರೀಗಂಧದ ಬಜಾರ
ಮುಂಬೈ ಪಟ್ಟಣಕ ಹೋಗಿ
ಮಾಲ ಖರೀದಿ ಮಾಡತಾರ ....

೩೫೬. ಮಾತಗಂಟಿ ಮನಿಹಾಳು
ಜಾತಿ ಬಿಟ್ಟವಳ ಕುಲಾ ಹಾಳು
ನನ್ನ ಬಿಟ್ರ ..............ರ ಬಾಳ್ವೆ ಹಾಳು.

೩೫೭. ಹೂ ಬಿಟ್ಟ ಮಾವಿನ ಗಿಡಿದ ಕಂಪು
ಹೂ ಬಿಟ್ಟ ಬೇವಿನ ಗಿಡದ ಸಂಪು
ತಂಪತ್ತಿನ್ಯಾಗ ಕೂತಗೊಂಡು ತಂಟೆ ತಗೀತಾರ .....

೩೫೮. ಮಾವಿನ ಗಿಡದ ಹಣ್ಣು ಮಂದೀ ಸಲುವಾಗಿ
ಬೇವಿನ ಗಿಡದ ಬೀಜ ಎಣ್ಣಿ ಸಲುವಾಗಿ
............ ರಾಯರು ಹುಟ್ಟಿದ್ದು ನನ್ನ ಸಲುವಾಗಿ.

೩೫೯. ಮಾಘ ಮಾಸದಲ್ಲಿ ಜಿಗಿಯುವುದು ಬೇವಿನ ಮುಗುಳು
...............ರ ಹೆಸರ ಹೇಳುವೆನು ಬೆಳವಲದವರ ಮಗಳು.

೩೬೦. ಭಿಕ್ಷುಕರ ಕೈಯಲ್ಲಿರುವುದು ಜೋಳಿಗಿ
ಬಯಲುನಾಡಿನ ಮನೆಯ ಮೇಲಿರುವುದು ಮಾಳಗಿ
ಮೀನಗಾರರ ಕೈಯಲ್ಲಿರುವುದು ಜಾಳಗಿ
...............ರು ಹುಟ್ಟಿದ ದಿನ ಪ್ರೀತಿಯಿಂದ ನೀಡುವೆ ಹೋಳಿಗಿ.

೩೬೧. ಮೂಗಿಗೆ ನತ್ತು ಬೇಕು
ರೋಗಿಗೆ ಪಥ್ಯ ಬೇಕು
ಒಕ್ಕಲಿಗನಿಗೆ ಎತ್ತು ಬೇಕು
............. ರಿಗೆ ನನ್ನ ಕೈಯಾರೆ ತುತ್ತು ಬೇಕು.

೩೬೨. ಮುತ್ತು ಬಿತ್ತಿ ರತ್ನ ಬೆಳೀತಾರ
ನನ್ನ ಬಂಗಾರದಂಥ ಗಂಡ .......

೩೬೩. ಬೆಳ್ಳಿ ಹಗ್ಗ, ಬಂಗಾರ ಶೆಡ್ಡಿ, ಮೂಡಲಹೋರಿ
ರತ್ನದ ಉಡಿಕಟಿಗೊಂಡು
ಮುತ್ತು ಬಿತ್ತಿ ಮುತ್ತಿನರಾಶಿ ಮಾಡ್ತಾರ ....

೩೬೪. ಮುಗೈಗೆ ಕಟ್ಟ್ಯಾರ ವಾಚು
ಸೀನೇಮಾದಲ್ಲಿ ತೋರಿಸ್ತಾರ ನಾಚು
.................... ರ ಜೀವಕ್ಕ ನಾನೊಳ್ಳೇ ಮ್ಯಾಚು.

೩೬೫. ಮುತ್ತಿಗಿಂತ ಹೊತ್ತು ಉತ್ತಮ
ಮಾತಿಗಿಂತ ಕೃತಿ ಉತ್ತಮ
ವಿದ್ಯೆಗೆ ವಿನಯವೇ ಉತ್ತಮ
.............. ರ ಸೇವೆಗೆ ನಾನೇ ಉತ್ತಮ.

೩೬೬. ಸಂಗೀತದಲ್ಲಿ ರಾಗಗಳ ಮೂಲ ಸರಿಗಮ
ಪ್ರಯಾಗದಲ್ಲಿರುವುದು ತ್ರಿವೇಣಿ ಸಂಗಮ
.................. ರ ಹೆಸರು ಹೇಳಲು ನನಗತಿ ಸಂಭ್ರಮ.

೩೬೭. ರಾಣಾ ಪ್ರತಾಪಸಿಂಹನು ಮೊಗಲರನ್ನು ಸೋಲಿಸಿದ್ದು
ಹಳದಿ ಘಾಟ ಸಂಗರ
ನಾ ............... ರಿಗೆ ಕೊಡುವೆನು
ನನಸಿನ ಪ್ರೇಮದುಂಗುರ.

೩೬೮. ರಾಷ್ಟ್ರಕ್ಕೆ ಬೇಕು ಪ್ರಜೆಗಳ ಒಕ್ಕಟ್ಟು
ಆಫೀಸುಗಳಲ್ಲಿರಬೇಕು ಅಚ್ಚುಕಟ್ಟು
.................ರ ಅತ್ತೆ ಬಾರಿ ಕಟ್ಟುನಿಟ್ಟು.

೩೬೯. ರೂಪಕ್ಕೆ ಬೇಕು ಅಲಂಕಾರ
ನಾದಕ್ಕೆ ಬೇಕು ಝೇಂಕಾರ
............. ರಿಗೆ ಬೇಕು ನನ್ನ ಸಹಕಾರ.

೩೭೦. ರೂಪಾಯಿಗೆ ನೂರು ನಯಾಪೈಸಾ
ಮಹಾಭಾರತ ಬರೆದನು ಕುಮಾರವ್ಯಾಸಾ
ನನ್ನ ಪತಿ .................ರಿಗೆ ನಿತ್ಯ ನನ್ನ ಸಹವಾಸಾ.

೩೭೧. ಭೋಗಿಗೆ ಭಾಗ್ಯವು ಬೇಕು
ಯೋಗಿಗೆ ನಿಗ್ರಹ ಬೇಕು
ರೋಗಿಗೆ ಔಷಧ ಬೇಕು
ಸೋಗಿಗೆ ನಟನೆ ಬೇಕು
ನನ್ನ ............ ರಿಗೆ ನಾನು ಬೇಕು.

೩೭೨. ಲಕ್ಷ್ಮಿ ಇರುವುದು ಕಮಲದಲ್ಲಿ
ಕಮಲವಿರುವುದು ಕೆಸರಿನಲ್ಲಿ
..................ರು ಕಟ್ಟಿದ ಮಾಂಗಲ್ಯವಿರುವುದು
ನನ್ನ ಕೊರಳಲ್ಲಿ.

೩೭೩. ಲಗ್ನಕ್ಕೆ ಮೊದಲು ಮಾಡುವರು ಯಾದಿ
.............ರ ಹೆಸರು ಹೇಳುವೆನು ಬಿಡಿರಿ ಹಾದಿ.

೩೭೪. ಮಗಳನ್ನು ಕೊಡುವಾಗ ತಾಯಿ ಕೇಳುವಳು ವರನ ಸಂಪತ್ತು
ಮಗಳ ತಂದೆ ಕೇಳುವನು ಗುಣ ಗೌರವ ಸಂಪತ್ತು
ಬಂಧು ಬಾಂಧವರು ಕೇಳುವರು ಕುಲಗೋತ್ರ ಸಂಪತ್ತು
ಉಳಿದವರು ಬಯಸುವರು ಭೋಜನ ಸಂಪತ್ತು
...........ರು ಮದುವೆಯಾಗಿ ಎಲ್ಲ ಕೊಟ್ಟರು ನನಗೆ ಸಕಲ ಸಂಪತ್ತು.

೩೭೫. ಗಣೇಶನ ಉತ್ಸವಕ್ಕೆ ಲೋಕಾಮಾನ್ಯ ತಿಲಕರೇ ಕಾರಣ
ಈ ಮನೆಗೆ ಬಂದು ..................ರ ಕೈಹಿಡಿಯಲು
ತಂದೆ ತಾಯಿಯರೇ ಕಾರಣ.

೩೭೬. ವನ ವನ ನಾರಿ ವನ ಸಿಂಗಾರಿ
ವನದಾಗ ಗಿಳಿ, ಹಿಡದಾಗ ಗರುಡ
ಬಾಳುಳ್ಳಾಕಿ, ಬಾಳಿಗೊನಿ ಬಂದೇನಿ
ಉತ್ತಮುಳ್ಳವರ ಮುತ್ತು ತಂದೇನಿ
ಉತ್ತತ್ತಿ ಗೊನಿಗೊಂಚಲ ತಂದೇನಿ
ದಾರಿ ಬಿಡು ಅಂದ್ರ ಮಾರಿ ನೋಡ್ತಾರ ....

೩೭೭. ವನವನನಾರಿ ವನ ಸಿಂಗಾರಿ
ವನದಾಗಿರುವ ರಾಮಪಕ್ಷ ರಾಯರ ಮಗಳು
ಬಂದಾಳ ಏನೇನು ತಂದಾಳ ಗಂಧ ತಂದಾಳ
ಮುಂದಕ ಬರ್‍ರಿ ಪಾದಾ ತರ್‍ರಿ
ಹಚ್ಚಿ ಸರ ಪಚ್ಚಿ ಸರ
ಅಂತೂರ ಬೆಂತೂರ ಜಂತಲಿ ಊರು
ಹತ್ತೂ ಕುದುರಿ ಮ್ಯಾಲ ಕುಂತು
ಮುತ್ತಿನ ಛಡಿಮ್ಯಾಲ ಮಾಲ ಕಟ್ಟಿ
ರಾಯರು ಮಾಡ್ಯಾರ ಸೂಳಿ ಪಾಲು
ಉಳದದ್ದು ಉಳ್ಳಿಕೋಟೆ
ಎಡಕ ಅರಬರ ಕೋಟೆ, ಬಲಕ ಬಾಗಲಕೋಟೆ
ಅಬ್ಬೀಗೇರಿಯವರ ಮಗಳು
ಏನೇನ ತಂದಾಳ – ಹಾಲು ಸಕ್ಕರಿ
ಆಕಿ ಹಾಕ್ಯಾಳ ಗೆಜ್ಜಿ ಟೀಕಿ
ಮಾವ ಹಾಕ್ಯಾನ ಮುತ್ತಿನ ಮಾಲಿ
ನಮ್ಮ ರಾಯರು ಹಾಕ್ಯಾರ ಕಂಟಿಸರ
ಸಡಗರದಿಂದ ಶ್ರೀಶೈಲಕ ಹೋಗತಾರ
ಆರತಿ ತಗೊಂಡಾ ಬಾ ಅಂತ ಅವಸರ ಮಾಡತಾರ ....

೩೭೮. ವಿಚಾರಗೇಡಿ ಸಭಾಕ ಹೋಗಬಾರದು
ಆಚಾರಗೇಡಿ ಮನ್ಯಾಗ ಊಟಾ ಮಾಡಬಾರದು
ನಮ್ಮ .................... ರಾಯರ ಮಾತ ನಾ ಮೀರಬಾರದು.

೩೭೯. ಇಂದ್ರಲೋಕದಲ್ಲಿ ನಡೆಯುವುದು ಮಧುನಾಚು
ನಮ್ಮ .......................ರು ಎಲೆ ಅಡಿಕೆಯಲ್ಲಿ ತಿನ್ನುವುದು ಕಾಚು.

೩೮೦. ಶಕುಂತಲೆ ಗೆಳತಿಯರೊಡನೆ ಆಡಿದ್ದು ಆಟ
ದುಷ್ಯಂತನು ಅವಳನ್ನು ನೋಡಿದ್ದು ಕಡೆಗಣ್ಣ ನೋಟ
ನಮ್ಮ ....... ಯಜಮಾನ ನನ್ನ ಮೇಲೆ ಮಾಡುವುದು ಬರೇ ಹಾರಾಟ.

೩೮೧. ಮುಟ್ಟಿದರೆ ಕಡಿಯುವುದು ಚೇಳು
............. ರು ದಿನಾನೂ ಬಡಿದಾಡತಾರ
ಇದು ನನ್ನ ಗೋಳು.

೩೮೨. ಶಕುಂತಲೆ ಆಶ್ರಮ ಬಿಟ್ಟು ಹೋಗುವಾಗ
ಸಖಿಯರರಿಗಾದ್ದು ಚಟಪಟಿಕೆ
ಚಟಪಡಿಸುವ ............. ರಿಗೆ
ಹಚ್ಚಿ ಕೊಡುವೆನು ಎಲೆ ಅಡಿಕೆ.

೩೮೩. ಶಾಲೆಯಲ್ಲಿ ಇರುವುದು ನಕಾಶ
ಭೂಮಿ ಮೇಲೆ ಇರುವುದು ಆಕಾಶ
ನಾನು ............ ರ ಹೆಸರು ಹೇಳಲು
ಇದುವೇ ಸುವರ್ಣವಕಾಶ.

೩೮೪. ಶಕ್ತಿಯಲ್ಲಿ ಪಾರ್ವತಿ, ವಿದ್ಯೆಯಲ್ಲಿ ಸರಸ್ವತಿ
ಭೂಮಿ ತಾಯಿ ಭಾರತಿಗೆ ನಾನೇ ರೂಪವತಿ
ರೂಪವತಿ ಕಂಡು ರೋಪಾ ಮಾಡ್ತಾರ .....

೩೮೫. ಶ್ರೀಮಂತರಿಗೆ ಹಣದ ಬಲ
ಬಡವರಿಗೆ ರಟ್ಟೆಯ ಬಲ
ಸರಕಾರಕ್ಕೆ ಅಧಿಕಾರದ ಬಲ
ನನಗೆ ................ರ ಬಲ.

೩೮೬. ವರ್ಣಾಕ್ಷರಗಳು ಓದು ಬರಹಕ್ಕೆ ಮೂಲ
ನನ್ನ ಎಲ್ಲ ಸುಖಕ್ಕೆ ..............ರೇ ಮೂಲ.

೩೮೭. ಪತ್ರಿಕೆಗಳಲ್ಲಿ ಬರುವುದು ಜಗತ್ತಿನ ಸಮಾಚಾರ
ನನ್ನ ಅತ್ತೆ ನೆಗೆಣ್ಣಿ ಮಾಡುವರು ನಿತ್ಯ ಚಮತ್ಕಾರ
ಮಾವ ಮಾಡುವರು ದಿನಾ ಶಿವಪೂಜೆ ವ್ರತ ಸದಾಚಾರ
...........ರು ಮಾಡತಾರ ತಂಗಿ ಮಾತ ಕೇಳಿ ದಿನಕ್ಕೊಂದು ಅವತಾರ.

೩೮೮. ವಿದ್ಯೆಗೆ ವಿನಯವೇ ಭೂಷಣ
ಕೂಸಿಗೆ ಕೈಕುರಣಿಯೇ ಭೂಷಣ
.............. ರಿಗೆ ಶ್ರೀಗಂಧ ತಿಲಕವೇ ಭೂಷಣ.

೩೮೯. ಹಟ್ಟಿ ಕೋಲಾರದಲ್ಲಿರುವದು ಬಂಗಾರದ ಖಣಿ
ಮುತ್ತೈದೆಯರ ಮಾಂಗಲ್ಯಕ್ಕೆ ಬೇಕು ಕರಿಮಣಿ
ಕೊರವಂಜಿ ಹೇಳುವದು ಕಣಿ
................ ರೇ ನನ್ನ ತಾಳಿಗೆ ಧಣಿ.

೩೯೦. ವಿಷ್ಣು ಪರಮಾತ್ಮನು ಹಿರಣ್ಯ ಕಸಿಪನನ್ನು ಕೊಂದದ್ದು
ನರಸಿಂಹ ಅವತಾರ ತೊಟ್ಟು
................ ರ ಹೆಸರ ಹೇಳುವೆನು ಕೇಳಿರಿ ಚಿತ್ತಗೊಟ್ಟು.

೩೯೧. ಶಿವನ ಜೆಡೆ ಏರಿ ಕುಂತವಳು ಗಂಗಿ
ಶ್ರೀಕೃಷ್ಣ ಪಾರಿಜಾತಕ್ಕಾಗಿ ಬಡಿದಾಡಿದರು ಅಕ್ಕ ತಂಗಿ
................ ರಿಗೆ ಗಂಟುಬಿದ್ದಾಳ ಬಿಡಿಕಿ ಗಂಗೂರ ಗಂಗಿ.

೩೯೨. ಲೋಕೋದ್ಧಾರಕ್ಕಾಗಿ ಕೃಷ್ಣ ತಾಳಿದ ಹತ್ತು ಅವತಾರ
............ರು ನನ್ನ ಸೋದರ ಮಾವಾ
ಲಗ್ನಕ್ಕೆ ಮೊದಲೇ ನನಗೆ ಸೋತಾರ.

೩೯೩. ಶ್ರೀಕೃಷ್ಣನಿಗೆ ಕಳುವಿನ ಅಪವಾದ ತಂದದ್ದು ಶಮಂತಕ ಮಣಿ
ನಾನು ಕೇಳಿ ಕೇಳಿ ಸಂತೋಷಪಡುವೆ ನನ್ನ ............. ರ ವಾಣಿ.

೩೯೪. ಕೃಷ್ಣನು ಗೋಪಿಯರ ಜಲಕ್ರೀಡೆಯಿಂದ
ಯಮುನೆಯ ನೀರಾದವು ಕಲಕು
...................ರ ಹೆಸರ ಹೇಳಿ ನಾ ಕೂಡ್ರುವೆನು
ಮಾಡಬೇಡರಿ ಅಲಕು ಮಲಕು.

೩೯೫. ಶ್ರೀಕೃಷ್ಣ ಪರಮಾತ್ಮನು ಮೋಹಿನಿ ರೂಪ ತೊಟ್ಟು
ಭಸ್ಮಾಸುರನನ್ನು ಬೂದಿ ಮಾಡಿದನು ಸುಟ್ಟು
ಆಗ ದೇವತೆಗಳು ಸಂತೋಷಪಟ್ಟರು ಕೃಷ್ಣನ ಹೊಗಳಿಟ್ಟು
............. ರಿಗೆ ಹೇಗೆ ಹೇಳಲಿ
ಇವರ ಬಿಟ್ಟು ಹೋಗಬೇಕು ತವರಿಗೆ.

೩೯೬. ಶ್ರೀಕೃಷ್ಣ ತನ್ನ ಬೆರಳನ್ನು ಕೊಯ್ದುಕೊಂಡ
ತನ್ನ ತಂಗಿಯ ಪರೀಕ್ಷೆಗಾಗಿ
ಆಗ ತಾನುಟ್ಟ ಪೀತಾಂಬರ ಹರಿದು ಕಟ್ಟಿದಳು
ಪ್ರೀತಿಯ ಅಣ್ಣನ ಬೆರಳಿಗಾಗಿ
.............ರ ಪ್ರೀತಿ ಇರುವುದೇ ದೇವರ ಸಾಕ್ಷಿಯಾಗಿ.

೩೯೭. ಶ್ರೀಕೃಷ್ಣನು ಶಮಂತಕ ಮಣಿ ಕದ್ದನೆಂದು
ಶತೃಜಿತ ರಾಜನಿಗೆ ಹುಟ್ಟಿತು ಭ್ರಮೆ
..................ರ ಹೆಸರು ಹೇಳಿದ ಒಡಪಿನಲ್ಲಿ
ತಪ್ಪಿದರೆ ಕೇಳುವೆ ನಿಮ್ಮ ಕ್ಷಮೆ.

೩೯೮. ಶ್ರಾವಕರು ಬಿಡಬೇಕು ಎಂಟು ಮೂಲಗುಣ
ತ್ಯಜಿಸಬೇಕು ಸಪ್ತ ವ್ಯಸನ
ಅಂದರೆ ಸಿಗುವುದು ಪರಮಾತ್ಮನ ಸ್ಥಾನ
..............ರೆ ನನಗೆ ಪಂಚಪ್ರಾಣ.

೩೯೯. ಶ್ರಾವಕರು ಮಾಡುವರು ನಮೋಕಾರ ಮಂತ್ರದ ಜಪ
ಜಿನ ಮಂದಿರದಲ್ಲಿರುವುದು ತೀರ್ಥಂಕರರ ರೂಪ
............ರೇ ನನಗೆ ದೇವ ಸ್ವರೂಪ.

೪೦೦. ಶ್ರೀರಾಮಚಂದ್ರನು ವನವಾಸಕ್ಕೆ ಹೋದದ್ದು
ತಂದೆಯ ವಚನ ಪಾಲನೆಗಾಗಿ
ಹರಿಶ್ಚಂದ್ರ ಮಹಾರಾಜನು ರಾಜ್ಯವನ್ನು ತ್ಯಜಿಸಿ
ಕಾಡಿಗೆ ಹೋದದ್ದು ಸತ್ಯಕ್ಕಾಗಿ
ನಾನು ..................ರ ಹೆಸರ ಹೇಳುವೆ
ನನ್ನ ಮಾಂಗಲ್ಯ ಸಾಕ್ಷಿಯಾಗಿ.

೪೦೧. ಶ್ರೀನಿವಾಸನ ಎದೆಯ ಮೇಲಿರುವುದು
ಹಸಿರು ಪಚ್ಚದ ಪದಕ
................ರ ಹೆಸರು ಹೇಳಿದರೆ
ಗಟ್ಟಿಯಾಗುವುದು ನನ್ನ ಕುಂಕುಮದ ತಿಲಕ.

೪೦೨. ಅಕ್ಕ ಹೇಳಿದಳು ಹುಟ್ಟಿ ಸಾಯುವ
ಗಂಡರನೊಯ್ದು ಒಲೆಯೊಳಗಿಕ್ಕು ಎಂದು
.................ರ ಹೆಸರು ಹೇಳಿ ಬೇಡುವೆನು ಶಿವನಲ್ಲಿ
ನನಗಂಡ ನೂರ್ಕಾಲ ಬಾಳಲೆಂದು.

೪೦೩. ಸರಿಬೆಸ ಆಡಲು ಬೇಕು ಹುಣಸಿ ಪಕ್ಕ
................ರು ನಕ್ಕರೆ ಸಾಕು
ಬುತ್ತಿ ಬಿಚ್ಚಿದಂಗಾತು ಬರಕ್ಕ.

೪೦೪. ಸರೋವರದಲ್ಲಿರುವವು ಕಮಲಗಳು
ವನದಲ್ಲಿರುವವು ಕೋಗಿಲೆಗಳು
ನನ್ನ ಹೃದಯ ಮಂದಿರದಲ್ಲಿರುವವು
...................ರ ನಡೆ ನುಡಿಗಳು.

೪೦೫. ಸತ್ಯವಾನನು ಪ್ರಾಣ ಬಿಟ್ಟಿದ್ದು
ಕಟ್ಟಿಗೆಯ ಕಡಿಯುತ್ತ
.................ರ ಹೆಸರ ಹೇಳುವೆನು
ಪರಶಿವನ ಸ್ಮರಿಸುತ್ತ.

೪೦೬. ಜಾತ್ರೆಯಲ್ಲಿ ಊದುತ್ತಾರೆ ಕಾಳಿ
ಕೆರೆಯೊಳಗ ತುಂಬತೈತಿ ಹೂಳಿ
ಊರು ದೇವರಿಗೆ ಬಿಟ್ಟಿರತಾರ ಗೂಳಿ
ನನ್ನ ............. ರ ಹೆಸರು ಹೇಳಿದರೆ
ನಿಮಗೇನ ಬಂತು ಹೇಳಿ.

೪೦೭. ಗಿಡ್ಡ ಗಿಡಕ ಗಿಣಿ ಕುಂತಾವು ಅಂದ್ರ
ನನ ಗಂಡ ......ರು ಹೊಲದಿಂದ ತಂದೀನ
ಕಡ್ಲಗಿಡ ತಿನ್ನು ಅಂದ್ರು.

೪೦೮. ಮನಿ ತುಂಬಾ ಅಡ್ಡಾಡಿ ಮೂಲ್ಯಾಗ
ಕುಂದರೂದು ಕಸಬರಿಗಿ
....................... ರು ಎತ್ತೆತ್ತಿ ಬಿತ್ತಾರ ಕೂರಿಗಿ.

೪೦೯. ಸರ‍್ರಂತ ಶ್ಯಾವಿಗಿ ಸುರುದು
ಬರ‍್ರಂತ ಬೆಳಿ ನೋಡಾಕ ಹೋಗ್ತಾರ .....

೪೧೦. ಸಂಸಾರದಿಂದ ಸದ್ಗತಿ–ಅಂತಾ ಅನುಭಾವದ ಮಾತೈತಿ
ಶಾಂತವಾಗಿ ಮದುವಿಯಾಗಲಿಕ್ಕೆ ಬೇಕು ಹಿರ‍್ಯಾರ ಅನುಮತಿ
ನನ್ನ ಪತಿ ................ರಿಗೇ ನಾನು ಬೇಡಿ ಬಂದ ಸಂಗಾತಿ.

೪೧೧. ಸರಸ್ವತಿಗೆ ಅನ್ನುವರು ವೀಣಾಪಾಣಿ
ಲತಾಮಂಗೇಶ್ವರಳಿಗೆ ಕರೆವರು ಕೋಕಿಲವಾಣಿ
ನನ್ನ ..............ರ ಮಾತೇ ನನಗೆ ಆಕಾಶವಾಣಿ.

೪೧೨. ಮಲ್ಲಪ್ಪ ಮಲ್ಲಿ ಮನಿಗೆ ಹೋದ್ರ
ಕಲ್ಲಪ್ಪ ಕಲ್ಲೀ ಮನಿಗೆ ಹೋದ್ರ
..............ರು ಎತ್ತು ಬಿಟಗೊಂಡು ಎರಿಗೆ ಹೊಂಟಾರ.

೪೧೩. ಸಂಗೀತದಲ್ಲಿ ಬೇಕು ತಾಳಲಯ ಗಾಂಭೀರ್ಯ
ಹಾಡುಗಾರಿಕೆಯಲ್ಲಿ ಬೇಕು ಸ್ವರದ ಮಾಧುರ್ಯ
................ರ ಸೇವೆಗೆ ಬೇಕು ನನ್ನ ಪ್ರೇಮದ ಔದಾರ್ಯ.

೪೧೪. ಸತಿಯಿಂದಲೇ ಸಂಸಾರ ಪತಿಯಿಂದಲೇ ಶೃಂಗಾರ
ಸತಿಪತಿ ಒಂದಾಗಿ ಮಾಡುವ ಸವಿ ಬದುಕೇ ಬಂಗಾರ
ನನ್ನ .................ರೇ ನನ್ನ ಸುಖದ ಬಾಳಿಗೆ ಆಧಾರ.

೪೧೫. ಸಣ್ಣಕ್ಕಿ ಅನ್ನ
ದೊಡ್ಡಕ್ಕಿ ಬಾನ
ಹಿಗ್ಗಿ ಹಿಗ್ಗಿ ಉಂಡು
ಬಗ್ಗಿ ಬಗ್ಗಿ ನೋಡ್ತಾರ .....

೪೧೬. ಲೋಕಮಾನ್ಯ ತಿಲಕರೆಂದರು
ಸ್ವಾತಂತ್ರ್ಯವೇ ನಮ್ಮ ಜನ್ಮಸಿದ್ಧ ಹಕ್ಕು
ನೆಹರು ಅಂದರು ಸ್ವಾತಂತ್ರ್ಯರಕ್ಷಣೆಗೆ ಬೇಕು
ಅಭಿಮಾನದ ಕೆಚ್ಚು
................ ರೆಂದರೆ ನನಗೆ ಪ್ರೇಮಾಭಿವನದ ಹುಚ್ಚು.

೪೧೭. ಸಾಸುವಿ ಬಣ್ಣದ ಸೀರಿ, ಸವ್ವಾ ಸೇರ ಬಂಗಾರ
ಸೈಕಲ್ಲ ಮ್ಯಾಲ ಕುಂತು ಹಿರೇರಿಗೆ ಸಲಾಮ ಮಾಡ್ತಾರ ....

೪೧೮. ಸಂತ ಸಖೂಬಾಯಿ ಪಂಡಪುರಕ್ಕೆ ಹೋದದ್ದು
ತನ್ನ ಗೆಳತಿಯರ ಕೂಡ
ಆಕೆಯ ಭಕ್ತಿಗೆ ಮೆಚ್ಚಿ
ವಿಠೋಬನು ಆಳಾಗಿ ದುಡಿದ ಆಕೆಯ ಕೂಡ
ನಾನು .............ರ ಹೆಸರ ಹೇಳುವೆನು ನಿಮ್ಮೆಲ್ಲರ ಕೂಡ.

೪೧೯. ಸುಂದರ ಕಾಯಾ, ಬಂಧುರ ನಡತೆ
ಗಾಂದೆಣ್ಣಿ ಹಚಿಗೊಂಡು ಮುಂದಕ ಬರತಾರ ....

೪೨೦. ಧ್ರುವನನ್ನು ಎಡಗಾಲಿನಿಂದ ಒದೆದವಳೇ ಸುರುಚಿಬಾಯಿ
ಸುರುಚಿಯ ಪ್ರೀತಿಯ ದಾಸಿಯೇ ಅಸಜಿಬಾಯಿ
ನಾನು ............... ರಿಗೆ ಕೊಡುವೆನು
ನಮ್ಮವ್ವ ಕಳಿಸಿದ ಕರ್ಚಿಕಾಯಿ.

೪೨೧. ಸೂರ್ಯ ಹಗಲು ಬೆಳಕು
ಚಂದ್ರ ರಾತ್ರಿ ಬೆಳಕು
ಮಕ್ಕಳು ವಂಶಕ್ಕೆ ಬೆಳಕು
ನನ್ನ ............. ರಿಂದಲೇ
ನನ್ನ ಬಾಳಿಗೆ ಬೆಳಕು.

೪೨೨. ಬಣ್ಣದಿಂದ ಮನೆಗೆ ಥಳಕು
ಪಣತಿಯಿಂದ ಮನೆಗೆ ಬೆಳಕು
ನಮ್ಮ ................ರು
ನೀರಡಿಸಿದಾಗ ಬೇಕು ನೆಲ್ಲಿ ಹಳಕು.

೪೨೩. ಸೀತಾ ಸ್ವಯಂವರದಾಗ ರಾಮ ಮುರಿದಾ ಧನಸ್ಸು
.................ರ ಹೆಸರು ಹೇಳುತ್ತಲೇ ಮುದಗೊಳ್ಳುವುದು ಮನಸ್ಸು.

೪೨೪. ಅಶೋಕ ವನದಲ್ಲಿ ಸೀತೆಗೆ ರಾವಣನ ಗುಣಗಾನ ಮಾಡಿ
ಲಗ್ನವಾಗೆಂದು ಹೇಳಿದವಳೇ ಶಂಕುಲಿ
ಆ ಹೊತ್ತಿಗೆ ಅದನ್ನು ಅಲ್ಲಗಳೆದವಳೇ ಶಂಕುಲಿ
ನಾನು ನನ್ನ ................ರಿಗೆ ಕೊಡುವೆನು ಬಿಸಿ ಬಿಸಿ ಚಕ್ಕುಲಿ.

೪೨೫. ಸ್ತ್ರೀಯರಿಗೆ ಸಹನೆ ಬೇಕು
ಸಂಸಾರಕ್ಕೆ ಶಾಂತಿ ಬೇಕು
ದೊರೆಗೆ ರಾಜ್ಯ ಬೇಕು
ರಾಜ್ಯಕ್ಕೆ ಮಂತ್ರಿ ಬೇಕು
............ ರಿಗೆ ನಾ ಮಗ್ಗುಲಿರಬೇಕು.

೪೨೬. ಸೊಲ್ಲಾಪುರದ ಸಿದ್ಧರಾಮೇಶ್ವರ ಬಾಗಿಲಲ್ಲಿರುವುದು
ಬಂಗಾರದ ತೋರಣ
ನಾನು .................ರ ಹೆಸರ ಹೇಳುವೆ
ನಿಮ್ಮ ಒತ್ತಾಯದ ಕಾರಣ.

೪೨೭. ಹದಿನೆಂಟು ವರ್ಷದೊಳಗೆ ಹೆಣ್ಣು ಮಕ್ಕಳ ಮದುವೆ
ಮಾಡಬಾರದೆಂಬುದು ಸರಕಾರದ ಕಾಯ್ದೆ
.................... ರ ಹೆಸರು ಹೇಳುವೆ
ಕಾಯ್ದೆ ಇದ್ದೂ ಏನು ಫಾಯದೆ.

೪೨೮. ಕಟಗರೊಟ್ಟಿ ಕರೇ ಹಿಂಡಿ
ತಿಂದು ಹೋಗಂದ್ರ ತಣ್ಣೀರು ಕುಡಿದು
ಕಟ್ಟೆಗೆ ಕುಂದರತಾನ ....

೪೨೯. ಹರೇದ ಹೋರಿ ಹೊಡಕೊಂಡು
ಎರಿ ಬಿತ್ತಿ ದೊರಿಯಾಗಿ ಬರ್ತಾನ
ಮರಿಯಾಗ ನಿಂತು ಮಾರಿ ನೋಡ್ತಾನ ....

೪೩೦. ಹಂಪೆಯಲ್ಲಿ ಹರಿವುದು ತುಂಗಭದ್ರೆ ನೀರು
ಅಲ್ಲಿ ಪ್ರಸಿದ್ಧವಾಗಿರುವುದು ಕಲ್ಲಿನ ತೇರು
.............ರಿಗೆ ಹಾಕುವೆನು ಪರಿಮಳದ ಪನ್ನೀರು.

೪೩೧. ಹಣಕ್ಕಿಂತ ಗುಣ ದೊಡ್ಡದು
ಶಕ್ತಿಗಿಂತ ಯುಕ್ತಿ ದೊಡ್ಡದು
ಪ್ರಾಣಕ್ಕಿಂತ ಮಾನ ದೊಡ್ಡದು
ಮುತ್ತಿಗಿಂತ ಹೊತ್ತು ದೊಡ್ಡದು
ನನಗೆ ................ರ ಒಲುಮೆಯೇ ದೊಡ್ಡದು.

೪೩೨. ಹಸುವಿನ ಹಾಲು ಆರೋಗ್ಯಕ್ಕೆ ಹಿತ
ತಾಯಿ ಹಾಲು ಮಕ್ಕಳಿಗೆ ಹಿತ
ಕಾಯಿ ಪಲ್ಲೆ ಹೊಟ್ಟೆಗೆ ಹಿತ
.................ರು ಖರ್ಚು ವೆಚ್ಚದಲ್ಲಿ ಭಾರಿ ಹಿಡಿತ.

೪೩೩. ಹತ್ತು ಬಳ್ಳಾಗ ಹತ್ತು ಉಂಗುರ
ಮತ್ತೊಂದು ಬಳ್ಳಾಗ ಮುತ್ತಿನುಂಗುರ
ಹತ್ತ ಮಂದ್ಯಾಗ ಹೌದು ಅನಿಸಿಗೊಂತಾರ ....

೪೩೪. ೧೯೭೩ರಲ್ಲಿ ಮೈಸೂರು ರಾಜ್ಯಕ್ಕೆ ಹೊಸ
ನಾಮಕರಣ ಮಾಡಿದರು ಕರ್ನಾಟಕ
ನಾನು ............. ರಿಗೆ ಓದಲು ಕೊಡುವೆ
ಓದಲೆಂದು ಸಂಯುಕ್ತ ಕರ್ನಾಟಕ.

೪೩೫. ಹಣೆಗೆ ಹಚ್ಚುವರು ಶ್ರೀಗಂಧ
ಕಣ್ಣಿಗೆ ಕಾಡಿಗೆ ಹಚ್ಚುವರು ಬಲು ಚೆಂದ
..............ರಿಗೆ ನನ್ನ ಸೇವೆಯೇ ಅಂದ.

೪೩೬. ಹಾಲು ಅನ್ನಾ ಉದುರು, ಎಲೆ ಬೇಳೆ ಪದರು
ನಾನು ಇದ್ದಲ್ಲಿ ...............ರಿಗೆ ಬಾಳ ನೆದರು.

೪೩೭. ಹಾಲಿನ ಮೇಲಿನ ಕೆನಿ, ರಸಬಾಳೇ ಹಣ್ಣಿನ ಗೊನಿ
..................ರಿಗೆ ನಾನೇ ಪ್ರೇಮದ ಗಿಣಿ.

೪೩೮. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ೧೯೪೭ ಆಗಸ್ಟ್ ತಿಂಗಳಲ್ಲಿ
..........................ರ ಹೆಸರ ಹೇಳುವೆನು ಸ್ಪಷ್ಟ ಕನ್ನಡದಲ್ಲಿ.

೪೩೯. ನಾ ಹುಟ್ಟಿದ್ದು ಹಡಗಲಿ
ಬೆಳದದ್ದು ಬೆಳವಡಿ
ಕಲಿತದ್ದು ಕಿತ್ತೂರು
ನನ್ನ ಕೊಟ್ಟದ್ದು ಕೊಲ್ಲಾಪೂರ
ಮಾತಾದದ್ದು ಮಲ್ಲಾಪೂರ
ನಾ .............. ರಿಗೆ ಮಾಲಿ ಹಾಕಿದ್ದು ಹರ್ಲಾಪೂರ.

೪೪೦. ಹುಬ್ಬಳ್ಳಿಯಲ್ಲಿರುವುದು ಮೆಡಿಕಲ್ ಕಾಲೇಜು
ಹೋಳಿ ಹುಣ್ಣಿಮೆಯಲ್ಲಿ ನಡೆವುದು ಕಾಮರತಿ ಮೋಜು
ನಾನು ................ರ ಹೆಸರು ಹೇಳಿದ್ದೇನೆ ಸರಿಯಿರಿ ಬಾಜು.

೪೪೧. ಮಲ್ಲಿಗೆ ಹೂವಿಗೆ ಇರುವುದು ಪರಿಮಳ
ಕಮಲಕ್ಕೆ ಇರುವುದು ಸಹಸ್ರದಳ
ನನ್ನ ............. ರಾಯರ ಕೆಲಸಂದ್ರ ಬಲು ಜಳಜಳ.

೪೪೨. ಚೆನ್ನಮ್ಮರಾಣಿಯ ಗಂಡು ಮೆಟ್ಟಿನ ಸ್ಥಳವೇ ಬೈಲಹೊಂಗಲ
ನನ್ನ ..............ರಿಗೆ ಕೊಡುವೆ ಸುವಾಸದ ತಾಂಬೂಲ.

೪೪೩. ಹೊಸ ಭಾವಿಯ ಮ್ಯಾಲೆ ಹಸಿರು ಗಿಡಹುಟ್ಟಿ
ಎಸಳು ಎಂಬತ್ತು ಟಿಸಿಳು ಮೂವತ್ತು
ನಾನಿದ್ರ ..... ಇವರಿಗಿಲ್ಲ ಆಪತ್ತು.

೪೪೪. ಹೊಳಿ ದಾಟಲು ಬೇಕು ಡೋಣಿ
ತೂಕದ ತಕ್ಕಡಿಗೆ ಕಟ್ಟುವರು ಕಾಣಿ
..........ರ ಪಾದಸೇವೆಗೆ ಬೇಕು ನನ್ನಂಥ ಜಾಣಿ.

೪೪೫. ಹೊಗಳಿದರೆ ಹಿಗ್ಗರು, ತೆಗಳಿದರೆ ಕುಗ್ಗರು
....... ರಿಗೆ ಪೋನ್ ಮಾಡಲು ಹೋದವರಾದರು ಪೆದ್ದರು.

೪೪೬. ಹೃದಯ ಬಳ್ಳಿಯಲೊಂದು ಮಧುರ ಹೂವಾಗಿರಲು
ಅರಿತೆನದು ಒಲವಿನ ಹಂಬಲ
.............ರಿಗೆ ಅರ್ಪಿಸುವೆ ಮಧುರ ತಾಂಬೂಲ.

೪೪೭. ಹೆಂಗಸರಿಗೆ ಬೇಕು ಬಂಗಾರ ಭರ್ತಿ
ಅದೆಲ್ಲಾ ಪರದೇಶಕ್ಕೆ ರಪ್ತಾಗಿ ಆಗಿರುವುದು ಕೊರತಿ
................ರ ಹೆಸರ ಹೇಳುವೆನು ಮುಗಿಯಿತು ನನ್ನ ಸರತಿ.

೪೪೮. ಮೇನಕೆ ಅಪ್ಸರೆಯಾಗಿ ಬಂದು ಕೆಡಿಸಿದ್ದು
ವಿಶ್ವಾಮಿತ್ರನ ತಪಸ್ಸು
ನಾನು ಕನ್ಯಾ ಮಣಿಯಾಗಿ ಸೆಳೆದದ್ದು
ನನ್ನ ............... ರ ಮನಸ್ಸು.

೪೪೯. ಮಕಾ ನೋಡ್ರಿ ಮದಿಹಾಳ ನೋಡ್ರಿ
ಮದಿಹಾಳ ಮುಂದಿನ ಕೆರಿ ನೋಡ್ರಿ
ನೀರು ತರು ಬಾಲ್ಯಾರ್ನ ನೋಡ್ರಿ
ಕೊಡದ ಮ್ಯಾಲನ ಕೈ ನೋಡ್ರಿ
ಕೈಯಾಗಿನ ಬಳಿ ನೋಡ್ರಿ
ಬಳೀ ಮ್ಯಾಲಿನ ಚಿಕ್ಕೀ ನೋಡ್ರಿ
ಚಿಕ್ಕೀಗೂಡ ಚೆಲ್ಲಾಟ ಆಡೂ ಹಕ್ಕೀಕಂಡು
ನನ್ನ ಕೂಡ ಚೆಲ್ಲಾಟಾ ಆಡ್ತಾರ ............

೪೫೦. ಅಗಜಾತೆ ಶಿವತಾನು ಕೈಲಾಸದಲ್ಲಿ
ನನ್ನ ............... ರ ಬೇಡಿ ಬಂದಿರುವೆ ಶಿವನಲ್ಲಿ.

೪೫೧. ಅತಿಥಿ ಅಭ್ಯಾಗತರಿಗೆ ಮಾಡುವ
ಉಪಚಾರಕ್ಕೆನ್ನುವರು ಸತ್ಕಾರ
ನಮ್ಮ .................. ರಾಯರಿಗೆ
ಮನಮುಟ್ಟಿ ಮಾಡುವ ನಮಸ್ಕಾರ.

೪೫೨. ಅನುರಾಗ ಪ್ರೇಮದ್ಯೋತಕವೇ ಮಕ್ಕಳು
..................ರು ಮಾಡಿದ್ದಾರೆ
ಇಡೀ ನಾಡೇ ಮೆಚ್ಚುವ ಒಕ್ಕಲು.

೪೫೩. ಅಲಂಕಾರಕ್ಕೆ ಅಗತ್ಯವಾದದ್ದು ಸ್ನೋ ಪೌಡರ್
.................ರಿಗೆ ಸಿಂಪಡಿಸುವೆ ಸುಪ್ರಸಿದ್ಧ ಅತ್ತರ.

೪೫೪. ಆಧುನಿಕ ಕವಿಗಳಲ್ಲಿ ಹೆಸರುವಾಸಿ ಅಂಬಿಕಾದತ್ತ
..................ರಾಯರ ಹೆಸರು ಹೇಳುವೆ ಇಡಿರಿ ಇತ್ತ ಚಿತ್ತ.

೪೫೫. ಇಂಗ್ಲೀಷ್ ಭಾಷೆಯಲ್ಲಿ ಕೋಳಿಗೆ ಅನ್ನುವರು ಹೆನ್
ಅದರ ಮರಿಗಳಿಗನ್ನುವರು ಚಿಕನ್
...........ರು ಆತ್ಮರಕ್ಷಣೆಗಾಗಿ ತಗೊಂಡಾರ ಗನ್.

೪೫೬. ಔಷದಕ್ಕೆ ಉಪಯೋಗಿಸು ವನಸ್ಪತಿ ಹೆಮ್ಮೆಗುಳು
ಅದನ್ನು ತಿಂದರೆ ಹೋಗುವುದು ಬಾಯಿ ಹುಗುಳು
ನಮ್ಮ ...............ರ ಹೆಸರು ಹೇಳುವೆ ಹಳೆಮನಿಯವರ ಮೊಮ್ಮಗಳು.

೪೫೭. ಪ್ರಿಯ ಪ್ರೇಯಸಿಯರು ಕೂಡುವುದೇ ಪ್ರೇಮ
ನಮ್ಮ ........... ರಿಗೂ ನನಗೂ ಆಯ್ತು ಹಿರಿಯರ ಮುಂದ ಸಮಾಗಮ.

೪೫೮. ಕಲಿಯಲು ಕಠಿಣವಾದದ್ದು ಶಾಸ್ತ್ರ
ನನ್ನ .................... ರಿಗೆ ಕೊಡುವೆನು ಅತ್ತರಿನ ಕರವಸ್ತ್ರ

೪೫೯. ಜಗದುದ್ಧಾರಕ ಕೃಷ್ಣ ಆಡಿದನು ಲೀಲೆ
ನಮ್ಮ ...................ರ ಕೊರಳಿಗೆ ಹಾಕುವೆ ಗಂಧದ ಮಾಲೆ.

೪೬೦. ಕಸೂತಿಯಲ್ಲಿ ಹಾಕುವರು ಆನೆ, ಒಂಟೆ, ಕುದುರಿ
ನಮ್ಮ ................ ರಾಯರ ಕಣದಲ್ಲಿ ಮೂಡಿವೆ
ಗೋದಿಗೆ ಬಂಗಾರದ ಗರಿ.

೪೬೧. ಕುಸುಬೆಯಿಂದ ತಯಾರಿಸುವರು ಒಳ್ಳೆಣ್ಣೆ
ಸಾಸುವೆಯಿಂದ ತಯಾರಿಸುವರು ಸಾಸಿವೆ ಎಣ್ಣೆ
ನನ್ನ ........... ರಿಗೆ ತೀಡುವೆ ಗಂಧದಾ ಎಣ್ಣೆ.

೪೬೨. ಕೋಳಿ ಕೂಗುವುದು ಬೆಳಗಿನ ಜಾವದಲ್ಲಿ
ಒಕ್ಕಲು ಮಕ್ಕಳು ಏಳುವುದು ಆ ಹೊತ್ತಿನಲ್ಲಿ
ನಮ್ಮ ................ ರ ಹೆಸರು ಹೇಳುವೆನು ಇಳಿ ಹೊತ್ತಿನಲ್ಲಿ.

೪೬೩. ಸೂರ್ಯೋದಯ ಸೂರ್ಯಾಸ್ತ
ದೇವರ ದಯೆ ಎಂದರು ಕವಿ ಪುಟ್ಟಪ್ಪ
ಇಂದು ............. ರಾಯರಿಗೆ
ಧಾರೆಯೆರೆದು ಕೊಟ್ಟರು ನಮ್ಮಪ್ಪ.

೪೬೪. ಕಾಶ್ಮೀರವು ಪ್ರಸಿದ್ಧವಾದದ್ದು ಭಾರತದ ನಂದನ ವನವೆಂದು
................ ರ ಹೆಸರು ಹೇಳಲು ಕಾರಣ ಅವರ ಸತಿಯಾದೆನೆಂದು

೪೬೫. ಗಣಪತಿಯು ಇಲಿ ಮೇಲಿಂದ ಬಿದ್ದಾಗ ಚಂದಿರನು ನಕ್ಕ
ನಕ್ಕಿದ್ದಕ್ಕೆ ಅವನಿಗೆ ಸಿಕ್ಕಿತು ಶ್ಯಾಪವು ತಕ್ಕ
.....................ರ ಹೆಸರ ಹೇಳುವೆನು ಸರಸತಿ ಅಕ್ಕ.

೪೬೬. ತಾಂಬೂಲದಲ್ಲಿ ಕೆಂಪನ್ನುಂಟು ಮಾಡುವುದು ಸುಣ್ಣ ಕಾಚು
ನನ್ನ ................. ರಾಯರು ನೆಗೆಣ್ಣಿಗೆ ಸಲಿಗೆ ಕೊಟ್ಟರೆ ನನಗೆ ಪೇಚು.

೪೬೭. ತಿಮಿಂಗಲ ಬದುಕುವುದು ಮೀನ ನುಂಗಿ
.................ರ ಹೆಸರು ಹೇಳುವೆನು ಮರಿಗೌಡರ ತಂಗಿ.

೪೬೮. ದ್ರೌಪತಿಯ ಸ್ವಯಂವರದ ಪಣವಿತ್ತು ಬಲು ಬಿರುಸು
ಅದನ್ನು ಗೆದ್ದನು ಪಾರ್ಥ ಬಲು ಸಲೀಸು
ನಾನು ........... ರಿಗೆ ಮಾಡುವೆ ತಲೆಗೆ ಮಾಲೀಸು.

೪೬೯. ಪಾರ್ಥನಿಗೆ ಪರಶಿವನಿಂದ ತೊರೆತದ್ದು ಪಾಶಪತಾಸ್ತ್ರ
ತವರಿಂದ ಅಣ್ಣ ಬರೆದು ಕರಿತಾರ ನಾ ಬರಲು ಪತ್ರ
ನನ್ನ ................ರ ಬಿಟ್ಟು ಹೋಗಲಾರೆ
ಹ್ಯಾಂಗ ಬರಿಯಲಿ ಉತ್ತರ.

೪೭೦. ಕನಕ ಪುರಂದರ ಕೀರ್ತನೆಗೆ ಸಂಗೀತ ಆಧಾರ
...................ರ ಘನ ಗಾಂಭೀರ್ಯಕ್ಕೆ ಜ್ಞಾನವೇ ಸಾಕಾರ.

೪೭೧. ಪಾಂಡವರ ಸತಿ ಶ್ರೀಕೃಷ್ಣನಾ ಭಗಿನಿ
ನನ್ನ ..................ರ ಹೆಸರು ಹೇಳುವೆನು
ರಮಾಬಾಯಿ ನಾದಿನಿ.

೪೭೨. ಖೀರು ಮಾಡಲು ಬೇಕು ಹಾಲು ಸಕ್ಕರೆ
ಸಾಗಂದ್ರ ನಮ್ಮ ................ ರಿಗೆ ಎಲ್ಲಿಲ್ಲದ ಅಕ್ಕರೆ.

೪೭೩. ಭಾರತವು ಅನೇಕ ಧರ್ಮ ಭಾಷೆಗಳ ಆಗರ
ನನ್ನ ........... ರಾಯರು ಹರಿಸಿದ್ದಾರೆ
ನನ್ನ ಮೇಲೆ ಪ್ರೀತಿಯ ಸಾಗರ.

೪೭೪. ಹುಣ್ಣಿವೆ ಬೆಳದಿಂಗಳಿನಲ್ಲಿ ಗಮಗನಿಸುವುದು ಮನಸ್ಸಿಗೆ ತಂಪು
.....................ರ ಮಿಲನದಿಂದ ಅನವರತ ಜೀವಕ್ಕೆ ಕಂಪು.

೪೭೫. ಬಾದಾಮಿ ಹೆಸರಾದದ್ದು ಗವಿ, ಬನಶಂಕರಿ ದೇವಸ್ಥಾನದಿಂದ
ನಾ ಸುಖಿಯಾದೆ ನನ್ನ ...............ರ ಸತ್ಸಂಗದಿಂದ.

೪೭೬. ಭೂಮ ಎಂಬ ನಿಯಮ ಇರುವುದು
ಲಗ್ನದ ಚಂದ ಹೆಚ್ಚಿಸುವುದಕ್ಕಾಗಿ
..................ರ ಹೆಸರು ಹೇಳುವೆ ನಿಮ್ಮೆಲ್ಲರ ಪ್ರೀತಿಗಾಗಿ.

೪೭೭. ಗಾಂಧೀಜಿ ಹುಟ್ಟಿದ್ದು ಕಾಠೇವಾಡಿ ಪೋರಬಂದರಿನಲ್ಲಿ
...................ರ ಹೆಸರು ಹೇಳುವೆನು ಈ ಲಗ್ನದ ಹಂದರದಲ್ಲಿ

೪೭೮. ಮಲಪ್ರಭಾನದಿ ಕೃಷ್ಣೆಗೆ ಕೂಡುವುದು ಕೂಡಲಸಂಗಮದಲ್ಲಿ
.................ರ ಹೆಸರ ಹೇಳುವೆನು ಈ ತುಂಬಿದ ಸಭೆಯಲ್ಲಿ

೪೭೯. ಹತ್ತೂರು ತಿರುಗತಾರ
ಹವಳಾ ಮುತ್ತು ತರತಾರ
ಕಳ್ಳಗತ್ತಿನ್ಯಾಗ ಹಂತ್ಯಾಕ ಬಂದು
ಅತ್ತಿತ್ತ ನೋಡಿ ಮುತ್ತು ಕೊಡ್ತಾರ ....

೪೮೦. ವಂದೇಮಾತರಂ ರಾಷ್ಟ್ರಗೀತೆ ಬರೆದವರು
ಬಂಗಾಲದ ಕವಿ ಬಂಕಿಮಚಂದ್ರ
ನನ ........... ರಿಗೆ ಹಚ್ಚುವೆ ಚಂದ್ರಕುಂಕುಮ.

೪೮೧. ವಿಶ್ವೇಶ್ವರನು ನೆಲೆಸಿರುವುದು ಕಾಸಿಯಲ್ಲಿ
ಹರಿಶ್ಚಂದ್ರ ಘಾಟವಿರುವುದು ಅಲ್ಲಿ
..................ರ ಹೆಸರು ಹೇಳುವೆನು ನಿಮ್ಮೆಲ್ಲರ ಸಮ್ಮುಖದಲ್ಲಿ

೪೮೨. ವಿದ್ಯಾರಣ್ಯರ ತಪೋಬಲದಿಂದಾಯಿತು ಸುವರ್ಣವೃಷ್ಟಿ
..................ರು ಸದಾಕಾಲ ನಡೆಸುತ್ತಾರೆ ಶಿವಾನುಭವಗೋಷ್ಠಿ.

೪೮೩. ಸ್ವಾತಂತ್ರಕ್ಕಾಗಿ ಸೆಣಸ್ಯಾಡಿದಳು ಕಿತ್ತೂರ ಚೆನ್ನಮ್ಮ ರಾಣಿ
ನೆಚ್ಚಿನ ಬಂಟರನ್ನು ಹುರಿದುಂಬಿಸಿತು ಅವಳ ವೀರವಾಣಿ
ಚೆಲುವರಾಯನಂಥ ಗಂಡನನ್ನು ನಾ ಎಲ್ಲಿಯೂ ಕಾಣೆ ....

೪೮೪. ಸುವರ್ಣದಲ್ಲಿ ಸರಿಯಾಗಿ ಮಿಳತವಾಗುವುದೇ ಪವನ
ನನ್ನ ........... ರಾಯರು ನಾನು ಕೂಡಿದ್ದೇ ಕೂಡಲಸಂಗಮ.

೪೮೫. ಶರಣ ಸತಿ ಲಿಂಗಪತಿ ಎನ್ನುವರು ಸಾಧಕರು
ನನ್ನ ........ ರೇ ನನಗೆ ಸತತ ದಾರ್ಶನಿಕರು

೪೮೬. ಸ್ವಾತಂತ್ರ ಸಿಕ್ಕಿದ್ದು ಆಗಸ್ಟ್ ೧೫ನೇ ದಿನ
ಗಣರಾಜ್ಯ ಗಣನೆಗೆ ಬಂದದ್ದು ಜನೆವರಿ ೨೬ನೇ ದಿನ
ನನ್ನ ................ ರಾಯರ ಲಗ್ನವಾದದ್ದು ಭಾರತ ಹುಣ್ಣಿಮೆ ದಿನ.

೪೮೭. ಶ್ರವಣಕುಮಾರನು ವೃದ್ಧ ತಂದೆ ತಾಯಿಗಳಿಗೆ ನೀರು ತಂದು ಕೊಟ್ಟದ್ದು
ಬುಡು ಬುಡು ಸಪ್ಪಳ ಮಾಡುವ ಬುರುಡಿ
ನಾನು .........ರ ಅಂಗಿಗೆ ಹಚ್ಚುವೆ ಸರಿಯಾದ ಬಿರಡಿ.

೪೮೮. ಹಡಗು ನಿಲ್ಲಿಸುವುದಕ್ಕೆ ಬಂದರಿನಲ್ಲಿ ಹಾಕುವರು ಲಂಗರ್
.................ರಿಗೆ ಕೊಡುವೆನು ದೀಪಾವಳಿಗೆ ಬಂಗಾರದುಂಗುರ.

೪೮೯. ಗುಲಾಬಿ ಹೂವಿನ ಬಣ್ಣದವರು
ಗುಂತಕಲ್ಲಿನ ವ್ಯಾಪಾರದವರು
ಕೈಯಾಗ ಮುತ್ತಿನುಂಗುರ
ಕೊಳ್ಳಾಗ ಕಂಠಿಸರ
ಮಲ್ಲಿಗಿಯಂಥ ಮಡದಿ ಕರಕೊಂಡು
ಮಲ್ಲಯ್ಯನ ದರ್ಶನಕ ಹೋಗ್ತಾರ ......

೪೯೦. ಬೆಳುದಿಂಗಳು ಬೀಳೂದು ಚಂದ್ರನಿಂದ
ಬಿಸಿಲು ಬೀಳೂದು ಸೂರ್ಯನಿಂದ
ನನಗ ಸೌಭಾಗ್ಯ ದೊರೆತದ್ದು ............... ರಿಂದ.

೪೯೧. ಕೆಸರಿದ್ದ ಕಮಲದಾಗ ಲಕ್ಷ್ಮಿ ಇರತಾಳ
ಪರಮೇಶ್ವರನ ಮಗ್ಗಲದಾಗ ಪಾರ್ವತಿ ಇರ್ತಾಳ
ನಮ್ಮ .............. ರಾಯರ ಹತ್ತಿರ
ಬಾಳ ಸರ್ತೆ ನಮ್ಮತ್ತೆ ಇರ್ತಾಳ.

೪೯೨. ಸೀಗಿ ಹುಣ್ವಿಯೊಳಗ ಬೆಳಗೂದು ಎಣ್ಣೀ ಆರತಿ
ಗೌರಿ ಹುಣ್ವಿಯೊಳಗ ಬೆಳಗೂದು ಸಕ್ಕರಿ ಆರತಿ
ಶುಭ ಕಾರ್ಯದೊಳಗ ಬೆಳಗೂದು ಮಂಗಳಾರತಿ
.............. ರಿಗೆ ನಾ ಬೆಳಗೂದು ಪ್ರೇಮದಾರುತಿ.

೪೯೩. ಹೆಣ್ಣಿನ ಬದುಕು ಅಂದ್ರ ಹಣ್ಣು ತರಕಾರಿಗಿಂತ ಹಗುರು
ಅಂತ ತಿಳಿದಾರ ನಮ್ಮ .............ರು ನೋಡ್ತೀನಿ ಅವರ ಒಗರು.

೪೯೪. ಕದಾ ತಗೀತಾರ ಕರಾ ಬಿಡತಾರ
ಕೊಡಾ ಹಿಡಕೊಂಡು
ಮಡೇ ಹೊಲಕ ಹೋಗ್ತಾರ .....

೪೯೫. ನಾ ಸತ್ರ ಸಾಯಿ ಅಂತಾರ
ನೀವು ಸಾಯಿರಿ ಅಂದ್ರ
ಸನೇಕ ಬಂದ ಸರಗಿ ಕೊಡತಾರ .....

೪೯೬. ಸುಳ್ಳು ಹೇಳಬ್ಯಾಡ್ರಿ ಅಂದ್ರ
ನನಗ ಸುಳ್ಳ ಹೇಳ್ತಾರ
ಸೂಳಿಗೂಡ ಚೆಳ್ಳ ಹಣ್ಣು ತಿನಕೋತ
ಚೆಕ್ಕಂದ ಹೊಡಿತಾರ ....

೪೯೭. ಗೋಡಿ ಮ್ಯಾಲಿನ ಹಲ್ಲಿ ನೀಯೇನ ಬಲ್ಲಿ ಶಕುನ
.............ರು ನನಗ ಇದ್ದಾಂಗ ರತನ.

೪೯೮. ಅಕ್ಕಿ ಅನ್ನಾ ಮಾಡಿ, ಮುಕ್ಕ ಜ್ವಾಳಾ ಬೀಸಾಕ ಹೋದ್ರ
ರೊಟ್ಟಿ ಬೇಕಂತ ರೊಡ್ಡಗೈಲೆ ಹೊಡೀತಾರ ....

೪೯೯. ಅಕ್ಕ ಬಂದಾಳ ಬಾಳ ದಿವಸಕ್ಕ ಬ್ಯಾಳಿ ಬೆಲ್ಲ ತರ್ರಿ ಅಂದ್ರ
ರೊಕ್ಕಿಲ್ಲಂತ ಬೆಕ್ಕನಾಂಗ ಬಾಗಿಲ ದಾಟತಾರ ....

೫೦೦. ಅಕ್ಕಮಹಾದೇವಿಗೆ ಚಿಕ್ಕಂದಿನಲ್ಲಿ ಬಂದದ್ದು ವೈರಾಗ್ಯ
................ರ ಪ್ರೀತಿಯೇ ನನಗೆ ಪರಮ ಸೌಭಾಗ್ಯ.

೫೦೧. ಸ್ವಾತಂತ್ರ್ಯಕ್ಕಾಗಿ ಹೋರಾಡಿದಳು ರಾಣಿ ಅಂಬಕ್ಕ
ಮನೆಯಲ್ಲಿ ಏನು ಬಂದರೂ ನಮ್ಮ .......ರು ಕುಳಿತುಕೊಳ್ಳುವರು ನನ್ನ ಪಕ್ಕ.

೫೦೨. ಅಭಿನಂದನ ತೀರ್ಥಂಕರರು ಹುಟ್ಟಿದ್ದು
ಸಿದ್ಧಾರ್ಥ ತಾಯಿಯ ಗರ್ಭದಲ್ಲಿ
ನಿರ್ವಾಣ ಹೊಂದಿದ್ದು ವೈಶಾಖ ಅಷ್ಟಮಿಯಲ್ಲಿ
ಅದರ ಪುಣ್ಯಫಲ ಬೇಡುವೆನು ಪತಿ ............ರಲ್ಲಿ.

೫೦೩. ಅನುಸೂಯನ ಉದರಲ್ಲಿ ಹುಟ್ಟಿದನು ದತ್ತಾತ್ರಿ
ನಾನು .............ರ ಹೆಸರು ಹೇಳುವೆನು ಹೇಮಾಳ ಪುತ್ರಿ.

೫೦೪. ಅನಸೂಯಾಳ ಉದರದಲ್ಲಿ ಹುಟ್ಟಿದರು ತ್ರಿಮೂರ್ತಿ
ನನ್ನ .................. ರಾಯರಿಂದಲೇ ಪಲ್ಲವಿಸಿತು ನಮ್ಮನೆಯ ಕೀರ್ತಿ.

೫೦೫. ಬಸವಣ್ಣನವರು ಬೋಧಿಸಿದ್ದರು ಕಾಯಕವೇ ಕೈಲಾಸ
ಸಿರಿವಂತರಾದ ನಮ್ಮ .................ರು ನಡೆಸಿರುವುದು ಬರಿ ವಿಲಾಸ.

೫೦೬. ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನನಲ್ಲಿ ಇಟ್ಟದ್ದು ಪರಮಭಕ್ತಿ
ಶರಣ ಜೀವನ ನಡೆಸಿದ ನಮ್ಮ ...........ರಿಂದಲೇ ನನಗೆ ಮುಕ್ತಿ.

೫೦೭. ಅಜಿತನಾಥರು ಹುಟ್ಟಿದ್ದು ಇಕ್ವಾಂಶು ವಂಶದ
ಕ್ಷತ್ರಿಯ ಮನೆತನದಲ್ಲಿ
ನಿರ್ವಾಣ ಹೊಂದಿದ್ದು ಸಮ್ಮೇದ ಶಿಖರದಲ್ಲಿ
................ರ ಹೆಸರು ಹೇಳುವೆನು ಜಿನ ಮಂದಿರಲ್ಲಿ

೫೦೮. ಅಮೃತಮತಿ ಅಷ್ಟಾವಂಕ ಕುರೂಪಿಯನ್ನು ಪ್ರೀತಿಸಿದ್ದು ಕಾಮಕ್ಕಾಗಿ
ನಾನು ...............ರನ್ನು ಪ್ರೀತಿಸಿದ್ದು ರೂಪವಂತನ ನಡೆ ನುಡಿಗಾಗಿ.

೫೦೯. ಅಶ್ವದತಿ ಮಹಾರಾಜರ ಪುತ್ರಿ ಮಹಾಪತಿವ್ರತೆಯಾದವಳು ಸಾವಿತ್ರಿ
.............ರು ನಾನು ಬದುಕಬೇಕೆಂಬ ಆಶೆಗೆ ಮೆಚ್ಚುವುದು ಧಾತ್ರಿ.

೫೧೦. ಸವರಾತ್ರಿಯಲ್ಲಿ ದುರ್ವಾಸರು
ಪಾಂಚಾಲಿಗೆ ಬೇಡಿದ್ದು ಅನ್ನದಾನ
................ ರಿಗೆ ನನ್ನ ತಂದೆ ಮಾಡಿದ್ದು ಕನ್ಯಾದಾನ.

೫೧೧. ಅತ್ತೀ ಹೊಟ್ಯಾಗ ಮುತ್ತಿನಂತೋರ ಹುಟ್ಯಾರ
ಮುತ್ತಿನ ಕುದುರಿ ತರಾಕ ಮುಂಬೈಗೆ ಹೊಂಟಾರ ......

೫೧೨. ದಶರಥನ ಕಂದ ರಾವಣನ ಕೊಂದ, ಸೀತೆಯ ತಂದ
.............ರು ರಾಗಾಲಾಪಾ ಮಾಡುವುದೇ ನನಗ ನಿತ್ಯಾನಂದ.

೫೧೩. ಅಂಗಕ್ಕೆ ಲಿಂಗವೇ ಶ್ರೇಷ್ಠ
ಲಿಂಗಕ್ಕೆ ಜಂಗಮವೇ ಶ್ರೇಷ್ಠ
ಸತಿಗೆ ಪತಿಯೇ ಶ್ರೇಷ್ಠ
ನನಗೆ ..............ರ ಪಾದವೇ ಶ್ರೇಷ್ಠ.

೫೧೪. ಅಶ್ವದತಿ ಮಹಾರಾಜನ ಮಗಳು ಸಾವಿತ್ರಿ
ಮದುವೆ ಮಾಡಿಕೊಳ್ಳಲು ಹೋದದ್ದೇ ತೀರ್ಥಯಾತ್ರಾ
ಅಲ್ಲಿ ಸತ್ಯವಾನನು ಸಾವಿತ್ರಿಗೆ ಕಟ್ಟಿದನು ಮಂಗಳಸೂತ್ರಾ
ನಾನು ನಮ್ಮ..........ರು ಪ್ರೇಮ ಬಂಧದಲ್ಲಿ ಕೂಡಿದ್ದು ಒಂದೆ ಛತ್ರಾ.

೫೧೫. ದಯವೇ ಧರ್ಮದ ಮೂಲವೆಂದರು ಶರಣರು
ನಮ್ಮ ............... ರ ಹೆಸರೇ ಮನೆಯ ದೇವರೆಂದರು ಹಿರಿಯರು.

೫೧೬. ದಾನದಲ್ಲಿ ಕರ್ಣ ಮೇಲು
ಜಾಣರಲ್ಲಿ ಸರ್ವಜ್ಞ ಮೇಲು
ಜ್ಞಾನದಲ್ಲಿ ಚೆನ್ನಬಸವಣ್ಣ ಮೇಲು
ಅನುಭಾವದಲ್ಲಿ ಅಲ್ಲಮನೇ ಮೇಲು
ಬಿಲ್ಲು ವಿದ್ಯೆಯಲ್ಲಿ ದ್ರೋಣ ಮೇಲು
ಸತ್ಯದಲ್ಲಿ ಹರಿಶ್ಚಂದ್ರ ಮೇಲು
ಹಟದಲ್ಲಿ ದುರ್ಯೋಧನ ಮೇಲು
ನನ್ನ ....... ರಿಗೆ ನಾನೇ ಮೇಲು .....

೫೧೭. ಆನೆ ಅಂಜುವುದು ಮಾವುತನ ಅಂಕುಶಕ್ಕಾಗಿ
ನಾನು ಅಂಜುವೆನು ನಮ್ಮ ..............ರ ಸಿಟ್ಟಿಗಾಗಿ.

೫೧೮. ಮೂರು ದಳವಿರುವ ಪತ್ರಿಯೇ
ಬ್ರಹ್ಮ ವಿಷ್ಣು ಮಹೇಶ್ವರ
............. ರು ನೀಡುವರು ನನ್ನ ಹಾಡಿಗೆ
ಎಲ್ಲಿಲ್ಲದ ಪುರಸ್ಕಾರ.

೫೧೯. ಕಾಸಿ ಕ್ಷೇತ್ರದಲ್ಲಿ ಮಾಡುವರು ವಿಶ್ವೇಶ್ವರ ಸ್ತೋತ್ರ
ನನ್ನವರ ಪ್ರೀತಿಸಿ ಮದುವೆಯಾದೆ
.........ರು ಒಪ್ಪಿದರು ನನ್ನ ಗೋತ್ರ.

೫೨೦. ಜಾದುಗಾರರು ಮಾಡುವುದು ಕೈಚಳಕ
ನೋಡಿದವರಿಗೆ ಆಗುವುದು ಪುಳಕ
............... ರು ಸುಖದಿಂದ ಇದ್ದರೆ ನನ್ನ ಬಾಳೇ ಥಳಕ.

೫೨೧. ಮಣ್ಣಿನಿಂದಾಗುವುದು ಮಡಿಕೆ
ಶಿಲೆಯಿಂದಾಗುವುದು ಶಿಲ್ಪ
...................ರ ಹೆಸರು ಹೇಳುವೆನು ತಡೀರಿ ಸ್ವಲ್ಪ.

೫೨೨. ವಿದ್ಯೆಯನ್ನು ದಯಪಾಲಿಸುವವಳೇ ಸರಸ್ವತಿ
................ರಿಗೆ ನಾನೇ ಪ್ರೀತಿ ಕೊಡುವ ಸತಿ.

೫೨೩. ಕಲ್ಲಾಗಿ ಬಿದ್ದ ಅಹಲ್ಯೆಯನ್ನು ಉದ್ಧಸಿದವನು ಶ್ರೀರಾಮಚಂದ್ರ
ನನ್ನ ಕೈಹಿಡಿದು ಉದ್ಧರಿಸಿದ ...............ರೇ ನನಗೆ ಸೂರ್ಯಚಂದ್ರ.

೫೨೪. ಶ್ರೀರಾಮಚಂದ್ರನ ಪಾದಸ್ಪರ್ಶದಿಂದ
ಶಾಪಗ್ರಸ್ಥ ಅಹಲ್ಯೆಯು ಮರುಜೀವ ಪಡೆದಳು
..................ರ ಅನುಗ್ರಹದಿಂದ
ನನ್ನ ಬಾಳಾಗಿಹುದು ಬೆಳದಿಂಗಳು.

೫೨೫. ಕೃಷ್ಣನು ಹುಟ್ಟಿದ್ದು ಮಥುರೆಯಲ್ಲಿ
ಬೆಳೆದದ್ದು ಗೋಕುಲದಲ್ಲಿ
ರಾಜ್ಯವಾಳಿದ್ದು ದ್ವಾರಕಾದಲ್ಲಿ
.................ರ ಹೆಸರ ಹೇಳುವೆನು
ನಿಮ್ಮೆಲ್ಲರ ಸಮ್ಮುಖದಲ್ಲಿ.

೫೨೬. ಕೃಷ್ಣನೆಂಬ ಗೌಳಿಗನು ಉಪನಿಷತ್ತುಗಳೆಂಬ
ಆಕಳುಗಳಿಂದ ಅಮೃತವ ಹಿಂಡಿ
ಅರ್ಜುನನಿಗೆ ಕುಡಿಸಿದ್ದೇ ಗೀತೆಯ ತಿರುಳು
ನನ್ನ ............ ರಾಯರೇ ನನ್ನ ಮಾಂಗಲ್ಯದ ಹರಳು.

೫೨೭. ಶ್ರೀಕೃಷ್ಣನು ಹುಟ್ಟಿದ್ದು ಶ್ರಾವಣಮಾಸ
ನನ್ನ ............... ರಾಯರ ಮನೆಯೇ
ನನಗೆ ಸುಖ ನಿವಾಸ.

೫೨೮. ಶ್ರೀಕೃಷ್ಣನು ಆಲದ ಎಲೆಯ ಮೇಲೆ ಮಲಗಿದ್ದು ಚಮತ್ಕಾರ
ನಾನು ........ ರಾಯರ ಹೆಸರು ಹೇಳಿ
ಹಿರಿಯರಿಗೆ ಮಾಡುವೆ ನಮಸ್ಕಾರ.

೫೨೯. ಶ್ರೀಕೃಷ್ಣನ ಸ್ತುತಿಯಿಂದ ಆಯ್ತು
ದ್ರೌಪತಿಯ ಕಂಟಕ ಪರಿಹಾರ
ನಮ್ಮ ............ ರಾಯರು ಊಟವಾಗುವ ಮುನ್ನ
ನಾನಿರುವೆ ನಿರಾಹಾರ.

೫೩೦. ಕಾರ್ಯಾರಂಭಕ್ಕೆ ಮೊದಲು ಮಾಡುವರು ಗಣಪತಿಯ ಪೂಜೆ
ಹೆಂಗಳೆಯರು ಮಾಡುವರು ಮಂಗಳಗೌರಿ ಪೂಜೆ
ನನ್ನ ...............ರು ಮಾಡುವರು ನಿತ್ಯ ಶಿವಪೂಜೆ.

೫೩೧. ಕಾಸಿ ವಿಶ್ವನಾಥನಿಗೆ ಏರಿಸುವರು ಮೂರು ದಳದ ಪತ್ತರಿ
ತವರವರು ನನ್ನ ಕರಿಲಾಕ ಬಂದ್ರ ..............ರು ಹಾಕುವರು ಕತ್ತರಿ.

೫೩೨. ಕುಮಾರವ್ಯಾಸನು ಮಹಾಭಾರತ ಬರೆದದ್ದು
ಗದುಗಿನ ವೀರನಾರಾಯಣನ ಸಮ್ಮುಖದಲ್ಲಿ
ನಾನು ಕಡೆತನಕ ಸುಖದಿಂದ ಬಾಳುವುದು
................. ರ ಅಡಿದಾವರೆಗಳಲ್ಲಿ.

೫೩೩. ಕೇಳಾಕ ಕತಿ ಚೆಂದ
ಹಸಿರು ಹೊಲ ಚೆಂದ
.................ರ ಹೆಸರು ಹೇಳುದಕ ಚೆಂದ.

೫೩೪. ಎರೆ ಹೋಲಗಿರತಾವು ಹಾಲಿನಂಥಾ ನೀರು
ನಮ್ಮ............ ರಾಯರು ಹೋದಮ್ಯಾಲೇ
ಎಳೀತೈತಿ ಬಸವಣ್ಣನ ತೇರು.

೫೩೫. ಮಂಥರೆಯ ಮಾತನ್ನು ಕೇಳಿ ಕೈಕೆಯು
ಶ್ರೀರಾಮನನ್ನು ಅಟ್ಟಿದಳು ಕಾಡಿಗೆ
ನನ್ನ .................ರು ನಾನು ಜೊತೆಯಾಗಿ ಹೊಂಟ್ರ
ನಮ್ಮವ್ವ ನೆದರು ತಗೆದಳು ನಮ್ಮ ಜೋಡಿಗೆ

೫೩೬. ಕೈಲಾಸದಲ್ಲಿ ನಡೆಯುವುದು ಪಾರ್ವತಿಯ ಪೂಜೆ
ಮಠದಲ್ಲಿ ನಡೆಯುವುದು ಯೋಗಿಗಳ ಪೂಜೆ
ನಮ್ಮ ಮನೆಯಲ್ಲಿ ನಡೆಯುವುದು ಪತಿಯಪೂಜೆ .....

೫೩೭. ಹಾವಿಗೆ ಹಾಲನೆರೆದರೆ ಏನು ಫಲ
................. ರಿಗೆ ಆಗದವರು
ಏನು ಹೇಳಿದರೂ ನನಗೆ ನಿಷ್ಫಲ.

೫೩೮. ಪಾಂಡವರು ಕೌರವರಿಗೆ ಪಗಡಿ ಆಡಿ ಸೋತರು
ನಮ್ಮ ............ ರು ನಾನು ಕೂಡಿ ಹೋಗತೇವಿ
ನಮ್ಮನೆ ದೇವರು ಬಾಲೆ ಬಸವರು.

೫೩೯. ಗಣಪತಿಯ ತಾಯಿ ಪಾರ್ವತಿ
ಪರಮೇಶ್ವರನಿಗೆ ಅನ್ನುವರು ಗಿರಿಜಾಪತಿ
..................ರ ಹೆಸರು ಹೇಳುವೆ ನಾನವರ ಸತಿ.

೫೪೦. ಪಾವನ ಗಂಗಾ ಹರಿಯುವುದು ಕೈಲಾಸದಿಂದ
ನನ್ನ ............. ರ ಹೆಸರ ಹೇಳುವೆ ನಿಮಗೆ ತನುಮನದಿಂದ.

೫೪೧. ಶಾರದಾ ಬ್ರಹ್ಮನ ಸತಿ
ಗಜಾನನ ಕೊಡು ನನಗೆ ಮತಿ
...................ರೇ ನನಗೆ ಕಡೆತನಕ ಗತಿ.

೫೪೨. ಗಿರಿರಾಜನ ಸುತೆ ಪಾರ್ವತಿ
ಶಿವನೇ ಪತಿಯಾಗಬೇಕೆಂದು
ತಪಸ್ಸು ಮಾಡಿದಳು ಅವನಿಗಾಗಿ ಭಜಿಸಿ
ನಾನು ಈ ಹೊತ್ತು ...............ರ
ಮನೆಗೆ ಬಂದೆ ಪ್ರಾರ್ಥಿಸಿ.

೫೪೩. ತಂದೆ ತಾಯಿ ಬಳಗ ತ್ಯಜಿಸಿ
ಗುರು ಹಿರಿಯರು ಹೇಳುವರು
ಆಚಾರ ವಿಚಾರ
ವರ್ತಮಾನ ಪತ್ರದಲ್ಲಿ
ಬರುವವು ಸಮಾಚಾರ
ನಾನು ............ ರು ಕೂಡಿ ಹೋಗುವುದು
ಪಗಡಿ ಬಜಾರ.

೫೪೪. ಶ್ರೀಕೃಷ್ಣನು ಗೋಪಿಕಾ ಸ್ತ್ರೀಯರ ಸೀರೆ ಕದ್ದು ಗೆದ್ದ
ಹಿರ್‍ಯಾರ ಮಾತು ಕೇಳ್ದ ನನ್ನಾತ ............ ತೆಗ್ಗಿಗೆ ಬಿದ್ದ.

೫೪೫. ಗೋಕರ್ಣದಲ್ಲಿರುವುದು ಜ್ಯೋತಿರ್ಲಿಂಗ
ಶ್ರೀಶೈಲದಲ್ಲಿ ಇರುವುದು ಮಲ್ಲಿಕಾರ್ಜುನ ಲಿಂಗ
...................ರೇ ನನ್ನ ಸದ್ಗತಿಗಾಗಿರುವ ಶಿವಲಿಂಗ.

೫೪೬. ಘಟೋದ್ಗಜನು ಶಶಿರೇಖೆಯನ್ನು ಕದಿಯಲು
ತಾಳಿದ್ದು ಮಾಯಾ ಸ್ವರೂಪ
ನನಗೆ ........... ರೇ ದೇವತಾ ಸ್ವರೂಪ.

೫೪೭. ಚಿಕ್ಕಂದಿನಲ್ಲಿ ಪ್ರಲ್ಹಾದನಿಗೆ ಹುಟ್ಟಿತು ವೈರಾಗ್ಯ
...............ರಿಂದಲೇ ನನಗೆ ಸಕಲ ಸೌಭಾಗ್ಯ.

೫೪೮. ಚೇರಾಪುಂಜಿಯಲ್ಲಿ ಆಗುವುದು ಭಾರಿ ಮಳೆ
..............ರ ದಯದಿಂದ ನಾ ಇಟ್ಟುಕೊಂಡೆ ಹಸಿರು ಬಳೆ.

೫೪೯. ಜಿನದತ್ತ ಹುಟ್ಟಿದ್ದು ಪದ್ಮಾವತಿಯ ವರದಿಂದ
.................ರ ಹೆಸರು ಹೇಳುವೆ ಆನಂದದಿಂದ.

೫೫೦. ಬೆಕ್ಕಿಗೆ ಬೆಣ್ಣಿ ಬೇಕು
ದನಕ್ಕೆ ಕಣ್ಣಿ ಬೇಕು
ಬಂಡಿಗೆ ಎಣ್ಣಿ ಬೇಕು
ನೋಡಾಕ ಕಣ್ಣು ಬೇಕು
ನನ್ನ ಪತಿಗೆ ಒಣ ಹರಕತಿ ಬೇಕು ..........

೫೫೧. ಸತಿಪತಿ ಕೂಡಿದ್ರ ಹಿತ
.............ರು ನಾನು ಹಾಂಗs ಇದ್ದೀವಿ
ಕೊಡಬೇಕರಿ ನಿಮ್ಮ ಮತ.

೫೫೨. ಗದ್ದಿ ಹೊಲಕ ಗುದ್ಲಿ ತಗೊಂಡು ಹೋಗಂತ ಮಾವ ಹೇಳ್ತಾರ
ಗುಡಾರ ಹಾಸಿಗೊಂಡು ಗಡದ್ದಾಗಿ ಮಲಗತಾರ ....

೫೫೩. ಹಸಿಮೆಣಸಿನಕಾಯಿ ಖಾರಾ ಹಸಿರು ಹರವಿಪಲ್ಲೆ
ಖುಸಿಯಿಂದ ಉಂಡು ಮುಸುಗುಡುತಾ ಕುಂತಾನ .....

೫೫೪. ಹುಣುಸಿಗಿಲ್ಲ ಮುಪ್ಪು
.................ರು ಯಾರಿಗೂ
ಹಾಕೋದಿಲ್ಲ ಸೊಪ್ಪು.

೫೫೫. ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧು ಇಲ್ಲ
ನನ್ನ ಗಂಡ ..............ರಿಗೆ ಏನು ಮಾಡಿದ್ರೂ ಸಮಾಧಾನ ಇಲ್ಲ.

೫೫೬. ತಿರುಪತಿಯಲ್ಲಿ ಶ್ರೀನಿವಾಸ ದೇವರಿಗೆ
ನಿತ್ಯ ಆಗುವುದು ಭಕ್ಷ ಭೋಜ್ಯಗಳ ನೈವೇದ್ಯ
ಆಗ ಮೊಳಗುವುವು ಅನೇಕ ಬಗೆಯ ವಾದ್ಯ
ನಾನು .............ರ ಹೆಸರು ಹೇಳುವೆ ಕೇಳಿರಿ ಸದ್ಯ.

೫೫೭. ಜಿನನ ಪೂಜೆ ಮಾಡುವೆ ಪುಣ್ಯಕ್ಕಾಗಿ
ಜಿನವಾಣಿ ಪೂಜೆ ಮಾಡುವೆ ವಿದ್ಯೆಗಾಗಿ
ಪದ್ಮಾವತಿ ಪೂಜೆ ಮಾಡುವೆ ಇಷ್ಟಾರ್ಥಕ್ಕಾಗಿ
..................ರ ಪೂಜೆ ಮಾಡುವೆ ಪತಿವ್ರತಾ ಧರ್ಮಕ್ಕಾಗಿ.

೫೫೮. ದಶರಥನ ಚಿಂತೆಯನ್ನು ದೂರಮಾಡಿದರು
ರಾಮಲಕ್ಷ್ಮಣರೆಂಬ ತನಯರು ಜನಿಸಿ
..............ರ ಹೆಸರ ಹೇಳುವೆನು ನಾಗಲಿಂಗಜ್ಜನನ್ನು ಸ್ಮರಿಸಿ.

೫೫೯. ದಮಯಂತಿ ನಳರಾಜನಿಗೆ ಮಾಲೆ ಹಾಕಿದಳು
ತನ್ನ ಸ್ವಯಂವರದಲ್ಲಿ
ದೇವತೆಗಳು ಆನಂದದಿಂದ ಹೂಮಳೆ ಸುರಿಸಿದರು
ಸತಿ–ಪತಿ ಕಂಡು ಆಕಾಶದಲ್ಲಿ
................ರ ಹೆಸರು ಹೇಳುವೆನು ಈ ಸಭಾಗೃಹದಲ್ಲಿ.

೫೬೦. ಕರ್ಣನ ಸಾರಥಿಯಾದನು ಶಲ್ಯ
ಒಲ್ಲದ ಮನಸ್ಸಿನಿಂದ
.............. ರ ಹೆಸರು ಹೇಳುವೆ
ನಿರ್ಮಲ ಚಿತ್ತದಿಂದ.

೫೬೧. ದುಶ್ಶಾಸನನು ಪಾಂಚಾಲಿಯ ಸೀರೆ ಸೆಳೆಯುವಾಗ
ಭೀಮನಿಗೆ ಬಂದಿತ್ತು ಸಿಟ್ಟು
..............ರ ಹೆಸರ ಹೇಳುವೆನು
ಕೇಳಿರಿ ಚಿತ್ತವಿಟ್ಟು.

೫೬೨. ದುಶ್ಶಾಸನನು ಸೀರೆ ಸೆಳೆಯುವ ಕಾಲಕ್ಕೆ
ಶ್ರೀಕೃಷ್ಣ ಕಾಯ್ದನು ದ್ರೌಪತಿಯ ಮಾನ
ಅದೇ ಸಭೆಯಲ್ಲಿ ದುಶ್ಶಾಸನನಿಗೆ ಆಯಿತು ಅವಮಾನ
...............ರ ಹೆಸರು ಹೇಳಿದರೆ ನನಗೇನು ಮಾಡುವಿರಿ ಸನ್ಮಾನ.

೫೬೩. ಸುಭದ್ರೆಯನ್ನು ದುರ್ಯೋಧನನಿಗೆ ಕೊಡಬೇಕೆಂಬುದು
ಬಲರಾಮನ ಮನಸ್ಸು
ಆ ವೇಳೆಯಲ್ಲಿ ಅರ್ಜುನನಿಗೆ ಮಾಲೆ ಹಾಕಿದ್ದು
ಶ್ರೀಕೃಷ್ಣನ ಯಶಸ್ಸು
...................ರ ಹೆಸರು ಹೇಳಲು ಕಾರಣ
ನಿಮ್ಮ ಸುಮನಸ್ಸು.

೫೬೪. ದೇಶಭಕ್ತಿಯಲ್ಲಿ ಗಾಂಧೀಜಿ ಕಾಣುವರು ಎದ್ದು
ಅವರ ರಾಮರಾಜ್ಯ ಎಲ್ಲರಿಗೂ ಬಲು ಮುದ್ದು
..............ರಿಗೆ ತಿಲಕ ಹಚ್ಚುವೆ ಅವರ ಕಾಲಿಗೆ ಬಿದ್ದು.

೫೬೫. ದೇವಾಸುರರು ಮಂದಾರ ಪರ್ವತ
ಕಡೆಗೋಲಮಾಡಿ ಕಟೆದರು ಸಮುದ್ರದ ನೀರು
ಆ ಸಮಯದಲ್ಲಿ ವಿಷ್ಣುವಿನ ಮೈಯಿಂದ
ಕೂರ್ಮರೂಪಿಯಾಗಿ ಹೊರಟಿತು ಬೆವರು
..............ರಿಗೆ ನಾ ಹಾಕುವೆನು ಪರಮಳದ ಪನ್ನೀರು.

೫೬೬. ದೇವ ದೇವತೆಗಳಿಗೆ ರಾಜನೇ ಇಂದ್ರ
ಗಗನಕ್ಕೆ ಶೋಭೆ ಹುಣ್ಣಿಮೆ ಚಂದ್ರ
...............ರೇ ನನಗೆ ಸೊಗಸುಳ್ಳ ಮಂದಿರ.

೫೬೭. ದೇವ ದೇವಗನ್ನಾರು ದೇವೇಂದ್ರನ ಸೊಸ್ತ್ಯಾರು
ಸಾಲು ಮುತ್ತೈದ್ಯಾರು ಸೆರಗೊಡ್ಡಿ ಬೇಡ್ಯಾರು
ಹಡೆದ ತಂದೆ ತಾಯಿ ಪಡೆದ ಗಂಗಾದೇವಿ
ಮಡಿ ಉಂಗುರ ಇಟ್ಟಾರ, ಮಾಂಗಲ್ಯ ಧರಿಸ್ಯಾರ
...................ರು ಸುಖವಾಗಿ ಇರಲೆಂದು ಹರಿಸ್ಯಾರ.

೫೬೮. ಪಾಂಡವರ ಸತಿ ದ್ರೌಪತಿ
ಕೌರವನ ಸತಿ ಭಾನುಮತಿ
ಹರಿಶ್ಚಂದ್ರನ ಸತಿ ತಾರಾಮತಿ
ನಮ್ಮ ............ ರಿಗೆ ನಾನಾದೆ ಧರ್ಮಸತಿ.

೫೬೯. ಧ್ರುವಕುಮಾರನು ತಪಸ್ಸಿಗೆ ಹೋದದ್ದು
ಮಲತಾಯಿಯ ಮಾತಿಗೆ ನೊಂದು
ಆ ಕಾಲಕ್ಕೆ ನಾರಾಯಣ ಮಂತ್ರ ಉಪದೇಶ ಮಾಡಿದಾ
ನಾರದ ಮುನಿವರನು ಬಂದು
................ರ ಹೆಸರು ಹೇಳುಲು ಆಶೀರ್ವದಿಸಿದನಿಂದು.

೫೭೦. ಧ್ರುವಕುಮಾರನು ತಪಸ್ಸಿಗೆ ಹೋದದ್ದು
ದೇವರನ್ನು ಹುಡುಕುವುದಕ್ಕಾಗಿ
..................ರ ಹೆಸರು ಹೇಳುವೆನು
ನಿಮ್ಮೆಲ್ಲರ ಹಟಕ್ಕಾಗಿ.

೫೭೧. ಧ್ರುವಕುಮಾರನು ತಪಸ್ಸು ಮಾಡಿದ್ದು ಮಧುವನ
ಆಗ ಪರಮಾತ್ಮನು ವರಕೊಡಲು
ಏರಿ ಬಂದದ್ದು ಗರುಡವಾಹನ
.....................ರ ಹೆಸರು ಹೇಳಲು
ನನಗೆ ಮನತುಂಬಿದಭಿಮಾನ.

೫೭೨. ಮೊಸರೀಗಂತ ಬರ್ತಾಳ ಗಾಮನಗಟ್ಟಿ ಗಂಗಿ
ಬೆಣ್ಣೀಗಂತ ಬರ್ತಾಳ ತುಮ್ಮಿನಕಟ್ಟಿ ತುಂಗಿ
ಮಜ್ಜಿಗಿಗಂತ ಬರ್ತಾಳ ಸಂಕನಕಟ್ಟಿ ಸಂಗಿ
ಹಾಲಿಗಂತ ಬರ್ತಾಳ ರಾಯಾಪೂರ ರಂಗಿ
ಯಾಕಾದ್ರೂ ಬರ್ತಿದ್ದಾಳು ರಂಗಿಯ ತಂಗಿ
ಮನ್ಯಾಗ ಹೈನಾ ಕಟ್ಟಿ ಮನೀಯೆಲಾ ನವರಂಗ ಮಾಡಿ
ಗುಂಗು ಹಿಡಿದು ಕುಂತಾನ
ಗುಂಗುರು ಕೂದಲಾ ತಿದ್ದಿಕೋತ
ನನಗ ಮಂಗಿ ಅಂತಾನ .....

೫೭೩. ಧರ್ಮದಲ್ಲಿ ಹೆಸರು ಪಡೆದವನೆ ಧರ್ಮರಾಯ
ಅವನ ರಾಜ್ಯದಲ್ಲಿ ಕಾಲಿಟ್ಟಿದ್ದಿಲ್ಲ ಕಲಿರಾಯ
...............ರ ಎತ್ತು ಈ ಸಾರೆ ಕರೀ ಹರಿದಿದ್ದಕ್ಕೆ ಬಂತು ತುರಾಯ.

೫೭೪. ಧರ್ಮರಾಯನು ಅಶ್ವಮೇಧಯಾಗ ಮಾಡುವುದಕ್ಕೆ
ಕೇಳಿಕೊಂಡನು ಪರಮಾತ್ಮನ ಅಪ್ಪಣೆ
............ರಿಗೆ ಕೇಳುವೆನು ತವರಿಗ್ಹೋಗಲು ಅಪ್ಪಣೆ.

೫೭೫. ಧರ್ಮವೇ ಜಯ ಕರ್ಮವೇ ಲಯ
ಶಾಂತಿಪಥವೇ ಶಿವಾಲಯ
................ರ ಪಾದವೇ ನನಗೆ ದೇವಾಲಯ.

೫೭೬. ನಳ ಚಕ್ರವರ್ತಿಯ ಅರ್ಧಾಂಗಿ ಪತಿವ್ರತೆ ದಮಯಂತಿ
ನಾನು ..........ರ ಹೆಸರು ಹೇಳುವೆನು ನಿಮ್ಮ ಸ್ಮರಣೆಗೆ ನನ್ನ ವಿನಂತಿ.

೫೭೭. ನವರಾತ್ರಿಯಲ್ಲಿ ತಿರುಪತಿಯ ತಿಮ್ಮಪ್ಪನಿಗೆ ತೊಡಿಸುವರು
ಬಣ್ಣ ಬಣ್ಣದ ಅಂಗಿ ತರ ತರದ ಶ್ರಿಂಗಾರ
ನನ್ನ ............... ರ ಹೆಸರೇ ನನಗೆ ಬಂಗಾರ.

೫೭೮. ನಂದನ ವನದಲ್ಲಿ ಹಂಸಪಕ್ಷಿಯ ಕೂಡ ಮಾತನಾಡಿದವಳು ದಮಯಂತಿ
..................ರ ಹೆಸರ ಹೇಳ್ತೀನಿ ಮಾಡಬೇಡಿರಿ ಗದ್ದಲದ ಸಂತಿ.

೫೭೯. ನೇಮಿನಾಥರು ಹುಟ್ಟಿದ್ದು ಶೌರಿಪುರ ನಗರದಲ್ಲಿ
ನಿರ್ವಾಣ ಹೊಂದಿದ್ದು ಗಿರಿನಾರ ಗಿರಿಯಲ್ಲಿ
..............ರ ಹೆಸರು ಹೇಳುವೆನು ಈ ಸುಮಧುರ ಸಂಜೆಯಲ್ಲಿ.

೫೮೦. ನೊಸಲಿಗೆ ವಿಭೂತಿಯೇ ಶೃಂಗಾರ
ಮುತ್ತೈದೆಗೆ ಕುಂಕುಮವೇ ಬಂಗಾರ
ನನಗೆ .............ರ ಪಾದಧೂಳಿಯೇ ಆಧಾರ.

೫೮೧. ಚಿನ್ನದ ಮಳೆಯಾದದ್ದು
ಮಹಾವೀರ ಹುಟ್ಟುವ ಪೂರ್ವದಲ್ಲಿ
ಹದಿನಾರು ಶುಭ ಸ್ವಪ್ನ ಬಿದ್ದದ್ದು
ತ್ರಿಶೂಲಾ ಮಾತೆಯಲ್ಲಿ
ಈ ಮಹಾಮಹಿಮರ ನೆನೆದು
............ರ ಹೆಸರು ಹೇಳುವೆ ನಿಮ್ಮ ಸಮ್ಮುಖದಲ್ಲಿ.

೫೮೨. ಹೊತ್ತೇರುತ್ತಲೇ ಹೊನ್ನಿನ ಮಳೆ ಬೀಳುವುದು ಪೂರ್ವ ದಿಕ್ಕಿನಲ್ಲಿ
................ರ ನೆನೆಯುತ್ತಲೇ ಉಕ್ಕುವುದು ಆನಂದ ನನ್ನ ಮುಖದಲ್ಲಿ.

೫೮೩. ಚಿನ್ನದಂಥಾ ಬೆಳದಿಂಗಳದಾಗ ಕುಂತಗೊಂಡು
ನನಗೂಡ ಚಕ್ಕಂದ ಹೊಡಿತಾರ ......

೫೮೪. ಅವರು ಕಾಮನಂಥವರು ನಾನು ರತಿಯಂತಾಕಿ
ರತಿ ಕೂಡ ರಂಗಿನಾಟಾ ಆಡ್ತಾರ .........

೫೮೫. ಕಲ್ಲು ಸಕ್ಕರೆ ಕೊಳ್ಳಿರೋ ಅಂದರು ದಾಸರು
ಪರಚಿಂತೆ ನಮಗೇಕಯ್ಯ ಎಂದರು ಶರಣರು
ಗಂಡ ಹೆಂಡರ ಜಗಳ ಪ್ರೀತಿಗಾಗಿ ಅಂದರು ಜನರು.
ಇದ ಓದಿ ನಮ್ಮ ...............ರು ಜಗಳ ಮಾಡುವುದ ಕಲಿತರು.

೫೮೭. ಆಕಾಶದಲ್ಲಿ ರಾತ್ರಿ ಹೊಳೆಯುವುದು ಆಕಾಶಗಂಗಿ
.................ರಿಗೆ ಬೆನ್ನುಬಿದ್ದಾಳ ಮಗ್ಗುಲಮನಿ ಸಂಗಿ.

೫೮೭. ಇಂದ್ರನ ಅಮರಾವತಿಯಲ್ಲಿ ದೇವತೆಗಳು ಹಾಡುತ್ತಾರೆ ತಾಳ ಹಾಕಿ
ನಮಪ್ಪ ಅವ್ವ ಕೊಟ್ಟಾರ ..............ರಿಗೆ ಹಾಲೆರೆದು ಸಾಕಿ.

೫೮೮. ಪದ್ಮಾವತಿಗೆ ತಕ್ಕವರನಾರೆಂದು
ಸಂಚಲವಾಗಿತ್ತು ಆಕಾಶರಾಜನ ಮನಸ್ಸು
ಶುಕ ಮುನಿಗಳ ವಚನದಂತೆ
ಶ್ರೀನಿವಾಸನಿಗೆ ಪದ್ಮಾವತಿಯನು ಕೊಟ್ಟು
ಆಕಾಶರಾಜ ತಾ ಪಡೆದ ಯಶಸ್ಸು
.............ರ ಹೆಸರು ಹೇಳುವೆನು ಬಾಗಿ ಶಿರಸ್ಸು.

೫೮೯. ಪರೀಕ್ಷಿತ ರಾಜನು ಭಾಗವತವನ್ನು ತಿಳಿದದ್ದೇ
ಶುಕಮುನಿಯನ್ನು ಕುರಿತು
ಪರೀಕ್ಷಿತ ರಾಜನು ಸಂತೋಷ ಹೊಂದಿದನು
ಭಗವತಿ ಕತೆಯ ಸಾರವನ್ನರಿತು
.................ರ ಹೆಸರು ಹೇಳುವೆನು
ಸ್ನಿಗ್ಧ ಪ್ರೇಮದಿ ಬೆರೆತು.

೫೯೦. ಫಲ್ಗುಣನನ್ನು ಮೂರ್ಚೆಗೊಳಿಸಿದನು ಬಭ್ರುವಾಹನ
.................ರಿಗೆ ಕಟ್ಟುವೆನು ನಾನಂದದಿ ಕಂಕಣ.

೫೯೧. ಕಿತ್ತೂರು ಚೆನ್ನಮ್ಮ ರಾಣಿಯೇ ಕರ್ನಾಟಕದ ವೀರಸತಿ
ಅವಳಿಗೆ ಮುಳುವಾಯ್ತು ದತ್ತಕದ ಕತಿ
.................ರೇ ನನಗೆ ಜನ್ಮ ಜನ್ಮಾಂತರದ ಪತಿ.

೫೯೨. ಪ್ರಲ್ಹಾದನು ಹರಿಪ್ರಿಯನಾದ್ದರಿಂದ
ಹಿರಣ್ಯಕಸ್ಯಪನಿಗೆ ಬಂತು ಬಲುಸಿಟ್ಟು
ಆಗ ಪರಮಾತ್ಮನು ಅವನನ್ನು ನಾಶ ಮಾಡಿದನು
ನರಸಿಂಹ ಅವತಾರ ತೊಟ್ಟು
ನಾನು .................ರ ಹೆಸರ ಹೇಳ್ತೀನಿ
ತಗೆಯಬೇಡಿರಿ ಕಸರು ಎಳ್ಳಷ್ಟು.

೫೯೩. ಪಾಂಡವ ಕೌರವರ ಯುದ್ಧದಲ್ಲಿ
ಧರ್ಮರಾಜ ತಾಳಿದ್ದ ಶಾಂತಿ
................ರ ಮುಖದ ಮೇಲಿರುವುದು
ಯಾವತ್ತೂ ವಜ್ರಕಾಂತಿ.

೫೯೪. ಪಾಂಡವರು ಅರಗಿನ ಅರಮನೆಯಿಂದ ಪಾರಾದದ್ದು ಯುಕ್ತಿಯಿಂದ
ನಾನು ............. ರ ಹೆಸರು ಹೇಳುವೆನು ಭಕ್ತಿಯಿಂದ.

೫೯೫. ಕರಿ ಎತ್ತು ಕಾಳಿಂಗ ಬಿಳಿ ಎತ್ತು ಮಾಲಿಂಗ
ಮೂಬೆರಕಿ ಎತ್ತು ಬಸಲಿಂಗ
ಬೆಳ್ಳಿಯ ಬಾರುಕೋಲು, ಬಂಗಾರ ಶೆಡ್ಡಿ
ಮುತ್ತು ವುಡಿಕಟ್ಟಿ ಹವಳಾ ಬಿತ್ತತಾರ ...........

೫೯೬. ಕಿವಿಯಾಗ ಮುರುವು ಚೆಂದ
ಕೊರಳಾಗ ಸರಾ ಚೆಂದ
ಹತ್ತೂ ಬಳ್ಯಾಗ ಉಂಗುರ ಚೆಂದ
ದುಂಡು ಮಾರ್‍ಯಾಗ ಕೋರಿ ಮೀಸಿ ಚೆಂದ
ಬಂಗಾರದಂತ ಹೇಣ್ತೀ ಕೂಡ ಚೆಕ್ಕಾ ಆಡತಾರ ....

೫೯೭. ಸತ್ಯದಲ್ಲಿ ನಡೆಯುವುದೇ ಶೀಲ
ಸತ್ಯದಲ್ಲಿ ನುಡಿಯುವುದೇ ಶೀಲ
................ರಿಗೆ ನನ್ನ ಸದಾಚಾರವೇ ಶೀಲ.

೫೯೮. ಅತಿ ಆಸೆ ಗತಿ ಗೆಡಿಸುವುದು
ಅತಿ ಮಾತು ಮಾರು ಹೊಲ ಕೆಡಿಸುವುದು
ತೂತು ಇದ್ದ ಗಡಿಗೆ ಒಲೆ ಕೆಡಿಸುವುದು
ನಮ್ಮ ........ರ ತಿರುಗಾಟ
ಮನೆ ಕೆಡಿಸುವುದು.

೫೯೯. ಕಾಯಕ್ಕೆ ಕರ್ಮವಾದರೆ ಚೆನ್ನ
ಜೀವಿಗೆ ಮೋಕ್ಷವಾಗುವುದೇ ಚೆನ್ನ
..............ರಿಗೆ ನನ್ನ ಪಾದಪೂಜೆಯೇ ಚೆನ್ನ.

೬೦೦. ಅರಿದೊಡೆ ಶರಣ ಮರೆದೊಡೆ ಮಾನವ
ಎಂದರು ಬಸವಣ್ಣನವರು
ಬಸವ ಹಾದಿಯಲ್ಲಿ ನಡೆದು
ಕೃಷಿ ಕಾಯಕದಲ್ಲಿ ಕೈಲಾಸ ಕಂಡರು ನನ್ನವರು .....

೬೦೧. ಪಾರ್ವತಿಗೆ ಗೌರಿಪೂಜೆ ಮಾಡಲು
ಪರಮೇಶ್ವರನು ತಂದು ಕೊಟ್ಟದ್ದು
ಕರ್ಪೂರ ತಿಲಕ
............ರ ಕೊರಳಲ್ಲಿ ನಾನು ಕಟ್ಟುವೆನು
ಬಂಗಾರ ಪದಕ.

೬೦೨. ಬಸವೇಶ್ವರರು ಐಕ್ಯವಾದದ್ದು
ಕೂಡಲಸಂಗಮದಲ್ಲಿ
ನಾನು ..............ರ ಹೆಸರು ಹೇಳುವೆನು
ಗುರು ಹಿರಿಯರ ಸಮ್ಮುಖದಲ್ಲಿ.

೬೦೩. ವಿಘ್ನಗಳನ್ನು ದೂರಮಾಡುವವನೇ ವಿಘ್ನೇಶ್ವರ
ನನ್ನ ಪೂಜೆಯ ಫಲವಾಗಿ
ನನಗೆ ದೊರೆತ .......ರೇ ನನಗೆ ಈಶ್ವರ.

೬೦೪. ಬ್ರಹ್ಮ ವಿಷ್ಣು ಮಹೇಶ್ವರರು ಬಾಲಕರಾಗಿ ಆಡಿದ್ದು
ಅತ್ರಿಮುನಿಗಳ ಆಶ್ರಮದಲ್ಲಿ
ನಾನು ನನ್ನ ಪತಿ ............ರ ಹೆಸರ ಹೇಳುವೆನು
ತುಂಬಿದ ಸಭೆಯಲ್ಲಿ.

೬೦೫. ಗೋಪಾಲ ಕದ್ದು ತಿಂದದ್ದು ಗೊಲ್ಲರ ಬೆಣ್ಣೆ
ನನ್ನ ..............ರ ಕೈಗೆ ಹಚ್ಚುವೆ ಸುಗಂಧದ ಎಣ್ಣೆ.

೬೦೬. ಬಾಹುಬಲಿ ರಾಜ್ಯವಾಳಿದ್ದು ಪೌದನಪುರದಲ್ಲಿ
...............ರ ಹೆಸರು ಹೇಳುವೆನು ಮಹಾಪುರುಷರ ಮನೆಯಲ್ಲಿ.

೬೦೭. ಬಾಹುಬಲಿ ನಿಂತದ್ದು ಚಂದ್ರಗಿರಿ
ಅದರ ಎದುರಿಗೆ ಹಬ್ಬಿದ್ದು ಇಂದ್ರಗಿರಿ
...........ರ ಹೆಸರ ಹೇಳುವೆನು
ಬೇಡ ಶಹಬ್ಬಾಸ ಗಿರಿ.

೬೦೮. ಬಾದಾಮಿ ರಾಜ್ಯ ಆಳಿದವನು ಸತ್ಯಾಶ್ರಯ ಪುಲಕೇಶಿ
ಸಮುದ್ರ ದಂಡೆಯಲ್ಲಿರುವ ಗೋಕರ್ಣವೇ ದಕ್ಷಿಣ ಕಾಸಿ
............ರ ಪೂಜೆಗೆ ಸಜ್ಜಗೊಳಿಸುವೆ ನಿತ್ಯ ಜರತಾರಿ ಪಾವುಡ ಹಾಸಿ.

೬೦೯. ಭೀಷ್ಮನು ಕುರುಕ್ಷೇತ್ರದಲ್ಲಿ ಮಲಗಿದ್ದು ಶರಪಂಜರದಲ್ಲಿ
..........ರ ಹೆಸರು ಹೇಳುವೆ ಭಕ್ತಿ ಭಾವದಿಂದ ಕಲ್ಯಾಣ ಮಂದಿರದಲ್ಲಿ.

೬೧೦. ಆನೆಯ ಮೇಲೆ ಹಾಕುವರು ಅಂಬಾರಿ
ಶಾಸ್ತ್ರೀಯ ಸಂಗೀತಕ್ಕೆ ಶೃತಿಗೆ ಬೇಕು ತಂಬೂರಿ
.............. ರಿಗೆ ನಾನೇ ಅಪರೂಪದ ಸುಂದರಿ.

೬೧೧. ಮಾತು ಮಲ್ಲಿಗಿ ಗುಣ ರುದ್ರಾಕ್ಷಿ
ತುಟಿ ತೊಂಡಿಹಣ್ಣು, ಹಲ್ಲು ದಾಳಿಂಬರ
ಮೂಗು ಸಂಪಗಿ ತೆನಿ, ಹುಬ್ಬು ಮಾವಿನ ಎಸಳು
ಚೆನ್ನೆಯರ ಕೂಡ ಚಕ್ಕಂದ ಆಡತಾರ ......

೬೧೨. ಮಾದೇವರ ಆಟ, ಮಲ್ಲಿಗಿ ಹೂವಿನ ತೋಟ
ನಾನಂದ್ರ .............ರಿಗೆ ಸಂಭ್ರಮದ ರಸದೂಟ.

೬೧೩. ನೂಲೂರಾಟಿ ಬಡವರ ಕಾಮಧೇನು
................ರೇ ನನ್ನ ಬಾಳಿನ ಜೇನು.

೬೧೪. ಮುಕ್ತಿ ಮಂದಿರದಲ್ಲಿ ಶಿವಪೂಜೆ ನಡೆಯುವುದು ಶಿವರಾತ್ರಿಗೊಮ್ಮೆ
..............ರ ಹೆಸರು ಹೇಳುವೆನು ತಾವು ಕೇಳಿದಾಗೊಮ್ಮೆ.

೬೧೫. ಮೇನಕೆಯ ನೃತ್ಯದಿಂದ ಭಂಗವಾಯಿತು ವಿಶ್ವಾಮಿತ್ರನ ತಪಸ್ಸು
................ರ ಕೂಡ ಒಂದಾಗಿ ಬಾಳುವುದೇ ನನ್ನೊಳಗಿನ ಕನಸು.

೬೧೬. ಬಾಗಲದಾಗ ಕಾಣಿಸತ್ತೈತಿ ಸುಂದರವಾದ ಗುಡ್ಡ
.............ರಿಗೆ ಇನ್ನೂ ಬಂದಿಲ್ಲ ಚಂದಾಗಿ ಗಡ್ಡ.

೬೧೭. ಧಾರವಾಡವು ವಿದ್ಯೇದ ತವರೂರು
ನಮ್ಮ .................ರ ಊರು ಇಲ್ಲೇ ನವಲೂರು.

೬೧೮. ನಂದನವನದಲ್ಲಿ ಕೂಗುವ ಕೋಗಿಲೆಯ ದನಿ ಚೆಂದ
................ರು ನನ್ನ ಹೆಸರಿನಿಂದ ಕರೆಯುವಾಗಿನ ಕಣ್ಣ್ ಚೆಂದ.

೬೧೯. ಜಗತ್ತಿನೊಳಗ ಮೆರೆಯುವುದು ಭರತಖಂಡ
ಅರ್ಜುನನೇ ಮಹಾಭಾರತದಲ್ಲಿ ಮೂರು ಲೋಕದ ಗಂಡ
................ರು ದಿನಾನೂ ಕೇಳಿದರೆ ಎಲ್ಲಿಂದ ತರಲಿ ಶ್ರೀಖಂಡ.

೬೨೦. ಸ್ಕೂಟರ ಬೇಡಿ ಸೆಟಗೊಂಡು ಹೋದ್ರು
ಮೋಟಾರ ಬೇಡಿ ಸ್ವಾಟಿ ತಿರುವಿದ್ರು
ನನ್ನ ನೋಡಿ ನಗತಾ ಬಂದ್ರು........

೬೨೧. ವರದಕ್ಷಿಣಕ ನೀಡಬಾರ್ದು ಪುರಸ್ಕಾರ
ಯಾರ್‍ಯಾರ ಕೇಳಿದ್ರೆ ಹೇಳಿರಿ ನಮಸ್ಕಾರ
............ರಿಗೆ ಅದು ಅಂದ್ರ ತಿರಸ್ಕಾರ.

೬೨೨. ಬಂದಾವ ಬಂಗಾರ ಗಿಣಿ
ಕಡದಾವ ಯಾಲಕ್ಕಿ ಗೊನಿ
ನಮ್ಮ ಕಣದಾನ ಮುತ್ತಿನ ತೆನಿ
................ರು ನನಗಂತ ತರತಾರ
ಚಿಟಗಬಾಳಿಗೊನಿ.

೬೨೩. ಬಾಳಿ ಇದ್ದ ಹೊಲ ಇಂಪು
ಬೇವಿನ ಗಿಡದ ನೆರಳ ಸಂಪು
ಮಲ್ಲಿಗಿ ಹೂವಿನ ತೋಟ ಕಂಪು
ನಮ್ಮ .............ರು ಇದ್ರ
ಮನೆ ತುಂಬಾ ರಂಪು.

೬೨೪. ಸಾರಿಗೆ ಹಾಕೋದು ಉಪ್ಪು
ಮಕ್ಕಳು ಮಾಡೋದು ತಪ್ಪು
ನನ್ನ .............. ರಿಗಿಂತ ನಾ ಬಲು ಕಪ್ಪು.

೬೨೫. ಅಂಗಡ್ಯಾಗ ನೋಡೀನ ಜೋಡಿನ ಮುತ್ತ
ಸಮುಂದರ ದಂಡ್ಯಾಗ ಅಂತಾದ್ದ ಇತ್ತ
...............ರಿಗೆ ಹೇಳಿದರ
ಏನಾರ ಕತಿ ಹೆಣಿತಾರ ನನ್ನ ಸುತ್ತ.

೬೨೬. ಸುಮಂಗಲೆಯರು ಮುಡಿಯೋದು ಮಲ್ಲಿಗೆ ಹೂವು
ದೇವರಿಗೆ ತರಿಸ್ತಾರ ಕಣಗಲ ಹೂವು
ನನ್ನ ............ ರಾಯರು ಹೊಲ್ತಾರ ಗುಲಾಬಿ ಹೂವು.

೭೨೭. ಗುರು ಹಿರಿಯ್ಯಾರು ಇದ್ದ ಮನಿ ಚೆಂದ
ಮನಿ ತುಂಬಾ ಮಕ್ಕಳು ಆಡೂದು ಚೆಂದ
ಒಕ್ಕಲಿದ್ದ ಊರು ಚೆಂದ
ಊರು ಮುಂದ ಹಳ್ಳ ಚೆಂದ
ಹಳ್ಳದ ವರತ್ಯಾಗ ನೀರ ಚೆಂದ
ನೀರು ತರುವ ಬೆಡಗ್ಯಾರು ಚೆಂದ
ಬೆಡಗ್ಯಾರ್ನ ಕರದು ಬಡಿವಾರ ಬಡಿಯುವ ನನ್ನ .........ರೇ ಚೆಂದ.

೭೨೮. ಯಶೋಧರಾ ದೇವಿ ಕೃಷ್ಣನ ತುಂಟತನಕ್ಕೆ
ಕಟ್ಟಿ ಹಾಕಿದಳು ಒಳಗೆ
............ರು ಕದ್ದು ಕೈ
ಡಿಚಗತಾರ ಮನೆಯೊಳಗೆ.

೭೨೯. ಯಮುನಾ ನದಿಯಲ್ಲಿ ಜಲಕ್ರೀಡೆ ಆಡುತ್ತಿದ್ದ ಗೋಪಿಯರಿಗೆ
ಸೀರೆಗಳು ಕಾಣದಾಗಲು ಬಿದ್ದಿತು ದಿಗಿಲು
ಆ ಕಾಲಕ್ಕೆ ಗಿಡದ ಮೇಲೆ ಕುಳಿತ ಕೃಷ್ಣ ತುಂಟನಗೆ ನಗಲು
ನಾನು ತವರಿನಿಂದ ಕಾಲಿಟ್ಟ ಕೂಡಲೇ ತೆರೆಯಿತು
ನಮ್ಮ ....................ರ ಸಂತೋಷದ ಬಾಗಿಲು.

೭೩೦. ಯಮುನಾ ತೀರದಲ್ಲಿ ಅಪ್ಸರೆಯರು ಮಾಡುತ್ತಿದ್ದರು ವಿನೋದ
ಆಗ ಅರ್ಜುನ ಗಂಧರ್ವರಿಗೆ ಆಯಿತು ವಾದ
.................ರ ಹೆಸರು ಹೆಳಿ ಪಡೆಯುವೆ ನಿಮ್ಮೆಲ್ಲರ ಆಶೀರ್ವಾದ.

೭೩೧. ರುಕ್ಮಾಂಗದನು ಸಾರಿದ್ದು ಏಕಾದಶಿಯ ಡಂಗುರ
................ರಿಗೆ ಕೊಡುವೆನು ನನ್ನೊಲುಮೆಯ ಉಂಗುರ.

೭೩೨. ರೂಪದಲ್ಲಿ ಮನ್ಮಥರು
ವಿನಯದಲ್ಲಿ ಪ್ರಮಥರು
ಜಯದಲ್ಲಿ ಅತಿರಥರು
..............ರು ನನ್ನ ಪ್ರೇಮದ ಮೂರ್ತಿ
ಘನ ಸಂಭಾವಿತರು.

೭೩೩. ರಾವಣನು ಸೀತೆಯನ್ನು ಕದ್ದು ಒಯ್ದದ್ದು ಕಪಟತನದಿಂದ
ಬಂಗಾರ ಚಿಗರಿಯನ್ನು ಕಂಡು ರಾಮನು ಹೋದದ್ದು ಮರವೆಯಿಂದ
ನಾನು ................. ರ ಹೆಸರು ಹೇಳುವೆನು ನನ್ನವರೆಂಬ ಅಭಿಮಾನದಿಂದ

೬೩೪. ರಾವಣನು ಸೀತೆಯನ್ನು ಕದ್ದು ಒಯ್ಯುವಾಗ ಹಾಕಿದ್ದು ಸನ್ಯಾಸಿ ರೂಪ
ರಾವಣನ ಹೊಡೆತದಿಂದಾಯಿತು ಜಟಾಯೂಗೆ ತಾಪ
ರಾಮಲಕ್ಷ್ಮಣರಿಗೆ ತಡೆಯದಾಯಿತು ಕೋಪ
ನಾನಿದ್ದರೆ ಸಾಕು ನನ್ನ ................ರಿಗೆ ಸುಗಂಧ ದೀಪ.

೬೩೫. ರಾವಣನು ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಒಯ್ಯುವಾಗ
ಅಡ್ಡಗಟ್ಟಿದ್ದು ಜಟಾಯು ಪಕ್ಷಿ
ನಾನು ................ ರ ಹೆಸರು ಹೇಳುದಕೆ ನೀವೇ ಸಾಕ್ಷಿ.

೬೩೬. ರಾವಣನ ಮುಂದೆ ವಾದ ಹಾಕಿದವನೇ
ಶ್ರೀರಾಮನ ದೂತನಾದ ಮಾರುತಿ
............. ರಿಗೆ ನನ್ನನ್ನು ಕೊಟ್ಟು
ತಂದೆ ತಾಯಿ ಪಡೆದರು ಸುಕೀರುತಿ.

೬೩೭. ರಾವಣನ ತಮ್ಮ ಶ್ರೀರಾಮನ ಭಕ್ತ ವಿಭೀಷಣ
ನಾನು .....................ರಿಗೆ ಹಚ್ಚುವೆನು ಅರಿಷಿಣ.

೬೩೮. ರಾಕ್ಷಸರ ಬಾಧೆಯನ್ನು ತಾಳಲಾರದೆ
ದೇವತೆಗಳು ಪರಮಾತ್ಮನಲ್ಲಿ ಇಟ್ಟರು ಮೊರೆ
ಆ ಕಾಲಕ್ಕೆ ಮಥುರಾಪುರಕ್ಕೆ ಕಂಸನೇ ದೊರೆ
ನನ್ನ ...........ರಿಗೆ ನಾನೇ ಪ್ರೇಮದ ಒಡತಿ
ಇದು ನನಗಂತೂ ಖರೆ.

೬೩೯. ಲವಕುಶರು ಸೀತೆಯ ಹೊಟ್ಟೆಯಲ್ಲಿ ಹುಟ್ಟಿ
ಬೆಳೆದದ್ದು ವಾಲ್ಮೀಕಿ ಆಶ್ರಮದಲ್ಲಿ
ನಾನು ................ರ ಹೆಸರು ಹೇಳುವೆನು
ಸ್ತ್ರೀಯರು ಸಭೆಯಲ್ಲಿ.

೬೪೦. ಹಿಂದಿ ಭಾಷೆಯಲ್ಲಿ ಕಲ್ಲಿಗೆ ಅನ್ನುವರು ಪತ್ಥರ
..................ರಿಗೆ ಹಚ್ಚುವೆ ಸುಗಂಧದ ಅತ್ತರ.

೬೪೧. ಲಕ್ಷ್ಮೀ ಇರುವುದು ಕಮಲದಲ್ಲಿ
ಕಮಲವಿರುವುದು ಸರೋವರದಲ್ಲಿ
.................ರು ಕಟ್ಟಿದ ಮಾಂಗಲ್ಯ
ಶೋಭಿಸುವುದು ನನ್ನ ಕೊರಳಲ್ಲಿ.

೬೪೨. ಹೆಣ್ಣು ಹೊನ್ನು ಮಣ್ಣು ಮಾಯೆ ಎಂದರು ಶರಣರು
ಸಕಲ ಆಶೆಪಾಸೆಗಳೆಲ್ಲ ಬೇಡ ಎಂದರು ನಮ್ಮ............ರು

೬೪೩. ಆರು ಸೇರು ಹಾಲು
ಮೂರು ಸೇರಿ ಸಕ್ಕರಿ
ಐದು ಸೇರು ಬಾದಾಮಿ
ಹಾಲು ಸಕ್ಕರಿ ಕುಡಿಯಂದ್ರ
ಕುಡಿಕಿ ಎತ್ತಿ ನೆಲಕ ಹೊಡಿತಾನ ............

೬೪೪. ಲಿಂಗ ಜಂಗಮ ಪೂಜೆ ಚೆಂದ
ಗಂಗೆ ಇದ್ದರೆ ತೋಟಚೆಂದ
................ರ ಮನಿಗೆ ನಾ ಇದ್ದರ ಚೆಂದ.

೬೪೫. ಸೂರ್ಯಪಾನ ಹೂ ತಿರುಗುವುದು
ಸೂರ್ಯನು ತಿರುಗಿದಾಂಗ
..........ರು ಮುಖ ತಿರುಗಿದತ್ತ ತಿರುಗತಾರ ನನ್ನತ್ತ
ನಾ ಸೂರ್ಯಪಾನದಾಂಗ

೬೪೬. ವಾಸುದೇವನು ಜನಿಸುವ ಕಾಲಕ್ಕೆ
ಮಥುರಾದಲ್ಲಿ ಬೆಳೆದವು ವಿಪುಲ ಧನ ಧಾನ್ಯ ಬೆಳೆ
.................ರ ಪ್ರೀತಿಯಿಂದ ನಾ
ಮಾಡಿಸಿಕೊಂಡೆ ಬಂಗಾರ ಬಳೆ.

೬೪೭. ವಿಶ್ವಾಮಿತ್ರನ ತಪ್ಪಸ್ಸನ್ನು ಭಂಗ ಮಾಡಿದವಳು
ಮೇನಕಾ ಎಂಬ ನಾರಾಂಗಿನಿ
..................ರ ಹೆಸರು ಹೇಳುವೆ ಅವರ ಅರ್ಧಾಂಗಿನಿ.

೬೪೮. ವಿಜಯನಗರವನ್ನು ಸ್ಥಾಪಿಸಿದವರು ವಿದ್ಯಾರಣ್ಯರು
ಅದನ್ನು ಬೆಳೆಸುತ್ತಾ ಪ್ರಸಿದ್ಧರಾದವರು ಹಕ್ಕಬುಕ್ಕರು
......ರಿಗೆ ಧಾರೆಯೆರೆದು ಕೊಟ್ಟ ನನ್ನ
ತಂದೆ ತಾಯಿಗಳೇ ಪುಣ್ಯವಂತರು.

೬೪೯. ಹಂಪೆಯ ವಿರೂಪಾಕ್ಷನ ಸಾನಿಧ್ಯದಲ್ಲಿ ಹರಿವುದು ತುಂಗಾ
ಕಾಸಿ ವಿಶ್ವೇಶ್ವರನ ಸಾನಿಧ್ಯದಲ್ಲಿ ಹರಿವ ಗಂಗಾ
............ರ ಮನೆತನದಲ್ಲಿ ವಂಶಗತ ಇರುವುದು ಸ್ನೇಹ ಸಂಗಾ.

೬೫೦. ವಿಷ್ಣುವಿಗೆ ಏರಿಸುವರು ತುಳಸಿ ಮಾಲಿ
ಮಾದೇವರಿಗೆ ಏರಿಸುವರು ಪತ್ರಿ ಮಾಲಿ
ನನ್ನ .............ರ ಪಾದಕ್ಕೆ ಏರಿಸುವೆ ಹೂವಿನ ಮಾಲಿ.

೬೫೧. ವಾಮನಮೂರ್ತಿ ಬಲಿಗೆ ಕೇಳಿದನು
ಮೂರಡಿ ಭೂಮಿ ದಾನ ಮಾಡೆಂದು
.................ರ ಹೆಸರು ಹೇಳುವೆನು
ನನ್ನ ಮಾಂಗಲ್ಯ ಸದಾಕಾಲ ಇರಲೆಂದು.

೬೫೨. ಬಣ್ಣದ ಕನ್ನಡಿಯ ಮೂಲಕ
ಬರುವ ಬೆಳಕು ಒಂದೇ
ನನ್ನ ಕುಂಕುಮ ಭಾಗ್ಯವೃದ್ಧಿಯಾಗಲೆಂದು
................ರ ಹೆಸರ ಹೇಳುವೆ ನಿಮ್ಮ ಮುಂದೆ.

೬೫೩. ನನ್ನವರಿಗೆ ಬೇಕಾಗಿರುವುದೇ ಒಂದು
ಅವರು ಕೇಳುವುದೇ ಇನ್ನೊಂದು
ಇಂಥ ನನ್ನ ಗಂಡನ ಹೆಸರು ಹೇಳಲು ನಾ ಮುಂದು .....

೬೫೪. ಸಂಸಾರದಲ್ಲಿ ನೂರೆಂಟು ತೊಡಕು
ತಿಳಿಯದಿದ್ದರೆ ಆಗುವುದು ನೂರೆಂಟು ಕೆಡುಕು
ನಮ್ಮ ............ ರ ಹೆಸರು ಹೇಳುವೆ
ನಿಮ್ಮೆಲ್ಲರ ಮುಂದೆ ಖಡಕು.

೬೫೫. ಸಹನೆ ಬೇಕು ಅದಕ್ಕೆ ಮಿತಿಯೂ ಬೇಕು
ಇದನ್ನರಿಯದವರು ಸರ್ವನಾಶಕ್ಕೆ ಅಣಿಯಾಗಬೇಕು
.............ರ ಹೆಸರು ಹೇಳುವೆನು ನೀವೆಲ್ಲ ಸಮಾಧಾನಿಯಾಗಿರಬೇಕು.

೬೫೬. ಸ್ವಾಮಿ ವಿವೇಕಾನಂದರು ಪ್ರಸಾರ ಮಾಡಿದರು
ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯ ದೃಷ್ಟಿ
............ರ ಸೌಂದರ್ಯಕ್ಕೆ ನೆದರು ತಾಗಲೆಂದು ತೆಗೆವೆನು ಕೆಟ್ಟ ದೃಷ್ಟಿ.

೬೫೭. ವೀರಶೈವ–ಮತೋದ್ಧಾರ ಮಾಡಿದವರು ಬಸವಣ್ಣನವರು
ನನ್ನ ಕೈಹಿಡಿದು ಉದ್ಧಾರ ಮಾಡಿದವರು ನನ್ನ .................. ರು

೬೫೮. ವೆಂಕಟೇಶನು ಪದ್ಮಾವತಿಯನ್ನು ನೋಡಿ
ಮೋಹಿಸಿದ್ದು ಅವಳ ರೂಪಕ್ಕಾಗಿ
ನಾನು ................ರ ಮೋಹಿಸಿದ್ದು
ಅವರ ಸಿಟ್ಟರಿಯದ ದರ್ಪಕ್ಕಾಗಿ.

೬೫೯. ಇಂದ್ರನಮರಾವತಿಯಲ್ಲಿ ತ್ರಿಲೋಕ ಸುಂದರಿಯರು ಮಾಡುವರು ನಾಚು
...........ರ ಹೆಸರು ಹೇಳುವುದೆಂದರೇನೇ ನನಗೆ ಪೇಚು.

೬೬೦. ಶಿವಪಾರ್ವತಿಯರ ಪ್ರೀತಿಯ ಮಗ ಗಣಪತಿ
ಗಣಪತಿ ಷಣ್ಮುಖನ ನಡುವೆ ಸತತ ಕಿತಾಪತಿ
ನಮ್ಮ ಮನೆಗೆ .............ರೇ ಕುಲಾಧಿಪತಿ.

೬೬೧. ಶ್ರವಣಬೆಳುಗೊಳದಲ್ಲಿರುವುದು ಭವ್ಯ ಬಾಹುಬಲಿಮೂರ್ತಿ
................ರ ಹೆಸರು ಹೇಳುವೆನು ಸ್ಮರಿಸುತ್ತ ಬಾಹುಬಲಿಯ ಕೀರ್ತಿ.

೬೬೨. ತಿರುಪತಿಯಲ್ಲಿ ಪ್ರಸಾದಕೆ ಬೇಕು ತಿಮ್ಮಪ್ಪನ ಲಾಡು
ಊರಿಗೆ ಹೊರಟಾಗ ಬೆಕ್ಕು ಎಡಕ್ಕೆ ಹಾಯ್ದರೆ ಕೇಡು
..............ರು ಹೊಲದಿಂದ ಬಂದಾಗ ನಾ ಇರದಿದ್ದರೆ ಮಾನಗೇಡು.

೬೬೩. ಶಿವಶರಣ ಶರಣೆಯರು ಕೂಡಿ ಚರ್ಚೆಮಾಡುವರು
ಅನುಭಾವ ಮಂಟಪದಲ್ಲಿ
.................ರ ಸಂಪತ್ತಿರುವುದೆಲ್ಲ ಸಂದುಕದಲ್ಲಿ.

೬೬೪. ಕೊಲ್ಲುವ ಧರ್ಮವ ಒಯ್ದು
ಒಲೆಯೊಳಗೆ ಇಕ್ಕು ಎಂದವನು ಸರ್ವಜ್ಞ ಕವಿ
..........ರಿಗೆ ಸರಿಯಾಗಿ ಊಟ ಇಕ್ಕದಿದ್ದರೆ
ಸೇರಿಸುವರು ನನ್ನ ಕತ್ತಲ ಗವಿ.

೬೬೫. ಭಾರತದ ಜನಸಂಖ್ಯೆ ನೂರಾರು ಕೋಟಿ
................ರು ಹೇಳಿದ್ದನ್ನು ನಾ ಹೋಗಲಾರೆ ಉಗುಳುದಾಟಿ.

೬೬೬. ನಮ್ಮ ಮಾತೃಭೂಮಿಯೇ ನಮಗೆ ಪುಣ್ಯಭೂಮಿ
.............ರಿಗೆ ಹೊಲಮನೆ ಊಳುವುದೇ ಕರ್ಮಭೂಮಿ.

೬೬೭. ಭಗೀರಥನ ಪ್ರಯತ್ನದಿಂದ ಗಂಗೆ ಭೂಮಿಗೆ ಬಂದಳು
.................ರ ಸ್ವಪ್ರಯತ್ನದಿಂದಾಗಿ ಲಕ್ಷ್ಮಿ ಮನೆಗೆ ಬಂದಳು.

೬೬೮. ಜಾತಿಹೀನರ ಮನೆಯ ಜ್ಯೋತಿ ತಾ ಹೀನವೆ ಎಂದರು ಸರ್ವಜ್ಞರು
.......ರ ಹೆಸರು ಹೇಳುವೆನು ಕೂಡಿದ ಹಿರಿಯರೇ ನನಗೆ ಜ್ಞಾನ ಸಂಪನ್ನರು.

೬೬೯. ಶಾಂತಿನಾಥರ ಕಾಲದಲ್ಲಿ ಮಹಾರೋಗ ನಾಶವಾದದ್ದು ಅವರಿಂದ
.........ರನ್ನು ಮನಸಾರೆ ಹೊಗಳಿ ಪ್ರೀತಿಸುವೆ ಅವರ ಓರೆ ನೋಟದಿಂದ.

೬೭೦. ಶಿವಚಿದಂಬರೇಶ್ವರನು ಭಕ್ತ ರಾಜಾರಾಮನ ಸಂತ
................ರ ಹೆಸರು ಹೇಳುವೆನು ಇನ್ನಾದರೂ ಇರ್ರಿ ಶಾಂತ.

೬೭೧. ಹೆಣ್ಣು ಮಕ್ಕಳು ಕಲಿಯಬೇಕು ಸಾಲಿ
...............ರ ಹೆಸರು ಹೇಳುವೆ ಸಾಕು ಮಾಡಿರಿ ಗೇಲಿ.

೬೭೨. ಭಾರತದಲ್ಲಿ ಸುಪ್ರಸಿದ್ಧವಾದ ದರ್ಶನಗಳು ಆರು
.............ರು ಮಾಡುವರು ಊರಿನ ಕಾರುಭಾರು.

೬೭೩. ಮಾತು ಮುತ್ತು ಮೌನ ಬಂಗಾರವಾಗಿರಬೇಕು
............ರಿಗೆ ಮುತ್ತಿಗಿಂತ ಹೊತ್ತು ಉತ್ತಮವಾಗಿರಬೇಕು

೬೭೪. ಶ್ರೇಯಾಂಕನಾಥ ಹನ್ನೊಂದನೇ ತೀರ್ಥಂಕರ
ಇವರ ಜನ್ಮವಾದದ್ದು ಸಿಂಹಪುರಿ ನಗರ
ನಿರ್ವಾಣವಾದದ್ದು ತಮ್ಮೂರು ಶಿಖರ
...............ರು ಕೊಟ್ಟ ಮಾಂಗಲ್ಯವೇ ನನಗೆ ಶೃಂಗಾರ.

೬೭೫. ಬಡೂರು ದುಡಿದು ತಿಂತಾರ
ಸಿರಿವಂತರು ಕುಂತ ತಿಂತಾರ
ಕಾರ್ಮಿಕರು ನಿಂತ ತಿಂತಾರ
ಕಳ್ಳರು ಕೊಳ್ಳಿ ಹೊಡದ ತಿಂತಾರ
ರಾಜಕಾರಣಿ ಬಡದ ತಿಂತಾರ
ನಮ್ಮ .........ರು ಅತ್ತೇ ಮಾತ ಕೇಳಿ
ದಿನಾ ನನ್ನ ಜೀವಾ ತಿಂತಾರ.

೬೭೬. ಶ್ರೀಕೃಷ್ಣನು ಗೋಪಿಕಾಸ್ತ್ರೀಯರನ್ನು ಮಾಡಿದ್ದು ಮರುಳು
ನಾ ............ ರ ಕೈಯಾಗಿಡುವೆ ನೀಲಿ ವಜ್ರದ ಹರಳು.

೬೭೭. ಶ್ರೀಕೃಷ್ಣನು ಯಮುನಾ ತೀರದಲ್ಲಿ
ಬಾಲೆಯರ ಸೀರೆ ಕದ್ದು ಊದಿದ್ದು ಕೊಳಲು
ನಮ್ಮ ..........ರಿಗೆ ಚಂದ ಕೇದಗೆ ಹೆಣೆದ ನನ್ನ ಹೆರಳು.

೬೭೮. ಶ್ರೀಕೃಷ್ಣನ ಅಣ್ಣ ಬಲರಾಮ
ರೇಣುಕೆಯ ಮಗ ಪರಶುರಾಮ
..................ರು ಸೇರಿದ
ಪಂಥದ ಹೆಸರು ಹರೆನಾಮ.

೬೭೯. ಕಾಂಗ್ರೆಸ್ಸಿಗರು ಒಂದು ದಿನ ಹಾಕುತ್ತಾರೆ
ಗಾಂಧಿ ಟೋಪಿ ಸ್ವಾತಂತ್ರ್ಯ ದಿನಾ
ಆಮೇಲೆ ಮಂದಿಗೆ ಹಾಕುತ್ತಾರೆ
ಟೋಪಿ ಅಧಿಕಾರ ಇರುವಷ್ಟು ದಿನಾ
......ರು ಹಾಕುತ್ತಾರೆ ಕರೆ ಟೋಪಿ,
ತಗೆಯುತ್ತಾರ ಹರಿದ ಒಂದ ದಿನಾ.

೬೮೦. ಕನ್ನಡನಾಡು ಉಳಿದರೆ ಕನ್ನಡ ಉಳಿಯುತ್ತದೆ
ದೇಶ ಭದ್ರವಾದರೆ ನಾವು ಉಳಿಯುತ್ತೇವೆ
............ರು ಸುಬವಾಗಿದ್ದರೆ ನಾವೆಲ್ಲ ಸುಖವಾಗಿರುತ್ತೇವೆ.

೬೮೧. ಒಂದು ಬೇಕು ಎರಡು ಸಾಕು ಎಂದಿತು ಸರಕಾರ
.............ರು ಎಳ್ಳಷ್ಟೂ ಮಾಡಲಿಲ್ಲ ಅದಕ್ಕೆ ದರಕಾರ.

೬೮೨. ಚುನಾವಣೆಯಲ್ಲಿ ಮತಕ್ಕಾಗಿ ಹಂಚುವರು ಬಿಸಿ ಬಿಸಿ ನೋಟು
.............ರಿಗೆ ಗೊತ್ತು ನೋಟಿಗಿಂತ ಮತಕ್ಕೇ ಹೆಚ್ಚು ರೇಟು.

೬೮೩. ಮಹಾತ್ಮಗಾಂಧಿಯವರು ಆಂಗ್ಲರೊಡನೆ ನಡೆಸಿದರು
ಅಸಹಕಾರ ಚಳುವಳಿ
ಭಾರತಕ್ಕೆ ಸಿಕ್ಕಿತು ಸ್ವಾತಂತ್ರ್ಯ ಬಳುವಳಿ
ನಮ್ಮ .............ರ ಪಾದಸೇವೆಯೇ ನನ್ನ ಕಳಕಳಿ.

೬೮೪. ಅರಸಿಕೇರ್ಯಾಗ ಸಿಗೋದು ಖೊಬ್ರಿ ಎಣ್ಣೆ
..........ರು ಹಚ್ಚೋದು ಗಂಧದ ಎಣ್ಣೆ.

೬೮೫. ಗೋಧಿಹಿಟ್ಟಿನಿಂದ ತಯಾರಾಗೂದು ಗುಳ್ಳೆಡಕಿ ಉಂಡಿ
..........ರು ನನ್ನ ಕರೆಯಾಕ ತರತಾರ ಕೊಲ್ಲಾರಿ ಬಂಡಿ.

೬೮೬. ಸ್ವಾದರಮಾವಾ ಸಾಹಿದನಾಯಿಒಂದs ಅಂತಾರ ಜನಾ
ನನ್ನ ...........ರು ಹಾಂಗಿಲ್ಲ ಒಪ್ಪಬೇಕಲ್ಲ ನನ್ನ ಮನಾ.

೬೮೭. ಕೂಸು ಕುಂಚಿಗೆ ತಿಂತು
ಹಾಸಿಗೆ ನೆಲಾ ತಿಂತು
............ರು ದುಡಿದಿದ್ದಕ್ಕೆ
ನಮ್ಮನಿಗೆ ಬಂಗಾರ ಬಣ್ಣ ಬಂತು.

೬೮೮. ಚೂರು ಭೂಮಿ ಕೊಡದ ದುರ್ಯೋಧನ ಕೆಟ್ಟಾ
ಹಂಗಿಲ್ದ ದ್ರೌಪದಿ ಸೀರಿ ಸೆಳದು ದುಶ್ಶಾಸನ ಕೆಟ್ಟಾ
ದಯಾಮಯಿ ಸೀತಾನ್ನ ಕದ್ದು ರಾವಣ ಕೆಟ್ಟಾ
ಬಿಟ್ಟ ಬಾಣ ಬಿಡೆನೆಂದ ಕರ್ಣ ಕೆಟ್ಟಾ
ದುಷ್ಟ ಕೌರವರ ಪಕ್ಷಾ ಹಿಡದು ಧೃತರಾಷ್ಟ್ರ ಕೆಟ್ಟ
ನಮ್ಮ ............. ರಾಯರ ಹೆಸರು ಕೇಳಿದವರ ಹೆಡಮುರಿಗೆ ಕಟ್ಟಾ.

೬೮೯. ಭಾರತದ ಬಹಳ ದೊಡ್ಡ ತ್ರಿರಂಗ ಧ್ವಜವಿರುವುದು ದಿಲ್ಲಿಯಲ್ಲಿ
..............ರ ಹೆಸರು ಹೇಳುವೆನು ನಿಮ್ಮೆಲ್ಲರ ಸಮ್ಮುಖದಲ್ಲಿ.

೬೯೦. ಗಾಂಧೀಜಿ ಗುಂಡಿಗೆ ಬಲಿ ಆದದ್ದು ೧೯೪೮ರಲ್ಲಿ
ಅವರ ನೆನಪಿಗೆ ಹುತಾತ್ಮದಿನ ಆಚರಿಸುವುದು ಜನೆವರಿ ೩೦ರಲ್ಲಿ
ನಾನು ...........ರ ಹೆಸರು ಹೇಳುವೆನು ನನ್ನತ್ತೆ ಮಾವಂದಿರ ಸ್ಮರಣೆಯಲ್ಲಿ.

೬೯೧. ಕಿತ್ತೂರು ಹೆಸರಾಗಿರುವುದು ಚೆನ್ನಮ್ಮ ರಾಣಿಯಿಂದ
ಉಳ್ಳಾಲ ಹೆಸರುವಾಸಿಯಾಗಿರುವುದು ಅಬ್ಬಕ್ಕ ರಾಣಿಯಿಂದ
..............ರ ಹೆಸರು ಹೇಳುವೆನು ಹಿರಿಯರ ದಯೆಯಿಂದ.

೬೯೨. ರೈತರಿಗೆ ಸಾವಯವ ಒಕ್ಕಲುತನ ಶ್ರೇಷ್ಠ
ಅಡಿಗೆ ಮಾಡಲು ಮಣ್ಣಿನ ಗಡಿಗಿಯೇ ಶ್ರೇಷ್ಠ
............ರು ಮನೆತನ ಇಡಿ ನಾಡಿನಲ್ಲಿ ಶ್ರೇಷ್ಠ.

೬೯೩. ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಅಂದರು ಶರಣ ದಾಸಿಮಯ್ಯನವರು
ಕಣದಲ್ಲಿ ಬಡವರಿಗೆ ಕಾಳು ದಾನಮಾಡುವವರು ನಮ್ಮ .......ರು.

೬೯೪. ಕ್ಯಾವಿ ಉಟ್ಟವರೆಲ್ಲ ಸನ್ಯಾಸಿಗಳಲ್ಲ
ಲಿಂಗ ಜಂಗಮ ಪೂಜೆ ಮಾಡಿದವರೆಲ್ಲ ಭಕ್ತರಲ್ಲ
ನಮ್ಮ........ರು ಕಾರುಪೂಜೆ ಮಾಡುವುದೆಲ್ಲ ಭಕ್ತಿ ಭಾವದಲ್ಲಿ.

೬೯೫. ಶ್ರೀಕೃಷ್ಣನು ದೇವಾಸುರರಿಗೆ ಅಮೃತವನ್ನು ಹಂಚಿದನು
ಮೋಹಿನಿ ರೂಪ ತೊಟ್ಟು
.................ರು ಹಟಮಾಡಿದರೆ ನನಗಿಲ್ಲ ಸಿಟ್ಟು.

೬೯೬. ಆನೆಗಳ ನೀರಾಟದಲ್ಲಿ ಆದವು ನದಿಯ ನೀರು ಕಲಕ
.............ರಿಗೆ ಭಕ್ತಿಯಿಂದ ಹಚ್ಚುವೆ ಗಂಧದ ತಿಲಕ.

೬೯೭. ಹಸಿರು ಕ್ರಾಂತಿಗಾಗಿ ಸಾರಿದರು ಡಂಗುರ
ಕಾಡು ಮಾಯವಾಗಿ ಆದವು ಮನೆಯ ಜಂಗುಳ
............ರಿಗೆ ಸಾವಯವ ಕೃಷಿ ತಂದು ಕೊಟ್ಟರೆ ಸರ್ವಮಂಗಳ.

೬೯೮. ಹೆಣ್ಣು ಹಡೆದರೆ ತಂದೆ ತಾಯಿ ಆಗುವರು ಮಂಕ
ಗಂಡು ಹಡೆದರೆ ಮಾಡುವರು ಬಲು ಬಿಂಕ
..........ರ ಕೂಡ್ರಿಸಿ ಹೇಳುವೆ ಹೇರಬೇಕು ಇಂಥವರಿಗೆ ಸುಂಕ.

೬೯೯. ಕೃಷ್ಣ ಹುಟ್ಟುವಕಾಲಕ್ಕೆ ದೇವತೆಗಳು ಸುರಿಸಿದರು ಪುಷ್ಪ ವೃಷ್ಟಿ
ನಮ್ಮ ...............ರ ಚೆಲುವಿಕೆಗೆ ಬೀಳಬಾರದು ಕೆಟ್ಟ ದೃಷ್ಟಿ.

೭೦೦. ಶ್ರೀಕೃಷ್ಣನ ಕೃಪಾ ಪ್ರಸಾದದಿಂದ ಸಾಂಗವಾಯಿತು
ಯುದಿಷ್ಠರನ ಅಶ್ವಮೇಧ ಯಜ್ಞ
...........ರ ಹೆಸರು ಹೇಳುವೆನು ಬೇಕು ನಿಮ್ಮ ಆಜ್ಞೆ.

೭೦೧. ಪಂಚವಟಿ ದಂಡಕಾರಣ್ಯ ಹೆಸರಾದದ್ದು
ರಾಮ ಲಕ್ಷ್ಮಣ ಸೀತಾ ಅಲ್ಲಿ ತಂಗಿದ್ದರಿಂದ
............ರ ಹೆಸರು ಹೇಳುವೆ ಅವರ ಮೇಲಿನ ಪ್ರೀತಿಯಿಂದ.

೭೦೨. ಶ್ರೀರಾಮಚಂದ್ರನು ಸೀತೆಯನ್ನು ರಕ್ಷಿಸಲು ಮಾಡಿದನು ಪ್ರತಿಜ್ಞೆ
..........ರು ತಿಳಿದುಕೊಳ್ಳುವರು ನಾ ಮಾಡಿದ ಸಂಜ್ಞೆ.

೭೦೩. ಲಕ್ಷ್ಮಣನು ಮೂರ್ಛೆ ಹೋದಾಗ
ಹನುಮಂತನು ವನಸ್ಪತಿಗಾಗ ತಂದದ್ದು ಪರ್ವತ
ನಮ್ಮ ...........ರ ಹೆಸರು ಹೇಳುವೆನು
ನನಗಿರಲಿ ಮಾಂಗಲ್ಯ ಶಾಶ್ವತ.

೨೦೪. ಶ್ರೀರಾಮಲಕ್ಷ್ಮಣರನ್ನು ಗಂಗಾನದಿಯಿಂದ
ಪಾರು ಮಾಡಿದ್ದು ಪವಿತ್ರವಾದ ನಾವೆ
............ರ ಹೆಸರು ಹೇಳುವೆ
ನನಗೆ ಮೀಸಲಾಗಿರಲಿ ಅವರ ಸೇವೆ.

೨೦೫. ಭಾರತಮಾತೆಯ ತಲೆ ಮಣೆಯಂತೆ ಒಪ್ಪುವುದು ಕಾಶ್ಮೀರ
ನನ್ನ ............ರು ನನ್ನ ಮೂಗಿತಿಗೆ ತಂದಾರ ನಿತ್ಯ ಶೃಂಗಾರ.

೨೦೬. ಅಂಗಿಮ್ಯಾಲ ಅಂಗಿ ಚೆಂದಲ್ಲ
ಕಣಗಲ ಹೂ ದಂಡಿ ಶುಭ ಅಲ್ಲ
ನನ್ನ ಮ್ಯಾಲ ನಮ್ಮ ..........ರು ರಂಭಿತರುವುದು ತರವಲ್ಲ.

೨೦೭. ಗಡಗಿ ಮ್ಯಾಲ ಗಡಗಿ ಇಟ್ರ ಅಡಕಲ ಗಡಿಗಿ ಅಂತಾರ
.............ರು ಜಳಕ ಮಾಡಿರಿ ಅಂದ್ರ ನನ್ನೋಡಿ ನಗತ ನಿಂತಾರ.

೨೦೮. ಗಾಡಿಹಳಿಗೆ ಹಾಕುವರು ಸ್ಲೀಪರು
............ರಿಗೆ ಓದಲು ಕೊಡುವೆ ನ್ಯೂಜ್ ಪೇಪರು.

೨೦೯. ಪಾರ್ವತಿ ಪತಿ ಪರಮೇಶ್ವರ
ರಾವಣನಿಗೆ ಕೊಟ್ಟನು ಆತ್ಮಲಿಂಗದ ವರ
...........ರಿಗೆ ಹಾಕುವೆನು ಚಪಲ ಹಾರ.

೨೧೦. ಲಕ್ಷ್ಮಿಯ ಮನಸ್ಸು ಚಂಚಲ
.............ರಿಗೆ ಕೊಡುವೆ ಹೂವಿನ ಗೊಂಚಲ.

೨೧೧. ಘಟೋತ್ಕಚನು ಕುರುಕ್ಷೇತ್ರ ಯುದ್ಧದಲ್ಲಿ ಮಾಡಿದನು ಚಮತ್ಕಾರ
.....ರಿಗೆ ದಿನನಿತ್ಯ ಬೇಕು ಬಿಳಿ ಜ್ವಾಳದ ರೊಟ್ಟಿ ಕಿರಕ ಸಾಲಿ ಪಲ್ಲೆ ಮನಾರ.

೨೧೨. ಅತಿ ಆಶೆ ಮಾಡಿದವನಿಗಿಲ್ಲ ಕೊನೆಗೆ ಯಶಸ್ಸು
........ರೊಂದಿಗೆ ನಾನು ತೋಟಕೆ ಹೊಂಟರೆ
ಬರುವುದು ಭಾರಿ ಹುಮ್ಮಸ್ಸು.

೨೧೩. ಹುಟ್ಟಿ ಬೆಳೆದದ್ದು ಒಂದು ಮನೆ
ಲಗ್ನವಾಗಿ ಇದ್ದದ್ದು ಮತ್ತೊಂದು ಮನೆ
ನನ್ನ ............ ರೊಂದಿಗೆ ನಾನಿರುವುದು ಅರಮನೆ.

೭೧೪. ನಳರಾಜನು ತಮ್ಮನಾದ ಪುಷ್ಕರನಿಂದ ಸೋತನು
ಜೂಜಾಟದ ಸ್ಪರ್ಧೆಯಲ್ಲಿ
ಸತಿ ದಮಯಂತಿಯನ್ನು ಕಳೆದುಕೊಂಡ ಅಡವಿಯಲ್ಲಿ
ನಾನು .............ರ ಹೆಸರು ಹೇಳುವೆನು
ಈ ಸುಂದರ ಹಂದರಲ್ಲಿ.

೭೧೫. ಶ್ರೀವೆಂಕಟೇಶ್ವರನು ತನ್ನ ಅರಸಿಯನ್ನು ಕರೆತರಲು
ಹೇಳಿದನು ಸೂರ್ಯದೇವನನ್ನು ಕರೆಯಿಸಿ
ಆಗ ಸೂರ್ಯದೇವ ಹೊರಟನು ತನ್ನ ರಥ ಸಿಂಗರಿಸಿ
...........ರ ಹೆಸರು ಹೇಳುವೆನು ಗಣಪತಿ, ಸರಸ್ವತಿಯರನ್ನು ಸ್ಮರಿಸಿ.

೭೧೬. ದಶರಥನು ಶ್ರೀರಾಮಚಂದ್ರನಿಗೆ ಕಟ್ಟಬಯಸಿದ
ಯುವರಾಜಪಟ್ಟ
ಆಗ ಪ್ರಜೆಗಳೆಲ್ಲ ಕುಣಿದಾಡಿದರು
ಸಂತೋಷಪಟ್ಟು
ನಾನು ...........ರ ಹೆಸರು ಹೇಳುವೆ
ತಾಂಬೂಲ ಕೊಟ್ಟು.

೭೧೭. ಶ್ರೀರಾಮನಿಗೆ ಪ್ರೀತಿಯಿಂದ
ಎರಚಲ ಹಣ್ಣು ತಿನಿಸಿದಳು ಶಬರಿ
................ರ ಹೆಸರು ಹೇಳುವೆನು
ಪ್ರಶಾಂತಗೌಡರ ಕುವರಿ.

೭೧೮. ಶ್ರೀರಾಮಚಂದ್ರನು ಜನಕರಾಜನ ಮನೆಯಲ್ಲಿ
ಬಿಲ್ಲು ಮುರಿದದ್ದು ಸೀತೆಯ ಸಲುವಾಗಿ
ನಾನು ............ ರ ಹೆಸರು ಹೇಳುವೆನು ನಿಮ್ಮ ಪ್ರೀತಿಗಾಗಿ.

೭೧೯. ಸಾವಿತ್ರಿಯು ಯಮನೊಂದಿಗೆ ವಾದ ಮಾಡಿ
ಪತಿಯನ್ನು ಮರಳಿ ಪಡೆದ ಪತೀವ್ರತೆ
ನಾನು ..........ರಿಗೆ ದೀರ್ಘಾಯುಷ್ಯ ಕೊಡಲೆಂದು
ದೇವರಲ್ಲಿ ಬೇಡುವೆ ಸದ್ಗತಿ.

೭೨೦. ಅಗಸನ ಮಾತನ್ನು ಕೇಳಿ
ಸೀತೆಯನ್ನು ಕಾಡಿಗೆ ಕಳಿಸಿದ ರಾಮಚಂದ್ರ
............ರ ಹೆಸರು ಹೇಳುವೆನು
ನನ್ನವರೇ ನನಗೆ ಇಂದ್ರ ಚಂದ್ರ.

೭೨೧. ಶ್ರೀಥಲನಾಥರು ಹುಟ್ಟಿದ್ದು ಬುದ್ದೇಲ ನಗರದಲ್ಲಿ
ಜನ್ಮವಾದದ್ದು ಮಾಘ ಬಹುಳ ದ್ವಾದಶಿಯಲ್ಲಿ
ನಾನು ................ರ ಹೆಸರು ಹೇಳುವೆನು ತ್ರಯೋದಶಿಯಲ್ಲಿ.

೭೨೨. ಸೀತೆಯು ಪರ್ಣಕುಟಿಯಲ್ಲಿ ಇಲ್ಲದ್ದನ್ನು ಕೇಳಲು
ಬಲು ಶೋಕ ಮಾಡಿದನು ಶ್ರೀರಾಮ
ಆಗ ಆಕಾಶದಿಂದ ಆಯಿತು ಹನುಮಂತನ ಆಗಮನ
.............ರ ನೆನಪಿಗೆ ಬರೆದಿರುವೆ ಪ್ರೇಮ ಕವನ.

೭೨೩. ಸುಭದ್ರೆಯನ್ನು ದುರ್ಯೋದನನಿಗೆ ಕೊಡಬೇಕೆಂಬುದು
ಹೇಳಿತು ಬಲರಾಮನ ಒಳ ಮನಸ್ಸು
ಆದರೆ ಶ್ರೀಕೃಷ್ಣನ ಅಪ್ಪಣೆಯಂತೆ ಸುಭದ್ರೆಯು
ಅರ್ಜುನನಿಗೆ ಮಾಲೆ ಹಾಕಿ ಪಡೆದಳು ಯಶಸ್ಸು
.............ರ ಪಾದಸೇವೆಯಲ್ಲಿ ಅರ್ಪಿಸಿರುವೆ ನನ್ನ ಮನಸ್ಸು.

೭೨೪. ಸುರಾಸುರರು ಭೂಮಿಯನ್ನು
ಕಡಗೋಲು ಮಾಡಿ ಕಡೆದರು ಕಡಲು
ನಾನು ...........ರ ಕೈಹಿಡಿದು ಪೇಳುವೆನು
ಸುಖದುಃಖದಾ ಮಡಿಲು.

೭೨೫. ಅಣ್ಣೀಗೇರ್‍ಯಾಗ ಮೊಣಕಾಲ್ಮಟ ಎಣ್ಣಿ ಅಂತಾರಾ
ಅಲ್ಲಿ ಸಾಲಗಟ್ಟಿದ ತಲೆಬುರುಡ್ಯಾಗಿ ಮನಸ್ಯಾರು ಕುಂತಾರ
ನಮ್ಮ ......... ರಾಯರು ಥೇಟ್ ಅವರವ್ವನ್ನ ಹೋತಾರ.

೭೨೬. ನನ್ನ ಹೆಸರು ಹೆಸರಕಾಯಿ
..............ರಿಗೆ ಬಲು ಪ್ರೀತಿ ಕರ್ಚಿಕಾಯಿ.

೭೨೭. ಸೂರ್ಯನಾರಾಯಣನಿಂದಲೇ ಲೋಕಕ್ಕೆ ಆರೋಗ್ಯ
ನನಗೆ ............ರಿಂದಲೇ ಸಕಲ ಸೌಭಾಗ್ಯ.

೭೨೮. ಶಿವನ ಪ್ರಪಂಚದಾಟ ಸಂಪಗಿ
ಹೂವಿನ ತೋಟ
.................ರು ಮಾಡುವುದು
ಮಕ್ಕಳೊಡನೆ ಮುಟ್ಟಾಟ.

೭೨೯. ವರದಕ್ಷಿಣೆ ಬೇಡಲಿಲ್ಲ
ಕೊಡುಕೊಳಿ ಕೇಳಲಿಲ್ಲ
..................ರು ನನಗಾಗಿ ಛಲ ಬಿಡಲೇ ಇಲ್ಲ.

೭೩೦. ಶ್ರೀರಾಮನು ಮೆಚ್ಚಿದನು ಅಳಿಲು ಸೇವೆಗೆ
................ರು ಮೆಚ್ಚಿದರು ನನ್ನ ಸೇವೆಗೆ.

೭೩೧. ಜೀವನ ಎನ್ನುವುದು ಮುಳ್ಳಿನ ಹಾಸಿಗೆ
ನನ್ನ ........... ರಾಯರ ಬಾಳೇ ಹೂವಿನ ಹಾಸಿಗೆ.

೭೩೨. ಸಿರಸಿಯಲ್ಲಿ ನಡೆಯುವುದು ಮಾರಿಕಾಂಬಾ ಜಾತ್ರೆ
ಸವದತ್ತಿಯಲ್ಲಿ ನಡೆಯುವುದು ಎಲ್ಲಮ್ಮನ ಜಾತ್ರೆ
ಮೈಲಾರದಲ್ಲಿ ನಡೆಯುವುದು ಮೈಲಾರಲಿಂಗನ ಜಾತ್ರೆ
ಬಾದಾಮಿಯಲ್ಲಿ ನಡೆಯುವುದು ಬನಶಂಕರಿ ಜಾತ್ರೆ
ಹಂಪಿಯಲ್ಲಿ ನಡೆಯುವುದು ವಿರೂಪಾಕ್ಷನ ಜಾತ್ರೆ
ಕೋಡಿಕೊಪ್ಪದಲ್ಲಿ ನಡೆಯುವುದು ಹುಚ್ಚೀರಪ್ಪಜ್ಜನ ಜಾತ್ರೆ
............ರು ನಾನು ಹೋಗಿಬಂದದ್ದು ಕಳಕಪ್ಪನ ಜಾತ್ರೆ.

೭೩೩. ಶಿವನು ತಾಂಡವ ನೃತ್ಯ ಮಾಡುವನು ಕೈಲಾಸ ಗಿರಿಯಲ್ಲಿ
.............ರು ಭತ್ತ ಬೆಳವರು ಬಂಗಾರ ಭೂಮಿಯಲ್ಲಿ.

೭೩೪. ಮಕ್ಕಳನ್ನ ಬಡದು ಮರುಗತಾರ
ರಮಿಸಿ ಕರದು ಬೆಲ್ಲಾ ಕೊಡತಾರ
ನನ್ನ ಹಿಡದು ಹಿಗ್ಗಿ ಹೀರೆಕಾಯಿ ಆಗತಾರ ....

೭೩೫. ನೆಲಿಗಣಿ ಮ್ಯಾಲ ಬೆಣ್ಣಿ
ಅಡಕಲಗಡಿಗ್ಯಾಗ ಬೆಲ್ಲದ ಕಣ್ಣಿ
.................ರಿಗೆ ರೊಟ್ಟಿಗೂಡ ಬೇಕು ಕುಸುಬಿ ಎಣ್ಣಿ.

೭೩೬. ಸತ್ಯರಾ ನಡೆ ತೀರ್ಥ
ನಿತ್ಯರಾ ನುಡಿ ತೀರ್ಥ
ಉತ್ತಮರ ಸಂಗ ತೀರ್ಥ
ನನ್ನ ಬದುಕಿಗೆ ನನ್ನವರೇ ತೀರ್ಥ .....

೭೩೭. ಎಲ್ಲಾರು ಮಾಡೂಡು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ
ತುತ್ತು ರೊಟ್ಟಿಗಾಗಿ ಅಂದರು ದಾಸರು
..............ರ ಹೆಸರು ಹೇಳುವೆ ತಿಂದಾಂಗ ಕೆನೆ ಮೊಸರು.

೭೩೮. ಹೊಲದ ತುಂಬಾ ಕರಕಿ
ಗಾಳಿಪಟಾ ಹೊಡಿತಾವು ಗಿರಕಿ
............ರಿ ಗಿಂತ ನಮ್ಮತ್ತಿ ಬಾಳ ಬೆರಕಿ.

೭೩೯. ಮಹಾವೀರ ಹುಟ್ಟಿದ್ದು
ಕುಂದರಗ್ರಾಮದ ರಾಜಭವನದಲ್ಲಿ
.............ರ ಹೆಸರು ಹೇಳುವೆ
ಮದುವೆಯ ನೆನಪಿನಲ್ಲಿ.

೭೪೦. ತಾವರಗೇರಿಲಿಂದ ಉತ್ತರಕ್ಕ ನಾ ಹುಟ್ಟಿದ ಮನಿ
ಆರು ಹರದಾರಿ
ತಾವರಗೇರಿಲಿಂದ ಉತ್ತರಕ್ಕ ತವರ ಮನಿ
ಆರು ಹರದಾರಿ
ತಾವರಗೇಣಲಿಂದ ದಕ್ಷಿಣಕ್ಕ ನನ್ನ ಕೊಟ್ಟಮನಿ
ಆರು ಹರದಾರಿ
............ರು ಕೊಲ್ಲರಿ ಬಂಡೀಲೆ ಕರಿಯಾಗಬರೂದು
ಹನ್ನೆರಡು ಹರದಾರಿ.

೭೪೧. ಸಂಸಾರವೆನ್ನುವುದು ಪರಶಿವನ ಆಟ
................ರು ಶಾಂತ ಇದ್ದ್ರ ನನಗ ಅತ್ತಿಯದೇ ಕಾಟ.

೭೪೨. ಸಕಲ ಮಂಗಲ ಕಾರ್ಯಕ್ಕೆ ಗಜಾನನನೇ ಪೂಜ್ಯ
ಭಕ್ತಿಯಿಂದ ಬೇಡುವೆನು ಕೊಡುವ ಸುಖ ಸಾಮ್ರಾಜ್ಯ
................ರ ಸೇವೆಯೇ ನನಗೆ ಪರಮಪೂಜ್ಯ.

೭೪೩. ಸ್ವರ್ಗಲೋಕದಿಂದ ಅಮೃತಕುಪ್ಪಿ ತಂದದ್ದು ಗರುಡಪಕ್ಷಿ
................ರ ಹೆಸರು ಹೇಳುವೆನು ಅಗ್ನಿದೇವನ ಸಾಕ್ಷಿ.

೭೪೪. ಸ್ವರ್ಗೀಯ ಸುಂದರಿಯರಲ್ಲಿ ಅತಿ ಚೆಲುವೆ ರಂಬೆ
.............ರ ಹೆಸರು ಹೇಳುವೆ ಸ್ಮರಿಸಿ ರೇಣುಕಾ ಜಗದಂಬೆ.

೭೪೫. ಶಿವನಿಗೆ ಅರ್ಧನಾರೀಶ್ವರಳಾದವಳು ಪಾರ್ವತಿ
..............ರಿಗೆ ನಾನು ಬೆಳಗುವೆನು ಮಂಗಳಾರತಿ.

೭೪೬. ಮುಕ್ತಿ ಮಾರ್ಗ ಬಲು ಬಿಕ್ಕಟ್ಟು
..............ರಿಗೆ ತಿಳದೈತಿ ಅದರ ಒಳಗುಟ್ಟು.

೭೪೭. ಬೇಂದ್ರೆಯವರು ಬರೆದದ್ದು ಸಖೀಗೀತ
.............ರು ಹಾಡೂದು ನನಗಾಗಿ ಪ್ರೇಮಗೀತ.

೭೪೮. ಹನುಮಂತ ಇರುವುದು ಲಂಕೆಯಲ್ಲಿ
ಸೀತೆ ಇರುವುದು ಅಶೋಕ ವನದಲ್ಲಿ
..............ರ ತೇಜವಿರುವುದು ನನ್ನ ಕುಂಕುಮದಲ್ಲಿ.

೭೪೯. ಹರಿಶ್ಚಂದ್ರ ಮಹಾರಾಜನನ್ನು ಬಲು ಕಾಡಿದನು ನಕ್ಷತ್ರಕ
ನಾನು ಸರಿಯಾಗಿ ಅರಿತಿರುವೆ ನಮ್ಮ ...........ರ ಜಾತಕ.

೭೫೦. ಹೊಸತಾಗಿ ನಯಾ ಪೈಸೆ ಬಂದವು ಹೋದವು
ಆಮೇಲೆ ಎಲ್ಲಾ ಪೈಸೆ ಬಂದವು ಎಲ್ಲಾ ಹೋದವು
ಕೋಟಿಗಟ್ಟಲೆ ನೋಟು ಬಂದವು ಎಲ್ಲಾ ಮಟಾಮಾಯ ಆದವು
ಧಾರಣಿ ಏರಿ ಜನ ಬಹುಕಾಲ ಕುಂತಾರ ಪ್ರಾಣ ಹಿಡಕೊಂಡು
.............ರ ಹೆಸರು ಹೇಳುವೆ ಪ್ರಾಣ ದೇವರ ದಯೆ ಹಿಡಕೊಂಡು

೭೫೧. ಹಂಸಪಕ್ಷಿಯ ಕೂಡ ಮಾತನಾಡಿದಳು ದಮಯಂತಿದೇವಿ
ಧರ್ಮರಾಯನಂಥ ನನ್ನ ..........ರ ಹೆಸರ ಹೇಳುವೆ ಸ್ಮರಿಸಿ ಕುಂತಿದೇವಿ.

೭೫೨. ಹಿಂದುಸ್ಥಾನಕ ಉತ್ತರಕ್ಕಿರುವುದು ಕಾಸಿ
ಅದಕ್ಕೆ ಈಗ ಹೊಸತಾಗಿ ಅನ್ನುವರು ಬನಾರಸಿ
.............ರಿಗೆ ನಾನಾದೆ ಚರಣದಾಸಿ.

೭೫೩. ಹುಬ್ಬಳ್ಳಿಯಲ್ಲಿರುವುದು ಮೆಡಿಕಲ್ ಕಾಲೇಜು
.............ರಿಗೆ ರೆಡಿಮೇಡ್ ಬಟ್ಟೆ ಬರೂದಿಲ್ಲ ಅವರ ಸೈಜು.

೭೫೪. ತತಿಗೆ ತಕ್ಕ ಬಿತ್ತಗಿ ಮಾಡ್ತಾರಾ
ಬಿತ್ತಿಗಿಗೆ ತಕ್ಕ ಬೆಳಿ ತಗಿತಾರ.....

೭೫೫. ನವಿಲಿನ ನಡಿಗಿ ಚೆಂದ
ಗುಬ್ಬಿ ಗೂಡು ಚೆಂದ
ಹಂಸದ ಈಜು ಚೆಂದ
..........ರಿಗೆ ನನ್ನ ರೂಪ ಚೆಂದ.

೭೫೬. ಉಪ್ಪು ತಿಂದವರು ನೀರು ಕುಡಿತಾರಂತ
ಬೆಲ್ಲಾ ತಿಂದವರಿಗೆ ನೀರಡಿಕೆ ಇಲ್ಲಂತ
.............ರು ಸುಖನಿವಾಸದಾಗ ಸುಖನಿದ್ದಿ ಮಾಡೇನಂತಾರ.

೭೫೭. ಸಂದ್ಯಾಗ ಸಂದಿ ಯಾ ಸಂದಿ ಅಂದರ
ಅಲಸಂದಿ ಅಂತಾ ಮುಸು ಮುಸು ನಗತಾರ ......

೭೫೮. ಹೊಲಕ್ಕ ಹೆಂಗಸೂರು ಹೋಗ್ಯಾರ ಅಂದ್ರ
ಕನ್ನಡಿ ಮುಂದ ಪಟಾಗಾ ಸುತ್ತಿಗೊಂಡು
ಹೊಲಕ ಹೋಗ್ತೀನಿ ಅಂತಾರ .....

೭೫೯. ಇರುವಿ ಹುತ್ತು ಹಾವಿಗೆ ಗೊತ್ತು
ಹಾವಿನ ಹುತ್ತು ಮುಂಗಸಿಗೆ ಗೊತ್ತು
............ರ ಗತ್ತು ನನಗs ಗೊತ್ತು.

೭೬೦. ಈಶ್ವರನು ಗಂಗೆಗೆ ಸ್ಥಾನ ಕೊಟ್ಟದ್ದು ತಲೆಯಲ್ಲಿ
ನನಗೆ ಸುಭದ್ರ ಸ್ಥಾನವಿರುವುದು ನಮ್ಮ ...........ರ ಎದೆಯಲ್ಲಿ.

೭೬೧. ಅಜಂತಾದಲ್ಲಿರುವುದು ಚಿತ್ರಗಳ ಆಗರ
.............ರ ಎದೆಯಲ್ಲಿ ನಾನಾಗಿರುವೆ ಪ್ರೀತಿಯ ಸಾಗರ.

೭೬೨. ಐತಿಹಾಸಿಕ ಪುರಾಣ ಪ್ರಸಿದ್ಧ ಪಟ್ಟಣ ಸ್ವಾದಿ
...........ರ ಹೆಸರು ಹೇಳುವೆನು ಬಿಡಿರಿ ಹಾದಿ.

೭೬೩. ದೇವಕಿನಂದರು ಸೆರೆಯಿಂದ ಪಾರಾದರು
ಹರಿಯ ಸ್ಮರಣೆ ಹೊತ್ತು
ನಮ್ಮ ............ರಿಗೆ ಹಾಕುವೆ
ಪಕ್ವಾನ್ನದ ಕೈತುತ್ತು.

೭೬೪. ದಾನದಲ್ಲಿ ಕೀರ್ತಿವಂತ ಕರ್ಣ
............ರೇ ನನಗೆ ಸರ್ವಾಭರಣ.

೭೬೫. ಪತಿಯ ಪ್ರಾಣವನ್ನು ಮರಳಿ ಪಡೆದಳು ಸಾವಿತ್ರಿ
ಅವಳ ಪ್ರಭಾವದಿಂದ ನನ್ನ.......ರಿಗೂ
ನನಗೂ ಆಯಿತು ಮಧುರ ಮೈತ್ರಿ

೭೬೬. ಪಾಂಡವರು ಹೋದದ್ದು ವನವಾಸಕ್ಕ
ರಾಜಕಾರಣಿಗಳು ಇರುವುದು ಭ್ರಷ್ಟಾಚಾರಕ್ಕ
ಒಕ್ಕಲಿಗ ಮಾಡುವುದು ದಂಡಕ್ಕ
ಬ್ರಾಹ್ಮಣ ಮಾಡುವುದು ಪಿಂಡಕ್ಕ
............ರು ನಿಯತ್ತಿನಿಂದಿರುವುದೇ ನನ್ನ ಪ್ರೇಮಕ್ಕ.

೭೬೭. ಸಜ್ಜಿರೊಟ್ಟಿ ಹಿಟ್ಟಿನ ಪಲ್ಯ
ಸಟ್ನ ತಿನ್ನಂದ್ರ ಶ್ಯಾವಗಿ ಕೇಳತಾನ ....

೭೬೮. ಸಾಹಿತ್ಯ ಸಮ್ಮೇಲಗಳಾಗುವವು ಜಾತ್ರೆ
ಹೋಗುವಾಗ ಮರೆಯಬಾರದು
ತಲೆನೋವು ಮಾತ್ರೆ
............ರ ಯಜಮಾನಿಕೆಯಿಂದಲೇ
ನಮ್ಮನೆಯ ಸುಂದರ ಚರಿತ್ರೆ.

೭೬೯. ಸಕಲ ಮಂಗಲಕಾರ್ಯಕ್ಕೆ ಗಜಮುಖನೇ ಪೂಜ್ಯ
ಭಕ್ತಿಯಿಂದ ಪೂಜಿಸಿದರೆ ಕೊಡುವನು ಸಾಮ್ರಾಜ್ಯ
................ರ ಪಾದಪೂಜೆಯೇ ನನಗೆ ಸಿಕ್ಕಂತೆ ರಾಜರಾಜ್ಯ.

೭೭೦. ಸಕಲ ವಿದ್ಯೆಗೆ ಸರಸ್ವತಿಯೇ ಮಾನ್ಯ
...............ರ ಪೂಜಿಸಿ ನಾನಾದೆ ಧನ್ಯ.

೭೭೧. ಸ್ವರ್ಗಲೋಕದಿಂದ ಅಮೃತವೃಷ್ಟಿಯನ್ನು ತಂದದ್ದು ಗರುಡಪಕ್ಷಿ
ಬಿಜಾಪುರದಲ್ಲಿ ಪ್ರಸಿದ್ಧವಾದುದು ದ್ರಾಕ್ಷಿ
...............ರ ಹೆಸರು ಹೇಳುವೆನು ಅಗ್ನಿದೇವರ ಸಾಕ್ಷಿ.

೭೭೨. ಸ್ವರ್ಗೀಯ ಸುಂದರಿಯರೆಲ್ಲರೊಳು ಚೆಲುವೆ ರಂಬೆ
.................ರ ಮೋಹಕ ಬಣ್ಣ ತೊಳೆದ ನಿಂಬೆ.

೭೭೩. ದ.ರಾ. ಬೇಂದ್ರೆಯವರು ಬರೆದದ್ದು ಭಾವಗೀತ
..............ರು ಹಾಡೂದು ಭಗವದ್ಗೀತಾ.

೭೭೪. ಹರಿಶ್ಚಂದ್ರನು ಸತಿಯನ್ನು ಮಾರಿದ್ದು ಸತ್ಯಕ್ಕಾಗಿ
ನಾನು .................ರ ಹೆಸರು ಹೇಳುವೆನು ಸತಿ ಧರ್ಮಕ್ಕಾಗಿ.

೭೭೫. ೧೯೬೧ರಲ್ಲಿ ಬಂದವು ನಯಾಪೈಸೆ ನಾಣ್ಯ
..............ರು ನನಗೆ ಪತಿಯಾದದ್ದು ಪೂರ್ವಜನ್ಮದ ಪುಣ್ಯ.

೭೭೬. ಹನುಮಂತನಿರುವುದು ಲಂಕೆಯಲ್ಲಿ
ಸೀತೆ ಇರುವುದು ಅಶೋಕ ವನದಲ್ಲಿ
.............ರ ತೇಜವಿರುವುದು ನನ್ನ ಕುಂಕುಮದಲ್ಲಿ.

೭೭೭. ಪಾಂಡವರ ಮೂಲಕ ಹರಿ ಮಾಡಿದನು ಜಗದ ರಕ್ಷಣೆ
ಯಾವಾಗಲೂ ನನ್ನ ಮೇಲಿರಲಿ ನಮ್ಮ ..........ರ ಅಂತಃಕ್ಕರುಣೆ.

೭೭೮. ಮನುಷ್ಯನ ಅವಯವಗಳಲ್ಲಿ ನಯವಾದದ್ದೇ ನಯನ
.............ರ ಜೊತೆಗಿರುವುದೇ ಎನಗೆ ಪವಿತ್ರ ಪಾವನ.

೭೭೯. ಮಹಿಷಾಸುರನನ್ನು ಸಂಹಾರ ಮಾಡಲು
ಪಾರ್ವತಿ ತಾಳಿದಳು ಶಕ್ತಿ ಅವತಾರ
ಅವಳ ಅವತಾರಕ್ಕಿತ್ತು ದೇವತೆಗಳ ಸಹಕಾರ
ನಮ್ಮ ............ ರಾಯರೊಂದಿಗೆ ಸರಾಗ ನಡೆದಿದೆ
ಸುಖದ ಖಣಿ ಸಂಸಾರ.

೭೮೦. ಮನುಷ್ಯ ಮನುಷ್ಯನಾಗಲು ಬೇಕು ನೀತಿ
ನಮ್ಮ .............. ರಾಯರಿಗೆ ಮೂಡುವೆ ಮುತ್ತಿನಾರುತಿ.

೭೮೧. ಕಾಮದೇವನಿಗೆ ಸರಿಯಾದ ಸತಿಯೇ ರತಿ
ನಾನಾಗುವೆ .............ರ ಒಲುವಿನ ಹೆಂಡತಿ.

೭೮೨. ಮನ್ಮಥನು ಭಸ್ಮವಾದನು ಶಿವನ ಉರಿಗಣ್ಣಿಗೆ
ನಮ್ಮ .............ರ ಪ್ರೀತಿಯಿಂದಲೇ ಬಂತು ಮಾವು ಹಣ್ಣಿಗೆ.

೭೮೩. ಮೇಘರಾಜನ ಕೃಪೆಯಿಂದಲೇ ಮಳಿ, ಬೆಳಿ
.............ರ ಹೆಸರು ಹೇಳುವೆ ಮುಗಿಯಿತು ನನ್ನ ಪಾಳಿ.

೭೮೪. ಶಕುಂತಲೆಗೆ ಪತಿ ಮುಖ ಕಾಣಲಿಲ್ಲ ಕಾರಣ
ಉಂಗುರ ಕಳೆದುಕೊಂಡದ್ದಕ್ಕಾಗಿ
ನಮ್ಮ ...........ರ ಹೆಸರು ಹೇಳುವೆ
ಭೂಮ ಹಿಡದದ್ದಾಕ್ಕಾಗಿ.

೭೮೫. ಶಕ್ತಿದೇವಿ ರೂಪುತಾಳಿದ್ದು ಅನಂತ
ನನ್ನ ...........ರು ಯಾವಾಗಲೂ
ನನ್ನೊಡನೆ ಸನುಮಂತ.

೭೮೬. ವಿಮಾನದಲ್ಲಿ ಸೇವೆ ಮಾಡುವವಳು ಗಗನಸಖಿ
ಅವಳು ಮಾಡುವಳು ಪ್ರಯಾಣಿಕರ ಚಾಕರಿ
...........ರಿಗೆ ನಾನೇ ಸುರಲೋಕ ಸುಂದರಿ.

೭೮೭. ಶಿವನ ಜೆಡೆಯಿಂದ ಇಳಿದು ಬಂದಳು ಗಂಗೆ
ಹಂಪಿ ವಿರೂಪಾಕ್ಷನ ಸನ್ನಿಧಿಯಲ್ಲಿ ಹರಿವುದು ತುಂಗೆ
ಕಿತ್ತೂರ ಚೆನ್ನಮ್ಮಾ ಮಾಡಿದಳು ಬಿಳಿಯರ ವಿರುದ್ಧ ದಂಗೆ
ಪ್ರೀತಿಯಿಂದ ................ರ ಹೆಸರ ಹೇಳುವೆ ಹರಿದಾಂಗ ಗಂಗೆ.

೭೮೮. ಅಂಜಕೋತ ನಡೆದೀನಿ, ಸಂಜ್ಯಾತು ಬರಲಿಲ್ಲ
ಗಂಜಿ ಕುಡಿದರೂ ಸುಖ ಅಂತ ತಿಳಿದೇನ
ಯಾವ ನೆಲಿಯೂ ಇಲದ ನೆನಕೊಂತ ಕುಂತೇನ
........... ರಾಯರ ಒಳಹೊರ ಲೀಲಾಕ ಸೋತೇನ.

೭೮೯. ಆರು ನೂರು ರೂಪಾಯಿ ಆಕಳ
ಮೂರು ನೂರು ರೂಪಾಯಿ ಮಗಿ
ಕರ ಬಿಡು ಅಂದ್ರ ಕಡದಾಡತಾನ
ಹಾಲು ಕುಡಿಯಾಕ ಹಾರಿಗ್ಗಾಲ್ಲೆ ಬರತಾನ ....

೭೯೦. ಅತ್ತಿ ಬಂದ್ರ ಒಪ್ಪತ್ತು ಮಾಡ್ತಾರ
ಮಾವ ಬಂದ್ರ ಮಾರಿ ತಿರುವುತಾರ
ನಾ ಬಂದ್ರ ಬಾಯಿ ತೆರಿತಾರ....

೭೯೧. ಅರ್ಧ ರೊಟ್ಟಿ, ಅವರೆಕಾಳ ಒಣಗ್ಗಿ
ಅರಮನ್ಯಾಗ ಕುಂತ ಅಭ್ರಾಟ ಮಾಡ್ತಾರ....

೭೯೨. ಅಕ್ಕಿ ತರಲಿಲ್ಲ ಅನ್ನಾ ಮಾಡಲಿಲ್ಲ
ಉಪ್ಪಿಟ್ಟು ತಿಂದು ಗಪ್ಪನ ಮಲಗತಾರ .......

೭೯೩. ಅಂಟುಬೆಲ್ಲ ಗಂಟು ಹುಗ್ಗಿ
ಎಂಟು ದಿನಕ್ಕೊಮ್ಮೆ ಗಂಟು ಮಾರಿ ಮಾಡಿ
ಪಂಟು ಹೊಡಕೋತ ದಂಟೀಲೆ ಹೊಡೀತಾರ ....

೭೯೪. ಅಕ್ಕ ತಂಗ್ಯಾರ ಮುಂದ ಮುತ್ತಿನಾಂಗ ಇರ್ತಾರ
ನನ್ನ ಮುಂದ ಯಾವಾಗಲೂ ಸತ್ತಾಂಗ ಇರತಾರ ....

೨೯೫. ಅರ್ಜುನನು ಶಿವನಿಂದ ಪಡೆದದ್ದು ಪಾಶುಪತಾಸ್ತ್ರ
ವೇದ ಪುರಾಣಗಳು ಹೇಳಿದವು ನೀತಿಶಾಸ್ತ್ರ
ನಮ್ಮ ............. ರಾಯರು ಹೇಳುವುದು
ಬರೀ ಬದನೆಕಾಯಿಶಾಸ್ತ್ರ.

೨೯೬. ಅಂಗಡಿಗೆ ಹೋಗಿ ಇಂಗ್ ತರ್‍ರಿ ಅಂದ್ರ
ಗೊಂಗಡಿ ಹೊತಗೊಂಡು ಗಪ್ಪು ಮಲಗತಾರ .....

೨೯೭. ಆರು ರೂಪಾಯಿ ಸೀರಿ
ಮೂರು ರೂಪಾಯಿ ಕುಬುಸ
ನತ್ತ ಮಾಡಿಸಿ ಕೊಡಂದ್ರ
ನಕ್ಕೋತ ಹೊರಗ ಹೋಗತ್ತಾರ ....

೨೯೮. ಆರು ಸೇರು ಅವಲಕ್ಕಿ ಮೂರ ಸೇರು ಕಲ್ಲು ಸಕ್ಕರಿ
ಬಂಗಾರದೊಂಕಿ ಬೆಳ್ಳಿ ಕಾಲುಂಗುರ
ಧೋತರದಾಗ ಕಟಿಗೊಂಡು ಪಾತರದಾಕಿ ಮನೀಗೆ ಹೋಗ್ತಾರ ...

೨೯೯. ಆಯಾಸ ಆಗ್ಯೆತಂತ ಅಡಿಗಿ ಮಾಡೂದ ಬಿಟ್ರ
ಪಾರತದಾಕಿ ಕರದು ಪಗಡಿ ಆಡತಾರ ....

೩೦೦. ಆರಾಣೆ ಅಡಗಿ ಮನಿ, ಪಾವಲಿ ಪಡಸಾಲಿ
ತಾಟ ಹಾಕೀನಿ ಊಟಕ್ಕೆ ಬಾ ಅಂದ್ರ
ಸುಬ್ಬಿಕೂಡ ಹುಬ್ಬಳ್ಳಿಗೆ ಹೋಗ್ತಾರ ....

೩೦೧. ಆರು ತಾಸು ರಾಣಿ ಅರಮನಿಯಾಗಿದ್ದು
ಮೂರು ತಾಸು ನನ್ನ ಕೂಡ ಇರಾಕ
ಮುರಕಾ ಮಾಡ್ತಾರ .....

೩೦೨. ಆಕಾಶದಲ್ಲಿ ಹಾರುವವು ಹದ್ದು,
ಗಂಡಸರು ಹೊರಗೆ ಹೋಗ್ತಾರ ಕದ್ದು
..............ರಿಗೆ ನಾನೇ ಮದ್ದು.

೩೦೩. ಆಚೀಚಕ ಹೊಳಿ, ಕಾಲಾಗ ಪಂಚೇರಕುಳಿ
ಕೈಯಾಗ ಬಂಗಾರ ಬಳಿ
ಹೊಳಿ ಇಳೀಲಿಲ್ಲ, ಮಾರೀ ತೊಳೀಲಿಲ್ಲ
................ರ ನೆಲಿ ಇನ್ನೂ ತಿಳೀಲಿಲ್ಲ.

೮೦೪. ಆರಾಡಿ, ಈರಾಡಿ, ಹುಣಸೀರಾಡಿ
ಪಾವುಸೇರ ಬಂಗಾರ ಇಡಾಕ
...........ರಿಗೇನ ದಾಡಿ.

೮೦೫. ಆಕಟ್ಟು ಈ ಕಟ್ಟು
ಕೈಯಾಗ ಒಂದು ಚುಟ್ಟದ ಕಟ್ಟು
ತೆಲಿಗೆ ಕ್ರಾಪ್ ಬಿಟ್ಟು
ಕಟ್ಟಿಮ್ಯಾಲ ಕುಂತು ಭಾಷಣ ಬಿಗಿತಾರ .....

೮೦೬. ಉಟ್ಟಿರುವ ಸೀರಿ ಸಾವಿತ್ರೀದು
ತೊಟ್ಟಿರುವ ಕುಬುಸಾ ಕಳಕವಂದು
ಹಾಕಿದ ಸರಾ ಸರಸಾಂದು
ಕೈಯಾನ್ ಕಾಜಿನ ಬಳಿ ಬಂಗಾರೀದು
ಉಳಿದಿರೋ ತಾಳಿ ನಮ್ಮ ............. ಅರಸರದ್ದು.

೮೦೭. ಹೊಲದಲ್ಲಿ ಹತ್ತಿ ಹಾಳಾಗುವುದು ಮಳೆಯಿಂದ
ಜೇನು ಹಾಳಾಗುವುದು ನೀರಿನಿಂದ
................ರು ಕೆಡುವುದು ಪರನಾರಿ ಸಂಗದಿಂದ.

೮೦೮. ಇದ್ದದ್ದು ಮಾಡಿಟ್ಟೀನಿ ಊಟಕ್ಕ ಬಾ ಅಂದ್ರ
ಸ್ವಾಟಿ ತಿರುವಿಕೋತ ಸಿಗರೇಟು ಹಚ್ಚತಾರ ....

೮೦೯. ಊಟಕ್ಕ ನೂರು ಉಪ್ಪಿನಕಾಯಿ
ತೋಟಕ್ಕೆ ನೂರು ತೆಂಗಿನಕಾಯಿ
ಊಟಾ ಮಾಡಂದ್ರ ಉರುದು ಬೀಳ್ತಾರ ....

೮೧೦. ಊರು ತುಂಬಾ ಉರಕೊಂತ
ಉಗಾದಿ ಮುಂದ ಉಘೋ ಉಘೋ ಅಂತಾರ ....

೮೧೧. ಎಲ್ಲಾ ಮಾಡಿ ಒಡ್ಡೊಡಗಿ ತುಂಬಾ ಬುತ್ತಿ ಕಟ್ಟೀನಿ
ಗೊಂಗಡಿಗೆ ಹಾಕಿ ಹೊಲಕ ಹೋಗಂದ್ರ
ಮೆಲಕು ನುಸೇತಂತ ಮನ್ಯಾಗ ಮಲಗತಾರ .....

೮೧೨. ಎಂಟು ಮಣಾ ಎಳ್ಳು
ಏಳು ಮಣಾ ಜೊಳ್ಳು
..............ರ ಮಾತು ಬರೀ ಸುಳ್ಳು.

೮೧೩. ಕರದ ಕರ್ಚಿಕಾಯಿ
ಬೆಂದ ಸುರಳಿ ಹೋಳಿಗಿ
ಗಪ್ಪ್‌ನ ತಿಂದು ಸಪ್ಪಳಿಲ್ದ ಹೋಗ್ತಾರ ....

೮೧೪. ಏಡಿ ಮುಟ್ಟದ ನೀರು
ಮೀನು ಆಡದ ನೀರು
ಆಕಾಶದ ಭಾವಿ ತಂದು
ಅರಭಾವಿ ಕಟ್ಟೀಕಟ್ಟಿ
ಮ್ಯಾಲ ಬೆಳ್ಳಿ ಒಲಿಗುಂಡು ಮಾಡಿ
ಬಂಗಾರ ತಪೇಲಿ ಇಟ್ಟು
ಚಿನ್ನದ ಕಡ್ಡಿ ಕೆರದು
ಅಡಗಿ ಮಾಡಿ ಉಣ್ಣಾಕ ಬಾ ಅಂದ್ರ
ಒಲ್ಲೊಲ್ಲೆಂತ ಶಟಗೊಂಡು ಹೋಗ್ತಾನ ....

೮೧೫. ಒಂದು ಸೂಜ್ಯಾಗ ಒಂಭತ್ತು ಗುದ್ಲಿ ಮಾಡಿ
ಎಂಭತ್ತು ರೊಟ್ಟಿ ಒಂದs ಉಸಿರನ್ಯಾಗ ತಿಂದು
ಹಕ್ಕರಕಿ ಬೇರು ಹರೀಲಿಲ್ಲಂತ
ಹಾರಿ ಹಾರಿ ಬೀಳ್ತಾನ ........

೮೧೬. ಓಡಿ ಓಡಿ ಹಿಡೀತಾರ ಮೇಲ್‌ಗಾಡಿ
ಕಾಡಿ ಕಾಡಿ ಬೇಡ್ತಾರ ಹುಣಸಿರಾಡಿ
ಬೇಡಿ ಬೇಡಿ ಅಳ್ತಾರ ನನ್ನ ತೋಡಿ
ಸೂಳಿಗೇರಿಗೆ ಹೋಗ್ತಾರ ಬಲು ಖೋಡಿ ....

೮೧೭. ಓದು ಒಕ್ಕಾಲು ಬುದ್ಧಿ ಮುಕ್ಕಾಲು
ಏನೂ ಇಲ್ದ ನಮ್ಮ .............ರಿಗೆ ಬೇಕು ಕುರಿ ಹಾಲು.

೮೧೮. ಕಣದಾಗ ಕಂಕಿ
ಕೈಯಾಗ ವಂಕಿ
ನನ್ನ ಕಂಡ್ರ .......... ರು ಬುಲುಬೆಂಕಿ

೮೧೯. ಕಟ್ಟೀ ಮ್ಯಾಲ ಸಕ್ಕರಿ ಒಟ್ಟಿರಬೇಕು
ಕಟ್ಟಿರುವಿ ಸಾಲು ಕಟ್ಟಿರಬೇಕು
ಇಂಗ್ ಮಾರಾಕಿ ಇಟ್ಟಿರಬೇಕು
ಬೆಳಗಾಂವದಾಕಿ ಬಿಟ್ಟಿರಬೇಕು
ಹೊಳಿ ಆಚೇಕ ಅವರು.

೮೨೦. ಹೊಳಿ ಈಚೇಕ ನಾನು
ಹೊಳಿ ಇಳೀಲಿಲ್ಲ ....... ರ
ನೆಲಿ ನನಗೆ ತಿಳೀತಿಲ್ಲ.

೮೨೧. ಕರಿ ಮಾರಿ ಬರೀ ಹೊಟ್ಟೆ
ಇದ್ದುದ್ದು ಉಣ್ಣ ಅಂದ್ರ
ಸರಸರಾ ಎದ್ದು ಹೋಗ್ತಾರ .......

೮೨೨. ಕಳ್ಳೀಚಾಟು ಮಳ್ಳೀಗಿಲೀಟು
............ರಿಗೆ ಬರೋಬ್ಬರಿ
ನಂದಽ ಬೇಕು ಕಬ್ಬಿಣ ಸೌಟು.

೮೨೩. ಕಟಗ ರೊಟ್ಟಿ ಕಾರೆಳ್ಳ ಹಿಂಡಿ
ಕಟಿಗೊಂಡು ಹೋಗಂದ್ರ
ಸೆಟಗೊಂಡು ಹೋಗ್ತಾರ ...

೮೨೪. ಕಟಗರೊಟ್ಟಿ ಪುಂಡಿಪಲ್ಲೆ
ಹಸೇ ಮೆಣಸಿನ ಕಾಯಿ ಕಟ್ನಕಡದು
ಕಟ್ಟೀ ಕೆಳಗೆ ಬಿದ್ದ್ರು .........

೮೨೫. ಕಡೆತೋಡೆ ಕೈಯಾಗ
ಮಕಮಲ್ಲ ಅಂಗಿ ಮೈಯಾಗ
ಕಂಠೀಸರಾ ಕೊಳ್ಳಾಗ
ಪಾತರದವರು ಮುಂದ, ಪಲ್ಲಕ್ಕಿ ಹಿಂದ
ಬನಶಂಕರಿ ಜಾತ್ರೀಗೆ ಹೋಗಿ
ತಂಪತ್ತಿನ್ಯಾಗ ಬರ್ತಾರ ....

೮೨೬. ಕೊರಳಾಗ ರುದ್ರಾಕ್ಷಿ, ಕೈಯಾಗ ಜಪಮಣಿ
ಹಣಿ ಮೇಲೆ ಗಂಧ ಮೈಯಾಗ ಕ್ಯಾವಿ ಅಂಗಿ
ನನ್ನ ಮನ್ಯಾಗ ಬಿಟ್ಟು ಸ್ವಾಮಿ ಅಂತಾ ತಿರಗತಾರ
ಪರನಾರಿ ಜಪಿಸತಾರ ಹರಹರ ಮಾದೇವ ಅಂತಾರ ....

೮೨೭. ಕಳ್ಳ ಹೊಕ್ಕ ಮನೆ ಗಿರ್ಧಾ ಹಾಳು
ಹಳ್ಳ ಹೊಕ್ಕ ಮನೆ ಅರ್ಧಾ ಹಾಳು
ಹೊರಗಿನ ಚಟದ ನಮ್ಮ ...........ರು
ಹೊಕ್ಕ ಮನೆ ಪೂರಾ ಹಾಳು.

೮೨೮. ಕಾಫಿ ಕುಡಿಯಾಕ ರೊಕ್ಕಿಲ್ಲ
ಕ್ರಾಪು ಬಾಚಾಕ ಎಣ್ಣಿಲ್ಲ
ದುಡಿಯಾಕ ಹೋಂಗದ್ರ
ಬಡಿಯಾಕ ಬರ್ತಾರ .....

೮೨೯. ತೆಲಿಗೆ ಕ್ರಾಪು ಬಿಟ್ಟಾರ, ಕಣ್ಗೆ ಚಾಳೀಸು ಇಟ್ಟಾರ
ಚುಟ್ಟಾ ಬಾಯಿಗೆ ಇಟ್ಟಾರ
ಸೊಟ್ಟ ಮಾರಿ ಮಾಡಿಕೊಂಡು
ಸಂತೀಗೆ ಹೋಗ್ತಾರ ....

೮೩೦. ಕಿತ್ತಳಿ ಹಣ್ಣು ಕೈಯಾಗ
ಮಾವಿನ ಹಣ್ಣು ಬಾಯಾಗ
ಕತ್ತಲದಾಗ ಕುಂತು ಕರಡಿ ಆಡಸ್ತಾರ ....

೮೩೧. ಕೊಟ್ಟು ಕುದಿಯುವುದಿಲ್ಲ ಇಟ್ಟು ಹಂಗಿಸುವುದಿಲ್ಲ
ದಿಟ್ಟತನ ಬಿಡದಿದ್ದ್ರ ............ರಿಗೆ ಪೆಟ್ಟು ತಪ್ಪೂದಿಲ್ಲ.

೮೩೨. ಕಡ್ಲಿ ಮಾದಲಿ ತಿಂದಾರ
ದಂದಕ್ಕಾಗ್ಯ ಕುಂತಾರ
ಯಾಕ ನನ ಗಂಡಾ ಅಂದ್ರ
ಭಂಡ ಬಾಳೇ ಅಂತಾರ ....

೮೩೩. ಗುಣಗೇಡಿ ಗೆಳೆತನ ಮಾಡಿ
ಗುಣಕಲ್ಲಾಗಿ ಮನ್ಯಾಗ ಕುಂತಾರ ....

೮೩೪. ಗೋದಿರವಾದ್ದು ಹುರಿದುಪ್ಪಿಟ್ಟು
ಬಾಳಾ ಹೊತ್ತಿತು ಚಹಾ ಒಲಿಮ್ಯಾಲಿಟ್ಟು
ಕುಡಿ ಕುಡಿರಿ ಅಂದ್ರ ತಡಿ ತಡಿ ಅಂತಾರ ....

೮೩೫. ಗೋಟಡಕಿ ಗೋಣೀಚೀಲ
ಗೋಟು ಪಾಟ್ಲಿ ಮಾಡ್ಸಂದ್ರ
ಬೂಟ ಮೆಟಿಗೊಂಡು ಪ್ಯಾಟ್ಯಾಗ ಹೋಗ್ತಾರ ....

೮೩೬. ಚಾಡಿ ಹೇಳಾವರಿಗೆ ಕೇಡು ತಪ್ಪದು
ಗಂಡಾ ಹೆಂಡತಿ ಒಡೆಯುವವರಿಗೆ ನರಕ ತಪ್ಪದು
ದುಡಿಯದೆ ವಿಲಾಸಮಾಡೂ
ನಮ್ಮ .... ರಂಥವರಿಗೆ ಕೇಡು ತಪ್ಪದು.

೮೩೭. ಕೋಕಿಲೆಗೆ ಮರು ಕೋಕಿಲೆ ಕೂಗು ಚೆಂದ
ತರುಣ ತರುಣಿಯರಿಗೆ ಮದುವೆ ಚೆಂದ
............ರಿಗೆ ಮುಖದ ಕುಡಿಮೀಸೆ ಚೆಂದ.

೮೩೮. ಜೋಡು ಹೋರಿ ಹಿಡಕೊಂಡು
ಹೆಗಲಿಗೆ ಹೆಣೆದ ಬಾರಕೋಲು ಹಾಕ್ಕೊಂಡು
ಹಲ್ಲು ಕಿಸ್ತು ನನಗsಹಲೇ ಅಂತಾರ .....

೮೩೯. ತಡಿ ಮ್ಯಾಲ ತಡಿ
ಕೋತಂಬರಿ ಮಡಿ
ಏಟು ಹೊಡಿತೀರಿ ಹೊಡಿ
ಮಂದೀ ಕರೀತೀನಿ ತಡಿ ಅಂದ್ರ
ಗಡಿಗಿಸಂದ್ಯಾಗ ಕುಂತು ತಡಿತಡಿ ಅಂತಾರ ......

೮೪೦. ತಂತಿ ಮ್ಯಾಲ ತಂತಿ, ಹುಬ್ಬಳ್ಳಿ ಸಂತಿ
ಸಂತಿ ಮಾಡಂದ್ರ ಚಿಂತಿ ಮಾಡ್ತಾರ ....

೮೪೧. ತಾಲಿ ಮ್ಯಾಲ ತಾಲಿ, ಮಲ್ಲಿಗಿ ಹೂವಿನ ಮಾಲಿ
ಚೆಂಡಾಳ ಗೊಂಬೀ ಹುಡುಗಿ ಕಂಡು ಹುಬ್ಬ ಹಾರಿಸ್ತಾರ ....

೮೪೨. ಅಡುವಾಗಿ ಬಿತ್ತಿದರ ಬೆಳಿ ಹಾಳು
ತೂತು ಇದ್ದ ಗಡಿಗಿದ್ರ ಒಲಿಹಾಳು
ಮಾತ್ಗಂಟಿಯಿಂದ ಮನೆ ಹಾಳು
.............ರು ಮನಿ ಹೊಂದಿ
ಬಾಳದಿದ್ರ ಎಲ್ಲಾ ಹಾಳು.

೮೪೩. ದಾರಾಸೂಜಾ ಗೆಳೆತನಾ
................ರ ಹಣಿಯಾಗ ಬರೆದಿಲ್ಲ
ಶ್ರೀಮಂತಕಿ ಒಗೆತನಾ.

೮೪೪. ದೇಶಾ ದೇಶ ತಿರುಗುತಾರ
ದೆಸಬಾಯಿಬಿಟ್ತಾ ಮಲಗತಾರ
ದ್ಯಾಸ ಮಾಡಿ ನನ್ನ ಮಾರಿ ನೋಡತಾರ
ದ್ವಾಸಿ ಮಾಡಂತ ಮೂಲ್ಯಾಗ ಮಲಗತಾರ .....

೮೪೫. ದೇಶಭಕ್ತಿ ವೇಷ ಹಾಕಿದವರು
ಮೋಸಗೊಳಿಸುವಲ್ಲಿ ಕುಶಲರು
ಕಾಸೊಂದರ ಸಲುವಾಗಿ ಭಾಷೆ ತಪ್ಪುವರು
ನನ್ನ ಹರಿಶ್ಚಂದ್ರ ............ರು ನನ್ನ ಬಿಡರು.

೮೪೬. ನನ್ನ ಕೈಯಾಗ ವಂಕಿ
ನನ್ನ ಮಗಾ ಬೇಡ್ತಾನ ಕುಂಕಿ
ನನ್ನ ಕಂಡ್ರ ...............ರಿಗೆ ಯಾಕೋ ಬೆಂಕಿ.

೮೪೭. ನಗೆಗಣ್ಣಿನ ಸುಂದರ ಮುಖದವರು
ಬಿಗುವು ಬಂಧನವಿಲ್ಲದ ಮನದವರು
ಸೊಗಸು ಸರಸಕ್ಕೆ ಹೆಸರಾದವರು
..............ರು ನನ್ನ ಮೇಲೆ
ಸವತಿ ತರಲು ಬಯಸದವರು.

೮೪೮. ತಾಯಿ ಕರುಳಿಗೆ ನಾಚಿಕೆಯಿಲ್ಲ
ಅಂಗಾಲಿಗೆ ಹೇಸಿಕೆಯಿಲ್ಲ
ನಾಲಿಗೆಗೆ ಎಲುಬಿಲ್ಲ
ಕಾಲಿಲ್ಲದವಗೆ ನಡೆಯಿಲ್ಲ
ಬಲು ಚಪಲ .................ರ ನೆಲೆ ಬ್ರಹ್ಮಗೂ ತಿಳಿದಿಲ್ಲ.

೮೪೯. ನಿಲ್ಲಂದ್ರ ನೆಟೇ ನಿಂತ್ರು
ಬರ್ರಿ ಅಂದ್ರ ಬಿಕ್ಕೊಂಡು ಕುಂತ್ರು
ಬಣ್ಣದ ಬಗರಿಕೂಡ ಚಿನ್ನಾಟ ಆಡಂದ್ರ
ಚಿಂತಾಕು ಇಟಗೊಂಡಾಕಿ ಹಿಂದ ಓಡ್ತಾರ ....

೮೫೦. ಪಾಟಿ ಹಿಡದು ಬರೀಲಿಲ್ಲ
ಪುಸ್ತಕ ಹಿಡಿದು ಓದಲಿಲ್ಲ
ಕೋಟ್ ತೊಟಗೊಂಡು ಪ್ಯಾಟ್ಯಾಗ ಹೋಗ್ತಾರ .....

೮೫೧. ನೀರ ಕಾಸೇನಿ ನಿಲ್ಲಲಿಲ್ಲ
ಹೂಹಾಸೇನಿ ಮಲಗಲಿಲ್ಲ
ಮುತ್ತು ಸುರದಿದ್ದರ ಆಯಲಿಲ್ಲ
ತೊತ್ತಿನಂಥ ಸೂಳಿ ಕೂಡ ಒಪ್ಪತ್ತ ಮಾಡ್ತಾರ .....

೮೫೨. ಪಗಡಿ ಚೆಕ್ಕಾ ಆಡ್ತಾರ
ವ್ಯರ್ಥ ವ್ಯಾಳೇ ಕಳೀತಾರ
ಸಂತೀಗೆ ಹೋಗಿಬರ್‍ರಿ ಅಂದ್ರ
ಹಂತೇಲಿ ಬಂದ ಹರಕತಿ ಬಡಿತಾರ .....

೮೫೩. ಆಣೇದ ಬಂಗಾರ, ಪುಣೇದ ಪತ್ತಾರ
ಸರ ಹೊತ್ತಿನ್ಯಾಗ ಕುಂತು ನಿಂತು
ಸರಗಿ ಮಾಡಿಸಿಗೊಂಡು ಸೂಳೀಮನಿಗೆ ಹೋಗ್ತಾರ .....

೮೫೪. ಪಡಗಿ ಆಡಿ ಬರತೇನಂತ
ಪಗಡಿ ಬಾಜಾರಕ ಹೋಗಿ
ಪುಗ್ಗಾ ಹಾಕಿದವ ಕೂಡ ಪಲ್ಲಂಗ ಏರತಾರ ....

೮೫೫. ಬಂಗಾರ ತಾಟಿನ್ಯಾಗ ಶೃಂಗಾರ ವೀಳ್ಯೆದೆಲೆ ಇಟ್ರ
ತಂಬಾಕು ಇಲ್ಲಂತ ತಕರಾರು ಮಾಡ್ತಾರ ....

೮೫೬. ಬಂಗಾರ ಬದನಿಕಾಯಿ
ಬೆಳ್ಳಿ ಚವಳಿಕಾಯಿ
ಮುತ್ತಿನ ಜ್ವಾಳದ ರೊಟ್ಟಿ
ಊಟಾ ಮಾಡ್ರಿ ಅಂದ್ರ
ಕಾಟಕೊಡಬ್ಯಾಡ ಅಂತಾರ ....

೮೫೭. ಬಾಳೇ ಬದುಕು ಬಿಟ್ಟಾರ
ಕೋರ್ಟ್ ಕಚೇರಿ ಹತ್ತ್ಯಾರ
ಕೂಳು ಕುತ್ತ ನೀರು ಪಿತ್ತಾಗಿ
ತೆಲಿಗೆ ಕೈಹಚ್ಚಿ ಕುಂತಾರ ....

೮೫೮. ಬಾಳೀಗಿ ಒಂದs ಗೊನಿ
ಚೇಳಿಗೆ ಒಂದs ಫಲ
..........ರಿಗೆ ಯಾವಾಗ್ಲೂ ತಮ್ಮದs ಛಲ.

೮೫೯. ಬಾಳೆ ಎಲಿಯಂಥಾ ಹೋಳಿಗಿ ಮಾಡಿ
ಮಲ್ಲಿಗಿ ಹೂವಿನಂಥಾ ಅನ್ನಾ ಬಸ್ತ
ಕಮ್ಮನ್ನು ಕಟ್ಟಿನ ಸಾರು ಮಾಡಿ
ಸುಮ್ನ ಕುಂತು ಸರಿಯಾಗಿ ಉಣ್ಣಂದ್ರ
ತುತ್ತಿಗೊಮ್ಮೆ ತುಪ್ಪಾ ಕೇಳ್ತಾರ ....

೮೬೦. ತಾಳಿದಾವ ಬಾಳತಾನ ಅನ್ನೂದು ಕಮ್ಮಾರ ಕುಲುಮೆ
ಗಂಡಾ ಹೆಂಡ್ತಿ ಹೊಂದಿಕೊಂಡಿದರ ಪ್ರೀತಿ ಒಲುಮೆ
.............ರಿಗೆ ಎಷ್ಟಂತ ಮಾಡ್ಲಿ ಹಗಲೆಲ್ಲಾ ಜುಲುಮೆ.

೮೬೧. ಬೆಳ್ಳಿ ಒಲಿ ಬಂಗಾರ ಬೋಗುಣಿ
ಊದಿನ ಕಡ್ಡಿ ಉರಿಮಾಡಿ, ಅವಲಕ್ಕಿ ಅನ್ನ ಬಸದ
ಕಲ್ಲಸಕ್ಕರಿ ಖಾರಾ ಅರದ
ಊಟಕ್ಕೆ ಬಾ ಅಂದ್ರ ತೋಟಕ್ಕ ಹೋಗ್ತಾರ ....

೮೬೨. ಒಕ್ಕಲಿಗ ಮೈಮುರಿದು ದುಡಿದ್ರ ಬೆಳೆ ಹುಲುಸು
ಪಂಟ ಬಡಕೋತ ಖಾಲಿ ಅಡ್ಡಾಡು
.........ರ ಬಾಳೇನ ಹೊಲಸು.

೮೬೩. ಮನ್ಯಾಗ ಸಿಂಹ
ಮಂದ್ಯಾಗ ಇಲಿ
ಹೊಲಕ ಹೋಗಿ ಹೆಣ್ಣಾಳಿನ ಕೂಡ
ಚಕ್ಕಂದ ಹೊಡಿತಾರ .....

೮೬೪. ಮಡಿ ಮಡಿ ಅಂತಾರಾ
ಮೈ ತೊಳಯದ ಏಳತಾರ
ನಡಿ ನಡಿ ಅನತಾ
ಒಲಿ ಸಂದ್ಯಾಗೆ ಬರತಾರ ....

೮೬೫. ಮಡಿ ಮ್ಯಾಗ ಮಡಿ
ಸವತಿಕಾಯಿ ಮಿಡಿ
ಎಷ್ಟ ಬಡೀತಿ ಬಡಿ
ಹೊಲಕ್ಕ ಹೋಗೂನು ನಡಿ ....

೮೬೬. ಮಲ್ಲಿಗಿ ಹೂವಿನ ಮ್ಯಾಲ ಕುಂತಾರ
ಮುತ್ತಿನಂಥಾ ಮಗಗ ಮುತ್ತು ಕೊಡತಾರ ....

೮೬೭. ಮಟಾ ಮಟಾ ಮದ್ಯಾನ
ಹಿಟ್ಟಿಲ್ಲಂತ ಕಟಕ ರೊಟ್ಟಿ ಕೈಯಾಗ ಕೊಟ್ರ
ಮಾರಿ ನೋಡಿ ಮುಸುಗುಡತಾರ .......

೮೭೮. ಮಾತಿನ್ಯಾಗ ಮಳ್ಳಮಾಡಿ
ನನ್ನ ಮದುವ್ಯಾಗ್ಯಾರ ....

೮೭೯. ಮಾತಿನ್ಯಾಗ ಮಾತಿಲ್ಲ
ಮನಸಿನ್ಯಾಗ ಮನಸ್ಸಿಲ್ಲ
ಮಾರಿ ನೋಡ್ದ ಉರಕೊಂತ ಹೋಗತಾರ ....

೮೮೦. ಮಾತು ಕೇಳೂದಿಲ್ಲ, ಮನ್ಯಾಗ ಇರೂದಿಲ್ಲ
ಸವತಿ ಕರಕೊಂಡು ಸಂತೀಗೆ ಹೋಗ್ತಾರ .....

೮೮೧. ಮಾತು ಮಾತು ಕಡೀಗೆ ಜಗಳಾ
ಹನಿ ಹನಿ ಕೂಡಿ ಕಡೀಗೆ ಹಳ್ಳಾ
...............ರ ನಡೆನುಡಿ ಎಲ್ಲಾ ಜೊಳ್ಳಾ.

೮೮೨. ಮುಂದಿನ ಮನಿ ಮಲ್ಲಿ
ಹಿಂದಿನ ಮನಿ ಎಲ್ಲಿ
ಕಡೇಮನಿ ಕಲ್ಲಿ
ನಡುವಿನ ಮನಿ ಹಲ್ಲಿ
.............ರು ಬಿತ್ತಾಕ ಹೋದ್ರ
ಬೆನ್ನತ್ತಿ ಹೋಗ್ತಾವು.

೮೮೩. ಮುದ್ದೇಬಾಳ ವಂಕಿ
ಮುರಗಿ ಸರಾ ವಜ್ರದೋಲಿ
ಗೆಜ್ಜಿ ಟೀಕಿ ನತ್ತ ಮಾಡ್ಸಂದ್ರ
ಹತ್ತು ಮಂದಿ ಕೂಡಿಸ್ತಾರ .....

೮೮೪. ಮುದ್ದುಕೊಟ್ಟು ಮುಂದಕ ಕರಿತಾರ
ಸದ್ದಿಲ್ದ ಸಂತೀಗೆ ಹೋಗಿ
ಒಂಕಿ ಕೈಯಾಕಿ ಕೂಡ ಒಗತನಾ ಮಾಡ್ತಾರ
ಮಾಡಿಕೊಂಡಾಕೀಗೆ ಚೆಳ್ಳ ಹಣ್ಣು ತಿನಸ್ತಾರ .....

೮೮೫. ಮೇಲೆ ಜಗಜಗಾ, ಒಳಗ ಭಗ ಭಗಾ
ಬಾಯಿ ಬಿಡದ ಗಪ್ನ ಹೋಗಿ
ಚಕ್ಕಡಿ ಗಾಲೀಗೆ ತೆಲಿಹಚ್ಚಿ ಕುಂದರತಾರ .....

೮೭೬. ರನ್ನದ ಮಹಲು, ಚಿನ್ನದ ಕಿಡಕಿ
ಬಾಯಾಗ ಅಡಿಕಿ
ಬಿಡಿಕಿಗೂಡ ಕುಂತಗೊಂಡು
ಉಡಿಕಿ ಸುದ್ದಿ ಮಾತಾಡತಾರ .....

೮೭೭. ವಿಜಾಪೂರ ಸಕ್ರಿ, ಗೋಧಿ ಭಕ್ರಿ
ಹಾಲ ಮೇಲಿನ ಕೆನಿ, ಹವಳ ಮುತ್ತಿನಗೊನಿ
ಊಟಾ ಮಾಡಂದ್ರ ಪ್ಯಾಟಿ ತಿರಗಾಕ ಹೋಗ್ತಾರ ....

೮೭೮. ವಿದ್ಯೆ ಉಳ್ಳವನ ಮುಖಾ ಮುದ್ದು ಬರುವಂತೆ
ವಿದ್ಯೆ ಅರಿಯದಾ ನಮ್ಮ ..........ರ ಮುತ್ತು ಬರುವಂತೆ.

೮೭೯. ವಿದ್ಯಾ ಕಲಿಯಾಕ ಕಾಲೇಜಿಗೆ ಹೋಗಿ
ಬುದ್ದಿ ಬಂತಂತ ಕದ್ದ ಕದ್ದ ಹೇಳ್ತಾರ .....

೮೮೦. ಸಣ್ಣಕ್ಕಿ ಉದುರ್ ಅನ್ನ
ಕಣ್ಣೀಗೆ ಒತ್ತು ಹಪ್ಪಳಾ
ಸೋಸಿದ ಕೆನಿ ಮೊಸರ ನೀಡಿದ್ರ
ಪಂತ್ಯಾಗ ಕುಂತಗೊಂಡು ಜಂತೀ ಎಣಿಸ್ತಾರ ....

೮೮೧. ಸಣ್ಣನ್ನ ಶ್ಯಾವಿಗಿಬಸ್ತ
ಹಾಲು ಸಕ್ಕ್ರಿ ನೀಡಿದರ
ಸೆಟಗೊಂಡು ರೊಟ್ಟಿಲ್ಲಂತ
ಸಟ್ಟ್ನ ಎದ್ದು ಹೋಗ್ತಾರ .....

೮೮೨. ಸಂತೀ ಮಾಡ್ಲಿಲ್ಲಾ ಸಾಮಾನು ತರ್ಲಿಲ್ಲಾ
ಸರಾಸರಾ ಉಂಡು, ಹರಗಾಕ ಹೋಗಂದ್ರ
ಯಾವಕಿ ಕೂಡಾ ತಿರಗಾಗ ಹೋಗ್ತಾರ ......

೮೮೩. ಸೆಗಣಿ ತಂದು ಸಾರುಣಿಗಿ ಮಾಡಿ
ಸಾಲುಗುಂಟಾ ದೀಪಾ ಹಚ್ಚಿ
ಮನೀ ಮುಂದ ತಳಿರು ಕಟ್ಟಿ
ರಂಗೋಲಿ ಹಾಕೀನಿ ತುಳಿಬ್ಯಾಡ್ರಿ ಅಂದ್ರ
ತುಳಕೊಂತ ಹೋಗಿ ತುದಗಟ್ಟೀಗೆ ಕುಂದರತಾರ .....

೮೮೪. ಸಂದಿಮನಿ, ಗೊಂದಿ ಮನಿ
ಗೊಂಬವ್ವನಂಥಾ ಹೆಂಡತಿ ಕೂಡ
ಗೊಂದಲಾ ಹಾಕ್ತಾರ ....

೮೮೫. ಸಣ್ಣನ ಶ್ಯಾವಿಗಿ ಮಾಡಿ
ಚಿನ್ನೀ ಸಕ್ಕರಿ ಹಾಕಿದ್ರ
ಚೆಳ್ಳ ಹಣ್ಣು ತಂದು ಚೀಪಾಕ ಹತ್ತ್ಯಾರ .....

೮೮೬. ಸಣ್ಣನ್ನ ಶ್ಯಾವಗಿ, ಚಿನ್ನ ಸಕ್ಕರಿ
ಸುಮ್ನ ಉಂಡು ಸೂಳಿಮನೀಗೆ ಹೋಗ್ತಾರ .....

೮೮೭. ಸಕ್ಕರಿ ಸೌಟು, ಉತ್ತತ್ತಿ ಬೋಟು
ಚಿಟಗ ಬಾಳೀಹಣ್ಣು ರಸಬಾಳಿ ಕಬ್ಬು
ಕಮ್ಮನ್ನ ತುಪ್ಪ ಎಮ್ಮೀ ಹಾಲು
ಗಪ್ನ ಉಂಡ ಪಗಡಿ ಆಡಾಕ ಹೋಗ್ತಾರ .....

೮೮೮. ಸಂಗ್ತೀಲೆ ಹೊಲ್ಯಾರ ಗಂಗಿ
ಆರು ಮೊಳದ ಅಂಗಿ
ಮೂರು ಗೇಣು ಬಕ್ಕಣಾ
ದೀಡ ರೂಪಾಯಿ ಇಟಗೊಂಡು
ದಿಮಾಕ ಮಾಡ್ತಾರ ....

೮೮೯. ಸಮೀಪಕ್ಕ ಬರತಾರ
ಸವಿ ಸವಿ ಮಾತಾಡತಾರ
ಸೀರಿ ಬೇಡಿದ್ರ ಮಾರೀ ತಿರುವತಾರ .....

೮೯೦. ಸಾವಿರ ಸುರುಳಿ ಹೋಳಿಗಿ
ಎಂಟುನೂರು ಎಣ್ಣಿ ಹೋಳಿಗಿ
ಸಪ್ಪಳಿಲ್ದ ಉಂಡು ಸುಸ್ತಾಗಿ ಮಲಗತಾರ .....

೮೯೧. ಸಿನೇಮಕ್ಕೆ ಹೋಗಿ ಚೆಕ್ಕಂದಾ ಹೊಡೀತಾರ
ನಾನೂ ಬರ್ತೀನಿ ಅಂದ್ರ
ತಲೆನೋವು ಅಂತ ತೆಲದಿಂಬು ಕೇಳ್ತಾರ .....

೯೨. ಸೀರೆಲ್ಲ ಬಂಗಾರ ಅಲ್ಲ
ಬುಗುಡಿ ಅಲ್ಲ ವಂಕಿ ಅಲ್ಲ
ಚಂದ್ರ ಅಲ್ಲ, ಸೂರ್‍ಯಾ ಅಲ್ಲ
ಮಾವಿನಕಾಯಿ ತತಾ ಅಂದ್ರ
ಬೇವಿನ ಕಾಯಿ ತರತಾರ .....

೯೩. ಸುಟ್ಟ ಹಪ್ಪಳ ಕರದ ಕರಚೀಕಾಯಿ
ಊಟಕ್ಕ ಬಾ ಅಂದ್ರ ಉರಕೊಂತ ಬರ್ತಾನ ....

೯೪. ಸೂಜಿಯೊಳಗ ದಾರ
ದಾರದೊಳಗ ಹೂವು
ಹೂವಿನೊಳಗ ಹುಡುಗಿ
ಅಂತಾಕಿನ ಕಂಡು ಕಣ್ಣು ಹೊಡಿತಾರ .....

೯೫. ಸೂಳೆಯ ಮಗ ಸುಭೇದಾರಾ
ಜಾರೆಯ ಮಗ ಜಮಾದಾರಾ
ಹಾದರಗಿತ್ತಿಯ ಮಗ ಹವಾಲ್ದಾರಾ
ನನ್ನ ಅತ್ತೆ ಮಾವಗ ಹುಟ್ಟಿದ ಮಗಾ ........... ಸಾವುಕಾರಾ.

೯೬. ಹಸೆ ಹಾಲು ಕುಡಿದು ಕುಸ್ತಿ ಆಡಂದ್ರ
ಬಿಸಿ ಹಾಲು ಕುಡಿದು ಬೆಚ್ಚಗ ಮಲಗತಾರ .....

೯೭. ಹಸಿರು ದಟ್ಟಿ ಬಂಗಾರ ಪಟ್ಟಿ
ವಜ್ರದ ವಂಕಿ ಮುತ್ತಿನ ಬಳೆ
ಸಿಂಗಾರ ಆಗಿ ನಿಂತ್ರ ಸೆಟಗೊಂಡು ಹೋಗ್ತಾರ .....

೯೮. ಹರಕ ಜೆತಿಗಿ, ಮುರುಕ ನೊಗ
ಎತ್ತು ಎಳಿವಲ್ದಂತ ಎದಿ ಎದಿ ಬಡಕೊಳ್ತಾರ ....

೯೯. ಹಸರ ಹಾಗಲಕಾಯಿ, ಕುಶಲ ಬೆಂಡೀಕಾಯಿ
ಹಸನಾಗಿ ತಿಂದು ಹಸುಗೂಸು ಎತಿಗೊಂಡು
ಬಿಸಲೀಗೆ ಹೋಗ್ತಾರ ...

೧೦೦. ಹೊಲದಾಗ ಕರಿಕಿ, ಗಾಳಿಪಟದ ಗಿರಕಿ
ನನಕ್ಕಿಂತ ನಮ್ಮ ............. ರು ಬಾಳ ಬೆರಕಿ.

೯೦೧. ಹಣೆಬರಹ ತಿದ್ದೂದು ಹಡೆದವ್ವನಿಗೂ ಆಗದು
ಗುಣಗೇಡಿ ತಿದ್ದೂದು ಬ್ರಹ್ಮನಿಗೂ ಆಗದು
ಒಣ ಡೌಲಿನ ನಮ್ಮ ........ರನ್ನು ತಿದ್ದೂದು ಯಾರಿಂದಲೂ ಆಗದು.

೯೦೨. ಹಲ್ಲುದುರಿ ಗಲ್ಲ ಕುಂತವರು
ಸೊಪ್ಪಿನ ಸವಿ ಅರಿಯದ ಸುಟ್ಟ ಮುಖದವರು
ಕೋಲ್ಲಿಲ್ಲದೇ ಜೋಲಿಹೊಡೆದು ಕಾಲೂರುವವರು
ಎಲ್ಲಾ ಬಲ್ಲ ಪಂಡಿತರಂತೆ ವರ್ತಿಸುವವರು ನಮ್ಮ ............ ರು.

೯೦೩. ಹಿರ್‍ಯಾರು ಕಟ್ಟಿದ ಮಹಲು
ಚಾಚಿಗೊಂಡು ಕುಂತಾರ ಕಾಲು
ಹೊದ್ದಾರ ಹಸಿರು ಶಾಲು
ನಮ್ಮ ............. ರಾಯರು ಮಾಡೂದೆಲ್ಲಾ
ಹಸಗೇಡಿ ಸೂಳ್ಯಾರ ಪಾಲು.

೯೦೪. ಹುಬ್ಬು ಹಾರ್‍ಸೂದ್ ನೋಡ್
ಹುಬ್ಬಳ್ಳಿ ಶಾರಾ ನೋಡ್
ಶಾರದಾಗಿನ ಮಜಾ ನೋಡ್
ಮಜಾದಾಗ ಮುಳುಗಿದ ನಮ್ಮ .............ರ ತೇಜ ನೋಡ್.

೯೦೫. ಹೆಗ್ಗಣಾ ಬಡಿದು ಹೆಗಲಿಗೆ ಹಾಕಿಕೊಂಡು
ಬೆಕ್ಕು ಬಡಿದು ಬಗಲಿಗೆ ಹಾಕಿಕೊಂಡು
ತಗಣೀಗೆ ಮುಗುದಾಣಾ ಹಾಕ್ಕೊಂಡು
ತಂಗೀ ಕರೀಲಾಕ ತಿಪಟೂರಿಗ್ಹೋಗತಾರ
ನನ್ನ ಪತಿರಾಯ .....

೯೦೬. ಹೊಸ ಹಂಡೇದಾಗ ಬಿಸಿ ನೀರ ಕಾಸಿ
ತಾಜಾ ಕೊಬ್ಬರಿ ಎಣ್ಣೀನ ನಾನs ಸೋಸಿ
ಜಳಕಕ್ಕ ಬಾ ಅಂದ್ರ ಜಗಳಕ್ಕ ಬರತಾರ .....

೯೦೭. ಹೊಟ್ಟೆ ತುಂಬಾ ಹೋಟೆಲ್ಲದಾಗ ತಿಂತಾರ
ಬಾಯಿ ಕೆಟ್ಟೈತಂತ ಬಾಯಿ ಬಂದಾಂಗ ಮಾತಾಡತಾರ ....

೯೦೮. ಆಚೇಕೆ ಅವರು, ಈಚೇಕೆ ನಾನು
ನಡುವೆ ಭೋರ್ಗರೆಯೊ ಹೊಳಿ
ಹೊಳಿ ಇಳೀಲಿಲ್ಲ ಮಾರೀ ತೋಳಿಲಿಲ್ಲ
ನಮ್ಮ ............... ರಾಯರು ನನಗ ಕಾಣಲಿಲ್ಲ.

೯೦೯. ಹೊಲಸ್ಯಾರ ಕೂಡ ಹೋಳಿ ಆಡಿ
ಹೊಲಸ ಆಗೀನಂತ ಒಲಿಮ್ಯಾಲ ಕುಂದುರತಾರ .....

೯೧೦. ಹೊರಗ ಬಿಂಕ, ಒಳಗ ಕೊಂಕ
ನಮ್ಮ ........... ರ ನಡತಿ ಬಾಳ ಡೊಂಕ.

೯೧೧. ಹಸಿರು ಸೀರಿ ಕೂಡ ಹರಳಿನ ಉಂಗುರಾ ಕೇಳಿದ್ರ
ಹಸೇ ದಂಟು ಕಿತ್ತು ಹಾರ್‍ಯಾಡಿ ಹೊಡೀತಾರ ....

೯೧೨. ಜಳಕಾ ಮಾಡಂದ್ರ ಜಗಳಾಡತಾರ
ಊಟಾ ಮಾಡಂದ್ರ ಶಟಗೋತಾರ .....

೯೧೩. ಚೆಂದಾಕಿ ಕಂಡ್ರ ಚೌಕಾಸಿ ಮಾಡ್ತಾರ
ಕುರೂಪಿ ಕಂಡ್ರ ಕುರ್ಚಿಗಿ ಹಿಡಿ ಅಂತಾರ
ಮುದುಕಿ ಕಂಡ್ರ ಮುಂದಕ ಹೋಗಂತಾರ
ನನ್ನ ಕಂಡ್ರ ಚಳ್ಳ ಹಣ್ಣ ತಿನಿಸಿ ಮಳ್ಳ ಮಾಡ್ತಾರ .....

೯೧೪. ಚಣ್ಣಾ ಹಾಕಿದಾಕಿಗೆ ಮಳ್ಳ ಆಗ್ತಾರಾ
ತುರುಬದಾಕಿ ನೋಡಿ ತಗಾದಿ ಮಾಡ್ತಾರ .....

೯೧೫. ನಾಯಿಗೆ ಅಂಜಿ, ನೆಲಮನಿ ಹಿಡದಾರ .....

೯೧೬. ಮಲ್ಲಾಪೂರ ಮಂಗೀ ಕೂಡ ಚೆಲ್ಲಾಟ
ನಮ್ಮ ............ರಿಗೆ ಗಂಗಾವತಿ ಗಂಗೀಕೂಡ ರಂಬಾಟ.

೯೧೭. ಗಪ್ಪ್ನ ಉಂಡು ಗಪ್ಪ್ನ ಮಲಗಂದ್ರ
ಸಟ್ಟ್ನ ಎದ್ದು ಸೀಟಿ ಹೊಡಿತಾರ .....

೯೧೮. ಮಂಗ್ಯಾರ್‍ನ ಕಂಡು ಮೀಸಿ ತಿರುವುತಾರ
ಮುಂದಕ ಹೋಗಿ ಮುಲ್ಲಾ ಅನಿಸಿಗೊಂತಾರ .....

೯೧೯. ವಸಂತ ಮಾಸದಾಗ ಸುರಿತಾವು ಹೂವು
ಚಿಗರ್ ಹೂ ಬಿಡತಾವ ಚಂದ್ರಮಾವು
ನಮ್ಮ ............. ರಿಗೆ ನಾ ಅಂದ್ರ ಭಾರಿ ತಲೆನೋವು.

೬೨೦. ಸರಗಿ ಇಟಗೊಂಡು ಸನೇಕ ಹೋದ್ರ
ಸಾಯ್ತಿನಿ ಅಂತ ಸಂದ್ಯಾಗ ಓಡ್ತಾರಾ .....

೬೨೧. ಸವರಾತ್ತ್ಯಾಗ ಕುಂತ ತಗಣಿ ಒರಿತಾರ
ಹಗಲಾದ್ರ ಕುಂತು ತೂಗಡಿಸಲಾರ .....

೬೨೨. ಸಂತಿ ಸೂಳಿ ನಂಬಿಗಿ
ತೂತು ಬಿದ್ದ ತಂಬಿಗಿ
ನಮ್ಮ ................ರಿಗೆ ಬಾಳ ಪ್ರೀತಿ
ನನ್ನ ತವರು ಸಿಂದಗಿ

೬೨೩. ಮಗ್ಗಲಮನಿ ಸುಂದರಿ ಕಂಡು
ಗುಂಗು ಹಿಡಿದು ಸಂದ್ಯಾಗ ಮಲಗ್ಯಾರ .....

೬೨೪. ಸುತ್ತಲೂನು ಮಳಿ
ಹೊಲದಾಗೆಲ್ಲ ಕಳಿ
ಹೊಲಕ ಹೋಗಂದ್ರ
ಕಲಿಕೇರಿಗೆ ಹೋಗ್ತಾರ .....

೬೨೫. ಅತ್ತೆ ಮಾವಾ ಮೈದುನರಿದ್ದ ಮನಿಚೆಂದ
ನನ್ನ .............. ರಾಯರ ಹೃದಯ ತುಂಬಿದ ನಾನೇ ಚೆಂದ.

೬೨೬. ಚಹಾ ಕುಡಿಯುವಾಗ ಬೇಕು ಬಿಸಿ
ನಾನು .................ರ ಹೆಸರು ಹೇಳುವೆನು
ಪಟ್ಟಣಶೆಟ್ಟರ ಮುದ್ದಿನ ಸೊಸಿ.

೬೨೭. ಬರೆಯಲು ಬೇಕು ಮಸಿ
ನನ್ನ ............ರ ನಡುವೆ ಬೆಳೆದೈತಿ ಪ್ರೀತಿಯ ಸಸಿ.

೬೨೮. ಶಂಕರಾಚಾರ್ಯರು ಪ್ರಸಿದ್ಧರಾದದ್ದು
ತಾಯಿಯ ಕೃಪೆಯಿಂದ
ನನ್ನ .......... ರ ಹೆಸರ ಹೇಳುವೆನು
ಗುರು ಹಿರಿಯರ ಕೃಪೆಯಿಂದ.

೬೨೯. ಶಿಲೆಯಲ್ಲಿ ಕಲೆ ಅರಳಿದ್ದು ಅಜಂತಾ ಗುಹೆಯಲ್ಲಿ
ನನ್ನ ............ ರಾಯರ ಹೆಸರು ಹೇಳುವೆನು
ಸ್ವಾಮಿ ಸನ್ನಿಧಾನದಲ್ಲಿ.

೯೩೦. ಗುರು ಹಿರಿಯರ ಸೇವೆಯೇ ಸದಾಚಾರ
ನಾನು ............. ರ ಹೆಸರು ಹೇಳುವೆ ನಿಮಗೆಲ್ಲ ನಮಸ್ಕಾರ.

೯೩೧. ಅತ್ತೆ ಮಾವಂದಿರಿಗೆ
ಅಂಜಿ ನಡೆವ ಸೊಸೆ ಚೆಂದ
ಮನೆಯ ಮುಂದೆ ನಾನಿಟ್ಟ
ರಂಗೋಲಿ ಬಲು ಚೆಂದ
ನನ್ನ ............ ಪತಿದೇವರಿಗೆ ನಾನೇ ಚೆಂದ.

೯೩೨. ಅಕ್ಕಿ ಅಗುಳಿನ್ಹಾಂಗ
ದ್ರಾಕ್ಷಿ ಗೊಂಚಲದ್ಹಾಂಗ
ಯಾಲಕ್ಕಿ ತೆನಿಹಾಂಗ
ಮುತ್ತಿನಂಥಾ ಅತ್ತೆಮ್ಮನ ಹೊಟ್ಟೇಲೆ ಹುಟ್ಟ್ಯಾರ .....

೯೩೩. ಇತ್ತೀಚಿನ ಯುವತಿಯರಿಗೆ ಬೇಕು
ಸಡಗರದ ಶೃಂಗಾರ
ನನ್ನ ಅತ್ತೆ ಮಾವಂದಿರಿಗೆ ಬೇಕು
ನಿತ್ಯಭಕ್ತಿ ಶಿವಾಚಾರ
ನನ್ನ ............ ಪತಿದೇವರಿಗೆ ಮಾಡುವೆ
ಭಕ್ತಿಪೂರ್ವಕ ನಮಸ್ಕಾರ.

೯೩೪. ಗಾಂಧೀಜಿ ಉಡುವುದು ಮೂರು ಮೊಳದ ಪಂಚೆ
ನಾನು ನಡೆವೆನು ಅತ್ತಿ ಮಾವರಿಗಂಜಿ
.............ರ ಹೆಸರ ಹೇಳುವೆ ಇಂದು ಮೂರಸಂಜಿ.

೯೩೫. ಗುರು ಹಿರಿಯರ ದಯೆಯಿಂದ
ಅಮೃತವನುಂಡೆ
ಅತ್ತೆ ಮಾವರ ದಯೆಯಿಂದ
ಗೃಹಸ್ಥಾಶ್ರಮ ಕಂಡೆ
...............ರ ದಯೆಯಿಂದ
ಸರ್ವಸುಖ ಕಂಡೆ.

೯೩೬. ಗೋಪಿಕಾಸ್ತ್ರೀಯರು ಭಕ್ತಿಯಿಂದ ಕೇಳುತ್ತಿದ್ದುದು
ಶ್ರೀಕೃಷ್ಣ ಪರಮಾತ್ಮನ ಮುರಲಿ
..............ರು ಕೀರ್ತಿವಂತರಾಗಿ ಬಾಳಲು
ನಿಮ್ಮೆಲ್ಲರ ಆಶೀರ್ವಾದವಿರಲಿ.

೯೩೭. ದುಡಿಯಲು ಬೇಕು ಮೈಯಲ್ಲಿ ಶಕ್ತಿ
ಗುರು ಹಿರಿಯರಲ್ಲಿ ಬೇಕು ಶ್ರದ್ಧಾ ಭಕ್ತಿ
..................ರ ಪಾದಸೇವೆಯೇ ನನಗೆ ಸದ್ಗತಿ.

೯೩೮. ನನ್ನ ಮಾವ ಹಣವಂತರು
ನನ್ನ ಅತ್ತೆ ಗುಣವಂತರು
ನನ್ನ ...............ರಾಯರು
ಮಹಾ ಪುಣ್ಯವಂತರು.

೯೩೯. ಗೋವಿನಂಥಾ ಅತ್ತಿ
ಬಸವಣ್ಣನಂಥಾ ಮಾವ
ನಾಚೂಕಿನ ನೆಗೆಣ್ಣ್ಯಾರು
ಪಾರಿಜಾತ ಹೂವು ಪಾವಡದಾಗ ಕಟಗೊಂಡು
ನನ್ನ ಕಂಡು ನಕ್ಕೊಂತ ಕೊಡತಾರ .....

೯೪೦. ಬಂಗಾರ ಬದ್ನಿಕಾಯಿ
ಸಿಂಗಾರ ಬೆಂಡಿಕಾಯಿ
ನಾ ಮಾಡಬೇಕು, ಅತ್ತಿ ನೀಡಬೇಕು
ನಮ್ಮ ............ರು ನನ್ನ ಮಾರಿ
ನೋಡ್ತಾ ಉಣಬೇಕು.

೯೪೧. ಮಗು ಒಳ್ಳೇದಾಗಲು ತಂದೆ ತಾಯಿ ಬೇಕು
ಜನಕ್ಕ ಒಳ್ಳೇದಾಗಲು ಒಳ್ಳೆ ಸಮಾಜ ಸೇವಕ ಬೇಕು.
ನಮ್ಮ ...............ರಿಗೆ ಜನ ಸೇವಕರು ಬೇಕು.

೯೪೨. ಮಾವನ ಹೆಸರು ಮಲ್ಲಿಗೆ ಹೂವು
ಅತ್ತೆಯ ಹೆಸರು ಅತ್ತಿ ಹೂವು
ನನ್ನ ಹೆಸರು ಜಾಜಿ ಹೂವು
ಜಾಜಿ ಹೂವಿನ ಕೂಡ ಮೋಜ ಮಾಡ್ತಾರ ....

೯೪೩. ಮಾಘ ಮಾಸದಲ್ಲಿ ಚಿಗಿಯುವುದು ಮಾವಿನ ಸಸಿ
ನಾನು ...............ರ ಹೆಸರು ಹೇಳುವೆನು ಹಿರೇಮಠದ ಸೊಸಿ.

೯೪೪. ರುಕ್ಮಿಣಿಯು ಕೃಷ್ಣನಿಗೆ ಓಲೆ ಬರೆದದ್ದು
ಮುತ್ತುರತ್ನಗಳನ್ನು ಸುಟ್ಟ ಮಸಿಯಿಂದ
ನಾನು ..............ರ ಹೆಸರು ಹೇಳುವೆ
ಮನೆ ದೇವರ ಕೃಪೆಯಿಂದ.

೯೪೫. ರಾಮನಪೂಜೆ ಹನುಮಂತನಿಗೆ ಆನಂದ
ನಮ್ಮ .............ರು ಮಾಡುವ ಪೂಜೆ ಎಲ್ಲರಿಗಾನಂದ.

೯೪೬. ವರದಕ್ಷಿಣೆಗಾಗಿ ಬಳಲುವನು
ಕನ್ನೆಯಾ ತಂದೆ
ಅದಕ್ಕಾಗಿ ಹಾರಾಡುವನು
ವರನ ತಂದೆ
ನಮ್ಮ ............ರ ಹೆಸರ ಹೇಳುವೆ
ನಿಮ್ಮೆಲ್ಲರ ಮುಂದೆ.

೯೪೭. ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ವಿದ್ಯಾರಣ್ಯ
ನನಗೆ ............... ಪತಿ ದೊರೆತದ್ದು ಜನ್ಮಾಂತರದ ಪುಣ್ಯ.

೯೪೮. ಹತ್ತು ಮಂದ್ಯಾಗ ಹೇಳುವೆನು ಅತ್ತೆ ಮಾವರ ಹೆಸರು
ನೂರು ಮಂದ್ಯಾಗ ಹೇಳುವೆನು ತಂದೆ ತಾಯಿಯ ಹೆಸರು
ಕುಂತ ಸಭಾದಾಗ ಹೇಳುವೆನು ನನ್ನ ............ ಪತಿ ದೇವರ ಹೆಸರು.

೯೪೯. ಸೊಸೆಯಂದಿರು ನಡಿಬೇಕಂತೆ ಹಿರಿಯರಿಗೆ ಅಂಜಿ
ನಮ್ಮವರು ನನಗ ತರಲಿಲ್ಲ ಬಂಗಾರ ಗುಂಜಿ
ನಾನು .............. ರ ಹೆಸರು ಹೇಳುವೆನು ಈ ಸಂಜಿ.

೯೫೦. ಅಹಿಂಸಾ ಪರಮೋಧರ್ಮವೇ ಜೈನಧರ್ಮ
ನಮ್ಮ ..........ರು ಜೈನ ಪುರಾಣ ಓದಿ ತಿಳಿದರು
ಧರ್ಮದ ಮರ್ಮ.

೯೫೧. ಅಂಗಕ್ಕೆ ಆಚಾರವೇ ಚೆಲುವು
ಆತ್ಮನಿಗೆ ಅರಿವೇ ಚೆಲುವು
ನನ್ನ ...........ರಿಗೆ ನನ್ನ
ಸೇವಾ ಧರ್ಮವೇ ಚೆಲುವು.

೯೫೨. ಮನಿತುಂಬಾ ಬಂಗಾರದ ಸಳಿ
ಅಂಗ್ಯೆಯಾಗ ಅರಗಿಳಿ
ಮುಂಗ್ಯೆಯಾಗ ಮೂರು ಗಿಳಿ
ಪಂಜರದಾಗ ಕೂತುಗೊಂಡು ಪಗಡಿ ಆಡತಾರ .....

೯೫೩. ಅಕ್ಕಮಹಾದೇವಿಗೆ ಚಿಕ್ಕಂದಿನಲ್ಲಿ ದೊರೆತದ್ದು ವೈರಾಗ್ಯ
ನಮ್ಮ ...........ರು ಹೆಸರು ಹೇಳಲು ದೊರಕಿದ್ದು ನನ್ನ ಸೌಭಾಗ್ಯ.

೯೫೪. ಅಂದದಿಂದ ಹೇಳುವೆ ಅರುಹಂತರ ಹೆಸರು
ಶೀಲದಿಂದ ಹೇಳುವೆ ಸಿದ್ಧರ ಹೆಸರು
ಆಧಾರದಿಂದ ಹೇಳುವೆ ಆಚಾರ್ಯರ ಹೆಸರು
ಉದಾರದಿಂದ ಹೇಳುವೆ ಉಪಾಧ್ಯಾಯರ ಹೆಸರು
ಸಮಾಧಾನದಿಂದ ಹೇಳುವೆ ಸಾಧುಗಳ ಹೆಸರು
ಭಕ್ತಿಯಿಂದ ಹೇಳುವೆ .............ರ ಹೆಸರು.

೯೫೫. ಅಂಗೈಗೆ ಅರಿಷಿಣ ಬೊಟ್ಟಿಟ್ಟು
ಮುಂಗೈಗೆ ಬಂಗಾರ ಬೆಳೆ ತೊಟ್ಟು
ಗಂಗಾಳದಾಗ ರಂಗೋಲಿ ಹಾಕಾಕ ಹೋದ್ರ
ಸಂಧ್ಯಾಗ ನಿಂತ ಸಿಳ್ಳು ಹೊಡೀತಾರ .....

೯೫೬. ಅಶ್ವತ್ಥಾಮನು ಪಾಂಡವ ವಂಶ ನಿರ್ಮೂಲನ ಮಾಡಲು
ಉತ್ತರೆಯ ಗರ್ಭಕ್ಕೆ ಬಿಟ್ಟನು ಬ್ರಹ್ಮಾಸ್ತ್ರ ಅದಕ್ಕೆ ಪ್ರತಿಯಾಗಿ
ಅರ್ಜುನನನು ಬಿಟ್ಟನು ಪಾಶುಪತಾಸ್ತ್ರ
ನಮ್ಮ ..............ರ ಕೈಯಾಗ ಶೋಭಿಸುವುದು
ನಾ ಕೊಟ್ಟ ಕರವಸ್ತ್ರ

೯೫೭. ಅರ್ಜುನನು ಪ್ರೇಮದಿಂದ
ಮಾಡಿದನು ಸುಭದ್ರಾಹರಣ
.............ರು ನನಗೆ ಮಾಡಿದರೂ
ರೂಪಾ ಎಂಬ ನಾಮಕರಣ.

೯೫೮. ಅಡಕಿ ಒಡಿಯಾಕಬೇಕು ಅಡಕೊತ್ತು
ಮೂಗಿಗೆ ಬೇಕು ಮುತ್ತಿನ ನತ್ತು
ಸುಖ ಜೀವನಕ್ಕ ಬೇಕು ಧನ ದೌಲತ್ತು
ನನಗೆ ............ ರೇ ಸರ್ವ ಸಂಪತ್ತು.

೯೫೯. ಅಳೆಯಲು ಬೇಕು ಮಾಪು
ತಾಂಬೂಲಕ್ಕೆ ಬೇಕು ಬಡೇ ಸೋಪು
..............ರ ಸ್ನಾನಕ್ಕೆ ಬೇಕು
ಮೈಸೂರು ಸ್ಯಾಂಡಲ್ ಸೋಪು.

೯೬೦. ಅಂಜಂತಾ ಗುಹೇದಾಗ ಬಣ್ಣದ ಚಿತ್ರ ಚೆಂದ
ನಾನು ............ ರಾಯರ ಜೋಡಿ ಚೆಂದ.

೯೬೧. ಅಂಗಕ್ಕೆ ಲಿಂಗವೇ ಶ್ರೇಷ್ಠ
ಲಿಂಗಕ್ಕೆ ಜಂಗಮವೇ ಶ್ರೇಷ್ಠ
ಸತಿಗೆ ಪತಿಯೇ ಶ್ರೇಷ್ಠ
ನನಗೆ ............ರ ಪಾದವೇ ಶ್ರೇಷ್ಠ.

೯೬೨. ಅತ್ತೀ ಹೊಟ್ಟ್ಯಾಗ ಮುತ್ತಿನಂತೋರ ಹುಟ್ಟಿ
ಮುತ್ತಿನ ಕುದುರಿ ತರಾಕ ಮದ್ರಾಸಕ್ಕ ಹೋಗಿ
ನನಗಂತ ಮದರಂಗಿ ತಂದಾರ .....

೯೬೩. ಅಂಟು ಬೆಲ್ಲ ಗಂಟು ಹುಗ್ಗಿ
ಎಂಟು ದಿನಕ್ಕೊಮ್ಮೆ ಗಂಟ ಮಾರಿ ಮಾಡಿ
ಪಂಟ ಬಡಕೋತ ದಂಟೇಲೆ ಹೊಡಿತಾರ .....

೯೬೪. ಅರುವತ್ತು ರೂಪಾಯಿ ಆಕಳ
ಮೂವತ್ತು ರೂಪಾಯಿ ಮಗಿ
ಕರಬಿಡು ಅಂದ್ರ ಕಡಿದಾಡತಾನ
ಹಾಲು ಕುಡಿ ಅಂದ್ರ ಹಾರಿಗ್ಗಾಲ್ಲೆ ಬರ್ತಾನ ......

೯೬೫. ಗೋಧಿ ತರಲಿಲ್ಲ ಹುಗ್ಗಿ ಮಾಡಲಿಲ್ಲ
ಅಕ್ಕಿ ತರಲಿಲ್ಲ ಅನ್ನಾ ಮಾಡಲಿಲ್ಲ
ಉಪ್ಪಿಟ್ಟು ತಿಂದು ಗಪ್ಪನ ಮಲಗತಾರ ....

೯೬೬. ಅತ್ತೆ ಬಂದ್ರ ಒಪ್ಪತ್ತು ಮಾಡ್ತಾರ
ಮಾವ ಬಂದ್ರ ನೇಮಾ ಮಾಡ್ತಾರ
ನಾ ಅಂದ್ರ ಹಲ್ಲ ಕಡಿತಾರ .....

೯೬೭. ಆರು ರೂಪಾಯಿ ಸೀರಿ
ಮೂರು ತಾಸಿನ ಉಡಿಯಕ್ಕಿ
ನತ್ತ ಮಾಡಿಸಿಕೊಡಂದ್ರ
ನಕ್ಕೊಂತ ಹೋಗ್ತಾರ .....

೯೬೮. ಆ ಕಟ್ಟು ಈ ಕಟ್ಟು
ಕೈಯಾಗೊಂದ ಚುಪ್ಪಾದ ಕಟ್ಟು
ತೆಲಿಗೆ ಒಳೇ ಕ್ರಾಪು ಬಿಟ್ಟು
ಕಟ್ಟೀಮ್ಯಾಲ ಕುಂತು ಕೊಳಕ ಮಾತಾಡತಾರ ....

೯೬೯. ಆಕಾಶದಲ್ಲಿ ಹೊಳಿಯುವುದು ನಕ್ಷತ್ರ
ಬೀಗತನದಲ್ಲಿ ವಿಚಾರಿಸುವುದು ಕುಲಗೋತ್ರ
ನನ್ನ ಕೊರಳಿಗೆ ಶೋಭಿಸುವುದು
ನಮ್ಮ ...........ರು ಕಟ್ಟಿದ ಮಂಗಳಸೂತ್ರ.

೯೭೦. ಈರಾಡಿ ಹಾರ್‍ಯಾಡಿ ಹೋರಾಡಿದ್ರೂ
ಸವಾಸೇರು ಬಂಗಾರ ಕೊಡಾಕ
ನಮ್ಮ.... ರಿಗೇನು ಧಾಡಿ.

೯೭೧. ಆಕಾಶದಾಗ ಹೊಳಿಯೂದು ಚಂದ್ರ
ನನಗ ............. ಇವರೇ ಇಂದ್ರ.

೯೭೨. ಜಾತಿ ಗೀತಿ ಭೂತಾಯಿಗಿಲ್ಲ ಇಲ್ಲ
ಮಡಿ ಮೈಲಿಗಿ ನೀರಿಗಿಲ್ಲ ಇಲ್ಲ
ನಾನಂದ್ರ .... ರಿಗೆ ತಿರಸ್ಕಾರ ಎಂಬುದೇ ಇಲ್ಲ ಇಲ್ಲ.

೯೭೩. ಇಲ್ಲದ್ದು ಬೇಕಾ ಬೇಕು
ಸಾಲಾಮಾಡಿ ತಿನ್ನಾಕೊಲ್ಲಾ ತಿನಬೇಕು
ನನ್ನ ಬಿಟ್ಟು ಇರಾಕೊಲ್ಲಾ
ಇಂಥಾವರಿಗೆ ನಾ ಏನ್ ಮಾಡಬೇಕು .....

೯೭೪. ಗಂಗಿ ಏರ್‍ಯಾಳ ಶಿವನ ಜೆಡಿಯಾಗ
ಸುಂದ ಬಡದ ಕುಂತಾರ ಮನಿಯಾಗ .....

೯೭೫. ಊರು ಊರಿಗೂ ಹರದಾರಿ
ಹರದಾರಿಗೊಂದು ಕೋರ್ಟು
ಕೋರ್ಟಿನ್ಯಾಗೊಂದ ಕಚೇರಿ
ಕಚೇರ್‍ಯಾಗ ಕುಂತ ವಿಚಾರ ಮಾಡ್ತಾರ .....

೯೭೬. ಊಟಕ್ಕೆ ಬೇಕು ಉಪ್ಪಿನಕಾಯಿ
ತೋಟಕ್ಕೆ ಬೇಕು ವೀಳ್ಯೇದ ಎಲೆ
ಊಟಕ್ಕ ಬಾ ಅಂದರ
ಕಾಟಾ ಕೊಡತಿ ಅಂತಾರ ......

೯೭೭. ಊರ ಮುಂದೆ ತೆಂಗಿನ ತೋಟ
ಅದರಲ್ಲಿರುವುದು ಚಿನ್ನದ ಗರಿ
ಮಗ ಬಸವಣ್ಣ ದೊರೆ
...........ರು ಹೋಗುತ್ತಾರೆ ಕರೆ.

೯೭೮. ಊರು ತುಂಬಾ ಉರಿತಾರ
ಉಗಾದಿ ಮುಂದ
ಉಧೋ ಉದೋ ಅಂತಾರ ....

೯೭೯. ಏಡಿ ಮುಟ್ಟದ ನೀರು
ಮೀನು ಮುಟ್ಟದ ನೀರು
ಆಕಾಶದ ಭಾವಿ ನೀರ ತಂದು
ಅರಭಾವಿ ಕಟ್ಟಿ ಕಟ್ಟಿ
ಮ್ಯಾಲ ಬೆಳ್ಳಿ ಒಲಿಗುಂಡ ಹೂಡಿ
ಬಂಗಾರ ತಪೇಲಿ ಇಟ್ಟು
ಚಿನ್ನದ ಕಡ್ಡಿ ಕೊರದು
ಅನ್ನಾ ಮಾಡಿ ಉಣ್ಣಾಕ ಬಾ ಅಂದ್ರ
ಒಲ್ಲೊಲ್ಲೆಂತ ಒಡಗುಡತಾರ ....

೯೮೦. ಎಂಟು ಮಣಾ ಎಳ್ಳ
ಏಳ ಮಣಾ ಜೊಳ್ಳ
ನಮ್ಮ ...........ರ ಮಾತು ಬರೀ ಸುಳ್ಳ.

೯೮೧. ಎಳ್ಳ ಹೂವಿನ ಸೀರಿ
ಬೆಳ್ಳಿ ಕಾಲುಂಗರ
ಒಳ್ಳೆಯವರ ಮಗಳಂತ
ಹೊಳ್ಳೊಳ್ಳಿ ನೋಡ್ತಾರಾ ....

೯೮೨. ಏನ ಬರೀತಾರೊ ಬರೀತಾರ
ನನ್ನ ಮುಂದಕ್ಕ ಕರೀತಾರ
ಮುತ್ತುರತ್ನಾ ಸುರುವುತಾರ
ಅಕ್ಷರದಾಗ ನಕ್ಷತ್ರ ಕಾಣಿಸ್ತಾರ ....

೯೮೩. ಒಂದು ಸೂಜ್ಯಾಗ ಒಂಭತ್ತು ಗುದ್ಲಿ ಮಾಡಿ
ಎಂಭತ್ತು ರೊಟ್ಟಿ ತಿಂದು
ಮ್ಯಾಗ ಹಂಡೆ ಹಾಲು ಕುಡದು
ಹಕ್ಕರಕೆ ಬೇರು ಹರಿಲಿಲ್ಲಂತ
ಹಾರಿ ಹಾರಿ ಅಳ್ತಾರ .....

೯೮೪. ಕಣ್ವ ಋಷಿಯ ತಪೋವನದಲ್ಲಿ
ರಾಜ ಕಂಡದ್ದು ದಿವ್ಯಸೃಷ್ಟಿ
ಶಕುಂತಲೆ ಗೆಳತಿಯರೊಂದಿಗೆ ಆಡುತ್ತಿದ್ದಳು ಆಟ
ಆಗ ದುಷ್ಯಂತ ರಾಜನಿಗೆ ಕಂಡಿತು
ಸುಂದರಿ ಶಕುಂತಲೆಯ ಕಣ್ನೋಟ
...............ರ ಹೆಸರ ಹೇಳುವೆನು
ನಿಲ್ಲಿಸಿರಿ ನಿಮ್ಮ ಹುಡುಗಾಟ.

೯೮೫. ಕಣ್ಣಿಗೆ ಕಪ್ಪಿನ ಆಶೆ
ಹೆಣ್ಣಿಗೆ ತವರಿನ ಆಶೆ
ನಮ್ಮ ...........ರಿಗೆ ನನ್ನಾಶೆ.

೯೮೬. ಕಮಲಗಳಿಗೆ ಇರುವವು ಸಹಸ್ರದಳ
...........ರಿಗೆ ಹಚ್ಚುವೆನು ಸುಗಂಧದ ಪರಿಮಳ.

೯೮೭. ಕನ್ನಡ ಮಹಾಕವಿ ಕುವೆಂಪು
ಬೆಳದಿಂಗಳಿನ ಊಟ ಬಲು ಸಂಪು
.............ರಿಗೆ ನನ್ನ ಹೆಸರುಗೊಂಡು ಕರೆಯ ಇಂಪು.

೯೮೮. ಕರ್ನಾಟಕಕ್ಕೆ ನೀಲಗಿರಿ ಬಲ ಸೊಗಸು
................ರ ಹೆಸರು ಹೇಳಿ ಬಿಚ್ಚುವೆನು ಪ್ರೇಮಗನಸು.

೯೮೯. ಕರಿಕೋಟು ಕೈಯಾಗ ಬ್ಯಾಗು
ಕಾರಗಾಡಿ ತಗೊಂಡು ಕರಿಯಾಕ ಬರ್ತಾರ .....

೯೯೦. ಕತ್ತೆ ಅಂತ ಬೈತಾರ
ಮತ್ತೆ ಮುಂದಕ ಕರೀತಾರ
ಸುತ್ತಮುತ್ತ ನೋಡ್ತಾರ
ಮತ್ತ ಮುತ್ತು ಕೊಡ್ತಾರ .....

೯೯೧. ಕಟಿಕಟಿ ರೊಟ್ಟಿ
ಕಾರೆಳ್ಳ ಹಿಂಡಿ
ಮಟ ಮಟ ಮಧ್ಯಾನ
ಕಟಗೊಂಡ ಹೋಗಂದ್ರ
ಶೆಟಗೊಂಡ ಹೋಗ್ತಾರ ........

೯೯೨. ಖಡೆ ತೋಡೆ ಕೈಯಾಗ
ಮಲ್ ಮಲ್ ಅಂಗಿ ಮೈಯಾಗ
ಕಂಠೀ ಸರ ಕೊರಳಾಗ
ಪಚ್ಚೇತುಂಗ್ರ ಬೆರಳಾಗ
ಹಂಪೀ ಜಾತ್ರೀಗೆ ಹೋಗಿ ಸಂಪತ್ತಿನ್ಯಾಗ ಬರತಾರ ....

೯೯೩. ಪಕ್ಷಿಕಾಶಿ ಕವಿತ ಬರೆದರು ಕೆ.ವಿ. ಪುಟ್ಟಪ್ಪ
ಇಂದು ............. ರಾಯರಿಗೆ ಧಾರೆಯೆರೆದರು ನಮ್ಮಪ್ಪ.

೯೯೪. ಅಹಲ್ಯೆಯನ್ನು ಶ್ರೀರಾಮಚಂದ್ರ ಉದ್ಧರಿಸಿದನು
ತನ್ನಪಾದ ಸ್ಪರ್ಶದಿಂದ
ನಾನು ..............ರ ಹೆಸರು ಹೇಳುವೆನು
ನಿಮ್ಮೆಲ್ಲರ ಆಗ್ರಹದಿಂದ.

೯೯೫. ಶ್ರೀಕೃಷ್ಣನು ಹುಟ್ಟಿದ್ದು ಮಥುರಾದಲ್ಲಿ
ಬೆಳೆದದ್ದು ಗೋಕುಲದಲ್ಲಿ
ರಾಜ್ಯವಾಳಿದ್ದು ದ್ವಾರಕಾದಲ್ಲಿ
ನಾನು ........... ರ ಹೆಸರು ಹೇಳುವೆನು
ನಿಮ್ಮೆಲ್ಲರ ಸಮ್ಮುಖದಲ್ಲಿ.

೯೯೬. ಕಳ್ಳ ಹೊಕ್ಕರೆ ಮನೆ ಗಿರ್ದಾಕೇಡು
ಕೊಳ್ಳಿ ಹೊಕ್ಕ ಮನೆ ಅರ್ಧಾ ಕೇಡು
ಅಳಿಯ ಹೊಕ್ಕ ಮನೆ ಪೂರಾ ಕೇಡು
ನಮ್ಮ .............ರು ಹೊಕ್ಕ ಮನೆ ಜಗಳದಾ ಬೀಡು.

೯೯೭. ಕನ್ನಡದ ಆದಿಕವಿ ಪಂಪ
ತೋಟದಲ್ಲಿ ಸೂಸುವುದು ಮಲ್ಲಿಗೆಯ ಕಂಪ
...............ರು ಮನೆಯಲ್ಲಿದ್ದರೆ ಇಡೀ ದಿನ ರಂಪ.

೯೯೮. ಕನ್ನಡದ ಕಡುಗಲಿ ಎಚ್.ಎಂ. ನಾಯಕ
.............ರನ್ನು ವರಿಸಿರುವೆ ಪ್ರೇಮಪೂರ್ವಕ.

೯೯೯. ಕ್ಯಾದಗಿ ಹೂವಿನ ಕಂಪಿನವರು
ಮಲ್ಲಿಗೆ ಹೂವಿನ ಬಣ್ಣದವರು
ಎಲ್ಲಮ್ಮನಂಥ ಮಡದಿ ಕರಕೊಂಡ
ಮಲ್ಲಿಕಾರ್ಜುನನ ಗುಡಿಗೆ ಹೋಗ್ತಾರ .....

೧೦೦೦. ಕಾಶಿಯಲ್ಲಿ ಇರುವುದು ವಿಶ್ವೇಶ್ವರ
ಹಂಪಿಯಲ್ಲಿ ಇರುವುದು ವಿರುಪಾಕ್ಷೇಶ್ವರ
ನನ್ನ ಪ್ರೇಮ ಮಂದಿರದ ........... ರೇ ನನ್ನ ಹೃದಯೇಶ್ವರ.

೧೦೦೧. ಕತೆ ಕಾದಂಬರಿ ಕಲ್ಪನೆಯ ಕಥೆ
................ರು ಬಿಟ್ಟು ಹೋದರೆ
ಏನು ಹೇಳಲಿ ನನ್ನ ವ್ಯಥೆ.

೧೦೦೨. ಕೀಚಕನು ದ್ರೌಪತಿಯನ್ನು ಕಾಡಿದರು ಬಗೆಬಗೆಯಾಗಿ
.................ರು ನನ್ನ ಕಾಡುತ್ತಲಿಹರು ಅಚ್ಚ ಪ್ರೀತಿಗಾಗಿ.

೧೦೦೩. ಕೂಸಿಗೆ ತಾಯಿ ಬೇಕು
ರಾಣಿಗೆ ದಾಸಿ ಬೇಕು
ರಾಜನಿಗೆ ರಾಣಿ ಬೇಕು
ತವರ ಮನ್ಯಾಗ ತಾಯಿ ಬೇಕು
...........ರಿಗೆ ನಾ ಬೇಕು.

೧೦೦೪. ಕೊಟ್ಟು ಕುದ್ಯಾವರಲ್ಲ
ಗುಟ್ಟು ಹೇಳಾವರಲ್ಲ
ಕೆಟ್ಟು ಬಾಳಾದವರಲ್ಲ
ನನ್ನ ಬಿಟ್ಟು ಹೋಗಾವರಲ್ಲ .....

೧೦೦೫. ಕೈಯಲ್ಲಿರಬೇಕು ಕಾಸು
ಮನೆಯಲ್ಲಿರಬೇಕು ಗ್ಯಾಸು
.............ರು ನನ್ನ ಬಿಟ್ಟು
ಇರೂದಿಲ್ಲ ಒಂದು ತಾಸು.

೧೦೦೬. ಕುಮಾರವ್ಯಾಸನು ಮಹಾಭಾರತ ಬರೆದದ್ದು
ಗದುಗಿನ ವೀರನಾರಾಯಣನ ಸಮ್ಮುಖದಲ್ಲಿ
ನಾನು ಕಡೆತನಕ ಬಾಳುವುದ ...........ರ ಅಡಿದಾವರೆಗಳಲ್ಲಿ.

೧೦೦೭. ಶ್ರೀಕೃಷ್ಣನು ಆಲದ ಎಲೆಯ ಮೇಲೆ
ಮಲಗಿದ್ದು ಚಮತ್ಕಾರ
ನಾನು ನಮ್ಮ ............ರಿ ಮಾಡುವೆ ನಿತ್ಯ ನಮಸ್ಕಾರ.

೧೦೦೮. ಗಣಪತಿಯ ತಾಯಿ ಪಾರ್ವತಿ
ಪರಮೇಶ್ವರಗ ಅನ್ನುವರು ಗಿರಿಜಾಪತಿ
............ರ ಹೆಸರು ಹೇಳುವೆನು ನಾನವರ ಸತಿ.

೧೦೦೯. ಮಾತಿನ್ಯಾಗ ಮಾತಿಲ್ಲ
ಮನೆಸಿನ್ಯಾಗ ಮನಸ್ಸಿಲ್ಲ
ಮಾರಿಕಂಡ್ರ ಮರೆಯಾಗ್ತಾರ .....

೧೦೧೦. ಮಾತು ಕೇಳೂದಿಲ್ಲ
ಮನ್ಯಾಗ ಇರೂದಿಲ್ಲ
ದೊಡ್ಡಕ್ಕಿ ಉಣ್ಣೂದಿಲ್ಲ
ಸಣ್ಣಕ್ಕಿ ತರೂದಿಲ್ಲ
ಸವತಿ ಕರಕೊಂಡು
ಸಂತಿ ನಡಿಸ್ಯಾರ .....

೧೦೧೧. ತೆನಿ ತೆನಿ ಕೂಡಿದರ ರಾಶಿ
ಹನಿ ಹನಿ ಕೂಡಿದರ ಹಳ್ಳ
ನಮ್ಮ .............ರ ಮಾತು ಬರೀ ಜೊಳ್ಳ.

೧೦೧೨. ಮುದ್ದೇಬಾಳ ವಂಕಿ
ಮುರುಗಿ ಸರಾ
ವಜ್ರದೋಲಿ
ಗೆಜ್ಜಿ ಟೀಕಿ
ನತ್ತಮಾಡ್ಸಂದ ಸಟ್ಟ್ನ ಏಳ್ತಾರ .....

೧೦೧೩. ಮುದ್ದು ಕೊಟ್ಟು ಮುಂದಕ ಕರೀತಾರ
ಸದ್ದಿಲ್ಲ ಸಂತೀಗೆ ಹೋಗಿ
ಒಂಕಿ ಕೈಯಾಕಿಗೂಡ ಒಗತನ ಮಾಡ್ತಾರ ....

೧೦೧೪. ರನ್ನದ ಮಾಲು, ಚಿನ್ನದ ಕಿಡಕಿ
ಬಾಯಾಗ ಅಡಕಿ ತಿನಕೋತ
ಬಿಡಕಿ ಮನಿಗೆ ಹೋಗ್ತಾರ ....

೧೦೧೫. ರೋಣದ ಕ್ವಾಣ ಹನ್ನೆರಡು ಪರಿಯಾಣಾ
ಪರಿಯಾಣದಾಗ ಒಂದೊಂದು ಬರಾದ ಹೆಣಾ
ಹೆಣದ ಕೈಯಾಗೊಂದು ಕುಬುಸದ ಕಣಾ
ನನ್ನ ಕೈಯಾಗ ಏನಿಲ್ಲ ಭಣಾಬಣಾ
ಸೂಳಿಗಿಟ್ಟಾರ ಕೈತುಂಬ ಬಂಗಾರ ಮಣಾ.
ನೀವೇನ್ ಕೇಳ್ತೀರಿ ........... ರ ಗುಣಾ.

೧೦೧೬. ವಿಜಾಪೂರ ಸಕ್ಕ್ರಿ ಗೋದಿ ಬಕ್ಕ್ರಿ, ಹೊಳಿ ಸಾಲ ತುಪ್ಪ
ಹಾಲ ಮೇಲಿನ ಕೆನಿ, ಹವಳ ಮುತ್ತಿನಗೊನಿ
ಊಟಕ್ಕ ಬಾ ಅಂದ್ರ ಪ್ಯಾಟಿ ತಿರಗಾಕ ಹೋಗ್ತಾರ .....

೧೦೧೭. ವಿದ್ಯೆ ಇದ್ದವನ ಮುಖ್ಯವು ಮುದ್ದುಬರುವಂತಿಹುದು
ವಿದ್ಯೆ ಇಲ್ಲದ ..............ರ ಮುಖವು
ಶುದ್ಧ ಪೆದ್ದನಂತಿರುವುದು.

೧೦೧೮. ಸಣ್ಣಕ್ಕಿ ಉದುರುದುರನ್ನ
ಕಣ್ಣೀ ಗೊತ್ತೂ ಹಪ್ಪಳಾ
ಸೋಸಿದ ಕೆನಿ ಮೊಸರ ನೀಡಿದ್ರ
ಪಂತ್ಯಾಗ ಕುಂತಗೊಂಡು ಜಂತಿ ನೋಡ್ತಾರ ....

೧೦೧೯. ಸಂದಿಮನಿ ಗೊಂದಿ ಮನಿ
ಗೊಂಬವ್ವನಂತಾ ಹೆಣ್ತೀಗೂಡ ಗೊಂದಲಾ ಮಾಡ್ತಾರ ....

೧೦೨೦. ಸಣ್ಣನ್ನ ಶ್ಯಾವಗಿ, ಚಿನ್ನೀ ಸಕ್ಕರಿ ಹಾಕಿದ್ರ
ಚಳ್ಳ ಹಣ್ಣ ತಂದು ಚೀಪಾಕ ಹತ್ತಾರ .....

೧೦೨೧. ಸಕ್ಕರಿ ಸೌಟು ಉತ್ತತ್ತಿ ಬೋಟು
ರಸಬಾಳಿ ಹಣ್ಣು ರಾಯಬಾಳ ಕಬ್ಬು
ಎಮ್ಮಿ ಹಾಲು ಕಮ್ಮನ್ನ ತುಪ್ಪ
ಸುಮ್ನ ಉಂಡು ಸೂಳ್ಯಾರ ಮನೀಗೆ ಹೋಗ್ತಾರ ....

೧೦೨೨. ಸಂಗ್ತೀಗೆ ಹೊಲ್ಯಾರ ಗಂಗಿ
ಆರು ಮೊಳದ ಅಂಗಿ
ಮೂರು ಗೇಣು ಬೊಕ್ಕಣ
ದೀಡ ರೂಪಾಯಿ ಇಟಗೊಂಡು
ಡೌಲು ಮಾಡ್ತಾರ ....

೧೦೨೩. ಸಮೀಪಕ್ಕ ಬರತಾರ
ಸವಿ ಸವಿ ಮಾತಾಡತಾರ
ಸೀರಿ ಕೇಳಿದ್ರ ಮಾರೀ ತಿರುವುತಾರ ....

೧೦೨೪. ಸಾವಿರ ಸುರುಳಿ ಹೋಳಿಗಿ
ಎಂಟ್ನೂರು ಎಣ್ಣೀ ಹೋಳಿಗಿ
ಸಪ್ಪಳಿಲ್ಲದ ಉಂಡು ಸುಸ್ತಾಗಿ ಮಲಗತಾರ .....

೧೦೨೫. ಸಿನೇಮಾಕ ಹೋಗ್ತಾರ
ಗೆಳೆಯರ ಕೂಡ ಹೋಗ್ತಿನಂತಾರ
ನನ್ನ್ ಕರಕೊಂಡು ಹೋಗಂದ್ರ
ಆರಾಮ ಇಲ್ಲಂತಾರ ...........

೧೦೨೬. ಸೀರತಾ ಅಂದಿಲ್ಲ ಬಂಗಾರ ತಾ ಅಂದಿಲ್ಲ
ಹಣ್ಣ ತಾ ಅಂದಿಲ್ಲ ಕೊಬ್ಬರಿ ತಾ ಅಂದಿಲ್ಲ
ಮಾವಿನ ಕಾಯಿ ತಾ ಅಂದ್ರ
ಹುಣಸಿ ಕಾಯಿ ತರತಾರ .....

೧೦೨೭. ಸುಟ್ಟ ಹಪ್ಪಳ ಕರದ ಕರಚಿಕಾಯಿ
ಊಟಕ್ಕ ಕರದ್ರ ಉರಿದಾಡಿ ಬರ್ತಾರ ....

೧೦೨೮. ಸೂಜ್ಯಾಗದಾರಾ, ದಾರದಾಗ ಹೂವು
ಹೂವು ಮುಡುದ ಹುಡಿಗಿ
ಅಂತಾಕಿನ ಕಂಡು ಕಣ್ಣ್ ಹೊಡಿತಾರ .....

೧೦೨೯. ಸೂಳೀಮಗ ಸುಬೇದಾರ
ಜಾರಿ ಮಗಾ ಜಮಾದಾರ
ಹಾದರಗಿತ್ತಿ ಮಗ ಹವಾಲ್ದಾರ
ನಮ್ಮ ಅತ್ತೀ ಹೊಟ್ಟೇಲೆ ಹುಟ್ಟ್ಯಾರ
ಇನಾಮದಾರ ಸಾಹುಕಾರಾ ....

೧೦೩೦. ಕುಡಿ ಮೀಸಿ ಚಿಟ್ಟು ಗರದಿ ಗಮ್ಮಲ್ ಅಂತಾನ
ಹಸೆ ಹಾಲು ಕುಡಿದು ಕುಸ್ತಿ ಆಡಂದ್ರ
ಬಿಸೆ ಹಾಲು ಕುಡಿದು ಬೆಚ್ಚಗ ಮಲಗತಾನ ......

೧೦೩೧. ಹರಕ ಜತಿಗಿ ಮುರುಕ ನಗಾ
ಎತ್ತು ಎಳಿವಲ್ಲಂತ ಎದಿ ಎದಿ ಬಡಕೊಳ್ತಾರ ....

೧೦೩೨. ಹಸಿರು ಹಾಗಲಕಾಯಿ
ಕುಶಲ ಬೆಂಡೀಕಾಯಿ
ಹಸುಗೂಸು ಎತಿಗೊಂಡು
ಬಿಸಲಾಗ ಹೋಗ್ತಾರ ....

೧೦೩೩. ಹಸೆ ಹಾಲು, ಬಿಸೆ ಅನ್ನ
ಅವಸರಲೆ ಉಂಡು ಅರಗಿಣಿ ಆಡಿಸ್ತಾರ ....

೧೦೩೪. ಹಣೆಬರ ತಿದ್ದೂದ ಹಡೆದವ್ವನಿಗೂ ಆಗದು
ಗುಣಗೇಡಿ ತಿದ್ದೂದು ಬ್ರಹ್ಮನಿಗೂ ಆಗದು
ಡೌಲಿನ ಡೋಲು ನಮ್ಮ .......ರ ತಿದ್ದೂದು ಯಾರಿಂದಲೂ ಆಗದು.

೧೦೩೫. ಹಿರ‍್ಯಾರು ಕಟ್ಟಿದ ಮಾಲು
ಚಾಚಿಗೊಂಡು ಕುಂತಾರ ಕಾಲು
ಹೊದ್ದಾರ ಹಸಿರು ಶಾಲು
ಅಂಥಾ ..........ರು ಮಾಡೂದೆಲ್ಲಾ ಸೂಳ್ಯಾರ ಪಾಲು.

೧೦೩೬. ಹೊರಗ ಬಿಂಕ
ಒಳಗ ಕೊಂಕ
ನಮ್ಮ ...........ರ ನಡತಿ ಬಾಳ ಡೊಂಕ.

೧೦೩೭. ನಾಯಿ ಹೊರಗ ಒದರಿದರ
ತಮಗs ಅಂತ ಹಾರಿಗ್ಗಾಲ್ಲೆ ಬರ್ತಾರ ....

೧೦೩೮. ಹಣಕ್ಕ ಹೆಣಾ ಬಾಯಿ ಬಿಡತೈತಿ ಅಂತಾರ
...............ರು ವರದಕ್ಷಿಣೆ ತಾ ಅಂತಾ ಜೀವ ತಿಂದಾರ.

೧೦೩೯. ಸುತ್ತಲೂನು ಮಳಿ
ಹೊಲ್ದ ತುಂಬಾ ಕಸಾ ಬೆಳಿ
ನಮ್ಮ .............ರು ಹೊರಗಿಂದ ಬಂದು
ಕೇಳ್ತಾರ ನನ್ನ ಕೋಟು ಕಳಿ.

೧೦೪೦. ಅತ್ತೆ ಮಾವ ಮೈದುನರಿದ್ದ ಮನೆ ಚೆಂದ
ನನ್ನ ............. ರ ಹೃದಯ ತುಂಬಿದ ಮನವೇ ಚೆಂದ.

೧೦೪೧. ಬರೆಯಲು ಬೇಕು ಮಸಿ
ಚಹಾ ಕುಡಿಯುವಾಗ ಬೇಕು ಬಸಿ
ನನ್ನ ..............ರ ಹೆಸರು ಹೇಳುವೆ ಪುಣ್ಯವಂತರ ಸೊಸಿ.

೧೦೪೨. ಅಜಂತಾ ಗುಹೆಯಲ್ಲಿರುವುದು
ಶಿಲ್ಪಕಲೆಯ ಬಲೆ
.....................ರ ಪ್ರೀತಿಯೇ ನನಗೆ ಆನಂದದ ಸೆಲೆ.

೧೦೪೩. ಗುರು ಹಿರಿಯರ ದಯಿಂದ
ಜ್ಞಾನಾಮೃತವನುಂಡೆ
ಅತ್ತೆ ಮಾವಂದಿರ ದಯೆಯಿಂದ
ಗ್ರಹಸ್ಥಾಶ್ರಮ ಕಂಡೆ
ನಮ್ಮ .................ರ ದಯೆಯಿಂದ ಕಾಮಧೇನು ಕಂಡೆ.

೧೦೪೪. ದುಡಿಯಲು ಬೇಕು ಮೈಯಲ್ಲಿ ಶಕ್ತಿ
ಗುರು ಹಿರಿಯರಲ್ಲಿರಬೇಕು ಶ್ರದ್ಧಾಭಕ್ತಿ
................ರ ಸೇವೆಯಿಂದಲೇ ನನಗೆ ಸದ್ಗತಿ.

೧೦೪೫. ನನ್ನ ಮಾವ ಹಣವಂತರು
ನನ್ನ ಅತ್ತೆ ಗುಣವಂತರು
ನಮ್ಮ ............ ರು ಭಾರಿ ಪುಣ್ಯವಂತರು.

೧೦೪೬. ಬಸವಣ್ಣನಂಥಾ ಮಾವಾ
ಗೋವಿನಂಥಾ ಅತ್ತಿ
ನಾಜೂಕದ ನೆಗೆಯಣ್ಯಾರು
ಪಾರಿಜಾತ ಹೂ ಪಾಮಡದಾಗ ಮುಚಿಗೊಂಡು
ನನ್ನ ಕಂಡು ನಕ್ಕೊಂತ ಕೊಡತಾರ .....

೧೦೪೭. ಬಂಗಾರ ಬೂದುಗುಂಬಳ
ಸಿಂಗಾರ ಚವಳಿಕಾಯಿ
ನಾ ಮಾಡಬೇಕು ಅತ್ತಿ ನೀಡಬೇಕು
................ರು ಉಂಡು ನಲಿಬೇಕು.

೧೦೪೮. ಮಗು ಚೊಲೋ ಬೆಳಿಯಾಕ
ಸುಶೀಕ್ಷಿತ ತಂದಿ ತಾಯಿ ಬೇರು
ಒಳ್ಳೆ ಸಮಾಜ ಆಗಬೇಕಾದ್ರ ಒಳ್ಳೆ ಹಣಬೇಕು
...............ರು ಬೆಳೀಲಿಕ್ಕೆ ಗುರು ಹಿರಿಯರ ಆಶೀರ್ವಾದ ಬೇಕು.

೧೦೪೯. ಮಾವನ ಹೆಸರು ಮಲ್ಲಿಗೆ ಹೂವು
ಅತ್ತೆ ಹೆಸರು ಹತ್ತೀ ಹೂವು
ನನ್ನ ಹೆಸರು ಜಾಜೀ ಹೂವು
ಜಾಜಿ ಹೂವಿನ ಕೂಡ ಮೋಜ ಮಾಡ್ತಾರ .........

೧೦೫೦. ಮಾಘ ಮಾಸದಲ್ಲಿ ಚಿಗಿಯುವುದು ಮಾವಿನ ಸಸಿ
ನಾನು ................ರ ಹೆಸರ ಹೇಳುವೆನು ಧಾರ್ವಾಡ ಸೊಸಿ.

೧೦೫೧. ರುಕ್ಷ್ಮಿಣಿ ಕೃಷ್ಣನಿಗೆ ಪತ್ರ ಬರೆದದ್ದು
ಮುತ್ತಿನ ಮಸಿಯಿಂದ
ನಾನು ನಮ್ಮ ..............ರಾಯರ ಹೆಸರು ಹೇಳುವೆನು
ನಿಮ್ಮೆಲ್ಲರ ಆಶೀರ್ವಾದದ ಬಲದಿಂದ.

೧೦೫೨. ವರದಕ್ಷಿಣೆಗಾಗಿ ಬಳಲುವರು
ವರವ ತಾಯಿ ತಂದೆ
ಎಲ್ಲ ಕೊಟ್ಟರು ನನ್ನ ತಾಯಿ ತಂದೆ
ಊರ ಹಿರಿಯರ ಮುಂದೆ
ನಾನು .............ರ ಹೆಸರು ಹೇಳುವೆ ನಿಮ್ಮ ಮುಂದೆ.

೧೦೫೩. ವಿಜಯನಗರ ಸಾಮ್ರಾಜ್ಯ ಕಟ್ಟಿದವರು ವಿದ್ಯಾರಣ್ಯ
.................ರು ನನಗೆ ಪತಿಯಾಗಿ ದೊರೆತದ್ದು ಜನ್ಮಾಂತರದ ಪುಣ್ಯ.

೧೦೫೪. ಗಣಪತಿಯೆ ಬೇಡುವೆನು ನಮಗೆ
ಮತಿಯ ನೀಡೆಂದು
ನಮ್ಮ ................ ರಾಯರು ನನ್ನ ಮೆಚ್ಚಲೆಂದು.

೧೦೫೫. ಶ್ರೀಕೃಷ್ಣ ತಿಳಿಸೆನಗೆ ನಿಷ್ಕಾಮ ಯೋಗವನು
ನನ್ನ .................... ರಾಯರ ಪ್ರೀತಿ ಗೆದ್ದು ಬರುವಂತೆ.

೧೦೫೬. ರಸಗೂಡಿದಾ ಒಡಪು ನೊರೆ ಹಾಲಿನಂತೆ
ಹೇಳುವನು ಒಡಪಿಟ್ಟು ಗಂಧ ಪರಿಮಳದಂತೆ
ನನ್ನ ............. ರಾಯರ ಬದುಕು ಬಂಗಾರದಂತೆ.

೧೦೫೭. ನೀರಿಗೆ ನೈದಿಲೆಯೇ ಶೃಂಗಾರ
ಸತಿಗೆ ಪತಿ ಸೇವೆಯೇ ಶೃಂಗಾರ
ನನಗೆ .................ರೇ ಶೃಂಗಾರ.

೧೦೫೮. ಕಣ್ಣಿಗೆ ಕಾಡಿಗೆ ಚೆಂದ
ಆಕಾಶಕ್ಕೆ ಚಂದ್ರಮ ಚೆಂದ
ನನ್ನ ..............ರು ಕಟ್ಟಿದ ಮಾಂಗಲ್ಯವೇ ಚೆಂದ.

೧೦೫೯. ಕೊಲೆ ಸುಲಿಗೆ ಕಳ್ಳತನ ಮಾಡಿದವರಿಗೆ ಶಿಕ್ಷೆ
ನನ್ನ ಮನ ಕದ್ದ ನಮ್ಮ .............ರಾಯರಿಗಾದ ಶಿಕ್ಷೆ.

೧೦೬೦. ಕನ್ನಡದ ಒಡಪುಗಳ ಮಂತ್ರ ಜಪಿಸುತ್ತ
ಪೂಜೆ ಮಾಡಿದೆ ಗಂಧ ಹೂಮಾಲೆಯಿಂದ
ನಮ್ಮ ................ರ ಚಿತ್ತಫಲ ನೆನೆಯುತ್ತ ವಂದಿಸುವೆ
ವಿನಯ ಗೌರವ ಪ್ರೀತಿ ಭಕ್ತಿಯಿಂದ.

೧೦೬೧. ಹರಿಯೆಂದು ಹರನೆಂದು
ಗುರುವೆಂದು ಪತಿಯೆಂದು
............ ರಾಯರಿಗೆ ನಮಿಸುವೆನು ಎಂದೆಂದು.

೧೦೬೨. ಹೆಸರಿನಲಿ ಸದ್ಗುಣವು ಕೂಡಿ ಇನಿದಾಗಿರುವುದು
ಮೊಸರಿನಲಿ ಸಕ್ಕರೆಯ ಬೆರಸಿದಂತೆ
..................ರಿಗೆ ಮಸರಿನೂಟವನಾ ಕೊಡುತ ನಿಂತೆ.

೧೦೬೩. ಕೈಯಲ್ಲಿ ಕೈಕೊಟ್ಟು ಸಪ್ತಪದಿ ತುಳಿದೆ
ಸಾಗಿರುವೆ ಪತಿಯ ನೆರಳಿನಂತೆ
ನಮ್ಮ ................ ರು ಹೆಜ್ಜೆ ತಪ್ಪದಂತೆ.

೧೦೬೪. ಮನೆಗೆ ನಾ ಸೊಸೆಯಾದೆ ಸೇವೆಯಲಿ ಆಳಾದೆ
ಇಚ್ಛೆಯನರಿವ ಸತಿಯಾದೆ
....................ರಿಗೆ ನಾನೇ ಮತಿಯಾದೆ.

೧೦೬೫. ಏಸು ಜನುಮದ ತಪವು ಫಲಿಸಿತಿಂದು
.............ರಾಯರ ಹೃದಯ ಅರಸಿ ಇಂದು.

೧೦೬೬. ತಂದೆ ತಾಯಿಯ ಮರೆತೆ
ಬಂಧು ಬಳಗವ ಮರತೆ
ನನ್ನ ..............ರು ನನಗೆ ಸುಖದ ವರತೆ.

೧೦೬೭. ಮನಸು ವಿದ್ಯೆಯ ಹೊಳಪು
ಮೈಗೆ ಖಾದಿಯ ಉಡುಪು
ನನ್ನ ................. ರಿಗೆ ನನ್ನ ಪ್ರೀತಿ ಮುಡಿಪು.

೧೦೬೮. ಸಕಲ ದೇವರಿಗೆ ವಂದಿಸುವೆ ಮುದದಿಂದ
................ ಪತಿಯು ಸಿಕ್ಕದ್ದರಿಂದ

೧೦೬೯. ದಾರಿ ಬಿಡಿ ಸುಮ್ಮನೇ ತಡೆಯುವಿರಿ ಏಕಿಷ್ಟು
............... ರಾಯರಾ ಸೇವೆಗಾಗಿದೆ ಹೊತ್ತು.

೧೦೭೦. ಸಾಕು ಬಿಡಿ ಸುಮ್ಮನೇ ಸಾಕು ಚೇಷ್ಟೆ
ನನ .............. ರ ಹೆಸರು ಹೇಳಬೇಕಷ್ಟೇ.

೧೦೭೧. ಕರಕಿ ಹೊಲಕ್ಕ ನಡದಾನ
ಹಕ್ಕರಕಿ ಹರದು ತಿಂತಾನ .....

೧೦೭೨. ಕೊಟ್ಟಿ ಕುದುರಿ ಏರಾವಲ್ಲ
ದುಡುದು ಕೂಳು ತಿನ್ನಾವಲ್ಲ
ಬೆಳದಿಂಗಳದಾಗ ಕೊಡಿ ಹಿಡಕೊಂಡು
ತೆಲಿಬಿಟ್ಟು ತಿರಗ್ಯಾಡತಾನ .......

೧೦೭೩. ಗಿಡ್ಡ ಗಿಡಕ ಗಿಣಿ ಕುಂತ್ರ ಕಡ್ಲಿಗಿಡ ಅಂತಾರ
ಉದ್ದನ್ನ ................ರು ಕುಂತ್ರ ಇರಬದ್ದೇವರುತಾರ.

೧೦೭೪. ಗುದುಗಿ ಶ್ಯಾವಿಗಿ ಮಾಡಿ
ಗಂಗಾಳಕ ಹಾಕಿ ಆರಾಕ ಇಟ್ರ
ಅಡಿಗಿ ಮನ್ಯಾಗ ಬಂದು
ಕಡಗೋಲು ಹುಡುಕುತಾನ .....

೧೦೭೫. ಹೊಟ್ಟೆ ತುಂಬಾ ಹುಗ್ಗಿ ಉಂಡು
ಹೊಲಕ್ಕ ಹೋಗಂದ್ರ
ಹೊಟ್ಟಿ ಕಡಿತೇತಿ ಅಂತ ಹೇಳತಾ
ರೊಟೀ ಕೇಳ್ತಾನ .....

೧೦೭೬. ಅಡಿಗೆ ಮನ್ಯಾಗ ಅತ್ತಿ ದರ್ಭಾರ
ಮನ್ಯಾಗ ಮಾವನ ದರ್ಭಾರ
ಊರ್ತುಂಬಾ ಪತಿ ದೇವರದೇ ಕಾರಭಾರ ....

೧೦೭೭. ಮಾತಿನ ಮಂಟಪ ಕಟ್ಟಿ
ಪ್ರೀತಿ ಪರಿಮಳ ಬೀರ್ತಾರ .....

೧೦೭೮. ಗಾಡಿ ರಿಪೇರಿ ಮಾಡೂದು ಗ್ಯಾರೇಜು
ಬುದ್ಧಿ ರಿಪೇರಿ ಮಾಡೂದು ಮ್ಯಾರೇಜು
ನನ್ನ ............ರ ಕೂಡ ಮಾತ್ತಾಡಕ ಬೇಕು ಕರೇಜು.

೧೦೭೯. ಕೇದಗಿಯ ಬನದಲ್ಲಿ ಮಿಡಿ ನಾಗರ ಕಂಡೆ
ಹಿಮ ಶಿಖರದಲ್ಲಿ ತಾ ಹರಿವ ಗಂಗೆಯ ಕಂಡೆ
ಮನೋಮಂದಿರದಲ್ಲಿ ನನ್ನ ..............ರ ಕಂಡೆ.

೧೦೮೦. ವಸಂತ ತಂದ ಚೈತ್ರದ ಸೊಗಸು
ಕೋಕಿಲೆ ತಂತು ನವರಸ ಹೊನಲು
ನನ್ನ ಪತಿದೇವ ............ರ ಕಂಡು ಕುಣಿದಾಡಿತು ನವಿಲು.

೧೦೮೧. ಕಡಲ ಒಡಲಲ್ಲಿ ತುಂಬಿದೆ
ಘನ ಜೀವ ಸಂಪತ್ತು
ನಾನು ದೇವರಲ್ಲಿ ಪ್ರಾರ್ಥಿಸುವೆ
ನಮ್ಮ .............ರಿಗೆ ಎಂದೂ
ಬಾರದಿರಲೆಂದು ಆಪತ್ತು.

೧೦೮೨. ದುಂಬಿಗೆ ಹೂವಿನ
ಮಕರಂದದಾ ಕಸನು
ನಮ್ಮ ............ ರಾಯರಿಗೆ
ಮಾಡುವೆ ದೀನಸಗರಿ ತಿನಿಸು.

೧೦೮೩. ಭಕ್ತಿ ಎಂಬುದು ಹೋಗತ್ತಲೂ ಬರುತ್ತಲೂ
ಕೊರೆವ ಕರಗಸ
ನಾನು ಭಕ್ತಿಯಿಂದ ಶಿವನಲ್ಲಿ ಬೇಡುವೆ
ದಾಂಪತ್ಯದಲ್ಲಿ ಹೀಗೆ ಇರಲೆಂದು ತನಿರಸ .....

೧೦೮೪. ಸರೋವರದಲ್ಲಿ ಹುಟ್ಟುವುದು ಕಮಲ
ನನ್ನ .................ರ ಮನಸ್ಸು ಗಂಗೆಯಷ್ಟು ನಿರ್ಮಲ.

೧೦೮೫. ಹೂಬಿಸಿಲ ಜಳಕ
ಮನಸ್ಸೆಲ್ಲಾ ಪುಳಕ
ನಮ್ಮ .............ರಿಗೆ ಬುತ್ತಿ ತಗೊಂಡು
ಹೋಗ್ತೀನಿ ಹೊಲಕ.

೧೦೮೬. ಮುಂಗಾರು ಮಳೆಗೆ
ಸುವಾಸ ಬೀರುವುದು ಧರಣಿ
ನನ್ನ ............. ರ ಮೇಜಿನ ಮೇಲಿಡುವೆ
ತರತರದ ಹೂವಿನಾ ಭರಣಿ.

೧೦೮೭. ನಕ್ಷತ್ರ ಮಿನ ಮಿನುಗುವವು ಇರುಳು
ಸುಕ್ಷೇತ್ರದಲ್ಲಿ ಭಕ್ತಿಯ ನೆರಳು
ಹೂವು ತುಂಬಿದ ಹೆರಳು
ಉಂಗುರ ಮೇಳದ ಬೆರಳು
ನನ್ನ ............ರು ನುಡಿಸುವುದು ಕೊಳಲು.

೧೦೮೮. ಚೈತ್ರದ ಚಿಗುರುನಲ್ಲಿ ಚೆಲುವ ಕಂಡೆ
ನನ್ನ .............. ರ ಮಾತಿನಲ್ಲಿ ಒಲವ ಕಂಡೆ.

೧೦೮೯. ಸಂತೀಗೆ ಹೋಗಿ ಬರ್ತಾರ
ಸೇವಂತಿಗಿ ಹೂ ತರ್ತಾರ .....

೧೦೯೦. ಸತ್ಯುಳ್ಳವರ ಮಗಳಂತ
ಅತ್ತೆ ಮಾವನ ಪಾದಾ ತೊಳೀತೀನಿ
ಮಾನುಳ್ಳವರ ಮಗಳಂತ
ನನ್ನ ................ರ ನೆರಳಾಗಿರತೇನಿ.

೧೯೯೧. ಚುಟ್ಟಾ ಸಿಗರೇಟು ಸೇರಬ್ಯಾಡ್ರೆಂತ
ತಾಕೀತ ಮಾಡೀನಿ ..... ರಿಗೆ
ಹಾಂಗೇನರ ಆದ್ರ ಕಂಡ ತುಂಡ ಹೇಳಿ
ತವರ ಮನಿಗ್ಹೊಗತೀನಿ.

೧೯೯೨. ಉಂಡು ತಿಂದ ಹೇಳುವೆ
ತಾಯಿ ತಂದೆಯ ಹೆಸರು
ಉಟ್ಟು ತೊಟ್ಟ ಹೇಳುವೆ
ಅಣ್ಣ ತಮ್ಮಂದಿರ ಹೆಸರು
ಸಾವಿರ ಮಂದಿ ಸಭಾದಾಗ ಹೇಳುವೆ
.................ರಾಯರ ಹೆಸರು.

೧೯೯೩. ಗುಣದಿಂದ ಹೇಳ್ತೀನಿ
ಗುರುವಿನ ಹೆಸರು
ಮನದಿಂದ ಹೇಳ್ತೀನಿ
ಮೈದುನರ ಹೆಸರು
ನಗುನಗುತ ಹೇಳ್ತೀನಿ
ನಾದಿನಿ ನೆಗೆಣ್ಣಿ ಹೆಸರು
ಹತ್ತ ಮಂದ್ಯಾಗ ಹೇಳ್ತೀನಿ
ಅತ್ತಿ ಮಾವರ ಹೆಸರು
ಈ ಸಭಾದಾಗ ಪ್ರೀತಿಯಿಂದ ಹೇಳ್ತೀನಿ
ನನ್ನ ಕೈ ಹಿಡಿದವರ ಹೆಸರು ...........

೧೯೯೪. ಕುಡುದು ಬಂದ್ರೂ
ಕುಡಿಯದಾಂಗಿರತಾರ .....

೧೯೯೫. ಸಾಲದ ಬಡ್ಡೀಗೆ
ತಾಳಿಸಾಮಾನ ಮಾರ್ತಾರ
ಬಾಜು ಬಂದಿ ತರತೀನಂತ
ಬೇತ ಮಾಡ್ತಾರ .....

೧೯೯೬. ಬೀರ ಕುಡುದ ಬಂದ್ರ ಸೀತ ಅಂತಾರ
ಬ್ರಾಂಡಿ ಕುಡುದು ಬಂದ್ರ ಕಾವು ಅಂತಾರ
ಏನು ಕುಡೀತಾರೊ ಏನು ಬಿಡತಾರೋ
ಎಲ್ಲಾ ಬಿಡ್ರಿ ಅಂದ್ರ ಜರ್ಲಿ ತಗೊಂಡ ನಿಲ್ಲತಾರ .....

೧೯೭. ಮೂರ್ತಿ ಸಣ್ಣದಾದರೂ
ನನ್ನವರ ಕೀರ್ತಿ ದೊಡ್ಡದು .....

೧೯೮. ಹೊತ್ತು ಮೀರಿ ಬರ್ತಾರಾ
ಹತ್ತ ಮಂದಿ ತರ್ತಾರ
ಊಟಕ್ಕ ಹಾಕಂತ
ಒಲಿಮುಂದ ಬರ್ತಾರ .....

೧೯೯. ಹರಗಾಕ ಹೋಗ್ತಾರ
ಹಾರಿಗ್ಗಾರ್ಲೆ ಬರ್ತಾರ
ಬಾರಕೋಲ ಮೇಲೆತ್ತಿ ಹೇಳ್ತಾರ
ಶರಭತ್ತ ಮಾಡಂತಾರ .....

೧೧೦೦. ಕೂಸು ಎತ್ತಿಗೋ ಸ್ವಲ್ಪು
ಕಸಾ ಹೊಡೀತೀನಂದ್ರ
ಕಸಬರಿಗಿ ಕಸೀತಾರ
ಕೈಹಿಡದ ಎಳೀತಾರ .....

೧೧೦೧. ಸೀರಿ ಸೆರಗs ಹರದೈತಿ
ನನ್ನ ಅವನ ಪ್ರೀತಿ ಮುರದೈತಿ .....

೧೧೦೨. ಸಂಜೀತನಕ ನೆಟ್ಟಗ
ಮನೀಗೆ ಬರುವಾಗ ಸೊಟ್ಟಗ .....

೧೧೦೩. ಏನೇನಾರ ಕುಡಿತಾರ
ಧಡಂ ಧಡಕಿ ಮಾಡ್ತಾರ
ಜೋಲಿ ಹೊಡಿತಾ ಬರ್ತಾರ
ಕೋಲ್ಯಾಗ ಬಂದು ಬೀಳ್ತಾರ ....

೧೧೦೪. ಹೊಲಕ ಹೋಗ್ರಿ ಅಂದ್ರ
ಮಲಕ ಉಳಿಕೇತಿ ಅಂತಾರ
ಕುರ್ಚಿ ಮ್ಯಾಲ ಕುಂತ
ಒಣ ಕಾರಭಾರಾ ಮಾಡ್ತಾರ ....

೧೧೦೫. ಒಣಗಿದ ಕುಸುಬಿ ಗಿಡಾ
ಮುಳ್ಳು ಮುಳ್ಳು ಬಹಳಷ್ಟು
ನನ್ನ ಮ್ಯಾಗಿಲ್ಲ ಇವರ ಪ್ರೀತಿ ಎಳ್ಳಷ್ಟು ....

೧೧೦೬. ಹೆಣಕ ಕುಣಿ ಚಿಂತಿ
ಕಣಕ ಕಂಕೀ ಚಿಂತಿ
ದನಕ ಹಂತಿ ಚಿಂತಿ
ಹಸ್ತವರಿಗೆ ಹಸವಿನ ಚಿಂತಿ
ಉಳ್ಳವರಿಗೆ ಕಳ್ಳರ ಚಿಂತಿ
ನನಗ ನನ್ನ ಕೈ ಹಿಡಿದವರ ಚಿಂತಿ .....

೧೧೦೭. ಕಾಂಕ್ರೀಟಿಗೆ ಹಾಕೂದು ಕಡಿ
ಹುಡುಗಿಯರಿಗೆ ಹಾಕೂದು ಜೆಡಿ
ಹೊಲದಾಗ ಕಾಣ್ತಾವ ಜೋಳದ ಹೊಡಿ
ತೋಟದಾಗ ಇರೂದು ಕೋತಂಬ್ರಿ ಮಡಿ
ಸೈನಿಕರು ಕಾಯ್ತಾರ ದೇಶದ ಗಡಿ
ಸಿನೇಮಾಕ್ಕ ಹೋಗೂನ ನಡಿ ಅಂತಾರ .....

೧೧೦೮. ನನ ಗಂಡ ಹೋಗ್ಯಾನ
ಹೋಗಿ ಮುಟ್ಟ್ಯಾನ ಗಡಿ
ನನ್ನವರ ಹೆಸರ ಹೇಳ್ತೀನಿ
ಮಾಡಬೇಡ್ರಿ ಗಡಿಬಿಡಿ .....

೧೧೦೯. ಕೆಟ್ಟ ಬಿಸಿಲು ಕಾದ ಹಂಚಿನಂಗಾ
ಕಾರಿನ್ಯಾಗ ಕುಂತಗೊಂಡ
ಕಸಬಿ ಕರಕೊಂಡು
ಕಾರವಾರಕ ಹೊಂಟಾರ .....

೧೧೧೦. ಬಂಗಾರ ತಾಟು
ಬೆಳ್ಳಿ ಬಟ್ಲ
ಮುತ್ತಿನಂತಾ ಮಗನ್ನ ಕಂಡು
ಮುತ್ತು ಕೊಡ್ತಾರ ....

೧೧೧೧. ತವರ ಮನಿ ಕಿಮ್ಮತ್ತ ಕಟ್ಟಿ
ಕೈಹಿಡಿದು ಮುಂದಕ ಕರದು
ಬಂಗಾರ ಬಳಿ ಹಾಕ್ತಾರ ....

೧೧೧೨. ಹೂ ಬಳ್ಳಿಯಂತಾ ಹುಡುಗಿ ಕಂಡು
ಹುಬ್ಬೇರಿಸಿ ಕ್ಯಾಕರಿಸಿ ಕೆಮ್ಮತಾರ .....

೧೧೧೩. ದುಡೀಲಿಲ್ಲ ದುಕ್ಕ ಪಡಲಿಲ್ಲ
ಬರಗಾಲಕ್ಕ ಬುತ್ತಿ ಕಟ್ಟಿ
ಬದುಕೇನಂತಾರ .....

೧೧೧೪. ನನ್ನ ಅವರ ಪ್ರೀತಿ ಅಮರ ಅಂತ
ಮೀಸಿ ಕುಣಿಸಿ ಭಾಷೆ ಕೊಡ್ತಾರ .....

೧೧೧೫. ಹೋತ ಅಂದ್ರ ಹೋಳಿ ಹುಣ್ವಿ
ಬಂತ ಅಂದ್ರ ಭಾರತ ಹುಣ್ವಿ
ಸಿಕ್ಕಿತು ಅಂದ್ರ ಸೀಗಿ ಹುಣ್ವಿ
ಬೆಳದಿಂಗಳ ಬೆಳಕಿನ್ಯಾಗ
ತಾಂಬೂಲ ಮೆಲ್ಲತಾರ .....

೧೧೧೬. ನೀರು ಓಡತೈತಿ
ಮೀನು ಆಡತೈತಿ
ಬಂಡೆ ನೋಡತೈತಿ
ನನ್ನ ರಾಯರ ಕಣ್ಣು
ನನ್ನ ಕಣ್ಣs ನೋಡತೈತಿ .....

೧೧೧೭. ಬಂಡಿ ಕಡ್ಲಿ ಕಾಯಿ ತಿಂದ್ರ
ಗಿಂಡಿ ರಸ ಇಲ್ಲ
ನನ್ನವರು ಬಂಡಿ ತಂದ್ರ
ತವರಮನೀಗೆ ಹೋಗೂದಕ ತಡಾ ಇಲ್ಲ ....

೧೧೧೮. ಸುಗ್ಗಿ ಮಾಡಾಕ ಹ್ವಾದಲ್ಲೆಲ್ಲ
ಸೂಳಿ ಮಂತ್ರಕ್ಕ ಮಳ್ಳ ಆಗ್ಯಾರ .....

೧೧೧೯. ಕೂಸು ಕುಂಚಿಗೆ ತಿಂತು
ಹಾಸಿಗೆ ನೆಲಾ ತಿಂತು
ನನ್ನವರ ಮನಸು ಪಾತರದಾಕಿ
ತೋಪಿನ ಸೀರಿ ತಿಂತು .....

೧೧೨೦. ಸೂಳಿ ಅಂದ್ರ ಸುಂಟರಗಾಳಿ
ಚಂಡಮಾರುತಾ ಅಂತಾ
ಹೇಳ್ತಾ ನನ ಗಂಡ
ಗಾಳೀಗೆ ಗಾಳ್ಯಾಗಿ
ಹಾರಿ ಹೋಗ್ತಾನ .....

೧೧೨೧. ಸತ್ಯೆಕ್ಕ ಸಾವಿಲ್ಲ
ಸುಳ್ಳಿಗೆ ಸುಖವಿಲ್ಲ
ಸುಳ್ಳ ಹೇಳಿ
ಸತ್ಯ ಮುಚ್ಚತಾರ .....

೧೧೨೨. ನಡೆ ನುಡಿ ಒಂದಾದ್ರ
ಶಿವ ಮೆಚ್ಚತಾನ
ನಮ್ಮ ರಾಯರಲ್ಲಿ ಭಕ್ತಿ ಇಟ್ರ
ದೇವರು ಮೆಚ್ಚತಾನ .....

೧೧೨೩. ದಾನಧರ್ಮ ಮಾಡದವರು
ರೊಟ್ಟಿ ತೊಳೆದನೀರ ಕುಡಿಯುವರು
ಹಣಕ್ಕ ಬಾಯಿ ತೆರೆದವರು ನನ್ನವರು .....

೧೧೨೪. ವರದಕ್ಷಿಣ ವಿರೋಧಿ ಭಾಷಣ ಹೊಡಿತಾರ
ನನ್ನ ತಂದಿ ತಾಯಿ ಮನಿಗೆ ಹೋಗಿ ಗೊಂದಲಾ ಹಾಕ್ತಾರ
ಶಾಸ್ತ್ರಾ ಹೇಳಿ ಬದನೆಕಾಯಿ ತುಂಬ ಸಹಿತ ತಿಂತಾರ
ಮನಿ ಹೆಳವರು ಬಂದ್ರಂತೂ ಬೆಂಕಿ ಆಗ್ತಾರ
ಅವರಂತೂ ಊರಿಗೆಲ್ಲ ಸಾವುಕಾರ ಆಗ್ತ್ಯಾರ
ಸಾಲಗಾರ ಬಂದ್ರಂತೂ ಹರದ ತಿಂತಾರ .....

೧೧೨೫. ಶಿಸ್ತಾಗಿ ಸಾಗೂ ಕಟ್ಟಿರುವ ಸಾಲು
ಕಾಲಿಲೆ ಕೆದಕಿ ಮುರಿದಾರ
ಶಿಸ್ತಿನ ಬದುಕ ನಡೆಸಿರಂತ
ಇರುವೆಗೆ ಪಾಠ ಹೇಳ್ತಾರ .....

೧೧೨೬. ಸಂಗಣ್ಣನ ಮುಂದ ನಿಂಗಣ್ಣ
ನಿಂಗಣ್ಣನ ಮುಂದ ಮಂಗಣ್ಣ
ಮಂಗಣ್ಣನ ಸಂಗಡ ಮಂಗನಾಟ
ನನ್ನ ಕಂಡ್ರ ರಂಗಿನಾಟ ಆಡ್ತಾರ .....

೧೧೨೭. ನನ್ನ ಯಜಮಾನ ಮೀಸಿ ಹೊತ್ತ ಪೋಲೀಸ
ಅದಾನ ಬಾಳ ವರ್ಷದಿಂದ ನೌಕರ
ಕೈ ಎತ್ತಿದರ ಸಾಕು ನಿಲ್ಲಿಸ್ತಾನ
ಕಾರುಪಾರು ಭರ್ಪೂರ
ಏನಾದ್ರೂ ಎಷ್ಟತ್ತಿಗೆ ಬಂದ್ರು
ಅವನs ನನ್ನ ಸರದಾರ ....

೧೧೨೮. ಸಂಬಳಾ ತಗೊಂಡು
ನೆಟ್ಟಗ ಮನಿಗೆ ಬರ್‍ರಿ ಅಂದ್ರ
ಸಂಬಳಾ ಗಿಂಬಳಾ ತಗೊಂಡ
ಆಕಿ ಕೂಡ ಸರಸಾ ಆಡಾಕ ಹೋಗ್ತಾನ .....

೧೧೨೯. ಬಟ್ಟನ್ನ ಬಿಳಿ ಜ್ವಾಳದ ರೊಟ್ಟಿ
ಗಮ ಗಮ ಗುರೆಳ್ಳ ಚಟ್ನಿ
ಬಾಯಾಗ ಕರಗೂ ಕುಸುಬಿ ಪಲ್ಲೆ
ನೀಡಿ ಊಟಕ್ಕ ಬರ್‍ರಿ ಅಂದ್ರ
ಯಾವಾಕಿನ ಕರಕೊಂಡು
ಕರಕಿ ಹೊಲ್ದಾಗ ಕೋಟು ಬಿಚ್ಚಿ ಕುಂತಾರ .....

೧೧೩೦. ದಟ್ಟಿ ಉಟಗೊಂಡು ದಾರಿ ಕಾದ್ರ
ಕಟ್ಟಿ ಮ್ಯಾಲ ಕುಂತ ಕಣ್ಣು ಹೊಡಿತಾರ ....

೧೧೩೧. ಮಾವಾ ಮಾವಾ ಜೋತಾಡೋ ಜೋತಿರ್ಲಿಂಗ
ಮಾವಿನ ಗಿಡದಾಗ ಮಾತಾಡೋ ಮಾಲಿಂಗ
ನನ್ನ ಕೂಡ ಮುದ್ದಾಡೋ ಮಾರ್ತಂಡ ....

೧೧೩೨. ಬೆಳ್ತನಾ ತಾಲೀಮು ಮಾಡಿ
ಕಂಡವರ ಸೊಂಟಾ ಮುರಿತಾರ ....

೧೧೩೩. ತಾಯಿ ವಸ್ತ್ರ ವಡವೆ ಬಯಸ್ತಾಳ
ತಂದೆ ಆಸ್ತಿ ಪಾಸ್ತಿ ಬಯಸ್ತಾರ
ನಾ ಬಯಸೂದು ............ರ ಪ್ರೀತಿ ಸಹಕಾರ.

೧೧೩೪. ಹುಟ್ಟಾ ಸತ್ತಿಲ್ಲ ಸುಡುಗಾಡಕಂಡಿಲ್ಲ
ಎಲ್ಲಾ ಬರ್ಲ್ಲೆಂತ ಸುಮ್ನಗುಲ್ಲ ಮಾಡ್ತಾರ ....

೧೧೩೫. ಹುಟ್ಟುಗುಣ ಹೂಳುವ ತನಕ
ನನ್ನ ಗಂಡ ........ ಗುಣ ಸಾಯುವ ತನಕ

೧೧೩೬. ಜೇನ ಸಂಪಾದಿಸಿದ್ರ
ಜಾಣ ಕುಂತ ತಿಂತಾನ
ನನ್ನ ಗಂಡ ........... ಜೇನ
ಜೇನನ ಕೈಯಾಗ ಜಿನುಗಾಗೀನಿ.

೧೧೩೭. ಬೀಗರು ಮದುವ್ಯಾಗ ಕಾಡಿದರ
ನನ್ನಾತ ....... ಮರ್ದಿನ ಕಾಡತ್ತಾನ.

೧೧೩೮. ಸೀಗಿ ಹುಣಿಮೆಗೆ ಬೆಳಗೋದು ಮಣ್ಣನಾರತಿ
ಗೌರಿ ಹುಣ್ವಿಗೆ ಬೆಳಗೋದು ಸಕ್ಕರಿ ಆರತಿ
ಮಂಗಲ ಕಾರ್ಯದಲ್ಲಿ ಬೆಳಗೋದು ಪಂಚಾರತಿ
ನಾನು ...............ರಿಗೆ ಬೆಳಗೋದು ಪ್ರೇಮದಾರುತಿ.

೧೧೩೯. ನಾನು ಬೇಡುವೆನು ಮನೆಯಲ್ಲಿ
ಶಾಂತಿ ಸಮೃದ್ಧಿ
ನಾನು ............ ರಲ್ಲಿ ಬೇಡುವೆನು
ಕುಂದದಿರಲಿ ಪ್ರೀತಿ.

೧೧೪೦. ಭೂಮಿಯೆಲ್ಲಾ ಹಸಿರು ಹಸಿರು
ನನ್ನಾತಗಬೇಕು ಕೆನಿ ಮೊಸರು .....

೧೧೪೧. ಮೆಟ್ಟಲೇರಿ ಮುಟ್ಟಬೇಕು ಮಂದಿರ
ನನ್ನ ಪ್ರಿಯಕರನ ಬಾಳು ಬೆಳಗಲಿ ಚಂದಿರ .....

೧೧೪೨. ಮಂಗಲಗೌರಿಗೆ
ವಂದಿಸಿ ಕೇಳುವೆ ಮುದದಿಂದ
ನನ್ನವರಿಗೆ ..... ಗೆ ಸಿರಿ ಸಂಪದ ಬರಲಿ
ಗುರುಹಿರಿಯರ ಸದಾ ದಯದಿಂದ.

೧೧೪೩. ಗಂಟಿನಲ್ಲಿ ಗಂಟು ಬ್ರಹ್ಮಗಂಟು
ನನ್ನ ............ರ ಹೆಸರು ಹೇಳುವೆ
ಅನುಗಾಲವಿರಲಿ ನಿಮ್ಮ ನಂಟು.

೧೧೪೪. ನಾ ಆದsಬಂದಿದ್ದೆ ಹೊಸಮಾಲಗಿತ್ತಿ
ಬಾಳಾ ಪ್ರೀತಿ ಮಾಡಿತಿದ್ಲು ನಮ್ಮತ್ತಿ
..............ರಿಗೆ ನಾ ದಿನಾ ಹಚ್ಚತಿದ್ದೆ ಇಬತ್ತಿ.

೧೧೪೫. ಸೋನಿಯಾಗಾಂಧಿ
ಚರಿತ ಬರೀತಾರ ಅಪೂರ್ಣ
ನನ್ನ ............. ರು ನನ್ನ ಚರಿತ್ರೆ
ಬರೀತಾರ ಸಂಪೂರ್ಣ.

೧೧೪೬. ಕರೆಂಟ ಇರದಿದ್ದ ಕತ್ತಲರಾತ್ರಿ
ನಮ್ಮ .......... ರಾಯರು ಮನ್ಯಾಗಿದ್ದ್ರ
ಹಗಲಿರುಳು ನವರಾತ್ರಿ.

೧೧೪೭. ನಿನ್ನೆ ಮೊನ್ನೆ ನಡತೈತಿ
ಬಾಲ್ಯ ವಿವಾಹ
ನಮ್ಮ .......... ರ ಕೂಡ ಕೂಡಿಬಂತು
ನಮ್ಮ ಪ್ರೇಮವಿವಾಹ.

೧೧೪೮. ಮಂಜರಪಾಟದ ಕಸಿ ಅಂಗಿ ಧರಿಸಿ
ಮುದುಕಾದ್ರು ಮಜ ಮಾಡತಾರ
ನನ್ನ ...... ರು ಬರೆಬಾಯಿಲ್ಲೆ
ಮಾಲೀಸು ಮಾಡ್ತಾರೆ.

೧೧೪೯. ಅತ್ತಿ ಅಡಿಗಿ ಮನಿ ಕೀಲಿ ಕೊಟ್ಲು
ಮಾವಾ ತಿಜೋರಿ ಕೀಲಿ ಕೊಟ್ಟ
ನನ್ನ ಗಂಡ ...... ನನಗ ಕೈಕೊಟ್ಟ.

೧೧೫೦. ಹಾವು ಹುತ್ತಕ್ಕೆ ಚೆಂದ
.................ರು ನನ್ನ ಬಾಳೇಕ ಅಂದ.

೧೧೫೧. ಹಾವಿನ ಹೆಡಿ ಕೆಳಗ ಕಪ್ಪೆ ಇದ್ದ್ರ
ಹಾವಿಗಾನಂದ
ನಾನು ನಮ್ಮವರ ಪಕ್ಕದಲ್ಲಿದ್ದ್ರ
ನಮ್ಮವರಿಗಾನಂದ .......

೧೧೫೨. ನೆಲವಿಗೆ ಹಾರದ ಬೆಕ್ಕು
ಸ್ವರ್ಗಕ್ಕೆ ಹಾರುವುದಿಲ್ಲ
ಅಳಕೋತ ಮನ್ಯಾಗ ಕುಂತ್ರ
ನನ್ನ ............... ರು ಒಳ್ಳೆ ಕನಸು ಕಾಣೂದಿಲ್ಲ.

೧೧೫೩. ಹರೇದಾಗ ಬರದಾದಾ
ಸಾಯುವಾಗ ಬಂದಾ
ಊರೆಲ್ಲ ಹರಗ್ಯಾಡಿ
ಉಣ್ಣಾಕ ಬಂದಾ ..................

೧೧೫೪. ಹೇಣ್ತಿ ಇಲ್ಲದವಗ ಮಕ್ಕಳೆಷ್ಟು ಅಂದಂತೆ
ದುಡಿಯದ ನನ ಗಂಡಗ ........... ಮಳಿ ಬೆಳಿ ಕೇಳಿದಂತೆ.

೧೧೫೫. ಬುಕ್ಕರಾಯ ಮೆಚ್ಚಿ
ಬೆಕ್ಕಿನ ಮರಿ ಕೊಟ್ಟ
ನನ್ನ ಮೆಚ್ಚಿ ನನ್ನಾತ .....
ಕೈಯಾಗ ಪರಕಿ ಕೊಟ್ಟ.

೧೧೫೬. ಮಂಗ ಬಾಳಿಯ ವನಕ ಪ್ರೀತಿ
ನನಗೆ ............. ರೇ ಸಾಥಿ.

೧೧೫೭. ಮಳೀ ನೀರು ಹಿಡಿಯಲಾರದೆ
ಮಂಜಿನ ನೀರಿಗೆ ಕೈವೊಡ್ಡತಾರ .....

೧೧೫೮. ಮದುವಿ ಬೇಕು ಅಂತಾರ
ಮಕ್ಕಳು ಬೇಡ ಅಂತಾರ .....

೧೧೫೯. ಹಾವಿ ಹೆಡೆ ಚೆಂದ
ಮಾವಿನ ಮಿಡಿ ಚೆಂದ
ಹಂಸದ ನಡೆ ಚೆಂದ
ನನ್ನ ರಾಯ ನನ್ನ ..... ರಿಗೆ ನಾನೇ ಚೆಂದ.

೧೧೬೦. ಹಟ್ಯಾಗ ಹನುಮಪ್ಪ ಚೆಂದ
ಹಳ್ಳದಾಗ ವರ್ತಿ ಚೆಂದ
ನನ್ನ ರಾಯರಿಗೆ ನಾನೇ ಚೆಂದ .....

೧೧೬೧. ನೆಗಡಿ ಜಡ್ಡಲ್ಲ ಬುಗುಡಿ ವಸ್ತಲ್ಲ
ಮದುವ್ಯಾಗಿ ಮೂರು ವರ್ಷ
ನನ್ನ ಬವಣಿ ತಪ್ಪಿಲ್ಲ
ನನ್ನತ್ತಿ ಇವರ ತೆಲಿ ತಿಕ್ಕಿಲ್ಲ ......

೧೧೬೨. ಹೆಣಾ ತಿನ್ನಾಕ ಹದ್ದು ಕಾಯತೈತಿ
ಹಣಾ ಕೂಡಸಾಕ ನನ್ನ ಗಂಡ .......... ಸಾಯತೈತಿ.

೧೧೬೩. ಅಕ್ಕನ ಮದುವಿ ಆದ್ರ
ಅಕ್ಕನ ತಂಗಿ ಕೂಡ
ಚೆಕ್ಕಂದ ಹೊಡಿತಾನ .....

೧೧೬೪. ಅತ್ತಿ ಮನಿಗೆ ಹೋದ್ರೆ
ಅಣ್ಣ ಇರಬೇಕು
ಅಡಿಗೆ ಮನೆಗೆ ಹೋದ್ರೆ
ಅಕ್ಕಿ ಇರಬೇಕು
ತವರ ಮನಿಯಿಂದ ಬಂದ್ರ
ಮನ್ಯಾಗ ನನಗಂಡ ..... ಇರಬೇಕು.

೧೧೬೫. ಭಾವಗಿಂತ ಅಕ್ಕ ಚೆಂದ
ಅಕ್ಕಗಿಂತ ರೊಕ್ಕ ಚೆಂದ
ನನ್ನವರಿಗೆ ನಾ ತಂದಾಕೀನ ಚೆಂದ....

೧೧೬೬. ಅಕ್ಕ ಸತ್ತರ ಅನುವಾಸಿನಿಲ್ಲದು
ಅಣ್ಣ ಸತ್ತರ ಹುಣ್ಣಿವೆ ನಿಲ್ಲದು
ನನ್ನತ್ತೆ ಸತ್ತರೆ ಯಾವೂದು ನಿಲ್ಲದು
ನನ್ನ ...........ರಿಗೆ ಏನಾದ್ರೂ ಆದ್ರೆ
ನನಗೇನೂ ಕಾಣವಲ್ಲದು.

೧೧೬೭. ಅಟ್ಟುವುದು ಅತ್ತೆಗೆ ಕಷ್ಟ
ಮೂಟೆ ಹೊರುವುದು ಕತ್ತೆಗೆ ಕಷ್ಟ
ನನ್ನ ........... ರಾಯರಿಗೆ ನಾನೇ ಇಷ್ಟ.

೧೧೬೮. ಆಡೋಕೆ ಹಾಡೋಕೆ ಅತ್ತಿಗೆ ಕರೀರಿ
ತೊಳಿಯೋಕೆ ಬಳಿಯೋಕೆ ನಾದಿನಿ ಕರೀರಿ
ಸಿನೇಮಾಕ ಹೋಗಾಕ ನನ್ನ ಕರೀರಿ ....

೧೧೬೯. ನೆಗಡಿಯಂತ ಜೆಡ್ಡಲ್ಲ
ಬುಗುಡಿಯಂತ ವಸ್ತಲ್ಲ
ನಮ್ಮ .............ರಿಗೆ ಎಟೇಟೂ ಶಿಸ್ತಿಲ್ಲ.

೧೧೭೦. ಅತ್ತಿ ತನ್ನ ಅಳಿಯಾಗ ದಾನ ಮಾಡಿದರ
ನನ್ನವ್ವ ತನ್ನ ಅಳಿಯನಿಗೆ ದಾನ ಮಾಡಿದಳು
ನಮ್ಮ ............. ರು ನನಗ
ಪ್ರೀತಿ ಪ್ರೇಮ ದಾನ ಮಾಡಿದರು.

೧೧೭೧. ಅತ್ತೆಯ ಬಾಯಿ ಮಾತು
ಸೊಸೆಗೆ ಪ್ರಾಣ ಸಂಕಟ
ನನ್ನ ..........ರಿಗೆ ಆಪತ್ತು ಬಂದ್ರ
ನನಗ ಪ್ರಾಣ ಸಂಕಟ.

೧೧೭೨. ಅತ್ತೆ ಕೊಡ ಒಡದರ
ಕೈತಪ್ಪಿತು ಅಂತಾರ
ನಾ ಕೊಡ ಒಡದ್ರ
ಬೇಕಂತಲೆ ಅಂತಾರ
ನಮ್ಮ ............ ರು ಕೊಡ ಒಡದ್ರ
ಹೋಗಲಿ ಬಿಡು ಅಂತಾರ.

೧೧೭೩. ಸೊಸೆ ಇಲ್ಲದ ಅತ್ತೆ ದುಡಿಯೂ ಕತ್ತೆ
ನಮ್ಮ ............ರು ಒಲಸಾಕ ಪ್ರೀತಿನ ಭತ್ತೆ.

೧೧೭೪. ಅತ್ತೀಗೆ ಮೀಸಿ ಬಂದ್ರ
ಸೊಸೆ ಉಪವಾಸಾ ಮಾಡಿದಳಂತ
ನಮ್ಮ ............. ಯಜಮಾನ್ರು
ಊರಿಗೆ ಹೋದ್ರ ತಿರುಗಿ ಬರ್ಲೆಂತ
ನಾನು ಉಪವಾಸ ಮಾಡಿದ್ಯಾ.

೧೧೭೫. ಅಗಸನ ಮಾತ ಕೇಳಿ
ರಾಮಚಂದ್ರ ಸೀತಾ ಬಿಟ್ಟ
ಅತ್ತಿ ಮಾವ ಕೇಳಿ ಕೇಳಿ
ನನ ಗಂಡ ................ ಮಾತ ಬಿಟ್ಟ.

೧೧೭೬. ಸೆಗಣಿ ಕಸ ತಗೀರಿ ಅಂದ್ರ
ಹೊಟ್ಟೆ ಕಡಿತದ ಅವ್ವಗ ಹೇಳು ಅಂತಾರ .....

೧೧೭೭. ಕರೆಂಟಿನವರ್ಗೆ ತಗಿಯೂ ಹಟ
ನನ್ನ .............. ರಿಗೆ ಮಾತಾಡೂ ಚಟ.

೧೧೭೮. ಕಿತ್ತೂರು ಚೆನ್ನವ್ವನ ಮೂಗಿನಲ್ಲಿರುವುದು
ವಜ್ರದ ನತ್ತು
ನಾನು ನಮ್ಮವರ ಹೆಸರು ಹೇಳ್ತೀನಿ
ಮೂರು ಸಂಜೆ ಹೊತ್ತು .........

೧೧೭೯. ತೆಳ್ಳನ್ನ ರೊಟ್ಟಿ ಬೆಳ್ಳನ್ನ ಮೊಸರು
ನೆಳ್ಳಾಗ ಕುಂತ ಮ್ಯಾರಿ ಮಾಡ್ತಾರ .....

೧೧೮೦. ಉದರ ಉಪ್ಪಿಟ್ಟು
ಪದರ ಚಪಾತಿ
ಚೌಕಾಕಿ ಕುಂತಗೊಂಡು
ಚೌಕಾಸಿ ಮಾಡ್ತಾರ .....

೧೧೮೧. ಖಡಕ ಸಜ್ಜಿ ರೊಟ್ಟಿ
ಅವರಿಕಾಳ ಪಲ್ಲೆ
ಅರಮನ್ಯಾಗ ಕುಂತ
ಆರ್ಭಟಾ ಮಾಡ್ತಾರ .....

೧೧೮೨. ಅಕ್ಕಿ ಬಲು ಸಣ್ಣ
ಅನ್ನ ಬಲು ಉದುರು
ಸಣ್ಣಕ್ಕಿ ಅನ್ನಾ ಉಂಡು
ಸೂಳೀ ಮನಿಗೆ ಹೋಗ್ತಾರ .....

೧೧೮೩. ಪಂಜರದಾಗ ಕುಂತ ಪಗಡಿ ಆಡ್ತಾರ
ಮಂಚದ ಮ್ಯಾಲ ಕುಂತ ಮಗನ್ನ ಆಡಿಸ್ತಾರ .....

೧೧೮೪. ನತ್ತ ಬೇಡಿದರ ಸಿಟ್ಟಿಗೆ ಬರ್ತಾರ
ಮುತ್ತ ಬೇಡಿದರ ಕೊಡ್ತಾರ
ಅಕ್ಕನ ಮಗಳಂತ ಅಕ್ಕರತಿ ಮಾಡ್ತಾರ .....

೧೧೮೫. ಮೈಯಾಗ ಕೋಟು
ಕಾಲಾಗ ಬೂಟು
ಕಿಸಿದಾಗ ನೋಟು
ನಮ್ಮ ............. ರಾಯರದು
ಬರಿ ಮಾತಿನ ಗಿಲೀಟು.

೧೧೮೬. ಕಳ್ಳ ಹಣದಿಂದ ಹೆಂಡತಿ ಶೃಂಗಾರ
ಮಳ್ಳ ನನ್ನ ................ರ ಹಣದಿಂದ
ಸೂಳೆರ ವೈಯಾರ.

೧೧೮೭. ಚೇರಾ ಊರಂಜಿಯಲ್ಲಿ ಆಗುವುದು
ಐದುನೂರು ಇಂಚು ಮಳೆ
ನನ್ನ .............ರು ಹರಿಸುವರು ಪ್ರೇಮದ ಹೊಳೆ.

೧೧೮೮. ಸುಖದ ಮೂಲ ಸತ್ಯಶಾಂತಿ
ನನ್ನ ಹಣೆಯಲ್ಲಿರುವುದು
ನನ್ನವರ ಕುಂಕುಮ ಕಾಂತಿ ............

೧೧೮೯. ಮನೆಗೆರಡು ಮಕ್ಕಳು ಚೆಂದ
ಊರಿಗೆ ಅಗಸಿ ಬಾಗಿಲಿದ್ದರೆ ಚೆಂದ
ನನ್ನವರಿಂದ ನನ್ನ ಮುತ್ತೈದಿತನ ಚೆಂದ ......

೧೧೯೦. ನಾರಿಗೆ ಬಸಿರು ಚೆಂದ
ಭೂಮಿಗೆ ಹಸಿರು ಚೆಂದ
ನಾ ನನ್ನ ............ರ ತೆಕ್ಕೆಯಲ್ಲಿರುವುದೇ ಚೆಂದ.

೧೧೯೧. ಹೆಣ್ಣು ಪರರುಪಕಾರಿ
ಒಲೆಯದಿದ್ದರೆ ಮಾರಿ
ಗಂಡು ಹೆರರರುಪಕಾರಿ
ಮುನಿದರೆ ಹೆಮ್ಮಾರಿ ನನಗಂಡ .....

೧೧೯೨. ಹತ್ತು ಬಳ್ಳಿಗೆ ಹತ್ತುಂಗ್ರ ಇಟಗೊಂಡು
ಹತ್ತ ಮಂದ್ಯಾಗ ಕುಂತ ಹೌದು ಅನಿಸಿಗೊಂಡಾರ .....

೧೧೯೩. ರೋಗಿಗೆ ಔಷಧಬೇಕು
ಭೋಗಿಗೆ ಭಾಗ್ಯ ಬೇಕು
ಯೋಗಿಗೆ ನಿಗ್ರಹ ಬೇಕು
ಸೋಗಿಗೆ ನಟನೆ ಬೇಕು
ರಾಜಕಾರಣಿಗೆ ಹಸಿರು ಹೊಲಬೇಕು
ನನ್ನ ..... ಯಜಮಾನರಿಗೆ ಎಲ್ಲಾ ಬೇಕು.

೧೧೯೪. ಜೋಕಾಲಿ ಆಡೂದು ನಾಗರಪಂಚಮ್ಯಾಗ
ಆಯುಧ ಪೂಜಾ ಮಾಡೂದು ಮಹಾನಾಮ್ಯಾಗ
ನಮ್ಮ..... ರು ಸಮಾಜ ಸೇವೆ ಮಾಡೂದು ಎಲ್ಲಾ ಕಾಲ್ದಾಗ.

೧೧೯೫. ಸತಿಪತಿಗಳೊಂದಾಗ ಭಕ್ತಿ
ಸದಾಶಿವನಿಗೆ ಹಿತ
ನಮ್ಮವರಿಂದಲೇ ನಡೆದಿದೆ
ನನ್ನ ಶೃಂಗಾರ ರಥ .....

೧೧೯೬. ರೂಪದಲ್ಲಿ ಮನ್ಮಥರು
ವಿನಯದಲ್ಲಿ ಪ್ರಮಥರು
ನನ್ನ ಪತಿ ................ರು
ನಯದಲ್ಲಿ ಅತಿರಥರು.

೧೧೯೭. ನನ್ನವರು ನುಡಿದರೆ ಮುತ್ತಿನ ಹಾರದಂತೆ
ನುಡಿದರೆ ಸ್ಪಟಿಕದ ಸಲಾಖೆಯಂತೆ
ಬಸವಣ್ಣನ ಪುಣ್ಯದಂತೆ
ನನ್ನ .....ರ ಬಲದಿಂದ ನಾನಾದೆ ಪುಣ್ಯವಂತೆ.

೧೧೯೮. ಪರದೇಶಿ ಉಡುಪು ತೊಟ್ಟವರಲ್ಲ
ಪರಸ್ತ್ರೀ ಪರಧನ ಮುಟ್ಟುವವರಲ್ಲ
ನನ್ನ ಪತಿ .............. ಎಂದಿಗೂ
ಕೊಟ್ಟ ವಚನ ತಪ್ಪುವವರಲ್ಲ.

೧೧೯೯. ಹೂವಿನಂತಾ ಮಕ್ಕಳನ ಕರಕೊಂಡು
ಹೂದೋಟದಾಗ ಹೂ ಹರಿತಾರ .....

೧೨೦೦. ಮಲ್ಲಮ್ಮನಂತ ಮಡದಿ ಕರಕೊಂಡು
ನನ್ನ ಗಂಡ ಮಲ್ಲಿಕಾರ್ಜುನನ ಗುಡಿಗೆ ಹೋಗ್ತಾರ .....

೧೨೦೧. ಮೂಡಲ ಹೋರಿ
ಮುತ್ತಿನ ಮುಗದಾಣ
ಬಂಗಾರ ಬೀಜಾ ಬಿತ್ತಿ
ಬಂಗಾರ ಬೆಳಿ ತಗೀತಾರ ......

೧೨೦೨. ಮುತ್ತಿನ ಉಡಿಯಕ್ಕಿ
ಬೆಳ್ಳೀ ಸೆಜ್ಜಿ ಬಟ್ಲ
ಭಟ್ಟನ್ನ ಎತ್ತು ಹೂಡಿ ಬಿತ್ತಿ
ನಿಟ್ಟಿಗೆಲ್ಲ ಹೆಸರಾಗ್ಯಾರ ......

೧೨೦೩. ಕುದುರಿಗೆ ಹಾಕ್ಯಾರ ಕುತನಿ ತಡಿ
ತಾವು ಉಟ್ಟಾರ ಜರದಮಡಿ
ಓಣ್ಯಾಗ ಬರ್ತಾರ ....... ಗುರುತು ಹಿಡಿ.

೧೨೦೪. ರಂಗು ರಂಗಿನ ಅಂಗಿ ತೊಟಗೊಂಡಾರ
ರಂಗಮಂಟಪದಾಗ ಕುಂತ ರಮಿಸಿ ಕರೀತಾರ .....

೧೨೦೫. ಹುಬ್ಬಳ್ಳಿಗೆ ಹೋಗತೀನಿ
ಹಣಕೊಡು ಅಂತಾರ
ಹುಡಿಗ್ಯಾರ್ನ ಕಂಡು ಹುಬ್ಬು ಹಾರ್ಸಿ
ಹಣ ಕಳಕೊಂಡು ಮನೀಗೆ ಬರ್ತಾರ .....

೧೨೦೬. ಕಣ್ಣು ಹೊಡಿತಾರ, ಕ್ಯಾಕರಿಸಿ ಕೆಮ್ಮತಾರ
ಅತ್ತಿ ಮಾವನ್ನ ಕಣ್ಣ ತಪ್ಪಿಸಿ
ಕೈಹಿಡದ ಹೆಂಡ್ತಿಗೂಡ
ಕನ್ನಡ ಸಿನೇಮಾ ನೋಡ್ತಾರ .....

೧೨೦೭. ಹೇಣ್ತಿ ಅಂದ್ರ ನಗತಾನ
ಹಣ್ಣ ತತಾ ಅಂದ್ರ ಅಳ್ತಾನ .....

೧೨೦೮. ಬೆಲ್ಲಾ ತಗೊಂಡ ಬರ್ರಿ ಅಂದ್ರ
ಬೆಲ್ಲಾ ಕೊಡ್ತೀನಂತ ಅಡಗಿ ಮನೀಗೆ ಬರ್ತಾರ .....

೧೨೦೯. ಬಡಾ ಬಡಾ ಬರ್ತಾರ
ಒಟ ಒಟ ಅಂತಾರ
ಕುಟುಕುಟು ಮಾತಾಡ್ತಾರ .......

೧೨೧೦. ಉಕ್ಕಿದ ಮೇಲೆ ಸಾರಿಗೆ ರುಚಿ ಇಲ್ಲಾ
ಸೊಕ್ಕಿದ ಮೇಲೆ ಹೆಣ್ತನಾ ಇಲ್ಲಾ
ನಮ್ಮ ........... ರಾಯರಿಗೆ ನಾನೇ ಎಲ್ಲಾ.

೧೨೧೧. ಕೈಲಾಗದ ಗಂಡು
ಮನ್ಯಗಿದ್ದರೇನು?
ದಂಡಿಗೆ ಹೋದರೇನು ನನ್ನ .....ರೇ
ನನಗೆ ಚಿನ್ನದ ಗುಂಡು.

೧೨೧೨. ಇಣಿಕಿ ಇಣಿಕಿ ನೋಡ್ತಾರ
ಒಣಕಲ್ಲ ಕಲ್ಲವ್ವನ್ನ
ನಾ ಮದುವ್ಯಾಗಿಂದ ಬಿಟ್ಟ್ರ ಎಲ್ಲಾರನ್ನ .....

೧೨೧೩. ಕುಲನೋಡಿ ಹೆಣ್ಣು ಕೊಡಬೇಕಂತ
ಮರ ನೋಡಿ ಬಳ್ಳಿ ನೆಡಬೇಕಂತ
ನನ್ನ ತವರವರು ಕೊಟ್ಟಾರ ..... ರಿಗೆ ಸುಖಾಪಡಬೇಕಂತ.

೧೨೧೪. ಹೆಂಗಸು ಒಲೆ ನೋಡಬೇಕು
ಗಂಡಸು ಹೊಲ ನೋಡಬೇಕು
ಆದ್ರ ನನ್ನಗಂಡ ............ ಒಲಿಸಂದ್ಯಾಗ ಕುಂತ
ಊದಗೊಳವಿ ಊದತಾರ.

೧೨೧೫. ಗಂಡನ ಮನೆಯಲ್ಲಿ ಹಾಲ ಕುಡಿದದ್ದು
ತವರು ಮನೆಯಲ್ಲಿ ನೀರು ಕುಡಿದದ್ದು ಸಮ
ನನ್ನವರು .............. ನನಗೆ ಚಕ್ರಾಧಿಪತಿಗೆ ಸಮ.

೧೨೧೬. ಅತ್ತೆವ್ವ ಕೊಟ್ಟ ಅಮೃತಕ್ಕಿಂತಲೂ
ಹೆತ್ತವ್ವ ಕೊಟ್ಟ ಅಂಬ್ಲಿ ಮೇಲು
ನನ್ನ ಪತಿದೇವ ....... ಎಲ್ಲ ದೈವಕ್ಕೂ ಮೇಲು.

೧೨೧೭. ತಾಯಿ ಕಡೆ ತಳವಾರಿಲ್ಲ
ತಂದಿ ಕಡೆ ಪಿಂಜಾರಿಲ್ಲ
ನನ್ನ ಕಡೆ ಮನ್ಯಾಗ ಇವರನ್ನ ಬಿಟ್ಟು
ನನಗ್ಯಾರೂ ಇಲ್ಲ .....

೧೨೧೮. ತಂದೆ ಇಲ್ಲದ ಮಕ್ಕಳನ್ನು
ಸಾಕಿದವನೇ ತಂದಿ
ನಾ ಕಣ್ಮರೆ ಆದ್ರ ಸಾಕು
ನನ್ನ ಗಂಡ ........... ಹುಡಕ್ತಾನ ಸಂದಿಗೊಂದಿ.

೧೨೧೯. ಆಡೂ ಮಕ್ಕಳು ಆಡಬೇಕು
ಬೇಡೂ ಮಕ್ಕಳು ಬೇಡಬೇಕು
ನನ್ಯಾಕ ಇವರಿಷ್ಟು ಕಾಡಬೇಕು .....

೧೨೨೦. ಹಿರಿಯ ಮಗಳಾಗಬಾರದು
ಹಿತ್ತಲ ಕದಾ ಆಗಬಾರದು
ನನ್ನ ಅತ್ತಿ ಚಾಡಿಗೆ ...........ರು
ಎಷ್ಟೂ ಮಳ್ಳಾಗಬಾರದು.

೧೨೨೧. ಅಕ್ಕಿ ಇದ್ದಾಂಗ ಅನ್ನ
ಹಿಟ್ಟು ಇದ್ದಾಂಗ ರೊಟ್ಟಿ
ನಾನು ಇದ್ದಾಂಗ ನನ್ನ ಗಂಡ ....

೧೨೨೨. ಅತಿಯಾದ್ರೆ ಅಮೃತಾನೂ ವಿಷ
ಯಾಕೋ ನಾ ಆಗೀನಿ ಗಂಡನ ಕಾಲಾನ ಕಸ .....

೧೨೨೩. ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತು
ನಾನು ನನ್ನ ............ರು ಕೂಡಿ ಹರಿದ್ವಾರಕ್ಕೆ ಹೊಂಟ್ರ
ಊರು ಮುಂದಿನ ಬೆಣ್ಣಿ ಹಳ್ಳ ದಾರಿ ಕಟ್ಟಿತು.

೧೨೨೪. ಅಹಂಕಾರದಿಂದ ಹರಿ ಕೆಟ್ಟ
ದುಡಿಯಲಾರ್ದ ತಿರುಗಿ ನನ್ನಾತ ಕೆಟ್ಟ ....

೧೨೨೫. ಅವತಾರ ಹೆಚ್ಚಿದಷ್ಟು ಅನಾಚಾರ ಹೆಚ್ಚು
ನಮ್ಮ ಮಾತು ಕೇಳಿದಷ್ಟು ಇವರ ..... ಸಿಟ್ಟ ಹೆಚ್ಚು.

೧೨೨೬. ಚವಲ್ದಾಗ ಡೌಲು ಮಾಡ್ತಾರ
ರೊಟ್ಟಿ ತೊಳದ ನೀರು ಕುಡಿತಾರ
ಪುಗಸೆಟ್ಟೆ ಸಿಕ್ಕರ ಎಲ್ಲಾ ಬೇಕಂತಾರ
ಗುಡಿ ಕಂಡಲಿ ಮಲಗತಾರ ನೀಡಿದ್ದಲಿ ಕುಡಿತಾರ
ಎಷ್ಟು ಉಣ್ತೀ ಅಂತ ನನ್ನ ಉಳ್ಳಾಡಿಸಿ ಹೊಡಿತಾರ ....

೧೨೨೭. ಎಲೆ ಅಡಿಕಿ ಬಾಯಿ ಕೆಂಪಗೆ ಮಾಡಿಕೊಂಡು
ಸುಳದಾಡಿಕೊಂತ ಸೂಳಿಮನೀಗೆ ಹೋಗ್ತಾರ ....

೧೨೨೮. ಅಪ್ಪನ ರೊಕ್ಕ ಎಣಿಸಲಾರೆ
ಅವ್ವನ ಸೀರಿ ಮಡಿಚಲಾರೆ
ನನ್ನ ಗಂಡನ ನೆಲಿ ತಿಳಿಯಲಾರೆ .....

೧೨೨೯. ಹಿಟ್ಟು ಸಣ್ಣಗ ಇದ್ರ ರೊಟ್ಟಿ ರುಚಿ
ನನ್ನ ಯಜಮಾನ ..... ರು ಯಾವಾಗಲೂ ಶುಚಿ.

೧೨೩೦. ನನ್ನ ಮದುವಿ ಆಗಿ ಎಪ್ಪತ್ತು ವರ್ಷ
ನನ್ನ ಮೊಮ್ಮಗನಿಗೆ ಹದಿನೆಂಟು ವರ್ಷ
ನನ್ನ ಮಾರಾಯಿಂದು ನನ್ನ ಮ್ಯಾಲ
ಇನ್ನೂ ಮುಗಿದಿಲ್ಲದರ್ಪ ....

೧೨೩೧. ದಕ್ಷಿಣ ದಿಕ್ಕಿನಲ್ಲಿರುವುದು ಲಂಕೆ
ನನ್ನ .........ವರ ಹಿಡಿದು ಜನರಿದ್ದಾರೆ
ಲೆಕ್ಕ ಮೀರಿದ ಅಂಕೆ ....

೧೨೩೨. ಬಡತನ ಸಿರಿತನವಿರಲಿ
ಕಡೆತನಕ ..... ರ ನನಗೆ
ಕುಂಕುಮ ಸೌಭಾಗ್ಯವಿರಲಿ .....

೧೨೩೩. ನೀತಿಯಿಂದ ನಡೆದರೆ ಸಂಸಾರ
ನೀತಿಬುಟ್ಟು ನಡೆದರೆ ಸಂಹಾರ
................ರ ಸೇವೆಯೇ
ನನ್ನ ಬಾಳಿನ ಬಂಗಾರ.

೧೨೩೪. ಬದುಕಿನ ಕೊನೆಯಲ್ಲಿ ಬರುವುದು ಮುಕ್ತಿ
ಅದನ್ನೂ ಪಡೆಯಲು ಬೇಕು ಬಲು ಯುಕ್ತಿ
ನನ್ನ ............ ಪತಿದೇವರಲ್ಲಿರುವುದು ಅಂತ ಧೀಶಕ್ತಿ.

೧೨೩೫. ಆಕಾಶದಲ್ಲಿ ದೀಪಾವಳಿ ಆಕಾಶ ಬುಟ್ಟಿ ಚೆಂದ
ದೀಪಾವಳಿ ಹಬ್ಬದಾಗ ನಮ್ಮ ............ರ ಪೂಜೆ ಚೆಂದ.

೧೨೩೬. ರೊಟ್ಟಿಮ್ಯಾಲ ರೊಟ್ಟಿ ತಿಂದು
ರಟ್ಟಿ ಮುರಿದು ದುಡದು ಬರ್ತಾರ .....

೧೨೩೭. ಬಸೂದ್ದೀನಿ ಅಂದ್ರ ಸಾಕು
ಹೆಸರ ಇಡಾಕ ಶಾಸ್ತ್ರೀನ ಹುಡುಕತಾರ ....

೧೨೩೮. ಗಂಧದೆಣ್ಣೆ ಸದರಿಕೊಂಡು
ಕುಡಿ ಮೀಸಿ ಹುರಿ ಮಾಡಿಕೊಂಡು
ಮಕಮಲ್ಲ ಧೋತ್ರ ಉಟಗೊಂಡು
ಮಲ್ಲಗಿಯಂತಾ ಹೇಣ್ತಿ ಕರಕೊಂಡು
ಮಲ್ಲಯ್ಯನ ಜಾತ್ರೀಗಿ ಹೋಗ್ತಾರ ....

೧೨೩೯. ಬೆಂಗಳೂರು ಮೈಸೂರು ತಿರುಗ್ಯಾಡತಾರ
ಮನೀಗೆ ಬಂದ ಬೊಗಳ್ಯಾಡತಾರ .....

೧೨೪೦. ಮನ್ಯಾಗ ನಮ್ಮುಂದ ಮೆಲ್ಲಕ ಮಾತಾಡತಾರ
ಪಂಚಾತ್ಯಾಗ ಕುಂತ ಹುಚಬಿಲ್ಲಿಹಾಂಗ ಒದರ‍್ಯಾಡ್ತಾರ .....

೧೨೪೧. ಕಲ್ಲಪಡಿ ನಾಗರ ಹೆಡಿ
ನನ್ನ ...........ರು ಬೆಳದಿಂಗಳದಾಗ
ಹಿಡಿತಾರ ಬೆಳ್ಳಿ ಕೊಡಿ.

೧೨೪೨. ಉದರ ಉಪ್ಪಿಟ್ಟು ವರ್ತಿ ನೀರು
ತಿಂದ ಕುಡಿದು
ಬಂಗಾರ ಬೆಳ್ಳಿಬಟ್ಲ ತಗೊಂಡು
ಮಡೇಹೊಲ ಮುತ್ತು ಬಿತ್ತಾಕ ಹೊಂಟಾರ .....

೧೨೪೩. ಹತ್ತ ಮಂದ್ಯಾಗ ಕುಂತ
ಮುತ್ತು ಉದರಿದಾಂಗ ಮಾತಾಡ್ತಾರ .....

೧೨೪೪. ಕರಿಕೋಟು ಕಾಲಾಗ ಬೂಟು
ಕಾರತಗೊಂಡು ಕೋರ್ಟಿಗೆ ಹೋಗ್ತಾರ .....

೧೨೪೫. ಅದೇನ ಖಾದಿ ಸುಖದ ಹಾದಿ
ಕೇರ‍್ಯಾಗ ಕುಂತ ಭಾಷಣಾ ಮಾಡ್ತಾರ .....

೧೨೪೬. ದುಷ್ಟರಸಂಗ ಮಾನಭಂಗ
ದುಷ್ಟರಿಂದ ಮಾತ್ರ ದೂರ ಇರತಾರ .....

೧೨೪೭. ತಾಟುತುಂಬ ಶಾಂವಗಿ
ರುಮಾಲದಾಗ ಕ್ಯಾದಗಿ
ರಂಗ ಮಂಟಪದಾಗ ಕುಂತ
ನ್ಯಾಯಾ ಹರೀತಾರ .....

೧೨೪೮. ಅಂಗಿ ಮ್ಯಾಲ ಅಂಗಿ
ರಂಭಿ ಮ್ಯಾಲ ರಂಭಿ
ಗೊಂಬಿಯಂಥ ಹೇಣ್ತಿ ಬಿಟ್ಟ
ಗಬ್ಬನ್ನ ಹುಡುಗಿ ಬೆನ್ನುಬಿದ್ದಾರ .....

೧೨೪೯. ಮಲ್ಲಿಗಿ ಹೂ ಮುಡಿಯಂತ
ಹೊನ್ನಂಬರಿ ಹೂ ತಂದಾರ .....

೧೨೫೦. ಜರದ ಪಟುಗಾ ಸುತ್ತ್ಯಾರ
ಜರದ ಅಂಗಿ ತೊಟ್ಟಾರ
ಕೊಳ್ಳಾಗ ಚೈನಾ ಹಾಕ್ಯಾರ
ಬ್ಯಾಸರ ಆಗೇತಂತ
ದಾಸರಾಕಿ ಮನಿಗಿ ಹೋಗ್ತಾರ .....

೧೨೫೧. ನಮ್ಮ ಅಂಗಳ ಸ್ಯೆಟು ರಂಗಲಾಲು
ನಮ್ಮನ್ಯಾಗ ಆಕಳ ಹಿಂಡತ್ಯೆತಿ ಚರಿಗಿ ಹಾಲು
ನಮ್ಮ ರಾಯರು ಆಗ್ಯಾರ ಸೂಳ್ಯಾರ ಪಾಲು .....

೧೨೫೨. ತೊಗರಿ ಗುಗ್ಗರಿ ತೊರಗಲ್ಲ ಗಗ್ಗರಿ
ಗಗ್ಗರಿ ಕಟಕೊಂಡು ಗೂಳಿ ಹಾಂಗ ತಿರಗತಾರ .....

೧೨೫೩. ಮಣಿಮ್ಯಾಲ ಕುಂತಾರ
ಜಪಮಣಿ ಹಿಡಿದಾರ
ವಿಭೂತ ಬಡದಾರ
ಶಿವಶಿವಾ ಅನಕೋತ
ಪಾರ್ವತಿ ಸ್ಮರಿಸತಾರ .....

೧೨೫೪. ಸರಗಿ ಇಡಲಿಲ್ಲ
ಬುಗುಡಿ ತರಲಿಲ್ಲ
ವಜ್ರದೋಲಿ ಕೊಡಸಂದ್ರ
ಸುಗ್ಗಿ ಬರಲಿ ಅಂತಾರ .....

೧೨೫೫. ಆರಸೇರು ಅವಲಕ್ಕಿ
ಮೂರ ಸೇರು ಲವಂಗ
ಪಾವು ಸೇರು ಗೋಡಂಬಿ
ಕಾಲ ಸೇರ ಕಲ್ಲಸಕ್ಕರಿ
ದೋತರದಾಗ ಕಟಗೊಂಡು
ಕಸಬಿ ಮನೀಗೆ ಹೋಗ್ತಾರ .....

೧೨೫೬. ಮನ್ಯಾಗ ಇರವಲ್ಲ ಮಾತು ಕೇಳವೊಲ್ಲ
ಸೂಳ್ಯಾರ ಕೂಡ ಸುಳದಾಡತಾನ ....

೧೨೫೭. ಮುಳಗಾಯಿ ಪಲ್ಲೆ ಬೇಡತಾನ
ಮುಳು ಮುಳು ನೋಡತಾನ
ನನಗ ಬಾ ಅಂತಕಣ್ಣ ಹೊಡಿತಾನ ....

೧೨೫೮. ಉತ್ಪತ್ತಿ ಒಲಿ ಹೂಡಿ
ಕ್ಯಾದಗಿ ಅಂತ ರೊಟ್ಟಿ ಮಾಡಿ
ಮಲ್ಲಿಗಿಯಂತಾ ಅನ್ನಾ ಮಾಡಿ
ಊಟಕ್ಕ ಬಾ ಅಂದರ
ಗದುಗಿನ ನಾಟಕ್ಕ ಹೋಗ್ತಾರ ....

೧೨೫೯. ಅಕ್ಕಿ ತರಲಿಲ್ಲ ಅನ್ನಾ ಮಾಡಲಿಲ್ಲ
ಒಣ ರೊಟ್ಟಿ ತಿಂದು ಗುಣು ಗುಣು ಅಂತಾರ ....

೧೨೬೦. ಕಟಗರೊಟ್ಟಿ ತಟಗ ಪಲ್ಲೆ
ಅರದ ಖಾರಾ, ಹಿಟ್ಟಿನ ಸಾರಾ
ಕಟಿಗೊಂಡು ಹೋಗಂದ್ರ
ಸೆಟಗೊಂಡು ಚಾದಂಗಡೀಗೆ ಹೋಗ್ತಾರ ....

೧೨೬೧. ಎಳ್ಳ ಹಚ್ಚಿದ ಸಜ್ಜಿ ರೊಟ್ಟಿ
ಒಗ್ಗರಣಿ ಮಜ್ಜಿಗಿ ಸಾರು
ಇಕ್ಕಾಕ ಹೋದ್ರ ಕುಕ್ಕಾಕ ಬರ್ತಾರ ....

೧೨೬೨. ಪದರ ಪದರ ಚಪಾತಿ
ಕದರ ಕದರ ಆಲೂಪಲ್ಲೆ
ಉಡದಾಂಗ ಕುಂತಗೊಂಡು
ಊಟಕ್ಕ ಕುಂತರ
ತುತ್ತಿಗೊಮ್ಮೆ ತುಪ್ಪಾ ಕೇಳ್ತಾರ ....

೧೨೬೩. ಕುಚ್ಚಿದ ಕಡಬು
ಹೆತ್ತಿದ ತುಪ್ಪ
ಹೆಚ್ಚಿಗೆ ನೀಡದಿದ್ರ
ಏರೇರಿ ಬರ್ತಾರ ....

೧೨೬೪. ಹೂರಣದ ಹೋಳಿಗಿ
ಕಟ್ಟಿನ ಸಾರು
ಹೆಸರ ಹಪ್ಪಳ
ಊಟ ತುಸಾ ಇವರ ಕಾಟ ಬಾಳಾ ....

೧೨೬೫. ಮಡಿ ಮಡಿ ಅಂತಾರ
ಸರ್ದನಿಲ್ಲು ಅಂತಾರ
ಚಹಾ ಸೋಸಿ ಮುಂದಿಟ್ರ
ಕೊಡು ಕೊಡು ಅಂತಾರ ....

೧೨೬೬. ಅಂಟು ಬೆಲ್ಲ ಗಂಟ ಹುಗ್ಗಿ
ಎಂಟು ದಿನಕ್ಕೊಮ್ಮೆ ತಂದು ಹಾಕದಿದ್ರೆ
ನಿನ್ನ ಸೊಂಟಾಮುರಿತೀನಂತಾರ ....

೧೨೬೭. ಹಕ್ಕರಕಿ ಪಲ್ಲೆ ಪಚಡಿ
ಪುಂಡಿಪಲ್ಲೆ ಕೊಬ್ಬರಿ ಚಟ್ನಿ
ತಾಜಾ ಕಿರಕ್ಕಸಾಲಿ ಪಲ್ಲೆ
ಮೂರು ರೊಟ್ಟಿ ತಿಂದ
ಆರ ರೊಟ್ಟಿ ಕಟಿಗೊಂಡು
ಹರಗಿ ಬಾ ಅಂದ್ರ ಊರು ತಿರಿಗಿ ಬರ್‍ತಾರ ....

೧೨೬೮. ಮೂರು ಸೇರ ಉಳ್ಳಾಗಡ್ಡಿ
ಕರಕರ ತಿಂದು ಸುಸ್ತಾಗಿ ಮಲಗತಾರ ....

೧೨೬೯. ಕಾಲಾಗ ಚಪ್ಪಲಿ ಇಲ್ಲ
ಮೈಯಾಗ ಅಂಗಿ ಇಲ್ಲ
ಕಿಸೇದಾಗ ಕಾಸಿಲ್ಲ
ಕೆಲಸಕ್ಕ ಹೋಗಂದ್ರ
ಮುಸುಗುಟ್ಟಿ ಮಾರಿ ನೋಡ್ತಾರ .....

೧೨೭೦. ಊರು ತುಂಬ ಉರುಕೊಂಡು
ಮಾಡಬಾರದ ಮಂಗನಾಟ ಮಾಡಿ
ಯುಗಾದಿ ಬಂದಾಗ ಉಧೋ ಅಂತಾರ ....

೧೨೭೧. ಆರು ಮೋರಾ ಹಳ್ಳ
ಮೂರು ಮೋರಾ ಎಳ್ಳ
ನನ್ನ ............ರು ಹೇಳ್ತಾರ
ಸಂಜಿ ಹೊತ್ತಿಗೆ ಸಾವಿರ ಸುಳ್ಳ.

೧೨೭೨. ಆರು ಮೊಳದ ಅಂಗಿ
ಮೂರು ಮೊಳದ ಬಕ್ಕಣ
ದೀಡ ರೂಪಾಯಿ ಕಿಸೇದಾಗ ಇಟಗೊಂಡ
ದೊಡ್ಡವರಾಂಗ ದಿಮಾಕ ಮಾಡ್ತಾರ ....

೧೨೭೩. ಕಿಡಕಿ ಕಿಂಡಿ
ಮನಿ ಬೆಳಕಂಡಿ
ಚಿನ್ನದ ಗಿಂಡಿ
ಬಂಗಾರ ಬಂಡಿ
ಬಂಡಿ ಕಟ್ಟಿಗೊಂಡು
ಸೊಂಡೂರಿಗೆ ಹೋಗ್ತಾರ .....

೧೨೭೪. ತಂಬಾಕ ತಿಂತಾರ
ಪಿಚಿಪಿಚಿ ಮಾಡ್ತಾರ
ಗೋಡೆಗ ರಂಗ ತಂದಾರ .....

೧೨೭೫. ಆಗದವರ ಗೆಳೆತನ ಮಾಡ್ತಾರ
ಬೆಳತನಕ ಇಸ್ಪೀಟ ಆಡ್ತಾರ
ಹಣ ಕಳಕೊಂಡು ಹೆಣಾ ಆಗಿ
ಮನೀಗೆ ಬರ್ತಾರಾ .....

೧೨೭೬. ಮನ್ಯಾಗ ನಮ್ಮುಂದ ಹುಲಿ
ಹೊರಗ ಹೋದ್ರ ಊರಾಗಿನ ಇಲಿ ....

೧೨೭೭. ಹಣೇ ಬರದಲ್ಲಿದ್ದುದು
ಬ್ರಹ್ಮ ಬಂದ್ರೂ ತೀರೂದಿಲ್ಲ
ಕೆಟ್ಟ ಮೇಲೆ ಬುದ್ಧಿ ಬಂದ್ರ
ಯಾವ ಫಲವೂ ಇಲ್ಲ
ನನ್ನ ............ರಿಗೆ ಎಂದೂ ಬುದ್ಧಿ ಬರೂದಿಲ್ಲ.

೧೨೭೮. ಮನೀ ಮ್ಯಾಲ ಮಹಡಿ
ಮಹಡಿ ಮ್ಯಾಲ ಚಾವಡಿ
ಚಾವಡ್ಯಾಗ ಕುಂತಗೊಂಡು
ಚ್ಯಾಡಿ ಕೇಳ್ತಾರ .....

೧೨೭೯. ಹೊರಗ ಹೊರಗ ಬಿಂಕ
ಒಳಗ ಒಳಗ ಕೊಂಕ
ನನ್ನ ಮುಂದ ಕಾಣಿಸ್ತಾರ ಎಬ್ಬಂಕ .....

೧೨೮೦. ತಲೆಗೆ ಬೈತಲ ಮಣಿ ಚೆಂದ
ಮೂಗಿಗೆ ಮೂಗಿತಿ ಚೆಂದ
ಕಿವಿಗೆ ಬೆಂಡೋಲೆ ಚೆಂದ
ಕೊರಳಿಗೆ ಕರಿಮಣಿ ತಾಳಿ ಚೆಂದ
ತೋಳಿಗೆ ವಜ್ರದ ವಂಕಿ ಚೆಂದ
ಕೈಗೆ ಬಂಗಾರದ ಬಳೆ ಚೆಂದ
ಬೆರಳಿಗೆ ಹರಳಿನ ಉಂಗುರ ಚೆಂದ
ನಡಕ್ಕೆ ಬೆಳ್ಳಿ ಗೆಜ್ಜೆ ವಡ್ಯಾಣ ಚೆಂದ
ಕಾಲಿಗೆ ಗೆಜ್ಜೆ ಪೈಜಣ ಚೆಂದ
ಕಾಲ್ಬೆರಳಿಗೆ ಬೆಳ್ಳಿ ಕಾಲುಂಗರ ಚೆಂದ
ನನ್ನತ್ತೆ ಮಾವ ಭಾವಮೈದುನ ಮನೆಗೆ ಚೆಂದ
ನಾನು ನನ್ನ ..........ರಿಗೆ ಚೆಂದಕ್ಕೆ ಚೆಂದ.

೧೨೮೧. ವಜ್ರದ್ವಾಲಿ ಗೆಜ್ಜಿ ಟೀಕಿ
ಮಾಡ್ಸೂನು ಅಂತ ಮಾತು ಕೊಟ್ಟು
ಹತ್ತ ಮಂದ್ಯಾಗ ಕುಂತ
ಅತ್ತಿ ಪರವಾನಿಗಿ ಕೇಳ್ತಾರ .....

೧೨೮೨. ಮೂಗಿಗೆ ನತ್ತು
ಜೋಡ ಮುತ್ತು ಕೊಡಸಿರಿ ಅಂದ್ರ
ಮಂಚದ ಮ್ಯಾಲ ಕುಂತಗೊಂಡು
ಅತ್ತಿ ಕೂಡ ಸಂಚು ಹೂಡ್ತಾರ .....

೧೨೮೩. ಅಂಕಣದಾಗ ಅಂಕಣ
ಮುತ್ತೈದಿಗೆ ಕೂಡೂದು ಕಂಕಣ
ವರಂಗಲ್ಗೆ ಹೋಗಿ ಬಂದಾರ
ನನಗ ವಂಕಿ ತಂದಾರ ....

೧೨೮೪. ಕಟ್ವಾಣಿ ಗುಂಡ ತಂದಾನ
ಮುರಗಿ ಸರಗಿ ತೋರಿಸ್ಯಾನ
ವಂಕಿ ಡಾಬ ತಂದಾನ
ವಜ್ರದ ಬಳೆ ತೋರಿಸ್ಯಾನ
ಹೇಣ್ತಿಕರದ ಹೇಳ್ಯಾನ
ನಿನಗ ತಂದಿಲ್ಲಂತಾನ ....

೧೨೮೫. ಆದ್ವಾನಿ ಸೀರಿ
ಆರ ತೊಲಿ ಬಂಗಾರ
ಅರಮನ್ಯಾಗ ಕುಂತ
ಬಾ ಅಂತ ಕರೀತಾರ ....

೧೨೮೬. ಚಿಕ್ಕಿ ಚಿಕ್ಕಿ ಸೀರಿ
ಜರತಾರಿ ಕುಬುಸ
ವಜ್ರದ್ವಾಲಿ ಗೆಜ್ಜಿ ಟೀಕಿ
ಹತ್ತ ಮಂದ್ಯಾಗ ಕುಂತ
ನತ್ತ ಮಾಡಿಸ್ತಾರ .....

೧೨೮೭. ಮುರನಾಳವಂಕಿ ಮುಂಡರಗಿಸರಗಿ ಹಿಡಿದಾರ
ಹೊತ್ತು ಗೊತ್ತಿಲ್ದ ಸೂಳೀ ಮನಿಗೆ ಹೋಗ್ತಾರ ....

೧೨೮೮. ನಿನಗ ಬಂಗಾರಬೇಕು ಅಂತಾರ
ನನಗ ಸಿಂಗಾರ ಬೇಕಂತಾರ
ಸೊನ್ನಿ ಮಾಡಿ ಸನೇಕ ಕರೀತಾರ ....

೧೨೮೯. ಬಂಗಾರ ಬಳ್ಳಿ ಮನೀಗೆ ಹಬ್ಬೇತಿ
ಬೆಳ್ಳೀ ತಗಡು ಬಾಗಿಲಿಗೆ ಹಚ್ಚೇತಿ
ನನ್ನ .......... ರ ಕೀರ್ತಿ ಭೂಮಿಗೆ ಹಬ್ಬೇತಿ.

೧೨೯೦. ಬಂಗಾರ ಬೇಕಂತ
ಭರ್ಪೂರ ಅಡಿಗಿ ಮಾಡಿದ್ರ
ಮುಂದಿನ ಪಗಾರಕ್ಕ ಅಂತಾರ .....

೧೨೯೧. ಹೌದು ಅನ್ನೊ ಮಾತಿಗೆ ಹೌದು ಅಂತಾರ
ಅಲ್ಲ ಅನ್ನೊ ಮಾತಿಗೆ ಅಲ್ಲ ಅಂತಾರ
ಬಂಗಾರ ಬೇಡಿದ್ರ ದಂಗ ಆಗ್ತಾರ ....

೧೨೯೨. ಮಗ್ಗುಲದಾಗ ನಿಂತ
ಮೀಸಿ ತಿರುವುತಾರ
ಮೀಸ್ಯಾಗ ನಗತಾರ
ಸೀರಿ ಪಾರಿ ಬೇಡಿದ್ರ
ಮಾರಿ ತಿರುವುತಾರ .....

೧೨೯೩. ನನ ಗಂಡ ಚೌತಿ ಚಂದ್ರ
ಹುಣ್ವಿಗೊಮ್ಮೆ ನಗತಾರ
ಅಮಾಸಿಗೊಮ್ಮೆ ಮಾಯ ಆಗ್ತಾರ .....

೧೨೯೪. ಅಣೇದ ಬಂಗಾರ ಐತಿ
ಪುಣೇದ ಪತ್ತಾರ ಬಂದಾನ
ನತ್ತ ಮಾಡಿಸಿಕೊಡಂತ ಅಂಗಲಾಚಿದರ
ಮುತ್ತು ಕೊಡಾಕ ಬರ್ತಾರ .....

೧೨೯೫. ಕಂಠಿ ಅಂಗಿ ತೊಟ್ಟಾನ
ಮಂಚದ ಮ್ಯಾಲ ಕುಂತಾನ
ನೀನು ಬಾ ಅಂತಾನ
ಏನರ ಕೇಳಿದ್ರ ನಗತಾನ .....

೧೨೯೬. ಕಂಠಿಸರ ಬೇಕಂತ ಹಟ ಹಿಡದ್ರ
ಬೀಸೂಕಲ್ಲ ಗೂಟಾ ಕಿತ್ತಾನ ....

೧೨೯೭. ಬೆಳ್ಳಿ ಸೀರಿ ಬಂಗಾರಪಟ್ಟಿ
ನಮ್ಮವರು ............ ತರಲಿಲ್ಲ
ನಾನು ಉಡಲಿಲ್ಲ ಹಾಕಲಿಲ್ಲ.

೧೨೯೮. ಇಳಕಲ್ಲ ಸೀರಿ ಗುಳೇದ ಗುಡ್ಡದ ಕಣ
ಅವರು ತರಲಿಲ್ಲ ನಾ ಉಡಲಿಲ್ಲ .....

೧೨೯೯. ಬಾಳುಳ್ಳವರ ಮಗಳು
ಬಾಗಿಲಿಗೆ ಬಂದೀನಿ
ಬಾಗಿಲಾ ತಗೀರಿ ಅಂದ್ರ
ಮಾರಿ ನೋಡಿ ಅವರವ್ವನ ಕೇಳಾಕ
ಒಳಗ ಹೋಗ್ತಾರ .....

೧೩೦೦. ಬಡಬಡ ಬರ್ತಾರ
ಕಟಕಟಾ ಬಾಗ್ಲ ಬಡಿತಾರ
ಬಾಗ್ಲಾ ತಗದ್ರ ಬಾಗಿಲ ಮುಂದಕೆ ಮಾಡಿ
ಲಟಲಟ ಮುದ್ದು ಕೊಡತಾರ .....

೧೩೦೧. ಹೆಣ್ತಿ ಅಂದ್ರ ಬಿದ್ದು ಬಿದ್ದು ನಗತಾರ
ಸಂತಿ ಮಾಡಿಕೊಂಡು ಬರ್ರಿ ಅಂದ್ರ
ಬಿಕ್ಕಿ ಬಿಕ್ಕಿ ಅಳ್ತಾರ .....

೧೩೦೨. ಕಾಜಿನ ಕಂಬಕ ಕಾಲ ಕೊಟ್ಟು
ಮುತ್ತಿನ ಕಂಬಕ್ಕ ಬೆನ್ನುಕೊಟ್ಟು
ನನ್ನ ಕೂಡ ಹಾಳ ಹರಕತಿ ಬಡಿತಾರ .....

೧೩೦೩. ಬಂಗಾರದಂಗಡ್ಯಾಗ
ಸಿಂಗಾರ ಆಗಿ ಕುಂತಗೊಂಡು
ಮುತ್ತಿನ ಬಜಾರದಾಗ ಹಾದು
ಮನೀಗೆ ಬಂದು ಮುತ್ತು ಸುರುವತಾರ .....

೧೩೦೪. ಕಾಲಾಗ ಬೂಟು
ಕಿಸೆದಾಗ ನೋಟು
ಕಾಟಾಚಾರಕ್ಕ ಊಟಾ ಮಾಡ್ತಾರ .....

೧೩೦೫. ಹದಿನೆಂಟು ವರ್ಷದೊಳಗ
ಮದಿವಿ ಆಗೂದು ಕಾಯ್ದೆಯಿಲ್ಲ
.............ರಿಗೆ ಯಾವ ವಾಯದೆಯಿಲ್ಲ.

೧೩೦೬. ಉತ್ತರ ದಿಕ್ಕಿನಲ್ಲಿರುವುದು ಕಾಶಿ
ಅಲ್ಲಿರುವುದು ಪುಣ್ಯದ ರಾಶಿ
ನಾನು ನನ್ನ .............ರ ಹೆಸರ ಹೇಳುವೆನು
ಪ್ರೀತಿ ಜರಡಿಯ ಸೋಸಿ.

೧೩೦೭. ಬಡತನ ಬರಲಿ ಸಿರತನ ಬರಲಿ
ನನ್ನ ............ವರ ಪ್ರೀತಿ ಅನುಗಾಲ ಇರಲಿ.

೧೩೦೮. ಮಧ್ಯಾಣ ಬಿಸಿಲು ಮಧ್ಯಾಣ ಸಿರಿತನ ಸ್ಥಿರವಲ್ಲ
ನನ್ನ .............. ವರ ಪ್ರೀತಿ ಸುಸ್ಥಿರ ಸಂಶಯವಿಲ್ಲ.

೧೩೦೯. ಹುಟ್ಟಿದ ಮನೆ ಬಿಟ್ಟು
ಕೊಟ್ಟ ಮನೆಗೆ ಬಂದೆ
ಅತ್ತಿ ಮಾವಗ ನಾ ಹೂವಾದೆ
ನನ್ನ ............ ರಾಯಗ ನಾ ಪ್ರೇಮ ದೇವತಿಯಾದೆ.

೧೩೧೦. ರಟ್ಟಿ ಮುರದ ದುಡೀತಾರ
ರೊಟ್ಟೀ ತಿಂದು ಮಟ್ಟಿ ಹೊಡಿತಾರ .....

೧೩೧೧. ಜರದ ರುಂಬಾಲ ಸುತ್ತ್ಯಾರ
ಕ್ವಾರಿ ಮೀಸಿ ತಿರಿವ್ಯಾರ
ಹಣಿಗೆ ಗಂಧ ತೀಡ್ಯಾರ
ಬಾಯಾಗ ತಾಂಬೂಲ ಸವಿದಾರ
ನೆದರ ಆಗೇತಂತ ನನ್ನ ಕರದರ
ಸೀರಿ ಸೆರಿಗಿನ್ಯಾಗ ಮುಖಾ ಮುಚ್ಚಿಗೋತಾರ .....

೧೩೧೨. ಗಂಧದೆಣ್ಣಿ ಹಚಗೊಂಡ
ಗದ್ದ್ಯಾಗ ನಿಂತ ಮಂಗ್ಯಾರ ಕೂಡ
ಹಲ್ಲ ಕಿಸಿತಾರ .....

೧೩೧೩. ಮೈಸೂರು ಬೆಂಗಳೂರು ತಿರುಗಿ ಬಂದಾರ
ತಂಗಳರೊಟ್ಟಿ ತಿಂದು ತಂಗಾಳಿಗೆ ಮಲಗ್ಯಾರ .....

೧೩೧೪. ಎರಿ ಹೊಲ್ದಾಗ ಬಿಳಿ ಎತ್ತು
ಕೆಂಪು ಹೊಲ್ದಾಗ ಕೆಂದೆತ್ತು
ಮನ್ಯಾಗ ಮಲಗೇತಿ ಮುದಿ ಎತ್ತು
ಎಲ್ಲ ಎತ್ತು ಕಾಗರದನ ಒಂದ ಮಾಡಿ
ಹಂತಿಕಟ್ಟಿ ಕ್ಯಾಕಿ ಹೊಡಿತಾರ .....

೧೩೧೫. ಒಂದು ಬೇಕು ಎರಡು ಸಾಕಂತಾರ
ಒಂದೂರಾಗ ಒಂದು ಮಾತು
ಇನ್ನೊಂದೂರಾಗ ಇನ್ನೊಂದು ಮಾತು
ಹೇಳ್ತಾ ಹೇಳ್ತಾ ಹುಬ್ಬಳ್ಳ್ಯಾಗ
ಹದಿನೇಳು ಮಕ್ಕಳ ತಂದಿ ಆಗ್ತಾರಂತ
ನನ್ನ ...... ರು ದಿಂಗ್ ಬಡದಾರ.

೧೩೧೬. ಚಕ್ಕಡ್ಯಾಗ ಕುಂತು ಕುಂತ್ರ
ಪಕ್ಕಡಿ ಎಲುಬು ಸವದವಂತ
ಹಿತ್ತಲದಾಗ ಕುಂತ ತತ್ತಿ ತಿಂತಾರ .....

೧೩೧೭. ಸುಂದರ ಅದಾರ
ಸೂರ್ಯಾನ ಹೋತ್ತಾರ
ಚಂದ್ರನ ಮೀರಸ್ತಾರ
ನನ್ನ ಕಂಡ್ರ ಮೆತ್ತಗ ಇರ್ತಾರ .....

೧೩೧೮. ರಾತ್ರಿ ಹಗಲ ಮಾಡ್ತಾರ
ಹಗಲ ರಾತ್ರಿ ಮಾಡ್ತಾರ
ತಾವs ಸೂರ್ಯಾ ಚಂದ್ರಾ ಅಂತಾರ
ಏನೆಂದ್ರೂ ಜನಾ ಇವರಿಗೆ
............. ಅಂತಾರ.

೧೩೧೯. ಗೊಂದಲಿಲ್ಲ ಗುದುಮುರಿಗಿಲ್ಲ
ಸುಮ್ನ ಉಂಡು ಚಾವಡಿಗೆ ಹೋಗ್ತಾರ ....

೧೩೨೦. ಅತ್ತ್ಯಾರ ಹೊಟ್ಟೀಲೆ ಮುತ್ತಿನಂತೋರು ಹುಟ್ಟ್ಯಾರ
ಮುತ್ತಿನಂತೋರ ಮದುವ್ಯಾಗಿ ಮುತ್ತು ಕೊಟ್ತಾರ ....

೧೩೨೧. ಕೆರಿನೀರು ತರು ಬಾಲ್ಯಾರ ನೋಡಿ
ಬ್ಯಾಲ್ಯಾರ ಮೈ ಬೆಡಗು ನೋಡಿ
ಅಂಕ ಡೊಂಕ ನಡಾ ನೋಡಿ
ಕೆರ್ಯಾಗ ಬಿದ್ದು ಕಮಲ ಹೂ ತಂದು ಕೊಡ್ತಾರ ....

೧೩೨೨. ಬಂಗಾರ ಚೈನ ಬಂಗಾರದ ಖಡೆ ಹಾಕಿ
ಡಾಸರಾಕಿ ಮನಿಗೆ ಬ್ಯಾಸರಕಿಲ್ದ ಹೋಗ್ತಾರ ....

೧೩೨೩. ಸಂತ್ಯಾಗೊಂದು ಬೋರಮಳ ಕೊಡಿಸಿ
ಸಾಯೂತನ ಹಂಗಸತಾರ .....

೧೩೨೪. ಎಂದೂ ತಪ್ಪೂದಿಲ್ಲ
ಅಣ್ಣ ತಮ್ಮಂದಿರು ಆಗೂದು ಪಾಲು
ನನ್ನತ ಹೊಗ್ಯಾನ ಗಂಧೆಣ್ಣಿಪಾಲು
ಇವರ ಬಾಳೇ ಆಗೂದು
ಸೂಳ್ಯಾರ ಪಾಲು ....

೧೩೨೫. ಕಂಠೀಸರ ಕೇಳಿದರ
ರಂಟಿ ಹೊಡದು ಬರ್‍ತೀನಿ ಅಂತಾರ ......

೧೩೨೬. ಬಂಗಾರದುಂಗುರ
ಬಣ್ಣದ ಅಂಗಿ
ಅಂಗಳದಾಗ ನಿಂತ
ತಂಗಿ ಕರೀತಾರ ನನ್ನವರು .....

೧೩೨೭. ಕೊಡ್ಡ ಕಾಲ್ಮರಿ ಗಿಡ್ಡ ಬೆತ್ತ ಹಿಡಕೊಂಡು
ಮಡಿ ಹೊಲಕ ಒಡ್ಡ ಹಾಕಾಕ ಹೋಗ್ತಾರ .....

೧೩೨೮. ವಜ್ರದ್ವಾಲಿ ಗೆಜ್ಜಿ ತೀಕಿ
ಜುಮ್ಮಿ ಒಂಕಿ–ವಾಲಿ ಸರಗಿ
ನನ್ನ ಸರದಾರನ ಹೆಸರು
ಸಾವಕಾಶ ಹೇಳ್ತೀನಿ .....

೧೩೨೯. ನಗುವು ಸಹಜದ ಧರ್ಮ
ನಗಿಸುವುದು ಪರಧರ್ಮ
ನಾ ಮದುವೆಯಾಗಿ ಮಕ್ಕಳಾದ್ರೂ
ತಿಳಿದಿಲ್ಲ ಇವರ ಮರ್ಮ
ನನ್ನ ..... ರ ಮದುವೆಯಾದದ್ದು
ಒಂದು ದೊಡ್ಡ ಕರ್ಮ.

೧೩೩೦. ಭರ್ ಭರಾಟ ಬಂಗಾರತಾಟ
ನೋಡಾಕ ಚಂದ ಹೇಮಕೂಟ
ಬ್ಯಾಡಗಿ ಮೆಣಸಿನಕಾಯಿ ಘಾಟ
ಅಡಗಿಗೆ ಬೇಸಿಕಟಗಿ ಸೌಟ
ನನ್ನಾತ ಬಂದ ಉಣ್ಣಾಕ
ನಾ ಹೋದೆ ನೀಡಾಕ
ನತ್ತ ಬಿತು ಕೆಳಗ
ಅಂವಾ ಮುತ್ತು ಕೊಟ್ಟ ಒಳಗ .....

೧೩೩೧. ಚೆಡ್ಡಿ ಹಾಕ್ತಾನ
ಸಡ್ಡು ಹೊಡಿತಾನ
ಪೈಲ್ವಾನ್ ಬಂದ ಅಂದ್ರ
ಸಲಾಮು ಹೊಡಿತಾನ .....

೧೩೩೨. ಆರು ಸೇರು ಜ್ವಾಳಾ
ನೂರ ಸಲ ಅಳೆದು
ಲೆಕ್ಕ ತಿಳೀಲಿಲ್ಲಂತ
ಅವರಕ್ಕನ್ನ ಕೇಳ್ತಾರ .....

೧೩೩೩. ಕುದುರಿ ಮ್ಯಾಲ ಕುಂತಾರ
ಗುಡುಗು ಸಿಡಿಲಿಗೆ ಹೆದರ್‍ಯಾರ
ಅಡಿಗಿ ಮನ್ಯಾಗ ಬಂದ
ಗಡಿಗಿ ಸಂದ್ಯಾಗ ಕುಂತಾರ ....

೧೩೩೪. ಇಲಿ ಬಂತ ಇಲಿ
ಗುದ್ದಿನ್ಯಾಗಿನ ಹುಲಿ
ಇಲಿ ಬಂದೈತಿ ಬರ್‍ರಿ ಅಂದ್ರ
ಗಂಡರನ್ನ ಕರಿ ಅಂತಾ ಹೇಳ್ತಾರ .....

೧೩೩೫. ಹದಿನಾರು ಹೋಳಿಗಿ
ಹದಿನೆಂಟು ಕಡಬು
ತಪೇಲಿ ತುಂಬ ಅನ್ನ ಉಂಡು
ಹರವಿ ತುಂಬ ನೀರ ಕುಡಿದು
ಉಪವಾಸ ಅದೀನಂತ
ಉಪ್ಪರಿಗಿ ಮ್ಯಾಲ ಮಲಗತಾರ ....

೧೩೩೬. ಮಾಳ್ಗಿ ಮ್ಯಾಲ ಕುಂತ ಮಾದಲಿ ತಿಂತಾರ
ಓಣಿ ಕಟ್ಟಿ ಮ್ಯಾಲ ಕುಂತಗೊಂಡು ಡಾಣಿ ತಿಂತಾರ ....

೧೩೩೭. ಪಡಿ ಹಿಟ್ಟಿನ ರೊಟ್ಟಿ
ಹಿಡಿ ಮೆಣಸಿನಕಾಯಿ ಹಿಂಡಿ
ಚೌಕಾಗಿಕುಂತು ಜಡತಾ ಜಡದು
ನಡುಮನ್ಯಾಗ ಕುಂತ
ಜೆಂತಿ ಏಣಿಸ್ತಾರ ....

೧೩೩೮. ಇಪ್ಪತ್ತು ಚಪಾತಿ
ಎಪ್ಪತ್ತು ಬಾಳೇಹಣ್ಣು ತಿಂದು
ಯಾಕೋ ಕುಪ್ಪತ್ತು ಆಗೇತಂತ
ಒಪ್ಪತ್ತು ಮಾಡೀನಿ ಅಂತಾರ .....

೧೩೩೯. ಕಳತ ಪ್ಯಾರಲಹಣ್ಣು
ಕೊಳೆತ ಬಾಳೀಹಣ್ಣು
ಚಳ್ಳ ಹಣ್ಣಬೇಕಂತ
ನನ್ನ ಕೂಡ ಚೆನ್ನಾಟ ಆಡ್ತಾರ ....

೧೩೪೦. ಶೆಟ್ಟಿ ಕೂಡ ವ್ಯಾಪಾರ ಮಾಡ್ತಾರ
ಜಟ್ಟಿ ಕೂಡ ಕುಸ್ತಿ ಆಡ್ತಾರ
ನೀರು ಕುಡದು ಡೇಗ ಬಿಡ್ತಾರ
ಹೊಟ್ಟೆಗೆ ತಿನ್ನೂದು ಕಡಿಮೆ ಆಗ್ಲಿ ಅಂದ್ರ
ಸಿಟ್ಟೀಗೆ ಬರ್ತಾರ .....

೧೩೪೧. ಬಂಡಿ ಕಡಲೆಕಾಯಿ ತಿಂದ್ರೂ
ಗಿಂಡಿ ರಸ ಇಲ್ಲ
ಬಂಡಿಗಲ್ಲಂತ ನನ್ನ .............ರಿಗೆ
ಹಂಡೆಗಟ್ಟಲೆ ನೀರು ಹಾಕಿದ್ರೂ ಕರಗೂದಿಲ್ಲ.

೧೩೪೨. ಶ್ರೀರಾಮಚಂದ್ರನು ಶಿವಧನುಷ್ಯ
ಮುರಿದನು ಸೀತೆಗಾಗಿ
ನಾನು ............... ರ ಹೆಸರು ಹೇಳುವೆನು
ನಮ್ಮೆಲ್ಲರ ಪ್ರೀತಿಗಾಗಿ.

೧೩೪೩. ದುರ್ಯೋಧನನು ಅಡಗಿ ಕುಳಿತಿದ್ದು
ವೈಶಂಪಾಯನ ಸರೋವರದಲ್ಲಿ
ನಾನು ................. ರ ಪಾದಸೇವೆ ಮಾಡುವೆನು
ಸದಾಶಿವನ ಹೆಸರಿನಲ್ಲಿ.

೧೩೪೪. ಕರ್ಣನು ತಾಯಿ ಕುಂತಿಗೆ ವಚನ ಕೊಟ್ಟ
ತೊಟ್ಟ ಬಾಣ ತೊಡೆನೆಂದು
ನಾನು ದೇವರಲ್ಲಿ ಬೇಡುವೆನು
ನನ್ನ ಮಾಂಗಲ್ಯಭಾಗ್ಯ ಸದಾ ಇರಲೆಂದು ....

೧೩೪೫. ರಾತ್ರಿ ರಾಣಿ ಹೂವಿನ ಕಂಪು
ನನ್ನ ............. ರೇ ನನ್ನ ಬಾಳಿಗೆ ಇಂಪು.

೧೩೪೬. ಖಗ್ರಾಸ ಸೂರ್ಯಗ್ರಹಣದಲ್ಲಿ
ನಕ್ಷತ್ರಗಳ ಮಿಣಿ ಮಿಣಿ ದೀಪ
ಚಂದ್ರಪ್ಪನ ವಜ್ರದುಂಗುರದಾಟ
ನನ್ನ ........... ರದು ದಿನ ಬೆಳಗಿದರೆ ಹುಡಗಾಟ.

೧೩೪೭. ಪಡಿರೊಟ್ಟಿ ಹಿಡಿ ಹಿಂಡಿ
ಆಡಾಡ್ತ ತಿಂದು
ಅಡಿಗಿ ಮನ್ಯಾಗ ಮಲಗ್ತಾರ ....

೧೩೪೮. ಇಪ್ಪತ್ತು ಹೋಳಿಗಿ
ಸೇರು ಕೊಬ್ಬರಿ ಬೆಲ್ಲಾ
ಎಪ್ಪತ್ತು ಬಾಳೇಹಣ್ಣು ತಿಂದು
ಕುಪ್ಪತ್ತು ಆಗೇತಂತ
ಒಪ್ಪತ್ತು ಮಾಡ್ತಾರ ....

೧೩೪೯. ಚಟಾಕ ಉಪ್ಪು ಚಕ್ಕಡಿ ಮಾವಿನಕಾಯಿ
ಕಟಾಕಟಾ ತಿಂದ ವಟಾ ವಟಾ ಅಂತಾರ ....

೧೩೫೦. ಸಾಲಾ ಮಾಡ್ತಾರ
ತುಪ್ಪ ಸಕ್ರಿ ಉಣ್ತಾರ
ಸಾಲಗಾರ ಬಂದ್ರ
ತೆಲಿಶೂಲ ಅಂತ ಮಲಗ್ತಾರ ....

೧೩೫೧. ಬಂಗಾರದಂಗಡ್ಯಾಗ ಕುಂತ
ಉಂಗುರದ ಆಳತಿ ಕೇಳ್ತಾರ .....

೧೩೫೨. ಹರಕ ಮಿಣಿ
ಮುರುಕ ನಗಾ
ಕುಂಟ ಎತ್ತು ಹೂಡಿ
ರಂಟಿ ಹೊಡಿತಾರ .....

೧೩೫೩. ಮುರುಕಕಾವು
ಮೊಂಡ ಗುದ್ಲಿ
ಹಕ್ಕರಿಕಿ ಹರಿವಲ್ದಂತ
ಹಾರ್ಯಾಡಿ ಕಡಿತಾರ ....

೧೩೫೪. ತೊಡಿಮ್ಯಾಲ ತೊಡಿ
ಎಷ್ಟು ಹೊಡಿತಿ ಹೊಡಿ
ಸಿನೇಮಾಕ್ಕ ಹೋಗೂನು ನಡಿ
ಅತ್ತಿ ಬರ್ತಾಳ ತಡಿ .....

೧೩೫೫. ಕಾಸಿ ರಾಮೇಶ್ವರಕ ಹೋಗೂದು ಭಾಗ್ಯ
ನನ್ನ .............. ರ ಕೈಹಿಡಿದದ್ದೇ ಸೌಭಾಗ್ಯ.

೧೩೫೬. ನಾಯಿ ಮ್ಯಾಲ ಕುಂತ
ನ್ಯಾಯಾ ಹರೀತಾರ .....

೧೩೫೭. ಗೋಕರ್ಣಕ ಹೋಗೂನಂತ
ಸೀಕರಣಿ ಕೇಳ್ತಾರ ....

೧೩೫೮. ಭಾಗ್ಯಕ್ಕ ನನ್ನ ಅಪ್ಪಾ ಅವ್ವಾ ಬಂದಾರ
ಬಾಗ್ಲ ಮುಂದ ನಿಂತಾರ
ಒಳಗ ಕರೀರಿ ಅಂದ್ರ
ಮಾರಿ ಮುಚಗೋತಾರ ....

೧೩೫೯. ಹೊಸ ಹಂಡೆದಾಗ
ಬಿಸಿ ನೀರು ಕಾಸಿದ್ರ
ಜಳಕ ಬ್ಯಾಡಂತ
ಜಗಳಾ ಮಾಡ್ತಾರ .....

೧೩೬೦. ಯುಗಾದಿಗೆ ಮಾಡುವುದು
ಬೇವು ಬೆಲ್ಲ
ಸಂಕ್ರಾಂತಿಗೆ ಮಾಡುವುದು
ಎಳ್ಳು ಬೆಲ್ಲ
ನನ್ನ ............. ರ ಜೈನಿ ನೋಡಾಕ
ಎರಡು ಕಣ್ಣು ಸಾಲೂದಿಲ್ಲ.

೧೩೬೧. ಕೆಟ್ಟ ಬಿಸಲಾಗ
ಸೊಟ್ಟ ಮಾರಿ ಮಾಡಿಕೊಂಡು
ಕುಂಟ ಕುದುರಿ ಮ್ಯಾಗ ಕುಂತ
ಕುಣಕೊಂತ ಬರ್ತಾರ ....

೧೩೬೨. ಹತ್ತು ರೂಪಾಯಿ ಹಸರಂಗಿ
ಮೂವತ್ತು ರೂಪಾಯಿ ಮುತ್ತಿನಂಗಿ
ತೊಟಗೊಂಡಾರ
ತಂಗಿ ಮನಿಗೆ ಹೋಗ್ತೀನಂತ
ಮಂಗೀ ಮನೀಗೆ ಹೋಗ್ತಾರ ....

೧೩೬೩. ಬಿಳಿ ಜೋಳದ ಕಿಚಡಿ
ಗಜ್ಜರಿ ಪಚಡಿ
ಕಚಕಚತಿಂದ
ಕಾಸೀ ಮನೀಗೆ ಹೋಗ್ತಾರ .....

೧೩೬೪. ಆರು ಸೇರು ಲೋಬಾನ
ಮೂರು ಸೇರು ಕರ್ಪೂರ
ಶಿವನ ಗದ್ದಗಿ ಮುಂದ ಕುಂತ
ಶಿವಪೂಜೆ ಮಾಡ್ತಾರ .....

೧೩೬೫. ಹಿತ್ತಾಳೆ ಗಿಂಡಿ ವಿಭತ್ತಿ ಉಂಡಿ
ಲಕ್ಷ್ಮಿ ಕರಕೊಂಡ ಶಿವಪೂಜೆಗೆ ಹೋಗ್ತಾರ .....

೧೩೬೬. ಕ್ಯಾದಗಿ ಮಲ್ಲಿಗಿ ಕಂಪಿನ್ಯಾಗ
ಎಲ್ಲಮ್ಮನಂಥ ಮಡದಿ ಕಟಗೊಂಡ
ಮಲ್ಲಯ್ಯನ ಗುಡಿಗೆ ಹೋಗ್ತಾರ .....

೧೩೬೭. ಸಮಾರಂಭಕ್ಕ ಮೊದಲು ಮಾಡುವರು
ಗಣಪತಿ ಸ್ತೋತ್ರ
ಭೂಲೋಕದಲ್ಲಿ ಕಾಶಿಯೇ
ಪುಣ್ಯಕ್ಷೇತ್ರ
ನನ್ನ ............ ರು ಕಟ್ಟಿದರು ನನಗೆ
ಮಂಗಳ ಸೂತ್ರ.

೧೩೬೮. ಪ್ರೇಮವೇ ಜೀವನ
ಭಕ್ತಿಯೇ ಮುಕ್ತಿವನ
ಸತ್ಯವೇ ಕೈಲಾಸ ಬನ
....... ರಿಂದಲೇ ನನ್ನ
ಜೀವನ ಪಾವನ.

೧೩೬೯. ಪತಿಯೇ ದೇವರೆಂದು ನೋಡುವೆ
ಮನಮುಟ್ಟಿ ಅವರ ಸೇವೆ ಮಾಡುವೆ ....

೧೩೭೦. ಪತಿನಾಮವೇ ನನ್ನ ನಾಲಿಗೆಗೆ ಕಲ್ಲುಸಕ್ಕರೆ
ಪತಿ ಪ್ರೇಮವೇ ನನ್ನ ಬಾಳಿಗೆ ಐಸಿರಿ
ನನ್ನ ಪತಿ ......... ದೇವರೇ ನನಗೆ ಮೋಕ್ಷದ ದಾರಿ.

೧೩೭೧. ಮನದಲ್ಲಿ ನೆನೆವೆ
ಪತಿ ಪಾದವನ್ನು
ದಿನಬೆಳಗು ಪೂಜಿಸುವೆ
ಪತಿ ದೇವರನ್ನು
ಮನಬಿಚ್ಚಿ ಹೇಳುವೆನು
.............ರ ಹೆಸರನ್ನು.

೧೩೭೨. ಭಕ್ತಿಯೇ ಮುಕ್ತಿಗೆ ಮಹಾದ್ವಾರ
..............ರ ಕೊರಳಿಗೆ ಹಾಕುವೆನು ಪ್ರೇಮಹಾರ.

೧೩೭೩. ಭೂಲೋಕದಲ್ಲಿ ದಾನಶೂರ ಕರ್ಣನೇ ಮಹಾಶೂರ
ನನ್ನ ...............ರೇ ನನಗೆ ಪ್ರೇಮದಾಗರ.

೧೩೭೪. ಸಂಸಾರವೆಂಬ ಬಂಡಿ
ಅದರಲ್ಲಿದೆ ಮುಕ್ತಿಯಾ ಕಿಂಡಿ
............ರಿಂದಲೇ ದಾಟಿ ಮುಟ್ಟುವೆ
ಬಾಳ ಸಾಗರದಾ ದಂಡಿ.

೧೩೭೫. ಎಲ್ಲ ದಾನಗಳಲ್ಲಿ ಅನ್ನದಾನ ಶ್ರೇಷ್ಠ
ಅನ್ನದಾನಕ್ಕಿಂತ ವಿದ್ಯಾದಾನ ಶ್ರೇಷ್ಠ
ನನಗೆ ..............ರ ಪಾದವೇ ಶ್ರೇಷ್ಠ.

೧೩೭೬. ವೇದಗಳು ಸಾರುವವು
ಭಗವಂತ ಭಕ್ತವತ್ಸಲನೆಂದು
ಭವದ ಭಕ್ತರು ನಂಬುವರು
ಭಗವಂತ ಭಕ್ತವತ್ಸಲನೆಂದು
ನಾನು ನಮ್ಮ ..... ವರ ಪಾದಪೂಜಿಸುವೆ
ನೀನೇ ನನ್ನ ವತ್ಸಲನೆಂದು .....

೧೩೭೭. ಪತಿ ಇರುವ ಸ್ಥಳವೇ ಕೈಲಾಸ
ಅದು ಶಿವ ಪಾರ್ವತಿಯರ ನಿವಾಸ
.................. ರಿರ ನಗುವೇ ನನಗೆ ಸರಸ.

೧೩೭೮. ನೀರಿಗೆ ನೈದಿಲೆಯೇ ಶೃಂಗಾರ
ನಾರಿಗೆ ಗುಣವೇ ಶೃಂಗಾರ
ಸತಿಗೆ ಪತಿಯೇ ಶೃಂಗಾರ
ಮುತ್ತೈದೆಗೆ ಮೂಗುತಿ ಶೃಂಗಾರ
ನನಗೆ ............. ರೇ ಶೃಂಗಾರ.

೧೩೭೯. ಪತಿಸೇವೆ ಮಾಡಿ
ಮಹಾಪತಿವ್ರತೆಯಾದಳು ದ್ರೌಪತಿ
ಪತಿಗಾಗಿ ಹಂಬಲಿಸಿ
ಸತಿರತ್ನಳಾದಳು ಸಾವಿತ್ರಿ
ಪತಿವ್ರತಾ ಪ್ರಭಾವದಿಂದ
ಯಮನನ್ನು ಸೋಲಿಸಿದಳು ಅನುಸೂಯಾ
ಪತಿವ್ರತಾ ಶಕ್ತಿಯಿಂದ
ರಾವಣನ ಸಂಹಾರ ಮಾಡಿದಳು ಸೀತೆ
ಅಂಥ ಪತಿಭಕ್ತಿ ನನ್ನದಾಗಿರಲೆಂದು
.............ರ ಪೂಜಿಸುವೆ ಮುಕ್ತಿಗೆಂದು.

೧೩೮೦. ಮಾತು ಕಲಿಸಲು ತಾಯಿಯೇ ಗುರು
ಓದು ಕಲಿಸಲು ಸಾಲಿಯೇ ಗುರು
ಬಾಲ್ಯದಲ್ಲಿಯೇ ತಂದೆ ಗುರು
ನನಗೆ ................ ರೇ ಗುರು.

೧೩೮೧. ನನ್ನ ಮೇಲಿದೆ ಪತಿಪ್ರೇಮ ನೋಟ
ನಡುವೆ ನಡೆದಿದೆ ಅತ್ತೆ ಮಾವರ ಕಾಟ
ಏನಿದ್ದರೂ .............ರು ಕೊಟ್ಟಿದ್ದಾರೆ
ಸದಾ ಅಮೃತದ ಊಟ.

೧೩೮೨. ದಾನಧರ್ಮಕ್ಕೆ ಅನ್ನಬಾರದು ನಾಳೆಗೆ
..............ವರ ಪ್ರೀತಿಗಾಗಿ
ನಮಿಸುವೆ ಅವರ ಕಾಲಿಗೆ.

೧೩೮೩. ಸದಾಚಾರದಿಂದ ನಡಿ
ಸನ್ಮಾರ್ಗವನ್ನು ಹಿಡಿ
ಪತಿ ಸೇವೆಯಿಂದ ಮುಕ್ತಿಪಡಿ
..............ವರ ಆಜ್ಞೆಯಂತೆ
ಮುಂದಿಡುವೆ ನನ್ನ ಅಡಿ.

೧೩೮೪. ಜನಸೇವೆಯೇ ಜನಾರ್ಧನನ ಸೇವೆ
ನನಗೆ ಸತತ ನನ್ನವರದೇ ಸೇವೆ ......

೧೩೮೫. ಭಾರತವು ಅನೇಕ ಧರ್ಮಗಳ ತೌರು
ಅವೆಲ್ಲವುಗಳ ಸಾರವೇ ತುಂಬಿದ ತೇರು
ನಮ್ಮ ರಾಯರ ಹೆಸರು ಹೇಳುವೆ ಇಲ್ಲ ಬೇಸೂರು .....

೧೩೮೬. ಭಾರತವು ಬಹು ಭಾಷೆಗಳ ದೇಶ
ನಾನು ಪಾಲಿಸುವೆ .............. ರ ಆದೇಶ.

೧೩೮೭. ಭಗವಂತನ ಮೇಲಿರಬೇಕು ಭಕ್ತಿ
ಅಂದಾಗ ದೊರೆಯುವುದು ಮುಕ್ತಿ
.................ರ ಮೇಲಿರುದು ನನ್ನ ಅನುರಕ್ತಿ.

೧೩೮೮. ದೇವರು ನಮಗೆ ಬಾಯಿ ಕೊಟ್ಟಿದ್ದಾನೆ
ತನ್ನನ್ನು ಸ್ತೋತ್ರ ಮಾಡಿ ಭಜಿಸಲಿಕ್ಕೆ
ದೇವರು ನಮಗೆ ಕಣ್ಣು ಕೊಟ್ಟಿದ್ದಾನೆ
ಅವನನ್ನು ನೋಡುವುದಕ್ಕೆ
ದೇವರು ದಂಪತಿ ಮಾಡಿದ್ದಾನೆ
.............. ರಾಯರ ಪತಿಸೇವೆ ಮಾಡಲಿಕ್ಕೆ.

೧೩೮೯. ಭವರೋಗ ಕಳೆಯಲು
ಶಿವನ ನಾಮಸ್ಮರಣೆಯೇ ಮದ್ದು
ಆಗ ಶಿವನು ಕೈಲಾಸದಿಂದ ಬರುವನು ಎದ್ದು
............. ರಿಗೆ ನಾನೆಂದರೆ ಮುದ್ದು ಮುದ್ದು.

೧೩೯೦. ಅಂಗಕ್ಕೆ ಆಚಾರ ಚೆಂದ
ಆತ್ಮನಿಗೆ ಅರಿವು ಚೆಂದ
..............ರಿಗೆ ಸೇವಾಧರ್ಮವೇ ಚೆಂದ.

೧೩೯೧. ಲಿಂಗಕ್ಕೆ ಏರಿಸುವರು
ಮೂರು ದಳದ ಪತ್ರಿ
................ರ ಹೆಸರ ಹೇಳುವೆನು
ಲಿಂಗಯ್ಯನವರ ಪುತ್ರಿ.

೧೩೯೨. ಸತ್ಯ ನುಡಿವುದೇ
ದೇವಮಾನವ ಧರ್ಮ
ನುಡಿದಂತೆ ನಡೆಯುವುದೇ
ವೇದೋಕ್ತಿ ಕರ್ಮ
ಪತಿಯೇ ಪರಮಾತ್ಮನೆಂದು ಸೇವಿಸುವುದು
ಸತಿ ಧರ್ಮದ ಮರ್ಮ
ನನ್ನ ಪತಿ .................ರ ಸೇವೆ ಮಾಡುವುದೇ
ನನ್ನ ಪೂರ್ವಾಕೃತ ಪುಣ್ಯ ಕರ್ಮ.

೧೩೯೩. ಜ್ಞಾನದಿಂದ ಅಜ್ಞಾನ ತೊಲಗುವುದು
ಕಾಂತಿಯಿಂದ ಕತ್ತಲೆ ಅಡಗುವುದು
................ವರ ಸೇವೆಯಿಂದ ನನ್ನ
ಜನ್ಮ ಸಾರ್ಥಕವಾಗುವುದು.

೧೩೯೪. ಧರ್ಮವೇ ಸುಖದ ಸೋಪಾನ
ನನ್ನ ................ ರಿಗೆ ಕೊಡುವೆ ತಂಪಾದ ಪಾನ.

೧೩೯೫. ಧರ್ಮವೇ ಜಯ
ಕರ್ಮವೇ ಲಯ
ಶಾಂತಿ ಪಂಥವೆ ಶಿವಾಲಯ
ನನ್ನ ............... ರ ಮನೆಯೇ
ನನಗೆ ದೇವಾಲಯ.

೧೩೯೬. ಹಿತದಿಂದ ಬಾಳಲು ಎಲ್ಲದರಲ್ಲೂ ಮಿತಿ ಇರಬೇಕು
ದೇವರಲ್ಲಿ ಭಕ್ತಿ ಉಳ್ಳವರು ನಮ್ರರಾಗಿರಬೇಕು
ನಾನು ಸಂಸಾರದಲ್ಲಿ ಸುಖ ಪಡೆಯಬೇಕೆಂದರೆ
ನನ್ನ .............. ಪತಿಯಲ್ಲಿ ಭಯ ಭಕ್ತಿಯಿಂದಿರಬೇಕು.

೧೩೯೭. ಶರಣ ಸಾಹಿತ್ಯವಿರುವುದು ವಿಪುಲ
ಅದರ ಅಭ್ಯಾಸದಿಂದಾಗುವುದು ಜನ್ಮ ಸಫಲ
ನನ್ನ ............. ಪತಿ ದೇವರ ಪಾದಪೂಜೆಯಿಂದಾಗುವುದು
ನನಗೆ ಮುಕ್ತಿಫಲ.

೧೩೯೮. ಶರಣರುದಾಸರ ವಚನಾಮೃತವೇ ಬಾಳಿಗೆ ಹಿತ
ನನ್ನ ............. ರ ಪ್ರೀತಿಯೇ ನನಗೆ ಪಂಚಾಮೃತ.

೧೩೯೯. ಸತ್ಯಶಾಂತಿ ಭಕ್ತಿಯಿಂದ ನಡೆವುದೇ ಸದಾಚಾರ
ಮಾರ್ಗ ತಪ್ಪಿ ನಡೆಯುವುದೇ ಅನಾಚಾರ
ನನ್ನ ................ ಪತಿದೇವರಿಗೆ ಮಾಡುವೆ ನಮಸ್ಕಾರ.

೧೪೦೦. ಮಾನವನಿಗೆ ಸುಖ ಪಡೆಯಲು
ಸಹನೆ ತಾಳ್ಮೆ ಬೇಕು
ನನ್ನ ..............ರು ತಾಳ್ಮೆ ಗೆಟ್ಟರೂ
ಪ್ರೀತಿಯಿಂದ ನಾ ಕುಳಿತಿರಬೇಕು.

೧೪೦೧. ಗುರುಲಿಂಗ ಪಾದತೀರ್ಥವೇ ಪಾದೋದಕ
ನನ್ನ.............ರ ಪ್ರೀತಿ ನೋಟವೇ ನನಗೆ ಗಂಗೋದಕ.

೧೪೦೨. ಲಿಂಗಾಯತರು ಹಾಕೂದು ಶಿವದಾರ
ಬ್ರಾಹ್ಮಣರು ಹಾಕೂದು ಜನಿವಾರ
ಬೇಡಿಕೊಂಡವರು ಹಾಕೂರು ಕಾಶೀದಾರ
ನನ್ನ ...............ರೇ ನನ್ನ ಬಾಳಿನ ಸರದಾರ.

೧೪೦೩. ಬಸವಣ್ಣನಿಗೆ ಪ್ರಾಣವೇ ಜಂಗಮ
ನನಗೆ ..........ರೇ ಕೂಡಲ ಸಂಗಮ

೧೪೦೪. ಗುರುಲಿಂಗ ಜಂಗಮಾರ್ಪಿತವೇ ಪ್ರಸಾದ
ನನ್ನವರ ಹೆಸರು ಹೇಳುವೆ
ಇರಲಿ ನಿಮ್ಮ ಆಶೀರ್ವಾದ.....

೧೪೦೫. ಬಸವಣ್ಣನವರು ಮಾಡಿದ್ದು ಲೋಕೋದ್ಧಾರ
ಗಾಂಧೀಜಿಯವರು ಮಾಡಿದ್ದು ಹರಿಜನೋದ್ಧಾರ
ನನ್ನ ಪತಿ .............ರು ಮಾಡಿದ್ದು ಊರ ಉದ್ಧಾರ.

೧೪೦೬. ಶ್ರೀಶೈಲ ಪಾವನ ಕ್ಷೇತ್ರದಲ್ಲಿ
ಇರುವವನು ಮಲ್ಲಿಕಾರ್ಜುನ
ನಮ್ಮ ..............ರು ಇದ್ದಲ್ಲಿಯೇ
ನನಗೆ ನಂದನವನ.

೧೪೦೭. ದಯವೇ ಧರ್ಮದ ಮೂಲ
ನೀತಿಯೇ ನಡೆತೆಯ ಮೂಲ
ಶೀಲವೇ ಶಾಂತಿಯ ಮೂಲ
ಸತ್ಯಶಾಂತಿ ಅಹಿಂಸೆಯೇ
ಎಲ್ಲ ಸುಖದ ಮೂಲ
ನನ್ನ .............ರನ್ನೇ ಸ್ಮರಿಸುವೆ ಅನುಗಾಲ.

೧೪೦೮. ಕುಲ ಜಾತಿ ಎನ್ನುವುದ ಕಲ್ಪಿತ ಕಂತೆ
ಭೂಮಿ ಜಲಕೆ ಕುಂದಿಲ್ಲ ಅದು ಸುಳ್ಳು ಸಂತೆ
ನಮ್ಮ ಬಾಯಿಗೆ ನನ್ನ ............ರೇ ಇದ್ದಾರೆ ಜೇನಿನಂತೆ.

೧೪೦೯. ತನು ಎಂಬ ಕಣಾ ಮಾಡಿ
ಗುಣ ಎಂಬ ತೆನೆಸುರುವಿ
ಸತ್ಯ ಎಂಬ ಎತ್ತು ಕಟ್ಟಿ
ಮಾಯೆ ಎಂಬ ಮದ ಮಾಡಿ
ವೈರಾಗ್ಯ ಎಂಬ ಮೆಟ್ಟು ಹಚ್ಚಿ
ಕೆಟ್ಟಗುಣ ಎಂಬ ಹೊಟ್ಟು ತೂರಿ
ಶಾಂತಿ ಎಂಬ ಸೆಳ್ಳು ಹೊಡೆದು
ಖಂಡಗ ರಾಶಿ ಎಳೆದು
ಮೇಟಿ ಸುತ್ತಿ ಬೂದನ ಪೂಜಿಸಿ
ಬಂಡಿ ಬಣ್ಣದಿ ಸಿಂಗಾರ ಮಾಡಿ
ಎತ್ತಿಗೆ ಬಂಗಾರ ಬಾಸಿಂಗ ಕಟ್ಟಿ
ಮುತ್ತಿನಂಥಾ ಮುಂಗಾರಿ ರಾಶಿ ತಂದು
ಮುಕ್ತಿ ಎಂಬ ಹಗೇಕ ಹಾಕತಾನ .....

೧೪೧೦. ಟಿವ್ಹಿ ಮೊಬಾಯಿಲ ಬಂದೈತಿ
ಇಂಟರ್‌ನೆಟ್ ಜಾಲಾ ಹಬ್ಬೈತಿ
ಜಗತ್ತೆಲ್ಲಾ ಸಣ್ಣದಾಗೈತಿ
ಚಂದ್ರಲೋಕ ಮಂಗಳಲೋಕ
ಎಲ್ಲಾ ಲೋಕಕೂ ದಾರಿ ತೆರದೈತಿ
ನನ್ನ ................ ರ ಅಬ್ಬರದಾಗ
ನನ್ನ ಹೆಡಕು ಮುರದೈತಿ.

೧೪೧೧. ಮುತ್ತುರತ್ನ ವೈಡೂರ್ಯ ತೂಗಿತು
ಹಂಪೆಯ ಕಲ್ಲಿನ ತುಲಾಭಾರ
ಕೃಷ್ಣದೇವರಾಯನ ಗುಡಿ ಕಂಬಗಳಲ್ಲಿ
ಸರಿಗಮ ಸಂಗೀತ ಸಾಕಾರ
ವಿಜಯನಗರ ಕಲ್ಲಿನ ರಥ ಎಳೆಯಿತು
ಎಲ್ಲೆಲ್ಲೂ ಜಯ ಜಯಕಾರ
ನನ್ನ ............ರೇ ನನಗೆ ಹೃದಯೇಶ್ವರ.

೧೪೧೨. ಬಾದಾಮಿ ರಾಜ್ಯವಾಳಿದವನು
ವೀರಸತ್ಯಾಶ್ರಯ ಪುಲಕೇಶಿ.
ಗೋಕರ್ಣಕ್ಕೆ ಅನ್ನುವರು
ದಕ್ಷಿಣದ ಕಾಶಿ
ನನ್ನ ಪತಿ ............ರಿಗೆ
ನಾನೇ ಚರಣದಾಸಿ.

೧೪೧೩. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ನವರಾತ್ರಿ
ನನ್ನ ಪತಿದೇವ ..... ರ ಸನ್ನಿಧಿಯೇ ನನಗೆ ಶಿವರಾತ್ರಿ.

೧೪೧೩. ಕಿತ್ತೂರು ಚೆನ್ನಮ್ಮನ ಶೌರ್ಯ
ಬೆಳವಡಿ ಮಲ್ಲಮ್ಮನ ಧೈರ್ಯ
ಒನಕಿ ಓಬವ್ವನ ಕ್ರೌರ್ಯ
ಝಾಂಸಿ ರಾಣಿಯ ಸ್ಥೈರ್ಯ
ನಮ್ಮ ........ ರಿಂದಲೇ ಮನೆತುಂಬ
ನಡೆಯುವವು ಮಂಗಲಕಾರ್ಯ.

೧೪೧೪. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು
ಮಹಾತ್ಮಗಾಂಧಿಯವರಿಂದ
ನಮ್ಮ ಮನೆತನದ ಕೀರ್ತಿ ಬೆಳಗಿತು
ನನ್ನ .............. ರಿಂದ.

೧೪೧೫. ಗಾಂಧೀಜಿ ಮಾಡಿದ್ದು ಉಪ್ಪಿನ ಸತ್ಯಾಗ್ರಹ
ನಾನು ..............ರಿಗೆ ಮಾಡುವೆನು
ಕುಡಿಯುವ ಸೆರೆ ಬಿಡಲು ಆಗ್ರಹ.

೧೪೧೬. ಗಾಂಧೀಜಿ ಅವರು ಬೋಧಿಸಿದ್ದು ಶಾಂತಿ
ಶೂರ ಸುಭಾಸ್‌ಚಂದ್ರನು ಮಾಡಿದ್ದು ಕ್ರಾಂತಿ
ನನ್ನ ............ರಿಗೆ ಸತತ ನನ್ನದೇ ಭ್ರಾಂತಿ.

೧೪೧೭. ವಲ್ಲಭಭಾಯಿ ಪಟೇಲರಿಗೆ ಅನ್ನುವರು
ಉಕ್ಕಿನ ಮನುಷ್ಯ
ನನ್ನ ........... ರಿಗೆ ಮುಡುಪಿಟ್ಟಿರುವೆ
ನನ್ನ ಆಯುಷ್ಯ.

೧೪೧೮. ಪರದೇಶದಲ್ಲಿ ಭಾರತ ಧರ್ಮದ
ಪತಾಕೆಯನ್ನು ಮೆರೆದರು ವಿವೇಕಾನಂದ
ನನ್ನ .................. ರ ಹೆಸರು ಹೇಳುವುದೇ ಪರಮಾನಂದ.

೧೪೧೯. ಚಿಕ್ಯಾಗೋದಲ್ಲಿ ವಿವೇಕಾನಂದರು ತಿಳಿಸಿದ್ದು
ಹಿಂದೂ ಧರ್ಮದ ತಿರುಳು
................ರೇ ನನ್ನ
ಮಾಂಗಲ್ಯದ ವಜ್ರದ ಹರಳು.

೧೪೨೦. ಬೇಡಾಕ ಬಂದಾರ ಬೆಂಗಳೂರು ದೊರೆ
ಮಾತ ಕೊಟ್ಟಾರ ಮೈಸೂರ ದೊರೆ
ಹಣ ಇಟ್ಟಾರ ಹಾನಗಲ್ಲ ದೊರೆ
ನನಗ ಮಂಗಳಸೂತ್ರ ಕಟ್ಟ್ಯಾರ ನನ್ನ ದೊರೆ ....

೧೪೨೧. ಮಹಾರಾಣಿ ಚೆನ್ನಮ್ಮ ಆಳಿದ್ದು ಕಿತ್ತೂರು
ತೋಟದ ಊರು ಚೆಂದ ಹತ್ತಿ ಮತ್ತೂರು
ಹುಬ್ಬಳ್ಳಿ–ಧಾರವಾಡ ನಡುವೆ ಇರೂದು ಸತ್ತೂರು
ನಾನು ನನ್ನ ............ರಿಗೆ ಹಚ್ಚುವೆ ಸುಗಂಧದಾ ಅತ್ತರು.

೧೪೨೨. ಒನಕೆ ಓಬವ್ವ ಮಾಡಿದಳು
ಚಿತ್ರದುರ್ಗದ ಸೇವೆ
ಗಾಂಧೀಜಿಯವರು ಮಾಡಿದರು
ದಲಿತ ಬಡವರ ಸೇವೆ
ನಾ ಮಾಡುವೆ ............ರ ಪಾದಸೇವೆ.

೧೪೨೩. ಮಹಮ್ಮದ ಪೈಗಂಬರರ ಮಾತು
ಹೊಟ್ಟ್ಯಾನ ಹಳ್ಳೂ ಕರಗುವಂತೆ
ನನ್ನ .............. ರ ಮಾತು
ಕವಣಿ ಕಲ್ಲಿನಂತೆ.

೧೪೨೪. ಕಿತ್ತೂರು ಚೆನ್ನಮ್ಮ ಥ್ಯಾಕರೆಯ ಕೂಡ
ಯುದ್ಧ ಮಾಡಿದ್ದು ಸ್ವಾಭಿಮಾನಕ್ಕಾಗಿ
ನಾನು ............ರ ಹೆಸರ ಹೇಳುವೆನು
ನಿಮ್ಮೆಲ್ಲರ ಪ್ರೇಮಕ್ಕಾಗಿ.

೧೪೨೫. ಕಿತ್ತೂರ ಕಾಳಗದಲ್ಲಿ
ಥ್ಯಾಕರೆಯ ರುಂಡ ಚೆಂಡಾಡಿದವನು
ವೀರಲಯೋಧ ಅಮಟೂರ ಬಾಳಪ್ಪ
ಅವನಿಗೆ ಶಕ್ತಿಯಾಗಿದ್ದವನು ಸಂಗೊಳ್ಳಿ ರಾಯಪ್ಪ
ನನ್ನ ..... ರ ಪ್ರೀತಿ ಸಾಗರದಲ್ಲಿ
ಆಗಲಿಲ್ಲ ತವರಮನಿ ನೆಪ್ಪ.

೧೪೨೬. ಹೈದ್ರಾಬಾದ ಕ್ರಾಂತಿ ಆದದ್ದು
ಹತ್ತೊಂಬತ್ತನೂರಾ ನಾಲ್ವತ್ತೆಂಟು
ನನ್ನ ಯಜಮಾನ .....ರು ತೆಗೆದ
ತಂಟೆ ನೂರಾ ಎಂಟು.

೧೪೨೭. ರಾಜೇಂದ್ರಪ್ರಸಾದ ಅವರು ಆಗಿದ್ದರು
ಭಾರತದ ಪ್ರಥಮ ರಾಷ್ಟ್ರಪತಿ
ಲಗ್ನವಾದ ಮೇಲೆ ನನ್ನವರು ನಡಿಸ್ಯಾರ
ಖಾಲಿ ಕಿತಾಪತಿ .....

೧೪೨೮. ಗಾಂಧೀಜಿ ಉಟ್ಟಿದ್ದು ಮೂರು ಮೊಳದ ಪಂಚೆ
ನಾನು .............ರ ಹೆಸರು ಹೇಳುವೆ ಈ ಮೂರು ಸಂಜೆ.

೧೪೨೯. ಕನ್ನಡ ಭಾಷೆಗೆ ಮಾಡಬೇಡಿರಿ ತಿರಸ್ಕಾರ
ನನ್ನ ................ರು ಬೇಕಾಬಿಟ್ಟಿ ಬೈಯುದಕ
ಓಣ್ಯಾನ ಗೆಳತಿಯರೇ ಆಧಾರ.

೧೪೩೦. ಕನ್ನಡ ನಾಡಿಗೆ ಅನ್ನುವರು ಸಿರಿನಾಡು
ಕವಿಗಳು ಹೊಗಳುವರು ಸಿರಿಗಂಧದಾ ಬೀಡು
ನನ್ನ .............. ಗಂಡ ಸಹ್ಯಾದ್ರಿ ಕಾಡು.

೧೪೩೧. ಜೋಗದ ಜಲಪಾತ ಜಗತ್ತಿಗೇ ಚೆಂದ
ಮೈಸೂರು ದಸರಾ ಲೋಕಕ ಚೆಂದ
ಮುಂಬೈ ಬೆಂಗಳೂರು ನೋಡಲು ಚೆಂದ
...............ರಿಗೆ ನನ್ನ ನಡೆನುಡಿ ಚೆಂದ.

೧೪೩೨. ಲೋಕಕ್ಕೆ ಬೆಳಕು ನೀಡುವವನು ರವಿ
ಕವನ ಬರೆಯುವವನು ಕವಿ
ನನ್ನ ...............ರ ಹೆಸರು ಹೇಳುವೆನದು
ನೊರೆ ಬೆಲ್ಲಕ್ಕಿಂತ ಸವಿ.

೧೪೩೩. ಚಹಕ್ಕೆ ಬೇಕು ಸಕ್ಕರೆ ಪುಡಿ
ಮುಖ ನೋಡಲು ಬೇಕು ಕನ್ನಡಿ
ಕರ್ನಾಟಕದ ಮನೆಮಾತು ಕನ್ನಡನುಡಿ
..................ರಿಗೆ ನಾನೇ ಸರಿಯಾದ ಜೋಡಿ.

೧೪೩೪. ಕನ್ನಡದ ಆದಿ ಕವಿ ಪಂಪ
ಹೂದೋಟದಲ್ಲಿ ಹರಡಿದೆ ಹೂವಿನ ಕಂಪ
ಮಕ್ಕಳಿದ್ದರೆ ಸಾಕು ಮನೆತುಂಬ ರಂಫ
.............ರಿಗೆ ಎದುರಾಡಿದರೆ ಮಾಡ್ತಾರ ಕಣ್ಣ್ ಕೆಂಪ.

೧೪೩೫. ಕನ್ನಡದ ಕಡುಗಲಿ ಎಚ್.ಎಂ. ನಾಯಕ
ವೈರಿಗಳ ಚೆಂಡಾಡುವುದೇ ಅವನ ಕಾಯಕ
ನನ್ನ ................ ರೇ ನನ್ನ ಪ್ರಾಣ ರಕ್ಷಕ.

೧೪೩೬. ಕನ್ನಡದ ಮಹಾಕವಿ ಕುವೆಂಪು
ಅವರು ಬರೆದರು ಕವನ ಪಕ್ಷಿಕಾಶಿ
ನನ್ನ ..................ರಿಂದಲೇ ನಮ್ಮನೆ ಆಗಿದೆ ಕಾಶಿ.

೧೪೩೭. ಕನ್ನಡದ ಕವಿ ಕುವೆಂಪು
ಬೇಸಗೆಯಲ್ಲಿ ಬೇವಿನ ಗಿಡ ತಂಪು
ಹುಣ್ಣಿಮೆ ಬೆಳದಿಂಗಳ ಬಲು ಸಂಪು
ನನ್ನ ..... ರು ಸುಮ್ಮನೇ ಮಾಡ್ತಾರೆ
ಮನೆಯಲ್ಲಿ ರಂಪು.

೧೪೩೮. ಸಖೀಗೀತ ಬರೆದರು ಅಂಬಿಕಾತನಯದತ್ತ
ನನ್ನ ................ರು ಅತ್ತಿ ಚಾಡಿ ಕೇಳಿ ತರ್ತಾರ ನನಗ ಕುತ್ತ.

೧೪೩೯. ಮೇಘದೂತ ಕಾಳಿದಾಸನ ಕಾವ್ಯ
....................ರಿಗೆ ಹಚ್ಚುವೆ ಸುಗಂಧದ್ರವ್ಯ.

೧೪೪೦. ನಾದಲೋಲ ಲಕ್ಷ್ಮೀಶ ಬರೆದದ್ದು ಜೈಮಿನಭಾರತ
ನನ್ನ ...............ರು ಮಾಡ್ತಾರೆ ದಿನನಿತ್ಯ ಮಹಾಭಾರತ.

೧೪೪೧. ಕುರುಂ ಕುರುಂ ಸವತಿಮಿಡಿ
ಕುದುರಿಗಿ ಹಾಕ್ಯಾರ ಕುತನಿ ತಡಿ
ನನಗ ಹಾಕ್ಯಾರ ಬಂಗಾರಕಡಿ
ಅಗಸ್ಯಾಗ ಬರತಾನ ಕೂನಾ ಹಿಡಿ .....

೧೪೪೨. ತಾಮ್ರದ ತಗಡಿನ್ಯಾಗಿರುವುದು
ತಂದಿ ತಾಯಿಯ ಹೆಸರು
ಸೀರೆಯ ಸೆರಗಿನಲ್ಲಿರುವುದು
ಅತ್ತಿಮಾವರ ಹೆಸರು
ಮಾಂಗಲ್ಯದ ಸೂತ್ರದಲ್ಲಿರುವುದು
ನನ್ನ .................. ವರ ಹೆಸರು.

೧೪೪೩. ಅತ್ತಿ ಮಾವಂದಿರು ಸತಿಪತಿ
ಸಣ್ಣ ಮೈದುನ ಗಣಪತಿ
ನಾನು ................ರು ಶಿವ ಪಾರ್ವತಿ.

೧೪೪೪. ತಂತಿ ಮ್ಯಾಲ ತಂತಿ ಅಥಣಿ ಸಂತಿ
ಸಂತಿ ಮಾಡೂದಂದ್ರ .......ರಿಗೆ ಬಾಳ ಚಿಂತಿ.

೧೪೪೫. ಆಲದ ಎಲಿ ಮ್ಯಾಲ
ಕೃಷ್ಣ ಕೊಳಲೂದುವುದು ಚಮತ್ಕಾರ
ನಮ್ಮ ರಾಯರ ಹೆಸರು ಹೇಳ್ತೀನಿ .....
ಎಲ್ಲರಿಗೂ ನಮಸ್ಕಾರ.

೧೪೪೬. ಕಟ್ಟಿಮ್ಯಾಲ ಸುಲಗಾಯಿ ಸೊಟ್ಟಿ
ನಮ್ಮಾತ ............. ಬಲು ಬಾಳಗಟ್ಟಿ.

೧೪೪೭. ಮಲ್ಲಾಡದ ಪತ್ರಿ
ಮರನೂರ ಜಾಜಿಕಾಯಿ
ಹುಕ್ಕೇರಿ ಸುಣ್ಣ, ಎಲಿವಾಳ ಎಲಿ
ಎಲಿ ಅಡಿಕಿ ತಿಂದು
ಎಲ್ಲಮ್ಮಗ ಉಧೋ ಉಧೋ ಅಂತಾರ .....

೧೪೪೮. ಹಲ್ಲ ಯಾಲಕ್ಕಿ, ತುಟಿ ತೊಂಡಿ ಹಣ್ಣು
ನಕ್ಕೊಂತ ನನಗೂಡ ಚಕ್ಕಂದ ಆಡ್ತಾರ .....

೧೪೪೯. ಹತ್ತು ಬಳ್ಳಾಗು ಹತ್ತು ಉಂಗುರ
ನಡುವಿನ ಬಳ್ಳಾಗ ಸುತ್ತುಂಗುರ
ಹತ್ತ ಮಂದ್ಯಾಗ ಕುಂತ
ಹೌದು ಅನಿಸಿಗೊಂತಾರ .....

೧೪೫೦. ಸೈನ ಅಂಗಿ ಮಸ್ರಾಯ ಧೋತರ
ಭಕ್ತಿಲಿಂದ ಬಸ್ತಿಗೆ ಹೋಗ್ತಾರ .....

೧೪೫೧. ನನ್ನ ಚಿತ್ತ ಕಿತ್ತೂರಾಗ
ನನ್ನ .....................ರ ಚಿತ್ತ ನನ್ನಮ್ಯಾಗ.

೧೪೫೨. ಪದ್ಮಾವತಿ ಮೂಗಿನ್ಯಾಗಿರುವುದು
ವಜ್ರದ ನತ್ತು
ನಮ್ಮ ರಾಯರ ಒಳ ಸಂಚು
ನನಗೆಲ್ಲಾ ಗೊತ್ತು .....

೧೪೫೩. ಭಾರತದವರಿಗೆ ಹುಚ್ಚು
ಕ್ರಿಕೆಟ್ ಮ್ಯಾಚು
ನನ್ನ ............ ರಾಯರು ಹಟಮಾಡಿ
ಕಟ್ಟ್ಯಾರ ದುಬಾರಿ ವಾಚು.

೧೪೫೪. ಲಕ್ಷ್ಮೀಶ ಬರೆದದ್ದು ಜೈಮಿನಿ ಭಾರತ
ಆನಿಗಳ ಪಳಗಿಸುವವನು ಮಾವುತ
ನನ್ನ ................ರ ಪ್ರೀತಿ ಗಳಿಸುವೆ ಅನವರತ.

೧೪೫೫. ಪಂಪ ಬರೆದದ್ದು ಹಳಗನ್ನಡ ಕಾವ್ಯ
ನಾನು ................ರಿಗೆ ಹಚ್ಚುವೆ ಸುಗಂಧ ದ್ರವ್ಯ.

೧೪೫೬. ಕನಕದಾಸ ಬರೆದದ್ದು ಮೋಹನ ತರಂಗಿಣಿ
ನನ್ನ ................ರ ಪ್ರೀತಿಗಣ್ಣಲ್ಲಿ ನಾ ಅರಗಿಣಿ.

೧೪೫೭. ಸಾಧನ ಕೇರಿಯ ಕವಿ ಅಂಬಿಕಾತನಯದತ್ತ
ನನ್ನ ................ರ ಹೆಸರ ಹೇಳುವೆ ಇರಲಿ ನಿಮ್ಮ ಚಿತ್ತ.

೧೪೫೮. ನವಂಬರ ಒಂದು ರಾಜ್ಯೋತ್ಸವದ ಸುದಿನ
ಅದೇ ದಿನ ನಾನು ................ರ ಮದುವೆಯ ಉತ್ಸವದ ದಿನ.

೧೪೫೯. ದಾಸರಲ್ಲಿ ಶ್ರೇಷ್ಠರಾದವರು ಪುರಂದರದಾಸರು
ಆದಿ ಕೇಶವನನ್ನು ಭಕ್ತಿಯಿಂದ ನೆನೆದರು ಕನಕದಾಸರು
ಅತ್ತಿಮಾವರ ಕಾಟಕ್ಕೆ ನನಗಿಲ್ಲ ಎಷ್ಟೊ ಬೇಸರು
ತಂಪತ್ತಿನಲ್ಲಿ ನೆನವೆ ನನ್ನ ಭಾಗ್ಯದ ಹೆಸರು ......

೧೪೬೦. ರನ್ನ ಕವಿ ಹುಟ್ಟಿದ್ದು ಮುಧೋಳದಲ್ಲಿ
ನನ್ನ ................ರು ನನ್ನನ್ನು ನೋಡಿದ್ದು ನಲವಡಿಯಲ್ಲಿ.

೧೪೬೧. ಬಸವಣ್ಣನವರು ಹುಟ್ಟಿದ್ದು ಬಾಗೇವಾಡಿಯಲ್ಲಿ
ಬೆಳೆದು ದೊಡ್ಡವರಾದದ್ದು ಕಲ್ಯಾಣದಲ್ಲಿ
ಕೊನೆಗೆ ಐಕ್ಯರಾದದ್ದು ಕೂಡಲಸಂಗಮದಲ್ಲಿ
ನಾನು ..............ರ ಹೆಸರು ಭಕ್ತಿಯಿಂದ ಹೇಳುವೆನು
ಗುರು ಹಿರಿಯರ ಸಮ್ಮುಖದಲ್ಲಿ.

೧೪೬೨. ಶಿವಶರಣರನ್ನು ಪೂಜಿಸುವುದು ಭಕ್ತಿಗಾಗಿ
ನಾನು ...............ರನ್ನು ಪೂಜಿಸುವೆ ಮಾಂಗಲ್ಯಕ್ಕಾಗಿ.

೧೪೬೩. ಹಾಲುಮತದವರಿಗೆ ಬೀರಪ್ಪದೇವರು
ಲಿಂಗಾಯತರಿಗೆ ಬಸವಣ್ಣದೇವರು
ಜೈನ ಮತದವರಿಗೆ ಮಹಾವೀರ ದೇವರು
ವೈದಿಕರಿಗೆ ರಾಮಕೃಷ್ಣ ದೇವರು
ನನಗೆ ನನ್ನ ಪತಿಯೇ ದೇವರು ....

೧೪೬೪. ಮಹಾ ಶಿವಶರಣರೆಲ್ಲ ಕೂಡಿದರು
ಅನುಭಾವ ಮಂಟಪದಲ್ಲಿ
ನಾನು ನಮ್ಮ ..................ರ ಮದುವೆ ಆಗಿದ್ದು
ಅರಭಾವಿ ಕಲ್ಯಾಣ ಮಂಟಪದಲ್ಲಿ.

೧೪೬೫. ಅಕ್ಕಮಹಾದೇವಿ ಪಡೆದದ್ದು ಮುಕ್ತಿ
ಸಾವಿತ್ರಿ ಮಾಡಿದ್ದು ಪತಿಭಕ್ತಿ
ನನ್ನ .............. ರಾಯರಿಗೆ ಆಧ್ಯಾತ್ಮದಲ್ಲಿ ಆಸಕ್ತಿ.

೧೪೬೬. ಅಕ್ಕಮಹಾದೇವಿಯನ್ನು ಪರಿಪರಿಯಾಗಿ
ಕಾಡಿದವನು ಕೌಸಿಕ
ನನ್ನ .................ರು ಇದ್ದಾರೆ
ಸ್ವಭಾವತಹ ರಸಿಕಾ.

೧೪೬೭. ರಾಮಾಯಣ ಬರೆಯಲು ವಾಲ್ಮೀಕಿಗೆ ಬಂದದ್ದು
ಎರಡು ಹಕ್ಕಿಗಳಿಂದ ಸ್ಫೂರ್ತಿ
ನನ್ನ .............ರೇ ನನಗೆ ಹೃದಯದ ಮೂರ್ತಿ.

೧೪೬೮. ಯೋಗಭೋಗ ಸಮನ್ವಯ ಸಾಧಿಸಿದವನು
ಭರತ ಚಕ್ರವರ್ತಿ
ದಾನಶೂರಕರ್ಣನ ರಥದ ಗಾಲಿ ನುಂಗಿದವಳು
ಈ ಧರಿತ್ರಿ
ನನ್ನ ................ರಿಗೆ ನಾನೇ ಸತಿ ಸಾವಿತ್ರಿ.

೧೪೬೯. ಮೂರ್ಖನಿಗೆ ಎಷ್ಟು ಬುದ್ಧಿ ಹೇಳಿದರೂ
ಭೋರ್ಗಲ್ಲ ಮೇಲೆ ಮಳೆ ಸುರಿದಂತೆ
ನಮ್ಮ .............ರಿಗೆ ಎಷ್ಟು ಹೇಳಿದರೂ
ಕೋಣನ ಮುಂದೆ ಕಿನ್ನೂರಿ ಬಾರಿಸಿದಂತೆ.

೧೪೭೦. ಬ್ರಹ್ಮನ ಮಡದಿ ಸರಸ್ವತಿ
ಹರಿಶ್ಚಂದ್ರನ ಮಡದಿ ಚಂದ್ರಮತಿ
ಉರಿಗಣ್ಣ ಶಿವನ ಮಡದಿ ಪಾರ್ವತಿ
ನಾನು ಸತತ ಮಾಡುವೆ ................ರ ಸ್ತುತಿ.

೧೪೭೧. ವಿಘ್ನನಿವಾರಕ ಗಣಪತಿ
ವೀಣಾಪಾಣಿ ಸರಸ್ವತಿ
ಕೈಲಾಸದೊಡೆಯ ಉಮಾಪತಿ
ನನಗೆ ................ರೇ ಅಧಿಪತಿ.

೧೪೭೨. ಕೃಷ್ಣ ತಂದ ಪಾರಿಜಾತ ಹೂವು ತಂದಿತು
ಇಬ್ಬರು ಹೆಂಡಿರಲ್ಲಿ ಕದನ
ಲೋಕೋದ್ಧಾರಕ್ಕಾಗಿ ಶಿವನಿಂದ ಬೂದಿಯಾದ
ಅತಿ ಸುಂದರನಾದ ಮದನ
ನನ್ನ ಪ್ರಿಯಕರನೇ ನನ್ನ ಸೌಭಾಗ್ಯದ ಸದನ ......

೧೪೭೩. ಮಹಾಲಕ್ಷ್ಮಿಯ ಸ್ಥಾನ ಕಮಲದಲ್ಲಿ
ನನ್ನ ...............ರ ಏನಾದರೂ ಕೊಡುವುದು ಏಕಾಂತದಲ್ಲಿ.

೧೪೭೪. ಸರೋವರದಲ್ಲಿ ಶಂಕರನು ಶಿಶುವಾಗಿ ಬೆಳೆದದ್ದು
ಪಾರ್ವತಿಯ ಸಲುವಾಗಿ
ನನ್ನ ತವರು ಮನೆಯಲ್ಲಿ ಕನ್ಯಾಮಣಿಯಾಗಿ ಬೆಳದದ್ದು
................ರ ಸಲುವಾಗಿ.

೧೪೭೫. ಕೃಷ್ಣನು ತಂದ ಪಾರಿಜಾತಕ್ಕಾಗಿ ಜಗಳಾಡಿದರು
ಸತ್ಯಭಾಮಾ ರುಕ್ಮಿಣಿ
ನನ್ನತ್ತೆ ಮಾವಂದಿರ ಹೊಟ್ಟೆಯಲ್ಲಿ ಹುಟ್ಟಿದ್ದಾರೆ
ಮುತ್ತು ಬಂಗಾರದ ಖಣಿ ............

೧೪೭೬. ರಾಮಚಂದ್ರನೊಡನೆ ಲಕ್ಷ್ಮಣನು
ಕಾಮ್ಯಕ ವನಕ್ಕೆ ಹೋದಾಗ
ಲಕ್ಷ್ಮಣನ ಅರ್ಧಾಂಗಿ ಊರ್ಮಿಳೆಯ
ವಿರಹದುರಿಯಿಂದ ಎದ್ದಿತು ಕಟ್ಟಿಗೆಯ ಜ್ವಾಲೆ
ಲಗ್ನವಾಗಿ ಮೊಮ್ಮಕ್ಕಳಾದರೂ ತಿಳಿದಿಲ್ಲ ............ರ ನೀರಿನ ನೆಲೆ.

೧೪೭೭. ಕಮಲ ಇರುವುದು ಸರೋವರದಲ್ಲಿ
ಲಕ್ಷ್ಮಿ ಇರುವುದು ಕಮಲದಲ್ಲಿ
ನನ್ನ ............ ಪತಿ ರಾಯರಿರುವುದು ಅರಮನೆಯಲ್ಲಿ.

೧೪೭೮. ಶ್ರೀಕೃಷ್ಣನಿಗೆ ಸತಿಯರಿದ್ದರು
ಹದಿನಾರು ಸಾವಿರ
ನನ್ನ .............ರು ವರದಕ್ಷಿಣೆ ಕೇಳಿದರು
ಹದಿನಾರು ಬಿಸ್ಕೆಟ್ ಬಂಗಾರ.

೧೪೭೯. ವಿದ್ಯೆಗಾಗಿ ಮಾಡುವೆ ಸರಸ್ವತಿ ಪೂಜೆ
ಸಂಪತ್ತಿಗಾಗಿ ಮಾಡುವೆ ಲಕ್ಷ್ಮೀಪೂಜೆ
ಕುಟುಂಬ ಸುಖಕ್ಕಾಗಿ ಮಾಡುವೆ ಸತ್ಯನಾರಾಯಣ ಪೂಜೆ
ನನ್ನ ಮುತ್ತೈದಿತನಕ್ಕಾಗಿ ಮಾಡುವೆ ನಮ್ಮ .....ರ ದೇವರ ಪೂಜೆ.

೧೪೮೦. ಪರ್ವತ ರಾಜನ ಮಗಳು ಪಾರ್ವತಿ
ನನ್ನವರಿಗೆ ಆಗಿರುವೆ ನಾ ಪ್ರೀತಿಯ ಸತಿ .....

೧೪೮೧. ಪರಶಿವನೇ ಪತಿಯಾಗಬೇಕೆಂದು
ಪಾರ್ವತಿ ತಪಸ್ಸು ಮಾಡಿದಳು ಶಿವನಾಮ ಭಜಿಸಿ
ನನ್ನ ...... ರನ್ನು ಪೂಜಿಸುವೆ ಸದಾ ಸ್ಮರಿಸಿ.

೧೪೮೨. ಶಿವನು ತನ್ನ ಜೊತೆಯಲ್ಲಿ ಇಟ್ಟುಕೊಂಡದ್ದು ಗಂಗಾ
ಅದನು ನೋಡಿದ ಪಾರ್ವತಿಯಿಗಾಯಿತು ಮಾನಭಂಗಾ
ನನ್ನ ಬಿಟ್ಟು ನನ್ನ .............ರು ಹಿಡಿದಿದ್ದಾರೆ ವರನಾರಿ ಸಂಗಾ.

೧೪೮೩. ಶಿವನ ಜೆಡಿಯಲ್ಲಿ ಸ್ಥಿರವಾಗಿ ನಿಂತವಳು ಗಂಗಿ
ನಾನು ....... ರ ಹೆಸರು ಹೇಳುವೆ ಬಸರಾಜನ ತಂಗಿ.

೧೪೮೪. ಶಿವನಿಗೆ ಅನ್ನುವರು ಚಂದ್ರಶೇಖರ
ಶಂಕರನಿಗೆ ಅನ್ನುವರು ಇಂದುಶೇಖರ
ನನ್ನ .............ರಿಗೆ ನಾನು ಅನ್ನುವೆ ಕುಲಶೇಖರ.

೧೪೮೫. ಸೃಷ್ಟಿ ಸ್ಥಿತಿ ಲಯಕ್ಕೆ ಕಾರಣರಾದವರು
ಬ್ರಹ್ಮ ವಿಷ್ಣು ಮಹೇಶ್ವರ
ನನ್ನೆಲ್ಲ ಸುಖಕ್ಕೆ ಕಾರಣರಾದವರು
ನನ್ನ ಹೃದಯೇಶ್ವರ ......

೧೪೮೬. ಶಿವನು ಇರುವುದು ಕೈಲಾಸದಲ್ಲಿ
ಶ್ರೀರಾಮ ಇರುವುದು ಹನುಮಂತನ ಎದೆಯಲ್ಲಿ
ನಾನು ಇರುವುದು ...............ರ ಪಾದ ಕಮಲದಲ್ಲಿ.

೧೪೮೭. ದೇವತೆಗಳ ಸಮುದ್ರ ಮಂಥನದಿಂದ ಬಂದದ್ದು
ಕಾಳಕೂಟವಿಷ
ಅದನ್ನು ಕುಡಿದ ಶಿವನಿಗನ್ನುವರು ವಿಷಕಂಠ
ನಾನು ನಂಬಿರುವೆ ............ರೆ ಕೆಲಸಗಾರ ಬಂಟ.

೧೪೮೮. ದುಷ್ಟತನದಿಂದ ಹಾಳಾದವನು
ಜರ್ಮನಿಯ ಹಿಟ್ಲರ
ಅಸಹಾಯಕರ ರಕ್ತ ಹೀರಿ ಹಾಳಾದವನು
ಇರಾಕಿಯ ಸದ್ದಾಂಹುಸೇನ
ನನ್ನವರು ಕುಳಿತುಕೊಳ್ಳುವುದು ರತ್ನದ ಸಿಂಹಾಸನ .....

೧೪೮೯. ಜೇನುತುಪ್ಪ ಇರುವುದು ಹುಟ್ಟಿನಲ್ಲಿ
ನಮ್ಮ ..............ರು ಇರುವುದು ತಮ್ಮಗತ್ತಿನಲ್ಲಿ.

೧೪೯೦. ನಾ ನೀಡಿದರ ಸುಮ್ನ ಉಣತಾರ
ನನ್ನ ತಂಗಿ ಇದ್ರ ಆಕೇ ನೀಡ್ಲಿ ಅಂತಾರ .......

೧೪೯೧. ಇಂಗಳಮ್ಯಾಣಾ ಕಾಮಣೀಗೆ ಒಳ್ಳೇದು
ನಮ್ಮ ..............ರ ತ್ಯಾಗಗುಣ ಊರಿಗೆ ಒಳ್ಳೇದು.

೧೪೯೨. ಅಜನೂರ ಅಡಿಕಿ
ಬಿಜನೂರ ಸುಣ್ಣ
ಮಂಗಸೂಳಿ ಬಾಜಿಕಾಯಿ
ಮಲ್ಲಾಡದ ಪಲ್ಲೆ
ಅಕ್ಕಿ ತರವಲ್ಲ
ಗೋದಿ ಉಣವಲ್ಲ
ಮನ್ಯಾಗ ಇರವಲ್ಲ
ಮಾತ ಕೇಳವಲ್ಲ
ಸೂಳ್ಯಾರ ಕೂಡ ಸುಳಿದಾಡತಾನ .....

೧೪೯೩. ಅಂಗಕ್ಕೆ ಲಿಂಗ ಶ್ರೇಷ್ಠ ಅಂತಾರ
ಲಿಂಗಕ್ಕೆ ಜಂಗಮ ಶ್ರೇಷ್ಠ ಅಂತಾರ
................ರಿಗೆ ನಾನೇ ಶ್ರೇಷ್ಠ ಅಂತಾರ
ಊರ ಹಿರಿಯರು.

೧೪೯೪. ಯಾಲಕ್ಕಿ ನೂರು ಅನ್ನಾ ಸಾರು
.............ರನ್ನ ಸಂಬಾಳಿಸೂದು ಬಾಳಾ ಗೂರು.

೧೪೯೫. ಹಾವು ಹರಿಯುವುದು ಸಳಾ ಸಳಾ
ಕೃಷ್ಣ ಚಕ್ರ ಹೊಳೆಯುವುದು ಥಳಾ ಥಳಾ
ನಾನು ................ರ ಹೆಸರ ಹೇಳ್ತೀನಿ ಜಳಾ ಜಳಾ.

೧೪೯೬. ಗುಲಾಬಿ ಹೂ ಗಾಂಧಿ ಟೋಪ್ಯಾಗ ಇಟಗೊಂಡು
ಪರಿನಾರಿ ಮನಿಗೆ ಹರದಾಡಿ ಹೋಗ್ತಾರ......

೧೪೯೭. ಅರಗಿನ ಕೊಡ ಸೆರಗಿನ ಸಿಂಬಿ
ಸಿರಿವಂತರ ಮಗಳು ಸೀತಾದೇವಿ
ದಾರಿ ಬಿಡಂದ್ರ ಮಾರಿ ನೋಡ್ತಾರ.....

೧೪೯೮. ತುಂಬಿ ಹರಿಯೂ ಹೊಳಿ
ಕೈತುಂಬಾ ಬಂಗಾರ ಬಳಿ
ನಮ್ಮ .............ರ ಕೈಯಾಗ ನಾ ಅರಗಿಳಿ.

೧೪೯೯. ಅಂಗೈಯಾಗ ಅರಗಿಳಿ
ಮುಂಗೈಯಾಗ ಮೂರು ಗಿಳಿ
ಪಂಜರದಾಗ ಕುಂತಗೊಂಡ
ಪಂಚೇತಿ ಮಾಡ್ತಾರ .....

೧೫೦೦. ಅಲ್ಲಿ ನೋಡಾ ಆ ಥಳಕ
ಇಲ್ಲಿ ನೋಡಾ ಈ ಥಳಕ
ಎಲ್ಲಾ ಕಡೆಗೂ ಲಕಲಕ
............ರ ಕೈಯಾಗ್ಯೆತಿ ನಂದೆಲ್ಲಾ ಸುಖ.

೧೫೦೧. ಅತ್ತಿ ಮಾವಾ ಗಳಿಸ್ಯಾರ ಹೊನ್ನರಾಶಿ
.............ರು ಗಳಿಸ್ಯಾರ ಮುತ್ತಿನ ರಾಶಿ.

೧೫೦೨. ಅಂಜನಾದೇವಿ ಮಗ ಹನುಮಂತ
ಎಷ್ಟು ವರದಕ್ಷಿಣಿ ಕೊಟ್ರೂ
............ರು ಆಗಲಿಲ್ಲ ಸನುಮಂತ.

೧೫೦೩. ಅಕ್ಕಮಹಾದೇವಿ ಶ್ರೀಶೈಲಕ್ಕೆ ಹೋದದ್ದು
ಕಾಮಿ ಕೌಸಿಕನ ಕಾಟಕ್ಕಾಗಿ
ನಾನು ............ರ ಹೆಸರು ಹೇಳುವೆನು
ನಿಮ್ಮೆಲ್ಲರ ಒತ್ತಾಯಕ್ಕಾಗಿ.

೧೫೦೪. ಅಣ್ಣಂದು ಅಡಿಕಿ ಬಾಗಿಲ
ತಮ್ಮಂದು ಕಿಡಿಕಿ ಬಾಗಿಲ
ಅಪ್ಪಂದು ಬಂಗಾರ ಬಾಗಿಲ
ಬಂಗಾರ ಬಾಗಿಲದಾಗ ಕುಂತು
ಸಿಂಗಾರ ಮಾಡಿಕೊಂತಾರ .....

೧೫೦೫. ಅಕ್ಕಿ ಬಲು ಸಣ್ಣ
ಅನ್ನ ಬಲು ಉದುರ
ಕಣ್ಣಿಗೆ ಚದುರ ಬಾಳಿ ಪದರ
...............ರನ್ನ ಕಂಡ್ರ ಬಾಲ್ಯಾರಿಂದ ನೆದರ.

೧೫೦೬. ಅರ್ಜುನನ ಹೆಂಡತಿ ಪ್ರಮೀಳಾ
ಲಕ್ಷ್ಮಣನ ಹೆಂಡತಿ ಊರ್ಮಿಳಾ
..................ರಿಗೆ ನಾ ದಿನಾ ಹಚ್ಚೂದು ಪರಿಮಳಾ.

೧೫೦೭. ಪಾಶುಪತಾಸ್ತ್ರ ಪಡೆದವನು ಅರ್ಜುನ
.............ರು ಭಕ್ತಿಯಿಂದ ನೆನೆಯುವುದು
ಶ್ರೀಶೈಲ ಮಲ್ಲಿಕಾರ್ಜುನ.

೧೫೦೮. ಅರಳಿದ ಮಲ್ಲಿಗೆ ಹೆರಳಿಗೆ ಚೆಂದ
ಹರಳಿನ ಉಂಗುರ ಬೆರಳಿಗೆ ಚೆಂದ
...................ರ ಚಿಗುರಿನ ಮೀಸೆ ನೋಡೋರಿಗೆ ಚೆಂದ.

೧೫೦೯. ಅಂಕಣದಾಗ ಅಂಕಣ
ತಂಗಿ ಕೈಯಾಗ ಕಂಕಣ
ಸಂಕೇಶ್ವರದ ಪ್ಯಾಟ್ಯಾಗ
ಒಂಕಿ ಖರೀದಿ ಮಾಡ್ತಾರ .....

೧೫೧೦. ಅಕ್ಕಿ ಅಗಳು ಬಾಳ
ಮೆಕ್ಕಿ ಬೀಜ ಬಾಳ
ನಾ ಎಲ್ಲಿ ಹೋದ್ರೂ ನನ್ನ ಮ್ಯಾಲ
................ರ ನೆದರು ಬಾಳ.

೧೫೧೧. ಬಂಗಾರ ಘಳಿ ಹಿಡಕೊಂಡು
ಬಂಗಾರ ಬಳಿ ಮಾಡಿಸ್ತಾರ .....

೧೫೧೨. ಆರು ಮೊಳದ ಅಂಗಿ
ಮೂರು ಮೊಳದ ಕಿಸೆ
ಚವುಲ್ದಾಗ ಡೌಲು ಮಾಡ್ತಾರ .....

೧೫೧೩. ಬಂಗಾರ ಪಾಟ್ಲಿ ಗಾಂದೆಣ್ಣಿ ಬಾಟ್ಲಿ
ಗಂಧಾ ಹಚಿಗೊಂಡು ಗಾಣಗಿತ್ತಿ ಮನಿಗೆ ಹೋಗ್ತಾರ .....

೧೫೧೪. ಹಾಲಗಾಳ ತಿಂದ ಹಕ್ಕಿ ಹಾರಿ ಹೋದವು
..................ರ ಕಾಟಕ್ಕ ನನ್ನ ಹಾಡ ಹರದು ಹೋದವು.

೧೫೧೫. ಅರಮನೆಯಿಂದ ಕೇಳುವುದು ಕಾಳಿ
ಬೆಳಗು ಮುಂಜಾನೆ ಕೂಗುವುದು ಕೋಳಿ
ರಾಜರು ರಾಜರ ಮೇಲೆ ಹೋಗುವುದು ದಾಳಿ
................ ರು ಎಂಥವರೆನ್ನುವುದನ್ನು ನೀವೇ ಕೇಳಿ.

೧೫೧೬. ಪೂಜೇಕ ಕುಂತಾರ ಪುಸ್ತಕ ಹಿಡದಾರ
ಹತ್ತ ಮಂದಿಗೆ ಒಮ್ಮೆಲೇ ಉತ್ರಾ ಕೊಡತಾರ .....

೧೫೧೭. ತಿನ್ನಲು ಮಾಡುವರು ಶಂಕರಪಾಳಿ
ಊರಲ್ಲಿ ಬಿಡುತ್ತಾರೆ ಒಂದು ಗೂಳಿ
................ರು ಪ್ರೀತಿಯಿಂದ ಕಟ್ಟಿದ್ದಾರೆ ತಾಳಿ.

೧೫೧೮. ಆದಲ ಮೇಲೆ ಕೃಷ್ಣ ಮಲಗಿ
ಚಮತ್ಕಾರ ಮಾಡಿದರೆ
..............ರು ನೆಲದ ಮೇಲೆ ಮಲಗಿ
ಘೂತ್ಕಾರ ಮಾಡತಾರ.

೧೫೧೯. ಹರಕ ಅಂಗಿ ಮುರುಕ ಟೊಪ್ಪಿಗಿ
ಪಿಸಿದ ಪಂಜಿ ಉಟಗೊಂಡ
ಚೆಂದುಳ್ಳಾಕಿ ಕೂಡ ಚೆನ್ನಾಟ ಆಡೇನಂತಾರ ....

೧೫೨೦. ತಾಟ ಹಾಕಿ ಊಟಕ್ಕ ಕೊಟ್ರ
ಹಾಟಗಳ್ಳಿ ಅಂತಾ ಹಲಕಟ್ಟ ಬೈತಾರ .....

೧೫೨೧. ಆಕಳ ಆಕಾಶದಾಗ ಕರಾ ಕಿರುವತ್ತ್ಯಾಗ
ನನ್ನ .............ರ ಲಗ್ನ ಆಗಿದ್ದು ಸಣ್ಣ ವಯಸ್ಸಿನ್ಯಾಗ.

೧೫೨೨. ಆರತಿ ಹಿಡಿಬ್ಯಾಡ
ಎಣ್ಣಿ ತುಳಕತೈತಿ
ಸೆರಗ ಹಿಡಿಬ್ಯಾಡ
ಶರಗಿನ ಜರಾ ಹಾರತೈತಿ
ನಿರಿಗಿ ಹಿಡಿಬ್ಯಾಡ
ನಿರಿಗಿ ಮುರಿಗಿ ಆಗತೈತಿ
ನನ್ನ ಹಿಡಿಬ್ಯಾಡಾ ಮಾರಾಯ ಎದಿ ನಡಗತೈತಿ .....

೧೫೨೩. ಸರದ ನಿಂತ ಕೇಳ್ರಿ ಸರಸ್ವತಿ ಹೆಸರ
ದೂರನಿಂತ ಕೇಳರಿ ದ್ರೌಪತಿ ಹೆಸರ
ಹತ್ತ ಮಂದ್ಯಾಗ ಕೇಳ್ರಿ ಅತ್ತಿ ಮಾವರ ಹೆಸರ
ನಾಕ ಮಂದ್ಯಾಗ ಕೇಳ್ರಿ .............ರ ಹೆಸರ.

೧೫೨೪. ಆರು ರೂಪಾಯಿ ಮಗಿ ಮೂರು ರೂಪಾಯಿ ಚರಿಗಿ
ಕರಬಿಡಂದ್ರ ಕರಕರಿ ಮಾಡ್ತಾರ
ಹಾಲ ಕುಡಿತೀನಂತ ಹಾರ್‍ಯಾಡತಾರ ....

೧೫೨೫. ಆರನೂರ ಅಡಿಕಿ ಮೂರನೂರು ಎಲಿ
ಕಾಚನೂರು ಕಾಚು ಸವಣೂರ ಸುಣ್ಣ
ಬಾಯಿ ಕೆಂಪಗ ಮಾಡಿಕೊಂಡು
ಸಂಪಿಗಿ ಗಿಡಕ ಹಾಸು ಹೊಯ್ಯತಾರ .....

೧೫೨೬. ನಮ್ಮವರು ಉಣ್ಣುವುದು ಬೆಳ್ಳಿ ತಾಟು
................ರ ಊಟ ಅಂದ್ರ ಪಡಿಪಾಟು.

೧೫೨೭. ತೋಪಿನ ಸೀರಿ ಗಾಡಿದಡಿ ಕುಬುಸ
ಅವರು ತರಲಿಲ್ಲ ನಾ ಉಡಲಿಲ್ಲ,
ತಾಳಿಲ್ಲ ತಂತಿಲ್ಲದಾಂಗ ಮಾಡ್ಯಾನ.....

೧೫೨೮. ಅಟ್ಟಂ ಭಟ್ಟಂ ಅರಣ್ಯದಾಗ
ಚಿಟಗುಬ್ಬಿ ತೇಲಿ ಒಡದೈತಿ ಅಂದ್ರಹತ್ತಿ ತೊಳಿ
............ರು ಮೆಚ್ಚಿ ಹೊಗಳತಾರ
ನನ್ನ ಗಲ್ಲದ ಮ್ಯಾಲಿನ ಕುಳಿ.

೧೫೨೯. ಇಟ್ಟೇನಂದ್ರ ದಾಗೀನ ಇಲ್ಲ
ಉಟ್ಟೇನಂದ್ರ ಪಿತಾಂಬರ ಇಲ್ಲ
ಉಂಡೇನಂದ್ರ ಹೋಳಿಗಿ ತುಪ್ಪಿಲ್ಲ
ಗಂಡಗ ಹೇಳೇನಂದ್ರ ಗಂಡ
ಗುಂಡ ಕಲ್ಲಾಗ್ಯಾನ .....

೧೫೩೦. ಉದುರುದುರು ಅನ್ನ ಉದ್ದಿನ ಹಪ್ಪಳ
ಕಾಸಿದ ತುಪ್ಪಾ ಹೋಳಿಗೆ ಸಾರು
ಕರದ ಕಡುಬು ನೀಡಾಕ ಹೋದ್ರ
ಮಾರಿ ನೋಡಿ ಮುಸು ಮುಸು ನಗ್ತಾರ .....

೧೫೩೧. ದುರ್ಯೋಧನನಿಗನ್ನುವರು ಛಲದಂಕಮಲ್ಲ
ಕರ್ಣನಿಗೆ ಅನ್ನುವರು ದಾನಶೂರಮಲ್ಲ
ಭೀಷ್ಮನಿಗೆ ಅನ್ನುವರು ಕುಂಭ ಉದ್ಭವ ಮಲ್ಲ
ನನ್ನ .................. ರ ಕೋಪಾನ ಆ ಶಿವನೇ ಬಲ್ಲ.

೧೫೩೨. ತೇರು ಎಳೆಯುವಾಗ ಒಗೆಯುವುದು ಉತ್ತಿತ್ತಿ
ಸತ್ಯವಾನನನ್ನು ಬದುಕಿಸಿದವಳು ಸತಿ ಸಾವಿತ್ರಿ
ಅರ್ಜುನನ ಪಾಶುಪತಾಸ್ತ್ರಕ್ಕೆ ನಡುಗೀತು ಧರಿತ್ರಿ
..................ರೇ ನನ್ನ ಬಾಳಿಗೆ ನೆರಳಾಗಿರುವ ಛತ್ರಿ.

೧೫೩೩. ಹಿಟ್ಟಿನ ಪಲ್ಲೆ, ಪದರ ಚಪಾತಿ
ಹನ್ನೊಂದು ತಿಂದು ಇನ್ನೊಂದ ಕೇಳ್ತಾನ .....

೧೫೩೪. ಉಂಗುರು ಗೂದಲ ಬಂಗಾರ ಬೈತಲಿ
ರಂಗೀಲೆ ಬಂದು, ರಮಿಸಿ ಕೈ ಹಿಡಿತಾರ .....

೧೫೩೫. ಕಾಲಾಗ ಪಿಲ್ಲಿ ಚೆಂದ
ಟೊಂಕಕ್ಕೆ ಪಟ್ಟ ಚೆಂದ
ಹೆರಳಿಗೆ ಹೂ ಚೆಂದ
ಮನಿಗೆ ನಮ್ಮವರೇ ಚೆಂದ .....

೧೫೩೬. ಊರ ಹೊರಗಿರುವುದು ಮಲ್ಲಮ್ಮನಗುಡಿ
ಅದನ್ನು ಕಾಯ್ತಾ ಇರುವುದು ನಾಗರಹೆಡಿ
ಅಲ್ಲಿ ಪೂಜೆಗೆ ಸಲ್ಲುವುದು ಕ್ಯಾದಗಿ ಹೊಡಿ
ಮಲ್ಲಮ್ಮನಿಗೆ ಉಡಿಸ್ಯಾರ ಜರದಮಡಿ
ನಮ್ಮ ..... ರು ಜಗ್ಗತಾರ ನನ್ನ ಜೆಡಿ.

೧೫೩೭. ಮ್ಯಾರಿಗೆ ಒಪ್ಪುವುದು ಉಪ್ಪಿಟ್ಟು
ಚಹಾ ಕಾಫಿಗೊಪ್ಪುವುದು ಬಿಸ್ಕಟ್ಟು
...............ರ ಕೈಯಾಗ ಸುಡುವುದು ಸಿಗರೇಟು.

೧೫೩೮. ಸುಖ ದಂಪತಿಗಳು ಕೂಡ್ರುವರು
ತೂಗು ಮಂಚದ ಮೇಲೆ
ಬ್ರಹ್ಮಲಿಖಿತವಿರುವುದು ಹಣೆಯ ಮೇಲೆ
..................ರು ಕುಳ್ಳಿರಿಸಿದ್ದಾರೆ ನನ್ನ ಒಲೆಯ ಮೇಲೆ.

೧೫೩೯. ಪಂಚಪಾಂಡವರಲ್ಲಿ ಕಿರಿಯವನು ಸಹದೇವನು
ಸಕಲ ಜೀವರಾಶಿ ಕಾಯುವವ ಮಹಾದೇವ
ನನಗೆ .............. ರು ಕೈಹಿಡದದ್ದು ನನ್ನ ಸುದೈವ

೧೫೪೦. ಐವತ್ತು ರೂಪಾಯಿ ಹಸರಂಗಿ
ಮೂವತ್ತು ರೂಪಾಯಿ ಮುತ್ತಿನ ಅಂಗಿ
ತೊಟಗೊಂಡು ಹೋಗಂದ್ರ ಸೆಟಗೊಂಡ ಹೋಗ್ತಾನ .....

೧೫೪೧. ನೂರ ಹೋಗಿ ಮುನ್ನೂರ ಕರ್ಚಿಕಾಯಿ
ಸಣ್ಣಕ್ಕಿ ಅನ್ನ ಎಮ್ಮಿ ಹೆತ್ತುಪ್ಪ
ತುತ್ತಿಗೊಮ್ಮೆ ತಾಯಿ ಕೇಳ್ತಾರ ....

೧೫೪೨. ಹಾಲು ಬಾನಾ ಉಂಡು ಮ್ಯಾಲ
ಸಕ್ಕರಿ ಹಾಲ ಕುಡದು
ಮಾಡಿಮ್ಯಾಗ ಕುಂತ ಮಕ್ಕಳನ್ನ ಆಡಿಸ್ತಾರ .....

೧೫೪೩. ಒಂದ ಬಿದರ ತಂದ ಒಂಬತ್ತು ಮನಿ ಕಟ್ಟಿಸಿ
ಸೂಳಿ ಮನಿ ಕಟ್ಟಿಸಿ, ಸುಂದ್ರಿಮನಿ ಕಟ್ಟಿಸಿ
ಮಾಲ ಕಟ್ಟಿಸಿ, ಮಹಲ ಮ್ಯಾಲ ಕುಂತ
ಮಗನ್ನ ಆಡಿಸ್ತಾರ ....

೧೫೪೪. ಆಕಳ ಹೈನಲ್ಲ ಅಳಿಯ ಮಗನಲ್ಲ
ಕಾಡಿಗೆ ಜೋಳ ಬೆಳಿಸಲ್ಲ, ಬಂಜೀಗೆ ಮಕ್ಕಳಿಲ್ಲ
ನಮ್ಮ ..... ರ ನೆಲಿ ಯಾರಿಗೂ ತಿಳಿದಿಲ್ಲ.

೧೫೪೫. ಅಳಿಯ ಬರಲಿಲ್ಲಂತ ದೀವಳಿಗಿ ನಿಲ್ಲೂದಿಲ್ಲ
ಅತ್ತಿ ಮಾವಾ ಸೆಟಗೊಂಡ್ರ ಗಂಡನ ಮನಿ ತಪ್ಪೂದಿಲ್ಲ
ನಮ್ಮ ..... ರು ಸಿಟ್ಟಿಗೆದ್ರ ನನಗ ಗಂಡಾಂತರ ತಪ್ಪಿದ್ದಲ್ಲ.

೧೫೪೬. ಆನಂದದಿಂದ ಅಂಜಿ ನಡೆವ ಸೊಸಿ ಚೆಂದ
ಅಪ್ಪಿಕೊಂಡು ಆನಂದ ಪಡೆವ ಅತ್ತಿ ಮಾವ ಚೆಂದ
ಸತ್ಯಶೀಲ ನಡೆನುಡಿ ಒಂದಾದ ನನ್ನ ಪತಿದೇವರೇ ಚೆಂದ ......

೧೫೪೭. ಬೆಕ್ಕಿಗೆ ಬೆಣ್ಣೆ ಬೇಕು
ನೆತ್ತಿಗೆ ಎಣ್ಣೆ ಬೇಕು
ಅತ್ತೆಗೆ ಸೊಸಿ ಬೇಕು
...............ರಿಗೆ ನಾನೇ ಬೇಕು.

೧೫೪೮. ದೀಪ ಇರುವುದು ಎಣ್ಣಿ ಇರುವ ತನಕ
ಅಣ್ಣನ ಪ್ರೀತಿ ಇರುವುದು ವೈನಿ ಬರುವ ತನಕ
ನನ್ನ ...................ರ ಪ್ರೀತಿ ಇರುವುದು ಕೊನೆತನಕ.

೧೫೪೯. ಸೀತೆ ಇರುವುದು ಲಂಕಾ ಅಶೋಕ ವನದಲ್ಲಿ
ರಾಮಲಕ್ಷ್ಮಣರಿರುವುದು ವನವಾಸದಲ್ಲಿ
ನನ್ನ .............ರು ಇರುವುದು ನನ್ನ ಕುಂಕುಮದಲ್ಲಿ.

೧೫೫೦. ಸ್ವಯಂವರದಲ್ಲಿ ರಾಮಚಂದ್ರ ಮುರಿದದ್ದು ಧನುಸ್ಸು
ನಮ್ಮ ................ ರ ಹೆಸರು ಹೇಳುವೆನು ಕೊಡಿರಿ ಮನಸ್ಸು.

೧೫೫೧. ಮಕ್ಕಳು ಬೇಕೆಂದು ಮಾಡುವರು
ಅರಳೆ ಗಿಡಕ ಪ್ರದಕ್ಷಿಣೆ
ನನ್ನ .............. ರಿಂದಲೇ
ನನ್ನ ಮಾಂಗಲ್ಯದ ಸಂರಕ್ಷಣೆ.

೧೫೫೨. ಶ್ರೀ ಶಂಕರನು ಇರುವುದು ಕೈಲಾಸ
ಅವನ ತೊಡೆಯ ಮೇಲಿರುವುದು
ಗೌರಿ, ಗಣಪತಿಯ ವಾಸ
ನಾನು ಇರುವುದು ನಮ್ಮ .............ರ
ಹೃದಯ ಕಮಲದ ನಿವಾಸ.

೧೫೫೩. ಕಾಸಿ ಕ್ಷೇತ್ರ ಗಂಗಾಪಾತ್ರ ವಿಶ್ವನಾಥನ ಸ್ತೋತ್ರ
ನನ್ನ ..............ರು ಕಟ್ಟಿದ್ದಾರೆ ಕೊರಳಿಗೆ ಮಂಗಳಸೂತ್ರ.

೧೫೫೪. ಮಧುರೆಯಲ್ಲಿ ಮೀನಾಕ್ಷಿ,
ಕಂಚಿಯಲ್ಲಿ ಕಾಮಾಕ್ಷಿ
ನಮ್ಮ .................ರ ಹೆಸರ ಹೇಳುವೆ
ನಿಮ್ಮೆಲ್ಲರ ಸಾಕ್ಷಿ.

೧೫೫೫. ನಾಕ ಮೂಲಿಗೆ ನಾಕ ಆರ್ತಿ
ನಡುಕ ಶ್ರೀಕೃಷ್ಣನ ಮೂರ್ತಿ
ನಾನು ............ ರಿಗೆ ಮಾಡುವೆ ತುಪ್ಪದಾರುತಿ.

೧೫೫೬. ಮುಖವೆಲ್ಲಾ ಪ್ರಶಾಂತವಾಗಿರಲಿ
ಕಣ್ಣುಗಳೆರಡು ಪ್ರೀತಿ ತುಂಬಿರಲಿ
ತುಟಿಗಳ ತುಂಬ ನಗೆಯಾಡುತಿರಲಿ
ನನ್ನ ............ ರಿಂದ ನನ್ನ ಮಾಂಗಲ್ಯ
ಮಾಸದೆ ಗಟ್ಟಿಯಾಗಿರಲಿ.

೧೫೫೭. ಎಡೆಯೂರ ಸಿದ್ಧಲಿಂಗೇಶ್ವರರು
ತಪಸ್ಸಿಗೆ ಕುಂತಾಗ ಬೆಳೆದದ್ದು ಹುತ್ತು
ಮುತ್ತೈದೆಯರ ಮೂಗಿನಲ್ಲಿರಬೇಕು ನತ್ತು
ನನ್ನ .............. ವರ ಹೆಸರ ಹೇಳುವೆನು
ಮೂರು ಸಂಜೆ ಹೊತ್ತು.

೧೫೫೮. ಮಲ್ಲಿಗೆ ಹೂವಿನ ಬಜಾರ
ಶ್ರೀಗಂಧದ ತೇರಿನ ಸಿಂಗಾರ
ನನ್ನ .............. ರು ಮಾಡ್ತಾರ ದರ್ಬಾರ.

೧೫೫೯. ಆಕಳು ಹುಟ್ಟಿದ್ದು ಆಕಾಶದಲ್ಲಿ
ಹೋರಿ ಹುಟ್ಟಿದ್ದು ಭೂಲೋಕದಲ್ಲಿ
ಹೇಮರಡ್ಡಿ ಮಲ್ಲಮ್ಮ ಹುಟ್ಟಿದ್ದು ಕಲ್ಲಪಡಿಯಲ್ಲಿ
ನನಗೂ ನನ್ನ ............ರ ಲಗ್ನವಾದದ್ದು
ರಪಾಟಿ ಕಲ್ಯಾಣ ಮಂಟಪದಲ್ಲಿ.

೧೫೬೦. ಸುಖ ದುಃಖ ಸಮ ಸಮವಾಗಿರಲಿ
ಕತ್ತಲು ಬೆಳಕು ಸಮ ಸಮವಾಗಿರಲಿ
ಬೇವು–ಬೆಲ್ಲ ಸಮ ಸಮವಾಗಿರಲಿ
ನೋವು–ನಲಿವು ಸಮ ಸಮನಾಗಿರಲಿ
ನನ್ನ .............ರು ನನ್ನ ಬದುಕು ಸಮತೂಕವಾಗಿರಲಿ.

೧೫೬೧. ಮುರುಕನಗ, ಹರಕ ಮಿಣಿ, ಬಡಲಕ ಎತ್ತು
ಎತ್ತು ಎಳಿವಲ್ದಂತ ಎದಿ ಬಡಕೊಂಡು ಅಳ್ತಾರ ....

೧೫೬೨. ಹರಕ ಜೋಳಿಗಿ, ಮುರಕ ಬೆತ್ತ, ಗೊಡ್ಡ ಎಮ್ಮಿ
ಹಾಲ ಹಿಂಡಲೊಲ್ಲದು ಅಂತಾ ಹಲ್ಲ ಕಡಿತಾರ .....

೧೫೬೩. ಚಕ ಚಕ ನೀರ್ಗಿ ಚೌರಣ್ಣಿನ ಕುಬುಸಾ
ವಜ್ರದವಾಲಿ ಗೆಜ್ಜ ಟೀಕಿ, ಮರಾಳವಂಕಿ
ಮುರುಗಿ ಸೀರಿ ಉಟಗೊಂಡ ಮುಂದ ನಿಂತ್ರ
ಧುಮುಧುಮು ಉರಿತಾರ ....

೧೫೬೪. ಹರಿಶ್ಚಂದ್ರನ ಕೆಡುಗಾಲದಲ್ಲಿ
ಭಾರಿ ಕಾಟಾ ಕೊಟ್ಟಾವ ನಕ್ಷತ್ರಕ
ನಾನು ................ರ ಕೈಹಿಡದದ್ದು ಸೌಭಾಗ್ಯಕ್ಕ.

೧೫೬೫. ಕಟ್ಟಿದ ತಾಳಿ ಗಟ್ಟಿಯಾಗಿರಲಿ
ಹಚ್ಚಿದ ಕುಂಕುಮ ಅಳುಕದಿರಲಿ
ನಮ್ಮ ...............ರ ಪ್ರೇಮ ಸದಾ
ನನ್ನ ಮೇಲಿರಲಿ.

೧೫೬೬. ಧಾರವಾಡದ ಆಚೆಕ ಡೆಂಟಲ್
ಧಾರವಾಡದ ಈಚೆಕ ಮೆಂಟಲ್
ನನ್ನ ..............ರು ಸರಳವಾಗಿ ಎತ್ತಾರ
ಒಂದ ಕಿಂಟಲ್

೧೫೬೭. ಆಚೇಕ ಈಚೇಕ ಈಚಲ ಗಿಡ
ನಟ್ಟ ನಡುವೆ ಬೇವಿನ ಗಿಡ
ಬೇವಿನ ಗಿಡದಾಗ ಹುಟ್ಟೈತಿ ಬಾರಿ ಗಿಡ
ಬಾರಿ ಗಿಡದಾಗ ಬಾರಿ ಹಣ್ಣು ಕಡದು
ನನ್ನ ಬಾಯಾಗ ಇಡತಾರ ....

೧೫೬೮. ಎಂ.ಕೆ. ಹುಬ್ಬಳ್ಳಿ ಮುಂದಿರುವುದು ಶುಗರಫ್ಯಾಕ್ಟರಿ
ನನ್ನ ............ರ ಕೈಯಲ್ಲಿ ಕೊಡುವೆ ಮೂರು ಸೆಲ್ಲಿನ ಬ್ಯಾಟರಿ.

೧೫೬೯. ಹಾಗಲಕಾಯಿ ತಿಂತಾರ
ಬೇವಿನ ಕಾಯಿ ಬಿಡತಾರ
ನೆಲ್ಲಿಕಾಯಿ ತಿಂದ ನೀರ ನೀರ ಅಂತಾರ ....

೧೫೭೦. ಸಮುದ್ರದ ನೀರು ಬಲು ಉಪ್ಪು
ನಮ್ಮ .............ರಿಗೆ ಕಡಿಮಿ ಆಗ್ತೈತಿ ನೆಪ್ಪು.

೧೫೭೧. ಮುತ್ತೈದೆಯರ ಕೊರಳಾಗ ಇರೋದು
ತಾಳಿ ಸಾಮಾನ್ಯ ಮುತ್ತಿನಪದಕ
ನನ್ನ ............ ರಾಯರಿಗೆ ಇಡುವೆ
ಹಣೆಗೆ ಕಸ್ತೂರಿ ತಿಲಕ.

೧೫೭೨. ಗಿಡದಲ್ಲಿರುವುದು ಹಾಲಕ್ಕಿ
ಅಂಗಡ್ಯಾಗ ಸಿಗುವುದು ಯಾಲಕ್ಕಿ
ನನ್ನ ..............ರಿಗೆ ಕೊಡುವೆ ಹಚ್ಚಿದ ಅವಲಕ್ಕಿ.

೧೫೭೩. ವಸಂತ ಮಾಸದಲ್ಲಿ ಚಿಗುರುವುದು ಮಾವಿನ ಮರ
ನನ್ನ .................ರ ಪ್ರೀತಿ ಅಮರ.

೧೫೭೪. ನೀರು ಎರೆದು ಮರ ಬೆಳೆಯಲಿ
ನೀರು ಎರೆದು ಲಗ್ನವಾಯಿತು
ನನಗೆ ನನ್ನ ........ ಗಂಡನ
ಮನೆ ಸ್ಥಿರವಾಯಿತು.

೧೫೭೫. ಚೇರಾಪುಂಚಿಯಲ್ಲಿ ಆಗುವುದು
ಐದುನೂರ ಇಂಚಿಗಿಂತ ಹೆಚ್ಚು ಮಳೆ
ನನ್ನ .............ರು ಸುರಿಸ್ತಾರೆ
ಜೀವನ ತುಂಬಾ ಪ್ರೇಮದ ಸುರಿಮಳೆ.

೧೫೭೬. ತುಪ್ರಿ ಬಳ್ಳ್ಯಾಗ ತುಪ್ರಿಕಾಯಿ
ಹಾಗಲ ಬಳ್ಳ್ಯಾಗ ಹಾಗಲಕಾಯಿ
ಸವತೀ ಬಳ್ಳ್ಯಾಗ ಸವತೀಕಾಯಿ
ಬೆಂಡಿಕಾಯಂತ ಹುಡುಗಿ ಕಂಡು
ಮಲ್ಲಿಗಿ ತಂದ ಮುಡಿಗೇರಿಸ್ತಾರ .....

೧೫೭೭. ತೋಟದ ಹೊಲಕ ಹೋಗಿ ಊಟಾ ಮಾಡಂದ್ರ
ದ್ರಾಕ್ಷಿ ಬಳ್ಳ್ಯಾಗ ಕುಂತ ಧ್ಯಾನಾ ಮಾಡ್ತಾರ .....

೧೫೭೮. ಶ್ರೀರಾಮಚಂದ್ರನು ಸೀತೆಯನ್ನು ಹುಡುಕಿದ್ದು
ರಾವಣನ ಲಂಕಾ ನಗರಿಯಲ್ಲಿ
ನಮ್ಮ ............ರು ನನ್ನನ್ನು ಹುಡುಕುವುದು
ರಸಬಾಳೆ ತೋಟದ ಹೊದರಿನಲ್ಲಿ.

೧೫೭೯. ಮೇಲೆ ಇರುವುದು ನೀಲಿ ಆಕಾಶ
ಶಾಲೆಯಲ್ಲಿರುವುದು ಬಣ್ಣ ಬಣ್ಣದ ನಕಾಶ
ನಾನು ................. ರ ಹೆಸರ ಹೇಳ್ತೀನಿ ಸಾವಕಾಶ.

೧೫೮೦. ಮೈದಾಹಿಟ್ಟು ವಿಳ್ಯೆದೆಲಿ ಕಟ್ಟು
ಊಟಕ್ಕ ಬರ್ರಿ ಅಂದ್ರ
ಕಟ್ಟಿಮ್ಯಾಲ ಕುಂತ ಪಗಡಿ ಆಡ್ತಾರ.

೧೫೮೧. ಮೆಂತೇದ ಹಿಟ್ಟು ಸಾರಿನ ಕಟ್ಟು
ಹೊಟ್ಟೆ ಕೆಟ್ಟೈತಿ ಹೋಳಿಗಿ ಮಡಂತಾರ .....

೧೫೮೨. ಶ್ರೀಕೃಷ್ಣನ ಕೊಳಲ ದನಿ ಕೇಳಿ
ಓಡಿಬಂದರು ಗೋಪಿಕಾಸ್ತ್ರೀಯರು
ನಮ್ಮ .............ರ ದನಿಕೇಳಿ ಓಡಿ ಬಂದರು
ಕೆಲಸದ ಬಾಲೆಯರು.

೧೫೮೩. ಕಿತ್ತೂರು ಅರಮನೆ ಬಾಗಿಲಿಗೆ ಕಟ್ಟಿದ್ದು
ತರ ತರದ ತೋರಣ
ಯುದ್ಧ ನಡೆದಾಗ ಅಮಳೂರ ಬಾಳ್ಯಾನ
ಗುಂಡಿಗೆ ಆಯ್ತು ಥ್ಯಾಕರೆಯ ಮರಣ
ನಾನು ............. ರ ಹೆಸರು ಹೇಳುವೆ
ಇತಿಹಾಸ ನೆನಪಾದ ಕಾರಣ.

೧೫೮೪. ನಿಂಬೀ ಹಣ್ಣಿನ ಬಣ್ಣದಾಕಿ
ಬಾಳಿ ಗಿಡದಂತಾ ಡಿಂಬದಾಕಿ
ಅಂತಾಕಿ ಹುಡುಕಿಕೊಂಡ ಸಂತ್ಯಾಗ ತಿರಗ್ತಾರ .....

೧೫೮೫. ತವರ ಮನ್ಯಾಗ ನಾನು
ತನ್ನ ಮನ್ಯಾಗ ಆತ .....
ಸಂಸಾರ ಮಾಡ್ಲಿಲ್ಲ ಸುಖಾ ಕಾಣ್ತಿಲ್ಲ.

೧೫೮೬. ಮ್ಯಾಗ ಅಡ್ಡ್ಯಾಡೂ ಸೂರ್ಯಾ ಇದ್ರೇನು, ಚಂದ್ರ ಇದ್ರೇನು
ನನಗ ಭೂಮಿಮ್ಯಾಗ ನನ್ನ ............. ರ ಸೂರ್ಯಾಚಂದ್ರಾ.

೧೫೮೭. ಕಟ್ಟ್ಯಾರ ಗೂಟಕ್ಕ ಕರಾ ಈ ವರ್ಷ ಬಿದ್ದೈತಿ ಬರಾ
ನನ್ನ .............. ರು ಏನ್ ತರತಾರ ಮುತ್ತಿನ ಸರಾ.

೧೫೮೮. ವನ ವನ ನಾರಿ ವನ ಸಿಂಗಾರಿ
ಮಾನುಳ್ಳವರ ಮಗಳು
ಪುಣ್ಯವಂತರ ಸೊಸೆ
ಎಡಕ್ಕ ಎಣ್ಣಿ ದೀಪಾಹಚ್ಚಿ
ಬಲಕ್ಕ ತುಪ್ಪದದೀಪಾ ಹಚ್ಚಿ
ಬಂಗಾರ ಬಾಗಿಲದಾಗ ಸಿಂಗಾರ ತೋರಣಕಟ್ಟಿ
ಬೆಳ್ಳಿ ಪಲ್ಲಂಗಕ್ಕ ಗಂಧ ಹೂ ಸಿಂಗರಿಸಿ
ದೇವರ ಕೋಣ್ಯಾಗ ಸಾಲಪಣತಿ ಮುಡಿಸಿ
ಹೂರಣದ ಹೋಳಿಗೆ ಮಾಡಿ, ಎಡಿ ಮಾಡಿದ್ರ
ಎಡಿ ತಗೊಂಡ ಮಡಿಹುಡಿಲೆ ದೇವರ ಗುಡಿಗೆ ಹೋಗ್ತಾರ ....

೧೫೮೯. ಶನಿವಾರ ಹನುಮಂತನ ಪೂಜೆ
ಶುಕ್ರವಾರ ಲಕ್ಷ್ಮದೇವಿ ಪೂಜೆ
ಸೋಮವಾರ ಬಸವಣ್ಣನ ಪೂಜೆ
ಬುಧವಾರ ಬುಧರ ಪೂಜೆ
ನನ್ನ ............ರಿಗೆ ನಾ
ಮಾಡುದು ನಿತ್ಯ ಪೂಜೆ.

೧೫೯೦. ಕೌದಿ ಹೊಲಿದಾಳ ಸಿಂಗಾರಿ
ರಂಗೋಲಿ ಹಾಕ್ಯಾಳ ಬಂಗಾರಿ
..............ರು ತರತಾರ ತರಕಾರಿ.

೧೫೯೧. ಪ್ರೀತಿಗಂತಾರ ಕೆಂಪು ಗುಲಾಬಿ
ಕುಡಿಯಾರಿಗಂತಾರ ಶರಾಬಿ
ಅಡಿಗೆ ಮನ್ಯಾಗೊರಸೂದು ಮಸಿ ಅರಬಿ
ಕಾಮಧೇನುನುವಿಗಂತಾರ ಸುರಭಿ
ನನ್ನ ............ರು ಕೇಳ್ತಾರ
ನಾ ಎಲ್ಲಿ ಹೊಂಟ್ರೂ ತರುಲಿ.

೧೫೯೨. ದ್ರೌಪತಿಯ ಸೀರೆ ಸೆಳೆಯುವಾಗ
ಕೃಷ್ಣ ಕಾಪಾಡಿದ ತಂಗಿಯ ಮಾನ
ಆಗ ಕೌರವ ದುಶ್ಯಾಸನಿಗಾಯ್ತು ಅವಮಾನ
ನಮ್ಮ ............ ರ ಹೆಸರು ಹೇಳಿದರೆ
ಹೊರಿಸ್ತಾರ ನನಗ ಕೊಡಪಾನ.

೧೫೯೩. ಅತ್ರಿಮುನಿಯಿಂದ ಉತ್ತಮವಾಗಿ ಬೆಳೆಯಿತು ಉತ್ತತ್ತಿ ಮರ
ಅದರ ನೆರಳಿಗೆ ಕಟ್ಟಿದ್ದು ಗೋವಿನ ಕರ
ನನ್ನ ................ರು ನನಗೆ ಕಟ್ಟಿದ್ದು ಮಾಂಗಲ್ಯಸರ.

೧೫೯೪. ಧ್ರುವ ಕುಮಾರನು ತಪಸ್ಸು ಮಾಡಿದ್ದು ಮಧುವನ
ಅದೇ ಕಾಲಕ್ಕೆ ಪರಮಾತ್ಮನು ಏರಿಬಂದದ್ದು ಗರುಡವಾಹನ
ನಮ್ಮ .................ರೇ ನನಗೆ ಪರಮಪಾವನ.

೧೫೯೫. ಶಬರಿ ವನದಲ್ಲಿ ರತ್ನಾಕರ
ಜತೆಯಾಗಿ ಉರಿದುದು ನಂದಾದೀಪ
ನಮ್ಮ .............ರೊಂದಿಗೆ
ನಾನು ಸೇರಿದ್ದೇ ಅಪರೂಪ.

೧೫೯೬. ಆರು ಗಂಗಾಳಪತ್ರಿ ಮೂರು ಗಂಗಾಳ ಹೂವು
ಬಾರಿ ಗಿಡದಾಗ ಕುಂತಗೊಂಡ ಮ್ಯಾರಿ ಮಾಡ್ತಾರ ....

೧೫೯೭. ಬೆಳದಿಂಗಳ ಬೆಳಕ
ಕಲ್ಲಸಕ್ಕರಿ ಹಳಕ
ನನ್ನ .............ರು ಅದಾರ
ಬಾಳ ಕೊಳಕ.

೧೫೯೮. ಧುರ್ಯೋಧನನು ಭೀಮನಿಗೆ ಹೆದರಿ
ಅವಿತಿಕೊಂಡದ್ದು ವೈಶಂಪಾಯನ ಸರೋವರ
ನಮ್ಮ ...............ರೂ ನನ್ನದು ಅಪರೂಪದ ಸ್ವಯಂವರ.

೧೫೯೯. ಪಕ್ಕದಲ್ಲಿ ಪದ್ಮಾವತಿ ಲೆಕ್ಕದಲ್ಲಿ ಸರಸ್ವತಿ
ನಾನು .................ರ ಹೆಸರು ಹೇಳಲು
ಬೇಕಿಲ್ಲ ನಿಮ್ಮ ಸಮ್ಮತಿ.

೧೬೦೦. ಶ್ರೀಕೃಷ್ಣ ತೊಟ್ಟಿದ್ದು ನೀಲವರ್ಣದ ಅಂಗಿ
ನಾನು .............ರ ಹೆಸರ ಹೇಳುವೆ
ಹೆರೂರು ಹಲಿಯ ತಂಗಿ.

೧೬೦೧. ಗೆಣಸ ಕುದಿಸಿ ಕೈಯಾಗ ಬೆಲ್ಲಾ ಕೊಟ್ಟ ತಿನ್ನಂದ್ರ
ಎಲ್ಲಾ ತಿದ ವಲ್ಲೀಲೆ ಒರಿಸಿಗೊಂಡು
ಕರಸ್ಯಾಗ ರೊಟ್ಟಿ ಹುಡುಕತಾರ .....

೧೬೦೨. ಕೋಗಿಲೆ ಕೂಗುವುದು ಕುಂವ್ಹೂ ಕುಂವ್ಹೂ ಎಂದು
ಮಗು ತಾಯಿಗೆ ಕರೆವುದು ಮಮ್ಮಿ ಎಂದು
ನನ್ನ ಗಂಡಗ ಬುದ್ಧಿ ಬರೂದು ಎಂದು .....

೧೬೦೩. ರಕ್ಕಸಭಾವಿ ಅರಭಾವಿ
ಅರಭಾವಿ ದಂಡಿಮ್ಯಾಲ
ಬೆಳ್ಳಗುಂಡ ಒಲಿಮಾಡಿ
ಊರಿನ ಕಡ್ಡಿ ಉರಿ ಮಾಡಿ
ಬಂಗಾರ ಗಂಗಾಳದಾಗ ನೀನು
ಪ್ರೀತಿಲಿಂದ ನೀಡಿದರ
ಬೇಸಿಲ್ಲಂತ ಹೊಸ ಖಾತೆ ತಗೀತಾರ ....

೧೬೦೪. ತವರಮನಿ ತಂದಿ ತಾಯಿ
ಕಳ್ಳ ಕುಬಸಂತ ಬಂದ್ರ
ಕಳ್ಳರು ಬಂದಾರಂತ ತಕರಾರು ಮಾಡ್ತಾರ.

೧೬೦೫. ಗೋದಿ ಹುಗ್ಗಿ ಗುದಗ ಸ್ಯಾವಗಿ
ಹಪ್ಪಳ ಸಂಡಿಗಿ ಉಪ್ಪಿನಕಾಯಿ
ಉದುರುದುರನ್ನ ಕಟ್ಟಿನ ಸಾರು
ಮಡಿಕಿ ಉಸುಳಿ ಸಜ್ಜಿ ರೊಟ್ಟಿ
ಬೆಣ್ಣಿ ಮುದ್ದಿ ಕೆನಿ ಕೆನಿ ಮೊಸರು
ಗುರೆಳ್ಳ ಹಿಂಡಿ ಅಗಸಿ ಹಿಂಡಿ
ಉಂಡು ಹೋಗ್ರಿ ಅಂದ್ರ ಸೊಂಡಿ ತಿರುವತಾರ ....

೧೬೦೬. ಪ್ರಲ್ಲಾದನ ಧ್ಯಾನಾ ಪರಮಾತ್ಮನ ಕಡಿಗೆ
ನನ್ನ .................ರ ಧ್ಯಾನಾ ನನ್ನ ಕಡಿಗೆ.

೧೬೦೭. ಕೋಟ ಬೂಟ, ತೆಲಿಮ್ಯಾಲ ಹ್ಯಾಟು
ನಮ್ಮ ..............ರು ಮಾಡೇನಂತಾರ ತವರಮನಿ ಸಪಾಟು.

೧೬೦೮. ಇವರಬಿಟ್ಟು ಇವರ್‍ಯಾರು
ಮಲ್ಲ ಅಂಗಿ ತೊಟ್ಟವರು
ಬೆರಳಾಗ ಉಂಗುರಾ ಇಟ್ಟವರು
ನನ್ನ ನೋಡಿ ಪದಾ ಕಟ್ಟವರು
ಹುಡಿಗ್ಯಾರು ಕಣ್ಣಾಗ ನೆಟ್ಟವರು
ನನ್ನ ಕಣ್ಣಾಗ ಕೆಟ್ಟವರು .....

೧೬೦೯. ಒತ್ತಾಯ ಮಾಡಿ ಆರತಿ ಕೊಟ್ಟಾರ
ನನ್ನ .................ರ ಹೆಸರ ಕೇಳಾಕ
ಒತ್ತಾಯ ಮಾಡ್ತಾರ.

೧೬೧೦. ಗಣಪತಿ ಬಿದ್ದಾಗ ಚಂದಿರನು ನಕ್ಕಾ
ಅವನಿಗಾಯಿತು ಶಿಕ್ಷಾ
ನನ್ನ ................ರ ಹೆಸರು ಹೇಳುವೆ
ಸ್ವಲ್ಪು ತಡಿಯಿರಿ ಅಕ್ಕಾ.

೧೬೧೧. ಸಾವಿತ್ರಿ ಯಮನನ್ನು ಸೋಲಿಸಿ
ಸತ್ತ ಪತಿಯನ್ನು ಬದುಕಿಸಿದಳು
ತಾಳಿಯ ಸೌಭಾಗ್ಯಕ್ಕಾಗಿ
ನಾನು ................ರ ಹೆಸರು ಹೇಳುವೆನು
ಪತಿವ್ರತೆ ಸಾವಿತ್ರಿಯ ನೆನಪಿಗಾಗಿ.

೧೬೧೨. ತ್ರಿಮೂರ್ತಿಗಳನ್ನು ಶಿಶುಗಳನ್ನಾಗಿಸಿ
ಜೋಗುಳ ಹಾಡಿದಳು ಅನುಸೂಯಾ
ತನ್ನ ಅಗಾಧ ಪತಿವ್ರತಾ ಶಕ್ತಿಯಿಂದ
ನಮ್ಮ ............. ರ ಹೆಸರ ಹೇಳುವೆನು
ಪರಮ ಸಾತ್ವಿಕ ಭಕ್ತಿಯಿಂದ.

೧೬೧೩. ಶಿವ ಹುಟ್ಟಿದ್ದು ಕೈಲಾಸ ಪರ್ವತದ ಮಂಜಿನಲ್ಲಿ
ನಾನು ................ರ ಹೆಸರು ಹೇಳುವುದು ಶಿವನ ಸದರಿನ.

೧೬೧೪. ಸಹಸ್ರ ವರ್ಷಗಳಿಂದ ಮುನಿಗಳು
ತಪಸ್ಸು ಮಾಡಿದ ಸ್ಥಳ ಮೇರು ಪರ್ವತ
ನನ್ನ .............ರು ನನ್ನ ಪಾಲಿಗೆ ಐರಾವತ.

೧೬೧೫. ಗಂಗೆ ಇಳಿದು ಬಂದಳು ಹರನ ಜಡೆಯಿಂದ
ನಾನು ...................ರ ಹೆಸರ ಹೇಳುವನು ದೇವರ ದಯೆಯಿಂದ.

೧೬೧೬. ತಂದೆಯ ಮಾತನ್ನು ಕೇಳಿ
ಪರಶುರಾಮ ಕೊಯ್ದನು ತಾಯಿಯ ಕುತ್ತಿಗೆ
ನಾನು ...............ರ ಹೆಸರು ಹೇಳುವೆ ಹೇಮರೆಡ್ಡಿ ಅತ್ತಿಗೆ.

೧೬೧೭. ಮಂತ್ರಾಲಯದಲ್ಲಿ ಇಷ್ಟಾರ್ಥ ಪೂರೈಸುವವರು
ಪರಮವತಾರ ಶ್ರೀ ರಾಘವೇಂದ್ರರಾಯರು
ನಾನು ನಮ್ಮ .............ರನ್ನ ಕಾಪಾಡಿದವರು ಅತ್ತೆ ಮಾವಂದಿರು.

೧೬೧೮. ಭಗೀರಥನ ಪ್ರಯತ್ನದಿಂದ
ಭೂಮಿಗೆ ಓಡಿ ಬಂದಳು ಗಂಗೆ
ನಮ್ಮ ............. ರಿಗೆ ನಾ ಕಾಣದಿದ್ದರೆ ಸಾಕು
ಏಳುತ್ತಾರೆ ಎಂದಿಲ್ಲದ ದಂಗೆ.

೧೬೧೯. ಪಾಂಡವರಿಗೆ ಭೂಮಿ ಕೊಡದೆ ಕೆಟ್ಟವನು ದುರ್ಯೋಧನ
ಕುಂತಿಗೆ ಮಾತು ಕೊಟ್ಟು ಕೆಟ್ಟವನು ದಾನಶೂರಕರ್ಣ
ದ್ರೌಪತಿಯ ಸೀರೆ ಸೆಳೆ ಸೆಳೆದು ಕೆಟ್ಟವನು ದುಶ್ಯಾಸನ
ಸೀತಾಪಹರಣ ಮಾಡಿ ಅಶೋಕವನದಲ್ಲಿಟ್ಟು ಮುಟ್ಟದೇ ಕೆಟ್ಟವನು ರಾವಣ
ಎಂಥ ಸಂಕಟ ಕಾಲದಲ್ಲೂ ನನ್ನ ಕೈಹಿಡಿದು ನಡೆಸಿದವರು ........

೧೬೨೦. ರಾಮಾಯಣ ಮಹಾಕಾವ್ಯ ಬರೆದವನು ವಾಲ್ಮಿಕಿ ಋಷಿ
ಮಹಾಭಾರತ ಮಹಾಕಾವ್ಯ ಬರೆದವನು ವ್ಯಾಸ ಮಹರ್ಷಿ
ನಾನು ನಮ್ಮ ................ರು ಕಟ್ಟಾರ ನನಗಾಗಿ ಅರಮನಿ.

೧೬೨೧. ದಶರಥನು ಕಟ್ಟಬಯಸಿದ್ದನು
ರಾಮಚಂದ್ರನಿಗೆ ಪಟ್ಟ
ಪ್ರಜೆಗಳೆಲ್ಲರು ಆಗಿದ್ದರು
ಅದಕೆ ಭಾರಿ ಸಂತುಷ್ಟ
ನಮ್ಮ ........... ರಿಗೆ ಒಡಪಿಟ್ಟು ಹೇಳುವುದೇ ಕಷ್ಟ.

೧೬೨೨. ರಾಮನು ಸೀತೆ ಲಕ್ಷ್ಮಣ ಕೂಡ
ವನವಾಸಕ್ಕೆ ಹೋದದ್ದು ಮಲತಾಯಿ ಕೈಕೆಯಿಂದ
ನಮ್ಮ ................ರ ಹೆಸರು ಹೇಳುವೆನು
ಹಿರಿಯರ ಪುಣ್ಯ ಫಲದಿಂದ.

೧೬೨೩. ಪಂಚಪತಿವ್ರತೆಯಲ್ಲಿ ಒಬ್ಬಳು ಅಹಲ್ಯೆ
ನಾನು ನಮ್ಮ ..............ರ ಹೆಸರ ಹೇಳುವೆ ನಿಮ್ಮ ನಮ್ಮುಖದಲ್ಲೆ.

೧೬೨೪. ಸೀತೆ ಲಂಕಾದಲ್ಲಿದ್ದಾಗ
ರಾಮಚಂದ್ರನ ನೆನಪಿಗಾಗಿ
ಕೊಟ್ಟನು ವಜ್ರದುಂಗುರ
ನನಗೆ .............ರೆ ಆನಂದ ಸಾಗರ.

೧೬೨೫. ಸೀತಾದೇವಿ ವನವಾಸದಲ್ಲಿದ್ದಾಗ
ಬಿದ್ದಿತ್ತು ಶ್ರೀರಾಮನ ಕನಸು
ನಮ್ಮ ................ರು ಮಾಡಿದ್ದಾರೆ ನನ್ನ ಕನಸೆಲ್ಲ ನನಸು.

೧೬೨೬. ಹನುಮಂತನಿಗನ್ನುವರು ವಾಯುಪುತ್ರ
ನಮ್ಮ ..............ರ ಅನ್ನುತ್ತಾರೆ ಬಾ ಹತ್ತಿರ.

೧೬೨೭. ಹನುಮಂತನು ಸೀತೆಗೆ ಲಂಕಾದಲ್ಲಿ ಕೊಟ್ಟಿದ್ದು ಚೂಡಾಮಣಿ
ನನಗೆ ನಮ್ಮ ................ರು ಕಟ್ಟಿದ್ದು ಅಪೂರ್ವ ಕರಿಮಣಿ.

೧೬೨೮. ಹನುಮಂತನು ಲಂಕೆಗೆ ಬೆಂಕಿ ಇಟ್ಟಾಗ
ಲಂಕಾದ ಪ್ರಜೆಗಳೆಂದರು ಇದೊಂದು ಕೋತಿ
ನನಗೆ ನಮ್ಮ .................ರು ಹೆಸರಿಟ್ಟಿದ್ದಾರೆ ಪ್ರೀತಿ.

೧೬೨೯. ಋಷಿಯ ಶಾಪದಿಂದ ಕಲ್ಲಾದ ಅಹಲ್ಯೆ
ಮತ್ತೆ ಸ್ತ್ರೀ ರೂಪ ಪಡೆದದ್ದು
ಶ್ರೀರಾಮಚಂದ್ರನ ಪಾದಸ್ಪರ್ಶದಿಂದ
ನಾನು ನಮ್ಮ ............ ರನ್ನ ಪೂಜಿಸುವೆ ಭಕ್ತಿಯಿಂದ.

೧೬೩೦. ಶ್ರೀರಾಮಚಂದ್ರನು ತಂದೆಯ ಮಾತು ಪಾಲಿಸಿದನು
ಪಿತೃವಾತ್ಸಲ್ಯ ಭಕ್ತಿಯಿಂದ
ನುಡಿದ ಮಾತಿನಂತೆ ನಡೆದ ಹರಿಶ್ಚಂದ್ರನು
ಹೊಲೆಯನ ಆಳಾಗಿ ಸ್ಮಶಾನಕಾಯ್ದನು
ಪಾಪಿಷ್ಟ ಮುನಿಯ ವಿಧಿ ಆಟದಿಂದ
ನಾನು ನಮ್ಮ ...............ರ ಹೆಸರು ಹೇಳುತ್ತಿದ್ದೇನೆ
ಸರಿಯಾಗಿ ಐವತ್ತು ವರ್ಷಗಳಿಂದ.

೧೬೩೧. ಹನುಮಂತನು ಸೀತೆಯನ್ನು ಹುಡುಕುವುದು
ರಾವಣನ ಲಂಕೆಯಲ್ಲಿ
ನಮ್ಮ ...............ರು ನನ್ನನ್ನು ಹುಡುಕುವುದು
ತವರಮನಿ ಬಂಕಾಪುರದಲ್ಲಿ.

೧೬೩೨. ರಾವಣನು ಸೀತೆಯನ್ನು ಕದ್ದೊಯ್ದ ಸುದ್ದಿ
ರಾಮನಿಗೆ ಗೊತ್ತಾದದ್ದು ಜಟಾಯು ಪಕ್ಷಿಯಿಂದ
ನಮ್ಮ ...................ರು ನನ್ನ ಕೈಹಿಡದದ್ದು ದೇವರ ಸಾಕ್ಷಿಯಿಂದ.

೧೬೩೩. ಕ್ಷತ್ರಿಯ ಕುಲ ನಾಶಕ್ಕಾಗಿ ಪಣ ತೊಟ್ಟನು ಪರಶುರಾಮ
ನನ್ನ ಮಕ್ಕಳ ಸುಖಕ್ಕಾಗಿ ನಮ್ಮ ............ರು ನಡೆಸಿದ್ದಾರೆ ಬಲು ಪರಿಶ್ರಮ.

೧೬೩೪. ಅಣ್ಣ ತಮ್ಮಂದಿರಿರಬೇಕು ರಾಮಲಕ್ಷ್ಮಣ ಭರತರಂತೆ
ಗೆಳೆತನವಿರಬೇಕು ದುರ್ಯೋಧನ ಕರ್ಣರಂತೆ
ಸ್ವಾಮಿಗಳಿರಬೇಕು ತಪೋನಿಷ್ಠ ಸಿದ್ಧಗಂಗಾ ಶ್ರೀಗಳಂತೆ.
ನನ್ನ ...............ರಿದ್ದಾರೆ ಅನುಭಾವಿ ಶರಣರ ನಡೆನುಡಿ ನೆರಳಿನಂತೆ.

೧೬೩೫. ಗದುಗಿನ ಮಹಾಭಾರತ ಬರೆದವನು ಕುಮಾರವ್ಯಾಸ
ದಾಸರಲ್ಲಿ ಶ್ರೇಷ್ಠರಾದವರು ಪುರಂದರದಾಸ
ಉಡುಪಿಯಲ್ಲಿ ಕನಕನ ಕಿಂಡಿಗೆ ಹೆಸರಾದವರು ಕನಕದಾಸ
ಬಂಗಾರ ಒಂಕಿ ತರಬೇಕಂತ ನನ್ನ ............ರು ರಮಿಸಿ
ಮಾಡುತ್ತಲೇ ಬಂದಿದ್ದಾರೆ ಭಾರಿ ಮೋಸ.

೧೬೩೬. ಕುಮಾರವ್ಯಾಸನು ಮಹಾಭಾರತ ಕಾವ್ಯ ಬರೆದದ್ದು
ಗದುಗಿನ ವೀರನಾರಾಯಣನ ಸಮ್ಮುಖದಲ್ಲಿ
ನನ್ನ .............ರು ಊರಿಗೆ ಹೋದಾಗ
ಅವರನ್ನು ನಾನೆನೆವೆ ಕನಸಿನಲ್ಲಿ

೧೬೩೭. ಶ್ರೀಕೃಷ್ಣ ಪರಮಾತ್ಮನು ಜನಿಸಿದ್ದು ಗೋಕುಲದಲ್ಲಿ
ಅವನು ಬೆಳೆದದ್ದು ಮಥುರೆಯಲ್ಲಿ
ರಾಜ್ಯಭಾರ ಮಾಡಿದ್ದು ದ್ವಾರಕೆಯಲ್ಲಿ
ನಮ್ಮ ...................ರ ಹೆಸರ ಹೇಳುವೆನು
ಮದುವೆ ಮಂಟಪದಲ್ಲಿ.

೧೬೩೮. ಶ್ರೀಕೃಷ್ಣನು ಹುಟ್ಟುವ ಕಾಲಕ್ಕೆ
ದೇವತೆಗಳು ಸುರಿಸಿದರು
ಪುಷ್ಪ ವೃಷ್ಟಿ ಸುರಿಮಳೆ
ಆಗ ಭೂಮಂಡಲ ತುಂಬ
ಸಮೃದ್ಧಿಯಾಗಿತ್ತು ಧನ ಧಾನ್ಯ ಬೆಳೆ
ನಮ್ಮ ................ರ ದಯೆಯಿಂದ
ನಾ ತೊಟ್ಟಿರುವೆ ಹಸಿರು ಬಳೆ.

೧೬೩೯. ಶ್ರೀಕೃಷ್ಣನು ಗೋಪಿಕಾ ಸ್ತ್ರೀಯರ ಸಂಗಡ
ಜಲಕ್ರೀಡೆಯಾಡಿದ್ದು ಯಮುನಾ ನದಿ ತೀರದಲ್ಲಿ
ನನ್ನ ................ ಮದುವೆಯಾದದ್ದು ಕೂಡಲಸಂಗಮದಲ್ಲಿ.

೧೬೪೦. ಶ್ರೀಕೃಷ್ಣನು ಗೋಕುಲದಲ್ಲಿ
ಕದಿಯುತ್ತಿದ್ದನು ಗೋಪಿಯರ ಬೆಣ್ಣೆ
ನಾನು ನಮ್ಮ ................ರಿಗೆ ಹಚ್ಚುವೆನು ಸುಗಂದದೆಣ್ಣೆ.

೧೬೪೧. ಶ್ರೀಕೃಷ್ಣನ ತುಂಟಾಟಕ್ಕೆ ಯಶೋಧೆ ಕಟ್ಟಿದಳು ಕಂಬಕ್ಕೆ
ನಾನು ನಮ್ಮ ............ರಿಗೆ ಹೆದರುವೆ ಅವರ ಜಂಬಕ್ಕೆ.

೧೬೪೨. ಸುಧಾಮನು ಭಕ್ತಿಯಿಂದ
ಶ್ರೀಕೃಷ್ಣನು ತಿಂದನು ಅವಲಕ್ಕಿ
ನಾನು ..............ರಿಗೆ ಕೊಡುವೆ ಕರದವಲಕ್ಕಿ.

೧೬೪೩. ಶ್ರೀಕೃಷ್ಣನು ರುಕ್ಮಿಣಿಗೆ ಬರೆಯಲು ಕಲಿಸಿದ್ದು
ಹವಳಮುತ್ತು ಸುಟ್ಟ ಮಸಿಯಿಂದ
ನಾನು .............. ರಿಂದ ಬರೆಯಲು ಕಲಿತೆ
ಪಾಟಿ ಪೆನ್ಸಿಲ್ಲು ಟಾಕು ದೌತಿ ಮಸಿಯಿಂದ.

೧೬೪೪. ಪಾಂಡವರು ಕೌರವರು ಆಡಿದ್ದು ಪಗಡೆ ಆಟ
ನಮ್ಮ ............. ಯಜಮಾನ್ರು ನನ್ನ ಕೂಡ ಮಾಡ್ತಾರ ಹುಡುಗಾಟ.

೧೬೪೫. ಶ್ರೀಕೃಷ್ಣ ಪರಮಾತ್ಮನು ಯಾವತ್ತೂ ಭಕ್ತರ ಸೊತ್ತು
ನನ್ನ ಹಸುಗೂಸು ಮಗ ಅತ್ತರೆ ಕಣ್ಣೀರೆ ಮುತ್ತು
ನಾನು ನಾನೆಲ್ಲ ಚೆನ್ನಾಗಿ ಬಲ್ಲೆ ನಮ್ಮ .............ರ ಗತ್ತು.

೧೬೪೬. ಸುಭದ್ರೆಯ ಪರೀಕ್ಷೆಗಾಗಿ
ಶ್ರೀಕೃಷ್ಣ ಕಚ್ಚಿಕೊಂಡ ತನ್ನ ಬೆರಳು
ನನ್ನ ಮೇಲೆ ಇರುವುದು
ಯಾವತ್ತೂ ನಮ್ಮ ..............ರ ಕರುಳು.

೧೬೪೭. ಪಾಂಡವರನ್ನು ಸುಟ್ಟು ಬಿಡಲು
ಕೌರವನು ಕಟ್ಟಿಸಿದರು ಅರಗಿನ ಮನೆ
ನಮ್ಮ ............. ರು ಕಟ್ಟಿಸಿದ್ದಾರೆ ನನಗಾಗಿ
ಬಂಗಾರದಚ್ಚಿನ ಅರಮನೆ.

೧೬೪೮. ಅರಗಿನ ಅರಮನೆಯಿಂದ
ಪಾಂಡವರು ಪಾರಾದರು ಯುಕ್ತಿಯಿಂದ
ನಮ್ಮ .................ರನ್ನು ಸದಾ ಪೂಜಿಸುವೆ ಭಕ್ತಿಯಿಂದ.

೧೬೪೯. ದುರ್ವಾಸಮುನಿಯು ಅರ್ಧರಾತ್ರಿಯಲ್ಲಿ ಬಂದು
ಪಾಂಡವರನ್ನು ಬೇಡಿದ್ದು ಅನ್ನದಾನ
ದುಶ್ಶಾಸನ ಸೀರೆ ಸೆಳೆಯುವ ಹೊತ್ತಿನಲ್ಲಿ
ಶ್ರೀಕೃಷ್ಣನು ಕಾದನು ದ್ರೌಪತಿಯ ಮಾನ
ಶುಭಮುಹೂರ್ತದಲ್ಲಿ ನನ್ನ ತಂದೆ ತಾಯಿ ಮಾಡಿದರು
ನನ್ನ .............. ರಿಗೆ ಕನ್ಯಾದಾನ.

೧೬೫೦. ಅರ್ಜುನನು ಬ್ರಹನ್ನಳೆ ರೂಪದಲ್ಲಿ
ಕಲಿಸಿದನು ಉತ್ತರೆಗೆ ನಾಚು
ನಾನು ................. ರಿಗೆ ಕೊಡುವೆ ಎಲೆಡಿಕೆ ಕಾಚು.

೧೬೫೧. ಗೋಗ್ರಹಣದಲ್ಲಿ ಉತ್ತರಕುಮಾರನು
ಹೆಂಗಸರ ಎದುರು ತೋರಿದನು ಒಣ ಪರಾಕ್ರಮ
ನಾನು ನನ್ನ ಯಜಮಾನ .............ರ ನಡುವೆ ನಡೆಯುವುದು
ಯಾವಾಗಲೂ ಸಕ್ರಮ ಅಕ್ರಮ.

೧೬೫೨. ಮಹಾಭಾರತ ಬರೆದವನು ವ್ಯಾಸಮುನಿ
ರಾಮಾಯಣ ಬರೆದವನು ವಾಲ್ಮಿಕಿಮುನಿ
ನನ್ನ ................. ರ ಗುಣ ಅಂದರೆ ಹಾಲ ಮೇಲಿನ ಕೆನಿ.

೧೬೫೩. ಭೀಮನಿಗೆ ಗಧೆ ಚೆಂದ
ಕೃಷ್ಣನಿಗೆ ಕೊಳಲು ಚೆಂದ
ಅರ್ಜುನನಿಗೆ ಬಿಲ್ಲು ಬಾಣ ಚೆಂದ
ನನ್ನ ............. ರ ಕೊರಳಿಗೆ ಚೈನ ಚೆಂದ.

೧೬೫೪. ಭೀಮನು ಹೆಣ್ಣಿನ ರೂಪ ಹಾಕಿದ್ದು
ದುಷ್ಟ ಕೀಚಕನ ವಧೆಗಾಗಿ
ನಾನು ನಮ್ಮ .................ರ ಹೆಸರ ಹೇಳುವೆನು
ನನ್ನ ಗೆಳತಿಯರಿಗಾಗಿ.

೧೬೫೫. ಪಾಂಡವರು ತಮ್ಮ ಆಯುಧಗಳನ್ನು
ಬಚ್ಚಿಟ್ಟರು ಬನ್ನಿ ಗಿಡದಲ್ಲಿ
ನಾನ್ನು .............ರ ಹೆಸರು ಹೇಳುವೆನು
ಇಲ್ಲಿ ತುಂಬಿದ ಭವ್ಯ ಸಭೆಯಲ್ಲಿ.

೧೬೫೬. ದುಶ್ಯಂತ ಶಾಕುಂತಲ ಗಾಂಧರ್ವ ವಿವಾಹವಾಗಿದ್ದು
ರಮಣೀಯವಾದ ವನರಾಶಿಯಲ್ಲಿ
ನಾನು ನನ್ನ ........ರ ಹೆಸರು ಹೇಳುವೆನು
ನಾವೆಲ್ಲರು ಚರಗಾ ಚೆಲ್ಲುವ ಜೋಳದ ಹೊಲದಲ್ಲಿ.

೧೬೫೭. ಶಕುಂತಲೆಯು ಕಣ್ವರ ಶಾಪದಿಂದ
ದುಶ್ಯಂತನನ್ನು ಹುಡುಕಲು ಹೊರಟಳು
ಭಾರಿ ದುಃಖದಿಂದ
ಸಖಿಯರು ಹೂ ಗಿಡ ಮರಗಳು ಅತ್ತವು
ಅಗಲಿಕೆಯ ವೇದನೆಯಿಂದ
ನಾನು ..........ರ ಹೆಸರು ಹೇಳುವೆನು
ನಿಮ್ಮೆಲ್ಲರ ಪ್ರೀತಿಯಿಂದ.

೧೬೫೮. ಕಣ್ವಋಷಿ ಆಶ್ರಮದಲ್ಲಿ
ಶಕುಂತಲೆ ಗೆಳೆತಿಯರೊಂದಿಗೆ
ಆಡುತ್ತಿದ್ದಳು ಪ್ರೀತಿಯ ಹುಡುಗಾಟ
ಆಗ ದುಶ್ಯಂತ ಮಹಾರಾಜನಿಗೆ ಕಂಡಿತು
ರೂಪರಾಶಿ ಶಕುಂತಲೆಯ ಕಣ್ಣಿನ ನೋಟ
ನನ್ನ ...............ರ ಹೆಸರು ಹೇಳುವೆ
ಸಾಕು ನಿಮ್ಮ ತಾಳಲಾರದ ಕಾಟ.

೧೬೫೯. ಹಂಪಿಯಲ್ಲಿರುವುದು ಕಡಲೆಕಾಳು ಗಣಪ
ಮನೆಗೆ ಮೂಲಾಗಿದ್ದಾನೆ ನನ ಗಂಡ ಟೊಣಪ .....

೧೬೬೦. ವಿರೂಪಾಕ್ಷ ದೇವರ ಗುಡಿ ಇರುವುದು ಹಂಪೆಯಲ್ಲಿ
ನಾನು .............. ರ ಮದುವೆಯಾಗಿ ಬಾಳಿದ್ದೇನೆ ಕೊಂಪೆಯಲ್ಲಿ.

೧೬೬೧. ಹದಿನಾರು ಕಂಬದ ಕೃಷ್ಣದೇವನ
ಗುಡಿ ಇರುವುದು ಹಂಪಿಯಲ್ಲಿ
ಆ ಕಂಬಗಳ ದನಿ ಕೇಳುವುದು ಕಿವಿಯಲ್ಲಿ
ನಾನು ........... ರ ಹೆಸರು ಹೇಳುವೆನು
ನನ್ನ ಮಗನ ನಾಮಕರಣ ವ್ಯಾಳೆಯಲ್ಲಿ.

೧೬೬೨. ಗೊಡಚಿ ವೀರಭದ್ರನಲ್ಲಿರುವುದು ಮಹಾಶಕ್ತಿ
ನಮ್ಮ ........... ರನ್ನು ಹುದ್ದಬಸ್ತಿನಲ್ಲಿಡಲು
ಹುಡುಕಿದ್ದೇನೆ ಯಾರಿಗೂ ತಿಳಿಯದ ಯುಕ್ತಿ.

೧೬೬೩. ಊರೂರಿಗೆ ಗುಡಿಗುಂಡಾರ ಕಟ್ಟಿದನು ಜಕಣಾಚಾರಿ
ಸುಳ್ಳಪಳ್ಳ ಹಣಕ್ಕ ಭವಿಷ್ಯ ಹೇಳ್ತಾನ ಊರಿನ ಆಚಾರಿ
ನನ್ನ ಗಂಡ .........ರಿಗೆ ಗ್ಯಾನ ಇಲ್ಲದ್ದಕ್ಕ ನಮ್ಮನಿ ಹಾಳಾತು ಸೋರಿ.

೧೬೬೪. ಅದಃ ಮದುವಿ ಆಗಿ ಹನಿಮೂನಕ ಹೋಗಿ
ಹತ್ತತಾರ ನಲಿದಾಡಿ ಬೋಟು
ನನ್ನ ............. ರು ಊಟಕ್ಕ ಬರತಾರಂತ
ತಯಾರ ಮಾಡಿಟ್ಟೇನಿ ಅಡಿಗಿ ಮನ್ಯಾಗ ತಾಟು.

೧೬೬೫. ಹಾವೇರಿ ಪ್ಯಾಟಿ ಯಾಲಕ್ಕಿಗೆ ಪ್ರಸಿದ್ಧ
ನನ್ನ .........ರು ನಡೆನುಡಿ ಬಲು ಸುದ್ದ

೧೬೬೬. ಅಕ್ಕಿ ದ್ವಾಸಿ ಮಾಡೇನಿ
ಕೊಬ್ಬರಿ ಚಟ್ನಿ ರುಬ್ಬೀನಿ
ಸಟ್ನ ಬರ್ರಿ ಅಂದ್ರ ಪಟ್ನ ಎದ್ದು ಬರ್ತಾರ .....

೧೬೬೭. ಬಟಾಣಿ ಭಜಿ ಮಾಡಿನಿ ತಿನ್ನ ಅಂದ್ರ
ತಲಾಟಿ ಕರೀತೀನಿ ತಡಿ ಅಂತಾರ .....

೧೬೬೮. ಮಾವಿನ ಹಣ್ಣಿನ ಸೀರಕರಣಿ
ಕಡ್ಲಿ ಹೂರಣದ ಹೋಳಿಗಿ
ಕರದ ಹಪ್ಪಳಾ ಸಂಡಿಗಿ
ಹಬ್ಬಾ ಮಾಡೇನಿ ಉಣ್ಣಾಕ ಬರ್ರಿ ಅಂದ್ರ
ಹುಬ್ಬು ಹಾರಿಸಿಗೋತ ಹಲ್ಲಾಗ ನಗತಾರ ....

೧೬೬೯. ಕಟಗ ರೊಟ್ಟಿ ಗುರೆಳ್ಳ ಹಿಂಡಿ
ಹೊಲ್ದಾನ ಹಕ್ಕಿರಕಿ ತಂದ
ಅಡಿಗಿ ಮನ್ಯಾಗ ಕುಕ್ಕುರಸತಾರ ....

೧೬೭೦. ಸಾಬೂದಾನಿ ಒಡಿ ಮಾಡಂತಾರ
ಚಟ್ನಿ ಮಾಡೂದ್ರೊಳಗ ಚೌಕಾಸಿ ಮಾಡ್ತಾರ ....

೧೬೭೧. ಗಳೇಕ ಹೋಗಿ ಹಸ್ತ ಬರ್ತಾರ
ಊಟಾ ಮಾಡೂ ಹೊತ್ತಿನ್ಯಾಗ
ಗೆಳೆಯಾರ್ನು ಕರಕೊಂಡು ಫರಾಳಾ ಮಾಡ್ತಾರ ....

೧೬೭೨. ಲಕ ಲಕ ಬೂಟು
ಜರದ್ದಡಿ ಕೋಟು
ಪ್ಯಾಟ್ಯಾಗ ನಿಂತ
ಫೋಟೋ ತಗಿಸಿಕೊಂತಾರ .....

೧೬೭೩. ಕಾಂಕ್ರೀಟ ಮನಿ ಹಾಕಿಸ್ಯಾರ
ಕ್ರಿಕೆಟ್ ಆಟಕ್ಕ ಹೋಗ್ತಾರ
ಹೇಣ್ತಿ ರೊಕ್ಕಾ ಕೇಳ್ತಾರ .....

೧೬೭೪. ಆ ಕಟ್ಟು ಈ ಕಟ್ಟು
ಕೈಯಾಗೊಂದು ಚುಟ್ಟಿದ ಕಟ್ಟು
ಮಕಮಲ್ಲ ಧೋತ್ರ ಉಟ್ಟು
ತೆಲಿಗಿ ಕ್ರಾಪ ಬಿಟ್ಟು
ಕಟ್ಟಿಮ್ಯಾಲ ಕುಂತು ಕೊಬ್ಬರಿ ಬೆಲ್ಲ ತಿಂತಾರ ....

೧೬೭೫. ಬೆಳದಿಂಗಳ ಬೆಳಕು ಬಿದ್ದಿರಬೇಕು
ಕಣ್ಣಿಗೆ ಗಾಗಲ್ಲು ಹಾಕಿರಬೇಕು
ಕೈಯಾನ ಚತ್ತರಿ ಏರ್ಸಿರಬೇಕು
ಹಾಂಗ ನನ್ನ ...........ರು ಮೆರಿತಿರಬೇಕು.

೧೬೭೬. ನೆಹರು ಶರ್ಟು ಖಾದಿ ಟೋಪಿ
ಎದಿಮ್ಯಾಲ ಗುಲಾಬಿ ಹೂ ಇಟಗೊಂಡ
ಮದಬಂದವರಾಂಗ ಮೈಮ್ಯಾಲ ಬರ್ತಾರ .....

೧೬೭೭. ಪಟ್ಟಣದಾಗ ನೀರು ಹರಿಯೂದು ಗಟಾರ
ನಮ್ಮ ..............ರು ದಿನಾಬಾರ್ಸಿ ಜೀವತಿಂತಾರ ಗಿಟಾರ.

೧೬೭೮. ದುರದುಂಡಿ ದೇವರಿಗೆ ದೀಡ ನಮಸ್ಕಾರ ಹಾರ್ತಾರ
ನೆರೆಮನಿ ದುಂಡ ಹುಡುಗಿ ಕಂಡ ಹುಬ್ಬು ಏರಿಸ್ತಾರ ....

೧೬೭೯. ಉಳ್ಳವರಿಗೆ ಕೊಡೂದು ಬಿಟ್ಟು ರೇಶನ್
ದುಡಿಯೂದು ಬಿಟ್ಟು ಬಡವ್ರು
ಮಾಡಾಕ ಕಲ್ರ ಫ್ಯಾಶನ್
ನಮ್ಮ ..........ರಿಗೆ ದೇವರು ಸಹಿತ
ಕೇಳಾಕ ನಿಂತಾವ ಕಮೀಶನ್.

೧೬೮೦. ಕೊಲ್ಲಾರಿ ಬಂಡಿ ಓಣ್ಯಾಗ ಬಿಟ್ಟು
ಗರಿ ಗರಿ ಧೋತ್ರ, ಪಟಗ ಚುಂಗ್ ಬಿಟ್ಟು
ಕಾರಗಾಡಿ ತಗೊಂಡು ಕರಿಯಾಕ ಬರ್ತಾರ .....

೧೬೮೧. ಆಕಾಶದಲ್ಲಿ ಹಾರಾಡುವವು ವಿಮಾನ
ಸತ್ತವರನ್ನು ಕುಂದ್ರೀಸಿ ಒಯ್ಯೋದು ಇಮಾನ
ನನ್ನ ........... ರ ಹೆಸರ ಹೇಳಿದ್ರ
ನೀವೇನ್ ಕೊಡ್ತಿರಿ ಬಹುಮಾನ.

೧೬೮೨. ತಂಗಳ ರೊಟ್ಟಿಗೆ ಬೇಕು ಮೊಸರು
ನಳ ಬಂದು ಹಳ್ಳೀ ಓಣಿ ತುಂಬ ಕೆಸರು
ನಾನು ಅಭಿಮಾನದಿಂದ ಹೇಳುವೆ ನನ್ನ .....ರ ಹೆಸರು.

೧೬೮೩. ಎಡಗೈಯಾಗ ವಾಚು
ಬಲಗೈಯಾಗ ಮೊಬಾಯಿಲ್ಲು
ಬಗಲಾಗೊಂದು ರೇಡಿಯೋ
ನನ್ನ ಕರಿಲಾಕ ಬಂದು ಒಣರಾಡಿ ಕೊಚ್ಚತಾರ ....

೧೬೮೪. ಮನೀಗೆ ಬಂದೈತಿ ಗ್ಯಾಸು
............ ರು ನನ್ನ ಬಿಟ್ಟು
ಇರೂದಿಲ್ಲ ಒಂದ ತಾಸು.

೧೬೮೫. ಚೆಲುವಿ ನನ್ನ ತಂಗಿ ಬಂದ್ರ
ಇಂಗ್ ತಿಂದವರಾಂಗ ಗುಂಗಿನ್ಯಾಗ ಇರ್ತಾರ ....

೧೬೮೬. ಅಂಗೈಯಾಗ ಆರು ಕಾಗದ
ಮುಂಗೈಯಾಗ ಮೂರು ಕಾಗದ
ಬಂಗಾರ ಕುರ್ಚಿಮ್ಯಾಲ ಕುಂತ
ಇಂಗ್ಲೀಷ್ ಕಲಿತಾರ .....

೧೬೮೭. ಓದಿ ಕೆಟ್ಟ ಕೂಚು ಭಟ್ಟ ಅಂತಾರಾ
ನನ್ನ ........... ರು ದುಡಿಯೂದು ಬಿಟ್ರು
ಕುಂತ ಕೆಟ್ಟೆಲ್ಲಾ ಅಂತಾರ .....

೧೬೮೮. ಸಾಲಿ ಕಲ್ತಾರ ರಾಜಕೀ ಮಾಡ್ತಾರ
ಹಣ ಅಂದ್ರ ಹೆಣಾ ಆಗ್ತಾರ .....

೧೬೮೯. ಹರಿಯೂದ ಹೊಳಿ
ರೈಲುಗಾಡಿ ಹೋಗೂದು ಹಳಿ
ಪೀಕು ಕೆಡಿಸೂದು ಅಡ್ಡಮಳಿ
ನಮ್ಮ ...............ರು ಅಂತಾರ
ನನಗ ಮಾತಿನ ಗಿಳಿ.

೧೬೮೦. ಸಾಧನ ಕೇರಿ ಕೆರ್‍ಯಾಗ ಹಾಡಿಗೆ ಕುಣೀತಾವು ಕಾರಂಜಿ
ನಾನು ...........ರಿಗೆ ನಡೆವೆ ಅತ್ತಿ ಮಾವಗ ಅಂಜಿ.

೧೬೮೧. ಅಂಗೈಯಾಗ ಅರಿಷಿಣ ಬೊಟ್ಟು
ಮುಂಗೈಯಾಗ ಬಂಗಾರ ಬಳಿ ತೊಟ್ಟು
ಗಂಗಾಳದಾಗ ರಂಗೋಲಿ ಹಾಕಾಕ ಹೋದ್ರ
ಸಂದ್ಯಾಗ ಬಂದು ಸೊನ್ನಿ ಮಾಡ್ತಾರ ....

೧೬೮೨. ನೀತಿ ನಡೆತೆಯ ಬೆಳಕು
ಪ್ರೀತಿ ಹೃದಯದ ಬೆಳಕು
ರೀತಿ ಸಂಸಾರದ ಬೆಳಕು
ಜ್ಯೋತಿ ಮನೆಯ ಬೆಳಕು
ನನ್ನ ಕಣ್ ಮನಕೆ ನನ್ನ ..........ರೇ ಬೆಳಕು.

೧೬೮೩. ಹೆಣ್ಣಿಗೆ ಕುಂಕುಮವೇ ಸಿಂಗಾರ
ತೋಟಕ್ಕೆ ಹೂ ಹಂದಿರವೇ ಸಿಂಗಾರ
ನಮ್ಮ ಮನೆಗೆಲ್ಲಾ ನನ್ನ ...........ರೇ ಸಿಂಗಾರ.

೧೬೮೪. ಅಲ್ಪನಿಗೆ ಸಿರಿತನ ಬಂದ್ರ
ಸವರಾತ್ರ್ಯಾಗ ಕೊಡಿ ಹಿಡಿಸಿಕೊಂಡ
ಗೊತ್ತಗೇಡಿ ಕೂಡ ಗೊತ್ತಿಲ್ದ ಲಗ್ನ ಆಗಿ
ನಾನೇನು ..........ರಿಂದ ಬಳಕೊಂಡೆ.

೧೬೮೫. ಅತಿ ಆಶೆ ಗತಿಗೆಡಿಸಿತು
ದುಷ್ಟರ ಸಂಗವೇ ನನ್ನ ............ರ ಮತಿ ಕೆಡಿಸಿತು.

೧೬೮೬. ಹುಬ್ಬಳ್ಳಿ ಕರ್ನಾಟಕದಲ್ಲೊಂದು ದೊಡ್ಡ ಸಿಟಿ
ಧಾರವಾಡದಲ್ಲಿದೆ ಕರ್ನಾಟಕ ಯುನಿವ್ವರ್ಸಿಟಿ
ನನ್ನ ............ ರಾಯರು ಸುಮ್ನ ಕೊಡತಾರ ಕಟಿಪಿಟಿ.

೧೬೮೭. ರಸವೆ ಜನನ ವಿರಸ ಮರಣ
ಸಮರಸವೇ ಜೀವನ ಅಂದರು ಬೇಂದ್ರೆ
ನಾ ಪ್ರೀತಿಲಿಂದ ಸಕ್ಕರಿ ಹಾಲು ತಂದ್ರೆ.
ನಮ್ಮ ಸುಖಮುನಿ ...........ರು ದಿಮಾಕ ಮಾಡ್ತಾರ

೧೯೮. ಬೆಣ್ಣಿ ದೋಸಿಗೆ ದಾವಣಗೆರೆ ಪ್ರಸಿದ್ಧ
ಕುಂದಾ ಬೇಕಾದ್ರ ಬೆಳಗಾವಿ ಪ್ರಸಿದ್ಧ
ಪೇಡೆ ಬೇಕಾದ್ರ ಧಾರವಾಡ ಪ್ರಸಿದ್ಧ
ಕರದಂಟು ಬೇಕಾದ್ರ ಗೋಕಾಕ ಪ್ರಸಿದ್ಧ
ಅಲ್ಲಿ ಪೇಡೆ ಬೇಕಾದ್ರ ಅವೀನಗಡ ಪ್ರಸಿದ್ಧ
ಸುಳ್ಳು ತಗಲು ಹೇಳಾಕ ನಮ್ಮ ............ರು ಪ್ರಸಿದ್ಧ.

೧೯೯. ದ್ವಾಸಿ ಬೇಕಂತಾರ
ಹಾಸಿಗಿ ಹಿಡಿದು ಮಲಗತಾರ .....

೧೨೦೦. ಕ್ರಾಪು ಮಾಡ್ಸೂದು ಬಿಡಂಗಿಲ್ಲ
ಹೇನು ಬಿದ್ರೂ ಹೇಸಂಗಿಲ್ಲ
ಹೆಂಗಸೂರ್‍ನ ಕರದ ಕಾನೂನು ಹೇಳ್ತಾರ ....

೧೨೦೧. ಇಂಗ್ಲೀಷಿನ್ಯಾಗ ಗುಲಾಬಿಗೆ ಅಂತಾರ ರೋಜ್
ಹಿಂದ್ಯಾಗ ವರದಕ್ಷಿಣಕ್ಕ ಅಂತಾರ ದಹೇಜ್
ನನ್ನ ..............ರ ಗುಡಿಯಾಗಾತು ಮ್ಯಾರೇಜ್.

೧೨೦೨. ಜೀವನದಾಗ ನೋಡಬೇಕಂತಾರ
ಜೋಗದ ಗುಂಡಿ
ನಮ್ಮ ............ರಿಗೆ ಬೆನ್ನು ಬಿದ್ದಾಳ
ಗಂಡ ಇಲ್ಲದ ಹುಚಮುಂಡಿ.

೧೨೦೩. ತ್ರೀ ಇಂಟು ತ್ರೀ ನೈನ್
ನನ್ನ ಹಜಬಂಡ ವ್ಹೇರಿ ಫೈನ್ .........

೧೨೦೪. ಹರಿಶ್ಚಂದ್ರ ಘಾಟ ಇರುವುದು ಕಾಸಿಯಲ್ಲಿ
ಹರಿಶ್ಚಂದ್ರ ಕಾವ್ಯ ಇರುವುದು ರಾಘವಾಂಕ ಹೆಸರಿನಲ್ಲಿ
ಸತ್ಯ ಹರಿಶ್ಚಂದ್ರನಂಥ ನನ್ನ .............ರು ಇರುವುದು.
ಸುರ ಸುಂದರಿಯರ ತೋಳಿನಲ್ಲಿ.

೧೨೦೫. ಒಂದೆತ್ತು ಒಂದೆಮ್ಮಿ ಹೂಡ್ತಾರ
ಹ್ಯಾಂಗೋ ಬಾಳೇ ನಡೆಸ್ಯಾರ .....

೧೨೦೬. ಶಿವನಿಗೆ ಅಂತಾರ ಶಂಕರ
ವಿಷ್ಣು ಉಡುವುದು ಪೀತಾಂಬರ
ನನ್ನ ............. ರೇ ನನ್ನ ಪಾಲಿನ ಪರಮೇಶ್ವರ.

೧೭೦೭. ವಸಂತ ಮಾಸದಲ್ಲಿ ಕೋಗಿಲೆಯ ಹಾಡೇ ಹಾಡು
ನಮ್ಮ ............... ರಿಂದ ನನ್ನ ಬಾಳು ನಾಯಿ ಪಾಡು.

೧೭೦೮. ಗುಡಿಗುಂಡಾರ ದೇವಸ್ಥಾನ ಪವಿತ್ರ
ನಮ್ಮ ...............ರು ಮನೆಯಲ್ಲಿದ್ದರೆ ಕುರುಕ್ಷೇತ್ರ.

೧೭೦೯. ಹೇಣ್ತೀಗೆ ಅಂತಾರ ಹಿಂದ್ಯಾಗ ಪ್ಯಾರಿ
ದಿನಚರಿಗೆ ಇಂಗ್ಲೀಷಿನ್ಯಾಗಂತಾರ ಡಾಯರಿ
ಶಿವಶಂಕರನ ಪತ್ನಿಗಂತಾರ ಗೌರಿ
ದಾಸಶ್ರೇಷ್ಠರಲ್ಲಿ ಒಬ್ಬನಿದ್ದಾನೆ ನರಹರಿ
ವಧಾಕಂಭದ ತಳಿರ ತಿನ್ನೂದು ಹರಕೆಯ ಕುರಿ
ನಮ್ಮ .............ರು ಒಳ ಒಳಗ ಅದಾರ ಚೆಂಡಕನರಿ.

೧೭೧೦. ಲಂಗೋಟಿಗಂತಾರ ನಿಕ್ಕರ
ಅಬಸೆಂಟಿಗಂತಾರ ಗೈರ ಹಾಜರ
ಸರ್ವಂಟಿಗಂತಾರ ನೌಕರ
ನನ್ನ ............. ರು ಲವ್ವಗಂತಾರ ಠಕ್ಕರ.

೧೭೧೧. ಹಳದಿ ಬಣ್ಣಕ್ಕೆ ಹಿಂದ್ಯಾಗಂತಾರ ಪೀಲಾ
ಕೋಗಿಲ ಬಣ್ಣಕ್ಕ ಹಿಂದ್ಯಾಗಂತಾರ ಕಾಲಾ
ನಮ್ಮ ..............ರು ಶಿಷ್ಯಗಂತಾರ ಚೇಲಾ.

೧೭೧೨. ಮಟಮಟ ಮದ್ಯಾಣದಾಗ
ಮರಾಠಿ ಕಲ್ತ ಮನೀಗಿ ಬರ್ತಾರ
ಕನ್ನಡಿ ಅಂತಾ ಕನ್ನಡ ಕಲೀ ಅಂದ್ರ
ಕುರ್ಚಿ ಮ್ಯಾಗ ಕುಂತ ಕಿರಿಕಿರಿ ಮಾಡ್ತಾರ .....

೧೭೧೩. ನೀರು ಕಂಡಲ್ಲಿ ಜಳಕಾ ಮಾಡ್ತಾರ
ಅನ್ನ ಕಂಡಲ್ಲಿ ಊಟಾ ಮಾಡ್ತಾರ
ಹೆಂಗಸರು ಕಂಡಲ್ಲಿ ಅವರ ಹಿಂದ ಹೋಗ್ತಾರ .....

೧೭೧೪. ದನದ ಕೊಟಿಗ್ಯಾಗ ಬಡಿಗಿ ಹುಡಕ್ತಾರ
ಬಡಿಗಿ ಹುಡುಕಿ ನನ್ನ ಹುಡುಕ್ತಾರ .....

೧೭೧೫. ಗಂಡಬಿದರು ಬೇಕಂತ ಬಂಡಿವಾಡಕ್ಕೆ ಹೋಗಿ
ಬಿದುರು ಸಿಗಲಿಲ್ಲಂತ ಬಿಡಕಿ ಕರಕೊಂಡ ಬಂದಾರ ....

೧೭೧೬. ಹೊಲ ಮಾಡದದ ಹೋತು
ಸಾಲ ಕೇಳದ ಹೋತು
ನನ್ನ ..........ರ ಬಾಳೇಕ.
ಹೆಂಟಿಗಲ್ಲು ಹೇರಿತು.

೧೭೧೭. ಶಿವನಗುಟ್ಟು ಶಿವನೇ ಬಲ್ಲ
ನಮ್ಮ ...............ರ ಗುಟ್ಟು ದೇವರೇ ಬಲ್ಲ.

೧೭೧೮. ಋಷಿಗೆ ಕುಲವಿಲ್ಲ, ನದಿಗೆ ನೆಲೆಯಿಲ್ಲ
ನನ್ನ ..............ರ ನಡಿತೀಗೆ, ನನಗ ಬೆಳ್ತನಾ ನಿದ್ದಿಲ್ಲ.

೧೭೧೯. ಮೋಟು ಮರ ಗಾಳಿಗೆ ಮಿಂಡ
ಗಂಡುಳ್ಳ ನನ ಗಂಡ ಯಾರ ಪ್ರೀತಿ ಕಂಡ ......

೧೭೨೦. ವಿನಾಶಕಾಲೇ ವಿಪರೀತ ಬುದ್ಧಿ
ನನ್ನ .............ರು ತಿರುತಿರುಗಿ
ನುಂಗುತ್ತಾರೆ ಹದಿನೆಂಟು ಮುದ್ದಿ.

೧೭೨೧. ಮೂಗು ಇರೋತನ ನೆಗಡಿ ತಪ್ಪಲಿಲ್ಲ
ನನ್ನ ...........ರು ಇರೋತನ ದುಃಖ ತಪ್ಪಲಿಲ್ಲ.

೧೭೨೨. ಬಲ ಇಲ್ಲದಾಗ ನೆಲಾ ಎದ್ದು ಬಡೀತು
ನನ್ನ ............... ರು ಹೊಲಮನಿ ಹಗಲೇ ಹಾಳಾತು.

೧೭೨೩. ಮಾನವಂತರ ಮಗಳಾದ್ನಿ
ಶೀಲವಂತರ ಸೊಸೆಯಾದ್ನಿ
ಮುತ್ತಿನಂತಾ ಮಕ್ಕಳ ತಾಯಾದ್ನಿ
ಮುತ್ತೈದಿ ಶಾವಂತ್ರ್ಯಾದ್ನಿ
ಬಾಳೇವಂತರ ಮಡದಿಯಾದ್ನಿ .....

೧೭೨೪. ಸಣ್ಣನ ಶ್ಯಾವಿಗಿ, ಚಿನ್ನಿ ಸಕ್ಕರಿ
ಕಡ್ಲಿ ಮಾದ್ಲಿ ಕೊಬ್ಬರಿ ಕಡುಬು
ಕಸಿ ಕಸಿ ಹೋಳ್ಗಿ ಬಿಸಿ ಬಿಸಿ ವಡಿ
ಸುಳ್ಳಿ ಹೋಳ್ಗಿ ಸೋಸಿದ ತುಪ್ಪ
ಹೋಳ್ಗಿ ಸಾರ ಹಪ್ಪಳ ಸಂಡಿಗಿ
ಮುಂದು ಕುಂದರಿಸಿಗೊಂಡು ಊಟಕ್ಕ ನೀಡಿದರ
ಬಾಳಿ ಗಿಡದಾಗ ಬೇತಾಲಿ ತಿದ್ದಿಕೋತ ನಿಲ್ಲತಾರ ....

೧೭೨೫. ಜರದ ಶಲ್ಲೆ ಹೊತ್ತಾರ
ಅಂಗ್ಯಾಗ ಜರದ ಚಿತ್ತಾರ
ಹೊತ್ತಾರೆ ಎದ್ದು ಮುತ್ತ ತರಾಕ ಹೊರಡ್ತಾರ ....

೧೭೨೬. ಊಟಕ್ಕ ಹದಗಾರ
ಮಾತಿನ ಮೋಜದಾರ
ಪಾಚರದಾಕಿ ದಾಗದಾರಾ .....

೧೭೨೭. ಮೂಡಲಹೋರಿ
ಮುತ್ತಿನ ಮುಗದಾಣ
ಬೆಳ್ಳಿ ಸೆಡ್ಡಿ ಸೆಡ್ಡಿ ಕೋಲು
ಬಂಗಾರದಂತಾ ಬೀಜಾ ಬಿತ್ತಿ
ಸಿಂಗಾರದ ಬೆಳಿ ತಗಿತಾರ ....

೧೭೨೮. ಮುಗಲಾನ ಚಿಕ್ಕೀ ತಂದ
ಅಕ್ಕರ್ತೀಲೆ ಮುಡಿಸ್ತಾರ ಹೂ ನನಗ .....

೧೭೨೯. ಜೋಳದ ಕಿಚಡಿ ಗಜ್ಜರಿ ಪಚಡಿ
ಭರಮಪ್ಪಗ ದಾನಾ ಬಿಡ್ತಾರ ....

೧೭೩೦. ಶ್ರವಣಬೆಳುಗೊಳದಲ್ಲಿರುವುದು ಬಾಹುಬಲಿ ಮೂರ್ತಿ
ಭರತ ಅವನಣ್ಣ ಭಾರತದ ಚಕ್ರವರ್ತಿ
ನಾನು ನಮ್ಮ ...........ರಿಗೆ ಮಾಡುವೆನು ಆರತಿ.

೧೭೩೧. ನಾನು ಕುಂತೇನಿ ರೊಟ್ಟಿಗೆ
ಐನಾರು ಬಂದಾರ ಹಿಟ್ಟಿಗೆ
ನಮ್ಮ ರಾಯರು ಬರ್ತಾರ ಸಿಟ್ಟಿಗೆ .....

೧೭೩೨. ಕಣ್ಣಿಗೆ ನೋಡುವಾಸೆ
ಕಿವಿಗೆ ಕೇಳುವಾಸೆ
ಹೆಣ್ಣಿಗೆ ತವರಾಸೆ
ನನ್ನ ........... ರಿಗೆ ನನ್ನಾಸೆ.

೧೭೩೩. ಅಣ್ಣ ಬಂದಾನ ಆನಿಯೇರಿ
ತಮ್ಮ ಬಂದಾನ ಕುದುರಿ ಏರಿ
ಮಕ್ಕಳು ಬರ್ತಾರ ಮಂಡಿ ಊರಿ
ನಮ್ಮ ............ರು ಬರ್ತಾರ ಸಿಟ್ಟಿಗೇರಿ.

೧೭೩೪. ಜಾಜಿ ಮಲ್ಲಿಗಿ ಸೂಜಿ ಮಲ್ಲಿಗಿ
ದುಂಡ ಮಲ್ಲಿಗಿ ಮದ್ಯಾಣ ಮಲ್ಲಿಗಿ
ಆಕಾಶ ಮಲ್ಲಿಗಿ ವಿಕಾಸ ಮಲ್ಲಿಗಿ
ಎಲ್ಲಾ ಮಲ್ಲಗಿ ತಗೊಂಡು ಇಲ್ಲಿಗೆ ಬರ್ತಾರ .....

೧೭೩೫. ಮಂದಿಹಾಂಗ ಮಾಡೋರಲ್ಲ
ಯಾರ ಮನಿಗೂ ಹೋಗೋರಲ್ಲ
ನನ್ನ ಮಾರಿ ನೋಡ್ದ ಇರೋರಲ್ಲ ....

೧೭೩೬. ಸಾಲಾ ಮಾಡಿದವರಿಗೆ ತ್ರಿಶೂಲದ ನೆನಪು
ನನ್ನ ...........ರಿಗೆ ಕನಸಿನ್ಯಾಗೂ ಪಾತರದಾಕಿ ನೆನಪು.

೧೭೩೭. ಕ್ಯಾಷ್ ನಮ್ಮದಾದ್ರೂ ಕೌಂಟರ್ ನಮ್ಮದಲ್ಲ
ನನ್ನ ..............ರು ನನ್ನವರಾದ್ರೂ ಅತ್ತಿ ನನ್ನಾಕೆಲ್ಲ.

೧೭೩೮. ಅಡಕಿಗೆ ಹೋದ ಮಾನ
ಆನೆ ಕೊಟ್ಟರೂ ಬರೂದಿಲ್ಲ
ನನ್ನ .............ರ ಕೆಟ್ಟ ಬುದ್ಧಿಗೆ ಉಳಿಗಾವಿಲ್ಲ.

೧೭೩೯. ಹಂಚಿದವರಿಗೆ ಹಲ್ಲು ಉಳೀಲಿಲ್ಲ
ಹೊಲಸ ಬಾಳೇದ ........ರಿಗೆ ಕೊಳೆಗೇರಿ ತಪ್ಪಲಿಲ್ಲ.

೧೭೪೦. ನೇಯ್ಗೆ ಮಾಡಿದವನಿಗೆ ಕಂಬಳಿ
ಕೂಲಿ ಮಾಡಿದವನಿಗೆ ಸಂಬಳ
ನನ್ನ ........... ರಿಗೆ ಬರೊದೆಲ್ಲ ಸಿಂಬಳ.

೧೭೪೧. ದಾಸಯನಿಗೆ ದನಕರ ಇಲ್ಲ
ಆಸಾದಿಗೆ ಹೊಲ ಮನೆ ಇಲ್ಲ
ಸ್ಟೇಶನ್ ಮಾಸ್ತರಗ ನಿದ್ದಿಲ್ಲ
ಕೋಳಿ ಮೊಲಕ ಕೋಡಿಲ್ಲ
ನನ್ನ ............ರು ಸವತಿ ತಂದ್ರನಾ ಬಿಡಾಕೆಲ್ಲ.

೧೭೪೨. ಕುಂಬಾರನ ತಾಳಕ್ಕ ಕುಣಿದೇನು
ನನ್ನ ............ರ ತಾಳಕ್ಕ ಕುಣಿಲಾರೆ.

೧೭೪೩. ಬ್ರಾಹ್ಮಣರು ಮಾಡೂದು ಖಂಡಕ್ಕ
ಒಕ್ಕಲಿಗರು ಮಾಡೂದು ದಂಡಕ್ಕ
ಕೂಲಿಕಾರು ಮಾಡೂದು ಹೆಂಡಕ್ಕ
ನನ್ನ ............ ಯಜಮಾನರು ಮಾಡೂದು ಚಟಕ್ಕ.

೧೭೪೪. ಹೆಣ್ಣು ಕೆಟ್ಟ ಅನ್ನುವವ ಗಂಡಸಲ್ಲ
ಗಂಡು ಕೆಟ್ಟ ಅನ್ನುವಾಕಿ ಹೆಂಗಸಲ್ಲ
ಸೊಸಿ ಮ್ಯಾಲ ಮನಸಿಟ್ಟಾವ ಮಾವಲ್ಲ
ಮಾವನ ಮ್ಯಾಲ ಮನಸಿಟ್ಟಾಕಿ ಸೊಸೆಯಲ್ಲ
ಅತ್ತಿ ಇದ್ದ ಮನ್ಯಾಗ ಸೊಸಿ ಒಳ್ಳೇವಳಲ್ಲ
ಸೊಸಿ ಇದ್ದ ಮನ್ಯಾಗ ಅತ್ತಿ ಒಳ್ಳೇವಳಲ್ಲ
ಏನಿದ್ರೂ ನನ ಗಂಡ ತೊಳದ ಮುತ್ತಲ್ಲ ....

೧೭೪೫. ದಟ್ಟಿ ವ್ಯಾಪಾರ ಮಾಡಿ ಶೆಟ್ಟಿ ಕೆಟ್ಟ
ಹೆಂಗಸರ ಕೂಡ ಆಡಿ ನನ್ನಾತ ಕೆಟ್ಟ .....

೧೭೪೬. ದುರ್ಜನರ ಸಹವಾಸದಿಂದ ಸಜ್ಜನ ಕೆಟ್ಟ
ಸಜ್ಜನರ ಸಹವಾಸದಿಂದ ನಮ್ಮ ............ರಿಗೆ
ಸಿಕ್ಕಿತು ಬಂಗಾರದ ಘಟ್ಟಿ.

೧೭೪೭. ದುಂದು ಮಾಡಿದವರು ಕೆಟ್ಟರು
ಮರ ಹತ್ತಿ ಕೈಬಿಟ್ಟವರು ಕೆಟ್ಟರು
ನಮ್ಮ ರಾಯರು ದುಡೀದ ಕೆಟ್ಟರು ....

೧೭೪೮. ಕೌರವರ ಜೊತೆ ಸೇರಿ
ಭೀಷ್ಮರು ಗೋವು ಕದ್ದರು
ನನ್ನ ............ ರು ನನ್ನ ಮನಸ ಗೆದ್ದರು.

೧೭೪೯. ಬಾಳೇ ಹಣ್ಣಿಗೆ ಬೆಲ್ಲ
ಬದನೇಕಾಯಿಗೆ ಖಾರ
ನಮ್ಮನ್ಯಾಗ ನಮ್ಮ ........... ರದೇ ದರ್ಬಾರ.

೧೭೫೦. ಬಂಗಾರ ಕಾದಾಗ ಪರೀಕ್ಷೆ ಮಾಡಬೇಕು
ಸ್ನೇಹಿತರನ್ನು ಕಷ್ಟದಲ್ಲಿ ಪರೀಕ್ಷಿಸಬೇಕು
ನನ್ನ ............ ರನ್ನ ರಾತ್ರಿ
ಮನೀಗೆ ಬಂದಾಗ ಪರಿಸೀಲಿಸಬೇಕು.

೧೭೫೧. ಹುಚ್ಚರಿಗೆ ಮಾತು ಬಹಳ
ಮುದುಕರಿಗೆ ಸಿಟ್ಟು ಬಹಳ
ನಮ್ಮ .............ರಿಗೆ ನನ್ನ ಮ್ಯಾಲ
ಪ್ರೀತಿ ಬಹಳ.

೧೭೫೨. ಶಹಾಜಹಾನ ಕಟ್ಟಿಸಿದ
ಹೇಣ್ತಿ ಪ್ರೀತಿಗೆ ತಾಜಮಹಲು
ನನ್ನಾತ ........ ಕಟ್ಟಿಸ್ಯಾನ ಮನಿ
ಇಲ್ಲ ಅದರ ಬಾಗಿಲು.

೧೭೫೩. ಅತಿಯಾದರೆ ಅಮೃತವೂ ವಿಷ
ನಮ್ಮ ..........ರ ಕಣ್ಣಾಗ ಆಗೀನಿ ಕಸಾ.

೧೭೫೪. ಸತ್ಯ ಕೆಡಿಸೂದಿಲ್ಲ ಇಲ್ಲ ಇಲ್ಲ
ಅನಾಚಾರ ಬದಕೂದಿಲ್ಲ ಇಲ್ಲ ಇಲ್ಲ
ಸತ್ಯವಂತರಿಗೆ ಎಂದೂ ಕೇಡಿಲ್ಲ ಇಲ್ಲ
ನನ್ನಾತ ................ಗ ಮನಿ ಹೊಂದಿ
ಬಾಳೇ ಮಾಡೂದು ಗೊತ್ತಿಲ್ಲ ಇಲ್ಲ.

೧೭೫೫. ಹಣ್ಣು ಹಂಚಿ ತಿನಬೇಕು
ಹೂವು ಕೊಟ್ಟು ಮುಡಿಬೇಕು
ನಮ್ಮ ...............ರಿಗೆ ನನ್ನ ತವರದವರು
ಎಷ್ಟಂತ ಕೊಡಬೇಕು.

೧೭೫೬. ಸೊಂಟ ಮುರಿದ ಮೇಲೆ ನೆಂಟರಿಲ್ಲ
ಗಂಟಲು ಮುರಿದ ಮೇಲೆ ರಾಗವಿಲ್ಲ
ಸಾಣೆಗೆ ಸಿಗದೇ ವಜ್ರವಿಲ್ಲ
ಕಷ್ಟಕ್ಕೆ ಸಿಗದ ಮನುಷ್ಯಯಿಲ್ಲ
ಸಂದ್ಯಾಗ ಮಾಡಿದರೆ ಜಾತ್ರೆಯಲ್ಲ
ಮಂದ್ಯಾಗ ಮಾಡಿದರೆ ಪೂಜೆಯಲ್ಲ
ಸತ್ತವರಿಗೆ ಸಂಗವಿಲ್ಲ ಕೆಟ್ಟವರಿಗೆ ನೆಂಟರಿಲ್ಲ
ನಡೆ ನುಡಿ ಸಂಸ್ಕಾರದಿಂದ ಸತತ
ಶಿವಾನುಭವಗೋಷ್ಠಿ ನಡೆಸುವರು ನನ್ನ ..... ರು

೧೭೫೭. ಪಾಪಿ ಗಳಿಸಿದ್ದು ಪರರ ಪಾಲು
ನನ್ನವರು ಗಳಿಸಿದ್ದು ಸರ್ವರಪಾಲು .....

೧೭೫೮. ಆದಿಪುರಾಣ ಅಸುರರಿಗೆ ಮಾರಿ
ವೇದಪುರಾಣ ಹೋತಂಗೆ ಮಾರಿ
ನಮ್ಮ ................ರ ಪುರಾಣ ನನಗೆ ಮಾರಿ.

೧೭೫೯. ಎತ್ತೆತ್ತ ನೋಡಿದರೂ
ದೇವರನ್ನು ಕಾಣುವುದು ಭಕ್ತರ ಮನಸ್ಸು
ನಿತ್ಯ ನಿತ್ಯವೂ ನಮ್ಮ ...............ರ
ನೆನೆಯುವುದು ನನ್ನ ಮನಸ್ಸು.

೧೭೬೦. ಸತ್ಯರಾ ಮನೆಯಲ್ಲಿ ಶಿವನ ಬೆಳಕು
ದೇವರ ಮನೆಯಲ್ಲಿ ದೀಪದ ಬೆಳಕು
ನನ್ನ ಮನದಲ್ಲಿ ನಮ್ಮ ................ರ ಥಳಕು.

೧೭೬೧. ಹಣ್ಣು ಹಾಗಲದಲ್ಲಿ ಕೆಂಪು ಬೀಜ
ಹಣ್ಣು ಬೇವಿನಲ್ಲಿ ಬಿಳಿಯ ಬೀಜ
ನನ್ನ ಮನದಲ್ಲಿ ನಮ್ಮ .................ರ ತೇಜ.

೧೭೬೨. ಅಂಗಕ್ಕೆ ಲಿಂಗಶ್ರೇಷ್ಠ ನಿಜ
ಲಿಂಗಕ್ಕೆ ಜಂಗಮ ಶ್ರೇಷ್ಠ ನಿಜ
ನನಗೆ ನಮ್ಮ ..............ರೇ ಶ್ರೇಷ್ಠ ನಿಜ.

೧೭೬೩. ಅನ್ನವನು ಪ್ರಸಾದವಾಗಿಸುವುದು ದಾಸೋಹ
ಮನವನ್ನು ಘನಮನವನ್ನಾಗಿಸುವುದು ಶಿವಯೋಗ
ಭಾವವನ್ನು ಬಯಲಾಗಿಸುವುದು ಲಯಯೋಗ
ನನ್ನ .............ರನ್ನು ಮನದನ್ನೆಯಾಗಿಸುವುದು ಪ್ರೇಮಯೋಗ.

೧೭೬೪. ದಾನನೀಡಿ ವರದಾನಿಯಾದಳು ಗುಡ್ಡವ್ವೆ
ಅನ್ನ ನೀಡಿ ಅನ್ನಪೂರ್ಣೆಯಾದಳು ಅನಸೂಯಾ
ಮನವ ನೀಡಿ ಮನದರಸರಾದವರು ನಮ್ಮವರು .....

೧೭೬೫. ಭಕ್ತಿಯ ಮಾಡಿ ಭವರೋಗ
ವೈದ್ಯನಾದನು ಬಸವಣ್ಣ
ಕಾಯಕ ಮಾಡಿ
ಕೈಲಾಸವ ಕಂಡಳು ಲಕ್ಕಮ್ಮ
ವಿರಕ್ತಿಯ ಮಾಡಿ ಮಲ್ಲಿಕಾರ್ಜುನನನಿಗೆ
ಆತ್ಮ ಸಂಗಾತಿಯಾದಳು ಅಕ್ಕಮಹಾದೇವಿ
ನನ್ನ ...........ವರ ಸೇವೆ ಮಾಡಿ ಅರ್ಧಾಂಗಿಯಾದೆ.

೧೭೬೬. ಮಾಡಿದೆನೆಂಬುದು ಮನದಲ್ಲಿ ಹೊಳೆಯಬಾರದು
ನನ್ನ ...... ವರ ಸೇವೆ ಮಾಡಿದೆನೆಂಬುದು
ನನ್ನಲ್ಲಿ ಸುಳಿಯಬಾರದು.

೧೭೬೭. ಲಿಂಗದಲ್ಲಿ ಕಾಠಿಣ್ಯವಿಲ್ಲ
ಜಂಗಮದಲ್ಲಿ ಕುಲವಿಲ್ಲ
ಪ್ರಸಾದದಲ್ಲಿ ಅರುಚಿಯಿಲ್ಲ
ನನ್ನ ............. ವರ ಮನದಲ್ಲಿ ಕಲ್ಪಷವಿಲ್ಲ.

೧೭೬೮. ಲೋಕದ ಡೊಂಕ ನೀವೇಕೆ ತಿದ್ದುವಿರಿ
ಅಂದರು ಬಸವಣ್ಣನವರು
ನನ್ನನ್ನು ತಿದ್ದಿ ತೀಡಿ ಪ್ರೇಮ ಭಿಕ್ಷೆ
ನೀಡಿದರು ನಮ್ಮವರು ....

೧೭೬೯. ಭಕ್ತರ ಮುಖದರ್ಪಣದಲ್ಲಿ
ಲಿಂಗ ಕಾಣಬಹುದು
ನನ್ನ ............ ವರ ಸೇವೆಯಲ್ಲಿ
ನಾ ದೇವರ ಕಾಣಬಹುದು.

೧೭೭೦. ಬಚ್ಚಲನೀರು ತಿಳಿಯಾದರೂ
ಜಳಕಕ್ಕೆ ಯೋಗ್ಯವಲ್ಲ
ನನ್ನತ್ತೆ ಒಳ್ಳೆಯವಳಾದರೂ
ನಂಬಿಗೆಗೆ ಯೋಗ್ಯಳಲ್ಲ
ನಮ್ಮ ..............ರು ಪದೇ ಪದೇ ಸಿಟ್ಟಾದರೇನು
ಆವರೇನೂ ದೇವರಲ್ಲ.

೧೭೭೧. ಆಯುಷ್ಯ ಇಲ್ದವನಿಗೆ
ಎಷ್ಟು ಸಂಪತ್ತಿದ್ದರೇನು?
ಪ್ರೀತ ಇಲ್ಲದ ನನ ಗಂಡ .....
ಯಾವ ಊರಿನಲ್ಲಿದ್ದರೇನು?

೧೭೭೨. ಕುರುಡಗೆ ಕನ್ನಡಿ ಕೊಟ್ಟಾಂಗ
ನಮ್ಮ .............ರ ಕೈಗೆ ಹಿರೇತನ ಕೊಟ್ಟಂಗ.

೧೭೭೩. ಹೊಗಳಿ ಹೊಗಳಿ ಹೊನ್ನ ನೇಣುಗಂಬಕ ಏರಿಸ್ತಾರ
ನಮ್ಮ .....ರು ಬ್ಯಾಡಂದ್ರೂ ಬಂಗಾರ ತಂದು
ಪ್ರೇಮದ ಪೇಟಿ ನುಡಿಸ್ತಾರ.

೧೭೭೪. ಸತ್ಯ ಸಹನೆ ಅಕ್ಕ ತಂಗಿ
ನಮ್ಮ .................ವರು
ಇರೂದು ಪ್ರೇಮದ ಸಂಗಿ.

೧೭೭೫. ಅತ್ತಲಿತ್ತ ಪೋಗದಂತೆ ಹೆಳವನ್ನ ಮಾಡು
ಸುತ್ತೆಲ್ಲ ನೋಡದಂತೆ ಕುರುಡನ್ನ ಮಾಡು
ಎಂದರು ಬಸವಣ್ಣನವರು
ನಮ್ಮ ...............ರಿಗೆ ಹೆಳವ ಆಗಬ್ಯಾಡಾ
ಕುರುಡಾಗಬ್ಯಾಗ ಅಂದರು ಅವರಣ್ಣನವರು.

೧೭೭೬. ಕೋಳಿ ತಿಂದವಗೆ ಹೋಳಿಗೆ ಹುಳಿ
ನಮ್ಮ ...............ರ ನಾಲಿಗೆ ರುಚಿ ಇಲ್ಲ
ದಾರಿ ಬಿಟ್ಟೈತಿ ಹಳಿ.

೧೭೭೭. ಕುಂತು ಉಂಡ್ರ ಕುಡಿಕೆ ಹೊನ್ನ ಸಾಲುವುದಿಲ್ಲ
ಹುಲಿ ಎಂದೂ ಹುಲ್ಲು ತಿನ್ನೂದಿಲ್ಲ
ಹೊಟ್ಟಿಗೆ ರೊಟ್ಟಿ ಕಟ್ಟಿದರ ಹೊಟ್ಟೆ ತುಂಬೂದಿಲ್ಲ
ನಮ್ಮ .............ರಿಗೆ ಕಳಿಯೋದ ಗೊತ್ತು
ಕೂಡಿಸೋದು ಗೊತ್ತಿಲ್ಲ.

೧೭೭೮. ಬಾಯಾಗಾಡಿದ್ದು ಬೆನ್ನಿಗೆ ಮೂಲ
ನನ್ನಾತ ............... ಆಡಿದ್ದು ಕಡೆತನಾ ಶೂಲ.

೧೭೭೯. ಊಟ ಬೇಕಾದ್ರ ಬಡವ್ರ ಮದುವಿಗೆ ಹೋಗಬೇಕು
ನೋಟ ಬೇಕಾದ್ರ ಶ್ರೀಮಂತರ ಮದುವಿಗೆ ಹೋಗಬೇಕು
ಆದರಾತಿಥ್ಯ ಗೌರವ ಬೇಕಾದ್ರ ನಮ್ಮ ........ರ ಮನೀಗೆ ಬರಬೇಕು.

೧೭೮೦. ಅತ್ತಿ ಮಾವಾ ಯಾರಿಗೆ ಬೇಕು
ನನ ಗಂಡ ............ರು ನನಗೂಡ ಇದ್ದರ ಸಾಕು.

೧೭೮೧. ಹಟಕ್ಕೂ ಮತ್ತೆ ಬೋಳು ತಲೆಗೂ ಔಷದ ಇಲ್ಲ
ಏಡಿಯಂತಾಕಿ ನನ್ನಾತ .............ಗೆ ತಲೆಯಿಲ್ಲ.

೧೭೮೨. ದೇವರಿಂದ ಬ್ರಾಹ್ಮಣರಿಗೆ ಮರ್‍ಯಾದೆ
ಭೂತದಿಂದ ಪೂಜಾರಿಗೆ ಮರ್‍ಯಾದೆ
ನನ್ನ ........ರಿಂದ ಮನೆಗೆ ಮರ್ಯಾದೆ.

೧೭೮೩. ಸೊಸಿಗೆ ಅಂಜಿ ನಡೆಯುವ
ಅತ್ತೆ ಮಾವಾ ಬಲು ಚೆಂದ
ಸೊಸಿಗೆ ಅಂಜಿ ನಡೆಯೂ ನಾದಿನಿ ಚೆಂದ
ನನ್ನ ಪ್ರೀತಿ ಗಂಡ ............... ನನಗಂಜಿ ನಡದ್ರ ಇನ್ನೂ ಚೆಂದ.

೧೭೮೪. ಹಿರೇತನಾ ಮಾಡೂದು ಮಾವನ ಕೆಲಸ
ಗಳೇಕ ಹೋಗೂದು ಮೈದುನ ಕೆಲಸ
ಎತ್ತು ಮೇಸೂದು ಅತ್ತಿ ಕೆಲಸ
ಎಮ್ಮಿ ಹಿಂಡೂದು ನೆಗೆಣ್ಣಿ ಕೆಲಸ
ಹೆಪ್ಪು ಹಾಕೂದು ಹಿರಿಸೊಸಿ ಕೆಲಸ
ಮಜ್ಜಿಗಿ ಕಟಿಯೂದು ನನ್ನ ಕೆಲಸ
ಬೆಣ್ಣಿ ತಿನ್ನೂದು ನನ್ನ ............. ವರ ಕೆಲಸ.

೧೭೮೫. ಹರೇದಾಗೆದ್ದು ಹೋರಿ ಬಿಟಕೊಂಡು
ರೆಂಟಿ ಕುಂಟಿ ಹೊಡಿತಾರ ಬಂಟ ಆಗಿ ಬರ್‍ತಾರ
ಪಂಟ ಹೊಡಕೋತ ಪರೋಟ ತಿಂದು ಕರದಂಟು ಕೇಳ್ತಾರ ....

೧೭೮೬. ಶಿವ ಕುಡಿದದ್ದು ಹಾಲಾಹಲ ವಿಷ
ನನ್ನಾತ ............. ಹಗಲೆಲಾ
ಕುಡಿಯೂದು ಲಿಂಬಿ ರಸ.

೧೭೮೭. ತರಲಿಲ್ಲ ತಾಕಲಿಲ್ಲ
ದುಡೀಲಿಲ್ಲ ದಃಖಪಡಲಿಲ್ಲ
ಕೊಡಲಿಲ್ಲ ಕೋಸೀಲಿಲ್ಲ
ಬರಲಿಲ್ಲ ಭಾರಾ ಹೊರಲಿಲ್ಲ
ಸಾಯಲಿಲ್ಲ ಬದುಕಲಿಲ್ಲ
ಕೊಕ್ಕರೆ ಮೀಸಿ ಬಿಟಗೊಂಡು
ಬಕಬರ್ಲೆ ಬೀಳ್ತಾರ .....

೧೭೮೮. ಕುಂಟಗಾಲು ಸೊಂಟ ಮುರುಕ
ಎಂಟೆತ್ತಿನ ಕಮತಕ್ಕೂ ತಾಸ್ತಾರ ....

೧೭೮೯. ತಾಮ್ರದ ದುಡ್ಡು ತಾಯಿ ಮಕ್ಕಳನ್ನ ಕೆಡಿಸ್ತು
ನನ್ನ ............. ವರ ಪ್ರೀತಿ ಕೂಲಿ ಹೆಣ್ಣು ಕೆಡಿಸ್ತು.

೧೭೯೦. ನರಕಕ್ಕೆ ನವದ್ವಾರ
ನಾಶ ವಿನಾಶಕ್ಕೆ ಒಂದೇ ದ್ವಾರ
ನನ್ನ ............ ರು ಬಾಳೆಗೆಟ್ರ
ನಮ್ಮನೆಗಿಲ್ಲ ಉದ್ಧಾರ.

೧೭೯೧. ಗಂಡಿನ ಸಂಬಳಾ ಕೇಳಬಾರ್ದು
ಹೆಣ್ಣಿನ ವಯಸ್ಸು ಕೇಳಬಾರ್ದು
ನಮ್ಮ .............ರ ಗಿಂಬಳ ಕೇಳಬಾರ್ದು.

೧೭೯೨. ಇದ್ದ ಕಡೆ ಇರಲಿಲ್ಲ
ಬಿದ್ದ ಗೋಡೆ ಹಾಕಲಿಲ್ಲ
ಸೂಳಿ ಮನೀಗೆ ಕರಿಲಾಕ ಹೋದ್ರ
ನನ್ನ .....ರು ಬರಲಿಲ್ಲ.

೧೭೯೩. ಅಡಕಿಗೆ ಹೋದ ಮಾನ
ಆನಿ ಕೊಟ್ಟರೂ ಬರೂದಿಲ್ಲ
ಹೊಲಮನಿ ಹೋದ್ರೂ ನಮ್ಮ ............ರು
ಕುಡಿಯೂದು ಬಿಡಲಿಲ್ಲ.

೧೭೯೪. ಬೆಟ್ಟಕ್ಕೆ ಹತ್ತಿದ ಬೆಂಕಿ ಹೊರಗ ಕಾಣಿಸತೈತಿ
ನನ್ನ .............ರಿಗೆ ಅತ್ತಿ ಮಾವಾ ಹಚ್ಚಿದ ಬೆಂಕಿ
ಒಳ ಒಳಗs ಉರೀತೈತಿ.

೧೭೯೫. ಹೆಣ್ಣಾ ತಿನ್ನಾಕ ಹದ್ದಿನ ಕಣ್ಣು
ನನ್ನ ............ರಿಗೆ ತಾಕಬಾರ್ದು ನೆದರುಗಣ್ಣು.

೧೭೯೬. ಆನೆಗೆ ಸಿಂಹದ್ದೇ ಕನಸು
ನಮ್ಮ .............ರಿಗೆ ಯಾಕೋ
ನನ್ನ ಮೇಲೆ ಮುನಿಸು.

೧೭೯೭. ಒಲೆ ಉರಿಯದಿದ್ದರೆ ಊದುಗೊಳವೆ ತಪ್ಪಲ್ಲ
ನಮ್ಮತ್ತಿ ಸೆಟಗೊಂಡ್ರ ನನ್ನ .............ರ ತಪ್ಪಲ್ಲ.

೧೭೯೮. ಒಂದು ಸುಳ್ಳು ಮರಸಾಕ ಹದಿನೆಂಟು ಸುಳ್ಳು
ನನ್ನ .............ರ ಮಾತ ಕೇಳಾಕಿ ತಾನs ಮಳ್ಳ.

೧೭೯೯. ಒಳಗ ಬಂದ್ರ ಅತ್ತಿ ಕಾಟ
ಹೊರಗ ಹೋದ್ರ ಮಾವನ ಕಾಟ
ಕೋಣ್ಯಾಗ ಹೋದ್ರ ನನ್ನ ..............ರ ಕಾಟ.

೧೮೦೦. ಬಾಳೆ ಎಲೆ ಮೇಲೆ ಬೆಣ್ಣಿ ಹಾಕಬಾರ್ದು
ಮುತ್ತುಗದ ಎಲಿ ಮೇಲೆ ಸುಣ್ಣ ಹಾಕಬಾರ್ದು
ನನ್ನ ಪ್ರಾಣೇಶ ...............ರಿಗೆ ಎಂದೂ ಸುಳ್ಳ ಹೇಳಬಾರ್ದು.

೧೮೦೧. ಹುಣ್ವಿದಿನ ಹೆಣ್ಣ ಯಾಕ ಹುಟ್ಟಬಾರ್ದು
ಅಮವಾಸಿ ದಿನ ಗಂಡ ಯಾಕ ಹುಟ್ಟಬಾರ್ದು
ಇಂಥಾ ಶಕುನಾ ಹೇಳವ್ರ
ತಲಿಯಾಕ ಹೊಡಿಬಾರ್ದು
ನನ್ನ ............ರ ಕೂಡ
ನಾನ್ಯಾಕ ಹನಿಮೂನಿಗೆ ಹೋಗಬಾರ್ದು.

೧೮೦೨. ಭಾವ ಸುದ್ದ ಇದ್ದ್ರ ಎಲ್ಲಾ ಸುದ್ದು
ನನ್ನ ............... ರು ಸುದ್ದ ಆದ್ದ್ರ ಸಂಸಾರ ಸುದ್ದು.

೧೮೦೩. ಅಗಸನ ಮಾತ ಕೇಳಿ
ರಾಮಚಂದ್ರ ಹೇಣ್ತಿ ಬಿಟ್ಟು
ನನ್ನತ್ತಿ ಚಾಡಿ ಕೇಳಿ
ನನ್ನ ...............ರು ನನ್ನ ಬಾಳಿ ಬಿಟ್ರು.

೧೮೦೪. ವರದಕ್ಷಿಣೆ ಭೂತ ಎದ್ದು ನಿಂತೈತಿ
ಜಗಾಬದ್ಲ ಆಗೇತಿ
ಅತ್ತಿ ಮಾವಗ ನನ ಗಂಡ .....
ಹೆದರಿ ಕುಂತೈತಿ.

೧೮೦೫. ತಂದಿ ತಾಯಿ ಇರೋತನಾ
ತವರ ಮನಿ ಚೆಂದ
ನನ್ನ ............ರ ಪ್ರೀತಿ ಇರೋತನಾ
ಗಂಡನ ಮನಿ ಚೆಂದ.

೧೮೦೬. ಒಲಿ ಎರಡಾದ್ರು ಕುಲ ಒಂದು
ನಾನು ನನ್ನ ..............ರ
ದೇಹ ಎರಡಾಡ್ರೂ ಜೀವವೊಂದು.

೧೮೦೭. ಅತ್ತಿ ಮಾವರ ಪ್ರೀತಿ
ಚೇಳಿಗೆ ಮುತ್ತು ಕೊಟ್ಟಾಂಗ
ನಾನು ನನ್ನ ...............ರ ಪ್ರೀತಿ
ಕಬ್ಬಿನ ಮ್ಯಾಲ ಜೇನ ಇಟ್ಟಾಂಗ.

೧೮೦೮. ದಯಾ ಇಲ್ಲದ ಧರ್ಮ ಇಲ್ಲ
ನನ್ನ ................ರ ಪ್ರೇಮ ಇದ್ದರ ಸೋಲಿಲ್ಲ.

೧೮೦೯. ಈಚಲ ಮರಕ್ಕೆ ಆಚಾರ ಗೊತ್ತಿಲ್ಲ
ನಮ್ಮ ..............ರಿಗೆ ಆ ವಿಚಾರ ಗೊತ್ತಿಲ್ಲ.

೧೮೧೦. ಆರಿ ಹೋಗುವ ದೀಪಾ ಜೋರಾಗಿ ಉರಿತೈತಿ
ನನ್ನ ...........ರು ಹೀಂಗ ಕುಡುದ್ರ ಹಡಗ ಮುಳಗತೈತಿ.

೧೮೧೧. ಹಳ್ಳ್ಯಾಗ ಗೌಡಕಿ ಚೆಂದ
ಗೌಡರ ಮಗ ಚೆಂದ
ಜೂಲಾ ಬಾಸಿಂಗ ಕಟ್ಟಿದ ಎತ್ತು ಚೆಂದ
ಬಣ್ಣಾ ಹಚ್ಚಿದ ಜೆಂತಿ ಚೆಂದ
ಕುಡಿ ಮೀಸಿ ಬಿಟ್ಟು ಗರಡಿ ಮನಿಗೆ ಹೋಗೂ
ನನ್ನ .............. ರು ಚೆಂದ.

೧೮೧೨. ಹೊಡೆದರೂ ಗಂಡ ಬಿಟ್ಟರೂ ಗಂಡ
ನಾ ತವರ ಮನ್ಯಾಗಿದ್ದ್ರೂ
ಮರೀಲಿಲ್ಲ ನನ ಗುಂಡ ......

೧೮೧೩. ಹದಾ ಇಲ್ಲದ ಊಟ ಮುದಿ ಗಂಡನ ಕಾಟ
ಊಟಾದ ಮ್ಯಾಲ ನನ್ನ ............ರದು ಭಾರಿ ಹುಡುಕಾಟ.

೧೮೧೪. ಅರವತ್ತು ವರ್ಷಕ್ಕೆ ಅರಳು ಮರಳು
ನನ್ನ .............. ರನ್ನ ನೋಡಿದ್ರ
ಚುರುಕ್ ಅಂತೈತಿ ಕರುಳು.

೧೮೧೫. ಮಗಳು ಹೆಣಕ್ಕೆ ಅತ್ರೆ
ಮಗ ಹಣಕ್ಕೆ ಅತ್ತ
ನನ್ನಾತ ..... ಆಸ್ತಿಗಾಗಿ
ದಾಗೀನ ಒತ್ತೆ ಇಟ್ಟ.

೧೮೧೬. ನೆಲವೀಗೆ ಆರ ಕಣ್ಣು
ತೆಂಗಿನ ಕಾಯಿಗೆ ಮೂರ ಕಣ್ಣು
ಗುಲಗಂಜೀಗೆ ಒಂದು ಕಣ್ಣು
ನಮ್ಮ ..............ರಿಗೆ ಹುಟ್ಟುತ್ತೆ ಮೆಳ್ಳಗಣ್ಣು.

೧೮೧೭. ಕದಾ ಗೋಡಿಗೆ ಆತೈತಿ
ಜೋಳಿಗಿ ಜೆಂತಿಗೆ ಜೋತೈತಿ
ನನ್ನ .............ರ ಕೋಟು
ಗೂಟದಾಗ ಮೆರಿತೈತಿ.

೧೮೧೮. ಹನುಮಂತ ಎದ್ದಾನ ಕುಂತಿಲ್ಲ
ಬೋರಗಲ್ಲು ಕುಂತಿದ್ದು ಎದ್ದಿಲ್ಲ
ಹೆಣಾ ಹೋಗಿದ್ದು ಹೊರಳಿಲ್ಲ
ನಮ್ಮ .............. ರಿಗೆ ಹೇಣ್ತಿ ಅನ್ನು ಕರುಳಿಲ್ಲ.

೧೮೧೯. ಎಲಿಗೊಂದು ಕಾಯಿ ಉಪ್ಪಿನಕಾಯಿ
ತೆಲಿಗೊಂದ ಕಾಯಿ ಸೀಗೆಕಾಯಿ
ಹಾಡಿಗೊಂದ ಕಾಯಿ ಹಾಗಲಕಾಯಿ
ಜಗದೀಶನಿಗೊಂದು ಕಾಯಿ ತೆಂಗಿನಕಾಯಿ
ನಮ್ಮ .................ರ ಹೆಸರ ಹೇಳಿದ್ರ ನೀ ದನಕಾಯಿ.

೧೮೨೦. ಕುದಿರೀಗೆ ಕೋಡಿಲ್ಲ
ಅಂಗೈಗೆ ಕೂದಲಿಲ್ಲ
ಮುಗಿಲೀಗೆ ಕಂಬ ಇಲ್ಲ
ನಮ್ಮ ..............ರ
ಜಾಣತನಕ ನೆಲಿಯಲ್ಲ.

೧೮೨೧. ಕಾರ ಹುಣ್ಣಿಮೆ ಕಳೀತು
ಬನದ ಹುಣ್ಣಿಮೆ ಬಂತು
ಹೋಳಿ ಹುಣ್ಣಿಮೆ ಹೋತು
ನನ್ನ .............ರು ನನ್ನ ನೋಡಿ
ಹೋದ್ರು ಸೋತು.

೧೮೨೨. ಮುಂಜಾನೆ ನಾಲ್ಕು ಕಾಲಲ್ಲೆ ನಡೆಯೂದು ಕೂಸು
ಮಧ್ಯಾಹ್ನ ಎರಡು ಕಾಲೀಲೆ ನಡೆಯೂದು ಹರೆಯದ ಮನುಷ್ಯ
ಸಾಯಂಕಾಲ ಮೂರು ಕಾಲೀಲೆ ನಡೆಯೂದು ಮುದುಕ
ಎಲ್ಲಾ ಕಾಲಕ್ಕು ಒಂದೇ ನಡಿಗಿ ಹಿಡಿದವ್ರು ನನ್ನ ರಾಯರು .....

೧೮೨೩. ಮಜ್ಜಿಗಿ ಗಡಿಗ್ಯಾಗ ತೇಲೂದು ಬೆಣ್ಣಿ ಗುಂಡು
ತುಬಾಕ್ಯಾಕ ಹಾಕಿ ಹೊಡಿಯೂದು ಮದ್ದು ಗುಂಡು
ನಮ್ಮ ........... ರಾಯರು ಆಡ್ತಾರ ಮುತಿನ ಚೆಂಡು.

೧೮೨೪. ಅಂಗಕ್ಕೆ ಆಚಾರವೇ ಚೆಲುವು
ಆತ್ಮನಿಗೆ ಅರಿವೇ ಚೆಲುವು
ನಮ್ಮ ............ರಿಗೆ ನನ್ನ
ಸೇವಾ ಧರ್ಮವೇ ಚೆಲುವು.

೧೮೨೫. ಅಕ್ಕಮಹಾದೇವಿಗೆ ಕೌಶಿಕನಿಂದಾಯ್ತು ಆಪತ್ತು
ನನ್ನ ........ವರ ಹೆಸರು ಹೇಳುವುದು ನನ್ನ ಸೊತ್ತು.

೧೮೨೬. ಅಡಕಿ ಒಡೆಯಲು ಬೇಕು ಅಡಕೊತ್ತು
ಮೂಗಿಗೆ ಬೇಕು ಮುತ್ತಿನ ನತ್ತು
ಸುಖ ಜೀವನಕ್ಕ ಬೇಕು ಧನ ಸಂಪತ್ತು
ನನ್ನ ............ ರಿಗೆ ಬಾರದಿರಲಿ ಯಾವ ಆಪತ್ತು.

೧೮೨೭. ಅನೀತಿಯಿಂದ ನಡೆದರೆ ಆಗುವುದು
ಸಮಾಜದ ಉಗ್ರ ಬಹಿಷ್ಕಾರ
ಆದರದಿಂದ ನನ್ನ ............ರಿಗೆ ಮಾಡುವೆ ನಮಸ್ಕಾರ.

೧೮೨೮. ಅರ್ಜುನನು ಸುಭದ್ರಾ ಹರಣ ಮಾಡಿದ್ದು ಪ್ರೇಮಕ್ಕಾಗಿ
ನಾನು .... ರಲ್ಲಿ ಧ್ಯಾನ ಮಾಡುವೆನು ಮುತ್ತೈದೆತನಕ್ಕಾಗಿ.

೧೮೨೯. ಅಳೆಯುವುದಕ್ಕೆ ಬೇಕು ಮಾಪು
ತಾಂಬೂಲಕ್ಕೆ ಬೇಕು ಬಡೆ ಸೋಪು
ನಮ್ಮ ............ರ ಸ್ನಾನಕ್ಕೆ ಬೇಕು
ಮೈಸೂರು ಸ್ಯಾಂಡಲ್ ಸೋಪು.

೧೮೩೦. ಅಜಂತಾ ಗುಹೆಯ ಚಿತ್ರದ ಬಣ್ಣ
ಅಚ್ಚಳಿಯದೇ ಉಳಿದಿವೆ ಇಂದಿಗೂ
ನನ್ನ ರಾಯರ ಹೆಸರು ಹೇಳುವೆ ಎಂದೆಂದಿಗೂ .....

೧೮೩೧. ಸತಿಗೆ ಪತಿಯೇ ಶ್ರೇಷ್ಠ
ನನಗೆ ನಮ್ಮ ...............ರ ಪಾದವೇ ಶ್ರೇಷ್ಠ.

೧೮೩೨. ಅಶ್ವಪತಿ ರಾಜನ ಮಗಳು ಮದುವೆಯಾದ
ಸ್ಥಳವೇ ತೀರ್ಥ ಯಾತ್ರಾ
ನನಗೆ ನನ್ನ......ರು ಕಟ್ಟಿದರು
ಶಿವಯೋಗ ಮಂದಿರದಲ್ಲಿ ಮಂಗಳ ಸೂತ್ರ.

೧೮೩೩. ಅತ್ತ ಮಾವನ ಹೊಟ್ಟ್ಯಾಗ
ಮುತ್ತಿನಂಥ ................. ರು ಹುಟ್ಟಿ
ಮುತ್ತಿನ ಕುದುರಿ ತಕಾರ ಮುಂಬೈಗೆ ಹೊಂಟಾರ.

೧೮೩೪. ದಶರಥನ ಕಂದ
ರಾವಣನ ಕೊಂದ
ಸೀತೆಯ ತಂದ
ಮಜ್ಜಿಗಿ ಪೂರ್ತಿ ರಾಮಾಯಣದ
ಈ ಒಕ್ಕಣಿಕೆ ಸುಂದರ
ನನ್ನ ............. ಪ್ರಾಣ ಪ್ರಿಯನ
ಮಾತೆಲ್ಲ ಹುಣ್ಣಿವಿ ಚಂದಿರ.

೧೮೩೫. ಅತ್ತಿ ಬಂದ್ರ ಅಕ್ಕರತಿ ಮಾಡ್ತಾರ
ಮಾವ ಬಂದ್ರ ಮಾರೀ ತಿರುವುತಾರ
ನಾ ಅಂದ್ರ ಬಾಯಿ ತೆರಿತಾರ ..........

೧೮೩೬. ಜುಟ್ಟಾಬಿಟಗೊಂಡು ರೊಟ್ಟೀಗೆ ಬಂದಾನಂದ್ರ
ಹಸೇ ಉಳ್ಳೇಗಡ್ಡಿ
ನಮ್ಮ .............ರು ಹೇಳಿದ್ದೇಲ್ಲಾ ಕೇಳಾಕಿ
ನಾನೇ ಶತದಡ್ಡಿ.

೧೮೩೭. ಆಕಾಶದಲ್ಲಿ ಇರುವುದು ಆಕಾಶ ಗಂಗೆ ನಕ್ಷತ್ರ
ಬೀಗತನದಲ್ಲಿ ವಿಚಾರಿಸುವುದು ಕುಲಗೋತ್ರ
ನನ್ನ .............ರು ಹುಡಿಕಿದ್ದಾರೆ ಸುಖೀ ಜೀವನಸೂತ್ರ.

೧೮೩೮. ಇತ್ತೀಚಿನ ಹುಡುಗರಿಗೆ ಬೇಕು ಕ್ಯಾಬರೇ ಡ್ಯಾನ್ಸು
ಅತ್ತಿ ಮಾವಂದಿರಿಗೆ ಬೇಕು ಬ್ಯಾಂಕ್ ಬೋನಸ್ಸು
ನಾನು ನನ್ನ ............ರಿಗೆ ಬೇಡುವೆ ದೀರ್ಘ ಆಯುಸ್ಸು.

೧೮೩೯. ಆ ರಾಡಿ ಈ ರಾಡಿ ರಾಮಾ ರಾಡಿ
ಸೇರ ಬಂಗಾರ ಇಡಾಕ ನನ್ನ ............ರಿಗೇನ್ ಧಾಡಿ.

೧೮೪೦. ನನ್ಮಗ ಆಕಾಶದಾನ ಚಂದ್ರನ್ನ ಕೊಡು ಅಂತಾನ
ನನ್ನ ............... ರು ಬಕೀಟ ನೀರಾಗ ತೋರ್ಸಿ ಹಿಡಿ ಅಂತಾರ.

೧೮೪೧. ಅಹಿಂಸೋ ಪರಮೋಧರ್ಮ ಜೈನಧರ್ಮ
ನನ್ನ ............ ರಾಯರಿಗೆಗೊತ್ತು ಇದರೊಳಗಿನ ಮರ್ಮ.

೧೮೪೨. ಎಂಟು ಮಣಾ ಎಳ್ಳ
ಏಳು ಮಣಾ ಜೊಳ್ಳ
ನಮ್ಮ ..............ರ ಮಾತು ಬರೀ ಸುಳ್ಳು.

೧೮೪೩. ಏನು ಬರೀತಾರೋ ಬರೀತಾರ್
ಏನು ಬರೀತೀರಿ ಅಂದ್ರ ಹಣೇಬರಹ ಅಂತಾರ .....

೧೮೪೪. ಏಡಿ ಮುಟ್ಟದ ನೀರು
ಮೀನು ಮುಟ್ಟದ ನೀರು
ಆಕಾಶದ ಭಾವಿ ನೀರ್ತಂದು
ಅರಭಾವಿ ಕಟ್ಟೀಮ್ಯಾಲ
ಬೆಳ್ಳಿ ಒಲಿಗುಂಡು ಹೂಡಿ
ಬಂಗಾರ ತಪೇಲಿ ಇಟ್ಟು
ಬೆಳ್ಳಿ ಕಡ್ಡಿ ಕೊರದು
ಉದುರುದುರ ಅನ್ನಾಮಾಡಿ
ಉಣ್ಣಾಕ ಬರ್ರಿ ಅಂದ್ರ
ಒಲ್ಲೊಲ್ಲೆಂತ ವಲ್ಲಿ ಸೆರಗೀಲೆ
ಮಾರಿ ಮುಚಗೋತಾರ .......

೧೮೪೫. ಒಂದು ಸೂಜ್ಯಾಗ ಒಂಭತ್ತು ಗುದ್ಲಿ ಮಾಡ್ಸಿ
ಅಂಗೈ ಅಗಲ ಅಂತರ ಭೂಮಿ ಅಗಿದು
ಮುತ್ತಿನಂಥಾ ಜೋಳಾ ಬಿತ್ತಿ
ಹವಳದಂತಾ ಕಾಳ ತೂರಿ
ರತ್ನದಂತಾ ಹಿಟ್ಟ್ ಬೀಸಿ
ಚಂದಪ್ಪನಂತಾ ರೊಟ್ಟಿ ಬಡದ್ರ
ಎಂಬತ್ತು ರೊಟ್ಟೀ ತಿಂದು
ಕೋತಂಬ್ರಿ ಬೇರು ಹರೀಲಿಲ್ಲಂತ
ಹಾರಿ ಹಾರಿ ಹೇಳ್ತಾರ .....

೧೮೪೬. ಕಣ್ಣು ಬೇಡೂದು ಕರಿ ಕಪ್ಪು
ಹೆಣ್ಣು ಬೇಡೂದು ತವರಿನ ಒಪ್ಪು
ನನ್ನ ...........ರು ಬೇಡೂದು ಹಕ್ಕರಕಿ ಸೊಪ್ಪು.

೧೮೪೭. ಪಂಜೆ ಮಂಗೇಶರಾಯರು ಬರೆದದ್ದು
ತೆಂಕಣಗಾಳಿಯಾಟ
ನಮ್ಮ .................ರು ಆಡುವುದು ಬರೀ ತುಂಟಾಟ

೧೮೪೮. ಮಕಮಲ್ಲ ಅಂಗಿ ಮೈಯಾಗ ಕಂಠಿಸರ ಕೊರಳಾಗ
ಖಡೆ ತೋಡೆ ಮುಂಗೈಯಾಗ
ಗಂಧದ ಬೊಟ್ಟು ಹಣೆಯಾಗ
ಪಾತರದವರು ಮುಂದ ಮುಂದ
ಇವರು ಧಣ್ಯಾರ ಕುಂತ ಪಲ್ಲಕ್ಕಿ ಹಿಂದ ಹಿಂದ
ಹಂಪೀ ಜಾತ್ರೀಗಿ ಹೋಗಿ ತಂಪತ್ತಿನ್ಯಾಗ ಬರ್ತಾರ ......

೧೮೪೯. ಕನ್ನಡದ ಕಡುಗಲಿ ಎಚ್.ಎಮ್. ನಾಯಕ
ನಾನು ..............ರ ಮದುವೆಯಾಗಿದ್ದು
ಸುರಪುರದ ನಾಯಕ.

೧೮೫೦. ಕೂಸಿಗೆ ತಾಯಿ ಬೇಕು
ದಾಸಿಗೆ ರಾಣಿ ಬೇಕು
ಸಾಹೇಬರಿಗೆ ಆಳು ಬೇಕು
ಕಾರಿಗೆ ಡ್ರೈವರ್ ಬೇಕು
ಅಡಿಗಿ ಮನ್ಯಾಗ ಎಲ್ಲಾ ಬೇಕು
ನಮ್ಮ ............ರಿಗೆ ನಾನೇಕೆ ಬೇಕು?

೧೮೫೧. ಗಣಪತಿ ಬಿದ್ದಾಗ ಚಂದ್ರನು ನಕ್ಕಾ
ಇದೆಲ್ಲ ಕತಿ ಗೊತ್ತು ನಮ್ಮ ..........ರಿಗೆ ಪಕ್ಕಾ.

೧೮೫೨. ಗಂಗಾ ಸ್ನಾನ ತುಂಗಾ ಪಾನ
ಹೆಂಡಿರ ಕೈಯಲ್ಲಿ ಗಂಡರ ಮಾನ
ನಮ್ಮ ........ರು ಎಂದರೆ ನನಗಭಿಮಾನ.

೧೮೫೩. ಗಾನಿವಿದ್ಯೆಯು ಲೇಸು
ಮಾನವತಿ ಸತಿ ಲೇಸು
ನನ್ನ .............ರು ನನ್ನೊಂದಿಗಿದ್ದರೆ ಲೇಸು.

೧೮೫೪. ಗುಡ್ಡ ಗುಡ್ಡ ಸ್ಥಾವರಲಿಂಗ
ಗೋಕರ್ಣದಲ್ಲಿ ಶಿವಲಿಂಗ
ಶ್ರೀಶೈಲದಲ್ಲಿ ಮಲ್ಲಿಕಾರ್ಜುನಲಿಂಗ
ಕಾಶಿಯಲ್ಲಿ ವಿಶ್ವೇಶ್ವರಲಿಂಗ
ನನ್ನ ಪತಿ ............. ನನಗೆ ಜ್ಯೋತಿರ್ಲಿಂಗ.

೧೮೫೫. ಪಾನಕ ಮಾಡಲು ಬೇಕು ಸಕ್ಕರೆ
ನಾನಂದ್ರ ನಮ್ಮ .............ರಿಗೆ ಬಲು ಅಕ್ಕರೆ.

೧೮೫೬. ಅಕ್ಕಿ ಅಗಳು ನೆಲ್ಲಿಕಾಯಿ ಉಪ್ಪನಕಾಯಿ
ಉಂಡು ಹೋಗಂದ
ತಂಡಿ ಹತ್ತೇತಂತ ಸೊನ್ನಿ ಮಾಡ್ತಾರ .....

೧೮೫೭. ಹಾಲಿಗೆ ಹಾಕೂದು ಹೆಪ್ಪು
ಮಜ್ಜಿಗೀಗೆ ಹಾಕೂದು ಉಪ್ಪು
ನನ್ನ ............ರಿಗೆ ಕೊಟ್ರಲ್ಲಾ ಕೈ
ತಂದಿ ತಾಯೀದು ಬಾಳ ತಪ್ಪು.

೧೮೫೮. ಕಿಸೇದಾಗ ಆಣೆ ರೊಕ್ಕಿಲ್ಲ
ಚೌಲದಾಗ ಡೌಲು ಮಾಡ್ತಾರ .....

೧೮೫೯. ಮುನ್ಯಾಗ ಹಜಾರ ಗ್ಯಾಸು, ಮಾವನ ಲೆಕ್ಕ ಅಜಮಾಸು
ಇವರು ನನ್ನ ಬಿಟ್ಟು ಇರವೊಲ್ರು ಒಂದು ತಾಸು
ಇವರೇನಲ್ಲ ಹಸುಗೂಸು .....

೧೮೬೦. ನತ್ತ ಬೇಡಿದರ ಪಣ್ಣ ನಗತಾರ
ಮುತ್ತು ಬೇಡಿದ್ರ ಲಟ್ನ ಕೊಡ್ತಾರ .....

೧೮೬೧. ಶಿವನಿಗೆ ಪಾರ್ವತಿ ಶೋಭೆ
ಶ್ರೀಹರಿಗೆ ಲಕ್ಷ್ಮಿ ಶೋಭೆ
ಬ್ರಹ್ಮನಿಗೆ ಸರಸ್ವತಿ ಶೋಭೆ
ನಾ ಶೋಭೆ ನನ್ನ ಪತಿ ........... ದೇವರಿಗೆ.

೧೮೬೨. ಬನಕೆ ಗಿಡ ಮರ ಚೆಂದ
ಶೀಲ ನಾರಿಗೆ ಚೆಂದ
ತಾಳ ಹಾಡಿಕೆ ಚೆಂದ
ನಾ ಚಂದ ನನ್ನ ರಾಯರಿಗೆ ........

೧೮೬೩. ಹಸಿರು ಭೂಮಿ ಚೆಂದ
ಬಸಿರು ನಾರಿಗೆ ಚೆಂದ
ನಮ್ಮ ಮನೆಗೆ ನನ್ನ ...........ರೇ ಚೆಂದ.

೧೮೬೪. ಕೆಂಪು ಗುಲಾಬಿ ಕಂಪು
ನನ್ನ ...........ವರ ಬಣ್ಣ ನಸುಗಂಪು.

೧೮೬೫. ಮಗ್ಗುಲದಾಗ ನಿಂತಾಗ
ಮುಗುಳು ನಗಿ ನಗತಾರ
ಬಂಗಾರ ಬಳೆ ಕೇಳಿದರ
ಹಾರಿಗ್ಯಾಲ್ಲೆ ಓಡ್ತಾರ .....

೧೮೬೬. ಸತ್ಯ ಧರ್ಮದ ಮೂಲ
ನೀತಿ ನಡತೆಯ ಮೂಲ
ಶೀಲ ಶಾಂತಿಯ ಮೂಲ
ಸ್ವಾರ್ಥ ಪಾಪದ ಮೂಲ
ನನ್ನ ಗಂಡ ಮನಿಗೆ ಮೂಲ ....

೧೮೬೭. ನಾಚಿಕೊಬ್ಯಾಡ ಬಾ ಅಂತಾರ
ಮುಂಗೈ ಹಿಡಿತಾರ
ನಗೆಚಾಟಿಗಿ ಮಾಡ್ತಾರ
ಅತ್ತಿ ಬಂದ್ಲು ಕೈಬಿಡು ಅಂದ್ರ
ಒಂಕಿ ತಗದ ಉಡಿಯಾಗ ಹಾಕ್ತಾರ .....

೧೮೬೮. ಮೀಸ್ಯಾಗ ನಗತಾರ
ಮುಸಿ ಮುಸಿ ಮಾಡ್ತಾರ
ಹಾಲ ಕಾಸಿಕೊಡು ಅಂತ
ಹಟಾ ಮಾಡಿ ಗೋಳಿಡತಾರ .....

೧೮೬೯. ತಾಯಿ ಕೂಸಿಗೆ ಬೇಕು
ಬಾಯಿ ಮಾತಿಗೆ ಬೇಕು
ಆಳು ಸೇವೆಗೆ ಬೇಕು
ನಮ್ಮ .............. ಯಜಮಾನರಿಗೆ ನಾ ಬೇಕು.

೧೮೭೦. ಉಡಾಕ ಸೀರಿ ಇಲ್ಲ
ತೊಡಾಕ ಕುಬಸಾ ಇಲ್ಲ
ಮನ್ಯಾಗ ಕಾಳಿಲ್ಲ
ದುಡಿಯಾಕ ಹೋಗಂದ್ರ
ಹೊಡಿಯಾಕ ಬರ್ತಾನ .....

೧೮೭೧. ಎಣ್ಣಿ ಹಚ್ಚಿ ಎರಿಬೇಕಂತಾರ
ಬಿಸಿ ರೊಟ್ಟೀಗೆ ಬೆಣ್ಣಿ ಬೇಕಂತಾರ
ಅಕ್ಕಿ ತರ್ರಿ ಅಂದ್ರ ಬೆಕ್ಕಿದಾಂಗ ಹೊರಗ ಹೊಕ್ಕಾರ ....

೧೮೭೨. ಕತ್ತೆ ಅಂತ ಬೈತಾರ
ಮತ್ತೆ ನನ್ನ ಕರಿತಾರ
ಸುತ್ತಮುತ್ತ ನೋಡ್ತಾರ
ಮುತ್ತು ಕೊಟ್ಟು ನಗ್ತಾರ .....

೧೮೭೩. ಅಗಸಿ ಚಟ್ನಿ ಸೆಜ್ಜಿ ರೊಟ್ಟಿ
ಸಂಪಾಗಿ ಚಕ್ಕಡಿಗಟ್ಲೆ ತಿಂದು
ತಂಬಿಗಿ ಹಿಡಕೊಂಡು ಸಂದ್ಯಾಗ ಅಡ್ಡ್ಯಾಡತಾರ ....

೧೮೭೪. ಗುಂಗುರಗೂದಲ ಬಂಗಾರ ಬೇತಾಲಿ
ಬಂಗ್ಲೆದಾಗ ಕುಂತ ಇಂಗ್ಲೀಷಿಲ್ಲೆ ಕರೀತಾರ .....

೧೮೭೫. ಮುಂದಿನ ಮನಿ ಹಿಂದಿನ ಮನಿ
ಮ್ಯಾಗಿನ ಮನಿ ಕೆಳಗಿನ ಮನಿ
ನಡುವಿನ ಮನ್ಯಾಗ ಕುಂತ
ಪಗಡಿ ಆಡ್ತಾರ ......

೧೮೭೬. ಬೆಂಗಳೂರು ದೊಡ್ಡ ಸಿಟ್ಟಿ
ಓಣಿಗೊಂದ ತಗದಾರ ಯುನಿವರ್ಸಿಟಿ
ನನ್ನ ............. ಗಂಡಂದು ತಪ್ಪಲಿಲ್ಲ
ನನಗ ದಿನಾಲೂ ಕಟಿಪಿಟಿ.

೧೮೭೭. ಬಂಗಾರದಾಗ ಮುಚ್ಚೈತಿ ತಿರುಪತಿ
ಸಿಂಗಾರದಾಗ ನಿಂತೈತಿ ಕನಕಗಿರಿ
ನಮ್ಮ............ ರಿಗೆ ಮಂತ್ರಿಯಾಗೋ ಗುರಿ.

೧೮೭೮. ಹಸಿ ಕುರಿ ಹಾಲು ಬಿಳಿ ಜೋಳದ ಬಾನ
ಬಿಸಲಾಗಿಂದ ಬಂದ ಕೊಸರ್ಯಾಡಿ ಉಣ್ತಾರ ....

೧೮೭೯. ನಾಲ್ಕೂ ಮೂಲ್ಯಾಗ ಬಿಲ್ವಾರದ ಹಂಡೆ
ಮುಂದ ಜೋತಾಡತಾವು ಮುತ್ತಿನ ಗೊಂಡೆ
ನಮ್ಮ ............ ರಾಯರಿಂದಲೇ ನಾ ಸುಖ ಕಂಡೆ.

೧೮೮೦. ಸೀಗಿ ಹುಣ್ಣಿವ್ಯಾಗ ಬೆಳಗೋದು
ಮಣ್ಣಿನಾರತಿ
ಗೌರಿ ಹುಣ್ವಿಯಾಗ ಬೆಳಗೋದು
ಸಕ್ರಿ ಆರತಿ
ಮಂಗಲಕಾರ್ಯದಾಗ ಬೆಳಗೋದು
ಪಂಚಾರತಿ
ನಮ್ಮ ............... ರಾಯರಿಗೆ ನಾ ಬೆಳಗೋದು
ಪ್ರೇಮದಾರುತಿ.

೧೮೮೧. ಕರೆಕೋಟ ತೊಡಂಗಿಲ್ಲ
ಬೂಟ ಮೆಟ್ಟಾಂಗಿಲ್ಲ
ತಂಟೆ ಮಾಡದಿದ್ರೂ
ಗಂಟಿ ಹೊಡದಾಂಗ
ಗಂಟೆಗಟ್ಲೆ
ಮಾತಾಡ್ತಾರ ನಮ್ಮ ರಾಯರು .....

೧೮೮೨. ತಂಪತ್ತಿನ್ಯಾಗ ನೆನಿಬೇಕು
ಸಿರಸಂಗಿ ಲಿಂಗರಾಜರನ್ನ
ಸಂಪತ್ತಿನ್ಯಾಗ ಸ್ಮರಿಸಬೇಕು
ವಾರದ ಮಲ್ಲಪ್ಪನವರನ್ನ
ಮನಿ ದೇವರ ಮುಂದ ನೆನಿಬೇಕು.
ನನ್ನ ಭಾಗ್ಯದ ರಾಯರನ್ನ .....

೧೮೮೩. ಒಕ್ಕಲತನ ಮಾಡ್ತಾರ, ಹಕ್ಕಿ ಪಕ್ಕಿ ಹೊಡೀತಾರ
ರೊಕ್ಕ ಸಿಕ್ರ ಸಾಕು ಮನಿ ಮನಿ ತಿರಗತ್ತಾರ ....

೧೮೮೪. ಗೋದಿ ಬಕ್ರಿ ಕೆಂಪು ಸಕ್ಕ್ರಿ
ಊಟಕ್ಕ ಬಾ ಅಂದ್ರ ತೋಟಕ್ಕ ಹೋಗ್ತಾರ ....

೧೮೮೫. ಉಳ್ಳಗಡ್ಡಿ ಕೊರೆತ
ಬದ್ನಿಕಾಯಿ ಭರತ
ಹಳ್ಳಿಯಾಕೆಂತ ನನ್ನ ಮರತ
ಪ್ಯಾಟ್ಯಾನಾಕಿನ್ನ ಬೆರತಾರ .....

೧೮೮೬. ಅಪ್ಪ ಕಟ್ಟಿಸ್ಯಾನ ದೊಡ್ಡ ಕಿಡಕಿಮನಿ
ಮಾವ ಕಟ್ಟಿಸ್ಯಾನ ಬಾಳ ಕಿಡಕಿಮನಿ
ಕಿಡಿಕ್ಯಾಗ ನಿಂತ ಕಣ್ಣು ಹೊಡಿತಾರ .....

೧೮೮೭. ದೂರದ ಗುಡ್ಡ ಕಣ್ಣಿಗೆ ಚೆಂದ
ಊರೂರಿಗೆ ಅಗಸಿದ್ದ್ರ ಚೆಂದ
ನಮ್ಮ ............ ರಾಯರಿಗೆ
ಕಡೆಮನಿ ಗಂಗವ್ವ ಚೆಂದ.

೧೮೮. ಹುಬ್ಬಳ್ಳ್ಯಾಗ ಇರೂದು ಮೂರು ಸಾವಿರ ಮಠ
ಧಾರ್ವಾಡದಾಗಿರೂದು ಮುರುಘಾಮಠ
ನನ್ನಾರು ...... ಹೊಡಿತಾರ ಏನಿದ್ರೂ ಕಂಠಮಠ.

೧೮೯. ಸಾಕು ಪ್ರಾಣಿಗಳಲ್ಲಿ ಚೆಂದಿರೂದು ಮೊಲ
ನನ್ನ ............ ಗಂಡಗ ಎಳ್ಳಾಟ ಇಲ್ಲ ನನ್ನ ಮ್ಯಾಲ ಹಂಬಲ.

೧೯೦. ತಾಳಗೆಟ್ಟು ತಂಬಾಕಾ ತಿಂತಾರ
ಬ್ಯಾಡಂದ್ರ ಕೂಳು ಬಿಟ್ಟು ಕುಂದರತಾರ .....

೧೯೧. ಯಾರ್‍ಯಾರಿಗೋ ಕೊಟ್ಟು
ಸಿಂಗಾರಾ ಮಾಡ್ತಾರ
ನಾ ಬಂಗಾರಾ ಕೇಳಿದ್ರ
ಹ್ಯಾಂಗಾರ ಇರು ಅಂತಾರ .....

೧೯೨. ಜಾತಿ ಮುತ್ತು ಮೂಗಿನ್ಯಾಗಿನ ನತ್ತು
ಜಾಣಿ ಅಂತ ನನ್ನ ಮ್ಯಾಣೇದಾಗ ಕುಂದ್ರಿಸತಾರ ....

೧೯೩. ಹೂವಿನ್ಯಾಗ ಹೂವು ಹತ್ತಿ ಹೂವು
ಫಲದೊಳಗ ಫಲ ಮಕ್ಕಳಫಲ
ಮಲ್ಲಿಗಿ ತ್ವಾಟದಾಗ ಕುಂತು ಮಗನ್ನ ಆಡಿಸ್ತಾರ್ರ .....

೧೯೪. ಮನುಷ್ಯ ಜಲ್ಮಕ್ಕ ಬೇಕು ಮುಕ್ತಿ
ಅದನ್ನ ಪಡೆಯಲಿಕ್ಕೆ ಬೇಕು ಭಕ್ತಿ
ನನ್ನ ............. ರಾಯರೇ ನನ್ನ ಸರ್ವಶಕ್ತಿ.

೧೯೫. ಜೋಗದ ಜಲಪಾತದ್ದು ಎತ್ತರ
ಅದರ ಮುಂದೆ ಮನಸಾಗುವುದು ತತ್ತರ
ನನ್ನ ........... ರಾಯರ ಎಲ್ಲ ಪ್ರಶ್ನೆಗಳಿಗೆ
ನಾ ಕೊಡುವೆ ಉತ್ತರ.

೧೯೬. ನೆಲವಿನಮ್ಯಾಲ ಕೆನಿ ಮೊಸರು
ಬೆಲ್ಲದಾಗೈತಿ ಭತ್ತದ ಕಸರು
ನಾವು ಅಕ್ಕ ತಂಗ್ಯಾರು ಹೇಳೂದು
ನಮ್ಮ ರಾಯರದೊಂದ ಹೆಸರು .....

೧೮೯೭. ಸರಾ ಹಾಕೀನಿ ಮುಂದ ಸಾಗಲ್ಯಾಂಗ
ಒಡ್ಯಾಣಾ ಇಟ್ಟೀನಿ ಕೆಳಗ ಬಾಗಲ್ಯಾಂಗ
ಮೂಗೀಗೆ ನತ್ತ ಇಟ್ಟೀನಿ ನಗಲ್ಯಾಂಗ
ಮಂದ್ಯಾಗ ಕುಂತ ನನ್ನವರನ್ನ ಕರಿಲ್ಯಾಂಗ ....

೧೮೯೮. ಶಿವಾಜಿ ಮಹಾರಾಜರು ಪ್ರಸಿದ್ಧಿಗೆ ಬಂದದ್ದು
ತಾಯಿ ಜೀಜಾಬಾಯಿ ಕಾರಣದಿಂದ
ನನ್ನ ಮುತ್ತೈದಿತನ ಬಂದದ್ದು
ನಮ್ಮ ............ ರಾಯರ ಕೈಹಿಡಿದಾಗಿಂದ.

೧೮೯೯. ಪುತ್ರಕಾಮೇಷ್ಠಿ ಯಾಗದಲ್ಲಿ
ಆಕಾಶ ರಾಜನಿಗೆ ಸಿಕ್ಕಳು ಪದ್ಮಾವತಿ
ಕಲಿಯುಗದಲ್ಲಿ ಆಕೆಯೇ
ತಿರುಮಲೇಶನ ಮಹಾಸತಿ
ನನ್ನ ........... ರಾಯರಿಂದಲೇ ನನಗೆ ಸದ್ಗತಿ.

೧೯೦೦. ಗಂಡಸರ ಕೈಯಾಗ ಕೂಸು ನಿಲ್ಲಾಂಗಿಲ್ಲ
.........ರ ಕೈಯಾಗ ಹಣ ನಿಲ್ಲಾಂಗಿಲ್ಲ.

೧೯೦೧. ಒಡಪು ಹೇಳೂದೊಂದು ಚಮತ್ಕಾರಾ
ನನ್ನ ಗಂಡನ ಮನಸೋ ದಿನಕ್ಕೊಂದು ಚಿತ್ತಾರ ....

೧೯೦೨. ಕನ್ನಡಕ್ಕ ಮಾಡಬ್ಯಾಡ್ರಿ ತಿರಸ್ಕಾರ
ನನ್ನ ಗಂಡ ............ ಕೊಟ್ಟಾನ ಅಡಗಿ ಮನಿ ಅಧಿಕಾರ.

೧೯೦೩. ರಾಮಾಯಣದಲ್ಲಿದ್ದಾವಾ ಮಾರುತಿ
ದೊಡ್ಡಾಟದಲ್ಲಿದ್ದಾವ ಸಾರಥಿ
ನನ್ನ ಅತ್ತಿ ಮಾವ ಬೆಳಗ್ಯಾರ ಮನಿ ಕೀರುತಿ
ನಾ ......... ರಿಗೆ ಬೆಳಗುವೆ ತುಪ್ಪದಾರುತಿ.

೧೯೦೪. ಊರೂರಿಗೆ ಸಾರ್ತಾರ ಡಂಗುರ
ಖಜಾನ್ಯಾಗ ಇರೂದು ಹಣದಾಗರ
ನಮ್ಮ ........... ರಿಗೆ ಹಾಕ್ತೀನಿ
ಬಂಗಾರದುಂಗುರ.

೧೯೦೫. ಸೀತಾದೇವಿಗೆ ರಾಮನ ಚಿಂತೆ
ಸಾವಿತ್ರಿಗೆ ಸತ್ಯವಾಹನನ ಚಿಂತೆ
ದ್ರೌಪತಿಗೆ ಪಾಂಡವರ ಚಿಂತೆ
ಅಕ್ಕಮಹಾದೇವಿಗೆ ಮಲ್ಲಿಕಾರ್ಜುನನ ಚಿಂತೆ
ನನಗೆ ನಮ್ಮ ........... ರಾಯರ ಚಿಂತೆ.

೧೯೦೬. ಶ್ರೇಷ್ಠ ಶಿವಶರಣ ಅಲ್ಲಮ
ನಾ ........... ರಿಗೆ ಹಚ್ಚುವೆ ಕುಂಕುಮ.

೧೯೦೭. ನವಂಬರ್ ಒಂದು ರಾಜ್ಯೋತ್ಸವದ ದಿನ
ಹತ್ತೊಂಬತ್ತು ನೂರಾ ನಾಲ್ವತ್ತೇಳು ಸ್ವಾತಂತ್ರ್ಯ ಸಿಕ್ಕ ದಿನ
ನಾ ನಮ್ಮ ..............ರನ್ನು ಲಗ್ನವಾದ ದಿನವೇ ಸುದಿನ.

೧೯೦೮. ಗಾಂಧೀಜಿ ಕನಸಿತ್ತು ಜಾಗತಿಕ ಶಾಂತಿ
ನನ್ನ ........... ರು ಮನೆಗೆ ಬರಲಿ ಮಾಡ್ತೀನಿ ಮಂಗಳಾರತಿ.

೧೯೦೯. ಬಂಗಾರ ಕೊಡಿಸೂ ಸುದ್ದಿ ಇಲ್ಲ
ಸಿಂಗಾರಗನ್ನೋ ಮಾತs ಇಲ್ಲ
ಅಂಗಳದಾಗ ನಿಂತ ಹಾಂಗ್ಯಾಂಗೋ ಮಾತಾಡ್ತಾರಾ ....

೧೯೧೦. ಹಟ್ಟಿ ಬಂಗಾರದ ಖಣಿ
ಬಳ್ಳಾರಿ ಮ್ಯಾಂಗೇನಿಜ ಗಣಿ
ನನ್ನ .............. ರಾಯರ
ಹೆಗಲ ಮ್ಯಾಗೈತಿ ಗಿಣಿ.

೧೯೧೧. ಬಂಗಾರದ ಕವಣಿ ಬೆಳ್ಳಿ ಹಗ್ಗ
ಹಕ್ಕಿ ಹೊಡೀಯಂದ್ರ
ದುಃಖ ಆಕ್ಕೈತಿ ಅಂತಾನ .....

೧೯೧೨. ಕನ್ನಡಕ್ಕ ಎಂಟು ಜ್ಞಾನಪೀಠ ಪ್ರಶಸ್ತಿ
ಕಳ್ಳರ ಸಲುವಾಗಿ ನನ್ನ ಗಂಡ ಹೋಗ್ತಾನ ಗಸ್ತಿ ....

೧೯೧೩. ಚಪಾತಿಗೆ ಪದರ ಬಾಳಾ
ನನ್ನ ಮ್ಯಾಲ ನನ್ನ ............ರ ನೆದರಬಾಳಾ.

೧೯೧೪. ತಿಂಗಳ ಬೆಳಕಿನ್ಯಾಗ
ತಂಪತ್ತಿನ ಹೊತ್ತಿನ್ಯಾಗ
ಗಂಗಾಳ ತಗೊಂಡ
ಅಂಗಳದಾಗ ಕುಂತ
ತಂಗಳನ್ನ ತಿಂತಾರ ....

೧೯೧೫. ಮೈಯಾಗ ಕೋಟು
ಕಾಲಾಗ ಕರೇ ಬೂಟು
ಹೋಟೆಲ್ಲದಾಗ ಊಟಾ ಮಾಡಿ
ಮನಿಗೆ ಬಂದ ಕಾಟಾ ಕೊಡ್ತಾರ .....

೧೯೧೬. ಅಳ್ಳಿಟ್ಟು, ತಂಬಿಟ್ಟು ಹಪ್ಪಳ ಸಂಡಿಗಿ ನೀಡಿದರ
ತುತ್ತಿಗೊಮ್ಮೆ ತುಪ್ಪಾ ಕೇಳ್ತಾರ .....

೧೯೧೭. ಒಪ್ಪತ್ತು ಉಣತಾರಾ
ಇಪ್ಪತ್ತು ಎಕ್ರೆ ಬಿತ್ತಿ ಮನಿಗೆ ಬರ್ತಾರ .....

೧೯೧೮. ಆರು ಸೇರು ಅಳ್ಳಿಟ್ಟು
ಮೂರ ಸೇರು ತಂಬಿಟ್ಟು
ವಾರ್ಯಾಗ ಕುಂತು ಮ್ಯಾರಿ ಮಾಡ್ತಾರ ....

೧೯೧೯. ಪಡಿ ಮಂಡಾಳ ಧಡೆ ಉಳ್ಳಾಗಡಿ
ಪಂಚೇರ ಖಾರಾ ಅಚ್ಚೇರ ಕೊಬ್ಬರಿ
ಪಡಸಾಲ್ಯಾಗ ಕುಂತ ಫಲಾರ ಮಾಡ್ತಾರ ....

೧೯೨೦. ಹಕ್ತರಕಿ ಹದಾ ಮಾಡಿ, ರುಚಿಯಾದ ಪುಂಡಿಪಲ್ಲೆ ಮಾಡಿ
ಆರು ರೊಟ್ಟಿ ಕಟಿಗೊಂಡು ಹರಗಿ ಬಾ ಅಂದ್ರ
ಮೂರು ರೊಟ್ಟಿತಿಂದು, ಕೆರಿದಂಡಿಗೆ ತೆಲಿಕೊಟ್ಟು
ಎತ್ತ ಕಟ್ಟಿ ಮಲಗಿ ಬರ್ತಾರ .....

೧೯೨೧. ತಾಟಿನ್ಯಾಗ ತಾಟು ಅದರಾಗ ಬಿಸ್ಕೀಟು
ಬಿಸ್ಕೀಟ ತಿಂದ ಇಸ್ಪೀಟ್ ಆಡಾಕ ಹೋಗ್ತಾರ ....

೧೯೨೨. ನವಿಲಿಗೆ ಗರಿಯೇ ಸಿಂಗಾರ
ಸಮುದ್ರಕ್ಕೆ ತೆರೆಯೇ ಸಿಂಗಾರ
ನಮ್ಮ ಮನೆತನಕ್ಕೆ ನನ್ನ .........ರಾಯರೇ ಸಿಂಗಾರ.

೧೯೨೩. ರಸವಂತಿ ಇರುವಂತಿ
ಸಂಪಿಗೆ ಸೇವಂತಿ
ಸೂಜಿ ಮಲ್ಲಿಗೆ ಜಾಜಿ ಮಲ್ಲಿಗೆ
ನನ್ನ ............ ರಾಯರು ಮುಡಿಸತಾರ ನನಗ
ಮೈಸೂರು ಮಲ್ಲಿಗೆ.

೧೯೨೪. ನನ್ನ ............. ಇವರದು
ಪ್ರೇಮ ವಿವಾಹ
ಇವತ್ತಿಗೂ ಬಿಡಿದಿಲ್ಲ
ಜಗಳದ ಹವಾ.

೧೯೨೫. ಅತ್ಲಾಗ ಮಾವಾ ಇತ್ಲಾಗ ಅತ್ತಿ
ಕತ್ತಲದಾಗ ಬಂದ ಕೈ ಹಿಚುಕತಾರ .....

೧೯೨೬. ಕುದುರೀಗೆ ಹಾಕ್ಯಾನ ಕುತನಿ ಥಡಿ
ಕೈಯಾಗ ಹಾಕ್ಯಾನ ಬಂಗಾರ ಕಡಿ
ಓಣ್ಯಾಗ ಬರ್ತಾನ ನನ್ನ .......... ದೊರಿ, ಖೂನಾ ಹಿಡಿ.

೧೯೨೭. ಹತ್ತು ಬಟ್ಟೀಗೆ ಹತ್ತು ಉಂಗುರ
ಅದಾರಗೊಂದು ಮುತ್ತೀನುಂಗುರ
ನಮ್ಮ ಮದುವ್ಯಾಗಿದ್ದಿಲ್ಲ ಕಂದರ
ಕೂಡಿದ್ಕೆಲ್ಲ ದೇವಕಿ ಮಂದಿರ
ಹೋಗಿದ್ದೆ ನನ್ನ ...............ರ ಕೂಡ ನೋಡಾಕ ಚಂದಿರ.

೧೯೨೮. ಸುಳ್ಳು ಹೇಳಿದ್ರೂ ಕೇಳ್ತಾನ
ಖರೆ ಹೇಳಿದ್ರೂ ಕೇಳ್ತಾನ
ಕೇಳಿ ಕೇಳಿ ಬೆವತೀನಿ
ಗಾಳಿ ಹೊಡಿ ಅಂತಾನ ....

೧೯೨೯. ದಿಲ್ಲಿ ಕೆಂಪಕೋಟಿ ನೋಡ
ಹೈದ್ರಾಬಾದ ಚಾರಮಿನಾರ ನೋಡ
ವಿಜಾಪುರದ ಗೋಳಗುಮ್ಮಟ ನೋಡ
ಆಗ್ರಾದ ತಾಜಮಹಲ ನೋಡ
ಬಭ್ರುವಾಹನ ಪಾರ್ಟ ಮಾಡಿದ ನನ್ನ ..........ರ ಠೀವಿ ನೋಡ.

೧೯೩೦. ಆಳಿಗೊಂದು ಮನಿ
ಸೂಳಿಗೊಂದ ಮನಿ
ಬಂದವರ್ಗೆ ಒಂದ ಮನಿ
ನನಗ ಕಟ್ಟಿನ್ಯಾನ ಅರಮನಿ
ಆತ ಇರೂದು ಆಲಿಮನಿ .....

೧೯೩೧. ಜೋಳಾ ತಗೊಂಡ ಬಾ ಅಂದ್ರ
ಹಗೇದಾಗ ಅದಾವು ಅಂತಾನಾ
ಎಣ್ಣಿ ತಗೊಂಡ ಬಾ ಅಂದ
ಗಾಣದಾಗ ಐತಿ ಅಂತಾನಾ
ಚಾ ಕುಡಿಯಾಕ ಬಾ ಅಂದ್ರ
ಹಾರಿಗ್ಗಾಲ್ಲೆ ಬರ್‍ತಾನ .........

೧೯೩೨. ಸಂತೀಗೆ ಹೋಗಿ ಬರ್‍ರಿ ಅಂದ್ರ
ಸಂದ್ಯಾಗ ಕುಂತ ಚಿಂತಿ ಮಾಡ್ತಾರಾ ....

೧೯೩೩. ಅಂಗೈಯಾಗ ಅರಗಿಣಿ
ಮುಂಗೈಯಾಗ ಮರಿಗಿಣಿ
ಮುದ್ದಿನಿಗಿಣಿ ಅಂತಾ ನನಗ ಮುದ್ದು ಕೊಡ್ತಾರ ....

೧೯೩೪. ಹಸುರಂಗಿ, ಹಳದಿ ಪಟಗ
ಕ್ವಾರಿ ಮೀಸಿ ಬಿಟಗೊಂಡು
ಕನಕಾಪೂರ ಜಾತ್ರೀಗಿ ಹೋಗ್ತಾರ ....

೧೯೩೫. ಮನೆಯೇ ಮಂತ್ರಾಲಯ
ನನ್ನ .............. ರ ಸಂಗವೇ ಶಿವಾಲಯ.

೧೯೩೬. ಬಣ್ಣದ ಹಬ್ಬ ಹೋಳಿ
ಶಕ್ತಿದೇವತೆಗಂತಾರ ಕಾಳಿ
ದೆವ್ವ ಬಡದ್ರ ಅಂತಾರ ಗಾಳಿ
ಎಲ್ಲಿ ನೋಡಿದ್ರೂ ಕಾಣ್ತಾವು ಫಾರ್ಮ ಕೋಳಿ
ಉಪ್ಪ ತಗಿಯೂ ಜಾಗಾಕ ಅಂತಾರ ಮಾಳಿ
ನಮ್ಮ ............. ರಾಯರು ಬಿಡವೊಲ್ಲರು ಕುಡಿಯೋ ಚಾಳಿ.

೧೯೩೭. ಈ ಸಾರೆ ರಾಜ್ಯೋತ್ಸವ ಪ್ರಶಸ್ತಿ ಬಂದದ್ದು
ನಮ್ಮನಿಗೊಂದು ತುರಾಯಿ
ನನ್ನ ಗಂಡ ............. ಕುಡಿತಾನ ಹೊಟ್ಟೆ ತುಂಬಾ ಸರಾಯಿ.

೧೯೩೮. ಮಳಿಹನಿ ಬೀಳೋದು ಫಳಾ ಫಳಾ
ಶ್ರೀಕೃಷ್ಣನ ಚಕ್ರ ತಿರಗೋದು ಥಳಾ ಥಳಾ
ನೀರಿಲ್ಲ ಅಂತಾರ ಜನಾ ನಳಾನಳಾ
ನಮ್ಮ ............ ರಾಯರ ಹೆಸರ ಹೇಳುವೆ ಝಳಾ ಝಳಾ.

೧೯೩೯. ರಾಡ್ಯಾಗ ರಾಡಿ ಹುಣಸಿ ರಾಡಿ
ಬೀಗರು ಬಂದಾಗ ಹಾಸೂದು ಜಾಡಿ
ಬಂಗಾರ ಕೊಡಿಸಾಕ ಇವರಿಗೇನ ಧಾಡಿ .......

೧೯೪೦. ಸಂದುಕದಾಗ ಸರಗಿ
ಕಂದಕದಾಗ ಬಳಿ
ಬಂಕದಾಗ ರುಳಿ
ತಂದು ಕೊಡ್ರಿ ಅಂದ್ರ
ತಂದೀನಿ ಅವ್ವನ್ನ ಕೇಳ್ತೀನಿ ಅಂತಾರ ....

೧೯೪೧. ತವರೀಗೆ ಕರಿಲಾಕ ಬಂದಾನ ನಮ್ಮಣ್ಣ
ನನ್ನ ............ ರಾಯರು ಮಾರಿ ಮಾಡ್ಯಾರ ಸಣ್ಣ.

೧೯೪೨. ಗ್ವಾದ್ಲ್ಯಾಗ ದಂಟಿಲ್ಲ
ಕೈಯಾಗ ಗಂಟಿಲ್ಲ
ಪಾಟ್ಲಿ ತರತೀನಂತ
ಪ್ಯಾಟಿ ತಿರುಗತಾರ ......

೧೯೪೩. ನಮ್ಮಾವ ಹಣವಂತ, ನನ್ನತ್ತಿ ಗುಣವಂತಿ
ನನ್ನ ............. ಯಜಮಾನ ಪುಣ್ಯವಂತ.

೧೯೪೪. ಶಿವ ಕಥೆ ಕೇಳಿದರೆ ಶ್ರವಣ ಸಾರ್ಥಕ
ಶಿವಸ್ತೋತ್ರ ಮಾಡಿದರೆ ನಾಲಿಗೆ ಸಾರ್ಥಕ
ದೇವರಂಥ ನನ್ನ ............. ಗಂಡನ ಕೈಹಿಡಿದ ನನ್ನ ಜನ್ಮ ಸಾರ್ಥಕ.

೧೯೪೫. ಮಾರುದ್ದ ಗುದ್ಲಿ, ಮನಿ ಉದ್ದ ಕಾವು
ಹಾರಾಡಿ ಕಡದು ಹಕ್ಕರಕಿ ಹರಿಲಿಲ್ಲಾಂತ
ಹಲ್ಲಕಿಸ್ತ ಚಾ ಕೇಳ್ತಾರ .....

೧೯೪೬. ತೆಲಿ ಕೂದಲಾ ಕತ್ತರಿಸೋದು ಕತ್ರಿ
ದೇವರಿಗೇರಿಸೋದು ಪತ್ರಿ
ನಮ್ಮ ...............ರ ಹರಕ ಬಾಯಿಗೆ
ಹಲ್ಲು ಮುರಿಸಿಕೊಳ್ಳೂದು ಖಾತ್ರಿ.

೧೯೪೭. ಮೆಂತೇದ ಹಿಟ್ಟು ನೆಲ್ಲಿಚೆಟ್ಟು
ನನ್ನ ಕಂಡ್ರ ನನ್ನ ........... ರಿಗೆ ಬಾಳ ಸಿಟ್ಟು.

೧೯೪೮. ಮನಿ ತುಂಬಾ ಅಂಕಣ
ಕೈಯಾಗ ಚಿನ್ನದ ಕಂಕಣ
ಬಂಕದಾಗ ಕುಂತು ವಂಕಿ ಮಾಡಿಸ್ತಾರ .....

೧೯೪೯. ಹೊಲ ಎಲ್ಲಾ ಕಸರು
ಅಕ್ಕ ತಂಗಿ ಬಸುರು
ಇಬ್ಬರಿಗೂ ಒಂದ ಗಂಡನ ಹೆಸರು .....

೧೯೫೦. ತಾಳಗೆಟ್ಟು ತಂಬಾಕ ಸೇದತಾರ
ಬಾಳೇಗೆಟ್ಟು ತುಂಬಾ ತಿರುಗತಾರ
ಕೂಳು ಬಿಡಬ್ಯಾಡ್ರಿ ಅಂದ್ರ ನ್ಯಾಯಾ ಮಾಡ್ತಾರ ....

೧೯೫೧. ಕೈಯಾಗ ಮಗು
ಮಾರಿ ಮ್ಯಾಲ ನಗು
ಕಂದನ್ನ ಎತಿಗೊಂಡು
ಮುಂದಕ ಬರ್ತಾರ .....

೧೯೫೨. ಎಮ್ಮಿ ಹಿಂಡೂದು ಮೂರು ತಂಬಿಗಿ ಹಾಲು
ಅತ್ತಿ ಮಾರೂದು ಆರು ತುಂಬಿಗಿ ಹಾಲು
ನನ್ನ ಗಂಡ ........... ಹಾಲ ಹಾಲಂತ.
ತಗೊಂತಾನ ದಿನಾಲೂ ಕೈಯಾಗ ಕೋಲು.

೧೯೫೩. ಶಿವಜಾಗರಣಿಗೆ ಕುಂದ್ರತಾರ
ಉಪವಾಸ ಅಂತಾ ಹೇಳಿ
ಒಳಗ ಮೃಷ್ಟಾನ್ನ ಹೊಡಿತಾರ ....

೧೯೫೪. ಸಜ್ಜೀ ರೊಟ್ಟಿ ಗಜ್ಜರಿ ಪಲ್ಲೆ
ಸಜ್ಜಾಗಿ ಉಣ್ರಿ ಅಂದ್ರ ಮಜ್ಜಿಗಿ ಸಾರ ಕೇಳ್ತಾರ .....

೧೯೫೫. ಕಂಟ್ರೋಲ ಅಕ್ಕಿ ಬರಾ
ಅತ್ತೀಗಿ ಬಂದಾವು ಕೆಟ್ಟ ಜ್ವರಾ
ಮಾವನ ಕಾಲು ನಡಗತಾವು ಥರಾ ಥರಾ
ಏನ್ ಮಾಡ್ಲ್ಯೋ ಹರ ಹರಾ
ನನ್ನ ............ ಗಂಡಗ ನನಗ
ಕೂಡಿಬಂದಿಲ್ಲ ವರಾ.

೧೯೫೬. ಮಾಡಬಾರದ್ದು ಮಾಡ್ತಾರ
ಆಡಬಾರದ್ದು ಆಡ್ತಾರ
ಮಾಳಗಿ ಮ್ಯಾಲ ಕುಂತಗೊಂಡು
ಹಣಿ ಹಣಿ ಬಡಕೊಳ್ತಾರಾ .....

೧೯೫೭. ಖಾದಿ ತೊಟ್ಟಾರ, ಹಾದಿ ಬಿಟ್ಟಾರ
ಊದೂದು ಬಿಟ್ಟು ಒದರೂದು ತರತಾರ .....

೧೯೫೮. ಮುಂಗಾಲ ಪುಟಗಿ ಆಡ್ತಾರ
ಬಂಗಾಲಿ ಆಟಾ ಹೂಡತಾರ
ಮಂಗನಾಟಾ ಆಡಿ ಮುಂಜಾನೆ ಬರ್ತಾರ ....

೧೯೫೯. ನೀರ ಎರೆದು ಗಿಡ ಬೆಳೀತು
ಧಾರೆ ಎರೆದು ಮದುವಿ ಆತು
ಇಂತಾ ಕುಡುಕ ಗಂಡನ್ನ ಕೂಡಿ
ನನ್ನ ಬಾಳ್ ಹಳ್ಳಾ ಕೂಡಿತು ....

೧೯೬೦. ಮದುವೆಗೆ ಮೊದಲು ಕೇಳ್ತಾರ ಗೋತ್ರ
ಪಟ ಹಾರಲು ಬೇಕು ಯೋಗ್ಯಸೂತ್ರ
ನಮ್ಮ ............. ರಾಯರು ಕಟ್ಟಿದ್ದು ಮಂಗಳಸೂತ್ರ.

೧೯೬೧. ನಮ್ಮ ಮಾವನ ಮನ್ಯಾಗ
ನೋಟಿನ ಮ್ಯಾಲ ನೋಟಿನ ಕಟ್ಟು
ಅವುನ್ನ ತಂದುಕೊಡು ಅಂದ್ರ
ನನ್ನ ............. ರಿಗೆ ಭಾರಿ ಬಿಕ್ಕಟ್ಟು.

೧೯೬೨. ಗಾಂಧಿ ಸತ್ಯದ ಅವತಾರ
ನೆಹರು ಭಾರತದ ಹರಿಕಾರ
ಸುಭಾಸ ಭಾರತ ವಿಮೋಡನಾ ಶೂರ
ನನ್ನ ಹೃದಯದಲ್ಲಿ ನನ್ನ ...........ರೇ ಪರಮೇಶ್ವರ.

೧೯೬೩. ನಮ್ಮಜ್ಜ ಮಲಗಿದ್ದು ಪಡಶಾಲಿ
ನಮ್ಮಪ್ಪ ಕಲಿತದ್ದು ಪಾಠಶಾಲಿ
ನಾನು ಕಲಿತದ್ದು ಕನ್ನಡ ಶಾಲಿ
ನಮ್ಮ ............. ಯಜಮಾನರು
ಕಲಿತದ್ದು ವಯಸ್ಕರ ಸಾಲಿ.

೧೯೬೪. ಮಹಾಕಾವ್ಯ ಬರದಾವ್ರು ಬಾಳ ಮಂದಿ
ಅದನ್ನ ಓದಾವ್ರು ಬಾಳ ತುಸು ಮಂದಿ
ನಮ್ಮನ್ಯಾಗ ಇರೋರೆಲ್ಲಾ ವ್ಯಾಪಾರಿ ಮಂದಿ
ನಮ್ಮ .......... ರಿಗೆ ಗೊತ್ತು ಧಾರಣಿ ಕಾಳಕಡಿ ಅಲಸಂಧಿ.

೧೯೬೫. ಲಕ್ಷ್ಮೀಶನು ಬರೆದದ್ದು ಜೈಮಿನಿ ಭಾರತ
ನನ್ನ ............ ರಾಯರು ಹತ್ತಿ ಬರ್ತಾರ ಐರಾವತ.

೧೯೬೬. ನಿಜಾಮನ ರಾಜಧಾನಿ ಇದ್ದದ್ದು ಹೈದ್ರಾಬಾದ
ತುಂಗಭದ್ರಾ ಡ್ಯಾಮ ಇರೋದು ಮುನಿರಾಬಾದ
ನನ್ನ ಪುಣ್ಯಾತ್ಮ ..........ರ ಬಾಳೇ ಪೂರಾಬಾದ.

೧೯೬೭. ಭಾರತರತ್ನ ವಿವೇಕಾನಂದ
ನನ್ನ ............. ರಿಂದಲೇ ನನಗಾನಂದ.

೧೯೬೮. ಮುಂಬೈ ಅಂತಾರ ಮದ್ರಾಸ್ ಅಂತಾರ
ಬಂಗಾರ ಅಂತಾರ, ಊಟಗೋ ಅಂತಾರ
ಏನೇನೋ ಆಸೆ ತೋರಿಸಿ ಬರಗಾಲ ಅಂತಾರ
ಭೋಳೇನಾಂಗ ಮಾಡತಾರ ........

೧೯೬೯. ಹಮ್ಮು ಗಿಮ್ಮಿಗೆ ಇಂದ್ರ ಕೆಟ್ಟ
ಪಗಡಿ ಆಡಿ ಧರ್ಮರಾಜ ಕೆಟ್ಟ
ದ್ರೌಪತಿ ಮುಟ್ಟಿ ದುಶ್ಯಾಸನ ಕೆಟ್ಟ
ಕವಚ ಕೊಟ್ಟು ಕರ್ಣ ಕೆಟ್ಟ
ಭೂಮಿ ಕೊಡದ ಕೌರವ ಕೆಟ್ಟ
ಸೀತಾನ್ನ ಮುಟ್ಟದ ರಾವಣ ಕೆಟ್ಟ
ನಾಟಕ ಆಡಿ ನನ್ನ ಗಂಡ ಕೆಟ್ಟ .....

೧೯೭೦. ಬೋರಮಳ ಸರಾ
ಕೈಯಾಗ ಮೊರಾ
ಕೇರಿಕೊಂತ ಕುಂತ್ರ
ಗೂರಿಕೊಂತ ಹಂತೇಲಿ ಬರ್ತಾರ .....

೧೯೭೧. ಗ್ವಾಡಿ ಮ್ಯಾಗ ಬೋರ್ಡು
ನಾವಿರೋದು ನಾಲ್ಕನೇ ವಾರ್ಡ್
ನಮ್ಮ ಮನೆಯವರಿಗೆಲ್ಲ ಹಸಿರು ಕಾರ್ಡ್ .....

೧೯೭೨. ಸಿಟ್ಟಿನಲ್ಲಿ ದುರ್ವಾಸ
ಕಾವ್ಯದಲ್ಲಿ ಕಾಳಿದಾಸ
ಕೀರ್ತನೆಯಲ್ಲಿ ಕನಕದಾಸ
ಹಾಡಿನಲ್ಲಿ ಪುರಂದರದಾಸ
ನಮ್ಮವರೆ ...........ರು ಮಾಡ್ತಾರ ರಮಿಸಿಗೊಂತ ಮರೆಮೋಸ.

೧೯೭೩. ಘನಮಠಾಧೀಶ್ವರರಂಥಾ ಕೃಷಿ ವಿಜ್ಞಾನಿ ಇಲ್ಲ
ಸರ್ವಜ್ಞನಂಥ ಲೋಕಜ್ಞಾನಿ ಇಲ್ಲ
ವಿಶ್ವೇಶ್ವರಯ್ಯರಂಥ ಇಂಜಿನೀಯರಿಲ್ಲ
ಲಾಲಬಹದ್ದೂರ ಶಾಸ್ತ್ರಿಗಳಂಥ ರಾಜಕಾರಣಿ ಇಲ್ಲ
ಮೃತ್ಯುಂಜಯ ಅಪ್ಪಗಳಂಥ ಪುಣ್ಯ ಜೀವಿಗಳಿಲ್ಲ
ಸಿದ್ಧಗಂಗಾ ಶ್ರೀಗಳಂಥ ದಾಸೋಹಿ ಶರಣರಿಲ್ಲ
ನನ್ನ ............. ಯಜಮಾನರಿಗಿಂತ ನನಗೆ ರಸಿಕರಿಲ್ಲ.

೧೯೭೪. ರಾಗಾಮಾಡಿ ಹಾಡ್ತಾರ ತಾಳೆಪತ್ರ ಓದುತಾರ
ರಾತ್ರಿ–ಏಳತಾರ ಹಗಲ ಮಲಗತಾರ
ಜಾತ್ರೀಗಿ ಹೋಗಿ ಧೋತ್ರ ಕಳಕೊಂಡು
ಮನೀಗೆ ಬರ್ತಾರಾ .....

೧೯೭೫. ಶುಂಠಿಯಂಥ ವನಸ್ಪತಿ ಇಲ್ಲ
ಕಂಠಿಸರದಂಥ ಆಭರಣ ಇಲ್ಲ
ಒಂಟಿಯಂಥ ಪ್ರಾಣಿಯಿಲ್ಲ
ನನಗ ನನ್ನ ........... ರಾಯರಿಗಿರುವ
ಜಂಟಿ ಇನ್ನೊಂದಿಲ್ಲ.

೧೯೭೬. ದೀಪಕ್ಕೆ ಎಣ್ಣಿ ಬೇಕು
ಕೋಪಕ್ಕೆ ಶಾಂತಿ ಬೇಕು
ನಮ್ಮ ............ ರಾಯರಿಗೆ
ಪರಮ ಭಕ್ತಿಬೇಕು.

೧೯೭೭. ರೋಗಿಗೆ ಔಷಧ ಬೇಕು
ಭೋಗಿಗೆ ಯೋಗ ಬೇಕು
ಯೋಗೀಗೆ ನಿಗ್ರಹ ಬೇಕು
ಸೋಗೀಗೆ ನಟನೆ ಬೇಕು
ನಮ್ಮ ........... ರಿಗೆ ನಾನೇ ಬೇಕು.

೧೯೭೮. ರೂಪದಲ್ಲಿ ಕಾಮಾ
ನಾನಂದ್ರ ಬಾಳ ಪ್ರೇಮ ......

೧೯೭೯. ಹಾಕೂದು ಮೊಳಾ
ಎಣಿಸೂದು ಗಳಾ
ನನ್ನ ............. ಯಜಮಾನಗ
ನನ್ನ ಮಾತಂದ್ರ ಬಾರಿ ಜಳಾ.

೧೯೮೦. ಹೊಲಕ ಹೋಗಿ ಬಂದಾರ
ನೆಲಕ ಹತ್ತಿ ಮಲಗ್ಯಾರ
ಜಳಕ ಜಳಕ ಅಂತ ಜಗಳಾ ಮಾಡ್ತಾರ .....

೧೯೮೧. ಜರೀದು ಮಾಲು ಜರತಾರಿಶಾಲು
ಕಡಗದ ಕೈ ಕ್ವಾರಿ ಮೀಸಿ
ಹರೇದ ಹುಡುಗಿ ಕಂಡ
ಹುಬ್ಬು ಹಾರಿಸ್ತಾರ ......

೧೯೮೨. ಹೂವಿನ ಮಡಿ ಕ್ಯಾದಗಿ ಹೊಡಿ
ನಾಗರ ಹೆಡಿ, ಸೀರಿ ದಡಿ
ಬೆಳ್ಳೀ ಛಡಿ ಹಿಡಕೊಂಡು
ಬೆಳ್ತನಾ ನೋಡಾಕ ಕುದುರಿ ಹೊಡಕೊಂಡ ಬರ್ತಾರ .....

೧೯೮೩. ಆಹಾರ ಧಾನ್ಯದ ಕೊರತಿ
ರೇಶನ್ ಅಂಗಡಿ ಸರತಿ
ಸಿನೇಮಾ ಹಾಲೆಲ್ಲಾ ಭರತಿ
ನನ್ನ .............. ರಾಯರಿಗೆ
ಬಂದೈತಿ ಫಜೀತಿ.

೧೯೮೪. ಗರಡಿ ಮನೀಗೆ ಹೋಗ್ತಾರ
ಕುಸ್ತಿ ಆಡತಾರ, ಮೈಯೆಲ್ಲ ಕೆಂಜಗಿ
ತೊಳಿಯಾಕ ಕರೀತಾರ ಸಂಜಿಗಿ .....

೧೯೮೫. ಸಾಲಾ ಮಾಡ್ತಾರ, ಚೊಲೊ ಚೋಲೋ ಉಣ್ತಾರ
ಸಾಲದವರು ಬಂದಗ ಬಾಲಾ ಅಲ್ಲಾಡಸ್ತಾರ ....

೧೯೮೬. ಕೇಳಿದ್ರ ಹೇಳ್ತಾರ, ಹೇಳಿದ್ದು ಕೇಳ್ತಾರಾ
ಆಳ ಹಚ್ಚಿ ಹೊಲ ಮಾಡಿಸ್ತಾರ
ಅರಸಾಗಿ ದಿನಾ ಮೆರಿತಾರ
ಮೆರಕೊಂತ ಮಲ್ಲಿ ಮನಿಗೆ ಹೋಗಿ
ಚಲ್ಲಾಟಾ ಆಡ್ತಾರ .....

೧೯೮೭. ಸ್ತುತಿಗೆ ಮೊದಲು ಗಣಪತಿ
ಮತಿಗೆ ಮೊದಲು ಸರಸ್ವತಿ
ಸಂಕಟ ಬಂದಾಗ ವೆಂಕಟಪತಿ
ನನ್ನ ............ ರಾಯರಿಂದಲೇ ನನಗೆ ಸದ್ಗತಿ.

೧೯೮೮. ಬಸವಣ್ಣನವರು ಮಾಡಿದ್ದು ಮನುಕುಲದುದ್ಧಾರ
ಮಹಾತ್ಮಗಾಂಧಿ ಮಾಡಿದ್ದು ಅಸ್ಪೃಶ್ಯೋದ್ಧಾರ
ನಮ್ಮ ......... ರಾಯರು ಮಾಡಿದ್ದು ಆತ್ಮೋದ್ದಾರ.

೧೯೮೯. ಕಂಟ್ರೋಲ್ ಕಾಲ ಹೊಟ್ಟಿಗೆ ಶೂಲ
ರೂಪಾಯಿಗೆ ಬರೂದಿಲ್ಲ ಜೊಳ್ಳ ಜ್ವಾಳ
ನನ್ನ ............ ಯಜಮಾನರು ಹಾಕೇ ಹಾಕ್ತಾರ ಪಗಡಿದಾಳ.

೧೯೯೦. ಗಾಂಧಿ ಟೊಪಗಿ ಮೋಸದ ಟೊಪಗಿ
ಮೋಸದ ಟೊಪಗಿ ಹಾಕಿ
ಕಂಡಕಂಡವರಿಗೆಲ್ಲ ಭಾಷೆ ಕೊಡ್ತಾರ ನನ್ನ .....ರು

೧೯೯೧. ತಿನ್ನೋದು ಪ್ಲೇಟು ಮಲಗೋದು ಕಾಟು
ತೊಡೋದು ಕೋಟು, ಕಿಸೆ ತುಂಬಾ ಹರಾಮಿ ನೋಟು
ನಮ್ಮ ............ ರಾಯರ ಮಗ್ಗಲಲ್ಲೇ ನನ್ನ ಸೀಟು.

೧೯೯೨. ಕಟ್ಟಿಮ್ಯಾಲ ಕುಂತಾರ, ಕೆಟ್ಟ ವಿಚಾರ ಮಾಡ್ತಾರ
ಮಟ್ಟಿ ಗಟ್ಟಲೆ ಕರಿಗಡಬು ತಿಂದು
ಹೊಟಿ ಹೊಟ್ಟ ಅಂತಾ ಅಳ್ತಾರ .....

೧೯೯೩. ಕೋಳಿಗೆ ಮೊಲೆ ಇಲ್ಲ
ಬಾಳೆಗೆ ಮುಳ್ಳು ಇಲ್ಲ
ಆಕಾಶಕ್ಕೆ ತೊಲೆ ಕಂಬ ಇಲ್ಲ
ನನ್ನ .............. ರಿಗೆ ನಾಲಗೇನ ಇಲ್ಲ.

೧೯೯೪. ಚಾವಡಿಗೆ ಹೋಗ್ತಾರ
ಚೌಕಾಸಿ ಮಾಡ್ತಾರ
ದುಡ್ಡು ಹೊಡಿತಾರ
ಬಡವರನ್ನು ತುಳೀತಾರ
ಕಡ್ಡಿ ಇದ್ದದ್ದ ಗುಡ್ಡಾ ಮಾಡಿ
ಮನೀಗೆ ಬಂದು ಗುಡ್ಡದಂತಾ ಮಾತ ಹೇಳ್ತಾರ ....

೧೯೯೫. ಕಡ್ಲಿ ಹಿಟ್ಟಿನ ಬುರಬುರಿ
ಅವಲಕ್ಕಿ ಹುರದೀನಿ ಕುರಿಕುರಿ
ನಮ್ಮ ............ ರಾಯರದ ನನಗೆ ಕಿರಿಕಿರಿ.

೧೯೯೬. ಉತ್ತರ ದಿಕ್ಕಿನಲ್ಲಿರುವುದು ಕಾಶಿ
ಅಲ್ಲಿರುವುದು ಪುಣ್ಯದ ರಾಶಿ
ನನ್ನ ............ ವರ ಹೆಸರ ಹೇಳುವೆ
ನಾನವರ ದಾಸಿ.

೧೯೯೭. ಶ್ರೀಹರಿಯು ದುಷ್ಟರ ಸಂಹಾರಕ್ಕಾಗಿ
ಹತ್ತು ಸಲ ಹುಟ್ಟಿದನು ಅವತಾರ ತೊಟ್ಟು
ನಾನು ನನ್ನವರ ಹೆಸರ ಹೇಳುವೆ ಕೇಳರಿ ಚಿತ್ತಗೊಟ್ಟು .....

೧೯೯೮. ಹರಕ ಅಂಗಿ ಹೊಲಸ ಧೋತರ
ಹರದಾರಿಗೊಂದು ಕಾಲಿಟಗೊಂಡು
ಹರಗಾಕ ಹೋಗ್ತಾರ .....

೧೯೯೯. ಸರಕಾರಿ ಅಧಿಕಾರಿಗಳು ಲಂಚಕ್ಕ ಅಂತಾರ ಮಾಮೂಲು
ದ್ರಾಕ್ಷಿ ಬೆಳೆಯೂ ಪ್ರದೇಶಂದ್ರ ಕಾಬೂಲು
ನಮ್ಮ ............. ರಿಗೆ ನಾ ದಿನಾಲೂ ಕೊಡುಗೆ ತಾಂಬೂಲ.

೨೦೦೦. ದಂಡು ಇಳಿದ ಜಾಗಕ್ಕ ಅನ್ನುವರು ಪಾಳ್ಯ
ನಮ್ಮ ............... ರಾಯರಿಗೆ ನಾ ಕೊಡುವೆ ವೀಳ್ಯ.

೨೦೦೧. ಬಾದಾಮಿ ಹೆಸರಾಗಿರುವುದು
ಚಾಲುಕ್ಯರು ಬನಶಂಕರಿ ದೇವಸ್ಥಾನದಿಂದ
ನನ್ನ .............. ರ ಹೆಸರು ಹೇಳುವೆ ಭಕ್ತಿಯಿಂದ.

೨೦೦೨. ಜಗನ್ನಾಥಸ್ವಾಮಿ ವಾಸಸ್ಥಾನ ಪುರಿ
ಕಣ್ಣಿಗೆ ಆಪರೇಶನ್ ಮಾಡ್ತಾರ ಬಂದಾಗ ಪರಿ
ನಮ್ಮ ............... ರಿಗೆ ನನ್ನ ಪ್ರೀತಿಗಳಿಸುದೇ ಗುರಿ.

೨೦೦೩. ಬಾಲಕೃಷ್ಣನು ಕಳತನದಿಂದ ಸವಿದದ್ದು ಕೆನಿ ಮೊಸರು
ಮಳೆ ಆದರೆ ಆಗುವುದು ಬಿತ್ತಿದ ಭೂಮಿಯಲ್ಲಿ ಹಸಿರು
ನಿಮ್ಮೆಲ್ಲರ ಪ್ರೀತಿಯಿಂದ ಹೇಳುವೆ ನಮ್ಮವರ ಹೆಸರು .....

೨೦೦೪. ಕಾಮಧೇನು ಹುಟ್ಟಿದ್ದು ದೇವಲೋಕದಲ್ಲಿ
ನನ್ನ .............. ರಾಯರ ಮದುವೆ ಆದದ್ದು ಬಾಲ್ಯದಲ್ಲಿ.

೨೦೦೫. ಎಷ್ಟು ಬಡೀತಿ ಬಡಿ, ಎದರಿಲ್ಲೆ ಹೊಡಿತೀ ಹೊಡಿ
ಬಂಗಾರದಂಗಡೀಗೆ ಹೋಗೂನು ನಡಿ .....

೨೦೦೬. ಕಡೆಮನಿ ಕರಿಯಪ್ಪ ನಡುವಿನ ಮನಿ ನಾರಪ್ಪ
ಮುಂದಿನ ಮನಿ ಮಲ್ಲವ್ವ, ಹಿಂದಿನಮನಿ ಹಾಲವ್ವ
ಮ್ಯಾಲಿನ ಮನಿ ಮುದಕಪ್ಪ, ಕೆಳಗಿನ ಮನಿ ಕಲ್ಲಪ್ಪ
ಬೇವಿನ ಮರದ ಬಂದವ್ವ, ಹುಣಸಿ ಮರದ ಹೂವಪ್ಪ
ಕಟ್ಟಿಮನಿ ಕೆಂಚವ್ವ, ತೆಗ್ಗಿನ ಮನಿ ತಂಗೆವ್ವ
ನಾ ನಮ್ಮ .................ರ ಹೆಸರ ಹೇಳ್ತೀನಿ ಕೇಳ್ರೆವ್ವ.

೨೦೦೭. ಹುಬ್ಬಳ್ಳಿ ನೋಡು, ಹುಬ್ಬಳ್ಳಿ ಮುಂದಿನ ಉಣಕಲ್ಲ ಕೆರಿ ನೋಡು
ನೀರು ತುಂಬೂ ನಾರಿ ನೋಡು, ನಾರಿ ಕೈಯಾನ ಕೊಡನೋಡು
ಕೈಯಾಗಿನ ಬಳಿ ನೋಡು, ಕೈಮ್ಯಾಲಿನ ಹಚ್ಚಿನೋಡು
ಹಚ್ಚಿ ನೋಡಿ ಮೆಚ್ಚಿ ಬಂದಾರ ನನ್ನವರು .....

೨೦೦೮. ಸಪ್ತ ಸಾಗರ ದಾಟಲು ಬೇಕು ಗುರುವಿನ ಕೃಪೆ
ನನ್ನ ಸಂಸಾರ ಸಾಗರ ದಾಟಲು ಬೇಕು ನನ್ನ .............ರ ಕೃಪೆ.

೨೦೦೯. ಗಣಪತಿಯ ಉಗ್ರಕೋಪದಿಂದ
ನಕ್ಕ ಚಂದ್ರನಿಗಾಯಿತು ಶಾಪ
ನನ್ನ .............. ರಾಯರನ್ನು
ಸೆಳೆಯಿತು ನನ್ನೆಲ್ಲ ರೂಪ.

೨೦೧೦. ಸುರಾಸುರರು ಪರ್ವತ ಕಟೆಯಲು ಬಂದದ್ದು ವಿಷ
ನನ್ನ .............. ಇವರ ಜಗಳದಲ್ಲಿ
ನನ್ನ ತಂದೆ ತಾಯಿ ಆಗಿದ್ದಾರೆ ಕಸ.

೨೦೧೧. ವೆಂಕಟಸ್ವಾಮಿಗೆ ಪದ್ಮಾವತಿ ಭೂಷಣ
ಮದುವಿ ಮನ್ಯಾಗ ತೋರಣ ಭೂಷಣ
ತುಂಬಿದ ಕುಟುಂಬದಾಗಾನ ............ರು ಭೂಷಣ.

೨೦೧೨. ಸ್ವಾಮಿಗಳು ಹಾಕ್ತಾರ ಕ್ಯಾವಿ ಬಟ್ಟೆ
ಪೊಲೀಸರು ಹಾಕ್ತಾರ ಖಾಕಿ ಬಟ್ಟೆ
ನನ್ನಾತ .............. ಹಾಕ್ತಾನ ಹರಕ ಬಟ್ಟೆ.

೨೦೧೩. ನನ್ನ ವಯಸ್ಸು ಚಾಲೀಸು
ನನ್ನ ..........ರ ಚಪ್ಪಲಿಗೆ
ಬೇಕು ವಿನಾ ಪಾಲೀಸು.

೨೦೧೪. ಸವರಾತ್ರ್ಯಾಗ ಎದ್ದು ಸರಸರ ಹೋಗ್ತಾರ
ಬರಬರಬಂದ ಬಾಗಿಲ್ದಾಗ ನಿಲ್ಲತಾರ
ಸೆರಗ ಹಿಡಿದು ಸೊರಗಿ ಅಂತಾರ .....

೨೦೧೫. ಅರ್ಧಬಟ್ಟಲು ಅನ್ನ
ಗಿರ್ದಾ ಬಟ್ಟಲು ಸಾರು
ಮೂರು ದಿನಾ ಉಂಡು
ಆರು ದಿನ ಉಪವಾಸ ಮಾಡ್ತಾರ ....

೨೦೧೬. ತೆಳ್ಳನ್ನ ಸೆಜ್ಜಿ ರೊಟ್ಟಿ, ಬೆಳ್ಳಗಿನ ಮೊಸರು
ಬಳ್ಳೊಳ್ಳಿ ಖಾರಾ ಕೂಡಿಸಿಕೊಂಡು ತಿಂದ್
ಹೊಳ್ಳಿ ಹೊಳ್ಳಿ ನೀರು ಕುಡಿತಾರ .....

೨೦೧೭. ಗಾರಗಿ ಮಾಡೀನಿ, ಗಂಗಳಕ ಹಾಕೀನಿ
ಮಗಳು ಕೂಡ ಉಣ್ಣಂದ್ರ
ಮಂಗಿ ಕೂಡ ಉಣತೀನಂತಾರ ....

೨೦೧೮. ಎಳೇ ವಯಸ್ಸಿನ್ಯಾಗ ಬಿಳಿ ಗಡ್ಡ ಬಂದ್ರ ಒಳ್ಳೆ ಕಳ ಅಂದ್ರ
ಗಳಾ ಗಳಾ ಅಳತೈತಿ ನನ ಗಂಡ .....

೨೦೧೯. ಉಡುಗಿ ತೊಡಗಿ ಸಿಂಗಾರ
ಹತ್ತೂ ಕೈಬಳ್ಳಿಗೆ ಬಂಗಾರದುಂಗುರ
ಸೇಡಂಗೆ ಹೋಗಿಬರತೇನಂತ ಹೋಗಿ
ಮೇಡಂನ ಕರಕೊಂಡ ಬಂದಾರ .....

೨೦೨೦. ನತ್ತು ಇಟಗೊಂಡೀನಿ ನಗಲಿ ಹ್ಯಾಂಗ
ಹಾದ್ಯಾಗ ನಿಂತಾರ ಹಾಯಲಿ ಹ್ಯಾಂಗ
ನಾಕ ಮಂದಾಗ ಕುಂತಾರ ಕರೀಲಿ ಹ್ಯಾಂಗ
ತವರ ಮನೀಗೆ ಹೊಂಟೇನಿ ಹೇಳಲಿ ಹ್ಯಾಂಗ
ನನ್ನ ............... ಯಜಮಾನಗ ಪುರಸೊತ್ತಿಲ್ಲ
ಆತ ಯಾವಾಗ್ಲೂ ಇರೂದs ಹಾಂಗ.

೨೦೨೧. ಮಹಾತ್ಮಗಾಂಧಿ ಮೈಮ್ಯಾಲ
ಮೂರು ಮೊಳದ ಪಂಜಿ
ನಾನು ಭಯ ಭಕ್ತಿಲಿಂದ ನಡೆವೆ
ಅತ್ತಿ ಮಾವರಿಗಂಜಿ
ನನ್ನ ಪತಿದೇವರ ಹೆಸರ ಹೇಳುವೆ
ಈ ಶುಭಕರ ಸಂಜೆ ............

೨೦೨೨. ಮಗ್ಗುಲದಾಗ ನಿಂತ್ರ
ಮುಸಿ ಮುಸಿ ಮಾಡ್ತಾನ
ಸೀರಿ ತಗೊಂಡ ಬಾ ಅಂದ್ರ
ಶಿವರುದ್ರ ಆಗ್ತಾನ .....

೨೦೨೩. ಸುಭದ್ರೆಯನ್ನು ಸುಯೋಧನನಿಗೆ
ಕೊಡಬೇಕೆಂಬುದು ಬಲರಾಮನ ಆಶೆ
ಸುಭದ್ರೆಯನ್ನು ಪಾರ್ಥನಿಗೆ
ಕೊಡಬೇಕೆಂಬುದು ಶ್ರೀಕೃಷ್ಣನ ಮನೀಷೆ
ಕೊನೆಗೆರಕ್ಷಣ ಈಡೇರಿಸಿಕೊಂಡನು ತನ್ನಾಸೆ.
ನನ್ನ ಪತಿದೇವ ............. ರನ್ನೇ ವರಿಸಲು ಬಯಸಿತ್ತು ನನ್ನಾಸೆ.

೨೦೨೪. ಯಮುನಾ ದಡದಲ್ಲಿ ಗೋಪಿಕಾ ಸ್ತ್ರೀಯರ ನೀರಾಟ
ಆಗ ತುಂಟ ಗೋಪಾಲನ ಕಣ್ಣಿಗೆ ಬಿತ್ತು ಆ ನೋಟ
ನನ್ನ ............... ರಾಯರದು ಸದಾಕಾಲ ನನಗೆ ಶೃಂಗಾರದಾಟ.

೨೦೨೫. ದ್ರೌಪತಿಯ ಮಾನಕಾಯ್ದವನು
ಶ್ರೀಕೃಷ್ಣ ಪರಮಾತ್ಮ
ನನ್ನ ........... ಕೈಹಿಡದ ಪತಿ ............ ರೇ
ನಿಜ ದೇವರೆನ್ನುವುದು ನನ್ನಾತ್ಮ.

೨೦೨೬. ಶ್ರೀಕೃಷ್ಣ ಮಥುರೆಯಲ್ಲಿ ಜನಿಸಿದಾಗ
ದೇವತೆಗಳಿಂದಾಯ್ತು ಪುಷ್ಪ ದೃಷ್ಟಿ
ಮಳೆ ಬೆಳೆಗಳಿಂದ ಸಮೃದ್ಧವಾಯ್ತು ಸೃಷ್ಟಿ
ನವಕಾಮನ ರೂಪ ನನ್ನ ............. ರು
ತೆಗೆಯುವೆ ಮೆಣಸಿನಕಾಯಿ ಸುಟ್ಟು ದೃಷ್ಟಿ.

೨೦೨೭. ಶ್ರೀಕೃಷ್ಣನು ಮೋಹಿನಿ ರೂಪದಲ್ಲಿ ಬಂದು
ದೇವಾರಾಸುರರಿಗೆ ಅಮೃತಸುಧೆ ಹಂಚಿದನು
ಮೋಹಿನಿ ರೂಪಕ್ಕೆ ಮಳ್ಳಾದರೆಂದು ಸುರಾಸುರರಂದು
ನಾನು ...............ರ ಹೆಸರ ಹೇಳುವೆ ಸಂತೋಷಕೆಂದು.

೨೦೨೮. ಹೊಟ್ಟಿನ ಬಣವ್ಯಾಗ ನಿಂತಾನ
ಹೊನ್ನಂಗುರ ಇಟ್ಟಾನ
ತಟ್ಟೆ ಹಾಕಿ ಕರೆದರ
ಪಟ್ಟಂತ ಬರತಾನ .....

೨೦೨೯. ಬಂಗಾರ ತರ್‍ರಿ ಅಂದ್ರ
ನೀನೇ ನನಗ ಬಂಗಾರ ಅಂತಾರ .....

೨೦೩೦. ನೀನೇನ ಮುತ್ತುರತ್ನ
ಹವಳಾ ವಜ್ರ ಅಂತಾನ
ಮುತ್ತಿನ ಸರ ಕೇಳಿದ್ರ
ಹೊತ್ತು ಮುಳುಗೂತಾನಾ
ಮನೀಗೆ ಬರೂದಿಲ್ಲ .....

೨೦೩೧. ಧರ್ಮಸ್ಥಳದಾಗ ಮಂಜುನಾಥ ಪ್ರಸಿದ್ಧ
ಎಡೆಯೂರಾಗ ಸಿದ್ಧಲಿಂಗೇಶ್ವರ ಪ್ರಸಿದ್ಧ
ತಿರುಪತಿಯಾಗ ತಿಮ್ಮಪ್ಪ ಪ್ರಸಿದ್ಧ
ನನ್ನ ಗಂಡ ............. ನಮ್ಮ ಮನ್ಯಾಗ ಪ್ರಸಿದ್ಧ.

೨೦೩೨. ಮೊದಲು ಕಂಡಾಗ ಒಲವು ಮೂಡಿತು
ಲಗ್ನ ಆದ ಮ್ಯಾಲ ಈ ಗಂಡ .................ನ ಗುಣ ತಿಳೀತು.

೨೦೩೩. ಕೈಗೊಂದ ಆಳು ಕಾಲಿಗೊಂದ ಆಳು
ನನ್ನ ಗಂಡ .............. ಮಾಡೂದೆಲ್ಲಾ ಬರೀ ಹಾಳು.

೨೦೩೪. ಭಕ್ತಿಯಿಂದ ಭಜನಿ ಮಾಡ್ತೀನಂತ ಹೋದಾವ
ಮುಕ್ತಿ ಪಡಿಯಾಕ ಸಾಧು ಆಗಿ ಬಂದ ನನ್ನ ಗಂಡ .....

೨೦೩೫. ಓದು ಒಕ್ಕಾಲು ಬುದ್ಧಿ ಮುಕ್ಕಾಲು ಅಂತಾರ
ಆದ್ರ ನನ್ನ ಗಂಡ .............. ಬರಿ
ಮೊಣಕಾಲು ನೋವು ಅಂತಾರ.

೨೦೩೬. ಪಾಂಡವರು ಅಜ್ಞಾತವಾಸದಲ್ಲಿದ್ದಾಗ
ಬಿಲ್ಲು ಬಾಣ ಇಟ್ಟಿದ್ದು ಬನ್ನಿ ಮಹಾಂಕಾಳಿಯಲ್ಲಿ
ನನ್ನ ವಸ್ತವಡವೆ ಇಟ್ಟದ್ದು
ಇಸ್ಪೀಟ್ ಆಡೋ ನನ್ನ ಗಂಡ .............ನ ಕೈಯಲ್ಲಿ.

೨೦೩೭. ದಿನಸಿ ಅಂಗಡಿ ಇಟ್ಟು
ದೀನಸಗರಿ ಹುಡಿಗ್ಯಾರ್‍ನ ನೋಡಿ
ಕನಸಿನ್ಯಾಗ ಕಿಸಿ ಕಿಸಿ ನಗ್ತಾನ .....

೨೦೩೮. ವೃದ್ಧ ಕುರುಡ ತಂದಿ ತಾಯಿಯರಲ್ಲಿ ಭಕ್ತಿ ಇಟ್ಟು
ತೀರ್ಥಯಾತ್ರೆ ಮಾಡಿಸಿದ ಶ್ರವಣಕುಮಾರ
ಹೊಲಾ ಮನಿ ಒತ್ತಿ ಹಾಕಿ ತಂದಿ ತಾಯಿ ಹಲಬಿಸಿ
ನನ್ನ ಕೈಯಾಗ ಪರಟಿಕೊಡು ನನ್ನ ಗಂಡ ......... ಬರಿಕುಮಾರ.

೨೦೩೯. ಎಣ್ಣಿ ಬದ್ನಿಕಾಯಿ ಕಣ್ಣಿ ಕಣ್ಣಿ ಮೊಸರು
ಸಣ್ಣಕ್ಕಿ ಬಾನ ಉಂಡು ಮಣ್ಣಾಗ ಮಲಗತಾರ .....

೨೦೪೦. ಮಹಲಿನ ಮ್ಯಾಲ ಮಹಲು
ಮಾರಟಕ್ಕ ಹಚ್ಚ್ಯಾರ ಸವಾಲು
ಆ ಮಹಲಿಗೆ ನನ್ನ ............ ರಾಯ ಕಾವಲು.

೨೦೪೧. ಖೋಟಾ ಪಾಟ್ಲಿ ತಂದಾರ
ಹಿಡಿ ಹಿಡಿ ಅಂತಾರ .....

೨೦೪೨. ಹದಿನಾರು ಕಿಲೋ ಪತ್ರಿ
ಹದಿಮೂರು ಸೇರು ಹೂವು
ಸಿಂಹಾಸನದ ಮ್ಯಾಲ ಕೂತಗೊಂಡು
ಶಿವಪೂಜೆ ಮಾಡ್ತಾರ .....

೨೦೪೩. ಹಂಪೆಯಲ್ಲಿರುವುದು ಕಲ್ಲಿನ ರಥ
ನನ್ನ ................ ರಿಂದಲೇ
ನನ್ನ ಮನೋರಥ.

೨೦೪೪. ಇಡ್ಲಿಯಂತಾ ಮಕಾ
ಮದ್ಲಿ ಅಂತಾ ಹೊಟ್ಟೆ
ಇದ್ದದ್ದು ನೀಡಿದ್ರ ಬಿದ್ದು ಬಿದ್ದು ಉಣ್ತಾನ ....

೨೦೪೫. ಹೋಳಿಗಿ ಸಾರು
ಉದುರುದುರು ಅನ್ನ
ಸೋಸಿದ ಮೊಸರು
ಅಗಸಿ ಹಿಂಡಿ
ಕಟಿ ಕಟಿ ರೊಟ್ಟಿ
ಪಂತ್ಯಾಗ ಕುಂತಗೊಂಡು
ಪರೀಕ್ಷೆ ಮಾಡ್ತಾರ .....

## ೨. ಗಂಡನ ಒಡಪುಗಳು

೨೦೪೬. ನಮ್ಮಾಕಿ ಅಕ್ಕನ ಮನಿಗೆ ಹೋದ್ರ
ಆಕಿ ಗಂಡ ಅಕ್ಕಡಿ ಹಾಕುದಕ ಕರೆದನಂತೆ
ಅಕ್ಕನ ಗಂಡ ತಂಗಿ ಮನಿಗೆ ಬಂದಾಗ
ನನ್ನ ಹೇಣ್ತಿ .......... ಅವನ್ನಕುಳ್ಳು ಬಡಿಯಾಕ ಹಚ್ಚಿದಳಂತೆ.

೨೦೪೭. ಇಳಕಲ್ಲ ಸೀರಿ ಬ್ಯಾಡಂದ್ರ
ಒಳಕಲ್ಲ ಮ್ಯಾಲ ಕುಂತು
ಒಳ್ಳು ನೆಕ್ಕತಾಳ .....

೨೦೪೮. ಉಪ್ಪಿಟ್ಟು ಮಾಡತಾಳ
ತುಪ್ಪಾ ಬಾಳ ಹಾಕತಾಳ
ತಪ್ಪು ಮಾಡಿದಾಗ ಗದ್ದರಿಸಿದ್ರೆ
ತವರಮನೀಗೆ ಹೋಗ್ತಿನಂತಾಳ .....

೨೦೪೯. ಊಟ ಬಲ್ಲವಗೆ ರೋಗವಿಲ್ಲ
ಮಾತು ಬಲ್ಲವಗ ಜಗಳವಿಲ್ಲ
ಇದೆಲ್ಲಾ ಗೊತ್ತಿಲ್ಲದ ನನ್ನಾಕಿ.....ಗೆ
ದೇವರು ದಿಂಡ್ರೂ ಯಾರೂ ಇಲ್ಲ.

೨೦೫೦. ಎಡಿಹೊಡಿಯಾಕ ಹೋಗೂನು ನಡಿ ಅಂದ್ರ
ಸೀರಿಗೆ ದಡಿ ಇಲ್ಲಂತ ದವಡಿ ತಿಂತಾಳ .....

೨೦೫೧. ಎಂಟು ಗಂಟೇಕ ಏಳಾಕಿ
ಗಂಡು ಮೊಕಾ ಹಾಕಾಕಿ
ಕಂಠಮಟಾ ತಿನ್ನಾಕಿ .....

೨೦೫೨. ಕಾರಿ ಗಿಡದಾಗ ಕುಂತಗೊಂಡು
ಬಾರಿಕಾಯಿ ಬಯಸ್ತಾಳ .....

೨೦೫೩. ಕಾಲ ಕಾಲಕ್ಕೆ ನೋಡದಿದ್ರ ಹೊಲಾ ಉಳಿಯೂದಿಲ್ಲ
ಮ್ಯಾಲಿಂದ ಮೇಲೆ ಕೇಳದಿದ್ದ ಸಾಲ ಹೊರಳೂದಿಲ್ಲ
ಮ್ಯಾಲಿಂದ ಮ್ಯಾಲೆ ಥಳಿಸದಿದ್ರ
ನನ್ನ .............ಕಿಗೆ ಬುದ್ಧಿ ಬರೂದಿಲ್ಲ.

೨೦೫೪. ಕುಂತ ಹಿರೇತನಾ ಮಾಡಂದ್ರ
ನಿಂತಗೊಂಡು ಹಿರೇತನಾ ಮಾಡೇನಂತಾಳ .....

೨೦೫೫. ಕೈಯಾಗ ಕೊಡಾ ಸಣ್ಣನ್ನ ನಡಾ
ಬೈಕೊಂತ ನಿಂತ್ರ ಬಾಯಿ ಮುಚ್ಚೂದಿಲ್ಲ ಗಡಾ .....

೨೦೫೬. ಚಂದ್ರಕಾಳಿ ಸೀರಿ ಉಟಗೊಂಡು ಚಂದಾಗಂದ್ರ
ಚಂದಪ್ಪನ ಕಂಡ ನನ್ನ ಕೂಡ ಚೌಕಾಸೀ ಮಾಡ್ತಾಳ .....

೨೦೫೭. ಮುತ್ತೀನುಡಿಯಕ್ಕಿ ಜರೀ ಹೂವಿನ ಸೀರಿ
ಮುತ್ತಿನಂಥವರ ಮನ್ಯಾಗ ಕುಂತಗೊಂಡ
ಮುಗುಳು ನಗಿಯಿಂದ ಬರತಾಳ .....

೨೦೫೮. ತಂತಿಮ್ಯಾಲ ತಂತಿ ಹುಬ್ಬಳ್ಳಿ ಸಂತಿ
ಸಂತೀಗೆ ಹೋಗೂನಂದ್ರ ಚಿಂತಾಕ ಬೇಡ್ತಾಳ .....

೨೦೫೯. ತಲೀ ಹಿಚುಕ ಹೊಯ್ಮಾಲಿ ಅಂದ್ರ
ಹೊಲಕ ಹೊಂಟೇನಂತ ಹುಲಮನಿ ಆಡ್ತಾಳ .....

೨೦೬೦. ತಿದ್ದಿ ಮಾಡಿದ ಮುಖಾ
ಮುದ್ದು ಮಾತಿನ ಸರಣಿ
ಬುದ್ಧಿವಂತಿ ನನ್ನಾಕಿ
ಬಿದ್ದುಕೊಂಡಲ್ಲೇ ಬಿದ್ದಿರತಾಳ .....

೨೦೬೧. ತಿನ್ನೂದು ಪ್ಲೇಟು ಮಲಗೂದು ಕಾಟು
ನಾ ತೊಡುವುದು ಕರೇ ಕೋಟು
ಕೋಟಿನ್ಯಾಗಿನ ನೋಟ ನೋಡಿದ್ರ
ನನ್ನಾಕಿ ಮಾತು ಬರೀ ಗಿಲೀಟು ......

೨೦೬೨. ದೇವರ ಮುಂದೆ ಉರಿಯೋದು ದೀಪ
ನನ್ನಾಕಿದು ನನ್ನ ಮ್ಯಾಲ ಬರೀ ಕೋಪ .....

೨೦೬೩. ಭಕ್ತಿಯಿಂದ ದೇವರು ವಶ
ಕಪಟದಿಂದ ವೈರಿ ವಶ
ಕೃಪೆಯಿಂದ ಪುತ್ರ ವಶ
ವಸ್ತ್ರ ವಡವೆಯಿಂದ ನನ್ನಾಕಿವಶ ....

೨೦೬೪. ಬಂಗಾರ ಬಾಯಿಗೆ ಸಿಂಗಾರ ತುಟಿ
ಬೆಲ್ಲಾ ಕೊಡು ಅಂದ್ರ ಒಲ್ಲೆ ಒಲ್ಲೆ ಅಂತಾಳ .....

೨೦೬೫. ಬಾಗಿಲದಾಗ ಅಗುಣಿ
ಹಕ್ಕಿಯೊಳಗ ಸೆಗಣಿ
ಗೋಡಿ ಮ್ಯಾಲಿನ ತಗಣಿ
ತಿಕ್ಕು ಅಂತ್ರ ನೆಕ್ಕಲೇನಂತಾಳ .....

೨೦೬೬. ಭೀಮನ ಹೆಂಡತಿ ಹಿಡಂಬಿ
ನನ್ನಾಕಿ .............. ಕೈಯಾಗನಾ ಗೊಂಬಿ.

೨೦೬೭. ಬಿಸಿ ಬಿಸಿ ಅನ್ನ ಬಿಳಿಜ್ವಾಳದ ರೊಟ್ಟಿ
ಎಣಿಗಾಯಿ ಪಲ್ಲೆ ಕೆನಿ ಕೆನಿ ಮೊಸರು
ಕಣಕ ಬುತ್ತಿ ತಂದು ನನ ಮಾರಿ
ಹಣ ಹಣಿಕಿ ನೋಡ್ತಾಳ ....

೨೦೬೮. ಭೂತಳದಲ್ಲಿರುವುದು
ಪಾತಾಳಕ್ಕಿಳಿಯುವುದು
ಸೀತಾಳ ತರುವುದು
ನನ್ನ ............. ಳ ಬುದ್ಧಿಗೆ
ಇದರರ್ಥ ತೂಗದು.

(ಉತ್ತರ : ಕಪ್ಪಲಿ)

೨೦೬೯. ಬೇವಿನ ಗಿಡದಾಗ ಕುಂತಗೊಂಡು
ಬೈತಾಲಿ ತಕ್ಕೋತಾಳ .....

೨೦೭೦. ತೋಟದಾಗ ಮಾವಿನ ಗಿಡಾ ಬಾಳ ಸಂಪು
ಬಂಗಾರಕ್ಕಾಗಿ ನನ್ನ ............. ಳು ಮಾಡ್ತಾಳ ಬರೀ ರಂಪು.

೨೦೭೧. ಮಣಿಯ ಮಾಡಿದನೊಬ್ಬ
ಹೆಣೆದು ಕಟ್ಟಿದನೊಬ್ಬ
ಸಂತೆಯಲ್ಲಿ ಹೆಣ ಮಾರಿದ ಇನ್ನೊಬ್ಬ
ನನ್ನಾಕಿ ............... ದೇವಿ ಇದರರ್ಥ ಹೇಳಿದ್ರೆ
ಮಾಡುವೆನು ದಿನಾ ಹಬ್ಬ.

(ಇದರ ಅರ್ಥ : ಮೀನು)

೨೦೭೨. ಚಿಂತಾಕು ಇಟಗೊಂಡು ಚಿಪ್ಪಾಡಿ ಬಳಿವಾಕಿ
ಚಿಂತ್ಯಾಕ ಬಾ ನನ್ನ ದೊರೆ ಅಂತಾ ಕರೀತಾಳ .....

೨೦೭೩. ಹಂಡೆದಾಗ ಕುಂತಗೊಂಡು
ಉಂಡಿ ತಿಂತಾಳ .....

೨೦೭೪. ತವರಮನಿ ಅಂದ್ರ ನಗತಾಳ
ಅತ್ತೀ ಮನಿ ಅಂದ್ರ ಅಳತಾಳ .....

೨೦೭೫. ಆದಿನಾಥರು ಭರತನಿಗೆ ಕೊಟ್ಟದ್ದು ರಾಜಪಟ್ಟ
ಬಾಹುಬಲಿಗೆ ಆದದ್ದು ಯುವರಾಜ ಪಟ್ಟ
ನನ್ನಾಕಿ ........... ಪ್ರೀತಿಯಿಂದ ಕಟ್ಟಿದ್ದಾಳೆ ಸಾಮ್ರಾಜ್ಯ ಪಟ್ಟ.

೨೦೭೬. ಇಳಕಲ್ಲ ಸೀರಿ ಬ್ಯಾಡಂದ್ರ
ಒಳಕಲ್ಲ ಮ್ಯಾಲ ಕುಂತಾ
ಒಳ್ಳೆ ನೆಕ್ಕತಾಳ .......

೨೦೭೭. ಹತ್ತಿಕಟಿಗಿ ಹೊರಿ ಹೊತಗೊಂಡು
ಹರಗ್ಗಾಲೆ ಬಂದು ಮ್ಯಾಲ ಬೀಳ್ತಾಳ ....

೨೦೭೮. ಎಲ್ಲಾ ತಿಳಿದಾಕ ಉಲ್ಲಾಸವುಳ್ಳಾಕಿ
ಗುಲ್ಲು ಮಾಡದ ಮೆಲ್ಲಕ ಬರತಾಳ .....

೨೦೭೯. ಒಣಕಿ ಹಿಡಿದು ಕಣಕಾ ಕುಟ್ಟಂದ್ರ
ತಗಣಿ ಹಿಡಿದು ಎಣಿಕಿ ಹಾಕ್ತಾಳ .....

೨೦೮೦. ಕಡಗೋಲು ಮುಂದ ಕುಣಿತಾಳ
ಬೆಣ್ಣಿ ಬಂದ್ರ ಬಾಯಿಗೆ ಹಾಕ್ತಾಳ
ಸೊಸಿ ಬಂದ್ರ ಉಸ್ ಅಂತಾಳ .....

೨೦೮೧. ಕಪಟತನದ ನಡತಿ, ಅಡಗಿ ಮಾಡೂ ಗರತಿ
ಎಲ್ಲಾ ತಿಂದು ತೇಗಿ ಕುಂದ್ರೂ ಒಡತಿ .....

೨೦೮೨. ಕಾಲುಂಗರಾ ಇಟ್ಟಾಳ ಮೋಲಕಾ ತೊಟ್ಟಾಳ
ಮೂಗಬಟ್ಟು ಇಟಗೊಂಡು ಮೂಗು ಏರಿಸತಾಳ .....

೨೦೮೩. ಕಾರಿ ಗಿಡದಾಗ ಕುಂತಗೊಂಡು
ಬಾರಿ ಕಾಯಿ ತಿಂತಾಳ .....

೨೦೮೪. ಕಾಡು ಹೆಂಗಸರ ಕೂಟ
ಪಗಡಿ ಚಕ್ಕಾ ಆಟ
ಅಡಗಿ ಮಾಡದ ಸೂಟಿ ಮಾಡ್ತಾಳ .....

೨೦೮೫. ಕುಂಚಗಿ ಕಟಿಗೊಂಡು
ಮಂಚಕ್ಕ ತೆಲಿಕೊಟ್ಟು
ಸಂಚೀಲೆ ಬಿದ್ದಾಳ ಕೆಂಚಿ .....

೨೦೮೬. ಅತ್ತೀ ಮಾವಗ ಅಂಜತಾಳ
ನನ್ನ ಕಂಡ್ರ ಕೆಂಜಗಿ ಹುಳಾ ಆಗ್ತಾಳ .....

೨೦೮೭. ಕೈಯಾಗ ಕೊಡ ಸಣ್ಣನ್ನನ ನಡಾ
ಸೆಟಗೊಂಡು ಬಿದ್ರ ಏಳೂದಿಲ್ಲ ಗಡಾ .....

೨೦೮೮. ಕೋತಿಗೆ ವ್ಯವಧಾನ ಇಲ್ಲ
ಓಡಿ ಬಂದಾಕಿಗೆ ಸಮಾಧಾನ ಇಲ್ಲ
ನಮ್ಮಾಕಿಗೆ ಎಷ್ಟಂದ್ರೂ ನಾಚಿಕೆ ಇಲ್ಲ .....

೨೦೮೯. ಗಾಳಿಯ ಭಯ ಗಿಡಗಳಿಗೆ
ಕಳ್ಳರ ಭಯ ಧನಿಕರಿಗೆ
ನಮ್ಮಾಕಿಗೆ ಸವತಿ ತಂದೇನೆಂಬ ಭಯ .....

೨೦೯೦. ಚಂದ್ರನ ಮುಖದವಳು
ಬಂಧುರ ವರ್ತನೆಯವಳು
ಗಂಧ ಹಚ್ಚತೀನಂದ್ರ ಮುಂದಕ ಬರ್ತಾಳ ....

೨೦೯೧. ನೀರಿನ ನೆಲಿ, ಕುದಿರಿ ನೆಲಿ ತಿಳಿಯೂದಿಲ್ಲ
ನನ್ನಾಕಿ ನೆಲಿ ಬ್ರಹ್ಮಗೂ ತಿಳಿದಿಲ್ಲ .....

೨೦೯೨. ದಣೀವಾಗೇದಂದ್ರ ಕುಣಿ ತೋರಿಸ್ತಾಳ ......

೨೦೯೩. ಜರದ ಮಡಿ ಉಟ್ಟಾಕಿ
ವಂಕಿ ಸರಗಿ ಇಟ್ಟಾಕಿ
ಪ್ರೀತಿಯಿಂದ ಗಂಧಾ ತೀಡಿ
ಮಾರಿ ನೋಡ್ತಾ ನಿಲ್ಲಾಕಿ ....

೨೦೯೪. ಜಾತ್ರೆಯಲ್ಲಿ ಗೋಕರ್ಣ ಮೇಲು
ರಾತ್ರಿಯಲ್ಲಿ ಶಿವರಾತ್ರಿ ಮೇಲು
ನನ್ನಾಕಿ ..........ಗೆ ಕುಂಕುಮ ಬೊಟ್ಟು ಮೇಲು.

೨೯೫. ಥಳಕು ಬೆಳಕು ಮೆಚ್ಚಿದವಳು
ಒಳಿತನ್ನೆಂದೂ ಮೆಚ್ಚದವಳು
ತಾಳತಂತು ಮೀರಿದವಳು .....

೨೯೬. ನಡೆಯುವಾಗ ಬಳುಕತಾಳ
ನುಡಿಯುವಾಗ ನಾಚತಾಳ
ಮಡಿ ಉಟ್ಟು ಮೋಜು ಮಾಡತಾಳ
ನನ್ನ ನೋಡಿ ಮಾರಿ ಮುಚಗೋತಾಳ .....

೨೯೭. ಪಾರ್ವತಿಗೆ ನಮಿಸುವವಳಲ್ಲ
ಸರಸ್ವತಿಯ ಮನ್ನಿಸುವವಳಲ್ಲ
ಶ್ರೀದೇವಿಗೆ ಶರಣೆನ್ನುವವಳಲ್ಲ
ನನಗ್ಯಾಕೋ ಪರಮೇಶ್ವರ ಅಂತಾಳ .....

೨೯೮. ಪುರಾಣ ಕೇಳತಾಳ
ಪುಣ್ಯ ಕಥಿ ಓದತಾಳ
ಹಸಿದವರು ಬಾಗಿಲಿಗೆ ಬಂದ್ರ
ಕೈಕೆಸರು ಆಗೇದ ಅಂತಾಳ .....

೨೯೯. ಭರತನು ಚಕ್ರರತ್ನ ಪ್ರಯೋಗಿಸಿದ್ದು
ಬಾಹು ಬಲಿಯ ಮೇಲೆ
ಪ್ರದಕ್ಷಿಣೆ ಹಾಕಿ ನಿಂತದ್ದು
ಬಲಭುಜದ ಮೇಲೆ
ನಮ್ಮವಳ ಭಕ್ತಿ ಪ್ರೀತಿ ಇರುವುದು ನನ್ನ ಮೇಲೆ .....

೩೦೦. ಬಿಲ್ಲಿಯಾಟ ಬಾಯಿ ಇಟಗೊಂಡು
ಬೆಲ್ಲಾ ತಿನ್ನಂದ್ರ
ಬೆಲ್ಲಾ ಒಲ್ಲೆ ಅಲ್ಲಾ ತಿಂತೇನಿ ಅಂತಾಳ .....

೩೦೧. ಬುದ್ಧಿವಂತರ ಕೂಟ ಹಣ್ಣಿನ ತೋಟ
ತಿಳಿಗೇಡಿ ನನ್ನಾಕಿ ಅಂದ್ರ ಇಲಿ ಹೆಗ್ಗಳಗಳ ಕಾಟ .....

೩೦೨. ಬೆಳದಿಂಗಳ ತಂಪು ಹಾಡಿನ ಇಂಪು
ನನ್ನಾಕಿ ............... ಮನ್ಯಾಗ ಮಾಡೂದು ಬರೀ ರಂಪು.

೩೦೩. ಹರಗಾಕ ಹೋಗ್ತೀನಿ ಬುತ್ತಿ ಕಟ್ಟು ಅಂದ್ರ
ವಂಕಿಕೈ ತಿರಿವಿಕೋತ ಒನಪು ಮಾಡ್ತಾಳ .....

೨೧೦೪. ಬೆಲ್ಲನಾದ್ರೂ ಮರೀತಾಳ ಬಂಗಾರ ಮರೆಯೂದಿಲ್ಲ
ಗುಲ್ಲು ಮಾಡಿಕೋತ ಗಲ್ಲೇತನಕ ಬರ್ತಾಳ .....

೨೧೦೫. ಬೇಶ್ಯಾಗ ಸೀರಿ ಉಟಗೋ ಮಾರಾಯ್ತಿ ಅಂದ್ರ
ಸವರಾತ್ರ್ಯಾಗ ಸ್ಯಾವಗಿ ಬಸ್ತೀನಿ ಉಣ್ಣು ಅಂತಾಳ ......

೨೧೦೬. ಬೇವಿನ ಗಿಡದಾಗ
ಮಾವಿನಕಾಯಿ ಹುಡುಕತಾಳ .....

೨೧೦೭. ಮಲಕು ಮುರಿಯೋ ರೊಟ್ಟಿ
ನಮ್ಮಾಕಿ ................. ಕೂಡ ಹಾಳಾದ ಬಾಳು ಗಟ್ಟಿ.

೨೧೦೮. ಮನೀಗೆ ಮಕ್ಕಳು ಚೆಂದ
ಊರಿಗೆ ಅಗಸಿ ಚೆಂದ
ನಮ್ಮಾಕಿ ................ಗೆ ನಾನೇ ಚೆಂದ.

೨೧೦೯. ಮಡಿ ಮಡಿ ಅಂತಾಳ
ಬಡಿವಾರ ಮಾಡ್ತಾಳ
ಸಾರು ಮಾಡಿ ಸುರಿತಾಳ
ದೇವರಿಗೆ ಎಡಿ ಮಾಡ್ತಾಳ ......

೨೧೧೦. ಮಗ್ಗಲುದಾಗ ನಿಂತಾಳ
ಮುಗುಳ ನಗಿ ನಗತಾಳ
ನಾ ಮಾರಿ ನೋಡಾಕ ಹೋದ್ರ
ಮೂಗು ಮುರಿತಾಳ .....

೨೧೧೧. ಮಹಾವೀರನ ಜನ್ಮವಾದದ್ದು
ಚೈತ್ರ ಶುದ್ಧ ತ್ರಯೋದಶಿ
ನಿರ್ವಾಣವಾದದ್ದು ಕಾರ್ತಿಕ ಅಮಾವಾಸಿ
ನನ್ನ ...........ಳೇ ನನ್ನ ಸೇವೆ ಮಾಡುವ ದಾಸಿ.

೨೧೧೨. ಬಂಗಾರ ಕೋಣ್ಯಾಗ ಕುಂತು
ಹೊಂಚ ಹಾಕ್ತಾಳ .....

೨೧೧೩. ಮಾತು ಮಾತಿಗೂ ಮೇಳಿಲ್ಲ
ಕೃತಿ ಕೃತಿಗೂ ತಾಳಿಲ್ಲ
ಯಾತರದ್ದೂ ಹಂಗು ಉಳಿದಿಲ್ಲ
ಮಿತಿ ಮೀರಿ ವಂಚಿಸಿ ಗತಿಗೆಡಿಸಿದ್ದಾಳೆ ನನ್ನ ಸತಿ .....

೨೧೧೪. ಮಾಡಿದವರಿಗೆ ಮಾಡಿದಷ್ಟು
ನೀಡಿದವರಿಗೆ ನೀಡಿದಷ್ಟು
ಮಾಡಲಾರದೆ ನೀಡಲಾರದೆ
ನನಗೆ ........... ಇವಳಿಂದ ಸುಖವಿಲ್ಲ ಎಳ್ಳಷ್ಟು.

೨೧೧೫. ಮುಖಾ ನೋಡಿ ಸುಖಾ ಬೇಡ್ತಾಳ
ಒಲಿ ನೋಡಿ ಗಳ ಗಳಾ ಅಳ್ತಾಳ .....

೨೧೧೬. ಮ್ಯಾಲೆ ಬೆಳಕು ಒಳಗೆ ಹುಳುಕು
ನನ್ನ ...........ಕಿ ಬಾಯಿ ಬಲು ಹರಕು.

೨೧೧೭. ರಮಿಸಿದರ ಹಿಗ್ಗತಾಳ
ಬೈದರ ಕುಗ್ಗತಾಳ
ಸರಗಿ ಮಾಡ್ಸಲಿಲ್ಲಂತ ಕೊರಗತಾಳ .....

೨೧೧೮. ರನ್ನಗನ್ನಡಿ ನೋಡಿ
ಸಣ್ಣ ಬೈತಲೆ ತಗೆದು
ತನ್ನಂತ ಸುಂದರಿಯರಿಲ್ಲಂತ
ಜಂಬ ಕೊಚ್ಚತಾಳ ......

೨೧೧೯. ವಿಲಾಸಿಗೆ ಹಣದ ಕಿಮ್ಮತ್ತಿಲ್ಲ
ಆಲಸಿಗೆ ವೇಳೆಯ ಕಿಮ್ಮತ್ತಿಲ್ಲ
ನಮ್ಮಾಕಿ ...............ಗೆ ನಾ
ಅಂದ್ರ ಕವಡೆ ಕಿಮ್ಮತ್ತಿಲ್ಲ.

೨೧೨೦. ಸುಣ್ಣ ಇದ್ದರೆ ವೀಳ್ಯೆ ಚೆಂದ
ಬಣ್ಣ ಇದ್ದರೆ ಮನೆ ಚೆಂದ
ನಮ್ಮ ಮನೆಗೆ ನನ್ನಾಕಿ ಚೆಂದ .....

೨೧೨೧. ನಮ್ಮೂರ ಮುಂದೆ ಹರಿದಿದೆ
ಜುಳು ಜುಳು ಹರಿವ ಹಳ್ಳ
ನಮ್ಮಾಕಿ .................ಗೆ ನಾನಾದೆ ಮಳ್ಳ.

೨೧೨೨. ಹರಕ ಸೀರಿ, ತಟ್ಲಿಯಂಥ ತೆಲಿ
ಬಿಟಗೊಂಡು ನಿಂತಾಳ ಚಾಮುಂಡಿ
ಊಟಕ್ಕ ನೀಡಂದ್ರ ಸ್ವಾಟಿ ತಿರುವುತಾಳ .....

೨೧೨೩. ಹಗ್ಗಲ್ಲೇ ಹೊಡದರೆ ಮಗ್ಗಲಕ ಬರ್ತಾಳ .....

೨೧೨೪. ಹಿಂಡೀ ರುಬ್ಬಿ ಅಡಗಿ ಮಾಡಂದ್ರ
ಮಂಡಿ ಊರಿ ಗಿಂಡಿ ತೂರ‍್ಯಾಡತಾಳ .....

೨೧೨೫. ಕ್ಯಾದಗಿ ಹೂವಿನ ಕಂಪು
ನನ್ನಾಕಿ ................ ನನಗಿಂತ ಬಾಳ ಕೆಂಪು.

೨೧೨೬. ಹೆಗ್ಗಣಾ ಹತಿಗೊಂಡು
ನಿಬ್ಬಣಕ್ಕ ಹೊಗ್ತಾಳ ......

೨೧೨೭. ಹೊಳಿ ನೀರಿಗೆ ಹೊಂಟಾಳ
ಕಟ್ಟಿದ ತಾಳಿ ತೋರ‍್ಸ್ಯಾಳ
ಕೈಮಾಡಿ ಕರೀತಾಳ .....

೨೧೨೮. ಇಲಿ ಹತಿಗೊಂಡು
ಹೊಲಕ ಹೊಂಟಾಳ .....

೨೧೨೯. ಅಲಸಂಧಿ ರಾಶಿ ಹೂವಿನ ಕಾಸಿ
ನನಗ ನನ್ನ ...........ಳೆ ಬೇಸಿ.

೨೧೩೦. ಅಂಗಾರ ತಂದು ಹಣೀಗೆ ಹಚಿಗೋ ಅಂದ್ರ
ಬಂಗಾರ ತರ‍್ರಿ ಉಂಗುರಾ ಮಾಡಸ್ತೀನಿ ಅಂತಾಳ .....

೨೧೩೧. ನಮ್ಮಪ್ಪ ಅವರಪ್ಪನ್ನ ಬೈದರ
ಊಟಾ ಬಿಡ್ತಾಳ
ಅವರೊಪ್ಪ ಅತ್ತಿಮಾವನ್ನ ಬೈದರ
ತುಪ್ಪಾ ಸುರಕೊಂಡು ಉಣತಾಳ .....

೨೧೩೨. ಎಂಟು ಗಂಟೇಕ ಏಳಾಕಿ
ಗಂಟು ಮಾರಿ ಹಾಕಾಕಿ
ಕಂಟಮಟ ತಿನ್ನಾಕಿ ತಿನಸಬಡಕಿ .....

೨೧೩೩. ಇಲ್ಲದ್ದು ಬೇಡಾಕೆಲ್ಲಾ
ಸಾಲಾ ಮಾಡ್ಸಿ ತಿನ್ನಾಕೆಲ್ಲಾ
ಹಾಸಿಗಿ ಇದ್ದಷ್ಟು ಕಾಲು ಚಾಚೂನಂತ
ನನ್ನ ಬಿಟ್ಟು ಇದ್ದಾಕೆಲ್ಲಾ .....

೨೧೩೪. ಅಂಗಿ ಗುಂಡಿ ಹರದದ ಹಚ್ಚಂದ್ರ
ತಂಗೀ ಮನೀಗೆ ಹೋಗಿ ನಿಂಗೀ ಕರದ ಹೇಳ್ತಾಳ .....

೨೧೩೫. ಸುಡುಮನಿ ಗಳಕ
ಗುಳದಾಳಿ ಕಟ್ಟ್ಯಾರಂತ
ಸುಡುಗಾಡದಾಗ ಕುಂತು
ಬಳಬಳಾ ಅಳ್ತಾಳ .....

೨೧೩೬. ಕಣಗಲ ಹೂ ತೆಲಿಗೆ ಮುಡಕೊಂಡು
ಕುಣಕೋತ ಕಣ್ ಕಿಸೀತಾಳ .....

೨೧೩೭. ಕತ್ತಲದಾಗ ಕ್ವಾಣಾ ಬಾಲಾ ಬೀಸಿದ್ರ
ನನ್ನ ದೇವಿ ............. ನನ್ನ ತೆಲಿ ಕಾಸ್ತಾಳ .....

೨೧೩೮. ಕುಂತು ನಿಂತು ಹಿರೇತನಾ ಮಾಡಂದ್ರ
ನಿಂತಗೊಂಡು ನಿಬ್ಬಣಾ ಮಾಡೇನಂತಾಳ .....

೨೧೩೯. ನಿಂತಾನಾ ಕುಂತಿಲ್ಲ ಕುಂತಾವಾ ಎದ್ದಿಲ್ಲ
ನನ್ನ ............. ಳಿಗೆ ಯಾವುದಕ್ಕ ಎಗ್ಗಿಲ್ಲ.

೨೧೪೦. ಗಂಡ್ಸೂರನ್ನ ಕಂಡ್ರ
ಗುಣಕಲ್ಲಾಕ್ಕಾಳ .....

೨೧೪೧. ಗಂಗಾನದಿ ನೀರು ಪಾವನ
ನನ್ನ .............. ಕಿಗೆ ಬೇಕು ಮುಡಿಯಲು
ಬೇಕು ದಿನಾ ದವನ.

೨೧೪೨. ಗಿಣಿ ಇದ್ದ್ರ ಗಿಡಾ ಚೆಂದ
ಹಸಿರು ಇದ್ದ್ರ ಅಡವಿ ಚೆಂದ
ಬಸುರು ಇದ್ದ್ರ ನಾರಿ ಚೆಂದ
ನನ್ನ ಕೂಡ ........ಳು ಇದ್ದ್ರ ಎಲ್ಲಾ ಚೆಂದ.

೨೧೪೩. ಸ್ವಾಮಿ ಬಂದಾರ ಗೊಂಗಡಿ ಹಾಸಂದ್ರ
ಸಿಂಗಡಿಕಾಯಿ ಹಿಡಕೊಂಡು ಸಂತೀಗೆ ಹೊಂಟಾಳ .....

೨೧೪೪. ಚಂದ್ರಕಾಳಿ ಸೀರಿ ಉಟಗೊಂಡು ಚೆಂದಾಗಂದ್ರ
ಚಂದಪ್ಪನ್ನ ನೋಡಿ ನನ್ನ ಕೂಡ ಚೌಕಸಿ ಮಾಡ್ತಾಳ
ನೀನs ಉಟಗೋ ಚಂದಾ ನೋಡ್ತಿನಿ ಅಂತಾಳ .....

೨೧೪೫. ಜರಿ ಹೂವಿನ ಸೀರಿ
ಮುತ್ತಿನ ಉಡಿಯಕ್ಕಿ
ಮುತ್ತಿನಂಥವರ ಮನಿಗೆ
ಮುಗುಳು ನಗತಾ ಬರತಾಳ .....

೨೧೪೬. ತಾಟಹಾಕ ಮುಗ್ಗಲಗೇಡಿ ಅಂದ್ರ
ಗೂಟಾ ಕಿತ್ತು ಗೂಳಿ ಹೊರಗ ಬಿಡ್ತಾಳ .....

೨೧೪೭. ನೀರ್ತಂದು ಕಾಲಿಗೆ ಹಾಕ ಹಗಣಗಿತ್ತಿ ಅಂದ್ರ
ನಿಂಗ್ಯಾಕ ಬೇಕಂತ ನೀರಿಗಿ ಜಾಡಿಸ್ತಾಳ .....

೨೧೪೮. ನಿನಗ ತೆಲೀನ ಇಲ್ಲಂದ್ರ
ತೆಲಿ ತಂದು ಎದಿಗೆ ಹಾದು ಅಳತಾಳ .....

೨೧೪೯. ನೆವಣಿ ಹೊಲಕ ಹೋಗೂನ ಅಂದ್ರ
ಕವಣಿಗಲ್ಲ ಹಿಡಕೊಂಡು ಹೊಡಿಯಾಕ ಬರ್ತಾಳ .....

೨೧೫೦. ಬೆಲ್ಲದಂತಾ ಮಾತು
ಗಲ್ಲದ ಮ್ಯಾಗ ಗುಳಿ
ಒಳ್ಳೆಳ್ಳೆಯವರ ಮಗಳಂದ್ರ
ಹುಬ್ಬ ಹಾರಿಸ್ತಾಳ ......

೨೧೫೧. ಮೊಸರು ಕಲಿಸಿದ ಬಾನ
ಸಜ್ಜಿರೊಟ್ಟಿ ಅಗಸಿ ಚಟ್ನಿ
ಕೆನಿ ಕೆನಿ ಮೊಸಲ ಎಣಿಗಾಯಿ ಪಲ್ಲೆ
ಕಣಕ ಬುತ್ತಿ ತಗೊಂಡ ಬಂದು
ಎತ್ತಿನ ಕೂಡ ಚಕ್ಕಂದ ಆಡತಾಳ .....

೨೧೫೨. ಮನೀ ಮನೀ ತಿರಗತಾಳ
ಅಡಗಿಮನಿ ಮರತಾಳ
ಊಟಕ್ಕ ಮಾಡಂದ್ರ
ಬೀಸೂಕಲ್ಲ ಗೂಟಕ್ಕ
ತೆಲಿ ಕೊಟ್ಟು ಮಲಗತಾಳ ......

೨೧೫೩. ಮುಡೀಲೆಂತ ಮಲ್ಲಿಗೆ ಹೂ ತಂದ್ರ
ಒಲ್ಲೆಂತ ಕಲ್ಲಮ್ಯಾಲ ಒಣ ಹಾಕ್ತಾಳ .....

೨೧೫೪. ಮಡಿ ಮೈಲಗಿ ಮನ್ಯಾಗಿರಬೇಕಂದ್ರ
ಮಂದ್ಯಾಗ ಕುಂತು ಮೈತೊಳಕೋತಾಳ .....

೨೧೫೫. ನೀರಿಗೆ ನೈದಿಲೆ ಚೆಂದ
ಪುಣ್ಯವಂತಿ ನನ್ನ .............. ಹೇಣ್ತಿ ಮನೆತನಕ ಚೆಂದ.

೨೧೫೬. ಮುಂಬಯಿಗೆ ಹೊಂಟೇನಿ
ಏನ್ ತರಲಿ ಅಂದ್ರ
ಲಿಂಬಹಣ್ಣು ಚೀಪಿಗೋತ
ಇಂಗ ತರ್‍ರಿ ಅಂತಾಳ .....

೨೧೫೭. ಮುತ್ತಿನಾಂಗ ನನ್ನ ಕೂಡ
ಬಾಳೇ ಮಾಡಂದ್ರ
ಸತ್ತೆಂತ ತವರ ಮನೀಗೆ ಓಡ್ತಾಳ .....

೨೧೫೮. ಮುಗಿಲು ನೋಡಿ ಜ್ವಾಳಾ ಹರವು ಅಂದ್ರ
ಜ್ವಾಳಾ ಹರವಿ ಮಳಿಯಾಗ ಕುಂತಾಳ .....

೨೧೫೯. ಮುತಗಾರನ ಹತ್ತಿರ ಮುತ್ತು ಸಿಗತಾವಂದ್ರ
ನನ್ನ ಕಿವಿಯಾಗ ಬಂದು ಮುತ್ತ ಕೇಳ್ತಾಳ .....

೨೧೬೦. ಮೂಲಂಗಿ ತಂದು ಮೂಲ್ಯಾಗ ಇಟ್ಟ್ರ
ಮಲಗಾಕ ಜಗಾ ಇಲ್ಲಂತ
ಜಗಲೀಗೆ ಜೋತು ಬಿದ್ದಾಳ .....

೨೧೬೧. ಮೂರು ಮೂರು ಆರು
ನಮ್ಮಾಕಿ ............ ಬಲು ಜೋರು.

೨೧೬೨. ಮೂಗಿನ್ಯಾಗ ನತ್ತ ಇಟ್ಟಾಕಿ
ಚಂದ್ರಕಾಳಿ ಸೀರಿ ಉಟ್ಟಾಕಿ
ಸರಗಿವಂಕಿ ಹಾಕಿದಾಕಿ
ಬಾ ಅಂದ್ರ ಬಿಂಕದಿಂದ
ಮಗ್ಗಲು ಕೂಡಾಕಿ .....

೨೧೬೩. ಹೊಟ್ಟೆ ಹಸ್ತಿಲ್ಲ ಅಂತಾಳ
ರಾತ್ರಿ ರವಾ ತಿಂತಾಳ
ಮುಂಜಾನೆದ್ದು ಕೇಳಿದ್ರ
ಒಪ್ಪತ್ತು ಮಾಡಿನಂತಾಳ .....

೨೧೬೪. ಹಡದ ಮಕ್ಕಳತನ ಹಾಡಿ ಹರಸೂದು ಬಿಟ್ಟು
ಪಡೆದ ಮಕ್ಕಳಂತ ಪರದೇಶಿ ಮಾಡ್ಯಾಳ ....

೨೧೬೫. ಹಣ್ಣು ತಂದಿನಿ, ಉಣ್ಣೂನು ಬಾ ಅಂದ್ರ
ಕಣ್ಣು ಕುಣಿಸಿಗೋತ ಮಣ್ಣ ತೂರತಾಳ .....

೨೧೬೬. ಹಾಲುಬಾನಾ ಉಂಡು ಹಾಯಾಗಿರು ಪ್ರಿಯೆ ಅಂದ್ರ
ಕಾಲುಂಗರರಾ ಇಟಗೊಂಡು ಕಾಲು ಕೆದರತಾಳ ....

೨೧೬೭. ಹುಟ್ಟಿದೂರಿನ ಹಬ್ಬಾ ನೆನಸತಾಳ
ಕೊಟ್ಟು ಊರಿನ ದಿಬ್ಬಣ ಮರೀತಾಳ
ಇಂತಾಕಿ ನನ್ನ ಜೀವತಿಂತಾಳ .....

೨೧೬೮. ಹುಬ್ಬಳ್ಳಿಗೆ ಹೊಂಟೇನಿ
ಹುಳಿ ಬಾನಾ ಮಾಡಂದ್ರ
ಹುಬ್ಬು ಹಾರಿಸಿಗೊಂತ ಹೊಳಿಕಡಿಗೆ ಹೋಗ್ತಾಳ .....

೨೧೬೯. ಇಲಕಲ್ಲ ಸೀರಿ
ಗುಳೇದ ಗುಡ್ಡದ ಕುಬುಸ
ಉಟ್ಟಕೋ ಅಂದ್ರ ಸೆಟಗೊಂಡು ಕುಂದರತಾಳ .....

೨೧೭೦. ಹೆಣ್ಣಾಳಿನ ಕೂಡ ಹೊಲಕ ಹೋಗಂದ್ರ
ಗಂಡಾಳಿನ ಕೂಡ ಗೌಂಡಿ ಕೆಲಸಕ್ಕ ಹೋಗ್ತಾಳ .....

೨೧೭೧. ಹೊಸ್ತಿಲಾ ಬಿಟ್ಟು ಹೊರಗ ಹೋಗಬ್ಯಾಡಂದ್ರ
ಬಚ್ಚಲದಾಗ ಕುಂತಗೊಂಡು ಬ್ಯಾನಿ ತಿಂತಾಳ .....

೨೧೭೨. ರಾಮಗ ಸೀತೆ ಚೆಂದ
ಪಾಂಡವರಿಗೆ ದ್ರೌಪತಿ ಚೆಂದ
ನಮ್ಮಾಕಿ ..............ಗೆ ನಾನೇ ಚಂದ.

೨೧೭೩. ಸ್ವಾತಿ ಮಳಿಗೆ ಬೇಸತ್ತು ಕುಂತಾಳ
ಸತಗೊಂಡ ಮುತ್ತು ಕೇಳತಾಳ .....

೨೧೭೪. ಸಮುದ್ರಕ್ಕ ನಿದ್ದಿಲ್ಲ ಮಕ್ಕಳಿಗೆ ಬುದ್ದಿಲ್ಲ
ನಮ್ಮ ............ ಳ ಬಾಯಿಗೆ ಹದ್ದಿಲ್ಲ.

೨೧೭೫. ಯಾಲಕ್ಕಿಗೆ ಗೊನಿ ಇಲ್ಲ
ಆಕಾಶಕ್ಕೆ ಕೊನೆ ಇಲ್ಲ
ನನ್ನ .............. ಳ ಪ್ರೀತಿಗೆ
ಎಣೆಯೇ ಇಲ್ಲ.

೨೧೭೬. ಆಕಾಶದಲ್ಲಿ ಹಾರ್ತಾವ ಹಕ್ಕಿ
ನಮ್ಮಾಕಿ .............. ಬಾಳ ಷುಕ್ಕಿ.

೨೧೭೭. ಆರಾಣಿ ಕನ್ನಡಿ ಮೂರಾಣಿ ಬಾಚುಣಿಕಿ
ಬಾಚಿಗೊಂಡು ಹೋಗಂದ್ರ
ನಾಚಿಗೋತ ನಿಲ್ಲತಾಳ .....

೨೧೭೮. ಬಿಜಾಪೂರ ಜ್ವಾಳದ ರೊಟ್ಟಿ
ಹೊಳಿ ದಂಡಿ ಮುಳಗಾಯಿ ಪಲ್ಯ
ಕೆನಿ ಕೆನಿ ಮೊಸರ ಬಾನ
ಕಣಕ ಬುತ್ತಿ ತಂದು ಉಣಿಸಿ ಹೋಗತಾಳ .....

೨೧೭೯. ಪಟೇದ ಹಂಚಿನ ಸೀರಿ
ನವಿಲು ಕುಣಿಯೂ ಕುಬುಸ
ಮೂಗ ಬಟ್ಟು ಇಟಗೊಂಡು
ಮೂಗು ಮುರಿತಾಳ .......

೨೧೮೦. ಕಂಠಿ ಸರಾ ಕಟ್ಟ್ಯಾಳ
ಕಟ್ಟಿ ಮ್ಯಾಲ ಕುಂತಾಳ
ನನ್ನ ಕಂಡು ಕಣ್ಣು ಹೊಡೀತಾಳ .....

೨೧೮೧. ಗದ್ದಿ ಹೊಲದಾಗ ಕುಂತ
ಕದ್ದ ಕರಿಗಡಬು ತಿಂತಾಳ .....

೨೧೮೨. ಕಾಡಿಗೆ ಕಣ್ಣು ಕೆಂಪು ಮುಖಾ
ಮುದ್ದು ಮಾಡ್ತಿರಂತ ಎದ್ದೆದ್ದು ಬರತಾಳ .....

೨೧೮೩. ಕೆರಿಸಿ ರೊಟ್ಟಿ ಗಡಿಗಿ ಪಲ್ಲೆ
ಹೊಟ್ಟೆ ತುಂಬಾ ತುಂಬಿಕೊಂಡು
ಹೊಟ್ಟಿ ಹೊಟ್ಟಿ ಅಂತಾ ಬಡಕೋತಾಳ ......

೨೧೮೪. ಜನಕ ರಾಯನ ಮಗಳು ಜಾನಕಿ
ನಮ್ಮಾಕಿ ............ ತಗಿತಾಳ ಜಗಳಾ ಕೆಣಕಿ.

೨೧೮೫. ಗೆಜ್ಜಿ ಸೇಂಗಾ ಬೆಳ್ಳಿ ಟಾಂಗಾ
ಟಾಂಗಾದಾಗ ಕುಂತಗೊಂಡ ಟಾಟಾ ಮಾಡ್ತಾಳ ....

೨೧೮೬. ಗುಂಗುರು ಗೂದಲಾ ಬಂಗಾರ ಬೇತಾಲಿ
ಅಂಗಳದಾಗ ಕುಂಗೊಂಡು ರಂಗೋಲಿ ಹಾಕ್ತಾಳ .....

೨೧೮೭. ಚೆಂದುಳ್ಳ ಚೆಲುವಿ ಚೈನಾಸಿಲ್ಕ ಸೀರಿ
ಸೀರಿ ಉಟಗೊಂಡು ಸಂತಿಗೆ ಹೋಗ್ತಾಳ .....

೨೧೮೮. ಕಾಲಾಗ ಗೆಜ್ಜಿ ಬೆರಳಾಗ ಪಿಲ್ಲಿ
ಹಲ್ಲೀಗೆ ಹಲ್ಲಿಟ್ಟು ಹಚಗೊಂಡು
ಹಳ್ಳಕ್ಕ ಬಾ ಅಂತಾಳ .....

೨೧೮೯. ಪಾಪಿ ಸಮುದ್ರ ಹೊಕ್ಕರು
ಮೊಳಕಾಲು ಮಟ
ಗಿಡ್ಡಿ ನನ್ನಾಕಿ .......... ನನ್ನ ಎದಿಮಟ.

೨೧೯೦. ಬಾರಕೋಲಿಲ್ಲೆ ಬಿಗಿದರ
ಬಾಯಿ ತೆರಿತಾಳ .....

೨೧೯೧. ಬಾರಿಗಿಡದಾಗ ಕುಂತು ಬಾಚಿಗೊಂತಾಳ
ಬೇವಿನಗಿಡದಾಗ ಕುಂತು ಬೇತಾಳ ತಕ್ಕೊಂತಾಳ .....

೨೧೯೨. ಹಚ್ಚಲಿಲ್ಲ ಹರಿಯಲಿಲ್ಲ
ಮಾಡಲಿಲ್ಲ ಮಟ್ಟಲಿಲ್ಲ
ಮನ್ಯಾಗ ಕುಂತು ಮಂದೀ
ನ್ಯಾಯಾ ಹರೀತಾಳ .....

೨೧೯೩. ಹಣ್ಣು ಹಾಲು ಚಿನ್ನಿ ಸಕ್ಕರಿ
ಕಟಿಗೊಂಡು ಬಾ ಅಂದ್ರ
ಸೆಟಗೊಂಡು ಹೋಗ್ತಾಳ .....

೨೧೯೪. ಹಸಿರದಟ್ಟಿ ಬೆಳ್ಳಿ ಪಟ್ಟಿ
ನನ್ನ ಸೇವಾ ಮಾಡಾಕ ಈಕಿ ಬಾಳಗಟ್ಟಿ .....

೨೧೯೫. ಹಿತ್ತಲದಾಗ ಬೆಳದೈತಿ ಕರಕಿ
ನಮ್ಮಾಕಿ ............ ಬಾಳ ಹುಳಗಡಕಿ.

೨೧೯೬. ಹೊಲದಾಗ ಬಿತ್ತೂದು ಹತ್ತಿ
ಪಣತ್ಯಾಗ ಇರೂರು ಎಣ್ಣಿ ಬತ್ತಿ
ನನ್ನ ಅರ್ಧಾಂಗಿ ............ ಇರೂದು ಬಾಳ ಕತ್ತಿ.

೨೧೯೭. ಸೊಂಟ ಮುರದೈತಂತ
ಗಂಟು ಮಾರಿ ಹಾಕ್ಕೊಂಡು
ಕಂಠಿ ಸರಾ ಬೇಡ್ತಾಳ .....

೨೧೯೮. ಅಡಕಿ ಬಣ್ಣದ ಸೀರಿ
ಮಡಕಿ ಬಣ್ಣದ ಕುಬುಸಾ
ಹೆಡಕಿನ ಮ್ಯಾಲ ಸೆರಗು ಬಿಟಗೊಂಡು
ಹರೆದ ಹುಡುಗನ ಕಂಡು ಹುಬ್ಬೇರಿಸ್ತಾಳ .....

೨೧೯೯. ಉಲ್ಲಾಸದಾಕಿ ಎಲ್ಲಾ ಬಲ್ಲಾಕಿ
ಗುಲ್ಲು ಮಾಡ್ದ ಗುಸು ಗುಸು ಮಾಡ್ತಾಳ .....

೨೨೦೦. ಕಮ್ಮನ್ನ ಸಾರು ಕಾಸಿ
ಘಂ ಅನ್ನು ತುಪ್ಪಾ ಕಾಸಿ
ಸುಮ್ನ ಬಂದು ಊಟಕ್ಕ ನೀಡ್ತಾಳ .....

೨೨೦೧. ಕಂಚಿನ ಕಣಗಲ
ಮುತ್ತಿನ ಅಡಕಲ
ಅತ್ತಿ ಬಂದಗಿಂತಾಳಂತ
ಮುಂದಕ ಕರೆದು ಮುತ್ತ ಕೊಡತಾಳ .....

೨೨೦೨. ಕಾಲಾಗ ತೋಡೆ
ಉಡಿಯಾಗ ಪೇಡೆ
ಮಾಳಗಿ ಮ್ಯಾಲ ಕುಂತು
ಮಾವಾ ಅಂತಾ ಕರೀತಾಳ .....

೨೨೦೩. ಕುರ್ಚಿಮ್ಯಾಲ ಕುಂತು ಕುಣಕೊಂತ
ಕುಂಕುಮಾ ಹಚಿಗೊಂತಾಳ .....

೨೨೦೪. ಗಲ್ಲಾ ಕಡದರ ಗುಲ್ಲ ಮಾಡ್ತಾಳ
ಸೊನ್ನಿ ಮಾಡಿದರ ಸುಮ್ನ ಆಗತಾಳ .....

೨೨೦೫. ನನ್ನ ಮಗಾ ಕಟ್ಟಾಣಿ
ನನ್ನ ಮಗಳು ಪಟ್ಟಾಣಿ
ನನ್ನಾಕಿ ............ ಭಾರಿ ಚಿಟ್ಟಾಣಿ.

೨೨೦೬. ಗಟ್ಟಿ ಬಂಗಾರ ತುಟ್ಟಿರೇಸಮಿ
ಕಟ್ಟೀ ಮ್ಯಾಲ ಕುಂತ ಕಸೂತಿ ಹಾಕ್ತಾಳ .....

೨೨೦೭. ಹಿರ್ಯರು ಇದ್ದ ಮನಿ ಚೆಂದ
ಗುರು ಇದ್ದ ಮಠ ಚೆಂದ
ನಮ್ಮನೆ ಲಕ್ಷ್ಮಿ ................ ಇದ್ದ ಬಾಳೇ ಚೆಂದ.

೨೨೦೮. ಜರದ ಸೀರಿ ಉಟ್ಟಾಳ
ಸರಿಗಿ ವಂಕಿ ಇಟ್ಟಾಳ
ಪಿರುತಿಯಿಂದಾ ಬಂದು ಅರಿಷಿಣ ಹಚ್ಚತಾಳ .....

೨೨೦೯. ಬಾಳೇ ಮಾಡಾಕ ಬುದ್ದಿವಂತಿ
ಹೊಲಕ ಹೋಗೂದಿಲ್ಲ ಅಂತಾಳ ಏನಂತಿ .....

೨೨೧೦. ನತ್ತ ಇಟ್ಟು ನಗತಾಳ
ವಂಕಿ ಇಟ್ಟ ಒದರತಾಳ ......

೨೨೧೧. ನಾಯಿ ಮ್ಯಾಲಕುಂತು
ನ್ಯಾಯಾ ಹರೀತಾಳ .....

೨೨೧೨. ಹತ್ತು ಎಂಟು ಹದಿನೆಂಟು
ನನ್ನಾಕಿ ................ ನಂಬಿ
ಕಳಕೊಂಡೆ ಇಡಿಗಂಟು.

೨೨೧೩. ಬಟ್ಟನ್ನ ಬಿಳಿಜ್ವಾಳದ ರೊಟ್ಟಿ
ನೆಟ್ಟನ್ನ ಬ್ಯಾಡಗಿ ಮೆಣಸಿನಕಾಯಿ
ಕಟ್ನ ಕಡಿದು ಕಟ್ಟಿ ಕೆಳಗ ಬೀಳ್ತಾಳ .....

೨೨೧೪. ಬಿಸಿ ಬಿಸಿ ಅನ್ನ
ಕೆನಿ ಕೆನಿ ಮೊಸರ
ಕಲ್ಲಾಗ ಅರದ ಹಿಂಡಿ
ಬಿಸಿಲಾಗಿಂದ ಬಂದ್ರ
ಕುಸಿ ಕುಸೀಲೆ ನೀಡ್ತಾಳ .....

೨೨೧೫. ಬೆಳ್ಳಿ ಚೆಂಡು ಬಂಗಾರ ಗುಂಡು
ದುಂಡ ಹುಡುಗನ್ನ ಕಂಡು
ಗಂಡೆದಿ ತೋರಿಸ್ತಾಳ .....

೨೨೧೬. ಹಣಾ ಅಂದ್ರ ಹೆಣಾ ಬಾಯಿ ತೆಗೀತೈತಿ
ಗುಣಗೇಡಿ ನನ್ನಾಕಿ ............ ಹಣ ಅಂದ್ರ ಕುಣೀತೈತಿ.

೨೨೧೭. ಬ್ಯಾನಿ ಬರತಾದಂತ
ಸ್ವಾನದಾಂಗ ಒದರತಾಳ ......

೨೨೧೮. ಮೂಗಿನ್ಯಾಗ ನತ್ತ
ಕೊಳ್ಳಾಗ ಮುತ್ತ
ನಮ್ಮಾಕಿ ............ ಯಾವಾಗಲೂ
ನನ್ನ ಸುತ್ತ.

೨೨೧೯. ಯಾಕ್ಕವ್ವ ಗಂಗಿ ಇಷ್ಟೊತ್ತಿನ್ಯಾಗ ಅಂದ್ರ
ಮೆಲ್ಲಕಬಂದು ರಂಗಾ ಅಂತಾಳ ನನ್ನ ಸಂಪನ್ನಿ ......

೨೨೨೦. ಯಾದವಾಡ ಸುಣ್ಣ ಗೋಕಾಕದ ಬಣ್ಣ
ರಬಕವಿ ಹೆಣ್ಣ ನನ್ನಾಕಿ ...... ಮ್ಯಾಲ ನನ್ನ ಕಣ್ಣ

೨೨೨೧. ಬಂಗಾರ ಬಳಿ ವಜ್ರದೋಲಿ
ಇಟಗೊಂಡು ಒಳಗ ಇರು ಅಂದ್ರ
ಕುಂಚಿಗಿ ಕಟಿಗೊಂಡು
ಕುಣಿಯಾಕ ಬರ್ತಾಳ .....

೨೨೨೨. ವ್ಯಾಪಾರಿಗೆ ಪತ್ತ ಬೇಕು
ರೋಗಿಗೆ ಪಥ್ಯ ಬೇಕು
ಒಕ್ಕಲುತನಕ ಎತ್ತು ಬೇಕು
ಸಾಕ್ಷಿ ಹೇಳಾವಾಗ ಸತ್ಯ ಬೇಕು
ನನ್ನಾಕಿ ............ ಮೂಗಿಗೆ ನತ್ತ ಬೇಕು.

೨೨೨೩. ಸರದಾರನ ಸೊಲ್ಲು ಕೇಳಿ
ಸರಾಸರಾ ಬರ್ತಾಳ .....

೨೨೨೪. ಬಂಗಾರ ಬಾಯಿ
ಸಿಂಗಾರ ತುಟಿ
ಬೆಲ್ಲಾ ಕೊಡು ಅಂದ್ರ ಒಲ್ಲೆ ಅಂತಾಳ ....

೨೨೨೫. ಸುಣ್ಣ ಇದ್ದ್ರ ಎಲಿ ಚೆಂದ
ಬಣ್ಣ ಇದ್ದ್ರ ಮನಿ ಚೆಂದ
ಹೆಣ್ಣಿದ್ರ ಸಂಸಾರ ಚೆಂದ
ಮನಸ್ಸು ತಿಳಿಯೂ ಹೆಂಡ್ತಿದ್ದ್ರ ಎಲ್ಲಾ ಚೆಂದ .....

೨೨೨೬. ಹಕ್ಕ್ಯಾಗ ಸೆಗಣಿ ಹಾಸ್ಗ್ಯಾಗ ತಗಣಿ
ತಗದ ನೋಡಂದ್ರ ತೆಕ್ಕಿ ಬೀಳ್ತಾಳ .....

೨೨೨೭. ಸವರಾತ್ರ್ಯಾಗ ಕೊಡಿ ಹಿಡೀತಾಳ
ಬಿಸಿಲೀಗೆ ಬಂದ್ರ ಬಾಡತಾಳ .....

೨೨೨೮. ದೌಡ ಎದ್ದು ದೊಡ್ಡ
ದೇವರಿಗೆ ಹೋಗ್ತಾಳ .....

೨೨೨೯. ಹಂಡ ಬಣ್ಣದ ಹೋರಿ
ದುಂಡ ಮಲ್ಲಿಗಿ ಹೂವು
ನನ್ನ ಕಂಡು ಕುಣಕೊಂತ ಬರ್ತಾಳ .....

೨೨೩೦. ಹಿರೇರಿಗೆ ನಮಸಾಕಿ
ಕಿರೇರಿಗೆ ರಮಿಸಾಕಿ
ತರತರದ ಅಡಗಿ ಮಾಡಿ
ಪ್ರೀತೀಲೆ ಕರದು ಉಣಸಾಕಿ ....

೨೨೩೧. ಬೇಕಾದವರ ನೆನಪೀಗೆ ಇಡತಾರ ದತ್ತಿ
ನನ್ನಾಕಿ ............... ಸತತ ಮಾಡ್ತಾಳ ದೇವರಿಗೆ ಬತ್ತಿ.

೨೨೩೨. ಅವಸರ ಬವಸರ ತಿನ್ನಾಕಿ
ಗಂಡಗ ಬೆನ್ನು ಹತ್ತಾಕಿ .....

೨೨೩೩. ಅಡ್ಡಣಗಿ ಮ್ಯಾಲ ಕುಂತ
ಗೊಡ್ಡೆಮ್ಮಿ ಹಿಂಡತಾಳ .....

೨೨೩೪. ಅತ್ತಿ ಮುಂದ ಎಲ್ಲಾ ಹಸಾ
ನನ್ನ ಮುಂದ ಬರೀ ಕಸಾ .....

೨೨೩೫. ಅರ್ಧಾ ಮರ್ಧಾ ರೊಟ್ಟಿ
ತೊಗರಿಕಾಳ ಪಲ್ಯ
ಅಡಿಗಿ ಮನ್ಯಾಗ ಕುಂತು
ಅಕಲು ಹಾಕ್ತಾಳ ......

೨೨೩೬. ಅರೆ ಅರೆ ಪಾದಿನಾಕೀದು ಆರ್ಭಟ ಬಾಳ
ಗಿರಿಪಾವಿನಾಕೀದು ಗಿರಗತಿ ಬಾಳ
ನಮ್ಮಾಕೀ ............. ಚೌಕಸಿ ಬಾಳ.

೨೨೩೭. ಅಂಗೀಗೆ ತೋಳಿಲ್ಲ
ಧೋತರಕ ಧಡಿ ಇಲ್ಲ
ನನ್ನಾಕಿಗೂ ನನಗೂ ತಾಳಿಲ್ಲ .....

೨೨೩೮. ಅವರಿಕಾಳ ತಿಂದು ತಿಂದು
ಅಂಗಳದಾಗ ನಿಂತು ಅಗ್ಗ ಮಾಡ್ತಾಳ .....

೨೨೩೯. ಆ ವರುಷ ಹಂಗಾತು
ಈ ವರುಷ ಹೀಂಗಾತು
ನನ್ನಕಿ ............... ಕೈ ಹಿಡಿದು
ಬಾಳೇ ಗಾಲ್‌ಮೇಲಾತು.

೨೨೪೦. ಕೈ ಹಿಡಿದ್ರ ಕಾಲಿಗೆ ಬೀಳ್ತಾಳ .....
ಮೈಮುಟ್ಟಿದರ ಮ್ಯಾಲ ಬೀಳ್ತಾಳ

೨೨೪೧. ಹತ್ತು ಗಂಟೇಕ ಏಳಾಕಿ ಗಂಟು ಮೋರೆ ಹಾಕಾಕಿ
ಪತ್ತೆ ಇಲ್ದ ಹೋಗಾಕಿ .......

೨೨೪೨. ಆರತಿ ಬೆಳಗತಾಳ, ಮೂಗು ಮುರಿತಾಳ
ನನ್ನ ಹೆಸರು ಒದರತಾಳ .......

೨೨೪೩. ಕತ್ತಲದಾಗ ಕುಂತು ಕಳವಿಲೆ
ಕರಿಗಡಬು ತಿಂತಾಳ .....

೨೨೪೪. ಒಂಟಿ ಎಲುಬು
ಗಂಟು ಮೂಗು
ಪಂಟ ಬಡಿಕೋತ
ಎಂಟು ಮನಿ ತಿರಗ್ತಾಳ .....

೨೨೪೫. ಬೆಳವಲದ ಎಮ್ಮಿ ತಂದಾಕಿ
ಬೆರಕಿ ಹಾಲ ಮಾರಾಕಿ .....

೨೨೪೬. ಬೇತ ಹೂಡಿ ಘಾತಾ ಮಾಡ್ತಾಳ
ಹಂಚಿಕಿ ಹಾಕತಾ ಮಂಚಕ ಬರ್ತಾಳ .....

೨೨೪೭. ಮಡಿ ಹುಡಿ ಮಾಡಾಕಿ
ಬಡಿವಾರಾ ಬಾಳ ಬಡಿಯಾಕಿ
ಮೀಸಲ ಅಡಿಗಿ ಮಾಡಾಕಿ
ದೇವರಿಗೂ ಮೊದಲ ತಾನಃ ತಿನ್ನಾಕಿ .....

೨೨೪೮. ಹೊಲಕ್ಕ ಕಳಿಸಿದರ
ಮರದ ಬುಡಕ ಕುಂತು
ಮಲಗಿ ಬರ್ತಾಳ .....

೨೨೪೯. ಹೊರಗ ಈಕಿ ಕಾಟಿಲ್ಲ
ಮನೀಗೆ ಬಂದ್ರ ಮಾತಿಲ್ಲ .....

೨೨೫೦. ಮಸೂತ್ಯಾಗ ಕುಂತಾಳ
ಮಂಗ್ಯಾನ್ನ ಆಡಿಸ್ತಾಳ .....

೨೨೫೧. ಮನಿಮ್ಯಾಗ ಮಾಡಿ
ಮಾಡಿ ಒಳಗ ಚಾವಡಿ
ಚಾವಡಿ ಒಳಗ ಕುಂತ
ಚಾಡಿ ಹೇಳತಾಳ .....

೨೨೫೨. ಮಾತಿನ್ಯಾಗ ಮಾತಿಲ್ಲದಾಕಿ
ಮಾಡೋದರಾಗ ಮೇಳ ಇಲ್ದಾಕಿ .....

೨೨೫೩. ಮುಂಬಾಲಕ ಮೆಣಸಿನಕಾಟ
ಹಿಂಬಾಲಕ ತಂಬಾಕದ ಘಾಟ
ಹಾಸಿಗಿ ತುಂಬಾ ತಗಣಿ ಕಾಟ
ಹೊರಗ ಹೋದ್ರ ಸಾಲಗಾರ ಕಾಟಾ
ಅಡಗಿ ಮನ್ಯಾಗ ನನ್ನಾಕಿ ಕಾಟಾ .....

೨೨೫೪. ಮುಖಾ ನೋಡಿ ಸುಖಾಪಡತಾಳ
ಅಡಗಿ ಮಾಡಂದ್ರ ಅಳಕೋತ ಕೂಡ್ರತಾಳ .....

೨೨೫೫. ನತ್ತು ಇಟಗೊಂಡು ನೆಟೆ ನಿಲ್ಲತಾಳ .....

೨೨೫೬. ರಮಿಸಿದರ ಹಿಗ್ಗತಾಳ
ಬೈದರ ಕುಗ್ಗತಾಳ ......

೨೨೫೭. ರಮದಿ ಮ್ಯಾಲ ಕುಂತ
ರಾಟಿ ತಿರುವುತಾಳ .....

೨೨೫೮. ಕರೆಸೀರಿ ಗರತಿ
ಗಿಡ್ಡ ಮ್ಯಾಲ ಇರತಿ
ಕರದರ ಬರ್ತಿ ನನ್ನ ರಾಣಿ ......

೨೨೫೯. ಬಬರಗೇಡಿ ನನ್ನ ಹೇಣ್ತಿಗೆ
ಕೊಬ್ಬರಿ ಕೊಟ್ರ
ಸಬರದಾಗ ಇಟಗೊಂಡು
ಸವರಾತ್ರ್ಯಾಗ ತಿಂತಾಳ .....

೨೨೬೦. ಸಿರಿಗೇಡಿಗೆ ಸೀರ್‍ಯಾಕ
ಮಾನಗೇಡಿ ............... ಕಿಗೆ ಮುತ್ತ್ಯಾಕ.

೨೨೬೧. ಆನಿನಡದದ್ದs ದಾರಿ ಕಂಬಳಿ ಹರಿದ್ರ ಕೋರಿ
ಊರಾಗ ನಮ್ಮಾಕಿ ............ ವಜನ ಭಾರಿ.

೨೨೬೨. ಸಂಜೇಗಾದ್ರೇನಿಲ್ಲ ಚಿಂತಿ
ಅಂಜೂದಿಲ್ಲ ನನ್ನ ಕಾಂತಿ .....

೨೨೬೩. ಅಂಜಿದರ ಕೆಂಜಗಿಹುಳಾ ಆಗ್ತಾಳ
ರಮಿಸಿದರ ರಂಗೇರಿ ಬರ್ತಾಳ .....

೨೨೬೪. ಹತ್ತು ಮೊಳದ ಸೀರಿ
ದೀಡ ಮೊಳದ ಕುಬುಸಾ
ಉಟಗೊಂಡು ಹೋಗಂದ್ರ
ಸೆಟಗೊಂಡು ಹೋಗ್ತಾಳ .....

೨೨೬೫. ಹಕ್ಕರಕಿ ತಿಂದು
ಹಗಣಾ ಮಾಡ್ತಾಳ .....

೨೨೬೬. ಮೂಲಂಗಿ ತಿಂದ
ಮುರುಕಾ ಮಾಡ್ತಾಳ.

೨೨೬೭. ಎಳ್ಳು ರೊಟ್ಟಿ ತಿಂದ
ಎಡತಾಕತಾಳ ........

೨೨೬೮. ಮದ್ದು ಗುಣಕಿ ಹೂ ತಿಂದು
ಎದ್ದು ಬಿದ್ದು ಉರುಳ್ಯಾಡತಾಳ .....

೨೨೬೯. ಎಡಿ ಹೊಡಿಯಾಕ
ಹೊಲಕ ಬಾ ಅಂದ್ರ
ಮನ್ಯಾಗ ಕುಂತು ಮಜಾ ಮಾಡ್ತಿನಂತಾಳ .....

೨೨೭೦. ಸೊನಿಗೇಡಿ ನನ್ನ ಹೇಣ್ತಿಗೆ
ಸುಣ್ಣ ಕೊಟ್ರ ಬೆಣ್ಣಿ ಅಂತಾ
ಬಾಯಿಗೆ ಹಾಕ್ತಾಳ .....

೨೨೭೧. ಹಸಗೇಡಿ ಹಗಲೆಲ್ಲಾ ತಿಂತಾಳ
ಹೊಲಕ ಬಾ ಅಂದ್ರ
ನಾ ಆಳಲ್ಲ ಅಂತಾಳ .....

೨೨೭೨. ಹಾವು ಕಡಿದರ ಇಸಾ
ನನಗೂ ನಮ್ಮಾಕಿ .............ಗೂ ಬೆಸಾ.

೨೨೭೩. ಹರಕ ತೆಂಪಿ
ಮುರುಕ ಕೊಣಮಿಗಿ
ರೊಟ್ಟಿ ಏಳವಲ್ವಂತ
ಚಿಟುಬುರುಸಿ ಅಳತಾಳ .....

೨೨೭೪. ತುಂಟ ಹುಡುಗೂರು ಮಾಡ್ತಾರ
ಹಾಳ ಹರಟಿ
ಮುಗ್ಗುಲಗೇಡಿ ನನ್ನಾಕಿ
.............. ಕೊಡ್ತಾಳ ನನಗ
ಕೈಯಾಗ ಪರಟಿ.

೨೨೭೫. ಹೇಳಾವ್ರು ಕೇಳಾವ್ರು ಯಾರಿಲ್ಲಂತ
ಕೋಳಿಹಾಂಗ ಕಾಲ್ಕೆದರಿ ಜಗಳಾ ಮಾಡ್ತಾಳ ....

೨೨೭೬. ಹೊಲಕ ಹಾಕ್ತಾರ ಒಡ್ಡು
ಯಾರ ಕೇಳ್ತಾರ ಈಕಿ ತಿಡ್ದು .....

೨೨೭೭. ಕಣದಾಗ ಕಂಕಿ
ನನ್ನ ಹೆಣ್ತಿ ಬಾಳಕೊಂಕಿ .....

೨೨೭೮. ಕಾಜಿನ ಕಂಬದ ಮರ್‍ಯಾಗ ಕುಂತ
ಕರ್ಚಿಕಾಯಿ ತಿಂತಾಳ ......

೨೨೭೯. ಒಣಕೀಲೆ ಹೊಡದ್ರ
ಕುಣಕೊಂತ ಬರ್‍ತಾಳ .....

೨೨೮೦. ಒಂದ್ಹೊತ್ತ ಅಂತಾಳ
ಒಂದು ಹೆಡಗಿ ತಿಂತಾಳ .....

೨೨೮೧. ಕಟಗರೊಟ್ಟಿ ಖಾರಾ ಎಣ್ಣಿ ತಿಂದ
ದಾರಿ ದಾರಾsಗ ನಿಲ್ರಿ ಅಂತಾಳ .....

೨೨೮೨. ಕಡ್ಡಿ ಇದ್ದದ್ದ ಗುಡ್ಡಾ ಮಾಡ್ತಾಳ
ಗುಡ್ಡ ಇದ್ದದ್ದ ಕಡ್ಡಿ ಮಾಡ್ತಾಳ
ನನ್ನ ನೋಡಿ ಕುಡ್ಡಿಹಾಂಗ ನಡೀತಾಳ .....

೨೨೮೩. ಕೈ ತುಂಬಾ ಕಾಸಿಲ್ಲ
ಈಕಿಗೆ ಮನಿಮ್ಯಾಗ ಧ್ಯಾನಿಲ್ಲ .....

೨೨೮೪. ಹಿತ್ತಲ ಕಡೆ ಕರದು
ಮುತ್ತು ಕೊಡು ಅಂತಾಳ .....

೨೨೮೫. ಕಂಬದ ಮರೀಗೆ ಹೋಗಿ
ತೆಲಿದಿಂಬ ಇಟಗೊಂಡು ಮಲಗತಾಳ .....

೨೨೮೬. ಯಾರ್‍ಯಾರ ಕೂಡಾ ಗೆಳೆತನಾ ಮಾಡಿ
ಎಳಗರಾ ಕಳದೈತಂತ ಕಬುರಿಲ್ದ ತಿರಗತಾಳ .....

೨೨೮೭. ಕುದುರಿ ಕೊಟ್ಟು
ಕರ್‍ಯಾಕ ಕಳಾಸಿದ್ರ
ನೆರೆದಿಲ್ಲಂತ
ನೇವಾ ಹೇಳಿ ಕಳಿಸ್ತಾಳ .....

೨೨೮೮. ಕೆಲಸಕ್ಕ ಬಾ ಅಂದ್ರ ಬ್ಯಾಸರಕಿ
ಕಾಲ ಒತ್ತು ಅಂದ್ರ ತೂಗಡಿಕಿ ಅಂತಾಳ ........

೨೨೮೯. ಗಲ್ಲಾ ಗದ್ದಾ ಹಿಡದ್ರ
ರಸಗುಲ್ಲಂತ ಕೈ ಕಡೀತಾಳ ......

೨೨೯೦. ಸೆಗಣಿ ಬಳದ ಕೈ
ಕಸ್ತೂರಿ ನಾತಾವ ಅಂತಾಳ .....

೨೨೯೧. ಗೊಂಗಡಿ ತುಂಬಾ ಗುಗ್ಗುರಿ ಹಾಕಿ
ಗುಡಾರ ತುಂಬಾ ಗೋದಿ ಹಾಕಿ
ಕೌದಿ ತುಂಬಾ ಕನಕಾಂಬರಿ ಹೂ ಸುರುವಿ
ಸವರಾತ್ರ್ಯಾಗ ಕುಂತ ಸೋಬಾನ ಹಾಡತಾಳ .....

೨೨೯೨. ಗಾಳಿ ಭಯ ಗುಡಿಸಲಕ್ಕ
ಚಳಿಗಾಲದ ಭಯ ಗಿಡಕ್ಕ
ಸವತಿ ಭಯ ನಮ್ಮಾಕಿಗೆ .....

೨೨೯೩. ಗೋದ್ಲ್ಯಾಗ ಕುಂತ
ಮಾಲ್ದಿ ತಿಂತಾಳ .....

೨೨೯೪. ಚಾಕುಡದ ಚಿಟಕಿ ಹೊಡಿತಾಳ
ನಾನ ಕರದರ ಕಣ್ಣು ಹೊಡಿತಾಳ
ಬಾ ಅಂದ್ರ ಬಗಲೀಗೆ ಬರ್ತಾಳ ......

೨೨೯೫. ಜ್ವಾಳದ ನಿಲುವಿನ್ಯಾಗ ಕುಂತ
ಜಳಕಾ ಮಾಡ್ತಾಳ .......

೨೨೯೬. ತಗಣಿ ಮ್ಯಾಲ ಕುಂತಗೊಂಡ
ತವರ ಮನೀಗೆ ಹೋಗ್ತಾಳ .....

೨೨೯೭. ಬೆಳ್ಳಿ ಬಂಗಾರ ತಂದ್ರ
ಬಾಳ ಹಿಗ್ಗ
ತರದಿದ್ದ್ರ ಮಂದೀ ಮುಂದ
ಮಾಡ್ತಾಳ ನನ್ನ ಅಗ್ಗ .....

೨೨೯೮. ತೂತು ಬಿದ್ದ ನೀರಿನ ಕೊಡಾ ಹೊತ್ಕೊಂಡು
ತುಗಡಿಕೊಂತ ಬರ್ತಾಳ .....

೨೨೯೯. ಮಡಿದಟ್ಟಿ ಉಟ್ಟ
ಬಂಗಾರಬಳಿ ತೊಟ್ಟ
ದೀಡ ನಮಸ್ಕಾರ ಹಾಕ್ತಾಳ .....

೨೩೦೦. ಇಲಿ ಬಂದ್ರ ಹುಲಿಯಂತ ಹೊಯ್ಕೋತಾಳ
ಹುಲಿಯಂತಾ ಗಂಡ ಬಂದ್ರ ಇಲಿಯಂತಾ ತಿಳೀತಾಳ .....

೨೩೦೧. ಕಪ್ಪಿ ಒಗದರ ಗಪ್ಪನ
ಮಗ್ಗಲಕ ಬರ್ತಾಳ .....

೨೩೦೨. ನಡೆ ನುಡಿ ಬಲ್ಲಾಕಿ
ಅಡಗಿ ಪಡಗಿ ಮಾಡಾಕಿ
ಕಾಡಿ ಬೇಡಿ ತವರ ಮನೀಗೆ ಓಡಾಕಿ .....

೨೩೦೩. ನನಗೂ ಈಕಿಗೂ ಬ್ರಹ್ಮಗಂಟು
ಕೇಳ್ತಾಳ ನನಗ ಅವರಪ್ಪ ಕೊಟ್ಟ ಗಂಟು .....

೨೩೦೪. ಶ್ಯಾವಗಿ ಬಸ್ತ ಸರಿಯಾಗಿ ಉಣ್ಣಂದ್ರ
ಹಸೇ ಹಿಟ್ಟ ಹರಹರದು ತಿಂತಾಳ .....

೨೩೦೫. ಒಳ್ಳೊಳ್ಳೆಯವರು ಉಳ್ಯಾಡಿ
ಹೋಗುವಾಗ
ಪಲ್ಲಕ್ಕ್ಯಾಗ ಕುಂತು ಮೆರೆದೇನಂತಾಳ .....

೨೩೦೬. ಸಮೆ ತಂದ ದೀಪಾಹಚ್ಚಿ
ಕುಮುರು ಡೇಗ್ ಹಾಕಿ ದೀಪಾ ಆರಿಸ್ತಾಳ .....

೨೩೦೭. ಹಸೆ ಕುಂಬಳ ಕಾಯಿ ತಿಂದು
ಕಂಬಳಿ ಹೊತಗೊಂಡು ಮಲಗ್ಯಾಳ .....

೨೩೦೮. ಏರಿ ಹೊಲದಾಗ ಕರಕಿ
ನನ್ನ ಹೇಣತಿ ............ ಬಾಳ ಬೆರಕಿ.

೨೩೦೯. ಕರಿ ಕುದರಿ ತಗೊಂಡು
ಕರಿಯಾಕ ಹೋದರ
ತವರಮನಿ ಮುಂದ
ಹಾಡಿಕೊಂಡ ಅಳತಾಳ .....

೨೩೧೦. ಕಂಟ್ಯಾಗ ಕಂಟಿ ಜಾಲಿ ಕಂಟಿ
ನನ್ನಾಕಿ ............. ಬಾಳಾ ಜಗಳ ಗಂಟಿ.

೨೩೧೧. ದಂಟೀಲೆ ಹೊಡದರ
ಕುಂಟಿಗೊಂತ ಬರತಾಳ ......

೨೩೧೨. ಕುಸುಬಿ ಹೂವು ಕುಶಾಲದ ಹೂವು
ಹಸರು ಬಳ್ಯಾಗ ಮೊಸರ ಚೆಲ್ಲೆತಿ ಮಲ್ಲಿಗಿ ಹೂವು
ಹೆಸರ ಹೇಳಿದರ ಗುನು ಗುನು ಮಾಡ್ತಾಳ ಸಂಪಿಗಿ ಹೂವು .....

೨೩೧೩. ಹಣ್ಣು ಹಂಪಲ ತಿಂದು ಬಣ್ಣ ಬಂದಾಳ
ಕಣ್ಣು ಹೊಡದು ನನ್ನ ತಣ್ಣಗ ಮಾಡ್ಯಾಳ .....

೨೩೧೪. ಹಸರ ಸೀರಿ ಹದಿನಾರು ನೀರಿಗಿ
ಹಸನ ಆಗಿಲ್ಲಂತ
ಹಾರಿ ಹಾರಿ ಒಗೀತಾಳ .....

೨೩೧೫. ಬಂಗಾರ ಘಟ್ಟಿ ಬೆಳ್ಳಿ ಪಟ್ಟಿ
ನಾ ತರಲಿಲ್ಲ ನನ್ನಾಕಿ ಬಯಕಿ ತೀರಲಿಲ್ಲ .....

೨೩೧೬. ಎಳ್ಳ ಹೂವಿನ ಸೀರಿ
ಚೊಗಚಿ ಹೂವಿನ ಶಾಲು
ಚರಗಾ ಚೆಲ್ಲಾಕ ಹೋಗೂನಂದ್ರ
ಗೊರಜಿಪಲ್ಲೆ ತರ್ರಿ ಅಂತಾಳ .....

೨೩೧೭. ಅಡಿಗಿ ಮನ್ಯಾಗ ಕುಂತಗೊಂಡು
ಹೆಡಗಿ ಕೂಳು ಕಪ್ಪುಸತಾಳ .....

೨೩೧೮. ಜಿಡ್ಡಗಟ್ಟಿದ ತೆಲಿ ಬಿಟಗೊಂಡು
ಜಾತ್ರೀಗಿ ಹೋಗ್ತಾಳ .....

೨೩೧೯. ಕಂಚಿನ ಕಣಕಲ
ಮುತ್ತಿನ ಅಡಕಲ
ನಮ್ಮತ್ತಿ ಹೊಟ್ಟೀಲೆ
ಮುತ್ತೈದಿ ಹುಟ್ಟ್ಯಾಳ ......

೨೩೨೦. ಮಳಿಗಾಲದಾಗ ಆಗೂದು ಕೆಸರ
ಹೊದಾಗಲ್ಲಾ ಹಸಿರ
ನನ್ನಾಕಿ ............. ನೀಡತಾಳ ಕೆನಿ ಮೊಸರ.

೨೩೨೧. ಹಲ್ಲಿಲ್ಲ ಕಡ್ಡಿಲ್ಲ ಕಟಂ ಅಂತಾಳ .....

೨೩೨೨. ಮಾಡಿಲ್ದ ಮಳಿ ಇಲ್ಲ
ಈಕಿ ಕಾರಣ ಇಲ್ದ ಅಳೂದಿಲ್ಲ .....

೨೩೨೩. ಆನಿಮ್ಯಾಗ ಅಂಬಾರಿ
ನನ್ನಾಕಿ ........... ಬಾಳಾ ಸಿಂಗಾರಿ.

೨೩೨೪. ಗಡಿಯಾರದಾಗ ಮುಳ್ಳುಗಳ ಆಟ
ಈಕಿದು ................ ನನ್ನ ಕೂಡ ಹುಡುಗಾಟ.

೨೩೨೫. ಸಿಟ್ಟಿಗೆದ್ದು ಬಡಿಯಾಕ ಎದ್ದ್ರ
ಸಟ್ಟನ್ನ ಬಂದು ಕಾಲು ಹಿಡಿತಾಳ .....

೨೩೨೬. ಉಪ್ಪಿಟ್ಟು ಚಹಾ ಮಾಡಂದ್ರ
ಚಾಪಿ ಹಾಸಿಗೊಂಡು ಬಿದ್ದುಕೋತಾಳ .....

೨೩೨೭. ಹೆಜ್ಜ್ಯಾಗ ಹೆಜ್ಜಿ ಕಾಲಿಗೆ ಗೆಜ್ಜಿ
ಮಜ್ಜಿಗಿ ಕಟಕೋತ ಬಂದ ಬೆಣ್ಣೆ
ಬಾಯಿಗೆ ಹಾಕತಾಳ .....

೨೩೨೮. ಮಾಳಗಿ ಮ್ಯಾಲ ಕುಂತು
ಮಲಮಗನ್ನ ಮಲಗಿಸಿ
ತನ್ನ ಮಗೂಗ ಹಾಲು ಕುಡಿಸತಾಳ .....

೨೩೨೯. ಎಪ್ಪತ್ತು ರೂಪಾಯಿ ಎಮ್ಮಿ
ಇಪ್ಪತ್ತು ರೂಪಾಯಿ ತಂಬಿಗಿ
ಚಪ್ಪರದಾಗಿನ ಎಮ್ಮಿ ಚಪ್ಪರಿಸಿ ಹಿಂಡತಾಳ .....

೨೩೩೦. ಮಾಳಿಗಿ ಮ್ಯಾಗ ಕುಂತು
ಮಗನ್ನ ಆಡಿಸತಾಳ.

೨೩೩೧. ನಾ ಹೇಳೂದೊಂದು ಆಕಿ ಮಾಡೂದೊಂದು
ಊಟಕ್ಕ ತಾ ಅಂದ್ರ ಕಾಟ ತರ್ತಾಳ .....

೨೩೩೨. ಅಮವಾಸಿ ಬಂದ್ರ ಔವುಕ್ ಅಂತಾಳ
ಹುಣ್ವಿ ಬಂದ್ರ ಹುಯಿಕ್ ಅಂತಾಳ
ಮನೀಗಿ ಬಂದವರಿಗೆ ತಿಂತೀನಂತಾಳ .....

೨೩೩೩. ಸುಂಟರ ಗಾಳ್ಯಾಗಿ ತಿರಗತಾರ
ನೆಂಟರು ಮನೆ ಮಾರು ಮರತಾಳ .....

೨೩೩೪. ದೊಡ್ಡಸ್ತನಕ ಗುಗ್ಗಳಾ ಹೊತ್ತು
ಗಿಡ ಗಿಡಾ ಸುತ್ತಿ ಮನೀಗೆ ಬರ್ತಾಳ .....

೨೩೩೫. ತಾಳಿ ಸಾಮಾನು ಮಾಡಿಸಲಿಲ್ಲಂತ
ತಾಳಿ ಹರದು ಬೋರ್ಯಾಡತಾಳ .....

೨೩೩೬. ಹರವಿ ಹೊತ್ತಾಳ ಹಲ್ಲ ಕಿಸ್ತಾಳ
ಮುರುಕಾ ಮಾಡ್ತ ಮುಂದಕ ಬರ್ತಾಳ .....

೨೩೩೭. ಕಾಯಕವೇ ಕೈಲಾಸ ಎಂದರು ಶರಣರು
ನನ್ನ ಸತಿ ಶರಣೆ .......... ಹಡೆದವರೇ ಧನ್ಯರು.

೨೩೩೮. ಕಟ್ಟಿದ್ದು ಉಳೀಲಿಲ್ಲ
ಇಟ್ಟದ್ದು ಸಾಲಲಿಲ್ಲ
ಇವಳು ............... ಹೊರಗಿಂದ
ತಂದ ತಿನ್ನೂದು ಬಿಟ್ಟಿಲ್ಲ.

೨೩೩೯. ಅತ್ತಿ ಇಲ್ಲದಿದ್ದ್ರ ಸೋಸಿ ಬೇಸಿ
ಸೊಸಿ ಇಲ್ಲದಿದ್ದ್ರ ಅತ್ತಿ ಬೇಸಿ
ನಮ್ಮಾಕಿ ............. ಅದಾಳಲ್ಲ
ಏನಿದ್ದೂ ಬೇಬರ್ಸಿ.

೨೩೪೦. ಆರ ಸೇರು ಎಳ್ಳು
ಮೂರು ಸೇರು ಜೊಳ್ಳು
ಈಕಿ ............ಗೆ
ಊರು ಮಂದೆಲ್ಲ ಸುಳ್ಳು.

೨೩೪೧. ಅನ್ನ ಕೆನಿ ಮೊಸರ ಬುತ್ತಿ
ಬೆನ್ನೀಗೆ ಹಾಕೇನಿ ಮೂರು ಲತ್ತಿ
ಕನ್ನೂರ ಹೆಣ್ಣು ಬಾಳ ಕತ್ತಿ .....

೨೩೪೨. ಹೊರಕಡಿಗೆ ಹ್ವಾದಲ್ಲಿ
ಹುರಕಡ್ಲಿ ತಿಂತಾಳ .....

೨೩೪೩. ನಿಚ್ಚಣಿಕಿ ಮ್ಯಾಲ ಕುಂತ
ಕಚ್ಚೀ ಕಳದ ನುಚ್ಚು ಉಣತಾಳ .....

೨೩೪೪. ಗೊರ್ಜಿ ಪಲ್ಲೆ ತಿಂದು
ಗುರ್ಜಿ ಹೊತಗೊಂಡು ಕುಣೀತಾಳ .....

೨೩೪೫. ಹಕ್ಕರಕಿ ತಿಂದ
ಹಲ್ಲ ಕಿಸಿತಾಳ .....

೨೩೪೬. ಕುಂಬಳಕಾಯಿ
ತಲೆದಿಂಬಿಗಿಟಗೊಂಡ
ಕಂಬಳಿ ಹೊತಗೊಂಡು
ಕೆಮ್ಮಿಕೋತ ಮಲಗತಾಳ .....

೨೩೪೭. ಹಣ್ಣ ಮೆಣಸಿನಕಾಯಿ ತಿಂದ
ಹಣಿ ಹಣಿ ಬಡಕೋತಾಳ .....

೨೩೪೮. ತಿಪ್ಪೀ ಮ್ಯಾಲ ತುಪ್ಪಾ ಸೋಸತಾಳ .....

೨೩೪೯. ತಿನ್ನೂದಕ ಅಂತಾರ ತಿಂದೋಡಿ
ಬಾಯಿ ತಗದರ ಹಸಗೇಡಿ ....

೨೩೫೦. ಅನ್ನ ಮುಗದ್ರ ಕೊಳಗಾ ನೆಕ್ಕಾಕಿ
ನೀರು ಆದ್ರ ನೆಲಾ ನೆಕ್ಕಾಕಿ .....

೨೩೫೧. ಆರು ಕೊಡಾ ಅಂಬಲಿ
ಮೂರು ಕೊಡಾ ಮಜ್ಜಿಗಿ
ಆಕಿ ಇಕ್ಕಲಿಲ್ಲ ನಾ ಸೊಕ್ಕಲಿಲ್ಲ .....

೨೩೫೨. ಹೊಂಡದ ಮ್ಯಾಲ ಕುಂತ
ಗಂಡಸರಿಗೆ ಹಳ್ಳ ಒಗೀತಾಳ .....

೨೩೫೩. ಚಿಪ್ಪಾಡಿ ಬಳದ ಚಪ್ಪರ ಹಾಕ್ತಾರ .....

೨೩೫೪. ಜಳಕಾ ಮಾಡಂದ್ರ
ಜಗಳಾ ಮಾಡ್ತಾಳ .....

೨೩೫೫. ಜಾತ್ರೀಗಿ ಹೋಗೂನು ನಡಿ ಅಂದ್ರ
ನಿನ್ನ ಸೂತ್ರ ನನ್ನ ಕೈಯಾಗೈತಿ ತಡಿ ಅಂತಾಳ .....

೨೩೫೬. ಚಿಪ್ಪಾಡಿ ಮ್ಯಾಲ ಕುಂತ
ಚಿಟಕ ಮುಳ್ಳು ಮುರಿತಾಳ .....

೨೩೫೭. ಹೆಂಡಿ ಬುಟ್ಟಿ ಟೊಂಕದಾಗಿಟಗೊಂಡು
ಕುಂಡಿ ಕೆರಕೋತ ಕುಂಟಲಿಪಿ ಆಡ್ತಾಳ .....

೨೩೫೮. ಹರಕ ಚಪ್ಪಲಿ ಒಡಕ ತಂಬಿಗಿ
ಹೊತ್ತಿಲ್ಲದ ಹೊತ್ತಿನ್ಯಾಗ
ಹೊರಕಡಿಗಿ ಹೋಗ್ತಾಳ .....

೨೩೫೯. ಒಡಕ ತಂಬಿಗ್ಯಾಗ ನೀರ ಹಿಡಕೊಂಡು
ಹೊರಕಡಿಗಿ ಹೋದಲ್ಲಿ ಹಾಳಿ ಹುಡಕತಾಳ .....

೨೩೬೦. ಕಂಬದ ಮರೀಗಿ ನಿಂತ
ಸಿಂಬಳಾ ನೆಕ್ಕತಾಳ .....

೨೩೬೧. ಒಂಟಿ ಮ್ಯಾಲ ಕುಂತ
ಪಂಟ ಹೊಡಕೋತ
ಗಂಟಿ ಬಾರಿಸ್ತಾಳ .....

೨೩೬೨. ನಾಯಿ ಮ್ಯಾಲ ಕುಂತ
ಬಾಯಿ ಬಾಯಿ ಬಡಕೊಂತಾಳ .....

೨೩೬೩. ಹಂದಿ ಮ್ಯಾಲ ಕುಂತ
ಗಂಧದೆಣ್ಣಿ ಬಡಕೊಂತಾಳ .....

೨೩೬೪. ಬೆಕ್ಕಿನ ಮ್ಯಾಲ ಕುಂತ
ದಿಕ್ಕೆಲ್ಲಾ ನೋಡಿ ದಿಂಡರಕಿ ಹಾಕ್ತಾಳ .....

೨೩೬೫. ತಗಣಿ ಮ್ಯಾಲ ಕುಂತ
ಸೆಗಣಿ ಬಳೀತಾಳ .....

೨೩೬೬. ಸಾದ ಎತ್ತು ತಂದು
ಗಾದಿ ಮ್ಯಾಲ ಮಲಗಿಸಿಕೊಂತಾಳ .....

೨೩೬೭. ಬಳ್ಳಾರಿಗೆ ಹೋಗೂನಂದ್ರ
ಕಳ್ಳರೆಲ್ಲಾ ನನಗ ಗೊತ್ತು ಅಂತಾಳ .....

೨೩೬೮. ಚಿಕ್ಕಾಡಿ ಮ್ಯಾಗ ಕುಂತ
ಚಿಕ್ಕೀ ಎಣಿಸತಾಳ .....

೨೩೬೯. ಕುಳಬಾನದಾಗ ಕುಂತಗೊಂಡು
ಕುಳ್ಳು ತಿಂತಾಳ .....

೨೩೭೦. ಕುಳುಬಾನಾ ಏರಿ ಏರಿ
ತವರ ಮನಿ ನೋಡ್ತಾಳ .....

೨೩೭೧. ಕಾರಿ ಕಂಟ್ಯಾಗ ಕುಂತ
ಕಣ್ಣ ತಿರುವುತಾಳ
ಬಾರಿ ಕಂಟ್ಯಾಗ ಕುಂತ
ಬಾಳೀಹಣ್ಣು ತಿಂತಾಳ ........

೨೩೭೨. ಚವಳಿ ಸಾಲಾಗ ನಿಂತು
ಚಾಡಿ ಹೇಳ್ತಾಳ .....

೨೩೭೩. ಸೀರಿ ಮಾರವನ ಮುಂದ
ಸೆಟದ ನಿಲ್ತಾಳ
ಕರೀದಿ ಮಾಡ್ರೆಂತ ಮಾರಿ ನೋಡ್ತಾಳೆ .....

೨೩೭೪. ಬದ್ನಿ ಸಾಲಾಗ ಕುಂತ
ಬೇತಾಲಿ ತೀಡ್ತಾಳ ......

೨೩೭೫. ಬದ್ನಿ ಗಿಡಾ ಏರಿ ಬೊಬ್ಬಾಟ ಮಾಡ್ತಾಳ .....

೨೩೭೬. ಮೆಣಸಿನ ಗಿಡದಾಗ ಕುಂತ
ಮೆಣಸು ಹುಡುಕತಾಳ .....

೨೩೭೭. ಕುಂಬಳ ಬಳ್ಳ್ಯಾಗ ಕುಂತ
ಕುಣದಾಡತಾಳ ..........

೨೩೭೮. ಹಿರ್ಯಾರ ಕೂಡಕುಂತ
ಹಿರೇತನ ಮಾಡ್ತಾಳ ......

೨೩೭೯. ನಗ್ನಿ ಮುಳ್ಳು ತುಳದ
ಮಗ್ಗಲಕ ಬಿದ್ದು ಅಳತಾಳ .....

೨೩೮೦. ಹಿರೀ ಬಳ್ಳ್ಯಾಗ ಕುಂತ
ಊರ ಹರಿಕತಿ ಮಾಡೇನಂತಾಳ ......

೨೩೮೧. ತದಬಾಗಿಲ್ಗೆ ತೆಲಿಕೊಟ್ಟು ಮಲಗ್ತಾಳ
ಬಾಗಲ್ದಾಗ ಕುಂತ ಬಾಯಿ ಬಡಕೋತಾಳ ....

೨೩೮೨. ಚರಿಗಿ ತಗೊಂಡ ನೀರು ತಾ ಅಂದ್ರ
ಚರಿಗಿ ತಗೊಂಡು ಹೊರಕಡೆ ಹೋಗ್ತಾಳ .....

೨೩೮೩. ಹೊಲಕ ಹೊಂಟೀನಿ
ಬುತ್ತಿ ಕಟ್ಟಂದ್ರ
ಬತ್ತಿ ಹೊಸಗೋತ
ರಾಧಾಬಾಯಿ ಮನೀಗಿ ಹೋಗ್ತಾಳ .....

೨೩೮೪. ನಮ್ಮೂರ ಕೆರಿ
ಕೆರಿಮ್ಯಾಲ ಗರಿ
ಈಕಿ ಹೆಸರ ಕೇಳಾವ್ರ ಪುಚ್ಚಾಹಿರಿ .....

೨೩೮೫. ಅರಕಟ್ಟ ಮುರಕಟ್ಟ
ಮರಕ್ಕ ಮೂವತ್ತು ಕಟ್ಟ
ಪಂಚಾಳ ಕಟ್ಟ ಪಗಡಿ ಕಟ್ಟ
ತೊಡರ ಬಡರ ಜೆಲ್ಲಿ ಕಟ್ಟ
ಹಂದರ ಕಟ್ಟ ಮಂದಿರ ಕಟ್ಟ
ಊರ ಅಗಸ್ಯಾಗ ಹಗ್ಗ ಕಟ್ಟ
ಹಗ್ಗಕ ಜೋಕಾಲಿ ಕಟ್ಟ
ಹೆಸರ ಕೇಳಾಕೀನ ಹೆಡಮುರುಗಿ ಕಟ್ಟ
ನನ್ನಾಕಿ ಹೆಸರ ಹೇಳ್ತೀನಿ ನಾಚಿಗಿ ಬಿಟ್ಟ .....

೨೩೮೬. ಹಿತ್ತಲದಾಗ ಕುಂತಗೊಂಡು
ಹಿರೇಕಾಯಿ ತಿಂತಾಳ .....

೨೩೮೭. ಗಂಡನ ಮನ್ಯಾಗ ಇಲಿ
ತವರ ಮನ್ಯಾಗ ಹುಲಿ ನನ್ನಾಕಿ .....

೨೩೮೮. ಅತ್ತಿ ಮಾವಾ ಹೊಲಕ ಹೋದ್ರ ಚಿನ್ನಾಟ
ಅವ್ರು ಊರಿಗೆ ಹೋದ್ರ ಹಾರಾಟ ಮಾಡ್ತಾಳ .....

೨೩೮೯. ಕೆರಿಗೆ ಹೋಗಿ ನೀರು ತಾ ಅಂದ್ರ
ದಾರಿ ಗೊತ್ತಿಲ್ಲಂತ ಮಾರಿ ತಿರುವುತಾಳ .....

೨೩೯೦. ಬಿ.ಎ. ಆಗಿನಂತಾ ಭಾರಿ ಭಾರಿ ಮಾತಾಡ್ತಾಳ
ಏನೂ ಗೊತ್ತಿಲಂದ್ರ ನೆಲಾ ಹಿಡಿದು ಮಲಗ್ತಾಳ .....

೨೩೯೧. ಕಟ್ಟು ಕಟ್ಟು ಕರ್ಚಿಕಾಯಿ ತಿಂತಾಳ
ಬೆಳ್ತನಾ ತಿರುಗ್ಯಾಡಾಳ ......

೨೩೯೨. ಕಟ್ಟಿಮ್ಯಾಲ ಕುಂತಗೊಂಡು ಕಡಬು ತಿಂತಾಳ
ಗಳಿಗ್ಯಾಗ ಕುಂತಗೊಂಡು ಅವುಕ್ ಅಂತಾಳ .....

೨೩೯೩. ಕಕಾ ಮಗ್ಗಿ ಗೋದಿ ಹುಗ್ಗಿ
ಹುಗ್ಗಿ ಅಂದ್ರ ಎಗ್ಗಿಲ್ದ ಹೊಡೀತಾಳ .....

೨೩೯೪. ಗ್ವಾಲ್ಡ್ಯಾಗ ಕೂತ್ಗೊಂಡು
ಮಾಲ್ದಿ ತಿಂತಾಳ .....

೨೩೯೫. ಹಂಡೇದಾಗ ಕೂಟ್ಗೊಂಡು
ಮಂಡ್ಯಾಳ ಮೆಯ್ತಾಳ .....

೨೩೯೬. ಸಂದ್ಯಾಗ ಕುಂತ ಸಪ್ಪಳಿಲ್ದ
ಹಪ್ಪಳಾ ತಿಂತಾಳ .....

೨೩೯೭. ಹಲ್ಗೆ ಹಲ್ಲಿಟ್ಟು
ಹಣಿಗೆ ಕುಂಕುಮ ಬೊಟ್ಟು
ಮಣಕಂತಾಕಿ ಕೂಡ
ಬಾಳ್ವೆ ಬಲು ಬಿಕ್ಕಟ್ಟು .....

೨೩೯೮. ಕೈ ಹಿಡಿದ್ರ ಕೊಸರ್ಯಾಡತಾಳ
ಕೂಸೈತಂತ ಬುಸುಗುಡತಾಳ ....

೨೩೯೯. ಚಾ ಫಳಾರಂದ್ರ ಖುಸಿ ಪಡತಾಳ
ರೊಟ್ಟಿ ಮಾಡಂದ್ರ ಬಿಕ್ಕಿ ಬಿಕ್ಕಿ ಅಳತಾಳ .....

೨೪೦೦. ಮಲಗೂನಂದ್ರ ಮುಖಾ ಕಿವುಚಿ
ಕಲಗಂಚಿ ತನ್ನಿ ಅಂತಾಳ .....

೨೪೦೧. ಸವರಾತ್ರ್ಯಾಗೆದ್ದು ಸರಗಿ ಕೇಳ್ತಾಳ
ಸರದ ಮಲಗಂದ್ರ ಸನೇಕ ಬರ್ತಾಳ .....

೨೪೦೨. ಸಲಿಗಿ ಕೊಟ್ರ ತೆಲಿಗೇರ್ತಾಳ
ಸಿಡಿಮಿಡಿಗೊಂಡ್ರ ಸ್ವಾಟಿ ತಿರುವುತಾಳ .....

೨೪೦೩. ಅತ್ತೀ ಹೊಟ್ಟೇಲೆ ಮುತ್ತಿನಂತಾಕಿ ಹುಟ್ಟಾಳ ಅಂದ್ರ
ಮುತ್ತಿನ ಸರ ಯಾವಾಗ ಅಂತಾಳ .....

೨೪೦೪. ಒಂಟಿ ಮ್ಯಾಲ ಕುಂತಗೊಂಡು
ಪಂಟ ಹೊಡೀತಾಳ ......

೨೪೦೫. ಒಂದ್ಹೊತ್ತ ಅಂತಾಳ
ಒಂದ್ಹೆಡಗಿ ತಿಂತಾಳ .....

೨೪೦೬. ಬಡಿವಾರದಾಕಿ ಬಾಳ ಬೆರಕಿ
ಅತ್ತಿ ಮಾವ್ಗ ಇಂಗ್ ತಿನಸ್ತಾಳ ....

೨೪೦೭. ಕದಿರು ಕಂಬ ಬಿದರ ಜಂತಿ
ಜಂತಿಮ್ಯಾಲ ಕೂತ್ಕೊಂಡ
ಅಂತರಲಾಗಾ ಹೊಡಿತಾಳ ....

೨೪೦೮. ಕಣದಾಗ ಕಂಕಿ
ಕೈಯಾಗ ವಂಕಿ
ವಂಕೀಕ್ಕೈ ತಿರುವತಾಳ
ಬಿಂಕದಾಕಿ ಯಾರಂದ್ರಿ .....

೨೪೦೯. ಕಡ್ಲಿ ಇಲ್ದ ಕಟಂ ಅಂತಾಳ
ಬಗರಿ ಜಾಳಗಿ ಇಲ್ದ ರುಂ ಅಂತಾಳ
ಕೂಸು ಹುಟ್ಟೊ ಮೊದ್ಲ ಕುಲಾಯಿ ಅಂತಾಳ .....

೨೪೧೦. ಕಡ್ಲಿ ಹುಗ್ಗಿ ಗಡದ್ದ ಹೊಡದು
ಗೊಂಗ್ಡಿ ಹೊತ್ಕೊಂಡ ಗೊರ್ಕಿ ಹೊಡಿತಾಳ .....

೨೪೧೧. ನಾ ಹೇಳಿದ್ದು ಕಾಲ್ಕಸ
ಇನ್ನೊಬ್ರು ಹೇಳಿದ್ದು ...... ಗೆ
ಬಾಳ ಹಸಾ.

೨೪೧೨. ಉಂಡಲ್ಲಿ ಕುಂಡಿ ಮರ್ತು ಬರ್ತಾಳ ......

೨೪೧೩. ಸಂದ್ಯಾಗ ಸಂದಿ ಅಲಸಂಧಿ
ನನ್ನಾಕಿ ............. ನೋಟು ತರುಕು ಜಗಾ ನಾಗೊಂದಿ.

೨೪೧೪. ಬಾರಕೋಲ ತಗೊಂಡ್ರ ಬಗ್ಗಿ ಬರತಾಳ .....

೨೪೧೫. ಹೋಳ್ಗಿ ತಿಂದು ಹೂಸು ಬಿಡ್ತಾಳ .....

೨೪೧೬. ಕಡ್ಲಿ ತಿಂದ ಕಮುರಡೇಗ ಬಿಡ್ತಾಳ .....

೨೪೧೭. ಹಗ್ಗಲ್ಲೆ ಹೊಡದ್ರ ಮಗ್ಗಲಕ ಬರ್ತಾಳ ....

೨೪೧೮. ಕಸಬರಿಗಿ ಬಗಲಾಟ ಇಟಗೊಂಡ
ಹಸಗೂಸಿಗೆ ಹಾಲ ಕೊಡ್ತಾಳ.

೨೪೧೯. ಮೂರು ಮಕ್ಕಳ ತಾಯಿ
ಮುದುಕಿ ಆಗಿ ಮೊಮ್ಮಕ್ಕಳಾದ್ರು
ಕುಂಟೆ ಬಿಲ್ಲೆ ಆಡ್ತಾಳ .....

೨೪೨೦. ಆಚೆ ಮನೀಗೆ ಹೋಗಿ
ಸಕ್ಕರಿ ತಾ ಅಂದ್ರ
ಈಚೆ ಮನಿಗೆ ಹೋಗಿ
ಬಕ್ರಿ ತಂದಾಳ .....

೨೪೨೧. ಬೀಸಾಕ ಕುಂತೇವಿ
ಮುಕ್ಕು ಹಾಕಂದ್ರ
ಬಿಕ್ ಬಂದ ತೆಕ್ಕಿ ಬೀಳ್ತಾಳ .....

೨೪೨೨. ಗುಂಗುರು ಗೂಲ್ದಾ ಬಂಗಾರ ಬೈತಾಲಿ
ಅಂಗಳದಾಗ ಕುಂತ ರಂಗೋಲಿ ಹಾಕ್ತಾಳ .....

೨೪೨೩. ಗುಂಗುರು ಗೂದಲ ಬಂಗಾರ ಬೈತಾಲಿ
ರಂಗ ಮಂಟಪದಾಗ ಕುಂತು ರಮಿ ರಮಿಸಿ ಕರಿತಾಳ .....

೨೪೨೪. ಜಾಜಿ ಮಲ್ಲಿಗಿ ಸೂಜಿ ಮಲ್ಲಿಗಿ
ಇರುವಂತಿ ಶಾವಂತಗಿ
ತಗೊಂಡ ಇದ್ದಲ್ಲಿಗೆ ಹೋದ್ರ
ಎದ್ದೆದ್ದು ಓಡಿ ಬರ್ತಾಳ .....

೨೪೨೫. ಬಂಗಾರ ತೊಟ್ಲ ಬೆಳ್ಳಿ ಹಗ್ಗ
ಕಂದನ್ನ ತೂಗಿ ಮುಂದಕ ಬರ್ತಾಳ .......

೨೪೨೬. ತೊಂಡಿಹಣ್ಣು ತುಟಿ
ದಾಳಿಂಬ್ರ ಹಲ್ಲು
ಬೇವಿನೆಸಳು ಕುಡಿಹುಬ್ಬು
ಇದ್ದಾಕಿ ಬೆಳದಿಂಗಳ ಹಿಡಿದು
ರಂಗೋಲಿ ತೀಡತಾಳ .....

೨೪೨೭. ವಜ್ರದವಾಲಿ ಗೆಜ್ಜಿ ಟೀಕಿ ಇಟಗೊಂಡು
ಮಜ್ಜಿಗಿ ಕಡೀತಾಳ .....

೨೪೨೮. ಶಿವನ ಮುಂದ ಕುಂತಗೊಂಡ
ಶಿವ ಶಿವಾ ಅಂತ ನನ್ನ ಕರೀತಾಳ .....

೨೪೨೯. ಅಡಗಿ ಮಾಡ್ಯಾಳ ಕಮ್ಮಗ
ಉಣ್ಣಾಕ ನೀಡ್ತಾಳ ಸುಮ್ಮಗ .....

೨೪೩೦. ಅಡ್ಗಿ ಮಾಡ್ಯಾಳ ಹಸಾ
ಉಣ್ಣಾಕ ನೀಡ್ತಾಳ ತುಸಾ ......

೨೪೩೧. ಗೂದಿ ಹಾಯೂತನಕ
ಗೋದಿ ಮುಕ್ಕತಾಳ .....

೨೪೩೨. ಹುಳ್ಳಿ ಸಾರು ನವಣಿ ಕಿಚಡಿ
ಹಳ್ಳದ್ದಂಡ್ಯಾಗ ಕುಂತು ಕಳ್ಳ ತುಂಬಾ ಉಣತಾಳ .....

೨೪೩೩. ಸ್ಟೇಶನ್ ಮಾಸ್ತರಗ ನಿದ್ದಿಲ್ಲ
ನನ್ನಾಕಿ ............ ಗೆ ಬುದ್ದಿಲ್ಲ.

೨೪೩೪. ತಿಪ್ಪೀ ಕೆದರೂದು ಕೋಳಿ
ಅತ್ತೀಗೂಡ ..................ದು ದಿನಾ ಹೋಳಿ.

೨೪೩೫. ಕಟ್ಟಿರುವಿ ಸಾಲ್ಕಂಡು
ಕರಿಮಣಿ ಗುಳದಾಳಿ
ಕಣ್ಗೆ ಒತ್ತಿಗೋತಾಳ .....

೨೪೩೬. ಕಲ್ಲ ಮ್ಯಾಲ ಕಲ್ಲ ಇಲಕಲ್ಲು
ಗಲ್ಲು ಮ್ಯಾಲ ಗಲ್ಲ ಹಾನಗಲ್ಲು
ಯಾರ ಬುದ್ಧಿ ಹೇಳಿದ್ರೂ
ನನ್ನಾಕಿ ................. ಬೋರಗಲ್ಲು.

೨೪೩೭. ಹೊಲಕ್ಕ ಬಂದಿ ಹೊಯ್ಕಾಲಿ
ಕಾಂಗ್ರೆಸ್ ಕಸಾ ಕೀಳಂದ್ರ
ಮನೀಗೆ ಬಂದರ ಬಾ ಮೂಳಾ
ನಿನ್ನ ಕೈಯಾಗ ಮಸಿ ಅರಿವಿ ಕೊಡತೀನಂತಾಳ .....

೨೪೩೮. ನಿಂತಾವಾ ಕುಂತಿಲ್ಲ ಹನುಮಪ್ಪ
ಕುಂತಾಕಿ ಎದ್ದಿಲ್ಲ ಕರಿಯಮ್ಮ
ಕಂತಿ ಕುಂತ್ರೂ ಜಗಳಾ ಬಿಟ್ಟಿಲ್ಲ ಈಕಿ ಜಕ್ಕವ್ವ .....

೨೪೩೯. ಜಾತ್ರೀಗಿ ಹೋದಲ್ಲಿ
ಜಗಳಾ ತರ್ತಾಳ .....

೨೪೪೦. ವಚನ ಭ್ರಷ್ಟ ಕಿಮ್ಮತ್ತಗೇಡಿ
ಲಫಂಗ ಅಂತಾ ವಕೀಲರಿಗಂತಾರ
ಕಾಲ ಬಿಟ್ಟ ಕತ್ತಿ ಅಂತಾ
ನನ್ನ ಹೇಣ್ತಿಗಂತಾರ .....

೨೪೪೧. ಒಳ್ಳೊಳ್ಳೆಯವರು ಉಳ್ಯಾಡಿ ಹೋಗುವಾಗ
ನನ್ನಾಕಿ ................. ಪಲಕ್ಕಿ ಬೇಡ್ತಾಳ.

೨೪೪೨. ಸದ್ದಿಲ್ಲದ ಸವರಾತ್ರ್ಯಾಗ
ಶ್ಯಾವಗಿ ಬಸ್ತಕೊಂಡು ಸುರೀತಾಳ .....

೨೪೪೩. ಅತ್ತಿ ಸೊಸಿ ಹೋರಾಟ
ಮನಿ ತುಂಬಾ ಈಕೀದ ಕಿರುಚಾಟ .....

೨೪೪೪. ಅತ್ತಿ ಸೊಸಿ ಜಗಳಾ ಅನುಗಾಲ
ನಮ್ಮ ಮನ್ಯಾಗ ಇಡೀ ವರ್ಷ
ಈಕೀದ ಮಳೆಗಾಲ .....

೨೪೪೫. ಅತ್ತಿ ಸೊಸೆ ಯುದ್ಧದಾಗ
ನಮ್ಮಪ್ಪ ನೆಗೆದು ಬಿದ್ದ
ಈಕಿ ........... ಆಗಲಿಲ್ಲ ಆದ್ರೂ ಸುದ್ದ.

೨೪೪೬. ಅತ್ತಿ ಸೊಸಿ ಹಣ್ಣು ಹಾಲು
ಈಕಿ ಏನಾರ ಕುಂಯ್ ಅಂದ್ರ
ತಗೊಂತೀನಿ ಕೋಲು .....

೨೪೪೭. ಮಾರಿ ನೋಡಿ ಮೊಳಾ ಹಾಕ್ತಾರ
ಚೆಂದನ್ನ ಚೆಲುವಿ ನನ್ನ ಹೆಣ್ತಿ ..... ನ
ನೋಡಿ ಹಲ್ಲ ಕಿಸೀತಾರ.

೨೪೪೮. ಮಳಿ ಬಂದ್ರ ತಪ್ಪಲ್ಲ
ಮಗ ಉಂಡ್ರ ತಪ್ಪಲ್ಲ
ನನ್ನ ಹೆಣ್ತಿ ............ ಚಾಡೀಗೆ ನಾ ಒಪ್ಪಲ್ಲ.

೨೪೪೯. ಅವ್ವಾ ಅಪ್ಪಾ ಅತ್ತಿ ಮಾವಾ ಒಂದ ಅಂತಾಳ
ದೇವ್ರಂತ ಅತ್ತಿ ಮಾವನ ಕಾಲ ಮುಗಿತಾಳ .....

೨೪೫೦. ನನ್ನ ಕಾಲಿಗೆ ಬೀಳ್ತಾಳ
ಕಾಯಕವೇ ಕೈಲಾಸ ಅಂತಾಳ ......

೨೪೫೧. ಉಟ್ಟದಟ್ಟ ಉರಿಬಿಸಲಾಗಿಟ್ಟ
ಕಟ್ಟೀ ಚಾಟಿಗೆ ಅಡಗಿ ಕುಂತಾಳ ......

೨೪೫೨. ಸವರಾತ್ರ್ಯಾಗೆದ್ದು ಸೊಟ್ಟಮಾರಿ ಮಾಡ್ತಾಳ .....
ಬೆಳಗಾಗುತ್ಲೆ ಬೆಲ್ಲಾ ತರ್‍ರಿ ಅಂತಾಳ .....

೨೪೫೩. ಆಗದವರ ಮನೀಗೆ
ಆಡಾಕ ಹೋಗ್ತಾಳ .....

೨೪೫೪. ಹರಕ ಚಪ್ಪಲಿ ಹರಕ ಸೀರಿ
ಹರಕ ಬಾಯಿ ಬಿಟಗೊಂಡು
ಹರಕತ್ತಿ ಮಾಡಾಕ ಹೋಗ್ತಾಳ .....

೨೪೫೫. ಮಾಡಲಿಲ್ಲ ಮಟ್ಟಲಿಲ್ಲ
ಕಟ್ಟಿ ಮ್ಯಾಲ ಕುತ್ತಗೊಂಡು
ಕುರಿ ಕಾಯೋವನ್ನ ಕರಿತಾಳ ......

೨೪೫೬. ಅತ್ತಿ ಸವತಿ ಸುದ್ದಿ ತಗದರ
ಮೆತ್ತಗ ಬಂದು ಮುತ್ತ ಕೊಡತಾಳ .....

೨೪೫೭. ಅಡಿಗಿ ಮನ್ಯಾಗ ಖಾಲಿ ಕೆರಸಿ
ಬರೇ ಹೊರಗ ತಿರಗ್ತಾಳ ಬೇಬರ್ಸಿ .....

೨೪೫೮. ಹೊಟ್ಟೆ ಕಡೀತೈತಂತ
ರೊಟ್ಟಿ ಹಿಟ್ಟ ಮುಕ್ಕತಾಳ ......

೨೪೫೯. ಹೊಲಸಿನ್ಯಾಗ ಬಿದ್ದಿದ್ದು ತಿನಬ್ಯಾಡಂದ್ರ
ಯಾಕs ನಾನು ಅದರಾಗ ಎದ್ದಿಕೊಂಡ ತೀಂತಿನಂತಾಳ ......

೨೪೬೦. ಉದ್ದಾಲಕ ಮುನಿ ಹೆಂಡತಿ ಚಂಡಿ
ನನ್ನ ಹೇಣ್ತಿ ........... ಅದಾಳ ಜಗಬಂಡಿ.

೨೪೬೧. ಮಾತಿನಲ್ಲಿ ಭಾರಿ ಗಿಲೀಟು
ನನ್ನಾಕಿ ............ ಅದಾಳ ಭಾರಿ ಎಡವಟ್ಟು.

೨೪೬೨. ಆರು ಮಣ ಬೆಲ್ಲ
ಮೂರು ಮಣಾ ಹಿಟ್ಟು
ಹದಾ ನೋಡಿ ಅಡಗಿ ಮಾಡಂದ್ರ
ಸದರಿನ್ಯಾಗ ಕುಂತ ಸ್ವಾಮಿ ಕರದು
ಅಡಿಗಿ ಮ್ಯಾಗ ನೆದರಿರಲಿ ಅಂತಾಳ .....

೨೪೬೩. ಕಣ್ಗೆ ಹಚ್ಚೋದು ಕಪ್ಪು
ಹಾಲಿಗೆ ಹಾಕೋದು ಹೆಪ್ಪು
ಯಾರಿಗೂ ತಪ್ಪಿಲ್ಲ ಮುಪ್ಪು
ಆರೋಗ್ಯಕ ಬೇಕು ಸೊಪ್ಪು
ಸ್ವಾದರ ಸೊಸಿ ಮಾಡಿಕೊಳ್ಳೋದು ಭಾರಿ ತಪ್ಪು .....

೨೪೬೪. ಅಕ್ಕ ಕೊಟ್ಟಾಳ ತನ್ನ ಮಗಳಾ ಕಳ್ಳಿಗಾಗಿ
ನಾನಾದೆ ಅಕ್ಕನ ಮಗಳ ಪ್ರೀತಿಗಾಗಿ
ನನ್ನಾಕಿ ............ ಜಗಳಾಡತಾಳ ತನ್ನ ಹಕ್ಕಿಗಾಗಿ.

೨೪೬೫. ಹಂಡ ಬಂಡ ಸೀರಿ
ಮೊಂಡ ಕೂದಲ
ಲಂಡ ಜಡೆಗೆ
ತೊಂಡೆ ಹೂ ಇಟಗೊಂಡ
ಕಂಡ ಕಂಡವರಿಗೆ
ಕೈ ಮುಗೀತಾಳ .....

೨೪೬೬. ಮೆಣಸಿಕಾಯಿ ಹಿಂಡಿ ಅರಿ ಅಂದ್ರ
ಕಡಚಿಗಿ ಹಿಡಕೊಂಡು ಕುಂಡಿ ಕೆರಕೋತಾಳ .......

೨೪೬೭. ಹೊಳಿ ಮ್ಯಾಗ ಹೋಳಿ
ಕಾಲಾಗ ಪಂಚೇರ ರುಳಿ
ಸಾರು ಮಾಡ್ತಾಳ ಬಲು ಹುಳಿ .....

೨೪೬೮. ಸೋದರ ಮಾಂವಾ
ಸಾಕಿದ ನಾಯಿ ಸಂವಾ ಅಂತಾಳ .....

೨೪೬೯. ಮಗ್ಗಲ ಮನ್ಯಾಗ ಮಜ್ಜಿಗಿ ಕಟಿತಾಳ
ಮನೀಗಿ ಬಂದ ನನ್ನ ಕಟಿತಾಳ .....

೨೪೭೦. ಕಟಗ ರೊಟ್ಟಿ ಖಡಕ ಖಾರಾ
ಕೆನಿ ಕೆನಿ ಮೊಸರು ಕಡ್ಲಿ ಉಸುಳಿ
ಉಡಕಿ ಗಂಡಂತ ಓಡಾಡಿ ಉಣಸತಾಳ .....

೨೪೭೧. ಮಂತ್ರಿಗಳು ಮಾಡೂದು ವಾಮಾಚಾರ
ಅಪ್ಪ ಅವ್ವ ಮಾಡ್ತಾರ ಸದಾಚಾರ
ನನ್ನಾಕಿ ............ ಮಾಡ್ತಾಳ ನನ್ನ ಉಪಚಾರ.

೨೪೭೨. ಗೊಂಗಡಿ ಹೊತಗೊಂಡು
ಗದ್ದಿಗಿ ಮ್ಯಾಲ ಕೂಡತಾಳ
ಸಿಂಗಡಿ ಕಟಿಗೊಂಡು
ಬಿಂದಿಗ್ಯಾಗ ಈಶ್ಯಾಡತಾಳ .....

೨೪೭೩. ಬಂಗಾರ ಒಳ್ಳು ಬೆಳ್ಳಿ ಒನಕಿ
ಮುತ್ತು ಕುಟ್ಟಿ ಮುಗಿಲಿಗೆ ತೂರತಾಳ .....

೨೪೭೪. ಚಿಕ್ಕವರಗೂಡ ಚೆಲ್ಲಾಟ ಆಡತಾಳ,
ನಕ್ಕವರ ಕೂಡ ತಾನೂ ನಗತಾಳ .....

೨೪೭೫. ಮುತ್ತಿನುಡಿಯಕ್ಕಿ ಹಾಕಿಸಿಕೊಂಡು
ಸತ್ಯವಂತರ ಮನೀಗೆ ಸೊಸಿಯಾಗಿ ಬಂದಾಳ .....

೨೪೭೬. ಕತ್ತಿ ಕುದರಿ ಮರಿ ಚೆಂದ
ನನ್ನಾಕಿ ........... ಎಲ್ಲರಿಗೂ ಚೆಂದ.

೨೪೭೭. ಬಿಳಿ ಜ್ವಾಳದ ತೆನಿ ಚೆಂದ
ದಸರಾ ಆನಿ ಅಂಬಾರಿ ಚೆಂದ
ನನ್ನ ಬಂಗಾರಿ ............ ನಡಿಗಿ ನನಗ ಚೆಂದ.

೨೪೭೮. ಊರಿಗೆ ಬಂದಾಕಿ ನೀರಿಗೆ ಹೋದ್ರ
ನಾರ್‍ಯರ ಕೂಡ ಮ್ಯಾರಿ ಮಾಡ್ತಾಳ ......

೨೪೭೯. ಹಳ್ಳಿಲಿಂದ ಬಂದ ಮಳ್ಳಿ ನನ್ನಾಕಿ
ಪ್ಯಾಟ್ಯಾಗ ನಿಂತ ಕೇಟಿ ಕುಡಿತಾಳ .....

೨೪೮೦. ಗಂಡನ ಮನೀಗೆ ಹೋಗಂತ ಕಳಿಸಿದರ
ಅಲ್ಲಿಂದ ಗುಂಡಕಲ್ಲ ತಗೊಂಡ ಬಂದಾಳ .....

೨೪೮೧. ವಂಕಿ ಸರಗಿ ಇಟಗೊಂಡ
ಸುಂಕದವನ ಕೂಡ ಸಲಗಿ ಬೆಳೆಸ್ಯಾಳ .....

೨೪೮೨. ದನದ ಹಕ್ಕ್ಯಾಗ ಎಮ್ಮಿ
ನಮ್ಮಾಕಿಗೆ ಯಾವಾಗ್ಲೂ ಬುದ್ಧಿ ಕಮ್ಮಿ .....

೨೪೮೩. ಹೊಟ್ಟ್ಯಾನ ನೀರು ತುಳಕದಾಂಗ
ಹಂಸಕ ನಡಿಗಿ ಕಲಿಸಿದಾಕಿ
ಬಿಲ್ಲಿಯಗಲ ಕುಂಕುಮ ಇಟ್ಟು
ಬಲ್ಲವರ ಕೂಡ ಬೆಲ್ಲದಾಕಿ
ತಾಳಮೇಳ ಗುಣಿಸುತ ಆಕಿ
ನವಿಲಿಗೆ ಕುಣಿತ ಕಲಿಸಿದಾಕಿ
ಗಾನ ಗಂಧರ್ವ ಲೋಕವ ಮರೆಸುತ
ಕೋಕಿಲ ಕಂಠಕೆ ದನಿಯಾದಾಕಿ
ಸೌಭಾಗ್ಯದ ಸಿರಿ ತಾ ಉಕ್ಕಿಸಿ ನನ್ನ
ಸತ್ಯಭಾಮೆಯಾಗಿ ಕೈ ಹಿಡಿದಾಕಿ .....

೨೪೮೪. ನೀರಿನಲ್ಲಿ ಕಾಣುವುದು ನೆರಳು
ಹೆಣ್ಣು ಮಕ್ಕಳು ಹಾಕುವುದು ಹೆರಳು
ಯಾವುದಕಿಂತಲೂ ಹೆಚ್ಚು ತಾಯಿ ಕರುಳು
ನನ್ನಾಕಿ ............. ತಾಳಿಯಲ್ಲಿರುವುದು ವಜ್ರದ ಹರಳು.

೨೪೮೫. ಮೂರು ಸಾವಿರ ಮಠ ಹುಬ್ಬಳ್ಳ್ಯಾಗ
ಮುರುಘಾಮಠ ಧಾರ್ವಾಡಾಗ
ನಮ್ಮಕಿ ಹಟ ಮಟ ಮಟ ಮಧ್ಯಾಣದಾಗ .....

೨೪೮೬. ಹೊಲದ ಬದುವಿನ್ಯಾಗ ಬೆಳಿತೈತಿ ಹುಲ್ಲು
ಹುಲ್ಲು ತಾ ಅಂದ್ರ ಮಾಡ್ತಾಳ ಭಾಳ ಗುಲ್ಲು .....

೨೪೮೭. ಕಬ್ಬಿನ ಗಳಾ ಕಡಿತಾಳ ರಸಾ ಕುಡಿತಾಳ
ಗಡಿಗಿ ತೊಳಿ ಅಂದ್ರ ಅಳತಾಳ .....

೨೪೮೮. ಸುಳ್ಳು ಹೇಳಿ ಮಳ್ಳ ಮಾಡಿ
ಬಳ್ಳ ಚೀಪಿಗೋತ ಬಗಲೀಗೆ ಬಂದ
ಬಂಗಾರ ಬಳಿ ಕೇಳತಾಳ .....

೨೪೮೯. ಮೊಂಡ ಮೂಗು ಇಟಕೊಂಡು
ಮೂರು ಮನಿ ತಿರಗತಾಳ .....

೨೪೯೦. ನವಲೂರ ಪ್ಯಾರಲಕಾಯಿ
ಹಳ್ಳೂರ ಹಾಗಲಕಾಯಿ
ಹೊಳಿದಂಡಿ ಮುಳಗಾಯಿ ಬೇಕಂತ
ಹಂಡೆದ ಸಂದ್ಯಾಗ ದುಕ್ಕಿಸಿ ಅಳತಾಳ .....

೨೪೯೧. ಬಗಲಾಡ ಕೊಡ
ಸಣ್ಣನ್ನ ನಡ
.............ಳು ಮಾಡ್ತಾಳ
ಓಣಿ ತುಂಬ ಕಡ.

೨೪೯೨. ವಜ್ರದಟೀಕಿ ಗೆಜ್ಜಿಸರಾಬೇಕಂತ
ಅಜ್ಜನ್ನ ಕರಕೊಂಡು ಸಜ್ಜಾಗಿ ಬರ್ತಾಳ .....

೨೪೯೩. ಸರಗಿ ಇದ್ದ್ರ ಸೊರಗೂದಿಲ್ಲ
ಬಾಜು ಬಂದಿ ಇದ್ದ್ರಂತೂ
ಹಾಡಿ ನನ್ನ ಹೊಗಳ್ತಾಳ .....

೨೪೯೪. ಬಾಳೆ ಕಳಿತರ ರುಚಿ
ಜೇನು ಹುಳಿತರೆ ರುಚಿ
ಹಲಸು ನಾತರೆ ರುಚಿ
ನನ್ನಾಕಿ ............... ಮಾತು ರುಚಿ.

೨೪೯೫. ಮಳೆಗಾಲದ ಬಿಸಿಲು ನಂಬಬಾರದು
ನಮ್ಮ ............... ಳ ನಗಿ ನಂಬಬಾರದು.

೨೪೯೬. ಅಡಿಗಿ ಗುಣಾ ಸಾರಿನಲ್ಲಿ ನೋಡಬೇಕು
ಬೆಳಿ ಗುಣ ಉಳಿಮ್ಯಾಗ ನೋಡಬೇಕು
ನನ್ನಾಕಿ .............. ಗುಣದಾಗೀನ ಕೊಟ್ಟು
ನಡತೆಯಲ್ಲಿ ನೋಡಬೇಕು.

೨೪೯೭. ಐನೋರಿಗೆ ಪ್ರೀತಿ ಗೋದಿ ಹುಗ್ಗಿ
ನನ್ನಾ ..... ಗೆ ಪ್ರೀತಿ ಮಲ್ಲಿ ಮಗ್ಗಿ.

೨೪೯೮. ಬಂಡಿವಾಳ ಮೂರು ಕಾಸು
................ಳ ಬಡಿವಾರ ಆರು ಕಾಸು.

೨೪೯೯. ಚಂದ್ರಲೋಕಕ ಹಚ್ಚಾರ ನಿಚ್ಚಣಕಿ
ನಮ್ಮಾಕಿ ಕೇಳ್ತಾಳ ಬಾಚುಣಕಿ .....

೨೫೦೦. ಕಿತ್ತೂರ ಚೆನ್ನಮ್ಮ ಬೆಳವಡಿ ಮಲ್ಲಮ್ಮರ ಧೈರ್ಯ
..................ಳು ಏನಾರಾ ಮಾಡಿ ಸಾಧಿಸಾಳ ತನ್ನ ಕಾರ್ಯ.

೨೫೦೧. ಅಕ್ಕಮಹಾದೇವಿ ಗಳಿಸಿದ್ದು ಮುಕ್ತಿ
ಸಾವಿತ್ರಿ ಮಾಡಿದ್ದು ನಿರ್ಮಲ ಪತಿಭಕ್ತಿ
....................ಳ ನಿದ್ದೆಗೆಡಿಸಿದರೆ
ಆಗುವುದು ದಾಗೀನದಾಸಕ್ತಿ.

೨೫೦೨. ಉಪ್ಪಿನ್ಯಾಗ ಉಪ್ಪಿಟ್ಟು ಮಾಡಿ
ಖಾರ ಪುಡಿ ಹಾಕಿ ಚಾ ಸೋಸಿ
ಬಂದ ಬೀಗರನ ಮ್ಯಾರೀಗೆ ಕರೀತಾಳ .....

೨೫೦೩. ಹಿಗ್ಗತಾಳ ಕುಗ್ಗತಾಳ
ಬಂದ ಮಂದಿ ಮುಂದ
ನನ್ನ ಅಗ್ಗ ಮಾಡ್ತಾಳ ......

೨೫೦೪. ಹರವಿ ಹೊತ್ತಾಳ
ಹಲ್ಲ ಕಿಸ್ತಾಳ
ಸಿಂಬಿ ಅರಿವಿ ಇಲ್ಲಂತ
ಕಂಬಕ್ಕ ಹಾಯ್ತಾಳ .....

೨೫೦೫. ಹೊಲಕ ಹೋಗಿ
ಹ್ವಾರೆ ಮಾಡಂದ್ರ
ಕಲಗಂಚಿ ಬಾಯಿತಗದ
ಸಂಜೀಕೆ ಸಿನೇಮಾಕ ಹೋಗುನಂತಾಳ .....

೨೫೦೬. ಹಾಲು ಕುಡಿತಾಳ ಹಾಡು ಹಾಡ್ತಾಳಾ
ಹಾಗಲಕಾಯಿ ಪಲ್ಲೆ ಮಾಡಂದ್ರ
ನಾಯಿ ಹಕ್ಕರಕಿ ಒಗ್ಗರಣೆ ಕೊಳ್ತಾಳ .....

೨೫೦೭. ಬೆಕ್ಕಿಗೆ ಚೆಲ್ಲಾಟ
ಇಲಿಗೆ ಪ್ರಾಣ ಸಂಕಟ
ನಮ್ಮ ಮನಿಯಾಗ
............ ಈಕೀದ ಹಾರಾಟ.

೨೫೦೮. ಜೋಡ ಜೆಡಿ ಬಿಟ್ಟಾಳ
ಕಂಠಿಸರಾ ಹಾಕ್ಯಾಳ
ಜಾತ್ರೀಗಿ ಕರಕೊಂಡ ಹೋಗಂತ
ಕಿರಿ ಕಿರಿ ಮಾಡ್ತಾಳ .....

೨೫೦೯. ಪಟಾಪಟಾ ರೊಟ್ಟಿ ಬಡದ
ಅವುಡ ಬವುಡ ರೊಟ್ಟಿ ತಿಂದ
ಗಟಾ ಗಟಾ ನೀರ ಕುಡದ
ವಟಾ ವಟಾ ಹಚ್ಚತಾಳ .....

೨೫೧೦. ನಾಗಮುರುಗಿ ನಾಗರ ಕ್ಯಾದಗಿ
ನಾಟಕ್ಕ ನಡಿ ಅಂದ್ರ ನಾಚಿನಿಲ್ಲತಾಳ .....

೨೫೧೧. ಕರಕಿ ಹೊಲಕ್ಕ ಹೋಗಿ
ಮರಕ್ಕ ಪಾವುಡ ಹಾಸಿ
ಗೊರಕಿ ಹೊಡಿತಾಳ .....

೨೫೧೨. ಜೆಡಿ ಹಿಡದು ಜಗ್ಗಿದರ
ಬಿಡು ಬಿಡು ಅತ್ತಿ
ಬಂದ್ಲು ಅಂತಾಳ .....

೨೫೧೩. ನನ್ನ ಹೇಣ್ತಿ ............. ಬಾಳ ಖೊಟ್ಟಿ
ಸಂತೀಗೆ ಹೋಗಿ ಕೇಳ್ತಾಳ ಎಲ್ಲಾ ಪುಗಸೆಟ್ಟಿ.

೨೫೧೪. ಹರಕ ಸೀರಿ ಹರಕ ಚಪ್ಪಲ
ಮುರುಕ ಮೋಟಾರದಾಗ ಕುಂತಗೊಂಡು
ಮನೀಗೆ ಬರತಾಳ .....

೨೫೧೫. ಮೋಟಾರ ಗಾಡಿ ರಿಪೇರಿ ಮಾಡೂದು ಗ್ಯಾರೇಜು
ನನ್ನಾಕಿ ............... ನಂದು ಆತು ಲವ್ ಮ್ಯಾರೇಜು.

೨೫೧೬. ಚಂದ್ರಕಾಳಿ ಸೀರಿ
ಚೆಂದನ್ನ ಕುಬುಸಾ
ಕುಸುಬಿ ಪಲ್ಲೆ ಹರದು
ಕುಸಿಯಿಂದ ಪಚಡಿ ಮಾಡ್ತಾಳ .....

೨೫೧೭. ನನ್ನಾಕಿ ಪ್ರೀತಿಯಿಂದ ಮುಡಿಯೋದು ಕ್ಯಾದಗಿ
ನನಗ ಪ್ರೀತಿಲಿಂದ ಬಸ್ತಿ ನೀಡತಾಳ ಶ್ಯಾವಗಿ .....

೨೫೧೮. ಬೆಳ್ಳಗ ಬಣ್ಣ ಬೆಕ್ಕಿನ ಕಣ್ಣ
ಕುಳ್ಳ ಬಡಿ ಅಂದ್ರ ........... ಳು
ಮೆಳ್ಳಗಣ್ಣ ತೋರಸ್ತಾಳ.

೨೫೧೯. ಚೆಂದಪ್ಪ ಚೆಂದಪ್ಪ ಚಾರೀಕಾಯಿ
ಬಟಲ ತುಂಬಾ ಬಾರೀಕಾಯಿ
ನಮ್ಮಾಕಿ ........... ತಿನ್ನೂದು ನೆಲ್ಲಿಕಾಯಿ.

೨೫೨೦. ಬಿಟ್ಟಮನಿ ಕೊಟ್ಟಮನಿಗೆ ಹೆಸರ ತರಾಕಿ
ಚುಟ್ಟಾ ಹಚ್ಚಿದ್ರ ಕಟ್ಟೆಗೆ ಬಂದು ಕಸ್ತ ಒಗಿಯಾಡಿ .....

೨೫೨೧. ಪಂಚಮಿ ಹಬ್ಬ ಬಂತವ್ವ ಸನೆಕ
ನಮ್ಮಣ್ಣ ಬರಲಿಲ್ಲ ಕರಿಯಾಕಂತಾಳ .....

೨೫೨೨. ಸಬಕಾರಿಲೆ ಬೆನ್ನು ತಿಕ್ಕಂದ್ರ
ಕಲ್ಲ ತಗೊಂಡ ಕೆರಿತಾಳ ಖಬುರಗೇಡಿ ....

೨೫೨೩. ಕನ್ನಡನಾಡು ಹೊನ್ನಿನ ಬೀಡು
ನೋಡಬೇಕು ಬೇಲೂರು ಹಳೆಬೀಡು
ನಾಡಿನ ಸಂಪತ್ತು ಸಹ್ಯಾದ್ರಿ ಕಾಡು
ಶ್ರೀಗಂಧಗಿಡ್ಡ ನೆಳ್ಳಾಗ ಕವಡಿ ಆಡ್ತಾಳ .....

೨೫೨೪. ಕಪ್ಪತ್ತ ಗುಡ್ಡದಾಗ ನವಿಲಿನ ಚಲ್ಲಾಟ
ಗುಡ್ಡದ ತುಂಬ ಔಷಧಿ ಗಿಡಗಳಾಟ
ಹೇಳೋರಿಲ್ಲ ಕೇಳೋರಿಲ್ಲ ಅಲ್ಲಿ ಕಳ್ಳರು ಕೂಟ
ಸುಂದರಿ ನನ್ನ ........... ಳಿಗೆ ಕೊಟ್ಟಾನ್ ದೇವ್ರು
ಎರಳೆಗಣ್ಣಿನ ನೋಟ.

೨೫೨೫. ಗುಂಧಧ ಗುಡ್ಯಾಗ ಕುಂತು
ಗುಬ್ಬಚ್ಚಿ ಕೂಡ ಆಡ್ತಾಳ .....

೨೫೨೬. ದೇವರಿಗೆ ಹಾಕೂದು ಮಾಲಿ
ಎಮ್ಮಿ ಹಿಂಡಿಕೊಳ್ಳುದು ತಾಲಿ
ಬಾಗಿಲಿಗೆ ಹಾಕೂದು ಕೀಲಿ
ಚೀಲಾ ಚಪ್ಪಡಿ ಹೊರಾವಗಂತಾರ ಕೂಲಿ
ಅರ್ಜೀರ್ಣಕ ಬರತೈತಿ ಹೊಟ್ಟೆಶೂಲಿ
ಮೋಟಾರಕ ಇರ್ತಾವು ನಾಲ್ಕು ಗಾಲಿ
ಸಣ್ಣ ಹುಡುಗೀಗೆ ಅಂತಾರ ಬಾಲಿ
ನಮ್ಮಾಕಿ ............ ಹಡಗದಾಗ ಹೋಗ್ತಾಳ
ಸಮುದ್ರದ ನೀರ್ ಮ್ಯಾಲೇರಿ.

೨೫೨೭. ದನದ ಹಕ್ಕ್ಯಾಗ ಸೆಗಣಿ
ಕಿವ್ಯಾಗ ಕೂಕಣಿ
ಗ್ವಾಡಿಮ್ಯಾಗ ತಗಣಿ
ತಿಕ್ಕಿ ಬಿಡು ಅಂದ್ರ ನೆಕ್ಕಿ ನೋಡ್ತಾಳ .......

೨೫೨೮. ಹರಿಶ್ಚಂದ್ರ ಮಹಾರಾಜ ಕಷ್ಟಟ್ಟದ್ದು ಸತ್ಯಕ್ಕಾಗಿ
ನಮ್ಮವಳು ............ ನಾಡಿಗೆ ಹೆಸರಾದದ್ದು ಭಾರಿ ಸುಳ್ಳಿಗಾಗಿ.

೨೫೨೯. ನೆಲ್ಲಿಕಾಯಿ ತಿಂದು ನೀರು ಕುಡಿ ಅಂದ್ರ
ಬೇವಿನಕಾಯಿ ತಿಂದುಬೆಲ್ಲಾ ಬೇಡ್ತಾಳ .....

೨೫೩೦. ಅತ್ತಿಮ್ಯಾಗ ಕಬ್ಬಿಣ ಹಾರಿ ಒಗದು
ಸಾಯಲಿಲ್ಲಂತ ಸಂದ್ಯಾಗ ಕುಂತಾಳ ......

೨೫೩೧. ಸಣ್ಣಕ್ಕಿ ಬಾನಾ, ತೊಗರಿ ಆಂಬರಾ
ಹಿಗ್ಗಿ ಹಿಗ್ಗಿ ಉಂಡು ಬಗ್ಗಿ ಬಗ್ಗಿ ನೋಡ್ತಾಳ .....

೨೫೩೨. ಮರಕ ಮೂವತ್ತು ಕಟ್ಟ ಆ ಕಟ್ಟ ಈ ಕಟ್ಟ
ಹೆಸರ ಹೇಳ್ತೀನಿ ನಮ್ಮಾಕಿ ..... ಹೆಡಮುರಿಗಿಕಟ್ಟ.

೨೫೩೩. ಜಾಜಿ ಹೂ ಸೂಜಿ ಹೂವು
ಕೆಂಡ ಸಂಪಗಿ ಸೇವಂತಿಗಿ
ರಸವಂತಿ ಹೂ ಮುಡಿದು
ರಸಬಾಳ್ಯಾಗ ಕುಂತಾಳ .....

೨೫೩೪. ಜನೆವರಿ ಹದಿನಾಲ್ಕು ಸಂಕ್ರಾಂತಿ
ನನ್ನ ................ ಕಿಗೆ ಬೇಕು ವಿಶ್ರಾಂತಿ.

೨೫೩೫. ಆಚೆ ಕಡೆ ಅವ್ವ ಈಚೆ ಕಡೆ ಅಪ್ಪ
ಕತ್ತಲ್ದಾಗ ಕೈಯಾಡ್ಸಿ ಗಪ್ನ ನನ್ನ ಕೈಹಿಡಿತಾಳ .....

೨೫೩೬. ಲಗೂ ಮಲಗಿ ಲಗೂ ಏಳ ಬೇಕಂತಾರ ಬಲ್ಲವರು
ಲಗ್ನ ಆಗಾಕ ಹದಿನೆಂಟು ವರುಷಂತಾರ
ಗೆರಿ ಎಳದಾರ ಸರಕಾರದವರು
ಪರಸರನಾಶ ಮಾಡಬಾರ್ಧಂತಾರ ಪರಿಸರದವರು
ಒಂದು ಬೇಕು ಎರ್ಡು ಸಾಕಂತಾರ
ಕುಟುಂಬ ಯೋಜನಾದವರು
ಮುತ್ತಿನಂತಾ ಹತ್ತು ಹಡೀತೀನಂತಾಳ ನನ್ನವಳು .....

೨೫೩೭. ಗಿಡದಾಗಿನ ಮಂಗನ್ನ
ಅಂಗಳಕ್ಕ ಕರೀತಾಳ
ಕೊಬ್ರಿ ಬೆಲ್ಲಾ ಕೊಟ್ಟು ಕೈಮುಗಿತಾಳ .....

೨೫೩೮. ಊರ ಮುಂದಿರುವುದು
ಹನುಮಂತ ದೇವರ ಗುಡಿ
ನನ್ನ ಹೆಂಡತಿ ........... ಬಾಳ ತುಡುಗಿ.

೨೫೩೯. ಕಾಗದ ಕತ್ತರಿಸುವುದು ಕತ್ರಿ
ದೇವರಿಗೆ ದರ್ರೂದು ಪತ್ರಿ
ನನ್ನಾಕಿ .............. ಬೆಳದಿಂಗ್ಳದಾಗ
ಹಿಡಿತಾಳ ಛತ್ರಿ.

೨೫೪೦. ದಬಗಳ್ಳಿ ಚಾಟು
ಹುಣಿಸಿಹಣ್ಣಿ ಬೋಟು
ನನ್ನ ಹೆಣ್ತಿ ............... ಮಾತ ಬರಿ ಗಿಲೀಟು.

೨೫೪೧. ಹೊಲ್ದಾಗ ಒಡ್ಡು
ಮನ್ಯಾಗ ಮಾಡ್ಯಾರ ಪಡ್ಡು
ಪಡ್ಡ ತಿಂದು ಹೊಲಕ ಹೋಗಿ
ಒಡ್ಡೀಗೆ ಮಲಗತಾಳ .....

೨೫೪೨. ಸೊಟ್ಟ ಕಾಲು ಸೊಟ್ಟ ಬಾಯಿ
ಮಾತಾಡಿಸಿದ್ರ ಮೈಮ್ಯಾಲ ಬರ್ತಾಳ .....

೨೫೪೩. ಅಂಟು ಅಂಟು ಬೆಲ್ಲ
ಗಂಟ ಗೋದಿ ಹುಗ್ಗಿ
ಎಂಟೆಂಟು ದಿನಕ್ಕೊಮ್ಮೆ
ಕಂಟಮಟ ಹೊಡಿತಾಳ .....

೨೫೪೪. ಮೆಣಸಿನಕಾಯಿ ಹಿಂಡಿ
ಗಂಡ ಇಲ್ಲದ ರಂಡಿ
ಕೀಲ ಇಲ್ಲದ ಬಂಡಿ
ಕುಂಡಿ ತಿರುವಿಕೋತ
ಸಂಡಿಗಿ ಹಾಕತಾಳ ......

೨೫೪೫. ಒನಕಿ ತಗೊಂಡು ನಿಂತರ
ಎಣಿಕೀಗೆ ಬರ್ತಾಳ .....

೨೫೪೬. ಅವಲಕ್ಕಿ ಮಾಡ್ಯಾಳ ಕುರಿ ಕುರಿ
ಹಗಲೆಲ್ಲಾ ಮಾಡ್ತಾಳ ಕಿರಿ ಕಿರಿ ......

೨೫೪೭. ಕರಮ್ ಕುರಮ್ ಸವತಿ ಮಿಡಿ
ಕುದುರೀಗೆ ಹಾಕೂದು ಕುತನಿ ತಡಿ
ದೇವರು ಕುಂತದ್ದು ಕಲ್ಲಿನ ಗುಡಿ
ನಮ್ಮಾಕಿ ........... ಉಡತಾಳ ಜರದ ಮಡಿ.

೨೫೪೮. ಸೂರ್ಯಚಂದ್ರಾ ಇರೂದು ಆಕಾಶದಲ್ಲಿ
ಇಂದ್ರಾದಿಗಳಿರೂದು ಸುರಲೋಕದಲ್ಲಿ
ನನ್ನಾಕಿ ............. ಕೈ ಹಿಡದದ್ದು ನಮ್ಮೂರ ಗುಡಿಯಲ್ಲಿ.

೨೫೪೯. ಮಂಗ್ಯಾನಂತಾ ಮಕ್ಕಳ ಕಟಿಗೊಂಡು
ಬಂಗಾರ ಕೋಣ್ಯಾಗ ಕುಂತ ಬಾನಾ ಮಾಡ್ತಾಳ .....

೨೫೫೦. ಅತ್ತಿ ಕಾಟಕ್ಕ ಮನಿ ಎರಡು ಮಾಡಿದ್ಲು
ನನ್ನ ಕಾಲಕ್ಕ ತವರೀಗೆ ಹೋಗ್ತಿನಂತಾಳ .....

೨೫೫೧. ಕಾಗಿ ಹೊಕ್ಕ ಮನ್ಯಾಗ ಇರಬಾರ್ದಂತ
ಗೂಗಿ ಒದರೀದ ಮನೀಗೆ ಕೇಡಂತ
ಗಂಟ ಬಿದ್ದಾಳ ನನಗ ತವರ ಮನಿಗೆ ಚಕ್ಕಡಿ ಹೂಡಂತ .....

೨೫೫೨. ಸಂಬಳಾ ತಂದ ಕೈಯಾಗ ಕೊಟ್ರ
ತಂಬಾಕದ ಅಂಗಡ್ಯಾಗ ತೂಕಾ ಮಾಡಿಸ್ತಾಳ .....

೨೫೫೩. ಮಾಡಿದವ್ರು ಉಣತಾರ
ಮಣಿಯಂತ ಕಡಬು
ನನ್ನಾಕಿ ............. ದಿವಸಾ ಮಾಡಿ ತಿಂತಾಳ
ಬಿಸಿ ಬಿಸಿ ಕರೆಗಡಬು.

೨೫೫೪. ಸೋಗಲಾಡಿ ಸುಬ್ಬಿ ಅಂದ್ರ
ಹುಬ್ಬು ಹಾರ್ಸಿ ಒಳಗ ಬರ್ತಾಳ .....

೨೫೫೫. ಹದಿನಾರು ಸೇರು ಎಳ್ಳು
ಹದಿಮೂರು ಸೇರ ಜೊಳ್ಳು
ನನ್ನಾಕಿ ................ ಹೇಳೂದಕ್ಕ ನಾನಾಗಿಲ್ಲ ಮಳ್ಳು.

೨೫೫೬. ಮಂಚದ ಮ್ಯಾಲ ಮಲಕೋ ಅಂದ್ರ
ಮೂಲ್ಯಾಗ ಬಿದ್ದುಕೊಂಡು ಮಸಿ ಮುಸಿ ಮಾಡ್ತಾಳ .....

೨೫೫೭. ಗುಂಗುರುಗೂದಲ ಬಂಗಾರ ಮಾರಿ
ದಾಳಿಂಬ್ರಂತಾ ಹಲ್ಲ ಇಟಗೊಂಡು ಕಲ್ಲ ಕಡಿತಾಳ ....

೨೫೫೮. ಗಲ್ಲಾ ಕಡದ್ರ ಗುಲ್ಲು ಮಾಡ್ತಾಳ
ಬೆಲ್ಲಾ ಕೊಟ್ರು ಬಿಡಬ್ಯಾಡಂತಾಳ .....

೨೫೫೯. ದೀಪಾ ಹಚ್ಚಂದ್ರ
ಧೂಪಾ ಹಾಕ್ತಾಳ .....

೨೫೬೦. ಜಾಲಿ ಬೇಲ್ಯಾಗ ಕುಂತು ಜೋಲಿ ಹೊಡಿತಾಳ
ಹೋಳಿ ಹಬ್ಬದಾಗ ಕುಣದು ಕ್ಯಾಕಿ ಹಾಕ್ತಾಳ .....

೨೫೬೧. ಸಂಪಿಗಿ ಹೂ ಮುಡಕೊಂಡ
ಕೆಂಪ ಪೌಡರ ಬಡಕೊಂಡ
ಮಿಂಚಿಗೊಂತ ಸಂತೀಗೆ ಹೋಗ್ತಾಳ.

೨೫೬೨. ಅರಗಿನ ಕೊಡ ಸೆರಗಿನ ಸಿಂಬಿ
ಶೀಲವಂತರ ಮಗಳು ಬರತಾಳಂತ
ಶೆಟ್ಟರ ಮನ್ಯಾಗ ಈಕಿ ..... ದಾರಿ ಕಾಯ್ತಾರ.

೨೫೬೩. ಕಂಚಿನ ಕಪ್ಪು
ಕಮಲದ ಹೂವು
ಮಂಚದ ಮ್ಯಾಲ ಕುಂತಗೊಂಡ
ಮಗಳ್ನ ಆಡಸ್ತಾಳ .....

೨೫೬೪. ಅತ್ತಿ ಮಾವನ್ನ ಗೊತ್ತಿಗೆ ಹಚ್ಚಿ
ಅಡಕೊತ್ತಿಗ್ಯಾಗ ಬಳ್ಳ ಸಿಗಿಸಿ ಅಳತಾಳ .....

೨೫೬೫. ಬಂಗಾರ ಕೂರಿಗಿ ಬೆಳ್ಳಿ ಬಟ್ಲ
ಬಿತ್ತಾಕ ಹೋಗ್ತೀನಂದ್ರ
ಸೆಡ್ಡಿ ಬಟ್ಲ ಭಾವ್ಯಾಗ ಒಗದು ನಗತಾಳ .....

೨೫೬೬. ಮಸಾರಿ ಹೊಲಕ ಹೋಗಂದ್ರ
ಮಾರಿ ಕಿವುಚತಾಳ
ಎರಿ ಹೊಲಕ ಹೋಗಂದ್ರ
ಎಗರಿ ಬೀಳ್ತಾಳ .....

೨೫೬೭. ಸಂತಿ ಮ್ಯಾಲ ಸಂತಿ
ಸಂಶಿ ಶಿಸನಾಳ ಸಂತಿ
ಸಂತಿ ಮಾಡಂದ್ರ ಚಿಂತಿ ಮಾಡ್ತಾಳ .....

೨೫೬೮. ಹರಕ ಜತಿಗಿ ನಗ ಮುರುಕ
ಈಕಿ ............. ಕೂಡಿ
ನನ್ನ ಬಾಳೆಲ್ಲಾ ನರಕ.

೨೫೬೯. ಕೆಂಪು ಕ್ಯಾದಗಿ ಗುಂಪು ಕೆಂದಾವರೆ
ತಂಪತ್ತಿನ್ಯಾಗ ಸುಮ್ ಸುಮ್ನ ತಗಾದೆ ಮಾಡ್ತಾಳ .....

೨೫೭೦. ಕಾಫಿ ಕುಡಿಯೋದು ಕೆಫೆ
ಕಂಪೌಂಡಿನ್ಯಾಗಿರೂದ ಸೊಪ್ಪು
ಕಣಗಿನಹಾಳದಿಂದ ಇಂಥ .......... ಹೇಣ್ತಿ.
ತಂದದ್ದು ಬಾಳ ತಪ್ಪು.

೨೫೭೧. ಕಿಮ್ಮತ್ತಿಗೇಡಿಗೆ ತಿಳಿ ಹೇಳಿದ್ರ
ತನಗಂದ್ರಂತ ತವರಿಗೆ ಹೋಗ್ತಾಳ .....

೨೫೭೨. ಕೆರಿ ಹೊಲದಾಗ ಸುರ ಹೊನ್ನಿ
ದಸರಾದಾಗ ಕೊಡ್ತಾರ ಬನ್ನಿ
ನನ್ನ .............. ಗೆ ಇಲ್ಲ ಎಳ್ಳಷ್ಟೂ ಸೊನ್ನಿ.

೨೫೭೩. ಹಂಪಿಯಲ್ಲಿಳೆಯುವುದು ಪಂಪಾಪತಿ ತೇರು
ನಮ್ಮ ಮನ್ಯಾಗ ............. ದs ಕಾರಭಾರು.

೨೫೭೪. ತರನನ ತಂತಿ ಅಂದರ
ತೊಡಿ ಮ್ಯಾಲ ಕುಂದರತಾಳ .....

೨೫೭೫. ಸಾಸ್ವಿ ಹೊಲದಾಗ
ಹಾಸಿಗೊಂಡ ಮಲಗ್ಯಾಳ .....

೨೫೭೬. ಕತ್ತೆ ಅಂತಾ ಬೈದರ
ತಾನs ಅಂತ ಮತ್ತೆ ಮತ್ತೆ ನೋಡ್ತಾಳ .....

೨೫೭೭. ಮಟಾ ಮಟಾ ಮಧ್ಯಾಣದಾಗ
ಮ್ಯಾಟ್ನೀಗೆ ಕರಕೊಂಡ ಹೋಗಂತಾಳ ....

೨೫೭೮. ರಾಡ್ಯಾಗ ರಾಟಿ ರಂರಾಡಿ
ಅಡಿಗಿ ಮಾಡಿ ಹಾಕಾಕ ಈಕಿಗೇನ್ ಧಾಡಿ .....

೨೫೭೯. ಮೂಗಿನ್ಯಾಗ ಗತ್ತು ಇಟಗೊಂಡ
ಮೂಗು ಏರಿಸ್ತಾ ಮುರುಕಾ ಮಾಡ್ತಾಳ .....

೨೫೮೦. ನಮ್ಮಾಕಿ ಕೈಗೆ ಬಂಗಾರ ಬಳಿ ಚೆಂದ
ಹಣೆಗೆ ದೇವರ ಹೆಸರ ಹಚ್ಚೆ ಚೆಂದ
ನಮ್ಮನಿಗೆ .....ಗೆ ಚೆಂದ.

೨೫೮೧. ಮಣಗಟ್ಲೆ ಮೆಣಸಿನಕಾಯಿ
ಮೊಣಕೈಲೆ ಪುಡಿ ಮಾಡ್ತಾಳ .....

೨೫೮೨. ಕಂಡುಗ ಮೆಣಸಿನಕಾಯಿ
ಕುಂಡೀಲೆ ರುಬ್ಬತಾಳ ....

೨೫೮೩. ಕೂಡ ಕೂಡ ಕರ
ಅಂಗಡ್ಯಾಗ ಹಚ್ಚೂದುದರ
ನನಗೂ ಆಕಿಗೂ ಬಾಳದಕ ಇಲ್ಲ ಸ್ಥಿರ .....

೨೫೮೪. ಹುಣಸಿ ಹೂವು ಎಣಿ ಎಣಿಸಿ ತಿಂತಾಳ .....

೨೫೮೫. ಮಾವಿನತೋಪ ಸೀರಿ ಉಟಗೊಂಡ
ಮಾವಿನ ಕಾಯಿ ತಿಂತಾಳ .....

೨೫೮೬. ತಂಬೂರಿ ದಾಸಯ್ಯ ಮನೀಗೆ ಬಂದ್ರ
ತಂಬೂರಿ ಕಸಗೊಂಡ ಸಂಬಾಳ ಕೊಡ್ತಾಳ ....

೨೫೮೭. ಕೇರಿ ಮ್ಯಾಲ ಕೇರಿ
ನಾಗರ ಹಾವಿನ ಪರಿ
ನನ್ನ ಹೇಣ್ತಿ ...... ಹೆಸರು ಕೇಳೋರಿಗೆ
ಹಾಕ್ತಿನಿ ಬರಿ.

೨೫೮೮. ಗ್ವಾಲ್ಲಾಗ್ದ ಕುಂತಗೊಂಡು
ಮಾಲ್ದಿ ಮುಕ್ಕತಾಳ .....

೨೫೮೯. ಜೋಗುಳ ಭಾವಿ ನೀರ್ತಂದು
ಬೇವಿನ ತಪ್ಲ ಹರದ ಹರದು
ಬಲ್ಲಾಂಗ ಅಡುಗಿ ಮಾಡಿ ಎಲ್ಲವ್ವಗ ಹೋಗ್ತಾಳ .....

೨೫೯೦. ತಟ್ಟಿಯಂಥಾ ತೆಲಿ ಬಿಟ್ಕೊಂಡ
ಹರಕ ಶಲ್ಲೆ ಹೆಗಲಿಗಿಟಗೊಂಡ
ಮುರುಕಾ ಮಾಡ್ತಾ ಹೆಗಲ ಹಾರಿಸ್ತಾಳ .....

೨೫೯೧. ಕೊಲ್ಲಾರಿ ಬಂಡಿ
ಚಳಿಗಾಲದ ತಂಡಿ
ನಮ್ಮಾಕಿ ............ ಬಾಳಮಂಡಿ.

೨೫೯೨. ಮುತ್ತು ಹವಳ ರತ್ನದಂತಾ
ಮೂರು ಹಡಿ ಅಂದ್ರ
ಮನಿತುಂಬಾ ಮಕ್ಕಳ ಮಾಡಿ
ನನ್ನ ಗೊತ್ಗೆ ಹಚ್ಯಾಳ .....

೨೫೯೩. ಮೂರ ಸೇರು ಸಕ್ಕ್ರಿ
ಆರ ಸೇರ ಕಡ್ಲಿ
ಹದಾ ನೊಡಿ ಹಲಪಿ ಮಾಡಂದ್ರ
ಮದಾ ಬಂದವರಾಂಗ
ಮಾರಿ ತಿರುವುತಾಳ .....

೨೫೯೪. ಸಣ್ಣಕ್ಕಿ ಸಣ್ಣ, ಗುಲಗಂಜಿ ಬಣ್ಣ
ಕಣ್ಣ ಕಿಸಗೊಂಡ ಮಣ್ಣ ಕೆಬರತಾಳ .....

೨೫೯೫. ಹಂಚಿನ್ಯಾಗ್ಟ ರೊಟ್ಟಿ
ಹರಕೊಂಡು ತಿಂತಾಳ .....

೨೫೯೬. ಅತ್ತೆಯ ಮಗಳು ಮುತ್ತಿನ ಚೆಂಡು
ಮಾವನ ಮಗಳು ರತ್ನದ ಗುಂಡು
ನನ್ನ ............ ಇದ್ದಾಳ ಬಾಳೆಯ ದಿಂಡು.

೨೫೭. ಅಲಕ್ ಮಲಕ್ ಚಿಲಕ್ ಚಿತ್ತಾರ
ನಮ್ಮಾಕಿ .............. ದಿನಾ ಹಚ್ಚತಾಳ ಅತ್ತಾರ.

೨೫೮. ಹತ್ತ ಅಂಕಣದ ಪಡಸಾಲಿ
ಇಪ್ಪತ್ತ ಮೊಳದ ಜಮಖಾನಾ
ಜಮಖಾನಾದ ಮ್ಯಾಲ ಕುಂತ
ಜಾಮೂನು ತಿಂತಾಳ .....

೨೫೯. ತುಪ್ಪದಾಗ ಉಪ್ಪಿಟ್ಟು ಮಾಡಿ
ಸಪ್ಪಳ ಇಲ್ದ ತಾನs ತಿಂತಾಳ .....

೨೬೦೦. ಜಗ್ಗಲಗಿ ಸಪ್ಪಳ ಕೇಳಿ ಗೆಜ್ಜಿ ಕಟ್ತಾಳ
ಕರಡಿ ಮಜಲ ಬಂತಂದ್ರ ಕುಣ್ತಾ ಹಿಡಿತಾಳ .....

೨೬೦೧. ಹದಿನೆಂಟ ರೊಟ್ಟಿ ತಿಂದ
ಹಳ್ಳದ ನೀರ ಕುಡದು
ಹೊಳ್ಳಿ ನೋಡ್ದ ಹೊಲದಿಂದ ಬರ್ತಾಳ .....

೨೬೦೨. ನನ್ನ ಹೇಣ್ತಿ ಸಂಪನ್ನೆ
ಪ್ರಾಣ ಕೊಡುವ ಪ್ರಾಣಕಾಂತೆ
ಇವಳ ಹೆಸರು ಹೇಳುದಕ
ನನಗ್ಯಾವ ಚಿಂತೆ .....

೨೬೦೩. ಬುಲಾಕ್ ಇಟಗೊಂಡು
ಬಲ್ಲಾಗಂಗ ಮಾತಾಡತಾಳ .....

೨೬೦೪. ದೇವರ ಗುಡ್ಡದಾಗ ಕುಂತ
ಧ್ಯಾನಾ ಮಾಡ್ತಾಳ
ಎಲ್ಲವ್ವಗ ಹೋಗಿ
ಉಧೊ ಉಧೊ ಅಂತಾಳ
ಮನೀಗೆ ಬಂದ ನನಗ
ಭಂಡಾರ ಬಡಿತಾಳ .....

೨೬೦೫. ಚಿಕ್ಕಾಡಿ ಮ್ಯಾಲ ಕುಂತ
ಚವರಿ ಬೀಸತಾಳ ......

೨೬೦೬. ಕಾಲಾಗ ಜುರಕಿ ಕಾಲ್ಮರಿ
ಮಾವ ಕೊಟ್ಟಿದ್ದ ಕರೆಕೋಟ ಫೇಟಾ ಹಾಕಿ
ಈಕಿ ತವರ ಮನಿಗೆ ಹೋದ್ರ
ಹೇಳುವಾ ಬಂದಾನಂತಾ ಹೇಳಿ
ಊರ್ತುಂಬಾ ಸುದ್ಧಿ ಮಾಡಿದ್ಲು ......

೨೬೦೭. ಮದುವ್ಯಾಗ ಮಾಡ್ತಾರ ಮಾದ್ಲಿ
ನನ್ನ ಹೇಣ್ತಿ ................. ಅದಾಳ ತೊದ್ಲಿ.

೨೬೦೮. ಕರಿ ಕಟ್ಟಿರುವಿ ಹೋಗ್ತಾವ ಸಾಲ ಹಿಡಿದು
ಎಮ್ಮಿ ಕಾಯಾಕ ನಮ್ಮಾಕಿ ............. ಹೊಗ್ತಾಳ
ಬದುವು ಹಿಡಿದು.

೨೬೦೯. ಸೂಳೀಭಾವ್ಯಾಗ ಸೂಳಿ ಇಟ್ಟಾನಂತ
ಗುಳದಾಳಿ ಬಿಚ್ಚಿ ಸುಳ್ಳ ಸುಳ್ಳರಂಭಾಟ ಮಾಡ್ತಾಳ .....

೨೬೧೦. ಕಾಡೋಳಲ್ಲ ಬೇಡೋಳಲ್ಲ
ಚಾಡಿ ಮಾತ ಕೇಳೋಳಲ್ಲ
ಅತ್ತಿ ಮಾವ್ನ ಬಿಟ್ಟೋಳಲ್ಲ
ಗುರು ಹಿರಿಯರ ಮಾತ ಮೀರೋಳಲ್ಲ
ಸದಾಚಾರ ಬಿಟ್ಟವಳಲ್ಲ
ನನ್ನನು ಎಂದೂ ಮರೆತವಳಲ್ಲಾ .....

೨೬೧೧. ಜಾಜಿ ಮಲ್ಲಿಗೆ ಸೂಜಿ ಮಲ್ಲಿಗೆ
ಆಕಾಶ ಮಲ್ಲಿಗೆ ಇಟಗೊಂಡು
ಆಕಳ ಪೂಜೆ ಮಾಡ್ತಾಳ ......

೨೬೧೨. ಬಂಗಾರ ಕೋಟ್ಯಾಗ ಸಿಂಗಾರಾಗಿ
ಬಾನದ ಉಂಡಿ ಬರಾ ಬರಾ ತಿಂತಾಳ .....

೨೬೧೩. ದೇವಭಕ್ತಿ ದೈವದ ಭಕ್ತಿ
ಮಣಿಮ್ಯಾಲ ದ್ಯಾನಾಮಾಡಿ
ಮೂರು ಮೊಳಾ ಏಳ್ತಾಳ .....

೨೬೧೪. ಅತ್ತಿ ಸೊಸಿ ಹಾಲು ಹಣ್ಣು
ಮಾವಾ ಅಂದ್ರ ಮಾವಿನ ಹಣ್ಣು
ನಾ ಅಂದ್ರ .............ಗೆ ಪ್ರೀತಿ ಕಣ್ಣು.

೨೬೧೫. ಚಂದ್ರನ ಹೆಂಡತಿ ರೋಹಿಣಿ
ಭೂತಾಯಿ ಹೆಸರು ಧಾರುಣಿ
ನನ್ನಾಕಿ ಹೆಸರು ಅರಗಿಣಿ .....

೨೬೧೬. ತಂದಿ ತಾಯಿ ತವರಿಂದ ಬಂದ್ರ ಹಿಗ್ಗತಾಳ
ಏನೂ ತರದಿದ್ರ ಕುಗ್ಗತಾಳ
ತಗ್ಗಿ ಬಗ್ಗಿ ನಡಕೋತಾಳ ನನ್ನಿಂದೆಲ್ಲಾ ಜಗ್ಗತಾಳ .....

೨೬೧೭. ಗಾಂಧೀಜಿ ತಗ್ಗಿ ಬಗ್ಗಿ ಮಾಡಿದ್ದು ದೇಶಕ್ಕ
ಈಕಿ ................. ತಗ್ಗಿ ಬಗ್ಗಿ ನಡೆಯೂದು
ಬಂಗಾರದಾಸೇಕ.

೨೬೧೮. ಕಲ್ಲಪಡಿ ಕ್ಯಾದಗಿ ಹೊಡಿ
ಎಷ್ಟು ಹೊಡಿತೀ ಹೊಡಿ
ಮಂದೀ ಕರೀತೀನಿ ತಡಿ ಅಂತಾಳ .....

೨೬೧೯. ತೂತಿನ ಗಡಗಿ ಒಲೆ ಮ್ಯಾಗಿಟ್ಟು
ಅನ್ನ ಆಗಲೆಂತ ಆಕಳಿಸ್ಗೊಂತ ಕುಂತಾಳ .....

೨೬೨೦. ತಡಿ ಮ್ಯಾಗ ತಡಿ
ಹೊಲ್ದಾಗ ಜ್ವಾಳದ ಹೊಡಿ
ನಾಲ್ಕು ರೊಟ್ಟಿ ಬಡಿ
ಸೀರಿ ಉಡತೀನಿ ತಡಿ
ಸಿನೆಮಾಕ ಹೋಗೂನ ನಡಿ ಅಂತಾಳ .....

೨೬೨೧. ದಕ್ಷನ ಮಗಳು ಸತಿ
ಕಾಮನ ಹೆಂಡತಿ ರತಿ
ಶಾರದೆ ಕೊಡ್ತಾಳ ಮತಿ
ಕೀರ್ತನಕಾರ ಹೇಳ್ತಾನ ಕತಿ
ನಮ್ಮಾಕಿ ............ಗೆ ನಾನೇ ಅನುಗಾಲ ಜತಿ.

೨೬೨೨. ತಾಂಬೂಲಕ್ಕ ಬೇಕು ಎಲಿ
ನನಗ ಈಕಿ ಬೇಡ್ತಾಳ ಬೆಂಡೋಲಿ.

೨೬೨೩. ಹತ್ತು ಹತ್ತು ಇಪ್ಪತ್ತು
ಸಾರಿಗೆ ಬೇಕು ಉಪ್ಪು
ಅಡಿಗಿ ಹದಾ ಇವಳಿಗೇನ್ಗೊತ್ತು .....

೨೬೨೪. ಪಾಂಡವ ಕೌರವರಿಗೂ ದಾಯಾದಿ ಹಗೆ
ನನಗೆ ಸಂತಸ ..............ಳ ಮುಗುಳು ನಗೆ.

೨೬೨೫. ಬಗಲಾಗ ಪಟಾಣಿ
ಮಗ್ಗಲ್ದಾಗ ಕಟ್ಟಾಣಿ
ನನಗಿಂತ ನನ್ನಾಕಿ
ಭಾರಿ ಚಿಟ್ಟಾನಿ ......

೨೬೨೬. ಬ್ರಹ್ಮನ ಹೆಂಡತಿ ವಾಣಿ
ಬಡವರಿಗಿಲ್ಲ ಠಿಕಾಣಿ
ಅರಮನ್ಯಾಗಿರಾಕಿ ರಾಣಿ
ನನ್ನಾಕಿ ......... ಮಾತಿನ್ಯಾಗ ಬಲು ಜಾಣೆ.

೨೬೨೭. ಮಾತಿಗೊಮ್ಮೆ ಹಾಕ್ತಾಳ ಆಣಿ
ಮುಗಲಿಗೇರೈತಿ ಬಂಗಾರ ದಾರಣಿ
ಹೆಣ್ಮಕ್ಕಳು ಹಾಕ್ತಾರ ಕುರುಣಿ
ಹೊಲಕ್ಕ ಸಂಬಂಧಿ ಇರೂದು ದೇಣಿ
ಚೌದಂಗಡ್ಯಾಗ ದುಡಿತಾನ ಮಾಣಿ
ನನ್ನಾಕಿ ............... ನನಗ ಸಾಯೂತನಾ ರಾಣಿ.

೨೬೨೮. ಬಾಯಿ ಮುಚ್ಚಗೊಂಡು
ಗಪ್ನ ಇರು ಅಂದ್ರ
ಕಣ್ಣ್ ಮುಚ್ಚಿಗೊಂಡು
ಕಾಲೀಗೆ ಬೀಳ್ತಾಳ .....

೨೬೨೯. ಮಾವನ ಮಗಳೆ
ಮಲ್ಲಿಗೆ ಮುಗುಳೆ
ಸಿಂಪಿಯ ಮುತ್ತನು
ತೋರುತ ಬಾರೆ ......

೨೬೩೦. ಊಟಕ್ಕ ಬೇಕು ಪಂಕ್ತಿ
ಸಂಪನ್ನತೆಗೆ ಬೇಕು ಸಂಕ್ತಿ
ನನ್ನಾಕಿ ..... ಬಿಟ್ಟು ನನಗಿಲ್ಲ ಯಾವ ಭ್ರಾಂತಿ.

೨೬೩೧. ಮುಖಾ ನೋಡಿದ್ರ ಸುಖಾ ಅಂತಾಳ
ಏಕಾಂತದಾಗ ಎಲ್ಲಾ ಮರತೆ ಅಂತಾಳ
ಅಡಗಿ ಮಾಡಂದ್ರ ಬಳಬಳ ಅಳ್ತಾಳ .....

೨೬೩೨. ನನ್ನತ್ತಿ ಮಾವಾ ಹತ್ತೂದ ಎಕ್ಕಾ ಗಾಡಿ
ಪ್ಯಾಲಿ ನನ್ನಾಕಿ ............ಗೆ ತಿಳಿಯದು ಗೆಳ್ತೇರ ಭಾನಗಡಿ.

೨೬೩೩. ಮಜಲಿನ್ಯಾಗ ಬಾರಿಸ್ತಾರ ಕಣಿ
ನನ್ನಾಕಿ ............... ಬಾಳಾ ಸದ್ಗುಣಿ.

೨೬೩೪. ಊರು ಊರ್ಮುಂದ ಅಗಸಿ
ಉಡಾಳ ಗೆಳೆತ್ಯಾರ ಕೂಡ ಆಗ್ಯಾಳ
ನನ್ನ ಹೇಣ್ತಿ ಬೇಬರ್ಸಿ ......

೨೬೩೫. ಗಾಂಧಿ ಹೇಳಿದ್ರು
ಸತ್ಯ ಅಹಿಂಸೆ ಬೇಕಂತ
ನನ್ನ ಶಾಣ್ಯಾಕಿ ........... ಹೇಳ್ತಾಳ
ಅವೆಲ್ಲ ಈಗ ಯಾಕಂತ.

೨೬೩೬. ಹಸಿರಿ ಹಾಗಲಕಾಯಿ
ಎಳೆ ಸವತಿಕಾಯಿ
ಹಸುಮಗನ್ನ ಕರಕೊಂಡ
ಬಿಸಲಾಗ ಬರ್ತಾಳ ......

೨೬೩೭. ಹೊತ್ತವರಿದ್ರೂ ಏನೂ ಮಾಡ್ಲಿಲ್ಲ
ಹೊಟ್ಟಿ ಹಸಗೊಂಡು ಹೊಲಕ ಹೋಗಲ್ಲ
ಗಡದ್ದಾಗೀ ಮಲಗೀದ ಈಕಿ ಗುಟ್ಟು
ಯಾರಿಗೂ ತಿಳಿದಿಲ್ಲ ....

೨೬೩೮. ಉದ್ದಿನ ವಡೆ ತಿಂದು
ಉಬ್ಬುಬ್ಬಿ ಮಾತಾಡ್ತಾಳ .....

೨೬೩೯. ಹಸ್ತಾ ನೋಡಿದ್ರ
ಹಲ್ಲ ಕಿಸಿತಾಳ .....

೨೬೪೦. ಹತ್ತ ಕೊಟ್ಟ ಹಲ್ಲ ತೋರಿಸ್ತಾಳ
ಇಪ್ಪತ್ತ ಕೊಟ್ರ ಮೈ ತೋರಿಸ್ತಾಳ .....

೨೬೪೧. ಬಂಡಿ ಮ್ಯಾಲ ಕೂತಗೊಂಡು
ದಿಂಡಿ ಯಾತ್ರಿಗಿ ಹೋಗೂನಂತಾಳ .....

೨೬೪೨. ಸುಂಕದವನ ಮುಂದೆ
ಸುಖ ದುಃಖ ತೋಡಿಕೊಂಡು
ಶಂಖಾ ಊದಿ ಸಿಗೇಮಾಕ ಕರಿತಾಳ .....

೨೬೪೩. ಕೊಳಲು ಪೂಜೇಕ ಕೃಷ್ಣನ್ನ ಹುಡುಕತಾಳ
ಲಕ್ಷ್ಮೀ ಪೂಜೇಕ ನನ್ನ ಹುಡುಕತಾಳ ......

೨೬೪೪. ಬಂಗಾರ ಇರುವುದು ಬ್ಯಾಂಕಿನಲ್ಲಿ
ಅಂಗಾರ ಇರುವುದು ದೇವರ ಗುಡಿಯಲ್ಲಿ
ಶೃಂಗಾರ ಇರುವುದು ನನ್ನವಳ ಮಡಿಲಲ್ಲಿ ......

೨೬೪೫. ಕತಿಪುರಾಣಂತ ಮಠಕ್ಕ ಹೋಗ್ತಾಳ
ಕೇಳಿ ಬಂದ ಕತಿ ಹೇಳತಾ ನನ್ನ ಜೀವಾ ತಿಂತಾಳ .....

೨೬೪೬. ವಿಶ್ವಾಸದವರ ಮಗಳು ಎಮ್ಮೀ ಕಾಯೋ
ವಿಷಕಂಠನ ಮಗಳು ನನ್ನಾಕಿ ............. ಎಂಎಲ್ಎ
ಆಗುದಕ ಹೊಂಟಾಳ.

೨೬೪೭. ಗೌಡಶಾನಿ ಲಗ್ನದಾಗ
ತಳವಾರನಿಗೆ ಹಿರೇತನ
ನನ್ನಾಕಿ ............. ಲಗ್ನದಾಗ
ನಂದs ಹಿರೇತನ.

೨೬೪೮. ಇವತ್ತಿನ ಸೂಲಗಿತ್ತಿ
ನಾಳೆ ಅಂದ್ರ ನರ್ಸ ಆಗ್ತಾಳ
ಇವತ್ತ ಹೇಳಿದ ಬುದ್ದಿ ಮಾತ
ನನ್ನಾಕಿ ನಾಳೇನ ಮರ್ತ ಬಿಡ್ತಾಳ ......

೨೬೪೯. ದೈವಬಲ ಇದ್ದಾಗ
ದೇವರೇನೂ ಮಾಡೂದಿಲ್ಲ
ತವರ ಮನಿ ಬಲ ಇದ್ದಾಗ
ನನ್ನಾಕಿ ಯಾರಿಗೂ ಹೆದರೂದಿಲ್ಲ .....

೨೬೫೦. ಮಚ್ಚರದಾನಿ ತಗೊಂಡು
ಮೀನ ಹಿಡಿಯಾಕ ಹೋಗ್ತಾಳ .....

೨೬೫೧. ಅಕ್ಷರ ತಪ್ಪಿದರ
ಮಾಸ್ತರನ ಮ್ಯಾಲ ಸಿಟ್ಟು
ನನ್ನಾಕಿ ........... ತಪ್ಪಿದರ
ಗಡಿಗಿ ಮ್ಯಾಲ ಸಿಟ್ಟು.

೨೬೫೨. ತವರ ಮನಿ ಅಂದ್ರೂ ಒಂದೆ
ಗಂಡ ಮನೆ ಅಂದ್ರೂ ಒಂದೆ
ದೇವರ ಮನಿ ಅಂದ್ರೂ ಒಂದೆ
ನನ್ನ ಅರ್ಧಾಂಗಿಗೆ ಎಲ್ಲಾ ಒಂದೆ .....

೨೬೫೩. ಪರಿಸರ ಚೆಂದಾಗಿದ್ರ ಕಡೆತನ ಹರುಷ
ಈಕಿ ..... ಲಗ್ನ ಆಗಿಂದ
ಒಂದಿನಾ ತಪ್ಪಲಿಲ್ಲ ವಿರಸ.

೨೬೫೪. ಅಕ್ಕಿ ಮನ್ಯಾಗಿದ್ದ್ರ
ಇಡ್ಲಿ ಮಾಡೂದಕೇನ ಕಷ್ಟ
ಇದಿ ಮಾಯಿ ನನಗ ಗಂಟು ಬಿದ್ಲು
ಬಾಳ್ತೀನಿ ಅಂತಾಳ ಬಂದಾಂಗ ಇಷ್ಟ .....

೨೬೫೫. ಅಳತಿಗೆಟ್ಟು ತಿನ್ನಾಕೀಗೆ
ಇಂಚು ಮೊಳ ಏನ್ ಗೊತ್ತು .....

೨೬೫೬. ಗುಡಿ ಇದ್ದರ ಎಲ್ಲಾರೂ
ಎಡಿ ಹಿಡಿತಾರ
ಕಡಾ ಕೊಟ್ಟರ ಎಲ್ಲಾರೂ
ಸಾಲ ಕೇಳ್ತಾರ
ನನ್ನಾಕಿ ............... ಮಾತಾಡಿಸಿದ್ರ
ಹಲ್ಲ ಕಡಿತಾಳ.

೨೬೫೭. ಹಂಗs ಮಾಡಿ ಬರ್‍ತೀನಂತ
ಹ್ಯಾಂಗರಾ ಮಾಡಿ ಬರ್‍ತಾಳ .....

೨೬೫೮. ಮಳಿ ಇದ್ದ್ರ ಬೆಳಿ ಮಾತು
ಈಕಿ ಒಂದಾಗಿದ್ದ್ರ ಮನಿ ಮಾತು .....

೨೬೫೯. ತಪ್ಪು ಮಡಿದಾವ್ರ ಮನೀಗೆ ಹೋಗಿ
ಹೆಪ್ಪಿಗೆ ಹಾಲು ಕೇಳ್ತಾಳ .....

೨೬೬೦. ಅಂಗೈಯಾಗ ಬಲ ಇಲ್ಲಂದ್ರ
ಸಂಗಯ್ಯನ ಮ್ಯಾಲ ಸಿಟ್ಟು
ಬಂಗಾರ ಬೋರಮಳ ಇಲ್ಲಂದ್ರ
ಗುಂಗಿನ್ಯಾಗ ನನ್ನ್ ಮ್ಯಾಗ ಸಿಟ್ಟು ಮಾರ್‍ತಾಳ .....

೨೬೬೧. ಕೈತೊಳಕೊಂಡ ನನ್ನ ಬೆನ್ನತ್ತಿ
ಕೈಲಾಸಕ್ಕ ಹೋಗ್ತೀನಂತಾಳ .....

೨೬೬೨. ಕೀರ್ತನಾನs ಬೇರೆ
ನರ್ತನಾನs ಬೇರೆ
ನಮ್ಮಾಕಿ ಅವತಾರನs ಬ್ಯಾರೆ ......

೨೬೬೩. ಮಳೆಯಾಗ ತೋಸಿಗೊಂಡು
ಜಳಕಾ ಮಾಡಾಕ ಅಂಜತಾಳ .....

೨೬೬೪. ಕೈಗಡ ಕೊಟ್ಟವರ ಸಂಗಡ
ಹಾಲ್ಗಡಗ ಕೇಳ್ತಾಳ .....

೨೬೬೫. ಸೀತಾಗೂ ತಪ್ಪಲಿಲ್ಲ ವನವಾಸಾ
ಎಂದಾದ್ರೂ ಈಕಿ ನನ್ಗ ಕರಗಸಾ ....

೨೬೬೬. ಬದ್ನಿಕಾಯಿ ಮುಳಗಾಯಿ
ಎರಡೂ ಒಂದೇ
ನನ್ನಾಕಿ ತೆಲಿಯಾಗ
ಹಗಲು ರಾತ್ರಿ ಒಂದೇ .....

೨೬೬೭. ಹಗ್ಗಾಗತಗೊಂಡ ಹೋದ್ರ
ಹಾವುಎಂದೂ ಸಿಗೂದಿಲ್ಲ
ಗುರು ಹಿರಿಯರ ಮಾತು ಮೀರಿ ಹೋದ್ರ
ನನ್ನವಳಿಗೆ ಎಂದೂ ಸುಖವಿಲ್ಲ .....

೨೬೬೮. ತೇರು ಇದ್ದ್ರ ಎಳ್ಯಾರು ಬಾಳಜನಾ
ನಿದ್ದಿ ಹತ್ತಿ ಬಿದ್ದ್ರ ಈಕಿ ..... ಎಬ್ಬಿಸಬೇಕು
ಮುರದು ಕಟಾಂಜನಾ.

೨೬೬೯. ಗಾಂಧಿ ನೆನಸುತ್ಲೆ ಸಿಂದಿ ನೆನಪು
ನಮ್ಮವಳಿಗೆ ಬರೇ ಸೋನಿಯಾಗಾಂಧಿ ನೆನಪು .....

೨೬೭೦. ಬೆಳ್ತನಾ ಬಸವ ಪುರಾಣ ಕೇಳಿ
ವಿಭೂತಿ ಎಲ್ಲಿ ಹಚ್ಚಬೇಕೆಂತಾಳ .....

೨೬೭೧. ಕೂಳ್ ತಿನ್ನದ ಮನಿಗೆ ಹೋಗಿ
ಕೂಲಿ ಕೇಳ್ತಾಳ .....

೨೬೭೨. ಒಳ್ಳೆ ಹೆಣ್ಣು ಜತಿಯಾದ್ರ ಜೋಕಾಲಿ
ಈಕಿ ..... ಸಿಕ್ಕಾಳ ಎಲ್ಲಿದ್ಲೊ ಮಹಂಕಾಳಿ.

೨೬೭೩. ಕಮ್ಮಂದ ಹಚಿಗೊಂಡ
ಕಮ್ಮಂದ ತಿಂದ ತೇಗತಾಳ .....

೨೬೭೪. ಎಲ್ಲಾರು ಪಲ್ಲಕ್ಕ್ಯಾಗ ಕುಂತ್ರ
ಪಲ್ಲಕ್ಕಿ ಹೋರಾವರ್‍ಯಾರು
ಎಲ್ಲಾರೂ ಹಿರೇರಾದ್ರ
ಮನಿ ನಡೆಸವರಾರು, ಈಕೀನ ನನ್ನ .....

೨೬೭೫. ಅಂಟಿನ ಉಂಡಿ ತಿಂದ
ಗಂಟ ಕಳಕೊಂಡ ಗುದ್ದಾಡಾಕ ಬರ್ತಾಳ ......

೨೬೭೬. ಶಿವಾ ಹೋದಮ್ಯಾಲ ಶಂಖಾ ಊದ್ತಾಳ
ನಾ ಹೊರಗ ಹೋದಾಗ ಪುಂಕಾ ಊದ್ತಾಳ .......

೨೬೭೭. ನಗರಕ್ಕ ನೀರಿನ ಚಿಂತಿ
ಹರಮಿ ಗುರುಮಿ ಮಾಡಿದ್ರ
ನನ್ನಾಕಿ ........... ಗೆ ಬೀಳ್ತಾವ ಕಂತಿ.

೨೬೭೮. ನೂಗಾರಿ ಬಾರ್ಸಿ ನಗರಕ್ಕ ಹೆಸರ ಇಡ್ತಾರು
ಪಗಾರಕ್ಕ ಸಹಿ ಮಾಡಿ ಮನ್ಯಾಗ ಮಲಗ್ತಾರು
ಈಕಿ ಈಕಿ ತಂಗಿ ಕರಕೊಂಡು ಮಂಗಳೂರ್ಗೆ ಹೋದ್ರ
ಗುಂಗು ಹಿಡದು ಗುಡಾರ ತುಂಬ ಹೊಲಸ ಮಾಡಿದ್ರು .....

೨೬೭೯. ಬೆಕ್ಕು ಇಲ್ಲದ ಮನ್ಯಾಗ
ಇಲಿ ಹೊಡಿತೈತಿ ಲಾಗ
ನಾ ಊರಾಗಿಲ್ದಾಗ
ಕಂಠಮಟ ಹೊಡ್ದ
ಹಾಕ್ತಾಳ ಕಮುರಡೇಗ.

೨೬೮೦. ಹಾದ್ಯಾಗಿನ ದೆವ್ವಾ ಕರದು
ಹಾರಾ ಫಲಾರ ಹಾಕ್ತಾಳ .....

೨೬೮೧. ಬಲ್ಲಾಂಗ ಬಂಗಾರ ಸಿಗತೈತಂತ
ಎಲ್ಲಮ್ಮನ ಗುಡ್ಡಕ್ಕ ಹೋಗಿ ಎಲಿಪೂಜಿ ಮಾಡಿಸ್ತಾಳ .....

೨೬೮೨. ಆಡಂಬರಕ್ಕೆ ಶ್ಯಾವಗಿ ಬಸದು
ಅಳಿಯನ್ನ ಹುಡುಕ್ತಾಳ .....

೨೬೮೩. ನಳದ ನೀರ ಬರಲಿಲ್ಲಂತ
ನದಿಮ್ಯಾಲ ಸಿಟ್ಟು ಮಾಡ್ತಾಳ .....

೨೬೮೪. ಹುಚ್ಚಿಯಾದ್ದೂ ಈಕೀನೇ
ನಮ್ಮತ್ತೆಗೆ ನೆಚ್ಚಿನ ಮಗಳು .....

೨೬೮೫. ನಾನು ಕೈಗಡು ಮಾಡಿ ಕಡಬು ತಂದ್ರ
ನನ್ನ ...... ಊರ್ತುಂಬಾ ಊಟಾ ಹೇಳಿದ್ಲಂತೆ.

೨೬೮೬. ಎಲ್ಲರೂ ನೋಡ್ತಾರ ಜೋಗದ ಗುಂಡಿ
..... ಈಕಿ ಹಣಕ್ಕಾಗಿ ಕೆದರೂದು ತಿಪ್ಪೆಗುಂಡಿ.

೨೬೮೭. ಕೀಲಾಬಿಚ್ಚಿಗಾಡಿ ಹೊಡ್ದು
ಮಣಕಾಲ ಮುರಕೊಂಡು
ಮನ್ಯಾಗ ಬಿದ್ದಾಳ .............

೨೬೮೮. ಅತ್ತೆಯ ಕಾಟಕ್ಕ ಬೇರೆಯಾದ್ರೆ
ಈಕಿ ............ ಪಾಲಿಗೆ ಅತ್ತೆಯೇ ಬಂದಳು.

೨೬೮೯. ಅತ್ತೆ ಮಾವನಿಗೆ ತಪ್ಪಲಾ ತಿನಿಸಿ
ತಾನು ತುಪ್ಪಾ ತಿಂತಾಳ .....

೨೬೯೦. ಬೀಸಿಲಾರದವಳು ಅಳೆ ಅಳೆದು ನೋಡಿದಳಂತೆ
ಕುಟ್ಟದವಳು ಊದಿ ಊದಿ ನೋಡಿದಳಂತೆ
ನಮ್ಮಾಕಿ ............. ಇದನ್ನೆಲ್ಲಾ ಹಣಿ ಹಣಿಕಿ ನೋಡಳಂತೆ.

೨೬೯೧. ಇಂಚು ಇಂಚಿಗೆ ಲೆಕ್ಕಾ ಹಾಕಿ
ಪಂಚೇತಿ ಮಾಡ್ತಾಳ .....

೨೬೯೨. ಹತ್ತೂರು ಹರಕತಿ ಮಾಡಿಕೋತ
ಹೆತ್ತವರನ್ನ ಮರತಾಳ ......

೨೬೯೩. ಮನಿಮಂದೆಲ್ಲ ಗುದ್ದಾಡುವಾಗ
ಉದ್ದಿನ ವಡೆ ಹುಡುಕ್ತಾಳ .....

೨೬೯೪. ಮನೀಗೆ ಬಂದರಿಗೆ ಹೆಂಡಿ ಕೊಡದಾಕಿ
ಇನ್ನ ನನ್ನಾಕಿ ............ ಉಂಡಿ ಕೊಡ್ತಾಳಾ?

೨೬೯೫. ಕಣದಾಗ ಕುಂತ
ಕಂಕಿ ತಿಂತಾಳ ......

೨೬೯೬. ಅತ್ತಿಗೊಂಡು ಕಾಲ ಮಾವಗೊಂದು ಕಾಲ
ಕಡೀಗೆ ಈಕಿಗೆ ..... ತಿನ್ನಾಕ ಸಿಗೋದು ಹತ್ತಿಕಾಳೇ.

೨೬೯೭. ಹೆತ್ತವರ ಕತಿ ತಗದು
ಹಿತ್ತಲದಾಗ ಕುಂತ ಅಳತಾಳ .....

೨೬೯೮. ಸತ್ತಮ್ಯಾಲ ಅತ್ತಿ ನೆನಸಿ ಅಳ್ತಾಳ .....

೨೬೯. ತತ್ರಾಣಿ ತಗೊಂಡು
ಹೊಲಕ ಹೋಗಂದ್ರ
ಉತ್ರಾಣಿ ಕಡ್ಡಿ
ಉಡಿಯಾಗ ಕಟಿಗೊಂಡಾಳ .....

೨೭೦೦. ಉಪ್ಪಿನಾವ ಅಳತಾನಂತ
ಟೆಂಗಿನ ಕಾಯಾವ ಅಳ್ತಾನ
ಟೆಂಗಿನ ಕಾಯವನು ಅಳ್ತಾನಂತ
ನನ್ನ ಹೇಣ್ತಿ ಅಳ್ತಾಳ .....

೨೭೦೧. ಕಾದ ಹಂಚಿನ ಮ್ಯಾಲ ಕುಂತಗೊಂಡು
ಸಂಚು ಮಾಡ್ತಾಳ ನನ್ನಾಕಿ .....

೨೭೦೨. ಕುಂಡಿ ಮ್ಯಾಲ ಸೀರಿ ಹರಕೊಂಡು
ಮುಂಡಿ ಪಲ್ಲೆ ಪರದಾಡಿ ತರತಾಳ .....

೨೭೦೩. ತಿಂಗಳ ಕಸಾ ಹಂಗ ಇಟಗೊಂಡು
ಮಂಗಳಗೌರಿ ಪೂಜಾ ಮಾಡ್ತಾಳ .....

೨೭೦೪. ನಿಬ್ಬಣದ ಮನ್ಯಾಗ
ದಬ್ಬಣಾ ಹುಡುಕ್ತಾಳ .....

೨೭೦೫. ಚಿತ್ತಗೇಡಿ ನನ್ನಾಕಿ ಕೈಯಾಗ
ಪತ್ತಲಾ ಕೊಟ್ರ
ಪತ್ತಲಾ ಮಾರಿ
ಪತ್ರೋಳಿ ಎಲಿ ತರತಾಳ .....

೨೭೦೬. ತಂತಿ ಹರಿದ ಮ್ಯಾಲ
ತಂಬೂರಿ ನುಡಿಯದು
ನನ್ನಾಕಿ ........... ಪ್ರೀತಿ ಇಲ್ಲದ ಮ್ಯಾಲ
ಸಂಸಾರ ನಡೆಯದು.

೨೭೦೭. ನನ್ನ ಹೇಣ್ತಿ ಸಿಂಗಾರಾಗೂದ್ರೊಳಗs
ಇಟ್ಟದಾಗಿನ ರಿಪೇರಿಗೆ ಬಂತು.

೨೭೦೮. ಕಲ್ಲಸಕ್ಕರಿ ತಿನ್ನಂದ್ರ
ಕಲ್ಲಸಾಕಂತ ಸೆಟಗೊಂಡು ಕುಂತಾಳ .....

೨೭೦೯. ಬಗಲಾಗ ಕೂಸು ಇಟಗೊಂಡು
ಬಾಗಲಕೋಟಿತನಾ ಹುಡಿಕಿ ಬಂದಾಳ .....

೨೭೧೦. ಸಿಟ್ಟಿನ್ಯಾಕಿ ನನ್ನಾಕಿ ............ ಸೆಟಗೊಂಡ್ರೂ
ಬಿತ್ತೂದೇನೂ ನಿಂತಿಲ್ಲ.

೨೭೧೧. ಕದಾ ತಿನ್ನಾಕಿ ಮದ ಬಂದಾಕಿ ನನ್ನ ರಾಣಿ
ಹಪ್ಪಳ ಡಬ್ಬ್ಯಾಗ ಕುಂತ ಸಪ್ಪಳಾ ಮಾಡ್ತಾಳ .....

೨೭೧೨. ಕಾಸಿನಿಂದ ಕೈಲಾಸಾ
ಖರಿದಿಸ್ತೇನಿ ಅಂತಾಳ ......

೨೭೧೩. ಕೆಲಸ ಇಲ್ಲ ಬೊಗಸಿಲ್ಲ
ಸುಮ್ ಸುಮ್ನ ತಿರಗತಾಳ .....

೨೭೧೪. ಕೂಳುಕುತ್ತ ನೀರು ಪಿತ್ತ
ನನಗ ಗೊತ್ತ ನಮ್ಮಾಕಿ ಗತ್ತ .....

೨೭೧೫. ಕೇಳಿದ್ದೆಲ್ಲಾ ನಂಬಿ ಕೆಟ್ಲು
ತಿಳದಿದ್ದನೆಲ್ಲಾ ಹೇಳಿ ಕೆಟ್ಲು
ನನ್ನ ಮಾತ ಮೀರಿ ಕೆಟ್ಲು .....

೨೭೧೬. ಕೆಡುಗಾಲಕ್ಕ ಬುದ್ದಿಲ್ಲ
ಮರಣಕ್ಕ ಮದ್ದಿಲ್ಲ
ನನ್ನ .............. ಕಿಗೆ ಯಾಕೋ ನಿದ್ದಿಲ್ಲ.

೨೭೧೭. ಆರು ಕೊಟ್ಟರೆ ಅತ್ತೆ ಕಡೆ
ಮೂರು ಕೊಟ್ಟರೆ ಮಾವನ ಕಡೆ
ನನ್ನಾಕಿ ............ ಏನಿದ್ರೂ ನನ್ನ ಕಡೆ.

೨೭೧೮. ಆಚಾರವೇ ಸ್ವರ್ಗ
ಅನಚಾರವೇ ನರಕ
ನನ್ನ ರೂಪಸಿ ...............ಯದು ಸ್ವರ್ಣಲೋಕ.

೨೭೧೯. ಆಡಿದ್ದಾಡೋ ಕಿಸಬಾಯಿದಾಸ
ನನ್ನ ............. ಹೇಣ್ತೀಗೆ ಇದೇ ಅಭ್ಯಾಸ.

೨೭೨೦. ನನ್ನ ..............ಳ ಜಗಳ
ಉಂಡು ಮಲಗುವತನಕ.

೨೭೨೧. ಇಟ್ಟರೆ ತೊಟ್ಟರೆ ಪುಟ್ಟಕ್ಕ ಚೆಂದ
ಏನೂ ಇಲ್ದಾನs ನನ್ನವಳು ಚೆಂದ .....

೨೭೨೨. ಉದ್ದು ಮದ್ದನ್ನು ಕೆಡಿಸಿತು
ನನ್ನ ..................ಳ ಪ್ರೀತಿ ನಿದ್ದಿಗೆಡಿಸಿತು.

೨೭೨೩. ಉಗುಳ್ತಾ ಉಗುಳ್ತಾ ರೋಗ
ಬೊಗುಳ್ತಾ ಬೊಗುಳ್ತಾ ರಾಗ
ನಾ ನನ್ನಳೊಂದಿಗೆ ನಡಿಸೋದು ಭೋಗಯೋಗ .....

೨೭೨೪. ಉಂಡೂ ತಿಂದೂ
ಉಟ್ಟೂ ತೊಟ್ಟೂ
ಗಂಡನಿಗಾಗಿ ಅಳ್ತಾಳ ಗುಂಡಿ .....

೨೭೨೫. ಊರ್ಗೆಲ್ಲಾ ಗೊತ್ತಿರೋದು
ಕಿವಿಯಾಗ ಬಂದ ಹೇಳ್ತಾಳ .....

೨೭೨೬. ಒಂದು ಸುಳ್ಳಿಗೆ ಸುರುಳಿ ಸುತ್ತಿ
ಒಂಭತ್ತು ಸುಳ್ಳು ಹೇಳ್ತಾಳ .....

೨೭೨೭. ಒರಳು ನೆಕ್ಕಿ
ಒಪ್ಪತ್ತು ಕರೆಸಿಗೊಳ್ತಾಳ .....

೨೭೨೮. ಕತ್ತೆಗೆ ಲತ್ತೆ ಪೆಟ್ಟು
ನನ್ನಾಕಿಗೆ ............ ಕೊಡೋದು
ಮಾತಿನ ಪೆಟ್ಟು.

೨೭೨೯. ಕಜ್ಜಿ ಇದ್ದವರಿಗೆ ಲಜ್ಜೆ ಇಲ್ಲ
ನನಗೂ .......... ಆಕಿಗೂ ಸಜ್ಜ ಇಲ್ಲ.

೨೭೩೦. ಕತ್ತಲ ಇಲ್ದ ಬೆಳಕು ತಿಳಿಯಾಕಿಲ್ಲ
ನನ್ನ ಹೇಣ್ತಿ ............... ಇಲ್ದ ಹೊತ್ತು ಹೋಗೂದಿಲ್ಲ.

೨೭೩೧. ಕಣ್ಣಾಗ ನೀರಿಲ್ಲ
ಮೂಗಿನ್ಯಾಗ ಸಿಂಬಳಿಲ್ಲ
ಸುಮ್ ಸುಮ್ನ ಅಳ್ತಾಳ ಸುಂದರಾಂಗಿ .....

೨೭೩೨. ಕಡ್ಡಿ ಇದ್ದದ್ದು ಗುಡ್ಡಾ ಮಾಡ್ತಾಳ
ಗಿಡ್ಡ ನನ್ನ ಹೆಣ್ತಿ .....

೨೭೩೩. ಕಾಗೆ ಕಾಗೀನ ಕೋಗಿಲೆ ಕೋಗಿಲsನ
ನನ್ನ ಹೆಂಡ್ತಿ ಹೆಡ್ತೀನ .....

೨೭೩೪. ಹುಟ್ಟಿದ ಮನಿ ಬಿಟ್ಟು
ಕೊಟ್ಟ ಮನಿಗೆ ಬಂದಾಳಂತ
ಜ್ವಾಕೀಲಿಂದ ಜ್ವಾಪಾನ ಮಾಡ್ತಾಳ ....

೨೭೩೫. ಕುರಿಕೊಬ್ಬಿದರ ಕುರಿಗಾರ್ಗ ಲಾಭ
ನನ್ನ ಹೇಣ್ತಿ ಬೆಳದ್ರ ನನಗs ಲಾಭ ....

೨೭೩೬. ಗಂಗೆಗೆ ಹೋದ್ರೂ
ತಂಬಿಗಿ ಮ್ಯಾಲ
ಧ್ಯಾನ ಇಡ್ತಾಳ ನನ್ನ .....

೨೭೩೭. ಜಾಳ್ಗಿ ಇಲ್ದ ಬಗರಿ ಆಡಿಸ್ತಾಳ .....

೨೭೩೮. ಚಿಂತಿಲ್ದ ನನ್ನಾಕಿ .....
ಸಂತ್ಯಾಗ ನಿದ್ದಿ ಮಾಡ್ತಾಳ

೨೭೩೯. ಚೋಳಿನ ಮಂತ್ರಾಬಾರದಾಕಿ
ಹಾವಿನ ಬುಟ್ಟಿಗೆ ಕೈ ಹಾಕ್ತಾಳ .....

೨೭೪೦. ಜಾಣರಿಗೆ ಮಾತಿನ ಪೆಟ್ಟು
ದಡ್ಡರಿಗೆ ದೊಣ್ಣೆ ಪೆಟ್ಟು
ನನ್ನ ............ಗೆ ಕೈಪೆಟ್ಟು.

೨೭೪೧. ಟೊಂಕ ಮುರಿಸಿಕೊಂಡ್ರೂ
ಬಿಂಕಾ ಬಿಡಲಿಲ್ಲ ಈಕಿ ......

೨೭೪೨. ತನ್ನ ಮರಿ ಹೊನ್ನ ಮರಿ
ಇನ್ನೊಬ್ಬರ ಮರಿ ಕಾಗೆ ಮರಿ
ನನ್ನ ................ ಳು ಕುರಿಮರಿ.

೨೭೪೩. ತಾಯಿಗಿಂತ ಬಂಧು ಇಲ್ಲ
ಉಪ್ಪಿಗಿಂತ ರುಚಿ ಇಲ್ಲ
ನನ್ನ ............. ಸುಂದರಿಗಿಂತ
ಚಂದ್ರಲೋಕಕ್ಕ ಒಯ್ಯೋರಿಲ್ಲ.

೨೭೪೪. ತಾ ಹಿಡಿದ ಮೊಲಕ
ಮೂರs ಕಾಲು ಅಂತಾಳ ನನ್ನಾಕಿ .....

೨೭೪೫. ತೊಟ್ಟಿಲ ತೂಗುದ ಕೈ
ಜಗವನಾಳಿದರ
ನನ್ನ ರಾಣಿ ನನ್ನನ್ನಾಳ್ತಾಳ .....

೨೭೪೬. ತೊಳೀಲಿಲ್ಲ ಬಳೀಲಿಲ್ಲ
ಮಸಿ ಅರವಿ ಹಿಡೀಲಿಲ್ಲ
ಮೂಗಿಗೆ ಮಸಿ ಮಾಡಿಕೋತಾಳ .....

೨೭೪೭. ತುತ್ತು ಹೆಚ್ಚಾದ್ರ ಕುತ್ತು
ನನ್ನಾಕಿ ........... ಕೊಡ್ತಾಳ ನನಗ ಮುತ್ತು.

೨೭೪೮. ದಿಕ್ಕಿಲ್ಲದವರಿಗೆ ದೇವರೇ ಗತಿ
ನನಗೆ ............ಳೇ ದೈವದತ್ತ ಸತಿ.

೨೭೪೯. ನೀರ ಮೇಲಿನ ಗುಳ್ಳೆಯಂತೆ ಜೀವನ
ನನ್ನ ಹೆಂಡತಿ .............ಲೇ ನನಗೆ ಪಾವನ.

೨೭೫೦. ಪಂಜರದಾನ ಗಿಳಿಹಾಂಗ
ಪಂಚಮಸರ ಕೊಡ್ತಾಳ ......

೨೭೫೧. ಪ್ರೀತಿ ಇದ್ರೂ ಭೀತಿ ಇರಬೇಕು
ಪ್ರೀತಿ ಭೀತಿ–ನೀತಿ ಭಕ್ತಿ ಸಾರಾಸಗಟ ಸುಂದರಿ ಈಕಿ .....

೨೭೫೨. ನನ್ನ ಹೇಣ್ತಿ ಅಂದ್ರ ಬಿಸಿ ಬಿಸಿ ತುಪ್ಪ ......
ನುಂಗಾಕೂ ಬರವಲ್ದು ಉಗಳಾಕೂ ಬರವಲ್ದು.

೨೭೫೩. ಬೆಳ್ತನಾ ರಾಮಾಯಣ ಕೇಳಿ ನನ್ನಾಕಿ .....
ರಾಮಗ ಸೀತೆಗೆ ಏನಾಗ್ಬೇಕು ಅಂದಳಂತೆ.

೨೭೫೪. ಭಂಡ ಮಾವನಿಗೆ ಮೊಂಡ ಅಳಿಯ ಅಂತ
ಡಂಗ್ರಾ ಸಾರಿ ಡೌಲು ಮಾಡ್ತಾಳ ಮರಿ ಆನಿಯಂತಾಕಿ .....

೨೭೫೫. ಮಂತ್ರಕ್ಕಿಂತ ಉಗುಳು ಜಾಸ್ತಿ
ನಮ್ಮಾಕಿ .............ಗೆ ತಿಗಳು ಜಾಸ್ತಿ.

೨೭೫೬. ಮನೆಗೆ ಮಾರಿ
ಊರಿಗೆ ಉಪಕಾರಿ
ಈಕಿ ................. ಮನ್ಯಾಗ
ಆಗ್ಯಾಳ ಕಾರಭಾರಿ.

೨೭೫೭. ಮಾತು ಮೀರಿದ ಹೆಂಡತಿ
ತುಟಿ ಮೀರಿದ ಹಲ್ಲು
ಹೊಲ್ದಾಗ ಆಳಿನ ಹಿಂಬಾಲಾ ಹೋಗಿ
ಹುಲ್ಲು ಕೀಳಂದ್ರ ಗುಲ್ಲು ಮಾಡ್ತಾಳ .....

೨೭೫೮. ಮದುವ್ಯಾಗ ಮಾವ
ಭಾಳ ಕೊಟ್ಟಾನಂತ
ಮರಿಗುದರಿ ಏರಿ ಕುಂತಾಳ ಈಕಿ .....

೨೭೫೯. ಮೀನಿನ ಮರಿಗೆ ಈಜ ಕಲಿಸಿದಂಗ
ನನಗs ಬದಕೂ ಅಕಲ ಕಲಿಸ್ತಾಳ .....

೨೭೬೦. ಮುಳ್ಳು ಇಲ್ದ ಗುಲಾಬಿ ಇಲ್ಲ
ನೋವು ಇಲ್ದ ಪ್ರೀತಿ ಇಲ್ಲ
ಇದನ ತಿಳಿದ್ರ ಸಾಕು
ನನ್ನ, ಆಕಿ ............... ತಕರಾರಿಲ್ಲ.

೨೭೬೧. ಮೊಂಡ ಕೊಡ್ಲಿ ರಟ್ಟಿಗೆ ಮೂಲ
ನನ್ನಾಕಿ ................ ನನಗ ಮೂಲ.

೨೭೬೨. ಕುದುರಿ ನೆಲಿ, ನೀರಿನ ನೆಲಿ
ಸನ್ಯಾಸಿ ನೆಲಿ ತಿಳಿಯೂದಿಲ್ಲ
ನನ್ನಾಕಿ ............... ನೆಲಿಬೆಲಿ ಹೊಳೆಯೂದಿಲ್ಲ

೨೭೬೩. ರಾತ್ರಿ ಮುಗಿದ ಕೂಡಲೇ ಹಗಲು
ನಮ್ಮಾಕಿ .............. ಬಾರಿ ತಗಲು.

೨೭೬೪. ಕೂದಲಾ ಸುಟ್ಟ್ರ ಇದ್ದಲಿ ಆಗೂದಿಲ್ಲ
ನಮ್ಮಾಕಿ ..............ಗೆ ಬುದ್ಧಿ, ಬರೂದಿಲ್ಲ.

೨೭೬೫. ಲಗ್ನಕ್ಕೆ ಒಂಬತ್ತು ವಿಘ್ನ
ಯಾಕಾರ ಈಕಿ ಲಗ್ನ ಆದೆ ......

೨೭೬೬. ವಿನಾಶಕಾಲೇ ವಿಪರೀತ ಬುದ್ಧಿ
................ಳು ಎಲ್ಲಾರ ಮಾತ್ನೂ ಮಾಡ್ತಾಳ ಲದ್ದಿ.

೨೭೬೭. ಸಂಕಟ ಬಂದಾಗ
ವೆಂಕಟರಮಣ
ಸೂರ್ಯಚಂದ್ರಗ
ಹಿಡಿತಾವು ಗ್ರಹಣ
ನನ್ನಾಕಿ ................ಗೆ ಆಗ್ಯೆತಿ
ಬುದ್ದಿ ಭ್ರಮಣ.

೨೭೬೮. ಸಂಜೀ ಹೊತ್ಗೆ ಮೂರು ಮೊಳ ನೆಯ್ತಾಳ ನನ್ನ ಹೇಣ್ತಿ .....

೨೭೬೯. ಜಲನೋಡಿ ಭಾವಿ ತಗೀಬೇಕು
ಕುಲನೋಡಿ ಹೆಣ್ಣ ತಗೀಬೇಕು
ನನ್ನಾಕಿ ............. ಇದನ ತಿಳೀಬೇಕು
ಸಂಸಾರ ಬಂಡಿ ಸಾಗಬೇಕು.

೨೭೭೦. ಕುಣಿಯಾಕ ಬರದಿದ್ರ
ನೆಲಾ ಟೊಂಕ ಅಂತಾಳ
ಈಜಲಿಕ್ಕ ಬರದಿದ್ಧ
ನೀರು ಡೊಂಕ ಅಂತಾಳ
ತಿನ್ನಲಿಕ್ಕ ಬರದಿದ್ರ
ಕಬ್ಬು ಡೊಂಕ ಅಂತಾಳ
ನಿನ್ನ ಬಾಯಿ ಡೊಂಕ ಅಂದ್ರ
ತನ್ನ ತೆಲಿ ಡೊಂಕ ಅಂತಾಳ ನನ್ನಾಕಿ .....

೨೭೭೧. ಚೆಂಡಾಳ ದೇವರಿಗೆ
ಚಪ್ಪಲಿ ಪೂಜೆ
ನನ್ನ ಪತ್ನಿ ............... ದೇವಿಗೆ
ನಾಯಿ ಚುಳಸಿ ಪೂಜೆ.

೨೭೭೨. ಅಜ್ಜಿಗೆ ಅರಿವೆ ಚಿಂತೆ
ಮೊಮ್ಮಗಳಿಗೆ ಮಿಂಡನ ಚಿಂತೆ
ನಮ್ಮಾಕಿ .............. ಗೆ ಸಿನೇಮಾ ಚಿಂತೆ.

೨೭೭೩. ಗೂಳಿ ಬಿದ್ದಾಗ ಆಳೊಗೊಂದ ಕಲ್ಲು
ಗುಳಿಗಿ ನುಂಗಿಕೋತ ನೆಕ್ಕತಾಳ ಒಳಕಲ್ಲು .....

೨೭೭೪. ಗಾಣಗಿತ್ತಿ ಕೂಡ ಜಗಳಾಡಿ
ಎಣ್ಣಿಲ್ದ ಗಾಣದೆತ್ತಿನ ಹಿಂದ ತಿರಗ್ತಾಳ .....

೨೭೭೫. ಹೋರಿ ಕಟ್ಟಿ ಬಿತ್ತಬಾರದು
ನನ್ನಾಕಿಯಂಥ ಪೋರಿ ನಂಬಿ
ಸಂಸಾರ ಮಾಡಬಾರದು ......

೨೭೭೬. ಗಂಡನಕಿಂತ ಹಿರಿಯಾಕಿ ಮಂಡೋದರಿ
ನನಗಿಂತ ಸಣ್ಣಾಕಿ ............... ನನ್ನ ಬಂಗಾರಿ.

೨೭೭೭. ಚಿಂತಿ ಇಲ್ಲದ ಚಿಪ್ಪಾಡಿ
ಸಂತ್ಯಾಗ ನಿದ್ದೆ ಮಾಡ್ತಾಳ .....

೨೭೭೮. ಶಂಖದಿಂದ ಬಂದದ್ದೇ ತೀರ್ಥ
ನನ್ನಾಕಿ ............... ಬಾಯಿ ಬಾಳಹರ್ತ.

೨೭೭೯. ತಾಯಿಯಂತೆ ಮಗಳು
ನೂಲಿನಂತೆ ಸೀರಿ
ತಡವರಿಸಿಗೋತ
ತವರಮನಿಗೆ ಹೋಗ್ತಾಳ ......

೨೭೮೦. ಸೌಟಿಗೇನು ಗೊತ್ತು ಸಾರಿನ ರುಚಿ
ನಮ್ಮಾಕಿಗೇನು ಗೊತ್ತು ಬಾಳೇದ ರುಚಿ.

೨೭೮೧. ಮಣ್ಣಿನಿಂದ ಗೌರವ ಕೆಟ್ಟ
ಹೆಣ್ಣಿನಿಂದ ರಾವಣ ಕೆಟ್ಟ
ಅತ್ತಿಗೆ ಸೊಸಿ ಕೆಟ್ಟ
ಸೊಸಿಗೆ ಅತ್ತೆ ಕೆಟ್ಟ
ನನ್ಗ ಗೊತ್ತು ನಮ್ಮಾಕಿ ಗುಟ್ಟ ......

೨೭೮೨. ತುಂಬಿದ ಕೊಡಾ ತುಳುಕುದಿಲ್ಲ
ನನ್ನ ಹೆಣ್ತಿ ಕೊಡಾ ತುಂಬೂದಿಲ್ಲ .....

೨೭೮೩. ಅಜ್ಞಾನಕ್ಕಿಂತ ಅಲ್ಪಜ್ಞಾನ ಕೆಡಕು
................ಗೆ ಜ್ಞಾನವೆಂಬುದೇ ತೊಡಕು.

೨೭೮೪. ರಾತ್ರಿ ಕಂಡ ಭಾವಿಗೆ
ಹಗಲ ಹೋಗಿ ಬೀಳ್ತಾಳ .....

೨೭೮೫. ಕುಸಬಿ ಹೂ ತಿಂದ
ಕುಸಿ ಕುಸಿ ಮಾಡ್ತಾಳ .....

೨೭೮೬. ನಗ್ನಿ ಮುಳ್ಳು ತುಳದ
ನೆಲಕ ಬಿದ್ದ ಅಳತಾಳ .....

೨೭೮೭. ಅಂಗಳಕ ರಂಗೋಲಿ ಹಾಕಿ
ಮಂಗಳಾರತಿ ಹಾಡ್ತಾಳ .....

೨೭೮೮. ಮಕ್ಕಳನ್ನು ಕರಕೊಂಡು ಮದುವೀಗೆ ಹೋಗಿ
ಮದುಮಕ್ಕಳನ್ನು ಮಾತಾಡಿಸಿಗೋತ
ಮಕ್ಕಳನ್ನು ಬಿಟ್ಟು ಮನೀಗೆ ಬರ್ತಾಳ .....

೨೭೮೯. ಮೀನಿನ ಹೆಜ್ಜಿ ಗುರುತ ಹಿಡಿತಾಳ
ನನ್ನಾಕಿ ............. ಮರ್ಮ
ಗೊತ್ತಾಗದ್ದು ನನ್ನ ಕರ್ಮ.

೨೭೯೦. ಹುಲಿಕಂಡು ನರಿ ಮೈಸುಟ್ಟುಗೊಂಡಿತು
ಶ್ರೀಮಂತರ ಗೆಳೆತ್ಯನ ಮಾಡಿ ನನ್ನ ಮನಿ ಹಾಳು ಮಾಡಿದ್ಲು .....

೨೬೯೧. ಹುಲಿ ಹಸ್ತರ ಹುಲ್ಲು ತಿನ್ನೊದಿಲ್ಲ
ನನ್ನ ............ ರಾಣಿ ಹಸ್ತರ ಕಚಡಾ ತಿನ್ನೊದಿಲ್ಲ .....

೨೬೯೨. ದಿಕ್ಕಿಲ್ಲದವರಿಗೆ ದೇವರೇ ಗತಿ
ನನ್ನಾಕಿ ................ಗೇ ನಾನೇ ಮತಿ.

೨೬೯೩. ಹಾದರಗಿತ್ತಿಗೆ ಹತ್ತೆಂಟು ಹೆಸರು
ನನ್ನ ಹೆಂಡತಿ ............. ಗೆ ಒಂದೇ ಹೆಸರು.

೨೬೯೪. ಅತ್ತದರಿ ಇತ್ತ ಹುಲಿ
ಈಕಿ ................. ಇರ್ತಾಳ ನಮ್ಮುಂದ ಇಲಿ.

೨೬೯೫. ಹೋದೆಯಾ ಪಿಶಾಚಿ ಅಂದ್ರೆ
ನನ್ನ ಹೇಣ್ತಿ ಬಂದೆ ಗವಾಕ್ಷಿಯಿಂದ ಅಂತಾಳ .....

೨೬೯೬. ಒಂಟಿ ಮರ ಸುಂಟರಗಾಳಿ
ನನ್ನಾಕಿ ................ ಬಿರುಗಾಳಿ.

೨೬೯೭. ಅತ್ತಿ ಮ್ಯಾಲಿನ ಕೋಪ
ಭತ್ತದ ಮ್ಯಾಲೆ
ನನ್ನ ಕೋಪ ನಮ್ಮಾಕಿ ಮ್ಯಾಲೆ .....

೨೬೯೮. ಊರು ಬಾಯಿ ಮುಚ್ಚಬಹುದು
ನಮ್ಮಾಕಿ ............ ಬಾಯಿ ಮುಚ್ಚೂದು ಕಷ್ಟ.

೨೬೯೯. ಸಪ್ಪಗಿರು ಅನ್ನಕ್ಕಿಂತ
ಉಪ್ಪುಗಂಜಿ ಕುಡಿಯೂದು ಲೇಸು
ನಮ್ಮ ಮಹಾರಾಣಿ ಧರ್ಮಪತ್ನಿ .....
ಮುಟ್ಟಿದರೆ ಸಾಕು ಕೇಳ್ತಾಳ ಕಾಸು.

೨೭೦೦. ಬುದ್ದಿ ಹೇಳಾರ ಕೂಡ
ಗುದ್ದಾಡಲಿಕ್ಕೆ ಹೋಗ್ತಾಳ .....

೨೭೦೧. ಹಳೆ ಸೀರೆಗೆ ನೂಲು ದಂಡ
ನನ್ನ ಸುಂದರಿಗೆ ಬುದ್ಧಿ ಹೇಳಾವನೇ ಭಂಡ .....

೨೮೦೨. ಹಿಂದಲ ಸುದ್ಧಿ ತಗದ
ಹಿತ್ತಲದಾಗ ಅಳತಾಳ .....

೨೮೦೩. ಹಂದಿಗೆ ಬಾಳ ಮರಿ
ಸಿಂಹಕ್ಕೆ ಒಂದೇ ಮರಿ
ನನ್ನಾಕಿ ..... ಖರೇದಂದ್ರ ಕಳ್ಳನರಿ.

೨೮೦೪. ಇಂಗು ಇದ್ದರೆ ಸಾಕು
ನನ್ನಾಕಿ ಮಂಗ್ಯ ಸೈತೆ ಅಡಿಗೆ ಮಾಡತೈತಿ ಅಂತಾಳ .....

೨೮೦೫. ನಾ ಎಟ್ಟಿಯಾದ್ರ
ನನ್ನ ಹೇಣ್ತಿ ಬಾಳ ಖೊಟ್ಟಿ .....

೨೮೦೬. ಒಲಿದರೆ ನಾರಿ ಮುನಿದರೆ ಮಾರಿ
ನನ್ನ ಹೇಣ್ತಿ ಕಾಟಾ ಕೊಡೂ ದ್ಯಾಮಾರಿ .....

೨೮೦೭. ಹೇಳ್ಕಿ ಮಾತ ಕೇಳಿ ನನ್ನ ಹೇಣ್ತಿ
ತೆಲಿ ಬೋಳಿಸಿಕೊಂಡ್ಲಂತ .....

೨೮೦೮. ಬೆಳ್ಳಗಿರೋದೆಲ್ಲಾ ಹಾಲಲ್ಲ
ನನ್ನಾಕಿ .............ಗೆ ಎಂದೂ ಸೋಲಿಲ್ಲ.

೨೮೦೯. ಆನೆಗೆ ಆನೆಯೇ ಹೋಗುವಾಗ
ಬಾಲಕ್ಕೆ ಶ್ಯಾಣೇತನ ಮಾಡ್ತಾಳ .....

೨೮೧೦. ಊಟ ಕೆಟ್ಟರೆ ದಿವಸ ಕೆಟ್ಟೀತು
ಹೆಂಡತಿ ಕೆಟ್ಟರೆ ಇಡಿ ಜಲ್ಮ ಕೆಟ್ಟೀತು
ಇದನೆಲ್ಲ ಕೇಳಿ ನಮ್ಮಾಕಿ ಬಾಯಿ ಕಟ್ಟಿತು .....

೨೮೧೧. ತಂಗಿ ಮನಿಗೆ ಹೋಗಿ
ಮಂಗಳಾರತಿ ಹಾಡ ಕಲ್ತು ......

೨೮೧೨. ಕತ್ತೆಯಂಥ ಅತ್ತಿ ಬೇಡ
ಮುತ್ತಿನಂಥ ಗಂಡ ಬೇಕಂತಾಳ ನಮ್ಮಾಕಿ .....

೨೮೧೩. ಕೋಳಿ ಕೂಗಿದರೆ ಬೆಳಕಾಗಿರತೈತಿ
ನನ್ನಾಕಿ ............ ಕೂಗಿದರೆ ಕತ್ತಲಾಗಿರತೈತಿ.

೨೮೧೪. ಸಮುದ್ರದಾಗ ಶ್ಯಾವಗಿ ಬಸ್ತ ಎಡಿ ಮಾಡ್ತಾಳ
ಶನಿದೇವರ, ಕಂಡ ಶಿವ ಶಿವಾ ಅಂತಾಳ .....

೨೮೧೫. ಅಗ್ಗದ ಚಪ್ಪಲಿ ಕಾಲಿಗೆ ಮೂಲ
ನಾ ರಾತ್ರಿ ಹೊರಗ ಹೊಂಟ್ರ ಜಗ್ಗತಾಳ ಕಾಲ .....

೨೮೧೬. ಉಂಡ ತಿಂದ ಜಡ್ಡ ಮಲಗಿ
ಗಂಡಗ ಯಾಕ ಅಂತಾಳ ......

೨೮೧೭. ಎಲ್ಲವ್ವನ ಗುಡ್ಡದಾಗ ಮುಲ್ಲಾಂದೇನು
ನನ್ನ ಮನ್ಯಾಗ ಇರು ಮಲ್ಲಂದೇನು
ನನ್ನ ಹೇಣ್ತಿ ನೀನು ಹೇಳದಿದ್ರ ನಿನ್ನ ಚರಗಾಚೇಲ್ಲೇನು .....

೨೮೧೮. ಮಾಡಿದಾಕಿ ಉಣತಾಳ
ಮಣಿಯಂತ ಕಡುಬ ನನ್ನಾಕಿ .....

೨೮೧೯. ಸಿಟ್ಟ ಬಂದ್ರ ಹಿಟ್ಟ ಮುಕ್ಕತಾಳ
ಹಿಟ್ಟಮುಕ್ಕಿ ಹೊರಕಡೆ ಹೋಗ್ತಾಳ .....

೨೮೨೦. ಆನಿ ಸೊಂಡಿ ಚಿಲಕದ ಕೊಂಡಿ
ನನ್ನ ಹೇಣ್ತಿ ............ ಬಾಳ ಮಂಡಿ.

೨೮೨೧. ಎಮ್ಮೀ ಮ್ಯಾಲ ಕುಂತು
ಎಲ್ಲವ್ವಗ ಹೋಗ್ತಾಳ .....

೨೮೨೨. ಕಲ್ಲು ಸಕ್ಕರಿ ಹಳಕ
ನಮ್ಮಂದ ................ ಕಿದು ಬಾಳ ಥಳಕ.

೨೮೨೩. ಗ್ವಾಡ್ಯಾಗ ಹೆಂಟಿ
ಗುಡಿಯಾಗ ಗಂಟಿ
ನನ್ನಾಕಿ ............ ಬಾಳ
ಜಗಳ ಗಂಟಿ.

೨೮೨೪. ಚೆಂಡು ಹೂ ಹಿಡಕೊಂಡು
ಗಂಡಗಾಗಿ ದಿಂಡರಕಿ ಹಾಕತಾಳ .....

೨೮೨೫. ಚಕ್ಕಡಿ ಮಾವಿನ ಕಾಯಿ
ಚಟಾಕ ಉಪ್ಪು
ಗಿರಪಾವು ಖಾರಾ
ಕಟಾಕಟಾ ತಿಂದ
ಕಂಡವರ ಕಾಲ ಮುಗಿತಾಳ .....

೨೮೨೬. ಜಂತಿಲ್ಲದ ಮನ್ಯಾಗ
ಚಿಂತಿಲ್ದ ಕುಂತಾಳ .....

೨೮೨೭. ರೋಗಿಗೆ ಪಥ್ಯೆ ಬೇಕು
ರೈತಗೆರಡು ಎತ್ತು ಬೇಕು
ನನ್ನಾಕಿ .............ಗೆ ನತ್ತ ಬೇಕು.

೨೮೨೮. ಹಾಳ ಹರಟಿ ಮಾಡಿಕೊಂತಾ
ಹಳಿ ಬಂಡಿ ಕೆಳಗ ಹರಿಕಥಿ ನಡಿಸ್ಯಾಳ .....

೨೮೨೯. ಸುಣ್ಣಿದ್ರ ಎಲಿ ಚೆಂದ
ಬಣ್ಣಿದ್ರ ಮನಿ ಚೆಂದ
ಪುಣ್ಯವಂತಿ ಹೆಂಡತಿದ್ರ
ಬಾಳೇವು ಚೆಂದ .....

೨೮೩೦. ಕಂಚಿನ ಕಣ ಕಣ
ಮುತ್ತಿನ ಅಡಕಲ
ಅತ್ತಿ ಹೊಟ್ಟೇಲಿ
ಮುತ್ತ್ಯೋದಿ ಹುಟ್ಯ್ಯಾಳ .....

೨೮೩೧. ಸುಳ್ಳ ಹೇಳ್ತಾಳ ಮಳ್ಳ ಮಾಡ್ತಾಳ
ಜಳಕಾ ಮಾಡಂದ್ರ ಜಗಳಾ ಮಾಡ್ತಾಳ .....

೨೮೩೨. ಲಗ್ನದಾಗ ಕೂಡ್ತಾರ ಬೀಗರು
ಕೂಡಿ ಕೆಲ್ಸಾ ಮಾಡಿದ್ರ ಕಾರ್ಯ ಹಗುರು
ಕೂಡಿದ ಮಂದ್ಯಾಗ ನಮ್ಮಾಕಿದ ಬಾಳ ಟೆಬರು .....

೨೮೩೩. ಅಡಗೀಯ ಮನಿಯಾಗ
ಮಡದೀಯ ಸುಳುವಿಲ್ಲ
ಅಡಗಿ ಬಾಯೀಗೆ ರುಚಿ ಇಲ್ಲ
ಯಾಕಂದ್ರ ನನ್ನ ........
ತವರೀಗೆ ಹೋಗ್ಯಾಳ.

೨೮೩೪. ಕಮಲದ ಹೂ ನಿನ್ನ ಕಾಣದೆ ಇರಲಾರೆ
ನಿನ್ನ ಬಿಟ್ಟು ಹನಿ ನೀರ ಕುಡಿತಾರೆ .....

೨೮೩೫. ಸಂತ್ಯಾಗ ಕುಂತ
ಶ್ಯಾವಗಿ ಹೊಸಿತಾಳ ......

೨೮೩೬. ಬೆಡಗು ಜಂತಿ ಮ್ಯಾಲ
ಹೆಡಗಿ ತೆಲಿ ಮ್ಯಾಲ
ಕೊಡ ನಡದ ಮ್ಯಾಲ
ನನ್ನ ನೆದರು ................. ಈಕಿ ಮ್ಯಾಲ.

೨೮೩೭. ಅಡಿಗೆ ಗುಣ ನಾರಿಯಲ್ಲಿ ನೋಡು
ಬೆಳಿಗುಣ ಉಳಿಮೆಯಲ್ಲಿ ನೋಡು
ನನ್ನಾಕಿ ................ ಗುಣ ನಡೆ ನುಡಿಯಲ್ಲಿ ನೋಡು.

೨೮೩೮. ಉತ್ರಾಣಿ ಕಡ್ಡಿ ತಂದು
ಊರ್ತುಂಬಾ ಹಂಚತಾಳ .....

೨೮೩೯. ಪತಿಗೆ ತಕ್ಕ ಸತಿ ಇರಬೇಕು
ಸಭೆಗೆ ಒಬ್ಬ ಸಭಾಪತಿ ಇರಬೇಕು
ಊರಿಗೊಬ್ಬ ಹನುಮಪ್ಪ ಇರಬೇಕು
ಊರು ಹೊರಗ ಉಡಚವ್ವ ಇರಬೇಕು
ಮನ್ಯಾಗ ನನ್ನ .................. ಳಂಥ ಪಾರ್ವತಿ ಇರಬೇಕು.

೨೮೪೦. ಕಾಡ್ತಾಳಂದ್ರ ಕಾಡೂದಿಲ್ಲ
ಬೇಡ್ತಾಳಂದ್ರ ಬೇಡೂದಿಲ್ಲ
ಇನ್ನೊಬ್ಬರ ಮಾತ ಕೇಳೂದಿಲ್ಲ
ಹಟ ಮಾಡ್ತಾಳ ಏನ ಬೇಡ್ತಾಳ
ತವರ ಮನಿಗೆ ಹೋಗ್ತೀನಂತ
ತಡವರಿಸತಾಳ ......

೨೮೪೧. ತಿದ್ದಿಮಾಡಿದ ಮುಖ
ಮುದ್ದು ಮಾತಿನ ಬಾಯಿ
ಮೆಲ್ಲಕ ಬಂದು ನಿದ್ದಿ ಮಾಡೂನಂತ
ಮಾರಿ ಮುಚಗೋತಾಳ .....

೨೮೪೨. ಚರಗಾ ಚೆಲ್ಲಿ ಬರ್ತೀನಂತಾಳ
ಚರಿಗಿ ತಂಗೊಂಡು ಹೊರಕಡೆ ಹೋಗ್ತಾಳ .....

೨೮೪೩. ಒಂದಕ್ಕ ಹೋಗಿ ಬರ್ತಿನಂದಾಕಿ
ಎರಡಕ್ಕ ಹೋಗಿ ಬರ್ತಾಳ
ಮೂರಕ್ಕ ಮೂರುಕಾ ಮಾಡ್ತಾಳ .....

೨೮೪೪. ಶರಣ ಶರಣೆಯರಿಗೆ
ನಮಸ್ಕರಿಸುವಳು
ಗುರು ಹಿರಿಯರಿಗೆ
ವಂದಿಸುವಳು
ನನ್ನ ಮುಖ ನೋಡಿದ್ರೆ
ಹದ್ದಾಗಿ ಎರಗುವಳು .....

೨೮೪೫. ಆರ ತಾಟ ಹೂವು
ಮೂರು ತಾಟ ಪತ್ರಿ
ಹತ್ತ ಬೆಳ್ಳಿ ಸಮೆ
ಇಪ್ಪತ್ತು ಕರ್ಪುರ ಬೆಟ್ಟ
ಮೂರು ತಾಸು ಪೂಜೆಮಾಡಿ
ಎಡಿ ಹಿಡಯಾಕ ಏನೂ ಇಲ್ಲಂತ
ಮನಿತುಂಬ ಹುಡುಕ್ಯಾಡತಾಳ .....

೨೮೪೬. ಯತಿಗಳಿಗೆ ಎರಗತಾಳ
ಕತಿ ಪುರಾಣ ಕೇಳ್ತಾಳ
ಸತಿ ಸಾವಿತ್ರಿಯಾಗಿ ಪತಿಸೇವೆ ಮಾಡ್ತಾಳ .....

೨೮೪೭. ಅವರಿ ಹೂವಿನ ಬಣ್ಣ
ತಾವರಿ ಹೂವಿನ ಕಣ್ಣ
ನಾ ಊರಿಗೆ ಹೋದರ
ಮಾಡ್ತಾಳ ಮಾರಿ ಸಣ್ಣ ......

೨೮೪೮. ಸುಣ್ಣಾ ಬಣ್ಣಾ ಇದ್ದ್ರ ಮನಿ ಚೆಂದ
ಹೊಡೆದಿರುಗಿದ ಹಸಿರು ಹೊಲ ಚೆಂದ
ಹೊಳಿ ದಂಡಿ ಪೀಕು ಚೆಂದ
ನಮ್ಮೂರಿಗೆ ನಮ್ಮಾಕೇ ಚೆಂದ ......

೨೮೪೯. ಮನಿಗೊಬ್ಬ ಮುದುಕಿ ಬೇಕು
ಊಳುದಕ್ಕ ಎರಡು ಎತ್ತು ಬೇಕು
ಎಡಿ ಹೊಡ್ಯಾಕ ಬಾ ಅಂದ್ರ
ಮಳಿ ಮಾಡಿಲ್ದ ಗದ್ದಲಸ್ತಾಳ ......

೨೮೫೦. ಮನಿಗೆ ಮಕ್ಕಳು ಚೆಂದ
ದನದ ಹಕ್ಕ್ಯಾಗ ದನಾ ಚೆಂದ
ನನ್ನಾಕಿ ............... ಹಣೆಗೆ ಕುಂಕುಮ ಚೆಂದ.

೨೮೫೧. ಕಣದಾಕ ಕಂಕಿ
ಒಲಿಯಾಗ ಬೆಂಕಿ
ನನ್ನ ............. ಕೇಳ್ತಾಳ ವಂಕಿ.

೨೮೫೨. ಬಂಗಾರ ಬಳಿ
ಕಾಲಾಗ ರುಳಿ
ನನ್ನಾಕಿ .......... ತಿಂತಾಳ ಬಾಳ ಹುಳಿ.

೨೮೫೩. ಬಾಯಿ ಬಂಗಾರ
ಹಲ್ಲು ದಾಳಿಂಬ್ರ
ತುಟಿ ತೊಂಡಿಕಾಯಿ
ಹುಬ್ಬು ಕಾಮನಬಿಲ್ಲು
ಚೆಂದ ಅದೀನಂತ
ಚೌರಾ ಬೀಸಿಗೊಂತಾಳ .....

೨೮೫೪. ಸಕ್ಕರಿಕೊಡು ಅಂದ್ರ
ಬಾಯಿಗೆ ಮುಕ್ಕ ಹಾಕ್ತಾಳ
ಬೆಲ್ಲಾಕೊಡು ಅಂದ್ರ
ಗುಲ್ಲು ಮಾಡ್ತಾಳ .....

೨೮೫೫. ಗೆಜ್ಜಿ ಕಟಿಗೊಂಡ
ಮಜ್ಜಿಗಿ ಮಾಡ್ತಾಳ .....

೨೮೫೬. ಮೂಗನ್ಯಾಗ ನತ್ತು
ಕೊಳ್ಳಾಗ ಮುತ್ತು
ಹಂಡೆ ಹಾಲು ಕುಡದು
ಒಪ್ಪತ್ತ ಮಾಡ್ತಾಳ ......

೨೮೫೭. ಗಟ್ಟಿ ಬಂಗಾರ
ತುಟ್ಟೀ ಸೀರಿ
ಕಟ್ಟಿಮ್ಯಾಲ ಕುಂತ
ಮುಟ್ಟಿ ಮುಟ್ಟಿ ನೋಡ್ತಾಳ .....

೨೮೫೮. ಅಡಕಿ ಹೂವಿನ ಸೀರಿ
ಕಿಡಕಿ ಬಣ್ಣದ ಕುಬುಸಾ
ಹೆಡಕಿನ ಮ್ಯಾಲ ಸೆರಗ ಹಾಕಿ
ಸಡಗರಾ ಮಾಡ್ತಾಳ .....

೨೮೫೯. ಕಲ್ಲಸಕ್ಕರಿ ಗಂಟು
ಜೋಳದ ದಂಟು
ಬೆಲ್ಲದ ಕರದಂಟ ತಿಂದ
ಓಣಿ ತುಂಬಾ ಗುಲ್ಲು ಮಾಡ್ತಾಳ .....

೨೮೬೦. ಸುಳ್ಳಿಗೆ ಸುಳ್ಳು ಹೆಣಿಯಾಕಿ
ಉಳ್ಳವರ ಮಳ್ಳ ಮಾಡಾಕಿ .....

೨೮೬೧. ಹೊಲ್ದಾಗ ಹಾಕ್ತಾರ ಪುಂಡಿ
ಮನ್ಯಾಗಿರುವುದು ಬೆಳಕಿಂಡಿ
ಮೆಣಸಿನಕಾಯಿ ಅರದರ ಹಿಂಡಿ
ನನ್ನಾಕಿ ............. ಇದ್ದಾಳ ಸಿಟ್ಟಿಗೆದ್ರ
ಆಗ್ತಾಳ ರಣಚಂಡಿ.

೨೮೬೨. ರಂಟಿ ಹೊಡ್ದ ಬಾ ಹೊಟ್ಟಾಗ
ಕುಂಟಗೊಂತ ಬರ್ತಾಳ .....

೨೮೬೩. ಅಲಸಂಧಿ ಹೊಲ್ದಾಗ ಕುಂತ
ನನ್ನ ಹತ್ತಿರ ಗೋಸಂಬಿ ಕೇಳ್ತಾಳ .....

೨೮೬೪. ಬಣ್ಣದ ಸೀರಿ ಉಟಗೊಂಡ
ಮಣ್ಣಾಗ ಕುಂತಾಳ .....

೨೮೬೫. ಕುಡಗೋಲನುಂಗಿ ಕುರ್ಚಿಗಿ ಕೇಳ್ತಾಳ
ಬಂಡಿ ನುಂಗಿ ಉಂಡಿ ಕೇಳ್ತಾಳ
ಸಂಡಿಗಿ ಬೇಕಂತ ಸವರಾತ್ರ್ಯಾಗ ಅಳ್ತಾಳ .....

೨೮೬೬. ಒಂಟಿ ಎಲವು ಗಂಟ ಮಾರಿ
ಪಂಟ ಬಡಕೋತ ದೇವರ ಗುಡಿ
ಗಂಟಿ ಹೊಡಿತಾಳ .....

೨೮೬೭. ಬಂಗಾರ ಬದನಿಕಾಯಿ
ಬೆಳ್ಳಿ ಸೌತೇಕಾಯಿ
ಉಣ್ಣು ಅಂದ್ರ
ಕಣ್ ತಿರಗಿ ಬೀಳ್ತಾಳ .....

೨೮೬೮. ಬಾಗಲ್ದಾಗ ಬಂಡಿ
ಹಿತ್ತಲದಾಗ ಹೆಂಡಿ
ನನ್ನಾಕಿ ................ ಬಂಗಾರ ಗುಂಡಿ.

೨೮೬೯. ಕಿರಾಣಿ ಅಂಗಡ್ಯಾಗ
ಗೊಂಗಡಿ ಕೇಳ್ತಾಳ
ಸೀರಿ ಅಂಗಡ್ಯಾಗ
ಸಿಂಗಡಿ ಕೇಳ್ತಾಳ
ಕಂಬಾರ ಕುಲುಮ್ಯಾಗ
ಕೆರಸಿ ಕೇಳ್ತಾಳ
ಹೊರಸಿನ ಮ್ಯಾಲ ಕುಂತ ಕಾಲ ಕೆದರತಾಳ .....

೨೮೭೦. ಹರಹರ ಮಹದೇವ ಅಂತಾಳ .....
ಅತ್ತಿ ಮಾವನ್ನ ನಾಪಳಸ್ತಾಳ
ತಂದಿ ತಾಯಿನ್ನ ನೆನಪಿಸ್ತಾಳ
ನಾ ಬಂದ್ರೂ ಒಟಗುಡತಾಳ .....

೨೮೭೧. ಗೂಗಿ ಕೂಗಿದರ ಅಪಶಕುನ
ಕಾಗಿ ಮೆಟ್ಟ ನೋಡಿದ್ರ ಅಪಶಕುನ
ನಾಯಿ ಕಿವಿಕೊಡವಿದರ ಅಪಶಕುನ
ನಮ್ಮಾಕಿ ನಕ್ಕ್ರ ಶುಭ ಶಕುನ .....

೨೮೭೨. ಬಿಳಿಮೋಡ ಆಡಿದರ
ಮಳಿ ಆಗೂದಿಲ್ಲ
ಕರಿಮೋಡ ಗುಡಕಿದರ
ಮಳಿ ಆಗತೈತಿ
ನಮ್ಮಾಕಿ ಅತ್ತ್ರ ............ ಮಳಿ ಬರೊದಿಲ್ಲ.
ನಕ್ಕ್ರ ಮಳಿ ಬರತೈತಿ.

೨೮೭೩. ಮಕ್ಕಳಾಗಲೆಂತ ಮರ ಸುತ್ತಾಳ
ಮೊಮ್ಮಕ್ಕಳಾಗಲಂತ ಮರಿಯಮ್ಮಗ ಹೋಗ್ತಾಳ
ಗಿರಿ ಮೊಮ್ಮಕ್ಕಳಾಗಲಂತ ದೇವ್ರಿಗೆ ದಿಂಡರಕಿ ಹಾಕ್ತಾಳ .....

೨೮೭೪. ಕೂಸು ಹುಟ್ಟೊ ಮೊದ್ಲ ಹೊಟ್ಟಿ ನೋಡಿ
ಕುಲಾಯಿ ಹೊಲಿಸ್ತಾಳ.

೨೮೭೫. ಚಿನ್ನದಂತ ಕೂಸಿನ ಕನಸ ಕಂಡಾಳ
ಚಿನ್ನದ ಗೊಂಡೆ ಕುಲಾಯಿ ಹೊಲಿಸ್ಯಾಳ
ಬಂಗಾರದಂತ ಕೂಸು ಬಗಸ್ಯಾಳ
ಬಂಗಾರದ ಗುಬ್ಬಿಚಟ್ಟು ಮಾಡ್ಯಾಳ ......

೨೮೭೬. ಹಾರೂ ಹಕ್ಕಿ ಪುಚ್ಚಾ ಎಣಿಸ್ತಾಳ
ನೀರಿಗೆ ಬಿದ್ದ ಎಮ್ಮಿ ಕೆಚ್ಚಲಾ ನೋಡ್ತಾಳ
ಕುದರಿ ನೆಲಿ ತಿಳೀಲಿಲ್ಲಂತ ಚಿಂತಿ ಮಾಡ್ತಾಳ .....

೨೮೭೭. ಬೀರ ಕುಡಿದ್ರೆ ಸೀತ
ಬ್ರಾಂಡಿ ಕುಡಿದ್ರೆ ಉಷ್ಣ
ನನ್ನ ............ ಳ ಲಗ್ನ ಆಗಿ
ನಾನಾಗಿರುವೆ ತೀರಾ ಕನಿಷ್ಟ.

೨೮೭೮. ಊರ್ತುಂಬಾ ಬಾರು ಬೀರು ಹೆಚ್ಚಾಗಿದ್ದು
ತವರ ಮನಿಗೆ ಹೇರ
ನನ್ನಾಕಿ ........ ಕೇಳ್ತಾಳ ಬೀರ.

೨೮೭೯. ಊರಿಗೆ ಬಂದಾಕಿ
ನೀರಿಗೆ ಬರಲೇ ಬೇಕು
ಊರಿಗೆ ಬಂದಾವ
ಬೀರ್ ಕುಡಿಯಲೇಬೇಕು
ನಾ ..................ಳ ಕದ್ದು ಮುಚ್ಚಿ
ಮನಿಗೆ ತರಲೇಬೇಕು.

೨೮೮೦. ಹೂಡಿಕೆದಾರರಿಗೆ ವರುಷ
ಬ್ಲೇಡ್ ಕಂಪನಿಗೆ ನಿಮಿಷ
ನನ್ನಾಕಿ ...... ಏನs ಒಡ್ಡತಾಳ ತಡ್ರಿ ಒಂದು ನಿಮಿಷ.

೨೮೮೧. ಬ್ಯಾಟ್ ಹಿಡಿದವರೆಲ್ಲ ಸಚಿನ್ ಅಲ್ಲ
ಲಗ್ನ ಆದವರೆಲ್ಲ ದಂಪತಿ ಅಲ್ಲ
ಹಾಳ್ ಹಂಪಿ ನನ್ನಾಕಿ ಮುಳ್ಳ ಕೊಂಪಿ .....

೨೮೮೨. ಅಡಿವಿ ಹಾಳಾಗಿ
ಊರಾಗ ಬಂತು ಹುಲಿ
ಊರು ಹಾಳಾಗಿ
ಹಲ್ಲ ಕಚ್ಚಿ ಹೋತು ಇಲಿ
ನನ್ನಾಕಿ ನನಗ ದಿನಾ ಹಾಕ್ತಾಳ ಬಲಿ ....

೨೮೮೩. ರೈತರು ಮಾಡೂದು ದಂಡಕ್ಕ
ನನ್ನ ಹೇಣ್ತಿ .............. ಮಾಡೂದು ಪಿಂಡಕ್ಕ.

೨೮೮೪. ಜೇನು ಹುಳಾ ಕಡದವರಾಂಗ
ಜಂಗ ಕಟಿಗೊಂಡ ಕುಣೀತಾಳ .....

೨೮೮೫. ಹತ್ತಿ ತೂಗುವಲ್ಲಿ
ನೊಣದ್ದೇನು ಕೆಲಸ
ಪರ ಗಂಡು ಮಕ್ಕಳ ಕೂಡ
ಇವಳದೇನು ಸರಸ ......

೨೮೮೬. ಗುಂಗಿ ಹುಳ ಎಬ್ಬಿಸತಾಳ
ಗೊಂಗಡಿ ಹೊದ್ದು ಮಲಗತಾಳ .....

೨೮೮೭. ಹೊಲದ ತುಂಬಾ ಹಕ್ಕರಕಿ
ಮನ್ಯಾಗ ಮಾವನ ಬಿಕ್ಕಳಕಿ
ಈಕಿ ............ ತವರಮನಿ ಹಕ್ಕಳಕಿ.

೨೮೮೮. ಕ್ವಾರಿ ಹಲ್ಲು
ಕೈಯಾಗ ಕಲ್ಲು
ನನಗ ಮಲ್ಲಾ ಮಾಡಿಕೋತ
ಗುಲ್ಲ ಎಬ್ಬಿಸತಾಳ .....

೨೮೮೯. ಎಮ್ಮಿ ಹುಡಕತಾಳ
ಹಕ್ಕಲದಡ್ಡ್ಯಾಗ
ನಾ ...............ಳ ಹುಡುಕತೀನಿ
ಕೆರಿದಂಡ್ಯಾಗ.

೨೮೯೦. ಗದ್ದ್ಯಾಗ ಎಣಿ ಮಿಂಚ
ಭತ್ತದ ಬೆಳಿ
ಈಕಿ ಹುಟ್ಟದೂರು ಮಾವಿನಕುರಳಿ
ಇದನ ನೋಡಿ ಲೆಕ್ಕಾ ಹಾಕಿದ್ರ
ಸರಿಯಿಲ್ಲ ಇವಳ ತಳಿ .....

೨೮೯೧. ಅತ್ತಿ ಅತ್ತಿಹಣ್ಣು
ಮಾವಾ ಬೇವಿನ ಹಣ್ಣು
ತಾನು ಮಾವಿನ ಹಣ್ಣಂತ
ಹಗಣ ಮಾಡ್ತಾಳ .....

೨೮೯೨. ಊರಿಂದ ತಾರ ಬಂದೈತಂತ
ತರಕಾರ್‍ಯಾಗ ಕೈ ಆಡಸ್ತಾಳ .....

೨೮೯೩. ನಡೆ ನುಡಿ ಅರತಾಕಿ
ಅಡಗಿ ಪಡಗಿ ಕಲ್ತಾಕಿ
ಖಾಲಿ ಜಗಳಾ ಮಾಡಾಕಿ
ತವರ ಮನಿಗೆ ಓಡಾಕಿ .....

೨೮೯೪. ಪಡ್ಡೆಲ್ಲಾ ತಿಂದು
ಪಡ್ಡಿನ ಮಣಿ ನೆಕ್ತಾಳ .....

೨೮೯೫. ಕೊಲ್ಲಾರಿ ಬಂಡಿ
ಬಂಡೀಗೆ ನಾಕೆತ್ತು
ಎಲ್ಲರ ಸರಂಜಾಮು ಕಟಗೊಂಡು
ಎಲ್ಲವ್ವಗ ಹೊಂಟಾಳ .....

೨೮೯೬. ಕಡ್ಡಿ ಗುಡ್ಡಾ ಮಾಡ್ತಾಳ
ಗುಡ್ಡಾ ಕಡ್ಡಿ ಮಾಡ್ತಾಳ
ಮಡ್ಡಿ ಮ್ಯಾಲ ಕುಂತ
ನನಗ ಕಣ್ಣು ಗುಡ್ಡಿ ಹೊರಳಸ್ತಾಳ .....

೨೮೯೭. ದ್ವಾಸಿ ತಿಂತಾಳ ತಿಂದ
ದ್ವಾಸಿ ತೂತು ಎಣಿಸ್ತಾಳ .....

೨೮೯೮. ಹಕ್ಕರಗಿ ತಿಂದ
ಹಗಣಾ ಮಾಡ್ತಾಳ .....

೨೮೯೯. ಬಸಿರ ಇದ್ದೀನಂತ
ಬಾರಿ ಹಣ್ಣ ಕೇಳ್ತಾಳ ....

೨೯೦೦. ಮೂಗು ಹಿಡಿದ್ರ ತಾನs
ಬಾಯಿ ತೆರಿತಾಳ .....

೨೯೦೧. ಮುರುಕ ಹಂಚು ಒಡಕ ಕೊಣಮಿಗಿ
ರೊಟ್ಟಿ ಮಾಡಂದ್ರ ಕೊಟ್ಟೇನಂತಾಳ .....

೨೯೦೨. ಬಾಗಿಲ್ಯಾಗ ನಿಂತ ನನ್ನ
ಬಾಯಿ ಮಾಡಿ ಕರೀತಾಳ .....

೨೯೦೩. ಹೆಂಡಿ ಬಳದ
ಕುಂಡೀಗೆ ಒರಿಸಿಗೋತಾಳ .....

೨೯೦೪. ಹೊರಕಡಿಗೆ ಹೋದಲ್ಲಿ
ಹುರಕಡ್ಡಿ ತಿಂತಾಳ .....

೨೯೦೫. ಜೆಡಿ ಹಿಡಿದು ಜಗ್ಗಿದ್ರ
ಗಗ್ಗರಿ ಕಟಿಗೊಂಡು
ಬರ್ತೀನಿ ತಡಿ ಅಂತಾಳ .....

೨೯೦೬. ಕಲಾಸುಂದರಿ ಹೇಣ್ತಿ ಅಂತ
ಜರತಾರಿ ಸೀರಿ ಕೊಟ್ರ
ಇಲಿ ಕಡಿದೀತಂತ
ಹೆಗ್ಗಣ ಗುದ್ದಿನ್ಯಾಗ ತುರುಕ್ತಾಳ .....

೨೯೦೭. ತೆಲಿಮ್ಯಾಲ ತುಪ್ಪರಿ ಬಳ್ಳಿ
ನನ್ನಾಕಿ ............. ಭಾರಿ ಮಳ್ಳಿ.

೨೯೦೮. ಬಾಗಿಲಿಗೆ ಹಾಕೂದು ಮಾಲಿ
ಕಪಾಟಿಗೆ ಹಾಕೂದು ಕೀಲಿ
ನನ್ನ ............. ಹೆಸರ ಕೇಳಾಗಿ
ಇನ್ನೂ ಅದಾಳ ಬಾಲಿ.

೨೯೦೯. ಕುರಿ ಕುರೀಮರಿ
ಕುದರಿ ಕುದರೀಮರಿ
ನನ್ನ ................ ಹೆಸರ ಹೇಳಾಕಿನ
ಮಂದಕ ಕರಿ.

೨೯೧೦. ಕೈಯಾಗ ಕಡಗ
ರಟ್ಟಾಗೆ ವಂಕಿ
ಕಣದಾಗ ಕಂಕಿ
ಮಗನ್ನ ಕರಕೊಂಡು
ಕುಂಕಿ ಆಡಿಸ್ತಾಳ .....

೨೯೧೧. ಮಕ್ಕಳಾಗಲಿಲ್ಲಂತ
ಮರಾ ಸುತ್ತಾಳ
ಮನಿಗೆ ಬಂದು ನನಗ
ಮಂಗಳಾರತಿ ಮಾಡ್ತಾಳ .....

೨೯೧೨. ಹಂಗಾಮ ಹೋಗಿಂದ
ನಿಂಗಮ್ಮ ಬಸುರಾದ್ರ
ಯಾರ ಮದುವೀಗೂ ಹೋಗೂದಿಲ್ಲ
ಮಂದಿಗೆ ಮುಖಾ ತೋರ್ಸೂದಿಲ್ಲಂತಾಳ .....

೨೯೧೩. ಕತ್ತಿಗೆ ಹತ್ತಿಕಾಳ ಯಾಕೆ ಬೇಕು
ನಮ್ಮ ...............ಗಿಕೆ ಹುಳ್ಳಿಕಾಳ ಅಷ್ಟ ಸಾಕು.

೨೯೧೪. ಹತ್ತ ಮಂದ್ಯಾಗ
ಹರಕತಿ ಮಾಡ್ತಾಳ
ಮನೀಗೆ ಬಂದ
ಮುಸುರಿ ತಿಂತಾಳ .....

೨೯೧೫. ಬರತಾ ಬರತಾ ನನ್ನಾಕಿ
ಬೆರಕಿ ಆಗ್ಯಾಳ
ಅತ್ತಿ ಮಾವಾ ಅಂದ್ರ
ಬೆಂಕಿ ಆಗ್ತಾಳ
ತವರ ಮನೀಗೆ ಹೋಗುನಂದ್ರ
ರಂಗ ಏರ್ತಾಳ .....

೨೯೧೬. ಹಳ್ಳಿ ಮಳ್ಳು ಅಂತ
ನಾ ಮದುವ್ಯಾದ್ಯಾ ಈಕಿ .....
ಡ್ಯಾಡಿ ಮಮ್ಮಿ ಅನ್ನೂದ ಕೇಳಿ
ನಾ ಬೆರಗ್ಯಾದ್ಯಾ.

೨೯೧೭. ಹಿಂಡೂ ಎಮ್ಮೀ ಹಾಲ ಹಿಂಡಂದ್ರ
ಗೊಡ್ಡೆಮ್ಮಿ ಹಾಲ್ ಹಿಂಡಾಕ
ನನ್ನಾಕಿ ........... ಹಾರ್‍ಯಾಡತಾಳ.

೨೯೧೮. ದಿನಾ ಲೈಟ ಹೋಗಲೆಂತ
ಹರಕಿ ಹೊತ್ತಾಳ
ಕತ್ತಲದಾಗ ಕೈಯಾಡ್ಸಿ
ಕಾಲ ಹಿಡಿತಾಳ .....

೨೯೧೯. ಹತ್ತಕ್ಕ ಇಪ್ಪತ್ತು ಮಾಡೂ ಮಂದಿ
ಊರಾಗ ಬಂದಾರ
ಬಂಗಾರ ಹಣ ಗಂಟ್ಕಟ್ಟಿ
ಸಾಲು ಹಚ್ಚ್ಯಾಳ ನನ್ನಾಕಿ .....

೨೯೨೦. ಹೊಸ ಭಟ್ಟ ತೋಟಕ್ಕ ಹೋಗಿ
ನಾಯಿ ತುಳಸಿ ತಂದರ
ನನ್ನಾಕಿ ಹೇಣ್ತಿ ಹೊಲಕ್ಕ ಹೋಗಿ
ನಾಯಿ ಹಕ್ಕರಕಿ ತಂದ್ಲು .......

೨೯೨೧. ಎಡಿ ಹೊಡಿಯುವಾಗ
ಎತ್ತುಹೊಡೀ ಬಾರ್ದು
ನನ್ನ ಹೇಣ್ತಿ ಕೈಯಾಗ
ಹಿರೇತನ ಕೊಡಬಾರ್ದು .....

೨೯೨೨. ಅಗ್ಗೈಯಾಗ ಆರು ಗಿಣಿ
ಮುಂಗೈಯಾಗ ಮೂರು ಗಿಣಿ
ಕುಂತಗೊಂಡು ನನ್ನ ................ಳ
ಗುಣ ಹೊಗಳ್ತಾವು.

೨೯೨೩. ಮೂರು ಕಣ್ಣುಳ್ಳದ್ದು ತೆಂಗಿನಕಾಯಿ
ನನ್ನ ............. ಕಿಗೆ ಯಾವಾಗಲೂ
ಮುಕ್ಕಣ್ಣಗ ಬೇಡ್ತಾಳ ಮಾನಕಾಯಿ.

೨೯೨೪. ಬೇವಿನ ಕಟ್ಟೀ ಮ್ಯಾಲ ಕುಂತ್ಗೊಂಡು
ಬೆಲ್ಲಾ ತಿಂತಾಳ ......

೨೯೨೫. ಹೆಂಡಾ ತಂಬಾಕ ಬ್ಯಾಂಡಂತೈತಿ ಸರಕಾರ
ನನ್ನಾಕಿ ............. ಚಳುವಳಿ ಹೂಡ್ಯಾಳ
ಬೇಡತಾಳ ಸಹಕಾರ.

೨೯೨೬. ಸೂಲಗಿತ್ತಿ ಕಂಡು
ಹೊಟ್ಟಿ ಶೂಲಿ ಅಂತಾಳ .....

೨೯೨೭. ಗಣಪತಿ ಹೊಟ್ಟಿ
ಇಲಿ ಬಾಳ ಗಟ್ಟಿ
ನನ್ನಾಕಿ ............... ಮಾತ
ಬಾಳ ತುಟ್ಟಿ.

೨೯೨೮. ಅಡಿಗಿ ಮಾಡಾಕಂತ ಮದುವ್ಯಾದ್ರ
ಕಡಿಗೂ ಅಡಿಗಿ ಮಾಡೂದು ತಪ್ಪಸಲಿಲ್ಲ ನನಗ .....

೨೯೨೯. ಸರಕಿದಾಕಿ ಸರಗಿ ಇಟ್ರ
ನನ್ನಾಕಿ .............. ಉರ್ಲು ಹಾಕಿಕೊಂಡ್ಲಂತ.

೨೯೩೦. ಸವರಾತ್ರ್ಯಾಗ ಸ್ವಾತಂತ್ರ್ಯ ಬಂದ ಸುದ್ಧಿ
ನನ್ನಕಿಗ್ಯಾಕ ಕುಂಬಕರ್ಣ ನಿದ್ದಿ ..........

೨೯೩೧. ಕೊಡ್ಲಿ ಕಾವು ಕುಲಕ್ಕ ಕುತ್ತು
ನನ್ನಾಕಿ .................... ನನಗ ಮುತ್ತು.

೨೯೩೨. ನೀರಾಗಿದ್ದ ಕಲ್ಲು ನೆನೆಯೂದಿಲ್ಲ
ನನ್ನಾಕಿಗೆ ಬುದ್ದಿ ಎಂದೂ ಬರೂದಿಲ್ಲ .....

೨೯೩೩. ಹೊಳಿದಾಟಿದ ಮ್ಯಾಲ ಅಂಬಿಗ ಮಿಂಡ
ಲಗ್ನ ಆದ ಮ್ಯಾಲ ............ಗೆ ನಾನೇತರ ಗಂಡ.

೨೯೩೪. ಹೊಟ್ಟೀಗೆ ರೊಟ್ಟಿ ಕಟ್ಟಿದರ
ಹೊಟ್ಟೆ ತುಂಬೂದಿಲ್ಲ
ನಮ್ಮ ................ಳು ಕಾಯಂ ಹಟಮಾಡಿದ್ರ
ಪ್ರೀತಿ ಹುಟ್ಟೂದಿಲ್ಲ.

೨೯೩೫. ಕತ್ತೆಗೆ ಲತ್ತಿ ಹೇಟು
ನನ್ನಾ ................ ಕಿಗೆ ಬ್ಯಾಕೋಲದ್ಧೇಟು.

೨೯೩೬. ಬೆಳಗಾತು ಬೀಸೂನು ಅಂದ್ರ
ಬುಸುಗುಡುತಾ ಜೋಳದ ಬುಟ್ಟಿ
ಡಬ್ಬ ಹಾಕ್ತಾಳ .....

೨೯೩೭. ಕತ್ತಿ ಅಂತ ಬೈತಾಳ
ಮತ್ತ ಮುಂದಕ ಕರೀತಾಳ
ಸುತ್ತ ಮುತ್ತ ನೋಡ್ತಾಳ
ಮತ್ತೆ ಮುತ್ತು ಕೊಡ್ತಾಳ .....

೨೯೩೮. ಹಿರೇರಿಗೆ ಮಣಿಯಾಗಿ
ಕಿರೇರಿಗೆ ಒಲಿಯಾಕಿ
ತರತರದ ಅಡಿಗಿ ಮಾಡಾಕಿ
ಕೂಡ್ರಿಸಿ ಹೊಟ್ಟೆ ತಣಿಸಾಕಿ .....

೨೯೩೯. ವಜ್ರದವಾಲಿ ಗೆಜ್ಜಿ ಟೀಕಿ
ಮಜ್ಜಿಗಿ ಮಾಡಿ ಅಜ್ಜಿಗೆ ಹೇಳಿ
ಸಜ್ಜಾಗಿ ಸದ್ದಿಲ್ದ ಬರ್ತಾಳ ....

೨೯೪೦. ಚಂದ್ರಕಾಳೀ ಸೀರಿ ಚೆಂದನ್ನ ಕುಬುಸಾ
ಒಲ್ಲೆಂತಾಳ
ಬಲ್ಲ ಬಲ್ಲಾಂಗ ಬಂಗಾರ ತಾಟಿನ್ಯಾಗ
ಉಂಡೇನಂತಾಳ .......

೨೯೪೧. ನಾಯ ಮ್ಯಾಲ ನಕ್ಕೊಂತ ಕುಂತ
ನ್ಯಾಯಾಧೀಶ ಆಗ್ಯಾಳ ......

೨೯೪೨. ಬೆಳ್ಳಿಯಂಥ ಬಾಯಿ ತೆರದು
ಬೆಳ್ದಿಂಗಳಂಥ ನಗಿ ಬೀರ್‍ತಾಳ .......

೨೯೪೩. ಇಬತ್ತಿ ಉಂಡಿ ಬಂಗಾರ ಗಿಂಡಿ
ಭಕ್ತಿಲಿಂದ ಬಸವಣ್ಣಗ ಹೋಗ್ತಾಳ .....

೨೯೪೪. ಒಂದೂರು ಗೌಡ ಇನ್ನೊಂದೂರ ಕರಕಟ್ಟೊ ಗೂಟ
ಬಂಗಾರ ಕೊಟ್ರ ನೀಟ ಇಲದಿದ್ರ ಆಕಿದು ಬಾಳಾ ಕಾಟ .....

೨೯೪೫. ಮುತ್ತಿನಂಥ ಜ್ವಾಳದ ತೆನಿ
ಈ ಹೇಣ್ತಿ ............ ಬೆನ್ನ ಬಿದ್ದ ಶನಿ.

೨೯೪೬. ನತ್ತು ಬೇಡಿ ನಗ್ತಾಳ
ಮುತ್ತು ಕೇಳಿದ್ರ ನಾಚ್ತಾಳ .....

೨೯೪೭. ಸವತಿ ಅದಾಳಂತ ಸೆಟಗೊಂಡಾಳ
ಅಲ್ಲ ಅಂತ ತಿಳಿದು ಗಲ್ಲಾ ಕೊಡ್ತಾಳ .....

೨೯೪೮. ಅಕ್ಕ ಅವಸರ ತಂಗಿ ನಿಧಾನ ಅಂದ್ರ ಗಡಿಯಾರ
ನನ್ನ ................ ಳು ಸುಮ್ ಸುಮ್ನ ಮಾಡ್ತಾಳ ಬಡಿವಾರ.

೨೯೪೯. ಅಕ್ಕಿಗೆ ಅಗುಳಿಲ್ಲ ಅಂದ್ರ ಯಾಲಕ್ಕಿ
ತುಪ್ಪಕ್ಕ ಕಂಪಿಲ್ಲ ಅಂದ್ರ ಜೇನುತುಪ್ಪ
ನನ್ನಾಕಿ ...............ಳ ಪ್ರೀತಿ ಅಂದ್ರ ಹೆತ್ತುಪ್ಪ.

೨೯೫೦. ಅಂಗಡ್ಯಾಗಿ ಮಾರೂದಿಲ್ಲ
ತಕ್ಕಡ್ಯಾಗಿಟ್ಟು ತೂಗುದಿಲ್ಲ
ಇದರ ಉತ್ತರ ಸೆಗಣಿ ಆದ್ರ
ನನ್ನ ಹೇಣ್ತಿ ಅಂದ್ರ ನನ್ನ ಹಾಸ್ಗಿ ತಗಣಿ.

೨೯೫೧. ಅಂಗೈದಾಟು ದಪ್ಪರೊಟ್ಟಿ
ನನ್ನಾಕಿ ................ ನೀರು ಹೊರುದಕ
ಬಾಳಾ ಗಟ್ಟಿ.

೨೯೫೨. ಅಂಗಿ ಕಳಿ ಭಾವ್ಯಾಗ ಇಳಿ
ಅಂದ್ರ ಬಾಳೀಹಣ್ಣು
ನನ್ನ ಹೆಣ್ತೀದು ಬಂಗಾರ ಮ್ಯಾಗ ಕಣ್ಣು.

೨೯೫೩. ಅಟ್ಟ್ರ ಅಡಿಗಿ ಬಿಟ್ಟ್ರ ಬಡಗಿ ಆಗೂದ ನುಗ್ಗೇಕಾಯಿ
ನನ್ನಾಕಿ ...... ಆಗ್ಯಾಳ ಕುಂಬಳಕಾಯಿ.

೨೯೫೪. ಅಪ್ಪ ಅಂದ್ರ ಮುಟ್ಟತಾವು
ಅವ್ವ ಅಂದ್ರ ಮುಟ್ಟೂದಿಲ್ಲ
ಇದರ ಉತ್ತರ ತುಟಿ ಅಂದ್ರ
ನನ್ನ ಹೇಣ್ತಿ ನೀ ಒಗಟ ಹೇಳಿ ಸೆಟಿ ಅಂತಾಳ .......

೨೯೫೫. ಅತ್ತೀ ಮನಿಗೆ ಅಳಿಯಾ ಹೊಂಟ್ರ
ಏನ್ ಹಿಡಕೊಂಡು ಹೋದಾ ಅಂತ
ನಾನು ಕೇಳಿದ್ರ ದಾರಿ ಅನ್ನೂದದೇನ ಗೊತ್ತು
ದಂಟ ಅಂತಾ ಉತ್ತರಾ ಹೇಳ್ತಾಳ .....

೨೯೫೬. ನೊಣಾ ಹಿರೇರ ಕೂಡ ಊಟ ಮಾಡಿದ್ರ
ನನ್ನ ಹೇಣ್ತಿ ...... ನನ್ನಗೂಡ ಊಟಾ ಮಾಡ್ತಾಳ.

೨೯೫೭. ಎರಡು ಮನಿಗೆ ಒಂದೇ ಕಂಬಾ ಹೀಂಗ ಮೂಗಿದ್ದ
ನನ್ನಾಕಿ ................ ನನಗ ರಂಭಾ.

೨೯೫೮. ಕಬ್ಬಿಣಕೊಡಕಲ್ಲಪಡ
ನನ್ನಾಕಿ ಮಾಡೂದು ಬರೀಕಡ .....

೨೯೫೯. ಕರದರ ಬರಲಿಲ್ಲ
ಸೊನ್ನಿ ಮಾಡಿದರ ಬರ್ತಾಳ .....

೨೯೬೦. ಕಿರಿಗೆರೆ ಬರಿಗೆರೆ ತುಂಬಿದ ಕೆರೆ
ಅಂದ್ರ ತೆಂಗಿನಕಾಯಿ, ಗಿಟುಗ, ಎಳನೀರು
ತೆಂಗಿನಕಾಯಿ ದೇವರಿಗೆ ಕೊಡ್ತಾಳ
ಗಿಟಗಾ ರುಬ್ಬಿ ಅಡಿಗಿ ಮಾಡ್ತಾಳ
ಎಳನೀರು ಕುಡಿದು ಒಳಕಲ್ಲ ನೆಕ್ಕತಾಳ .....

೨೯೬೧. ಮುನಿಹಾಂಗ ಕೂಡ್ರತಾಳ
ಹನುಮಂತನಾಂಗ ಹಾರ್ತಾಳ
ಮಂಗ್ಯಾನ ಕೂಡ ಆಡ್ತಾಳ
ಮಂಗೀಯಂತಾಕಿ .....

೨೯೬೨. ಕರೀಸೀರಿ ಗರತಿ
ಗಿಡದಾಗ ಇರತಿ
ಕರದರ ಬರತಿ
ನೀರಲಹಣ್ಣಿನಂತಾ ನನ್ನ ಸವಿಗಾರ್ತಿ .....

೨೯೬೩. ಕಂಬದ ಮ್ಯಾಲ ಲಿಂಬಿಕಾಯಿ
ಲವಂಗದ ಮ್ಯಾಲ ಕುಂತ ಲಾಗಾ ಹಾರ್ತಾಳ .....

೨೯೬೪. ಕೆಂದ ಎತ್ತಾಗಿ ಕೆರ್‍ಯಾಗ ಇಸೂದು
ಕರಿಗಡಬು
ಕೆಂಪು ಕುದುರಿ ಕರಿಥಡಿ
ಬೆಂಕಿ ಹಂಚು
ಕರಿಗಡಗತಿಂದ ಹಂಚಿನ ಮ್ಯಾಲ
ಹಗಣಾ ಮಾಡ್ತಾಳ ಗುಲಗಂಜಿಯಂತಾಕಿ .....

೨೯೬೫. ಗಚ್ಚಿನ ಮನಿಗೆ ಬಾಗಿಲೇ ಇಲ್ಲ
ಬಾಗಲಾ ಮುರುದು ಗತ್ತ್ ಮಾಡಿ
ತತ್ತಿ ತಿಂತಾಳ .....

೨೯೬೬. ಗುಡಿಯಾಗ ಕುಂತ
ಗಂಟಿ ಹೊಡಿತಾಳ .....

೨೯೬೭. ಗುದುಗರಂಡಿ ಹುದುಲಾಗ ಮಲಗ್ಯಾಳ .....

೨೯೬೮. ಚಿಕ್ಕಮನಿಗೆ ಚಿನ್ನದ ಬೀಗ
ಇದರ ಉತ್ತರ ಮೂಗತಿ ಅಂದ್ರ
ಮುಗೇರಿಸ್ತಾ ಮುಂದಕ ಬರ್ತಾಳ .....

೨೯೬೯. ಗುಡಿಯಾಗ ಕುಂತ
ಗಡಬಡಾ ಮಾಡತೈತಿ ಗಂಟೆ
ನನ್ನಾಕಿ ............ಳದು ಅದೇ ತಂಟೆ.

೨೯೭೦. ಗದುಗರಂಡಿ ಹುದಲಗ ಸಿಕ್ಕಾಳ
ರುಬ್ಬು ಗುಂಡಿನಂತಾಕಿ .....

೨೯೭೧. ಬಳಿ ಇಡಿಸಿಕೊಂಡು
ಬಳಿಗಾರನ ಕೂಡ
ಬಳ್ಳಾರಿಗೆ ಹೋಗ್ತಾಳ .....

೨೯೭೨. ಗುಡಿಯೆಲ್ಲಾ ಕರ್‍ರಗ
ದೇವರಿದ್ದಾನ ಬೆಳ್ಳಗ
ಅನ್ನಾ ಉಣ್ಣಂದ್ರ ಗಿಣ್ಣಾ ಕೇಳ್ತಾಳ .....

೨೯೭೩. ಗುಡಾರದ ತುಂಬಾ ಗುಗ್ಗರಿ
ಚಿಕ್ಕಿಗಳ ಕೂಡ ಚೆಲ್ಲಾಟ ಆಡ್ತಾಳ .....

೨೯೭೪. ಗಣಪ್ಪ ಇಲಿ ಮ್ಯಾಲೆ
ಷಣ್ಮುಖ ನವಿಲಿನ ಮ್ಯಾಲೆ
ಶಿವಪ್ಪ ಎತ್ತಿನ ಮ್ಯಾಲೆ
ನನ್ನ ............. ಕಿ ನನ್ನ ಹೆಗಲ ಮ್ಯಾಲೆ.

೨೯೭೫. ಕಬ್ಬ ತಿಂದರ ರಸ
ಉಗುಳಿದರೆ ಕಸ
ನನ್ನಾಕಿ ವ್ಯವಹಾರ ಬಲು ಹಸಾ .....

೨೯೭೬. ತುಂಬು ಇಲ್ಲದ ಲಿಂಬಿಕಾಯಿ ಅಂದ್ರ
ತತ್ತಿ ಅಂತಾ ಉತ್ತರ
ನನ್ನ ..... ಹೇಣ್ತಿ ಹಣೆಬರಹ ಕೆಟ್ಟ
ಮಕ್ಕಳಿಲ್ಲದ ಬದುಕಿ ಆಗ್ಯಾಳ ತತ್ತರ.

೨೯೭೭. ಗಿಡದಾಗ ಜೇನು
ನಮ್ಮಾಕಿ ತಲ್ಯಾಗ ಹೇನು .....

೨೯೭೮. ಮನೆಯಲ್ಲಾ ಅಡ್ಡಾಡಿ ಗಸಗಸ ಮಾಡ್ಕೋತ
ಮೂಲ್ಯಾಗ ಕುಂದರತ್ತಾಳ ಕಸಬರಿಗಿ ನನ್ನಾಕಿ .....

೨೯೭೯. ತೆಂಗಿನ ಮರದಾಗ ಕುಂತು
ಮಂಗನಂತೆ ಮಾಡ್ತಾಳ .....

೨೯೮೦. ಬಾಳೆಗೆ ಒಂದೇ ಗೊನೆ
ಚೇಳಿಗೆ ಒಂದೇ ಬಸಿರು
ನನ್ನರಾಣಿ ಮೆಯ್ತಾಳ ಇದ್ದಲ್ಲಿ ಹಸಿರು .....

೨೯೮೧. ಹುಡುಕೂ ಬಳ್ಳಿ ಕಾಲ್ಗೆ ತೊಡಕೈತಿ
ಈಕಿ ..... ಮಾಡಿದ ಊಟಾ ತಿಂದು ಹೊಟ್ಟೆ ಕೆಟ್ಟೈತಿ.

೨೯೮೨. ಗೋಡಂಬಿ ತಿಂದು
ಗೊರಕಿ ಹೊಡಿತಾರ.

೨೯೮೩. ಹಿಡಿದ್ರ ಹಿಡಿ ತುಂಬ ಇರ್‍ತಾಳ
ಬಿಟ್ರ ಮನಿ ತುಂಬ ಆಗ್ತಾಳ
ದೀಪದಂತಾಕಿ ದೀಪದ ಬೆಳಕಿನಂತಾಕಿ
ನನ್ನ ಸೇವಾ ಮಾಡಾಕಿ .......

೨೯೮೪. ಹಿಂಡ ದನಕ ಒಂದs ಹೊತ್ಲ ಜೇನು ತುಪ್ಪ
ನನ್ನ ಹೇಣ್ತಿ ಕಳ್ಳೀ ಕಟಗಿ, ಹಾಕ್ತಾಳ ಹಾಲಿಗೆ ಹೆಪ್ಪ.

೨೯೮೫. ಹುಟ್ಟಿದ ಕೂಡ್ಲೆ ಹೂಸು ಬಿಡುತಾಳ
ಕೋತಂಬ್ರಿಯಂತಾಕಿ ......

೨೯೮೬. ಮುಳ್ಳಿನ ಮನ್ಯಾಗ ಕುಂತು
ಮುಸಿ ಮುಸಿ ನಗ್ತಾಳ ನನ್ನ ಗುಲಾಬಿ ಕೆಂಪಿ .....

೨೯೮೭. ಮುಟ್ಟತ್ಲೆ ಮಾರಿ ತಿರುವುತಿ–
ಮೈ ಮುಚಗೊಂಡು ಬಿದ್ದಿರತಿ
ಒಳಮುಚಗನಂತಾಕಿ .....

೨೯೮೮. ಮಾರೀ ತುಂಬಾ ತೂತು ಇಟಗೊಂಡ
ಕರೆ ಹೊಲ್ದಾಗ ಕ್ಯಾಕಿ ಹಾಕತಿ ದ್ವಾಸಿಯಂತಾಕಿ .....

೨೯೮೯. ಮೂಗು ಕೊಯ್ಸಿಕೊಂಡು
ಮುಗಿಲು ನೋಡ್ತಾಳ
ನನ್ನ ಕಾಲಿಗೆ ಮೂಲಾಗಿ ಬಿದ್ದಾಳ
ಜೋಳದ ದಂಟಿನ ಕೋಲಿಯಂತಾಕಿ .....

೨೯೯೦. ಮೂಗನೂರ ಮಾವಿನಕಾಯಿ
ಬೇಗನೂರ ಬೇವಿನಕಾಯಿ
ಮೆಣಸಿಗಿ ಮೆಣಸಿನಕಾಯಿ
ನನ್ನ ............. ಳ ಹೆಸರು ಎಕ್ಕಿಕಾಯಿ.

೨೯೮೧. ವಟಕೀ ಪಾವುಡ ಎಲಿಟ್ಟಿಯೇ ಸೊಸಿ ಅಂತಾ
ಅತ್ತೆ ಕೇಳಿದ್ರೆ, ಮಸಿ ಅರಿವೆ ಅಂತಾ ಹೇಳದೆ
ಅದು ಕಾಯಿಯೋ ಕಡಿಯಲೆ
'ಹೂವೇ ಮುಡಿಯಲೇ
ಕಟ್ಟಾಣಿ ಸರ ಹಾಕಿಕೊಳ್ಳಲೇ ಎನಬೇಕೇ ನನ್ನಾಕಿ ಪೆದ್ದಿ .....

೨೯೮೨. ಮೂಗಿನ್ಯಾಗ ಗಿಣ್ಣಾ ತುಂಬಿಕೊಂಡು
ಮುಗಬಟ್ಟು ಬೇಕಂತ
ಮುಂಗಲಿತರ ಓಡ್ಯಾಡತಾಳ .....

೨೯೮೩. ಹಾಡುವವರನ್ನ ಕಂಡು
ಪೇಟಿ ಬೇಕಂತಾಳ
ಕುಂಬಾರ್ನ ಕಂಡು
ಗಡಿಗಿ ಕೇಳ್ತಾಳ
ಡೊಳ್ಳಬಾರಿಸ್ಸುದು ಕಂಡು
ಡೊಳ್ಳು ಕಟಿಗೊಂಡ
ಕುಣಿತೀನಿ ಅಂತಾಳ .....

೨೯೯೪. ಸಪ್ಪಳಿದ್ರು ಚಪ್ಪಾಳಿ ಹಾಕ್ತಾಳ
ಸುಮ್ನ ಇದ್ದ್ರೂ ಸೊನ್ನಿ ಮಾಡ್ತಾಳ
ಸೊನ್ನಿಗೇಡಿ ಅಂದ್ರ ಸಿಟ್ಟೀಗೆ ಬರ್ತಾಳ .....

೨೯೯೫. ಸುರಗಿ ಶಾಂತವ್ವ
ಮುರಗಿ ಮಾಂತಪ್ಪ
ನನ್ನಾಕಿ ಅದಾಳ ಹುಳಕಮಾರಿ ಹೊನ್ನವ್ವ .....

೨೯೯೬. ಹಾದ್ಯಾಗ ಹುಟ್ಟಿ ಹಾದ್ಯಾಗ ಬೆಳೆಯೂ
ಉಡ್ರಾಣಿ ಕಡ್ಡಿ ನನ್ನಾಕಿ .....

೨೯೯೭. ಕೊಳ್ಳಾಗ ಕರೇಮಣಿ ಎಳಿ
ಕೈಯಾಗ ಕೋಡಬಳಿ
ಗದ್ದ್ಯಾಗ ಬಿದಿರಿನ ಫಳಿ
ತಿನ್ನಾಕಿಬೇಕು ಶಂಕರಪಾಳಿ
ಬಡ್ಯಗಾರಂತೀರುದು ಉಳಿ
ತೋಟದಾಗಿರೂದು ಒಳ್ಳೆ ಮಾವಿನ ತಳಿ
ಆನಿ ಕಾಲಿಗೆ ಹಾಕ್ಯಾರ ಸರಪಳಿ
ತಳಿ ಸುದ್ದ ಇಲ್ದ ನನ್ನ ಲಗ್ನ ಆಗಿ ದಾಟ್ಯಾಳ ಹೊಳಿ .....

೨೯೯೮. ತಟ್ಟಿಯಂಥ ಕೂದಲ
ಮಟ್ಟಿಯಂಥ ಹೊಟ್ಟಿ
ಕೆಂಜಗಿಯಂಥ ಕಣ್ಣು
ಮರದಂಥ ಕಿವಿ
ಕಿವಿ ತುಂಬಿದ ಕೂಕಣಿ ತಗದು
ತೆಲಿಗೊರೆಸಿಗೊಂತಾಳ ....

೨೯೯೯. ಇಂಗಳ ಮ್ಯಾಣಾ
ಕಾಮಣೀಗೆ ಮದ್ದು
ಎಲ್ಲರಿಗೂನು ಇಸ ಇಟ್ಟಾಕಿ ನನ್ನಾಕಿ
ನಾಗರ ಹಾವಿನಂತಾಕಿ .....

೩೦೦೦. ಸರಗಿ ಇಟಗೊಂಡು
ಸೋಗು ಮಾಡ್ತಾಳ
ಸಂಪಿಗಿ ತೆನಿಯಂತಾಕಿ .....

೩೦೦೧. ಕಟಬಾಳಿ ಕೋಣ ಅಂತಾ ಗುದ್ದಿ ಕಟ್ಟದರ
ನನಗೂ ಬೇಕು ಅಂತಾ ನೆಲಾ ಗುದ್ದಿ ಅಳ್ತಾಳ .....

೩೦೦೨. ನೆಂಟರ ಮನಿಗೆ ಹೋದ್ರ
ಸುಳ್ಳ ನೆವಾ ತಗಿತಾಳ
ಸೊಂಟ ಮುರದೈತಂತ
ಸುಳ್ಳ ಸೋಗ ಮಾಡ್ತಾಳ .....

೩೦೦೩. ಸೋದರ ಮಾವನ ಮಗಳಂತ
ಮದುವ್ಯಾದ್ಯಾ
ಮದುವಾಗಿ ಈಕಿ ಕೈಯಾನ ಕಸಬರಿಗಾದ್ಯಾ ....

೩೦೦೪. ಉದ್ದಿದ್ದ ಹೆಣ್ಣಿಗೆ ಬುದ್ದಿಲ್ಲಂದ್ರ
ಗಿಡ್ಡಿ ನನ ಹೇಣ್ತಿ ಹೆಗಲೇರಿ ಕುಂತ್ಲು .....

೩೦೦೫. ಸಲಿಗಿ ಕೊಟ್ಟ ನಾಯಿ
ತೆಲಿಗೇರಿದ್ರ
ಸಲಿಗಿ ಕೊಟ್ರ ಕಡಗೋಲ ಹಿಡಕೊಂಡ
ತೆಲಿಗೇರಿ ಕುಂತಾಳ .....

೩೦೦೬. ಮಂದಿ ಬಂದಾರ ಸುಬ್ಬಿ
ಸುಮ್ಮನಿರು ಅಂದ್ರ
ಸುಮ್ಮನಿರಾಕ ಸಂಬಳೆಷ್ಟು ಅಂತಾಳ .....

೩೦೦೭. ಗಂಡನ ಮನಿ ಬಿಟ್ಟು ಬಂದು
ಗುಂಡಕಲ್ಲ ಆಗ್ಯಾಳ ಗಂಡುಬೀರಿ .....

೩೦೦೮. ಸಂಗಟಿ ಸಾರು
ಹಾಲಿನ ಕೀರು
ಸ್ವಾಟಿ ತಿರಿವಿಕೋತ
ನೀಟಾಗಿ ಸುರಿತಾಳ .....

೩೦೦೯. ಕೊಬ್ರಿ ಬೆಲ್ಲಾ ಗೊತ್ತಿಲ್ದ ತಿಂದ
ಕೊಬ್ಬೇರಿ ಕುಂತಾಳ .....

೩೦೧೦. ಸಂತ್ಯಾಗ ಸೆಳ್ಳು ಹೊಡೀತಾಳ
ಮನೀಗೆ ಬಂದ ಮಕ್ಕಳನ್ನ ಬಡೀತಾಳ .....

೩೦೧೧. ಬಂದದ್ದು ಬರಲಿ
ದಯ ವೊಂದಿರಲಿ
ನನ್ನಾಕಿಗೆ ಬುದ್ಧಿ ಎಂದಾರ ಬರಲಿ .....

೩೦೧೨. ಸುಗ್ಗಿ ಮಾಡಾಕ ಹ್ವಾದಲ್ಲಿ
ನೀರಿಲ್ಲ ಸೂರಿಲ್ಲ
ಸಿನೇಮಾ ನೋಡಾಕ ಕರಿತಾಳ ....

೩೦೧೩. ಅಲ್ಲಮನನ್ನು ತಾಮಸಿಯಾಗಿ ಕಾಡಿದ್ದು ಮಾಯಿ
ನನ್ನಾಕಿ ಉರಿ ಉರಿ ಉರಿತಾಳ ಒಣಮೆಣಸಿನಕಾಯಿ .....

೩೦೧೪. ಸಲಾವಳಿ ಬಾರದ
ಸೋದರ ಸೊಸಿ ಮದುವೆಯಾದೆ
ಮೂರು ಮಕ್ಕಳಾದ್ರೂ
...................ಳ ತಗಲಬಾಜಿಗೆ ನಾ ಪ್ಯಾಲ್ಯಾದೆ.

೩೦೧೫. ಒಡ್ಯಾಣ ಇಟಗೊಂಡು
ಗೊಡ್ಡೆಮ್ಮಿ ಹಿಂಡತಾಳ .....

೩೦೧೬. ಗಂಡಾಳ ಹಿಂದ ಹೊಲಕ ಹೋಗ್ತಾಳ
ಮಾರಿ ನೋಡಿ ಮೊಳಾ ಹಾಕ್ತಾಳ .....

೩೦೧೭. ಗಂಡ ಸೊಟ್ಟ ಮಾರಿ ಸೊಟ್ಟ ಮಾರಿ
ಅಂತಾನಂತ ಬೈದರ
ಅಕ್ಕಸಾಲಿ ಹತ್ತಿರ ಹೋಗಿ
ನನ್ನ ಮಾರಿ ನೆಟ್ಟಗ ಮಾಡಿದ್ರ
ಗಟ್ಟಿ ಬಂಗಾರ ಕೊಡ್ತೀನಿ ಅಂದ್ಲಂತ .....

೩೦೧೮. ತಗಣಿ ಮ್ಯಾಲ ಕುಂತ
ತಡರಿಸಿಕೋತ ಬರತಾಳ .....

೩೦೧೯. ಕರೆಂಟ ತಂತಿ ಮ್ಯಾಲ ಕುಂತ
ಕರೆಂಟ ಬಂದಿಲ್ಲಂತ ತಾರ ಕೊಡ್ತಾಳ .....

೩೦೨೦. ಬುದ್ದಿ ತಿದ್ದಿಕೋ ಅಂದ್ರ
ಸುಮ್ನ ಬಿದ್ದುಕೋ ಅಂತಾಳ ನನ್ನ ರಾಣಿ .....

೩೦೨೧. ಗತಿ ಇಲ್ದ ಮನಿಗೆ
ದೇವರೇ ಗತಿ
ಮತಿಗೆಟ್ಟವಳಿಗೆ
ನಾನೇ ಪತಿ .....

೩೦೨೨. ಬೆಳ್ ಬೆಳ್ತನಾ ನಿದ್ದಿಗೆಡಿಸಿ
ಬೆಳಗೂ ಮುಂಜಾನೆ
ನನಗ ಊಟಕ್ಕೇನು ಅಂತಾಳ ....

೩೦೨೩. ಸಂತಿಗೆ ಬರ್ತಾಳ
ಈರುಳ್ಳಿ ತರ್ತಾಳ
ಮುಂದ ಕುಂತಗೊಂಡ ಅಳ್ತಾಳ .....

೩೦೨೪. ಕೇಳಿದ್ದ ಕೊಡತೈತಿ ಕಾಮಧೇನು
ನನ್ನ ರಾಣಿ ............ ತೆಲ್ಯಾಗ ಬರೀ ಹೇನು.

೩೦೨೫. ಗುಡಿಗಂಟೆ ನಾದಾ ಮಾಡಿದರ
ನನ್ನಾಕಿ ..... ಗಿಡಾಯೇರಿ ಭಜನಾ ಮಾಡ್ತಾಳ.

೩೦೨೬. ಕಳ್ಳಿ ಹಾಲ್ಗೆ ಹೆಪ್ಪು ಹಾಕಿ
ಮಳ್ಳರ ಕೂಡ ಮಜ್ಜಿಗಿ ಕಟಿತಾಳ .....

೩೦೨೭. ಶಿವನ್ನ ಮಳ್ಳ ಮಾಡಿದಾಕಿ ಗಂಗಿ
ನನ್ನ ಮಳ್ಳ ಮಾಡಿದಾಕಿ ಮಾತಿಲ್ಲದ ಗುಂಗಿ ನನ್ನಾಕಿ .....

೩೦೨೮. ಅಕ್ಕರೆ ಇಲ್ಲದ ಮನೆಯಲ್ಲಿ
ಬಿಕ್ಕಿ ಬಿಕ್ಕಿ ಅಳ್ತಾಳ .....

೩೦೨೯. ಅಟ್ಟ ಸ್ವರ್ಗವಲ್ಲ ಘಟ್ಟ ಪರ್ವತವಲ್ಲ
ನನ್ನಾಕಿ ..... ಬರೆ ಅಂದ್ರ ಜಾಣೆಯಲ್ಲ.

೩೦೩೦. ಅನುಭವ ಇರುವಲ್ಲಿ
ಅಮೃತಾ ಇರತೈತಿ
.............ಳಿಗೆ ಹೊಟ್ಟೆ ಹಸ್ತಾಗ
ಉಣ್ಣೂದು ಗೊತ್ತೈತಿ.

೩೦೩೧. ಅಳದಿದ್ದರೆ ಅವ್ವನ ಹಾಲೂ ಸಿಗಂಗಿಲ್ಲ
ನನ್ನಾಕಿ ಹಟಕ್ಕ ಬಿದ್ದ್ರ ಕಡೆತನಕ ಯಾರಿಗೂ ಕಿಮ್ಮತ್ತಿಲ್ಲ .....

೩೦೩೨. ತತಿನೋಡಿ ಬಿತ್ತಬೇಕು
ಆಯಾ ನೋಡಿ ಪಾಯಾ ಹಾಕಬೇಕು
.............ಳಿಗೆ ತಿಳಿ ಹೇಳಾವಗ ಬ್ಯಾಕೋಲ ಬೇಕು.

೩೦೩೩. ಸಾವಿರ ಕುರಿಗಿಂತ ಒಂದು ಸಿಂಹ ಲೇಸು
ನನ್ನ .............ಳು ಸಿಂಹಕ್ಕಿಂತ ಕುರಿಯಾಗಿರುವುದೇ ಲೇಸು.

೩೦೩೪. ಸಸಿಯಾಗಿ ಬಗ್ಗದ್ದು ಮರವಾಗಿ ಬಗ್ಗುವುದಿಲ್ಲ
.................ಳು ಮೊದಲೇ ಮರವಾದವಳು ಸಸಿಯಾಗುವುದಿಲ್ಲ.

೩೦೩೫. ಹಣ್ಣಾದ ಮೇಲೆ ಬೇವಿನ ಕಾಯಿ ಸಿಹಿ
ಹೆಣ್ಣಾದ ಮೇಲೆ ಮನೆತುಂಬ ಬೆಳಕಾದ್ರ ಎಲ್ಲಾ ಸಿಹಿ .....

೩೦೩೬. ಬರೇ ಪ್ರೀತಿಯಿಂದ
ಹೊಟ್ಟೆ ತುಂಬೂದಿಲ್ಲ
ನನ್ನ ........... ಳ ದಡ್ಡತನದಿಂದ
ಸಂತೋಷವೆಂಬುದಿಲ್ಲ.

೩೦೩೭. ನಮ್ಮಾವ ನನ್ನ ಬಿಟ್ಟರೂ
ಮಾವನ ಮಗಳು ನನ್ನ ಬಿಡಲಿಲ್ಲ .....

೩೦೩೮. ಮನೆ ಬಿಟ್ಟ ಹೆಣ್ಣು
ಮರ ಬಿಟ್ಟ ಮಂಗ
ನನ್ನಾಕಿ ತೊರೆದಿಹಳು ಸುಮ್ಮನೇ
ನನ್ನ ಸಂಗ .....

೩೦೩೯. ಮಳಿ ನೀರು ಬಿಟ್ಟು
ಮಂಜಿನ ನೀರು ಹಿಡಿತಾಳ .....

೩೦೪೦. ಧರಣಿ ಮಳಿ ಭೂಮಿಗೆ ಗಂಡ
ನನ್ನಾಕಿ ಕಣ್ಣೀರ ಹೊಳೆ ಮನೆಗೆ ದಂಡ .....

೩೦೪೧. ತೆಂಗಿನ ತೋಟದಾಗ
ಬಾಳೆ ಚೆಂದ
ಬಾಳುಳ್ಳವರ ಮನ್ಯಾಗ
ಈಕಿ ಪೂಜೆ ಪುನಸ್ಕಾರ ಚೆಂದ .....

೩೦೪೨. ಸಾದ ಎತ್ತಿಗೆ ಜೋಡು ಸಬರ ನನ್ನಾಕಿ
ಹೇರ್ತಾಳ ಅತ್ತಿ ಮಾವ್ಗ ಮೂರು ಸಬರ .....

೩೦೪೩. ನಾಟಿ ಹಾಕಿದ ಹೊಲ ಚೆಂದ
ನಮ್ಮ ಮನೆತನಕ ಈಕೆಯೇ ಚೆಂದ .....

೩೦೪೪. ಹಾಳು ಗ್ವಾಡಿ ಮಳ್ಯಾಗ ಮೆತ್ತತಾಳ .....

೩೦೪೫. ಮನೆಗೊಂದು ಮುದುಕಿ ಇರಬೇಕು
ಹೊಲದಾಗೊಬ್ಬ ಮುದುಕ ಇರಬೇಕು
ನನ್ನಾಕಿ ಹೋದು ಮನೆ ಕಾಯ್ತಿರಬೇಕು .....

೩೦೪೬. ಸೂಲಗಿತ್ತಿ ಕಂಡು
ಹೊಟ್ಟೆ ನೋಯಿಸತ್ತೈತಿ ಅಂತಾಳ .....

೩೦೪೭. ಕೌದಿಗೆ ಪಡಿ ಹಚ್ಚುವಾಗ
ನನ್ನ ............ಳು ಪಾರ್ವತಿ ನೆನಸಿದ್ಲಂತ.

೩೦೪೮. ಇದ್ದ ಅತ್ತಿ ಮಾವಾ ಸತ್ತರಂತ ಸುದ್ದಿ ಕೇಳಿ
ಶ್ಯಾವಗಿ ಬಸದು ಐನೋರ್ನ ಕರಿಸಿದ್ಲಂತೆ ನನ್ನ ಸುಂದರಿ .....

೩೦೪೯. ಶಿವಶರಣರಿಗೆ ಭಕ್ತಿ ಹುಚ್ಚು
.............. ಳಿಗೆ ಆಭರಣದ ಹುಚ್ಚು.

೩೦೫೦. ಗಂಡಗ ಗೊತ್ತಾಗದೆ
ಉಂಡು ಮಲಗತಾಳ .....

೩೦೫೧. ಕಬ್ಬಿನ ಹೊಲ್ದಾಗ ಕುಂತ
ಉಬ್ಬುಬ್ಬಿ ಕಬ್ಬು ರುಬ್ಬರಾಳ .....

೩೦೫೨. ಶಿವದಾರಾ ಹಿಡಕೊಂಡು
ಶಿವನ್ನ ಎಳದ ತರ್ತೇನಂತಾಳ ಶಿವಭಕ್ತೆ .....

೩೦೫೩. ಖಾಲಿ ಖಾಲಿ ಕುಂತಗೊಂಡು
ಥಾಲಿ ಬಾರಿಸ್ತಾಳ ಬೇಬರ್ಸಿ .....

೩೦೫೪. ಗಾಂಧಿ ಹೆಸರು ಇರೂತನಾ
ಸೇಂದೀ ಇರತೈತಿ
ನನ್ನಾಕಿ ಡೌಲು ಇರೂತನಾ
ಡೋಲಿ ಹೊರಾವರು ಇದ್ದs ಇರತಾರ .....

೩೦೫೫. ಬಂಡಿಮ್ಯಾಲ ಕುಂತಗೊಂಡು
ದಂಡಯಾತ್ರೀಗೆ ಹೋಗ್ತಿನಂತೈತಿ ಹಸಗೇಡಿ .....

೩೦೫೬. ಹೊಟ್ಟೆ ಕಿಚ್ಚಿಗೆ ಬಿಕ್ಕಿ ಬಿಕ್ಕಿ ಅಳೂವಾಗ
..............ಳು ನೆಕ್ಲೇಸ ಕೇಳ್ತಾಳ ನಾಚಿಗ್ಗೇಡಿ ......

೩೦೫೭. ಇಂದಿರಾಗಾಂಧೀನ ಬೇರೆ
ಮಹಾತ್ಮ ಗಾಂಧೀನ ಬೇರೆ
ಸೋನಿಯಾ ಗಾಂಧೀನ ಬೇರೆ
ರಾಹುಲ ಗಾಂಧೀನ ಬೇರೆ
ಇದನ್ನ ನೋಡಿದ್ರ ನಮ್ಮಾಕಿ
ನಮ್ಮೂರಾಗ ಇರೂದs ಬೇರೆ.

೩೦೫೮. ಬದ್ನಿಕಾಯಿ ಮುಳಗಾಯಿ ಒಂದೇ
ನನ್ನಾಕಿ ............... ಜಮದಗ್ನಿ ಒಂದೇ.

೩೦೫೯. ಬಸ್ಸು ಹೋಗುವಾಗ
ಬುಸ್ ಟುರ್ ಸಹಜ
ನಮ್ಮ ಹೇಣ್ತಿ ಮನ್ಯಾಗಿರುತನ
ಹೊಡಿಬಡಿ ಸಹಜ .....

೩೦೬೦. ಪಿಂಚಣಿ ಆದವರಿಗೆ
ಪುರಾಣವೇ ಗತಿ
ಈಕಿ ಹೇಳ್ತಾಳ ಅತ್ತಿ ಮಾವ್ಗ ಇದೇ ಗತಿ
ನನಗ ಸದ್ಗತಿ ಅಂತಾಳ .....

೩೦೬೧. ಮಗನ ಕೇಸಾದ್ರು ವಕಾಲತ್ತು ಬಿಡೂದಿಲ್ಲ
ಮಾಡಿಕೊಂಡ ಗಂಡ ಮನ್ಯಾಗಿದ್ರೂ
ಈಕಿ ನನಗ ತಾಲೀಮು ಮಾಡ್ಲೂದು ಬಿಟ್ಟಿಲ್ಲ .....

೩೦೬೨. ಕ್ಯೂನಲ್ಲಿ ನಿಂತವನೇ ಕೋಣ
ಉಂಡಮನಿ ಗೊತ್ತಿಗೆ ಹಚ್ಚಿದಾಕೀ ನನ್ನವಳ
ತವರಮನಿರೋಣ .....

೩೦೬೩. ಅತ್ತಿ ಸತ್ತ ಆರ ತಿಂಗಳಿಗೆ
ನನ್ನ ..........ಳ ಕಣ್ಣಾಗ ನೀರು ಬಂತು.

೩೦೬೪. ಇಪ್ಪತ್ತು ದಿನದ ಬಸರಿಗೆ
ಬಸವಣ್ಣ ಅಂತಾ ಹೆಸರಿಟ್ಲಂತೆ ನನ್ನ ಹೇಣ್ತಿ .....

೩೦೬೫. ಹೊಟ್ಟ್ಯಾನ ಕೂಸು ಹೊಟ್ಟ್ಯಾಗ ಇರುತ್ಲೆ
ಪುಟ್ಟಪ್ಪ ಅಂತ ಹೆಸರು ಇಡ್ರಿ ಅಂತಾಳ ನನ್ನಾಕಿ ....

೩೦೬೬. ಗುಲಗಂಜಿಗೆ ತನ್ನ ಕುಂಡಿ
ಕಪ್ಪು ಅಂತ ತಿಳೀಲಿಲ್ಲ
ನನ್ನಾಕಿಗೆ ತನ್ನ ಬುದ್ಧಿ
ದುರ್ಬುದ್ಧಿ ಅಂತಾ ತಿಳೀಲಿಲ್ಲಾ .....

೩೦೬೭. ಇಲಿಗೆ ಹೆದರಿ ಬೆಕ್ಕಿಗೆ ಬೆದರಿ
ಮನೆಗೆ ಬೆಂಕಿ ಹಚ್ಚೇದ್ಲಂತ ನನ್ನಾಕಿ .....

೩೦೬೮. ಎಣ್ಣೆ ಹಚಿಗೊಂಡು
ಬಣ್ಣದ ಸೀರಿ ಉಟಗೊಂಡು
ಮಣ್ಣಾಗ ಕುಂದರತಾಳ ನನ್ನಾಕಿ .....

೩೦೬೯. ಹಿತ್ತಾಳಿ ವಡವೆ ಇಟಗೊಂಡು
ಇತ್ತ ಹೋಗು ನನ ಗಂಡ
ಅತ್ತ ಹೋಗು ನನ ಗಂಡ ಅಂದಳಂತೆ ನನ್ನ ಗೌರಿ .....

೩೦೭೦. ಆಟ್ಟ ಏರಿ ಕುಂತಾಳ ಈಕಿ .....
ಚಟ್ಟಾ ಬೆಳಗಿದರ ಕೆಳಗ ಬರ್ತಾಳ.

೩೦೭೧. ತಂದಾಗ ಮಂದಿ ಹಿಡಿತಾಳ
ತರದಿದ್ದಾಗ ಸಂದಿ ಗೊಂದಿ ಹಿಡಿತಾಳ .....

೩೦೭೨. ಕೂಳ ತಿಂದಾಳ ಕಂಠಮಟ
ನೀರ ಕುಡಿದಾಳ ಗಟಾ ಗಟಾ
ನಿದ್ದಿ ಮಾಡ್ಯಾಳ ಗೊರಕಿ ಹೊಡದು
ಎದ್ದು ಮಾಡ್ತಾಳ ತಿನ್ನುಲು ಹಟ .....

೩೦೭೩. ಬೆಣ್ಣಿಗೆ ಸುಣ್ಣ ಅಂತಾಳ
ಸುಣ್ಣಕ್ಕೆ ಬೆಣ್ಣೆ ಅಂತಾಳ ಮೆಳ್ಳಗಣ್ಣಾಕಿ .....

೩೦೭೪. ಮೂರು ದಿನದ ಸಂತಿಗೆ
ಮುಕ್ಕಟ್ಟ ಹೋಗ್ತಾಳ
ಹೊಟ್ಟ ಹಸ್ತದೈತಂತ
ಹೊಟ್ಟು ಮೇವು ಹುಡಕ್ತಾಳ .....

೩೦೭೫. ಮನಬಲ್ಲಾಂಗ ಗಂಡನ್ನ ಬೈತಾಳ
ಕಂತಿ ಕುಂತ್ರ ಕೈತಾಳ ಬಾರಿಸ್ತಾಳ .....

೩೦೭೬. ಮಣ್ಣೂರ ಕುಲಕರ್ಣಿಗೆ
ಮಣ್ಣು ಕೊಡಿರಿಗೌಡ್ರ ಅಂತಾ
ಮಾಮಲೇದಾರ ಪತ್ರ ಕಳಿಸಿದ್ರ
ಈ ಗೌಡ್ರು ಕುಲರ್ಣಿಗೆ ಮಣ್ಣಕೊಟ್ರುಂತ
ನನ್ನಾಕಿ ..... ಈ ಸುದ್ಧಿ ಕೇಳಿ
ಮನಿ ಸಾರಿಸಿ ಪೂಜಾ ಮಾಡಿ ರಂಗೋಲಿ ಇಟ್ಲಂತ.

೩೦೭೭. ಗೇರಸೊಪ್ಪು ತಡಸಲು ನೋಟ ಅಂದ
ನನ್ನ ರಾಣಿ ಅತ್ತರೂ ಚೆಂದ ನಕ್ಕರೂ ಚೆಂದ .....

೩೦೭೮. ಕುಸುಬಿ ತಟ್ಟಿನ್ಯಾಂಗ ಹೊಡದ್ರ
ಈಕಿ ಕಾಲಗುಂಟ ಕಾಲ್ಮಡಿ ಹೋಗ್ತಾವು .....

೩೦೭೯. ಗಿಡ್ಡ ಮಗಾ ಗುಡ್ಡಾ ಏರಿದ
ಗಿಡ್ಡ ಮಗಳು ಅಜ್ಜನ ಗಡ್ಡಾ ಹರದ್ಲು
ಉದ್ಯಾನಕಿ ನನ್ನಾಕಿ ಬಾಳ ಬುದ್ಧಿವಂತಿ
ಉದ್ದಿನ ವಡಿ ಕರದ ಕರದ
ಒಲಿಯಾಗ ಹಾಕಿದ್ಲು .....

೩೦೮೦. ಹರೆಗಸ ಹೊಡಿ ಏ ಕಸಬರಿಗಿ ಅಂದ್ರ
ಕಸಬರಿಗಿ ಹಿಡಕೊಂಡು ಹೆಸರಬ್ಯಾಳಿ ಗೂಡಿಸ್ತಂತ .....

೩೦೮೧. ಮಾತು ಮಾರು ಹೊಲಾ ಕೆಡಿಸ್ತು
ತೂತು ಒಲಿ ಕೆಡಿಸ್ತು
ಕೊಟ್ಟ ಸಾಲ ಕೇಳ್ದ ಹೋತು
ಈ ................ ಮಾಟಗಿತ್ತಿಲಿಂದ ನಮ್ಮನಿ ಮುರೀತು.

೩೦೮೨. ಅತ್ತಿ ಮಾವಾ ಶಿವಾ ಶಿವಾ ಸಾಕು
ನಮ್ಮನ್ನ ಕರಕೋ ಅಂದ್ರು
ಅವರ ಸೊಸಿ ನನ್ನಾಕಿ
ಶಿವ ಶಿವಾ ಹಂಗಮಾಡ್ರಿ ಅಂದಳು .....

೩೦೮೩. ನಮ್ಮಪ್ಪಗ ಅವ್ವಗ ಬಿರುಸುಬಂದ್ರ
ನನ್ನೋಡಿ ಈಕಿ ಮುಸುಮುಸು ನಗ್ತಾಳ .....

೩೦೮೪. ಸಿಂಡಿಕೇಟ್ ಬ್ಯಾಂಕ್ ಗುರುತು
ನಂಬಿಗಸ್ಥ ನಾಯಿ
ಮಕ್ಕಳಾಗಲೆಂತ ದತ್ತಾತ್ರಯಗ
ಹರಕಿ ಹೊತ್ತಾಳ ನನ್ನಾಕಿ ಬಿಂಕಿ ......
ಅವಳ ಮಾನಾ ಕಾಯಬೇಕು ನಾಯಿ.

೩೦೮೫. ಕದದಂತಾ ಹಪ್ಪಳಾ ತಿಂದ
ಕದಾ ಹಾಕಿ ಕಡ್ಲಿಗಿಡದಾಗ
ಜೋಕಾಲಿ ಜೀಕ್ತಾಳ .....

೩೦೮೬. ತಂಗಾಳಿಗೆ ಮಲಗಂದ್ರ
ತುರುಮಂದ್ಯಾಗ ಮಲಗ್ತಾಳ .....

೩೦೮೭. ರಂಡಿ ಮುಂಡಿ ಮದುವ್ಯಾಗ
ಉಂಡವನೇ ಜಾಣ
ಗಾಳಿ ಬಿಟ್ಟಾಗ ತೂರಿಕೊಳ್ಳದವನೇ ಕ್ವಾಣ
ನನ್ನಾಕಿ ಇದ್ದಾಳೆ ಕಬ್ಬಿಣ ಕಾದಾಗ
ಹೊಡೆತ ಕೊಡುವಷ್ಟು ಜಾಣಿ .....

೩೦೮೮. ಸೆಟ್ಟಿ ಸಿಂಗಾರ ಆಗೂದ್ರೊಳಗ
ಪಟ್ನ ಹಾಳಾತಂತೆ
ಇವಳು ಸಿಂಗಾರಾಗೋದ್ರೊಳಗ
ಜಾತ್ರೆ ಮುಗಿದು ದವನ ಮಾರಿತು .....

೩೦೮೯. ಮಟಾ ಮಟಾ ಮದ್ಯಾಣದಾಗ
ಉರಿಬಿಸಿಲಿನ್ಯಾಗ
ಕಡಜೀರಿಗೆ ಹುಟ್ಟಿಗೆ ಕೈಹಾಕತಾಳ .....

೩೯೦. ಸಂದಿ ಗೊಂದೀಲೆ ಹೋಗೂ
ಹಂದಿ ಹಿಡದು ಅಲಂಕಾರ ಮಾಡ್ತಾಳ .....

೩೯೧. ಹುಣಸಿ ಮುಪ್ಪಾದ್ರೂ
ಹುಳಿ ಮುಪ್ಪಲ್ಲ
ಹೇಣ್ತಿ ಮುಪ್ಪಾದ್ರೂ ನನ್ನಾಕಿ .....
ಪ್ರೀತಿಗೆ ಮುಪ್ಪಿಲ್ಲ.

೩೯೨. ತಾಯಿಗಿಂತ ಬಂಧುವಿಲ್ಲ
ಉಪ್ಪಿಗಿಂತ ರುಚಿಯಿಲ್ಲ
ನನ್ನಾಕಿ ............ ಮನೆಯವರಿಗೆಲ್ಲ ಬೆಲ್ಲ.

೩೯೩. ಹೊತ್ತ ಬಂದಾಂಗ
ಛತ್ರಿ ಹಿಡೀಬೇಕು
ನನ್ನಾಕಿಗೆ ಹೊತ್ತು ಗತ್ತು ನೋಡಿ
ಸರಿಯಾಗಿ ಕಟಿಬೇಕು ......

೩೯೪. ಸೋಗಲಾಡಿ ಸುಬ್ಬಕ್ಕ
ಮನೆ ತುಂಬಿದ ಗುಬ್ಬಕ್ಕ ಅಂದ್ರ
ಸನೇಕ ಬಂದು ಹೊಸ ಸೀರಿ
ಉಡುಸ್ರಿ ಅಂತಾಳ ನನ್ನಾಕಿ ಬಾಳ ಬೆರಕಿ .....

೩೯೫. ಸಾರೋ ಅಯ್ಯನವರು
ಸಾರಿಕೋತ ಹೋದ್ರ
ಕಣ್ಣುಚ್ಚಿ ಕೈಮುಗಿತಾಳ .....

೩೯೬. ಕಳ್ಳೀ ಹಾಲ್ಗೆ ಹೆಪ್ಪು ಹಾಕಿ
ಮಸರ ಮಾಡೀನಿ ಅಂತಾಳ
ಅತ್ತಿ ಮಾವನ್ನ ನಮಸ್ಕರಿಸಿ
ಊಟಕ ಬರ್ರೀ ಅಂತಾಳ .....

೩೯೭. ಹುಸಿ ಹೂಸು ಬಿಟ್ರ ಇಸ ಘಾತಕ
ನನ್ನಾಕಿ ನಕ್ಕರ ಮರ್ಮಘಾತುಕ .....

೩೯೮. ಬತ್ತಲೇ ಮಗನಿಗೆ
ಬೆಳ್ಳಿ ಉಡದಾರ ಕಟ್ಟತಾಳ ......

೩೧೯೯. ಹಗಲು ಅರಸನ ಕಾಟ
ರಾತ್ರಿ ದೆವ್ವದಂತಾ ಹೆಂಡ್ತಿ ಕಾಟ .....

೩೨೦೦. ಮನ್ಯಾಗs ಕಾಲು ನಿಲ್ಲಿಸದಾಕಿ ನನ್ನ ..... ಗೆ
ಮರದೊಳಗ ಹ್ಯಾಂಗ ಕಾಲ ನಿಲ್ತಾವು.

೩೨೦೧. ಒಂದು ಕಣ್ಣಾಗ ಬೆಣ್ಣೆ ಇಡ್ತಾಳ
ಇನ್ನೊಂದು ಕಣ್ಣಾಗ ಸುಣ್ಣಾ ಇಡ್ತಾಳ
ನನಗ ಬೆಣ್ಣೆ ಬಡಿದು ಬಣ್ಣ ಹಚ್ಚಿ
ಬಂಗಾರ ಕೇಳ್ತಾಳ ......

೩೨೦೨. ಹಿತ್ತಲಿಲ್ಲದ ಮನಿಬ್ಯಾಡ
ತವರಿಲ್ಲದ ನಂಟು ಬೇಡ
ನನ್ನಾಕಿ ಕೈಯಾಗ ಗಂಟು ಬ್ಯಾಡ .....

೩೨೦೩. ತಾಯಿ ಇದ್ದರೆ ತವರು
ನೀರು ಇದ್ದರೆ ಭಾವಿ
ನನ್ನ ಹೇಣ್ತಿ ..... ಇದ್ದರೆ ಮುತ್ತಿನತೇರು.

೩೨೦೪. ಹೊಟ್ಟಿಗೆ ಹಿಟ್ಟಿಲ್ಲ
ತಲೆಗೆ ಮಲ್ಲಿಗಿ ಹೂ ಕೇಳ್ತಾಳ .....

೩೨೦೫. ಹೇಳಕಿ ಮಾತ ಕೇಳಿ
ರಾಮ ಹೆಂಡತಿ ಬಿಟ್ಟ
ನನ್ನಾಕಿ ............ ಮಾತ ಕೇಳಿ
ಎಲ್ಲಾರನೂ ಕೈಬಿಟ್ಟೆ.

೩೨೦೬. ಹಾಯುವ ಎತ್ತಿಗ ಕೊಂಬು ಹೆಚ್ಚು
ನನ್ನ ಹೆಣ್ತಿ .......... ಗೆ ಜಂಬ ಹೆಚ್ಚು.

೩೨೦೭. ಕದ್ದರೆ ಆನೆ ಕದೀಬೇಕು
ಕುಲಾಯಿ ಕದ್ದು ಒಲಿ ಸಂದ್ಯಾಗ ಕುಂತಾಳ .....

೩೨೦೮. ಚೆಂದಗೇಡಿ ಕೊರಳಾಗ
ಚಮಕಾ ಕಟ್ಟಿದರೆ
ಮಂದಿ ನೋಡಲೆಂತ
ಕುಂಬಿಮ್ಯಾಲ ಕುಂತಿತ್ತಂತ ನನ್ನಾಕಿ .....

೩೧೦೯. ಊರೆಲ್ಲಾ ನಕ್ಕ ಮ್ಯಾಲ ಕಿವುಡ ನಕ್ಕನಂತೆ
ಹಾಂಗ ಕಿವುಡ ನಕ್ಕಮ್ಯಾಲೆ ನನ್ನ ಹೆಂಡ್ತಿ ..... ನಗತಾಳ.

೩೧೧೦. ಈ ಕಿವೀಲಿ ಕೇಳ್ತಿನಿ
ಆ ಕಿವೀಲಿ ಬಿಡ್ತೀನಿ
ಇದs ನನ್ನ ..........ಳ ಜಗಳ್ದಾಗನಾ
ಕಲಿತಪಾಠ.

೩೧೧೧. ನೆಲಕ್ಕ ಬಿದ್ದರ ಕಾಲ ಹಿಡೀಬೇಕು
ಮೇಲಕ್ಕೆದ್ರ ಜುಟ್ಟಾ ಹಿಡೀಬೇಕು
ನಮ್ಮಾಕಿ ................. ಹದ ನೋಡಿ ನೋಡಿ
ಒಯಮ್ಮೆ ಕಾಲ ಹಿಡಿಬೇಕು
ಒಮ್ಮೆ ಜುಟ್ಟಾ ಹಿಡಿಬೇಕು.

೩೧೧೨. ನನ್ನಾಕಿ ಸಂತೀಗೆ ಕಳಿಸಿದ್ರ
ಪೆದ್ದಿ ಆದ್ರೂ ಅಗ್ಗದಲ್ಲೆ ತರದಾಳ .....

೩೧೧೩. ರಾಜಕಾರಣಿಗಳಿಗೆ ಸಂಪುಟ ವಿಸ್ತರಣೆ ಸಂಕಟ
ಮರಿ ರಾಜಕಾರಣಿಗಳ ತಡಿಲಾರದ ಕಾಟ
..... ಳು ಮಂತ್ರಿಯಾದರೆ ಸಾಕು
ಇನ್ನೇನು ಬೀಳುವುದು ಕೋಟಿ ಕೋಟಿ.

೩೧೧೪. ಅಂಗಳ್ದಾಗ ಕುಂತಗೊಂಡು
ಅಳ್ಳ ತಿಂತಾಳ ......

೩೧೧೫. ಮದವ್ಯಾಗಿ ಮೂವತ್ತು ವರ್ಷಾಯ್ತು
ಮುದ್ದು ಮುದ್ದು ನನ ಹೇಣತಿ
ಮತ್ತೆ ಮೂವತ್ತಾಯ್ತು ಮುಪ್ಪಾತು ಪ್ರೀತಿ
ಇದ್ದಾಳೆ ನನ್ನಾಕಿ .............. ಎಣ್ಣೆ ತೀರಿದ ಪಣತಿ.

೩೧೧೬. ಅತ್ತಿ ಇಲ್ಲದ ಸೊಸಿ ಮುತ್ತಿನಂತ ಹೆಣ್ಣು
ಈ ನನ್ನಾಕಿ .............. ಬೆಳೆಯಲಾರದ ಗರಸು ಮಣ್ಣು.

೩೧೧೭. ಅತ್ತಿ ಅಳಿಯಾಗ ಮರಳು
ಕತ್ತಿ ಕರಿಕಿಗೆ ಮರಳು
ನನಗ ನನ್ನ ..............ಳೆ ಮರಳು.

೩೧೧೮. ಅತ್ತಿ ಸೊಸಿ ಜಗಳದಾಗ
ಅಡ್ಕಣಿಗಿ ಅಡ್ಡ ಬಂತು
ನನ್ನ ........... ಳ ಜಗಳದಾಗ
ಕೂಸು ಅಡ್ಡ ಬಂತು.

೩೧೧೯. ಅತ್ತಿ ಇಲ್ಲದ ಮನ್ಯಾಗ
ಸೊಸಿ ಬಜಾರಿ
ನಾ ದಿನ .....ಳಿಗೆ ಕೊಡಬೇಕು
ರಾತ್ರಿ ಹಾಜರಿ.

೩೧೨೦. ಅತ್ತಿ ಹೆಡಗಿ ನುಂಗಿದರ
ಸೊಸಿ ಹಡಗಾ ನುಂಗಿದಳಂತೆ
ನಮ್ಮ ............ಳು ದಿನಾ ಏನೂ ತಿನ್ನದಿದ್ರೆ
ನಾನs ಈ ಮನ್ಯಾಗ ಪುಣ್ಯವಂತ.

೩೧೨೧. ಅತ್ತೀ ಒತ್ತಾಯಕ್ಕೆ ನನ್ನಾಕಿ ಬಸುರಾದ್ಲು .....

೩೧೨೨. ಬೆಕ್ಕು ಇಲ್ಲದ ಮನಿಯ್ಯಾಗ
ಇಲಿ ಲಾಗಾ ಹೊಡದರ
ಅತ್ತಿ ಇಲ್ಲದ ಮನ್ಯಾಗ
ನನ್ನ ಹೇಣ್ತಿ ........... ಲಾಗಾ ಹೊಡದ್ಲು.

೩೧೨೩. ನತ್ತ ಇಟುಗೊಂಡು ನೀರಿಗೆ ಹೋಗಿ
ನತ್ತ ಕಳಿಕೊಂಡು ನೆಲಕ್ಕಚ್ಚಿ ಮಲಗ್ಯಾಳ .....

೩೧೨೪. ಕರದಂಟು ಕೊಟ್ರ
ಹೇಳಿದ್ಹಾಂಗ ಕೇಳ್ತಾಳ .....

೩೧೨೫. ಕ್ಯಾದಗಿ ಹೊಡಿ ಮುಂದ ಕುಂತಾಳ
ನಾಗರ ಹೆಡಿ ಕಂಡ ಅಳ್ತಾಳ .....

೩೧೨೬. ಅಣ್ಣೀಗೇರಿ ಬಾಚುಣಿ ಕಣ್ಗಬಿದ್ದಾವ
ಬಾಚಿಗೊಂಡು ಹೋಗಂದ್ರ ನಾಚಿಗೊಂಡ ಕುಂತಾಳ ....

೩೧೨೭. ಊರ ಹೊರಗ ಇರತೈತಿ
ಉಡುಚವ್ವನ ಗುಡಿ
ನನ್ನಾಕಿ ಇರೂದು ಸಾಲಿಗುಡಿ .....

೩೧೨೮. ಹಾವೇರಿಗೆ ಹೋಗಿ ಯಾಲಕ್ಕಿ ತಂದ ಕೊಟ್ರ
ಅವಲಕ್ಕಿ ಅಂತಾ ಒಗ್ಗರಣಿ ಹಾಕ್ತಾಳ .....

೩೧೨೯. ನಮ್ಮ ಎಮ್ಮಿ ಹಿಂಡೂದು ಆರು ತಂಬಿಗಿ
ನಮ್ಮ ಅತ್ತಿ ಮಾಡತಿದ್ಲು ಒಂಬತ್ತು ತಂಬಿಗಿ
ನನ್ನಾಕಿ ............ ಕೈಗೆ ಕೊಟ್ಟಿದ್ರ ಆಗ್ತಾತಿದ್ವು ಹನ್ನೆರುಡು ತಂಬಿಗಿ ..

೩೧೩೦. ಅತ್ತೆಗೆ ಆರು ಬೀದಿ
ಸೊಸೆಗೆ ಮೂರು ಬೀದಿ ಇದ್ರ
ನನ್ನ ಹೆಣ್ತೀ .............ಗೆ ಒಂಬತ್ತು ಬೀದಿ.

೩೧೩೧. ಅವಗುಣಕ್ಕೆ ನನ್ನಾಕಿ ......... ಅತ್ತೆ ಹೋದ್ಲು.

೩೧೩೨. ಅಗಸಿ ಹೂವು ಚೆಂದ
ಬೊಗಸೆ ಗಣ್ಣಿನ ನನ್ನ ಹೇಣ್ತಿ ಚೆಂದ .....

೩೧೩೩. ಅಟ್ಟದಂತಾಕೀನ ಬ್ಯಾಡಂತು ಬಿಟ್ರು
ಬೆಟ್ಟದಂತಾಕಿ ಹೆಣ್ತಿ ಆಗಿ ಬಂದ್ಲು .....

೩೧೩೪. ಕುದುರಿ ಬಾಲ ಆನಿ ಕಿವಿ
ನನ್ನ ಹೇಣ್ತಿ ........... ಬಾಯಿ
ಎಂದೂ ಸುಮ್ನ ಇರೂದಿಲ್ಲ.

೩೧೩೫. ಒಕ್ಕಲಗಿತ್ತಿ ಒಲಿ ಚೆಂದ
ಮೊದಲಗಿತ್ತಿ ಮಲಿ ಚೆಂದ
ನನ್ನಾಕಿ ........... ನಡೆ ನುಡಿ ಚೆಂದ.

೩೧೩೬. ಕೆಟ್ಟ ಹೋದ ಅಡಗಿ
ಅಟ್ಟವಳೇ ಜಾಣೆ ಅಂತ ಹೇಳಿದ್ರ
ಇದ್ದ ಅಡಿಗಿ ಕೆಡಿಸಿ ಕುಂತಾಳ ಕಸಬರಿಗಿ .....

೩೧೩೭. ಕೊಟ್ರಕೊಂಡ್ರ ಗೆಳತಿ ಅಂತಾಳ
ಕೊಡದೇ ಹೋದ್ರ ಆಕಿ
ಸವತಿ ಅಂತಾಳ ನನ್ನಾಕಿ .....

೩೧೩೮. ಇದ್ದೂರು ಹೆಣ್ಣು ತರಬಾರ್ದು
ಇದ್ದೂರ್ಗೆ ಹೆಣ್ಣು ಕೊಡಬಾರ್ದು
ಅದಕಂತಾ ಕನ್ಯಾಕುಮಾರಿಯಿಂದ ತಂದಿನಿ
ನನ್ನ ಪ್ರೀತಿ ರಾಣಿ .........

೩೧೩೯. ಕೂದಲಿದ್ದಾಕಿ ಎತ್ತ ಕಟ್ಟಿದರೂ ಹೆರಳು ಚೆಂದ
ಕೂದಲ ಉದುರಿದ ನನ್ನಾಕಿ .....
ಎತ್ತ ತಿರುಗಿದರೂ ಬೋಳದೆಲಿ ಚೆಂದ.

೩೧೪೦. ಎಲ್ಲಾ ಬಲ್ಲೆ ಆದ್ರ
ಗಂಡನ್ನ ಒಲ್ಲೆ ಅಂತ ಕುಂತಾಳ .....

೩೧೪೧. ಕಬ್ಬು ತಿಂದ್ರ ಬಾಯಿ ಸುದ್ಧ
ನನ್ನಾಕಿ ............ ಜಡದ್ರ ಎಲ್ಲಾ ಸುದ್ಧ.

೩೧೪೨. ಅಮ್ಮಾವ್ರ ಯೋಗ್ಯತೆ ಆಳಿಗೆ ಗೊತ್ತು
ಒಣ ದಿಮಾಕದಾಕಿ ..............ಳದು ಎಲ್ಲಾ ಗೊತ್ತು.

೩೧೪೩. ಹೂಡಿದರೆ ಎತ್ತು ಹೂಡದಿದ್ದರೆ ಹೋರಿ
ಹಡೆದಿಲ್ಲ ಹಿಂಗಿಲ್ಲ ಈಕಿನ್ನೂ ಪೋರಿ ನನ್ನ .....

೩೧೪೪. ನೀರಿದ್ರ ಊರು, ನಾರಿ ಇದ್ರ ಮನೆ
ನನ್ನಾಕಿ ............. ಮನ್ಯಾಗ ಇರದಿದ್ರ ದೆವ್ವದ ಮನೆ.

೩೧೪೫. ದೊಡ್ಡವರ ಮನಿಗೆ ಹೆಣ್ಣು ಕೊಡಬೇಕಂತ
ಬಡವರ ಮನೆಯಿಂದ ಹೆಣ್ಣು ತರಬೇಕಂತ
ಹಾಗಂತ ತಿರಕೊಳ್ಳಾರ ಮನೆಯಿಂದ .............ಳನ್ನು ತಂದೀನಿ.

೩೧೪೬. ಮನಸ್ಸಿರದಿದ್ರೂ ತೆರ ಕೊಟ್ಟು ಮದುವ್ಯಾದ್ಯಾ
ಹೊಸ ಹೇಣ್ತಿ ನಡೆ ನುಡಿ ನೋಡಿ .....
ನಮ್ಮನಿ ಬೆಳಕಂತ ಸುಮ್ಮನಾದ್ಯಾ .....

೩೧೪೭. ಗೆಜ್ಜೆ ಕಟ್ಟಿದವಳಿಗೆ ಲಜ್ಜೆ ಯಾಕೆ?
ಲಗ್ನವಾದ ನನ್ನ ಹೇಣ್ತಿ .......... ಳಿಗೆ ನಾಚಿಕೆಯೇಕೆ?

೩೧೪೮. ಹೆಣ್ಣು ಹುಟ್ಟಿದ್ದು ಅಳಾಕ
ಗಂಡು ಹುಟ್ಟಿದ್ದು ಹೊರಾಕ
ಈ ಹಿರೇರ ಮಾತಿಗೆ ನನ್ನ ಹೇಣ್ತಿ .....
ಒಪ್ಪ್ಯಾಳಂತ ಮನಿ ಹೋಗ್ಯೆತಿ ಕೆಳಕ.

೩೧೪೯. ಹೆಣ್ಣು ಕೆಟ್ಟರೆ ತವರು ಮನೆಗೆ
ವಡವೆ ಕೆಟ್ಟರೆ ಅಕ್ಕಸಾಲಿ ಮನೆಗೆ
ಬಂಗಾರಿ ನನ್ನಾಕಿ ............ ಏನಿದ್ದ್ರೂ
ನಮ್ಮ ಮನೆಗೆ.

೩೧೫೦. ಚಿನ್ನದಂತಾ ಗಂಡನ್ನ ಕಟಿಗೊಂಡು
ಚಿನ್ನಾಟ ಆಡ್ತಾಳಾ ಚಿನ್ನದ ಗುಂಡಿ .....

೩೧೫೧. ಎತ್ತು ಸೊಕ್ಕಿದರೆ ಕೊಟ್ಟಿಗೆಯಲ್ಲು ನಿಲ್ಲೂದಿಲ್ಲಂತ
ನನ್ನಾಕಿ ........... ಸೊಕ್ಕಿದರೆ ಮನ್ಯಾಗ ನಿಲ್ಲೂದಿಲ್ಲ.

೩೧೫೨. ಕರಡಿ ಮಜಲಿನ ಮುಂದೆ
ಕುಂಟಲಿಪಿ ಆಡ್ತಾಳ .....

೩೧೫೩. ನೆಲ್ಲಿಕಾಯಿ ತಿಂದು ನೀರು ಕುಡಿ ಅಂದ್ರ
ಬೇವಿನ ಕಾಯಿ ತಿಂದು ಕಳ್ಳಿ ಹಾಲ ಕುಡಿತಾಳ .....

೩೧೫೪. ತಾಯಿ ಇಲ್ಲದಾಕಿಗೆ ತವರ ಮನಿ ಚಿಂತಿ
ಚಿಂತ್ಯಾಗಿದ್ದ ನನ್ನಾಕಿ ............ ಗೆ ನಂದs ಚಿಂತಿ.

೩೧೫೫. ಮಳಿ ಬಂದು ಹೋದ ಮ್ಯಾಲ
ಮರದ ಹನಿ ನಿಲ್ಲದು
ಜಗಳ್ಯಾಡಿ ಮೂರು ದಿನ ಆದ್ದೂ
ನನ್ನ ಹೇಣ್ತಿ ............. ಕಣ್ಣಾಗ ನೀರು ನಿಲ್ಲದು.

೩೧೫೬. ಹತ್ತು ಹಡೆಯುವುದಕ್ಕಿಂತ
ಒಂದು ಮುತ್ತು ಹಡಿ ಅಂದ್ರ
ನನಗ ಮುತ್ತಂದ್ರ ಬಾಳ ಪ್ರೀತಿ
ಎಷ್ಟಾದ್ರೂ ಬೇಕಂತಾಳ .....

೩೧೫೭. ಅತಿ ಸ್ನೇಹ ಗತಿ ಗೆಡಿಸಿದ್ದು
ನೆರಮನೆಯವರು ಕುಲಗೆಡಿಸಿದ್ದು ಮರ್ರು
ಬೇಡಾದವರಿಗೆ ಗಾದಿ ಹಾಸ್ಯಾಳ ....

೩೧೫೮. ಮಕ್ಕಳಿಲ್ಲದ ಮನ್ಯಾಗ
ಅಜ್ಜಿ ಅಂಬೆಗಾಲಿಟ್ಟರ
ಅತ್ತಿ ಊರಿಗೆ ಹೋದ್ರ
ಅಂಬೆಗಾಲ್ಹಚ್ಚಿ ಅಂಬಾ ಅಂತಾಳ.

೩೧೫೯. ಮಕ್ಕಳು ಆಗಲಿಲ್ಲಂತ
ತೊಟ್ಟಿಲ್ಗೆ ಕಲ್ಲ ಹಾಕಿ ತೂಗತಾಳ ......

೩೧೬೦. ಬಡಿದಂಟ ತಿಂದಾಕೀನ
ಬಾನಾ ಉಣ್ಣೂ ಮನಿಗೆ ತಂದೆ .....

೩೧೬೧. ದಾಸರ ಆಟಲ್ಲ ದ್ವಾಸಿ ಊಟಲ್ಲ
ನನ್ನ ಹೆಂಡತಿ ಆಟ ನಮ್ಮಂದ ನಡೆಯೂದಿಲ್ಲ .....

೩೧೬೨. ಹತ್ತಿರ ಇದ್ದ್ರ ಹೆಂಡತಿ
ಮುಂದು ಇದ್ದ್ರ ಮಗ
ಇವಳು ........... ಎಲ್ಲಿದ್ದ್ರೇನು ನನಗ.

೩೧೬೩. ಹೆಚ್ಚು ಮಳೆ ಆಗಬಾರ್ದು
ಹುಚ್ಚು ಮಗ ಹುಟ್ಟಬಾರ್ದು
ನನ್ನ .............. ರಾಣಿ ಬಿಟ್ಟು ನಾ
ಪರ ಹೆಣ್ಣು ನೋಡಬಾರ್ದು.

೩೧೬೪. ಅಡಿಕೆ ಕದ್ದರೂ ಕಳ್ಳ
ಆನೆ ಕದ್ದರೂ ಕಳ್ಳ
ನನ್ನಾಕಿ ಕೊಪಕ್ಕ ನಾನಾದೆ ಮಳ್ಳ .....

೩೧೬೫. ಹೊಗಳಿದಷ್ಟೂ ಮಗಳು ಜಗಳಾಡಿದ್ರ
ತೆಗಳಿದಷ್ಟೂ ನನ್ನಾಕಿ ಬಗಲೀಗೆ ಬರ್ತಾಳ .....

೩೧೬೬. ಮುಪ್ಪಿನ ಕಾಲಕ್ಕ ಹುಟ್ಟಿದ ಮಗ
ಹೆಗಲಿಗೆ ಭಾರ
ಮದುವ್ಯಾಗ ಮೊಮ್ಮಕ್ಕಳಾದ್ರೂ
ಕಡಿಮ್ಯಾಗಿಲ್ಲ ಇವಳ ಕಾರಭಾರ .....

೩೧೬೭. ಮಗ ಮಲಗಾಕ ಹೋಗಿ ಕೆಟ್ಟ
ಮಗಳು ಬೀಸಲಕ ಹೋಗಿ ಕೆಟ್ಲು
ನನ್ನ ಹೇಣ್ತಿ ಹಗಲೆಲ್ಲ ತವರ ಮನೀ ಸಾಲ ಕೇಳಿ ಕೆಟ್ಲು .....

೩೧೬೮. ಅಗಸನ ಸಿಟ್ಟು ಹೆರವರ ಬಟ್ಟೆ ಮೇಲೆ
ನನ್ನ ರಂಭಿ .......... ಸಿಟ್ಟು ಅವಳ ಅತ್ತಿ ಮೇಲೆ.

೩೧೯೯. ಅತ್ತೂ ಕರದೂ ಮೇಣೆ ಹತ್ತೀನಿ ಅಂತಾಳ .....

೩೨೦೦. ಅಪ್ಪ ಗುಡಿ ಕಟ್ಟಿಸಿದರ
ಮಗ ಕಳಸಾ ಇಟ್ಟಂತೆ
ನನ್ನಾಕಿ ಗುಡಿಗೆ ಹೋಗಿ
ಮಂಗಳಾರತಿ ಮನೆಗೆ ತಂದ್ಲಂತೆ .....

೩೨೦೧. ಎಂಟು ಗಂಟೇಕ ಏಳಾಕಿ
ಗಂಟ ಮಾರಿ ಹಾಕಾಕಿ .....

೩೨೦೨. ಅಂಗಳದಾಗ ಕುಂತ
ಗಂಗಾಳ ಬಾರಿಸ್ತಾಳ
ಮಾಳಗಿಮ್ಯಾಲ ಕುಂತ
ಹಲಗಿ ಬಾರಿಸ್ತಾಳ .....

೩೨೦೩. ಪಡ್ಡ ತಿಂದ ಗುಡ್ಡಾ ಕಡದವರಾಂಗ
ಗಡದ್ದಾಗಿ ಮಲಗಿ ಗೊರಕಿ ಹೊಡಿತಾಳ .....

೩೨೦೪. ಹತ್ತಿ ಒಡದ್ಮೈತಿ ಬಿಡಿಸಬೇಕಂದ್ರ
ಬಂಗಾರ ಬೇಕಂತ ಬಾಯಿ ಮಾಡ್ತಾಳ .....

೩೨೦೫. ಕಂಠಿಸರ ಕಟಿಗೊಂಡು
ಕುಂಟ ಎತ್ತಿನ ಮ್ಯಾಗ ಹೊಂಟಾಳ .....

೩೨೦೬. ರಡ್ಡಿ ಬಂಗಾರದ ಕಡ್ಡಿ
ನನ್ನಾಕಿ ಬಾಳ ಮಡ್ಡಿ .....

೩೨೦೭. ಬೀಸಲಕ ಹೇಳಿದ್ರ
ಅಳದ ಅಳದ ನೋಡ್ತಾಳ
ಕುಟ್ಯಾಕ ಹೇಳಿದ್ರ
ಊದಿ ಊದಿ ನೋಡ್ತಾಳ
ಏನ್ ಮಾಡ್ಲಿ ಏನಾರ ಅಂದ್ರ
ಊರ್ತುಂಬಾ ಕಾಳಿ ಹೊಡಿತಾಳ ......

೩೨೦೮. ಅಡಿಗಿ ಮಾಡಾಕ ಬಲ್ಲಾಕಿ ಅಂತ
ಹಡಗದ ಮ್ಯಾಲೆ ಕರಕೊಂಡ ಹೋದ್ರ
ಹುಣಸಿಕ್ಕಿನ ಪಲ್ಲೆಗೆ ಹುಳ್ಳಿ ಹೆಚ್ಚು ಹಾಕಿದಂತಾಕಿ ಈಕಿ .....

೩೧೭೯. ಉಪ್ಪು ಖಾರಾ ಇಲ್ದ
ಅಡಿಗಿ ಮಾಡ್ತಾಳ
ಅದs ಬೇಸಿ ನಮ್ಮವ್ವ ಕಲಿಸ್ಯಾಳಂತ
ಚೆಂಡಿಯಾಗಿ ಬಂಡಾಟ ಮಾಡ್ತಾಳ .....

೩೧೮೦. ಹತ್ತರ ಕೂಡ ಹನ್ನೊಂದಂತ
ಸುಮ್ಮನಾದ್ರ ಈಕಿ ಗುಂಗು ಜೋರಾತು
ಹನ್ನೊಂದರಕೂಡ ಇನ್ನೊಂದು ಸವತಿ ತಂದ್ರ
ಈಕಿ ಜೆಡಿ ಹಾವಾಗಿ ಕಾಡಿತು .....

೩೧೮೧. ಬಾ ಅಂದ್ರ ಬೀಗತಾಳ
ಕಣ್ ಸನ್ನೆ ಮಾಡಿದ್ರ
ಕುಣಕೊಂತ ಬರ್ತಾಳ .....

೩೧೮೨. ತೆಂಗಿನಕಾಯಿ ದೇವರಿಗೆ ಹೋಗುವಾಗ ಒಂಟಿ
ಗುಡಿಯಿಂದ ಬರುವಾಗ ಜಂಟಿ
ನನ್ನಾಕಿ ............... ಹುಟ್ಟುಲ್ಲೆ ಕುಂಟಿ.

೩೧೮೩. ಅಟ್ರ ಅಡಿಗಿ ಬಿಟ್ರ ಬಡಗಿ
ಅಂದ್ರ ನುಗ್ಗೀಕಾಯಿ
ನನ್ನಾಕಿ .......... ಯಾಕೋ ಬೇಡ್ತಾಳ
ಇತ್ತೀಚೆಗೆ ಮಾವಿನಕಾಯಿ.

೩೧೮೪. ಅವ್ವ ಅಂದ್ರ ಮೂಟ್ಟೂದಿಲ್ಲ ತುಟಿ
ಅಪ್ಪ ಅಂದ್ರ ಮುಟ್ಟತಾವು ತುಟಿ
ಇಂದಿರಾಗಾಂಧಿ ಆಗ್ತೀನಂತ
ಕೇಳ್ತಾಳ ನೂಲುರಾಟಿ ......

೩೧೮೫. ನಾಲಿಗೆ ಒಳ್ಳೆಯದಾದರೆ
ನಾಡೆಲ್ಲ ಒಳ್ಳೆಯದು
ನನ್ನಾಕಿ ............ ಳು ಒಳ್ಳೆಯವಳಾದರೆ
ನಮ್ಮ ಕುಟುಂಬವೇ ಒಳ್ಳೆಯದು.

೩೧೮೬. ನೀರಿಲ್ಲದೇ ಮೀನಿಲ್ಲ
ನನ್ನವಳಿಲ್ಲದೇ ನಾನಿಲ್ಲ ......

೩೧೮೭. ಪ್ರೀತಿ ಇದ್ದರೂ ನೀತಿ ಬಿಡಬಾರದು
ನನ್ನಾಕೆಯ ನೀತಿ ಪ್ರೀತಿ
ಎಂದೂ ಮರೆಯಲಗದು ......

೩೧೮೮. ದೇವರ ಮಗನಾದರೂ
ಮಾಡಿದ್ದೇ ಉಣಬೇಕು
ಉಪ್ಪು ತಿಂದವ ನೀರು
ಕುಡಿಯಲೇ ಬೇಕು
ಕುಡಗೋಲು ನುಂಗಿದವನ ಕುಂಡಿ
ಹರಿಯಲೇ ಬೇಕು
ಬುದ್ಧಗೇಡಿ ನನ್ನಾಕಿಗೆ ದೇವರು
ಸದ್ಬುದ್ಧಿ ಕೊಡಲೇಬೇಕು ......

೩೧೮೯. ನನ್ನ ಲಗ್ನದಾಗ ಕುಂತ ನನಗs
ಲಟಿಕಿ ಹೊಡತಾಳ ನನ್ನಾಕಿ .....

೩೧೯೦. ಮುರುಕ ಸೌಟು
ಹರಕ ಹಂಚು
ಅಡಿಗಿ ಮಾಡೂದು ಬಿಟ್ಟು
ಒಲಿಮುಂದ ಗೊರಕಿ ಹೊಡಿತಾಳ .....

೩೧೯೧. ಅಂಗೀಗೆ ಕಿಸೆ ಇಲ್ಲ
ಧೋತರಕ ದಡಿ ಇಲ್ಲ
ನನಗೂ ಆಕಿಗೂ ತಾಳಿಲ್ಲ .....

೩೧೯೨. ಮುತ್ತಿನಂಥ ಮಾತು ಕತಿ
ಹವಳದಂಥ ನಡೆನುಡಿ
ಬಂಗಾರದಂಗಡಿ ಮುಂದ ಹೋದ್ರ
ಬಂಗಾರದಂಗಡಿ ಗಲ್ಲೇಕ ಕುಂತಾಳ .....

೩೧೯೩. ಸಂದುಕದಾಗ ಕುಂತ
ಸಪ್ಪಿಳಿಲ್ದ ಶ್ಯಾವಗಿ ತಿಂತಾಳ .....

೩೧೯೪. ಮಸೂತ್ಯಾಗ ಕುಂತ
ಮಂಗ್ಯಾನ್ನ ಆಡಿಸ್ತಾಳ .....

೩೧೯೫. ಹೆಗ್ಗಣಾ ಹೇರಿಕೊಂಡು
ಲಗ್ನಕ ಹೋಗೂನಂತಾಳ .....

೩೧೯೬. ಗುಂಡ ಮ್ಯಾಲ ಕುಂತ ಧ್ಯಾನ ಮಾಡಿ
ಗಂಡು ಮಗೂನ್ನ ಕೈಯಾಗ ಕೊಡ್ತಾಳ .....

೩೧೯೭. ಬಚ್ಚಲದಾಗ ಕುಂತಗೊಂಡ
ಬೆಣ್ಣಿ ತಿಂತಾಳ ......

೩೧೯೮. ಚಂದ್ರಮುಖಿಯಂಥ
ಹೇಣ್ತಿ ಕಟಗೊಂಡು
ಮಂಗಳ ಲೋಕಕ್ಕ ಹೋಗೂನಂದ್ರ
ಗೊಂಗಡಿ ಹೊತಗೊಂಡ ಮಲಗ್ತಾಳ .....

೩೧೯೯. ವಿಭತ್ತಿ ಉಂಡಿ
ಮಣ್ಣಿನ ಗಿಂಡಿ
ಬಂಡಿ ಮ್ಯಾಲ ಕುಂತ
ಉಂಡಿ ತಿಂತಾಳ .....

೩೨೦೦. ಸೀರಿ ತರತೀನಂದ್ರ
ವಾರಿಗಣ್ಣ ಹೊಡಿತಾಳ
ಹಂಗ ಬಂದ್ರ
ಹಂಗ ಇಲ್ದ ಮಾತಾಡ್ತಾಳ .....

೩೨೦೧. ನನ್ನ ಮಲಗಸತಾಳ
ಶ್ಯಾವಗಿ ಬಸಿತಾಳ
ಸವರಾತ್ರ್ಯಾಗ ಕುಂತ ಸುರಿತಾಳ .....

೩೨೦೨. ತಣ್ಣೀರ ಜಳಕಾ ಮಾಡ್ತಾಳ
ತಂಗೀ ಕರಕೊಂಡ
ಸಂಗಯ್ಯನ ಮಠಕ ಹೋಗ್ತಾಳ .....

೩೨೦೩. ಸೂರ್ಯಾನಿಂದ ಲೋಕ ಬೆಳಗತೈತಿ
ನನ್ನ ರಾಣಿಯಿಂದ ನನ್ನ ಮನ ಬೆಳಕಾಗೇತಿ .....

೩೨೦೪. ನನ್ನಾಕಿ ನನಗ ಕಲ್ಲು ಸಕ್ಕರಿ
ಹೊಡಿತಾಳ ಒಮ್ಮೆಲೆ ಹತ್ತು ಬಕ್ಕರಿ .....

೩೨೦೫. ತೋಪಿನ ಸೆರಗಿನ ಸೀರಿ ಉಡತಾಳ
ನನ್ನ ನೋಡಿ ನೋಡಿ ಕಣ್ಣ ಹೊಡಿತಾಳ .....

೩೨೦೬. ಪಾರ್ವತಿ ಮೈಯಾನ ಮಣ್ಣಿನಿಂದಾದ ಗಣಪತಿ
ಗೊಬ್ಬರದಾಗ ಹುಟ್ಟಿದ ನನ್ನಾಕಿದು ಬಾಳ ಕಿತಾಪತಿ .....

೩೨೦೭. ಪಾಲಿಗೆ ಬಂದದ್ದು ಪಂಚಾಮೃತ
ನನ್ನಾಕಿ ಸಿಟ್ಟಿಗೆದ್ರು ಆಗ್ತಾಳ ಐರಾವತ .....

೩೨೦೮. ಸಣ್ಣ ಮೆಣಸಿನಕಾಯಿ ಖಾರ ಹೆಚ್ಚು
ನನ್ನಾ .....ಕಿಗೆ ಅಡಿಗಿ ಮಾಡಂದ್ರ ಸಿಟ್ಟು ಹೆಚ್ಚು.

೩೨೦೯. ಗೊಣ್ಣಿ ಹುಳುಕ ಗೊಬ್ಬರಾನ ಗೋದಿ ಹುಗ್ಗಿ
ನನ್ನಾಕಿಗೆ ಇವತ್ತಿಗೂ ಗೊತ್ತಿಲ್ಲ ಕಣದಾನ ಸುಗ್ಗಿ .....

೩೨೧೦. ಕುಂಟೆತ್ತು ಹೊಲಕ ಊನ
ನನ್ನ ............. ಹೆಂಡತಿ ನನಗ ಊನ.

೩೨೧೧. ಗೌಡ ಕುಣಿದದ್ದೇ ಸುಗ್ಗಿ
ನನ್ನಾಕಿ ಅಂದದ್ದೇ ಮಗ್ಗಿ ......

೩೨೧೨. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಂದ್ರ
ಹಾಸಿಗೆ ಬಿಟ್ಟು ಹಾಸಗಲ್ಲಿನ ಮ್ಯಾಗ ಮಲಗತಾಳ .....

೩೨೧೩. ಹೊಸಾ ಮಾಸ್ತರಕಿಂತಾ ಹಳೆ ವಿದ್ಯಾರ್ಥಿ ಲೇಸು
ನನ್ನ .............. ಳಿ ಗಿಂತಾ ಇವಳ ತಂಗಿ ಲೇಸು.

೩೨೧೪. ಕಾಗಿ ಕೂಡ ಆಡಿ ಗಿಳಿ ಕೆಟ್ಟರ
ಮಗ್ಗುಲ ಮನಿ ಕಲ್ಲಿ ಕೂಡ ಆಡಿ
ನನ್ನಾಕಿ ............. ಕೆಟ್ಲು.

೩೨೧೫. ಊರು ಬ್ಯಾರೆ ಆದ್ರೂ
ದಾರಿ ದೂರಿಲ್ಲ
ನನ್ನಾ ..... ಆಕಿ ದೇಹ ಎರಡಾದ್ರೂ
ಮನಸು ಬ್ಯಾರಿಲ್ಲ.

೩೨೧೬. ಕೌರವರ ಜೊತೇಲಿ ಸೇರಿ
ಭೀಷ್ಮನೂ ಗೋವು ಕದ್ದನಂತ
ಬಾಳೇವು ಬದುಕು ಇಲ್ಲದವರ
ಜೊತೇಲಿ ಗೆಳೆತನಕ
................ಳು ಅಡಗೀನ ಮರತ್ಲು.

೩೨೧೭. ನೀಚರ ಸಂಗ ಅಭಿಮಾನಭಂಗ
ಅತ್ತಿ ಮಾವನ್ನ ಕಾಣ್ತಾಳ ವೈರಿ ಹಾಂಗ .....

೩೨೧೮. ಮುರುಕ ಮನಿಗೆ ಒಡಕ ಗಡಿಗಿ
ನನ್ನಾಕಿ ........... ಅದಾಳ ಎಲ್ಲಿಲ್ಲದ ತುಡುಗಿ.

೩೨೧೯. ಕಾಸಿದ್ದಾಗ ಹಬ್ಬಾ ಮಾಡಬೇಕಂತ
ಕೈಕಾಲು ಗಟ್ಟಿ ಇದ್ದಾಗ
ಪುಣ್ಯಕ್ಷೇತ್ರಕ್ಕ ಹೋಗಬೇಕಂತ
ನನ್ನ ............. ಹೇಣ್ತಿ ಕರಕೊಂಡು ಬಾಜಾರಕ ಹೋದ್ರ
ಸೀರಿ ಅಂಗಡಿ ಮುಂದ ಹಾಯಬಾರ್ದಂತ.

೩೨೨೦. ಕೈ ಎಳದರ ಮೈತಾನs ಬರತೈತಿ
ಈಕಿಗೆ ಒಂದ ಕೊಟ್ರ
ಒಣ ಸೆಡುವು ತಾನs ನಿಲ್ಲತೈತಿ .....

೩೨೨೧. ಈಜಾಡಲಿಕ್ಕೆ ಬರದಿದ್ರ
ನೀರಿಗಿಳಿಬಾರ್ದು
ಕೀಲ ಇಲ್ಲದ
ಬಂಡಿ ಹೊಡಿಬಾರ್ದು
ಬುದ್ದಿಗೇಡಿ ಹೇಣ್ತಿ ........... ಇದ್ರ
ಆಕಿ ಮಾತ ಕೇಳಬಾರ್ದು.

೩೨೨೨. ಈ ಕಿವೀಲಿ ಕೇಳಿ
ಆ ಕಿವೀಲಿ ಬಿಡಬೇಕು
ನನ್ನಾಕಿ .......... ಚಾಡಿ
ಹೇಳಾಕ ಬಂದ್ರ
ನಾಲ್ಕ ಕೆನ್ನಿಗೆ ಕಟಿಬೇಕು.

೩೨೨೩. ಅಣ್ತೀಗೇರಿ ಬಾಚುಣಕಿ
ಕುದುರೀ ಕೆರಿಯೂ ಕರಾರಕಿ
ಬಾಚಿಕೋ ಅಂದ್ರ ನಾಚಿ ನಾಟಕಾ ಮಾಡ್ತಾಳ .....

೩೨೨೪. ಅರ್ಧರೊಟ್ಟಿ ಗಿರ್ದಾ ಚಪಾತಿ ತಿಂದು
ಗಡದ್ದ ನಿದ್ದಿ ಮಾಡತಾಳ .....

೩೨೨೫. ಗಚ್ಚಿನಮನಿ ಬಂಗಾರ ಬಾಗಿಲ
ಬೆಳ್ಳಿ ಕಟ್ಟಿಮ್ಯಾಲ ಕುಂತಗೊಂಡು
ಗುಳ್ಳವ್ವನ ಹಾಡು ಹೇಳ್ತಾಳ .....

೩೨೨೬. ಕೈ ಹಿಡಿದ್ರ ಸುಮ್ನ ಇರ್ತಾಳ
ಕೈಬಿಟ್ರ ಮೈಮ್ಯಾಗ ಬರ್ತಾಳ .....

೩೨೨೭. ಅಟ್ಟದ ಮ್ಯಾಲ ಕುಂತ
ಬಟ್ಟು ಮಾಡಿ ಕರೀತಾಳ .....

೩೨೨೮. ಲಟಕಿ ಹೊಡದ್ರ
ಲುಟು ಲುಟು ಬರ್ತಾಳ.

೩೨೨೯. ಮೈಸೂರು ದಸರಾ ನಾಡಿಗೆಲ್ಲ ಪ್ರಸಿದ್ಧ
ಸ್ವಲ್ಪ ಸಡಿಲು ಬಿಟ್ರೆ ನಮ್ಮಾಕಿ ಎಲ್ಲದಕೂ ಸಿದ್ಧ .....

೩೨೩೦. ನೀರು ಹರಿಯಲು ಹೊಲದಲ್ಲಿ ಹಾಕುತ್ತಾರೆ ಪಂಪ
ನನ್ನಾಕಿ ...... ಹೊಲಕ್ಕೆ ಕಳಿಸಿದರೆ ಹೊಡಯುತ್ತಾಳೆ ನಿದ್ದಿ ಸಂಪ ....

೩೨೩೧. ಚವಳಿಕಾಯಿಪಲ್ಲೆ ಮೆಣಸಿನಕಾಯಿ ಹಿಂಡಿ
ಎಮ್ಮಿ ಹಿಂಡು ಅಂದ್ರ ಸೊಂಡಿ ತಿರುವುತಾಳ .....

೩೨೩೨. ಆರು ರೂಪಾಯಿ ಸೀರಿ
ಮೂರು ರೂಪಾಯಿ ಕುಬುಸ
ಕರಿಕುದರಿ ತಗೊಂಡ
ಕರಿಲಾಕ ಹೋದ್ರ
ಬರೂದಿಲ್ಲಂತ ನ್ಯಾಯಾ ಮಾಡ್ತಾಳ .....

೩೨೩೩. ಆನಿ ಸೊಂಡಿ ಚಿಲಕದ ಕೊಂಡಿ
ಬೆಳುವಲ ಮಾಳಗಿ ಬೆಳಕಂಡಿ
ನನ್ನಾಕಿ ............ ಬಲು ಮಂಡಿ.

೩೨೩೪. ಉದ್ದಾಲಕ ಋಷಿ ಹೆಂಡತಿ ಚೆಂಡಿ
ನನ್ನ ................ಳು ಬಂಗಾರದ ಗಿಂಡಿ.

೩೨೩೫. ಎಮ್ಮಿ ಮ್ಯಾಲ ಕುಂತಗೊಂಡು
ಎಲ್ಲಮ್ಮಗ ಹೋಗ್ತಾಳ
ನಾಯಿಮ್ಯಾಲ ಕುಂತಗೊಂಡು
ದತ್ತಾತ್ರೇಯಗ ಹೋಗ್ತಾಳ

ಕಣದಾಗ ಕುತಗೊಂಡು
ಕಂಕಿ ಎಣಿಸತಾಳ
ಮಂಗ್ಯಾನ ಕರಕೊಂಡು
ಮರಿಯಮ್ಮಗ ಹೋಗ್ತಾಳ .....

೩೨೩೬. ಕಣದಾಗ ಕಂಕಿ
ಹೆಗಲಮ್ಯಾಲ ಕುಂತಿ
ಈಕಿ ಕೈಹಿಡದು ಹಿಡದೈತಿ ಭ್ರಾಂತಿ .....

೩೨೩೭. ಆರೂ ಮೂರು ಒಂಭತ್ತು
ನನ್ನಾಕಿ ನನಗ ಸಂಪತ್ತು .....

೩೨೩೮. ಒಂಟಿ ಎಲುಬು ಗಂಟು ಮೂಗು
ಪಂಟ ಹೊಡಕೋತ ಎಂಟು ಮನಿ ತಿರಗ್ತಾಳ ......

೩೨೩೯. ರಾತ್ರಿ ರಾಣಿ ಹೂ ವಾಸನಿ
ನನ್ನಾಕಿ ನನಗ ಅಂತಾಳ ಹುಸೇನಿ .....

೩೨೪೦. ಕಂಬದ ಮರೆಗೆ ಕುಂತಗೊಂಡು
ಕಣ್ಣ ಹೊಡಿತಾಳ ......

೩೨೪೧. ಕುಸುಬಿ ಹೂವು ಚೆಂದ ಹಳದಿಗೆಂಪು ಬಣ್ಣ
ಅಲಸಂಧಿ ಹೂ ಚೆಂದ ನೇರಲ ಬಣ್ಣ
ಗುರೆಳ್ಳ ಹೂ ಚೆಂದ ಹಳದಿ ಬಣ್ಣ
ಎಳ್ಳ ಹೂ ಚೆಂದ ಜಾಂಬಳಿ ಬಣ್ಣ
ಜೊಗಚಿ ಹೂ ಚೆಂದ ಬೆಳ್ಳನ ಬಣ್ಣ
ಗುಲಾಬಿ ಹೂ ಚೆಂದ ಕೆಂಪು ಬಣ್ಣ
ನನ್ನಾಕಿ ...........ಗೆ ನಾನs ಚೆಂದ ಕಾಮಣ್ಣ.

೩೨೪೨. ಗಂಡ ಹೂ ಗುಲಾಬಿ ಹೂ
ಚೆಂಡ ಹೂ ಚಿತ್ತಾರ ಹೂ
ಹೂವಿನಂತಾ ಗಂಡ ಮಗನ್ನ ಬೇಡಿ
ಹೂವಿನಂತಾ ಹಾದ್ಯಾಗ ದಿಂಡರಕಿ ಹಾಡ್ತಾಳ .....

೩೨೪೩. ಜಂತಿಲ್ಲದ ಮನ್ಯಾಗ
ಚಿಂತಿಲ್ದ ಕುಂತಾಳ
ಸುಂಕ ಇಲ್ಲದ ಮನಿಗೆ
ಸುಣ್ಣಾ ಬಳಿತಾಳ .....

೩೨೪೪. ತೆಲ ಬಾಚೂದು ಹಣಿಗೆ
ನನ್ನಾಕಿ ಗಂಟು ಬಿದ್ದಾಳ ನನಗ
ರಕ್ತಾ ಹೀರು ತಗಣಿ .....

೩೨೪೫. ಹತ್ತು ಹತ್ತಿಲೆ ನೂರು
ಎರಡು ಚೀಲಕ್ಕ ಒಂದು ಹೇರು
ಹಾಲು ಸಕ್ಕರಿ ಗೋಡಂಬಿ ಇದ್ದ್ರ ಖೀರು
ಜಗಳ ಗಂಟಿ ನನ್ನ ಹೆಂಡತಿ
ಸುಮ್ನ ಸುಮ್ನ ಕೊಡ್ತಾಳ ತವರೀಗೆ ತಾರು ......

೩೨೪೬. ಹೋಳಿಗೆ ಮಾಡತಾ ಹೂರಣ ತಿಂತಾಳ
ದ್ವಾಸಿ ಮಡಿ ತೂತ ಎಣಿಸತಾಳ .....

೩೨೪೭. ನೀರು ಕುಡಿಲಾಕ ತಂಬಿಗಿ ತಾ ಅಂದ್ರ
ತಂಬಿಗಿ ತೊಗೊಂಡು ಮಾರೀಗೆ ಹೋಗ್ತಾಳ .....

೩೨೪೮. ಬಂಗಾರದ ಬಳಿ ಲಿಂಬಿ ಹುಳಿ
ದಾರ್‍ಯಾಗ ಹಾದಾವು ರೇಲ್ವೆ ಹಳಿ
ಬಂದಾರಿಲ್ಲಂತ ಮಂದ್ಯಾಗ ಹುಡಕ್ತಾಳ
ಸಿಕ್ಕ್ರ ಕೇಳ್ತಾಳ ಕಾಲಾಗ ರುಳಿ .....

೩೨೪೯. ಬಾ ಅಂದ್ರ ಬರ್‍ತಾಳ
ಹೋಗಂದ್ರ ಹೋಗ್ತಾಳ
ಮಾಡಂದ್ರ ಮಾಡ್ತಾಳ
ಬ್ಯಾಡಂದ್ರ ಬಿಡ್ತಾಳ
ಹಾಳಾಗಿ ಹೋಗಂದ್ರ
ಹೊಳ್ಳೀ ಹೊಳ್ಳಿ ಬರ್‍ತಾಳ .....

೩೨೫೦. ಚಂದ್ರಮುಖಿ ಅಂದ್ರ ಕುಲು ಕುಲು ನಗ್ತಾಳ
ಶೂರ್ಪನಖಿ ಅಂದ್ರ ಉರಿ ಉರಿ ಉರಿತಾಳ .....

೩೨೫೧. ಮ್ಯಾಲ ಮ್ಯಾಲ ಬೆಳಕೇ ಬೆಳಕು
ಒಳಗ ಒಳಗ ಹುಳುಕೇ ಹುಳುಕು
ನನ್ನ ಹೇಣ್ತಿ ............ ಬಾಯಿ ಹರಕೇ ಹರಕು.

೩೨೫೨. ರೈತರಿಗೆ ಮಳೆ ಬೇಕು
ಬಡವರಿಗೆ ಹಣ ಬೇಕು
ಸಿರಿವಂತರಿಗೆ ದಯೆ ಬೇಕು
ದುಷ್ಟರಿಗೆ ಭ್ರಷ್ಟರಿಗೆ ಶಿಕ್ಷೆ ಬೇಕು
ರಾಜಕಾರಣಿಗಳಿಗೆ ಶೀಲ ಬೇಕು
ಅಧಿಕಾರಿಗಳಿಗೆ ವಿನಯ ಬೇಕು
ನೀತಿವಂತರಿಗೆ ದೇವರ ದಯೆ ಬೇಕು
ನನ್ನ .............ಳಿಗೆ ಶಿವಭಕ್ತಿ ಬೇಕು.

೩೨೫೩. ಮುತ್ತಿನಂತಾಕಿ ಸೋದರತ್ತಿ
ಕಳ್ಳ ಹಲಿವುಳದಾಕಿ ಹಾದರಗಿತ್ತಿ
ನಮ್ಮಾಕಿ ಅದಾಳಲ್ಲ ಹೆಸರಗತ್ತಿ .....

೩೨೫೪. ಜಿಲೇಬಿ ನೆಸಿಸಿ ಜೊಲ್ಲು ಸುರಿಸಾಕಿ
ಜಾಲಿ ಗಿಡಕ ಜೋಕಾಲಿ ಕಟ್ಟಿ
ಜೀಕಾ ಹೊಡಿಯಾಕಿ .....

೩೨೫೫. ದುರ್ಜನರ ಸಂಗ ಮಾನಭಂಗ
ಯಾರಿಗಾದ್ರೂ ಇರಬೇಕು ಸತ್ಸಂಗ
ನನ್ನಾಕಿ ................ ಹಗಲೆಲ್ಲಾ
ಮಾಡ್ತಾಳ ನನ್ನ ಶಾಂತಿಭಂಗ.

೩೨೫೬. ಕದ್ದ ಗುಗ್ಗರಿ ತಿಂದು
ಕೌದಿಯೆಲ್ಲಾ ರಾಡಿ ಮಾಡ್ಯಾಳ .....

೩೨೫೭. ಕುರ್ಚಿ ಮ್ಯಾಲ ಕುಂತ
ಕರಚಿಕಾಯಿ ತಿಂತಾಳ
ಕುರ್ಚಗಿ ತಗೊಂಡ
ಕಸಾ ತಗಿ ಅಂದ್ರ
ಹಲ್ಲ ಕಿಸಿತಾಳ .....

೩೨೫೮. ಸರಗಿ ಸರಗಿ ಸರಕ್ಕ
ಕಾಲಗೆಜ್ಜಿ ಗಿಲಕ್ಕ
ಮೂಗು ತಿರಿವ್ಯಾಳ ಮುರಕ್ಕ
ಮಗ್ಗಲಕ ಬರ್ತಾಳ ಖಡಕ್ಕ ....

೩೨೪೯. ಹಸುವಿನ ಹಾಲು, ಕಾಸಿ ಸೊಸಿದ ತುಪ್ಪ
ಹಸಿವು ಇಲ್ಲಂತ ಹರವಿ ಹಾಲ ಹಿಗ್ಗತಾಳ .....

೩೨೬೦. ಸುಳ್ಳ ಹೇಳ್ತಾಳ ಮಳ್ಳ ಮಾಡ್ತಾಳ
ಒಳ್ಳೊಳ್ಳೆಯವರ ಮಗಳಂತ ಬಳ್ಳ ಚೀಪತಾಳ .....

೩೨೬೧. ಹತ್ತಿ ಕಟಿಗೀಲೆ ಬಡದರ
ತತ್ತರಿಸಿ ಹಿತ್ತಲ ತುಂಬಾ ಓಡ್ಯಾಡತಾಳ ....

೩೨೬೨. ತೊಗರಿ ಕಟಿಗೀಲೆ ಜಾಡಿಸಿದರ
ಕಬುರಿಲ್ದ ಕುಣದಾಡತಾಳ .....

೩೨೬೩. ಹಸಿ ಕೊಬ್ರಿ ಬಿಸಿ ಚೂರಮರಿ
ಹರಗೋಲದಾಗ ಕುಂತುಗೊಂಡು
ಹರಾ ಹರಾ ಅಂತಾಳ .....

೩೨೬೪. ಹಸರ ಸೀರಿ ಉಟ್ಟು ಹನ್ನೆರಡು ನೀರಿಗಿ ಬಿಟ್ಟು
ಕಟ್ಟಿಮ್ಯಾಲ ಕುಂತು  ಕರಕರದು ತೋರಿಸ್ತಾಳ .....

೩೨೬೫. ಹಂತಿ ಕಟ್ಟಿದರ ಹಂತಿ ಹಾಡು
ಕುಟ್ಟಾರಕುಂತ್ರ ಕುಟ್ಟು ಹಾಡು
ಬೀಸಾಕ ಕುಂತ್ರ ಬೀಸೂ ಹಾಡು
ಬಸೂರು ಆದ್ರ ಸೀಮಂತ ಹಾಡು
ಬಸೂರಾದ್ರ ಶಬ್ದ ಕೇಳಿ
ಕೊಸರಾಡಿ ಹೊಟ್ಟಿ ಹೊಟ್ಟಿ ಬಡಕೋತಾಳ .....

೩೨೬೬. ಹೊಲದಾಗ ಹತ್ತಿ ಪಣತ್ಯಾಗ ಬತ್ತಿ
ನಮ್ಮನ್ಯಾಗ ನನ್ನಾಕಿ ಅದಾಳಲ್ಲ ಬಿಚಗತ್ತಿ .....

೩೨೬೭. ಹೊಳ್ಯಾಗ ಹೊಯ್ಕೊಳ್ತಾಳ
ಕೆರ್ಯಾಗ ಕೆರಕೋತಾಳ
ಬಾವ್ಯಾಗ ಬಡಬಡಸ್ತಾಳ
ಹಳ್ಳದಾಗ ಹಲ್ಲ ಕಿಸಿತಾಳ
ನಾನಂದ್ರ ತರನನ ಅಂತಾಳ
ಅತ್ತೀ ಮಾವನ ಮ್ಯಾಲ ಉರಿತಾಳ .....

೩೨೬೮. ಗ್ಯಾಸ ಅಂದ್ರ ಹೂಸಂತ ತಿಳದಾಳ
ಗಾಣದವನ ಕೂಡ ಜಗಳಾಡಿ
ಎಣ್ಣೀ ಕಾಣದ ಕುಂತಾಳ .....

೩೨೬೯. ಅತ್ತೀ ಮಾವಗ ನೀರು ಮಜ್ಜಿಗೆ ಕುಡಿಸ್ತಾಳ
ತವರ ಮನಿಗೆ ಹಾಲು ಮೊಸರು ಕಳಿಸ್ತಾಳ .....

೩೨೭೦. ಬಡದೇನಂದ್ರ ಈಕಿ ಅತ್ತಿ ಮಗಳು
ಕೊಂದೇನಂದ್ರ ಈಕಿ, ಮಾವನ ಮಗಳು .....

೩೨೭೧. ಊರು ಪಕ್ಕದಾಗ ಹೊಲಾ ಮಾಡಬಾರ್ದು
ಓಡಿ ಹೋಗೂ ಹೆಣ್ಣು ತರಬಾರ್ದು
ನನ್ನಾಕಿ ಹೆಸರ ಹೇಳ್ತೀನಿ ಗದ್ಲಾ ಮಾಡಬಾರ್ದು .....

೩೨೭೨. ಒಳ್ಳೆ ಅಳಿಯ ಸಿಕ್ತ್ರ ಒಬ್ಬ ಮಗ ಸಿಕ್ಕಾಂಗ
ನನ್ನಾಕಿ .............. ಒಳ್ಳೇಕಿ ಸಿಕ್ಕಾಳ
ಅತ್ತಿಗೆ ಮಗಳ ಇದ್ದಾಂಗ.

೩೨೭೩. ನನ್ನ ಸಿರಿತನ ನನ್ನತ್ತಿ ಸಂತೀಲಿಂದ ಬರೋತನಕ
............... ರೊಂದಿಗಿನ ಸಿರಿತನ ಅನುಗಾಲತನಕ.

೩೨೭೪. ಕದ್ದು ಹೋಳಿಗಿ ತಿನ್ನಾಕ ಕೊಟ್ರ
ಬೆಲ್ಲ ಇಲ್ಲಂತ ಹೊಳ್ಳಿ ಹೊಳ್ಳಿ ನೋಡ್ತಾಳ .....

೩೨೭೫. ಕಣಾ ಸರಸತಿ ಮೇಟಿ ಗಣಪತಿ
ನನ್ನ ಹೇಣ್ತಿ ಪಾರ್ವತಿ .....

೩೨೭೬. ಧಾರವಾಡದ ಎಡಕ್ಕಿರುವುದು ಡೆಂಟಲ್
ಧಾರವಾಡದ ಬಲಕ್ಕಿರುವುದು ಮೆಂಟಲ್
ನನ್ನಾಕಿ .............. ತೂಕವಿರುವುದು
ಬರೋಬ್ಬರಿ ಎರಡು ಕಿಂಟಲ್.

೩೨೭೭. ನೀರಿನ ನೆಲಿ ಕುದುರಿನೆಲಿ ತಿಳಿಯೂದಿಲ್ಲ
ನನ್ನ ............ ರಮಣಿ ಅಳೂದ ನಗೂದ ತಿಳಯೂದಿಲ್ಲ.

೩೨೭೮. ನಮ್ಮ ದೇವರ ಶಕ್ತಿ ನಮಗ ಗೊತ್ತು
ನನ್ನ ಹೇಣ್ತಿ ಶಕ್ತಿ ತಿನ್ನೂದರಾಗ ಗೊತ್ತು .....

೩೨೭೯. ಕಾಟಾಚಾರಕ್ಕೆ ಕಾಸೀಗೆ ಹೋದ್ರ
ಅಲ್ಲಿ ಕಾಣೂದು ಬರೀ ಕಲ್ಲು
ನನ್ನ ಹೆಂತ್ತಿ ಅದಾಳಲ್ಲ
ಎಲ್ಲಮ್ಮಗ ಹೋದ್ರೂ ಬರಿ ಸುಳ್ಳು .....

೩೨೮೦. ಗೊಡ್ಡಮ್ಮಿ ಸಗಣಿ ಹಾಕಿದ್ದೇ ಲಾಭ
ನನ್ನಾಕಿ ............ ಹಗಲೆಲ್ಲಾ
ತವರ ಮನಿಗೆ ಹೋದದ್ದೇ ಲಾಭ.

೩೨೮೧. ಕೊಡ್ಲೀಗೆ ಹೆದರದ ಮರ
ಕೊಡ್ಲಿ ಕಾವೀಗೆ ಹೆದರೀತ?
ತನ್ನ ತಂದಿ ತಾಯೀಗೆ ಹೆದರದಾಕಿ
ಅತ್ತಿ ಮಾವಗ ಅಂಜತಾಳ? ನನ್ನ ಸುಂದರಿ .....

೩೨೮೨. ಚಂದಪ್ಪನ ಬೆಳಕು ಕಳ್ಳರಿಗೆ ವೈರಿ
ನನ್ನಾಕಿ ........... ಥಳಕು ನಮ್ಮನ್ಯಾಗೆಲ್ಲ ವೈರಿ.

೩೨೮೩. ಕುದುರೀಗೆ ಕೋಡಿಲ್ಲ
ಕೋಣಕ್ಕ ಡುರುಕಿಲ್ಲ
ಎಷ್ಟು ಮಾರಿಮಾರಿ ಹೊಡದ್ರೂ
ನನ್ನ ............. ಕಿಗೆ ಬುದ್ಧಿ ಬರಲಿಲ್ಲ.

೩೨೮೪. ನಡಿಯಾವಾ ಎಡುವುತಾನ
ಬರೆಯಾವ ತಪ್ಪತಾನ
ನನ್ನಾಕಿ ನಡೀಲಿಲ್ಲ ಬರೀಲಿಲ್ಲಾ
ಬಂಗಾರಕ ಹಟಾಮಾಡಿ ದಿನಾ ತಪ್ತಾಳ .....

೩೨೮೫. ಕಾಮರತಿ ಸದರಿಗೆ ಚೆಂದ
ಸತಿಪತಿ ಒಂದಾದ್ರ ಸಂಸಾರ ಚೆಂದ
ನನ್ನ ಅರ್ಧಾಂಗಿ .............. ನನ್ನೊಂದಿಗಿದ್ದರೆ ಅಂದ ಚೆಂದ.

೩೨೮೬. ತಿದ್ದಿ ಮಾಡಿದ ಮುಖ
ಮುದ್ದು ಮಾಟದ ಮುಖ
ನನ್ನಾಕಿಗೆ ನಾನೇ ದೈವದತ್ತ ಸಖ .....

೩೨೮೭. ಶರಣರಿಗೆ ಎರಗಿ ಹಿರಿಯರಿಗೆ ಬಾಗಿದ
ನನ್ನಾಕಿ ಕನ್ನಡಿಯಂತಾಕಿ
ಅತ್ತಿ ಮಾವರ ಕಕುಲಾತಿಯಿಂದ ಕಂಡಾಕಿ
ನನ್ನ .................ಕಿ ಸಂಸಾರ ಸಾಗ್ಯೈತಿ
ಶಾಂತ ಪ್ರಶಾಂತದ ಗಂಗೆಯಂತೆ ಸಾಗಿ.

೩೨೮೮. ಹತ್ತ ಪುಟ್ಟಿ ಹೂವು
ಇಪ್ಪತ್ತು ಪುಟ್ಟಿ ಪತ್ರಿ
ಒಪ್ಪತ್ತು ಮಾಡೆನಂತ ಪೂಜೆ ಮಾಡಿ
ತಂಪತ್ತಿನಾಗ ಕುಂತಗೊಂಡು
ತಂಬಿಗೆ ಹಾಲು ಕುಡಿತಾಳ .....

೩೨೮೯. ಅವರಿ ಹೂವಿನಂತಾ ಬಣ್ಣ
ತಾವರಿ ಹೂವಿನಂತಾ ಕಣ್ಣು
ಚೊಗಚೀ ಹೂವಿನಂತಾ ಚೆಲುವು
ಬೋಳೆ ಬಸವ ಅಂತ ನನ್ನ ಬಗಲಾಗ ಬರ್ತಾಳ ....

೩೨೯೦. ಮನಿತುಂಬಾ ಮಕ್ಕಳಿದ್ರ ಚೆಂದ
ನನ್ನಾಕಿ ............. ಮನ್ಯಾಗ ಇರದಿದ್ದ್ರ ಚೆಂದ.

೩೨೯೧. ಕಣದಾಗ ಬಿದ್ದೈತಿ ಕಾಳಿಲ್ಲದ ಕಂಕಿ
ಒಲಿಯಾಗ ಬಿದ್ದೈತಿ ಬೂದಿ ಮುಚ್ಚಿದ ಬೆಂಕಿ
ನನ್ನಾಕಿ ....... ಕೇಳೇ ಕೇಳ್ತಾಳ ಕೆಲಸಕ್ಕ ಬಾರದ ಒಂಕಿ.

೩೨೯೨. ಜರದ ಮಡಿ ಉಟ್ಟ
ಸರಗಿ ಒಂಕಿ ಇಟ್ಟ
ಹಣಿ ಮ್ಯಾಗ ಕುಂಕುಮ ಬಟ್ಟ
ಏನ್ ಹೇಳ್ಲಿ ನಮ್ಮಾಕಿ .......... ತಿಟ್ಟ.

೩೨೯೩. ನಿನ್ನ ಹಲ್ಲು ದಾಳಿಂಬರ ಅಂದ್ರ
ಹಲ್ಲ ಕಿಸ್ತ ಹನ್ನೆರಡ ತಾಸ ನಿಲ್ಲತಾಳ .....

೩೨೯೪. ಸಂಕ್ರಾಂತಿ ಹಬ್ಬ ಎಳ್ಳುಬೆಲ್ಲ ಕೊಡ್ತೇನಿ ಅಂದ್ರ
ಎಳ್ಳುಬ್ಯಾಡ ಬರಿಬೆಲ್ಲಂತ ಮೆಲ್ಲಕ ಹೇಳ್ತಾಳ .....

೩೨೯೫. ಗೆಜ್ಜಿ ಕಟಗೊಂಡು
ಮಜ್ಜಿಗೆ ಮಾರ್ತಾಳ .....

೩೨೯೬. ಮಕ್ಕಳ ಬೇಕಂತ ಮರುಗತಾಳ
ತವರ ಮನಿ ಇಲ್ಲಂತ ಕೊರಗತಾಳ
ನಾನದಿನಂತ ಜೀವಾನಾ ಹಿಡಿದಾಳ .....

೩೨೯೭. ಬಿಸ್ಕೀಟು ಬಂಗಾರ
ತಿಮ್ಮಪ್ಪಗ ಹಾಕಿದ ಸಿಂಗಾರ
ಪದ್ಮನಾಭಗುಡಿ ಭಂಡಾರ
ಎಲ್ಲಾ ಕೊಟ್ಟ್ರ ಒಲ್ಲೊಲ್ಲೆ ಅಂತಾಳ .....

೩೨೯೮. ಉಂಗುರಬೇಕಂತ
ಮಂಗ್ಯಾನಾಂಗ ಹಾರ‍್ಯಡತಾಳ .....

೩೨೯೯. ಹಾಗಲಕಾಯಿ ಹಂಡಬಂಡ
ನನ್ನಾಕಿ ........... ಮಾತು ಕಂಡ ತುಂಡ.

೩೩೦೦. ಹತ್ತರಕೂಡ ಹನ್ನೊಂದು
ಫರಸಿ ಕೂಡಾ ಗೋವಿಂದ
ನನ್ನ ಹೇಣ್ತಿ ಹೆಸರು ಮಕರಂದ .....

೩೩೦೧. ಮೂಗಿನ್ಯಾಗ ಮುತ್ತಿನ ನತ್ತ
ನನಗ ತಿಳಿದಿಲ್ಲ ನನ್ನಾಕಿ ....... ಗತ್ತ.

೩೩೦೨. ಊರ ಮುಂದಿನ ಹೊಲ
ಹೊಲದಾಗ ಜೋಳದ ನಿಲಾ
ನನಗ ಬಂದೈತಿ ಕಂಕಣಬಲಾ
ನನ್ನ ಆಕಿ ............ ಪ್ರೀತಿಗಿಲ್ಲ ಕುಲಾ.

೩೩೦೩. ಸಪ್ಪನ್ನ ಬ್ಯಾಳಿಯಂತ ಮಾರಿ ಇಟಗೊಂಡು
ಮಂಡಿ ಪಲ್ಲೆ ಸ್ವಾರಿ ಹಿಡಕೊಂಡು
ಮೈತುಂಬಾ ಸೆರಗ ಹೊದ್ದುಕೊಂಡು
ಗಂಡನ ಕಂಡು ಸೊಂಡಿ ತಿರುವುತಾಳ .....

೩೩೦೪. ಕರದ ಕರ್ಚಿ ಕಾಯಿ
ಎಳ್ಳ ಹಚ್ಚಿದ ಸೆಜ್ಜಿ ರೊಟ್ಟಿ
ಎಳ್ಳು ಉಂಡಿ ಎಲ್ಲಾ ತಿಂದು
ಉಳ್ಳ್ಯಾಡಿ ಅಳ್ತಾಳ ......

೩೩೦೫. ಬಸೂರು ಆಗಾಕಿ
ಮಕ್ಕಳ ಬಯಸಾಕಿ
ಮುತ್ತಿನ ಉಡಿಯಕ್ಕ ಹಾಕಿಸಿಕೊಂಡು
ಮುತ್ತು ಕೊಡ್ತಾಳ .....

೩೩೦೬. ಹೊಟ್ಟೆಗಿರು ಕೂಸಿನ ಮಾರಿ
ನೋಡೇನಂತಾಳ ಗೌರಿ
ನೆನಸತಾಳ ತವರ ಮನಿ ದಾರಿ
ಹೋಗೇನಂತಾಳ ಅಲ್ಲಿಗಿ ಹಾರಿ ....

೩೩೦೭. ಕೂಸು ಹುಟ್ಟೂದಕ ಮೊದಲ ಕುಲಾಯಿ ಹೊಲಿಶ್ಯಾಳ
ತಾಸ ಗಟ್ಟಲೆ ಬಿಸಲಾಗ ಕುಂತು ಗೇನಕಿ ಹಾಕ್ತಾಳ ....

೩೩೦೮. ಹಸರ ಹೂವಿನ ಸೀರಿ ಉಟಕೊಂಡ
ಬಸುರ ಇದ್ದೀನಂತ ಪಿಸಿಗುಡತಾಳ .....

೩೩೦೯. ಕಲ್ಲಸಕ್ಕರಿ ಗಂಟು
ನನಗ ......... ಗೂ ಬ್ರಹ್ಮ ಗಂಟು.

೩೩೧೦. ಕಟ್ಟಿ ಮ್ಯಾಲ ಕರ

ಮೇವು ಇಲ್ಲದ ಬರ
ಏರ್ಯಾವ ದೀನಸಿ ದರ
ಈಕಿ .............. ಗೂ ನನಗೂ ವರ.

೩೩೧೧. ಬ್ರಹ್ಮನ ಹೆಂಡತಿ ವಾಣಿ
ಆಕಿಗಿಂತ ನನ್ನಾಕಿ ........... ಬಲು ಜಾಣಿ.

೩೩೧೨. ಬಣ್ಣದ ಸೀರಿ ಉಟಗೊಂಡ
ರಜ್ಜಾಗ ಕುಂತಾಳ ಗಜ್ಜರಿಯಂತಾಕಿ.

೩೩೧೩. ಬಿಳಿ ಜೋಳದ ಕಿಚಡಿ
ಹಾಲಿನಂತಾ ಮಜ್ಜಿಗಿ
ಬಿಸಲಾಗ ಬಂದಿನಂತ
ಹಸನಾಗಿ ನೀಡತಾಳ .....

೩೩೧೪. ಹಸೆ ಹಾಲು ಬಿಸಿ ಅನ್ನ
ಹಸಿವಿ ಇಲ್ಲಂತ ತುಸಾ ಉಣತಾಳ .....

೩೩೧೫. ಕಮ್ಮನ್ನ ಸಾರು, ಬಾಯಾಗ ನೀರು
ಸೋರಗಣ್ಣಿ ಮಾಡಿ ನನ್ನ, ದಾರಿ ನೋಡ್ತಾಳ .....

೩೩೧೬. ಹೊಲದಾಗ ಇರುವುದು ಪುಂಡಿ
ಮನ್ಯಾಗ ಇರುವುದು ಹಿಂಡಿ
ನೋಡಾಕಬೇಕು ಜೋಗದ ಗುಂಡಿ
ಕೀಲಿಲ್ದ ಹೊಡಿಬಾರ್ದು ಬಂಡಿ
ಮಾಳಿಗಿ ಮನೆಗೆ ಬೇಕು ಬೆಳಕಿಂಡಿ
ಉದ್ದಾಲಕ ಋಷಿ ಹೆಂಡತಿ ಚೆಂಡಿ
ಸೆಗಣಿಗಂತಾರ ಹೆಂಡಿ
ಪಂಚಮಿಗೆ ಹಬ್ಬಕ ಮಾಡ್ತಾರ ಉಂಡಿ
ತುಪ್ಪಾ ಹಾಕೂದಕ ಅಂತಾರ ಗಿಂಡಿ
ಸೀಮಂತನಿಗೆ ಹಾಕ್ತಾರ ದಂಡಿ
ದಂಡಿಗಿ ಹೋದವರಾಂಗ ಮಾಡ್ತಾಳ
ನನ್ನ ಹೇಣ್ತಿ ........... ರಣ ಚಂಡಿ.

೩೩೧೭. ಗ್ವಾಡ್ಯಾಗ ಹೆಂಟಿ, ಗುಡ್ಯಾಗ ಗಂಟಿ
ನನ್ನಾಕಿ ............ ಬಲು ಜಗಳಗಂಟಿ.

೩೩೧೮. ಕಂಟ್ಯಾಗ ಕಂಟಿ ಮುಳ್ಳ ಕಂಟಿ
ಮಳ್ಳ ನನ್ನಾಕಿ ............. ಹಸೀ ಶುಂಟಿ.

೩೩೧೯. ಎಂಟು ಗಂಟೆಗೆ ಏಳಾಕಿ
ಗಂಡು ಮಕಾ ಹಾಕಾಕಿ
ಸೊಂಟದ ನೆವಾ ತಗ್ಯಾಕಿ .....

೩೩೨೦. ಪಡ್ಡ ತಿಂದ ಎಡ್ಡ ಹಚ್ಚತಾಳ .....

೩೩೨೧. ಅಂಟು ಬೆಲ್ಲ ಗಂಟ ಹುಗ್ಗಿ
ನೆಂಟರಿಗೆ ಉಣಿಸಿ ಪಂಟ ಹೊಡಿತಾಳ ....

೩೩೨೨. ಕತ್ತಲದಾಗ ಕುಂತ
ಕಡಬು ತಿಂತಾಳ .....

೩೩೨೩. ಸಂತ್ಯಾಗಿಂದ ತರತಾಳ
ಮನ್ಯಾಗ ಕುಂತ ಅಳತಾಳ
ಉಳ್ಳಾಗಡ್ಡಿ ಪಾಚೀಲೆ
ಉರ್ಲು ಹಾಕ್ಕೊಂತೀನಿ ಅಂತಾಳ .....

೩೩೨೪. ಜಂತಿ ಇಲ್ಲದ ಮನ್ಯಾಗ
ಚಿಂತಿ ಇಲ್ದ ಕುಂತಾಳ
ಬೆಳಿ ಒಣಗಿದ ಹೊಲ್ದಾಗ
ಬುಳು ಬುಳು ಅಳ್ತಾಳಾ .....

೩೩೨೫. ಎಲ್ಲಾರ ಮನಿ ದ್ವಾಸಿ ತೂತು
ನಮ್ಮನಿ ಎಮ್ಮಿ ಗಬ್ಬ ಆತು
ನನ್ನ ರಾಣಿ ............. ಚಿಂತಿ ಹೋತು.

೩೩೨೬. ಬೀಸೂ ಕಲ್ಲ ಹೋದ್ವು
ಕುಟ್ಟೊ ಒನಕಿ ಹೋದ್ವು
ಬೀಸೂ ಕುಟ್ಟೊ ಹಾಡ ಹೋದ್ವು
ಹಂತಿ ಪಂತಿ ಹೋದ್ವು
ಹಂತಿ ಕಟ್ಟೊ ಕಣಾ ಹೋದ್ವು
ಹಂತೀ ಪದಾಗಿದಾ ಹೋದ್ವು
ಏನೇನ ಬಂದ್ವು ಏನೆಲ್ಲಾ ಹೋದ್ವು
ಮದುವಿಪದಾ ಹೋದ್ವು
ಮದವೀನೂ ಹೋದ್ವು ಅಂಥಾ
ಹೊಲಾ ಹೋದ್ವು ವಲಿ ಹೋದ್ವು
ರೈತಾಪಿ ಮನಿ ಹೋದ್ವು ರೈತರ ಜೀವ ಹೋದ್ವು
ನನ್ನಾಕಿ ............. ಜೈನಿಗೆ ನನ್ನ ಹೊಲಾಮನಿ ಹೋದ್ವು.

೩೩೨೭. ಮೈಸೂರಿಗೆ ಹೋಗಿ ಬಂದಾಳ
ರಾಗಿ ಮುದ್ದಿ ಮಾಡ್ಯಾಳ
ಗಂಟ ಗಂಟ ಮುದ್ದಿ ನೀಡಿ
ಸೊಂಟ ಹಿಡದೈತಂತ ಸಂದ್ಯಾಗ ಬಿದ್ದಾಳ .....

೩೩೨೮. ಬಾರಿಗಿಡದಾಗ ಕುಂತ
ತಾರ ಮಾಡತೀನಂತಾಳ
ಅವರಪ್ಪಗ ಬರಬೇಕಂತಾಳ .....

೩೩೨೯. ಮೂಗು ಹಿಡಿದ್ರ ಬಾಯಿ ತಾನs ತಗೀತೈತಿ
ಸೋಗು ಮಾಡಿಕೊಂಡು ಸಂಗಟಿ ಉಣತಾಳ .....

೩೩೩೦. ಹೊಳಿಯ್ಯಾಗ ಕುಂತ ಹೊಡದಾಡತಾಳ
ಕೆರ್‍ಯಾಗ ಕುಂತ ಕೆರಕೊಂತಾಳ
ಭಾವ್ಯಾಗ ಕುಂತೆ ಎದಿ ಬಡಕೊಂತಾಳ
ಕಟ್ಟಿ ಮ್ಯಾಲ ಕುಂತ ಕುಣದಾಡತಾಳ .....

೩೩೩೧. ಹಾಗಲಕಾಯಿ ತಿಂದ
ಹಳದಾಗ ಮಲಗ್ಯಾಳ .....

೩೩೩೨. ಹಿಂಡಿ ಹಿಡಿದ ಕೈಲೆ
ಮಂಡಿ ತುರಿಸಿಕೊಳ್ಳತಾಳ .....

೩೩೩೩. ಕೂಳು ತಿಂತಾಳ ಕತ್ತರಿಸಿ
ಲಂಡ ಒಗಿತಾಳ ಎತ್ತರಿಸಿ .....

೩೩೩೪. ಜೆಡಿ ಹಿಡದು ಜಗ್ಗಿದರ
ಉಡದಂತಾಕಿ ಒಡ್ಡಾಡಳ್ತಾಳ .....

೩೩೩೫. ಹೊಲ್ದಾಗ ಹುಳ್ಳಿ
ನನ್ನಾಕಿ ............. ಮಳ್ಳಿ.

೩೩೩೬. ಹೊಲ್ದಾಗ ಹತ್ತಿ
ಪಣತ್ಯಾಗ ಬತ್ತಿ
ನಮ್ಮನ್ಯಾಗ ಇರತಾದ ಒಂದು ಹೆಣ್ ಕತ್ತಿ .....

೩೩೩೭. ಕಾಗದ ಕತ್ತರಿಸೋದು ಕತ್ತರಿ
ದೇವರಿಗೆ ಏರ್ಸೂದು ಪತ್ರಿ
ನನ್ನ ............ವಳ ಹೆಸರು ಹೇಳ್ತೀನಿ ಖಾತ್ರಿ.

೩೩೩೮. ಕುದುರಿ ಕುದುರಿ ಮರಿ
ಕತ್ತೆ ಕತ್ತೆ ಮರಿ
ಕೋಳಿ ಕೋಳಿ ಮರಿ
ನನ್ನಾಕಿ ...... ಮಂಗ್ಯಾನಮರಿ.

೩೩೩೯. ಇಂದಿರಾ ಗಾಂಧೀನೆ ಬೇರೆ
ಮಹಾತ್ಮ ಗಾಂಧಿನೇ ಬೇರೆ
ಮೋನಿಕಾ ಗಾಂಧೀನೇ ಬೇರೆ
ಸೋನಿಯಾ ಗಾಂಧೀನೇ ಬೇರೆ
ಈಕಿ ತಂಗಿ ಗುಣಾನೇ ಬೇರೆ
ಈಕಿ ನನ್ನಾಕಿ ....... ಗುಣಾನೇ ಬೇರೆ.

೩೩೪೦. ನಳದ ನೀರ ಬರದಿದ್ದರೆ
ನದೀ ಮ್ಯಾಲೆ ಸಿಟ್ಟಗೇಳ್ತಾಳ ......

೩೩೪೧. ಈಚಲ ಗಿಡ ನೋಡಿದಾಗ ಸೇಂದಿ
ನೆನಪಿಗೆ ಬರತೈತಿ
ನನ್ನಾಕಿ ................ ನೆನಪಾದ್ರ
ಹಾಳೂರ ದೆವ್ವದ ನೆನಪು ಆಗತೈತಿ.

೩೩೪೨. ಮದುವಿಗು ಮೊದಲ ಮಕ್ಕಳಾದ್ರ
ಹಾದರ ಅಂತಾಳ
ಸೋದರ ಮಾವಾ ಸಾಕಿದ ನಾಯಿ
ಹೋಗ್ಗ ಅಂತಾಳ ......

೩೩೪೩. ಮುಡಿ ಇಲ್ಲದಿದ್ದೂ ಮಲ್ಲಿಗೆ ಚಿಂತೆ
ಜೆಡೆ ಇಲ್ಲದಿದ್ರೂ ಈಕಿಗೆ ಎಣ್ಣಿ ಚಿಂತೆ .....

೩೩೪೪. ಮಠಕ್ಕೆ ಹೋದ್ರೂ ಗೊಟಕ್ ಅನ್ನೂದು ತಪ್ಪೂದಿಲ್ಲ
ಏನ್ ಎಷ್ಟು ಹೇಳಿದ್ರೂ ನನ್ನಾಕಿ ..........
ತಿರುಗೂದು ಬಿಡೂದಿಲ್ಲ.

೩೩೪೫. ಅಲ್ಪನ ಗೆಳೆತನಾ ಕಸಕ್ಕಿಂತ ಕೊಳೆ
ನನ್ನ ...... ಳ ಗೆಳೆತನ ಹೆಬ್ಬಜೇನಿನ ಹೊಳೆ.

೩೩೪೬. ನೊಣದ ಮಾಂಸ ತಿಂದು
ಜೈನನ ಜಾತಿ ಕೆಟ್ಟಿತಂತೆ
ನನ್ನ ಹೆಂಡತಿ ಕೂಡ ಸಂಸಾರದಾಗ
ನನ್ನ ಇದ್ದಾಟು ತೆಲಿ ಕೆಟ್ಟಿತು .....

೩೩೪೭. ನೇಯ್ಗೆಯವನ ಹೆಂಡತಿ ಬತ್ತಲೆ
ನನ್ನಾಕಿ ............. ಬಂದಾಗ ಯಾವಾಗ್ಲೂ ಕತ್ತಲೆ.

೩೩೪೮. ಬ್ರಾಹ್ಮಣರ ನೇಗಿಲ ಬೆಣ್ಣಿ ಬೇಡಿತಂತ ಹೇಳತಾಳ
ಬಂಗಾರ ಬಳಿ ಬ್ಯಾಡಂದ್ರ ಬೆಣ್ಣಿ ಹಳ್ಳದಾಗ ಬೀಳ್ತೀನಂತಾಳ .....

೩೩೪೯. ದಡ್ಡ ಮಿತ್ರನಿಗಿಂತ ಜಾಣ ಶತ್ರು ಶ್ರೇಷ್ಠ
ಜಾಣ ಶತ್ರುವಿಗಿಂತ ನನ್ನ ಅರ್ಧಾಂಗಿ ಶ್ರೇಷ್ಠ .....

೩೩೫೦. ಮಲ್ಲಪ್ಪ ಶೆಟ್ಟಿಯಿಂದ ಕಿತ್ತೂರು ಹಾಳಾತು
ನನ್ನಾ .............ಕಿ ಸದುವಿನಯದಿಂದ
ಮನೆ ನಂದನವಾಯ್ತು.

೩೩೫೧. ಮೂಳಿ ಮದುವೆಗೆ
ಮುತ್ತಾಳ ಪುರೋಹಿತ
ನನ್ನ ಈಕಿ ............. ಮದುವೆಗೆ
ನಮ್ಮೂರ ಹೊರಗಿನ ಮಾರುತ.

೩೩೫೨. ನಂಬಿದವರನ್ನ ನಡು ನೀರಿನ್ಯಾಗ ಕೈಬಿಡಬಾರ್ದು
ಮೋಸ ವಂಚನೆ ಮಾಡಾವರ್ನ ಎಂದೂ ಕ್ಷಮಿಸಬಾರ್ದು
ನನ್ನವಳು ಸುಖ ದುಃಖದಲ್ಲಿ ಒಂದಾದವಳನ್ನ
ಎಂದೆಂದಿಗೂ ನೋಯಿಸಬಾರ್ದು ......

೩೩೫೩. ಹೊಟ್ಟೆಗೆ ಹಿಟ್ಟಿಲ್ಲದಾಗ ಕುಡಿಯಲು ನೀರಿಲ್ಲದಾಗ
ನನ್ನಾಕಿ ................ ಮುಡಿಯಲ
ಮಲ್ಲಿಗೆ ಹೂ ಕೇಳಬೇಕೆ?

೩೩೫೪. ಹುಟ್ಟಾ ಸತ್ತಿಲ್ಲ ಸುಡು ಗಾಡ ಕಂಡಿಲ್ಲ
ಹುಟ್ಟು ಸಾವಿನ ಲೆಕ್ಕ ಇಟ್ಟೇನಂತಾಳ .....

೩೩೫೫. ಕದ್ದ ಬೆಣ್ಣಿ ತಿಂದು
ಹಲ್ಲು ಮುರಕೊಂಡಾಳ .....

೩೩೫೬. ಒಳ್ಳೊಳ್ಳೆಯವರು ಉಳ್ಳ್ಯಾಡಿ ಹೋಗುವಾಗ
ಕಳ್ಳಿ ಸಾಲಾಗ ನಿಂತ ನನ್ನ ಗುಳ್ಳವ್ವ
............... ಪಲ್ಲಕ್ಕಿ ಬೇಡ್ತಾಳ.

೩೩೫೭. ತಂದಿ ತಾಯಿ ಜಗಳಾ ಕಂಡು
ಮಕ್ಕಳೂ ಜಗಳಾ ಕಲ್ತವಂತೆ
ನನ್ನಾಕಿ ................ ಸಿಟ್ಟು ಕಂಡು
ನನ್ನ ಮಗಾ ಅಟಂಬಾಂಬ ಕೇಳಿದನಂತೆ.

೩೩೫೮. ಬರಗಾಲಕ ಬುತ್ತೀ ಕಟ್ಟೇನಂತಾಳ ಕಬುರಗೇಡಿ .....

೩೩೫೯. ಮಗಳು ಹಡೀದಿದ್ರ
ಅಳಿಯನ ಮ್ಯಾಲಸಿಟ್ಟು
ತನಗ ಕುಣಿಯಾಗ ಬರದಿದ್ರ ............ಳಿಗೆ
ನೆಲಾ ಡೊಂಕು ಅನ್ನೊ ಸಿಟ್ಟು.

೩೩೬೦. ಮನಿ ಮಗ ಸುಡುಗಾಡಿಗೆ ಹೋಗುವಾಗ
ಆಳು ಮಗ ಮದುವೀಗೆ ಅಳತಿದ್ನಂತೆ
ಸಾಲ ಶೂಲಾ ಮಾಡಿ ನಾ ಸಾಯುಮುಂದ
ನನ್ನಾಕಿ ................ ಸಂಕ್ರಾಂತಿಗೆ ಒಂಕಿ ಬೇಡ್ತಾಳ.

೩೩೬೧. ವಡ್ಡರನ ಕುಬುಸಾಕೇಳಿದ್ದಾಂಗ
ಬತಿಗೆಟ್ಟವನನ್ನ ಬಂಗಾರ ಕೇಳ್ತಾಳ ......

೩೩೬೨. ಹೊಟ್ಟಿ ಹಸ್ತು ಹೊಯಿಕೊಳ್ಳೋ ಮುಂದ
ಹರಿಕತೆ ಹೇಳ್ರಿ ಅಂತಾ ಹಲ್ಲ ಕಿಸಿತಾಳ .....

೩೩೬೩. ಹರೇಕ ಬಂದಾಗ ಹಂದೀನೂ ಚೆಂದ
ನನ್ನ ಮದುವ್ಯಾಗಿನ ನೆನಪು ಆಗದಿದ್ದ್ರೂ ಚೆಂದ .......

೩೩೬೪. ತೆಲಿತುಂಬಾ ಹೇನು ಬೆಳಿಸಿ ಬೆಳಸಿ
ಆನಿ ಮಾಡ್ಯಾಳ ನನ್ನ ರಾಜಕುಮಾರಿ .....

೩೩೬೫. ಹುಟ್ಟು ಇದ್ದಾಗ ಕೈಯಾಕ ಸುಟ್ಟಗೋ ಬೇಕಂದ್ರ
ಕೈರುಚಿ ಬಾಳಂತ ಬಂಡಲ್ ಬಿಚ್ಚತಾಳ ......

೩೩೬೬. ಹತ್ತು ಮಂದ್ಯಾಗ ಹೌದು ಅನಿಸಿಕೊಂಡು
ಹುರುಪಿನಿಂದ ಮನೀಗಿ ಬಂದ್ರ
ಗಾಂಜಾ ಹೊಡದರಾಂಗ ಜೋಲಿ ಹೊಡಿತಾಳ .....

೩೩೬೭. ಸಾಹಿತ್ಯವೆನ್ನುವುದು ಸೃಜನ ಚಿಂತನಶೀಲ
ನನ್ನಾಕಿ .................. ನನ್ನ ಸಂಸಾರ ರಥಕೊಂದು ಕೀಲ.

೩೩೬೮. ಮನಿ ಕಟ್ಟಿನೋಡ್ಬೇಕು
ಮದುವಿ ಮಾಡಿ ನೋಡ್ಬೇಕು
ನನ್ನಾಕಿ ............ ತವರೀಗೆ ಹೋದ್ರ
ನನಗ ಅನತೈತಿ ನಾ ಓಡಬೇಕು ಅಂತಾ.

೩೩೬೯. ಎಷ್ಟು ವರ್ಷ ಕಲ್ಲು ನೀರಾಗಿದ್ರೇನು ಮೆತ್ತಗಾಗೂದಿಲ್ಲ
ಎಷ್ಟು ವರ್ಷ ಬಾಳೇವು ಮಾಡಿದ್ರೂ ನನ್ನಾಕಿ ಸುಧಾರಿಸುವುದಿಲ್ಲ .....

೩೩೭೦. ಮನಸಿನ್ಯಾಗ ಮಂಡಿಗಿ ತಿಂದ್ರ
ಗೋದಿ ಲೆಕ್ಕ ಕೊಡಾವ್ರು ಯಾರು?
ಸುಮ್ ಸುಮ್ನ ಈಕಿ ................. ಗುಸು ಗುಸು ಮಾಡಿದ್ರ
ಹೊಟ್ಟ ಹಾಕಿ ಮೇಸಾವ್ರು ಯಾರು?

೩೩೭೧. ಸೆಗಣಿ ಗಣಪತಿಗೆ ಗಂಧ ಪೂಸಿದರ
ಸೆಗಣಿನಾತ ಹೋಗೂದಿಲ್ಲ
ನನ್ನಾಕಿ ................ ನಕ್ಕರ ಸಾಕು
ಯಾವ ಸುಗಂಧವೋ ತಿಳಿಯೂದಿಲ್ಲ.

೩೩೭೨. ನನ ಹೆಂಡತಿ ಪವಾಡದಾಕಿ
ಎದ್ದರ ದೆವ್ವಾ, ಬಿದ್ದರ ಹೆಣಾ .....

೩೩೭೩. ಕತ್ತೆ ತಿಂದೂ ಕೆಡಿಸ್ತಂತೆ ಉಳ್ಳಾಡಿ ಕೆಡಿಸ್ತಂತೆ
ನನ್ನಾಕಿ .............. ಕುಂತ್ರೂ ಕೆಲಸಗೇಡು ನಿಂತ್ರೂ ಕೆಲಸಗೇಡು.

೩೩೭೪. ಹಿತ್ತಾಳೆ ವಡೆವಿ ಇಟ್ಟಾಳ
ಇತ್ತ ನೋಡು ನನ ಗಂಡ
ಅತ್ನೋಡು ನನಗಂಡ ಅಂತಾಳ ಗಂಡುಗೂಳಿ .....

೩೩೭೫. ಸರಕ್ಕಿದಾಕಿ ಸರಿಗಿ ಹಾಕಿದ್ರ
ನನ್ನಾಕಿ ............ ಉರ್ಲು ಹಾಕ್ರಿ ಅಂತಾಳ.

೩೩೭೬. ಹಲ್ಲು ಇಲ್ಲದ ಅಜ್ಜಿಗೆ ಕಡ್ಲಿ ಕೊಟ್ಟಾಂಗ
ಕೂಳಿಲ್ದ ಕುಂತಾಗ ನನ್ನ ಹೇಣ್ತಿ
ಕುಬುಸ ಮಾಡ್ರಿ ಅಂತಾಳ .....

೩೩೭೭. ಗುಳ್ಳಾಡಕಿ ಉಂಡಿತಿಂದು
ಗುಳ್ಳವ್ವಾಕಿ ಕುಂತಾಳ .....

೩೩೭೮. ಕುರಿ ಕೇಳಿ ಮಸಾಲಿ ಅರಿಬಾರದು
ಹೇಣ್ತಿ ಮಾತು ಯರೂ ಕೇಳಬಾರದು ......

೩೩೭೯. ಇಲಿ ಕಂಡು ಎಗರ್‍ಯಾಡತಾಳ
ಹುಲಿ ಅಂತಾ ಹಾರ್‍ಯಡತಾಳ .....

೩೩೮೦. ರಣಚೆಂಡಿಯೆನಿಸಿದಳು ಕಿತ್ತೂರಚೆನ್ನಮ್ಮ
ನನ್ನ ರಾಣಿ ............ ಆಗ್ಯಾಳ ಸಂಚಿ ಹೊನ್ನಮ್ಮ.

೩೩೮೧. ಬೇವು ಕಾಗೆಗೆ ಇಂಪು
ಮಾವು ಕೋಗಿಲೆಗೆ ಇಂಪು
ನನ್ನಾಕಿ ................ ಬಣ್ಣ ನಸುಗೆಂಪು.

೩೩೮೨. ಹಾವಿನ ಹೆಡಿ ಚೆಂದ ಮಾವಿನ ಮಿಡಿ ಚೆಂದ
ನನ್ನಾಕಿ ........... ನನ್ನೂರಿಗೇ ಚೆಂದ.

೩೩೮೩. ಹುಲಿಗೆ ಐದು ಬಾಯಿ
ಅರಸನಿಗೆ ಆರು ಬಾಯಿ
ನನ್ನಾ ......... ಕಿಗೆ ಹದಿನಾರು ಬಾಯಿ.

೩೩೮೪. ಹುಲಿಗೆ ತನ್ನ ಕಾಡೇನು ಇನ್ನೊಬ್ಬರ ಕಾಡೇನು
ನನ್ನ ................ ಹೇಣ್ತಿಗೆ ಎಲ್ಲಾ ಒಂದ
ತನ್ನ ಮನಿಯೇನು ತವರ ಮನಿಯೇನು.

೩೩೮೫. ಎಣ್ಣೀಗೆ ಎಂಟು ಕಂಟಕ
ಈಕಿ ............... ಬಾಯಿ ಮುಚ್ಚಾಕ
ತಂದೀನೊಂದು ಸಂದುಕ.

೩೩೮೬. ಬೆಕ್ಕು ಇಲ್ಲದ ಮನ್ಯಾಗ ಇಲಿ ಲಾಗಾ ಹೊಡಿತಿತ್ತು
ಅತ್ತಿ ಮಾವಾ ಕಾಸಿಗೆ ಹೋದ್ರ
ನನ್ನ ರಾಣಿ ............ ಚೈನಿ ಮುಗಿಲ ಮುಟ್ಟಿತ್ತು.

೩೩೮೭. ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ
ನನ್ನ ..............ಳ ಹೆಜ್ಜೆ ಎಲ್ಲರೂ ಬಲ್ಲ್ರು.

೩೩೮೮. ದಿಲ್ಲೀತನಕ ಹೋದ್ರೂ ಡೊಳ್ಳಿನ ಗತ್ತು ಒಂದೇ
ಜಗತ್ತು ತಿರಿಗಿದ್ರೂ ನನ್ನ ................ ಳಂತೆ
ಎಲ್ಲಾ ಹೆಣ್ಣಿನ ಗತ್ತು ಒಂದೇ.

೩೩೮೯. ದಾಯಾದಿ ಇರೋ ಕಡೆ ಬೆಂಕಿ
ನನ್ನ .............. ಳು ಕೇಳ್ತಾಳ ಒಂಕಿ.

೩೩೯೦. ಗೂಳಿ ತಗ್ಗಿಗೆ ಬಿದ್ರ ಆಳಿಗೊಂದು ಕಲ್ಲು
ನಾನು ............... ಳಿಗೆ ಎಷ್ಟು ಹೇಳ್ಳಿ ಮಾಡ್ಬೇಕ ಗುಲ್ಲು.

೩೩೯೧. ಸಂಸಾರಿ ಸನ್ಯಾಸಿ ಆದ
ಸಾಲಾ ಮಾಡಿ ಸಾಧು ಆದ
ನನ್ನ .............. ಕಿ ಬಾದ.

೩೩೯೨. ಇಲ್ಲಿ ಹೆಚ್ಚಾದ್ರ ಮನಿಗೆ ಬೆಂಕಿ ಹಚ್ಚಬಾರದು
ಅಲ್ಲದಕ್ಕೆ ಬೈದರ ............. ತವರ ಮನಿಗೆ ಓಡಬಾರದು.

೩೩೯೩. ವೈಯಾರ ಮಡಿಕೋತ ತಿರುಗುತಾಳ
ವಡವಿ ವಸ್ತ ಬೇಡತಾಳ ಮತ್ತೆ ಮತ್ತೆ ಕಾಡ್ತಾಳ
ಒಲಿಮುಂದು ಕುಂತಕೋ ಅಂದ್ರ
ನನ್ನ ತೆಲಿಮ್ಯಾಲ ಕುಂತೇನಂತಾಳ .....

೩೩೯೪. ಕಳ್ಳ ಹೊಕ್ಕ ಮನೆಗಿರ್ದಾರ ಕೇಡು ನಾ
ಕೊಳ್ಳಿ ಹೊಕ್ಕ ಮನೆ ಅರ್ಧಾ ಕೇಡು
ಅಳಿಯ ಹೊಕ್ಕ ಮನೆ ಪೂರಾ ಕೇಡು
ನಮ್ಮಾಕಿ ............. ಹೊಕ್ಕ ಮನೆ ಜಗಳದ ಬೀಡು.

೩೩೯೫. ಡಬರಿ ಉಪ್ಪಿಟ್ಟು ತಿಂದು
ಉಪವಾಸ ಅದೀನಿ ಅಂತಾಳ .....

೩೩೯೬. ಮಾತು ಬಲ್ಲವಗ ಜಗಳವಿಲ್ಲ
ಊಟ ಬಲ್ಲವಗ ರೋಗವಿಲ್ಲ
ನನ್ನ ............. ಕಿಗೆ ಮನಿ ಗ್ಯಾನ ಇಲ್ಲ.

೩೩೯೭. ಎಳ್ಳು ಹೂವಿನ ಸೀರಿ
ಬೆಳ್ಳಿ ಕಾಲುಂಗುರ
ಬಂಗಾರ ಬಳಿ ಇಟಕೊಂಡು
ಬಾಜಾರದಾಗ ತಿರಗತಾಳ .....

೩೩೯೮. ಕುಂತು ಹಿರೇತನಾ ಮಾಡಂದ್ರ
ಓಡಾಡಿ ಮಜಾ ಮಾಡ್ತೀನಿ ಅಂತಾಳ .....

೩೩೯೯. ಕಣದಾಗ ಬಂದ ಕಂಕಿ ತಗಿ ಅಂದ್ರ
ವಂಕಿ ಇಟಗೊಂಡು ಕಂಕಿ ಮ್ಯಾಲ ಕುಂತಾಳ ......

೩೪೦೦. ಚಂದ್ರಕಾಳಿ ಸೀರಿ ಉಟಗೊಂಡ
ಚಂದಪ್ಪನ ಕೂಡ ಚೆಲ್ಲಾಟಾ ಆಡ್ತಾಳ ......

೩೪೦೧. ಜರತಾರಿ ಸೀರಿ
ಮುತ್ತಿನ ವುಡಿಯಕ್ಕಿ
ಮುತ್ತಿನಂಥವರ ಮನಿ ಸೊಸಿ
ನಗೀಲೆ ಮನೀಗೆ ಬರ್ತಾಳ .....

೩೪೦೨. ತೆಲೀ ಹಿಚಕ ಹಿಡಂಬಿ ಅಂದ್ರ
ಒಲಿಮುಂದ ಕುಂತ ಹುಲಮನಿ ಆಡ್ತಾಳ .....

೩೪೦೩. ಕೋತಿ ಮಕದಾಕೀನ ಪ್ರೀತಿ ಮಾಡಿದ್ರ
ಮಾನಗೇಡಿ ಗಂಡಂತ ಮಾರಿ ತಿರುವುತಾಳ .....

೩೪೦೪. ರೊಕ್ಕ ರೊಕ್ಕ ಅಂತಾಳ
ಕೊಡದಿದ್ರ ಬಕ್ಕ ಬಾರ್ಲೆ ಬೀಳ್ತಾಳ .....

೩೪೦೫. ಭಕ್ತಿ ಮಾಡಿದ್ರ ದೇವರು ಬರ್ತಾನ
ಕೃಪೆಯಿಂದ ಪುತ್ರ ಬರ್ತಾನ
ವಸ್ತ ಕೊಟ್ರ ನನ್ನಾಕಿ ಬರ್ತಾಳ .....

೩೪೦೬. ಬಂಗಾರದ ಬಾಯಿ
ಸಿಂಗಾರದ ತುಟಿ
ಬೆಲ್ಲಾ ಕೊಡು ಅಂದ್ರ
ಒಲ್ಲೆಂತ ಒಲಿಕಡಿಗೆ ಓಡ್ತಾಳ .....

೩೪೦೭. ಮಲ್ಲಿಗೆ ಎಣ್ಣಿ ಹಚ್ಚಿ ಉಲ್ಲಾಸ ಪಡ್ತಾಳೆ
ಸಂಪಿಗಿ ಎಣ್ಣಿ ಹಚ್ಚಿ ಇಂಪಾಗಿ ಹಾಡ್ತಾಳ .....

೩೪೦೮. ಮಾತು ಮನಿ ಕೆಡಿಸ್ತು
ತೂತು ಓಲಿ ಕೆಡಿಸ್ತು
ನನ್ನಾಕಿ ರೂಪ ನನ್ನ ತೆಲಿ ಕೆಡಿಸ್ತು .....

೩೪೦೯. ರಮಿಸಿದರ ಹಿಗ್ಗತಾಳ
ಬೈದರ ಕುಗ್ಗತಾಳ
ಸರಗಿ ಮುರುಗಿ ಮಾಡಿಸಲಿಲ್ಲಂತ
ಸೊರಗಿಕೊಂತಾ ಹೊಂಟಾಳ .....

೩೪೧೦. ಹಿರೇರಿಗೆ ಮಣಿಯಾಕಿ
ಕಿರೇರಿಗೆ ಒಲಿಯಾಕಿ
ತರತರದ ಅಡಿಗಿ ಮಾಡಿ
ಪಿರುತಿಲಿಂದ ಉಣಸಾಕಿ .....

೩೪೧೧. ಹಣ್ಣು ತಂದೀನಿ ಉಣ್ಣಾಕ ನೀಡಂದ್ರ
ಕಣ್ಣು ಕುಣಿಸಿಗೋತ ನಿಟ್ಟಿ ಅಂತ
ಬೆಣ್ಣಿ ತಗೀತಾಳ .....

೩೪೧೨. ನನ್ನ ಊರು ಹಾಲಭಾವಿ
ನನ್ನಾಕಿ ............. ಊರು ಅರಭಾವಿ.

೩೪೧೩. ನಾ ಹುಟ್ಟಿದ ಊರು ತಿಂತಿನಿ
ನನ್ನಾಕಿ ............... ಹುಟ್ಟಿದ ಊರು ಕುಡುತಿನಿ.

೩೪೧೪. ಬೀಸೂಕಲ್ಲಿಗೆ ಗೂಟಚೆಂದ
ನನ್ನ ಅರ್ಧಾಂಗಿ ಮನ್ಯಾಗಿದ್ರ
ಬೀಸೂಕಲ್ಲ ಹಾಡು ಚೆಂದ .....

೩೪೧೫. ನನ್ನ ಹೇಣ್ತಿ ಹುಟ್ಟ್ಯಾಳ ದ್ವಾಪರದಾಗ
ನಾ ಹುಟ್ಟೀನಿ ಕಲಿಯುಗದಾಗ
ಪ್ರೀತಿ ಮಾಡೂದು ಯಾವಾಗ .....

೩೪೧೬. ಶ್ರೀಕೃಷ್ಣ ಪರಮಾತ್ಮ ಆಳಿದನ್ಹಾಂಗೋ
ತೊಂಬತ್ತಾರು ಸಾವಿರ ಹೆಂಡ್ರನ್ನ
ನನಗ ಇರೂದು ಒಬ್ಬಾಕೇ ಹೇಡ್ತಿ
ಆಳೂದು ಅಳೂದೂ ............. ಕಿಗೇ ಗೊತ್ತು.

೩೪೧೭. ಕಾಸಿ ಕಮ್ಮಾರನಾದ
ನನ್ನಾಕಿ .............. ಸೀರಿ ಬೀಸಿ
ನಾ ಮಡಿವಾಳನಾದೆ.

೩೪೧೮. ನನ್ನ ಹೇಣ್ತಿ ಬಾಳಾ ಕಳ್ಳಿನಾಕಿ
ನನ್ನ ಕಳ್ಳ ಕಿತ್ತು ಒಣಾ ಹಾಕಾಕಿ ......

೩೪೧೯. ಆಳಿನ ಹಿಂದ ಹೊಲಕ ಹೋಗ್ತಾಳ
ಆಳು ಕರಕೊಂಡು ಚಕ್ಕಾ ಆಡ್ತಾಳ .....

೩೪೨೦. ಶಿವನ ಜೆಡ್ಯಾಗ ಗಂಗಿ ಕುಂತ್ರ
ನನ್ನ ತೆಲಿ ಮ್ಯಾಗ ಮಂಗಿ ............ ಕುಂತಾಳ.

೩೪೨೧. ಗಂಡ ಹೆಂಡತಿ ಇರಬೇಕಂತಾರ
ಹಾಲು ಹಣ್ಣಿನಾಂಗ
ಆದ್ರ ನಾನೂ ಈಕಿ ............... ಅದೀವಿ
ಎಣ್ಣಿ ಸೀಗಿ ಹಾಂಗ.

೩೪೨೨. ಜಟಕಾ ಕುದುರೀಗೆ ಚೆಂದ
ನನ್ನಾಕಿ ............. ನೋಡಾಕ ಚೆಂದ.

೩೪೨೩. ಹಕ್ಕ್ಯಾಗ ಸೆಗಣಿ ಗ್ವಾಡ್ಯಾಗ ತಗಣಿ
ಸೆಗಣಿ ಬಳದ ತಗಣಿ ಒರಿ ಅಂದ್ರ
ತಗಣಿ ಮುಂದ ಸೆಗಣಿ ಇಡತಾಳ.

೩೪೨೪. ಮಳಾಗಾಲ್ದಾಗ ಹೊಲ ಗದ್ದಿ ಕೆಸರು
ಅದಕ ಎಲ್ಲಾ ಕಡೆಗೂ ಹಸಿರು ಹಸಿರು
ನನ್ನ ಹೇಣ್ತಿಗೆ ಇಟ್ಟಾರ ಶಿಲಾಬಾಲಿಕೆಯಂತ ಹೆಸರು .....

೩೪೨೫. ಶಿವಗ ಪಾರ್ವತಿ ಚೆಂದ
ಕೃಷ್ಣಗ ರಾಧೆ ಚೆಂದ
ನನಗ ನನ್ನಾಕೇನs ಚೆಂದ ......

೩೪೨೬. ಬಾಜಾರದ ತುಂಬ ಗೋಡಂಬಿ
ಭೀಮನ ಹೇಣ್ತಿ ಹಿಡಂಬಿ
ಮನ್ಯಾಗಿರು ನನ್ನ ........... ಳು ನನಗ ಕಾಕಂಬಿ.

೩೪೨೭. ಸಿಂಗಾರ ಮಾಡಿಕೊಂಡು
ಕಣ್ಣ ಹಾರ್ಸಿ ಬಂಗಾರ ಕೇಳ್ತಾಳ .....

೩೪೨೮. ವಸಂತ ಮಾಸದಾಗ ಕೋಗಿಲ ಕೂಗಿದ್ರ
ನನ್ನ ಹೇಣ್ತಿ ............ ಮೂರೂ ಕಾಲಾ ಕೂಗ್ತಾಳ.

೩೪೨೯. ಉದ್ದನ್ನ ಜೆಡಿಹಾಕ್ಯಾಳ
ಉದ್ದುದ್ದ ಮಾತಾಡ್ತಾಳ
ಉದ್ದಿನ ವಡಿ ಮಾಡಂದ್ರ
ಎದ್ದೆದ್ದು ಹೊರಗ ಹೋಗ್ತಾಳ ......

೩೪೩೦. ನಾ ಸುಮ್ಮನಿದ್ರ ಸೊರಗತಾಳ
ಬೋರಮಳ ವಸ್ತ ಕೊಟ್ಟ ಜಿಗದಾಡತಾಳ .....

೩೪೩೧. ವಿಜಾಪುರದ ದ್ರಾಕ್ಷಿ ಪ್ರಸಿದ್ಧ
ಧಾರವಾಡದ ಪೇಡೆ ಪ್ರಸಿದ್ಧ
ನವಿಲೂರು ಪ್ಯಾರಲಹಣ್ಣು ಪ್ರಸಿದ್ಧ
ನನ್ನಾಕಿ ............ ಓಣಿ ತುಂಬ ಜಗಳಕ್ಕ ಪ್ರಸಿದ್ಧ.

೩೪೩೨. ವೆಹಿಕಲ್ ರಿಪೇರಿ ಮಾಡೂದು ಗ್ಯಾರೇಜ್
ದೊಡ್ಡ ನಗರಾ ತುಂಬೈತಿ ಗಲೀಜು
ನನ್ನ ನಸೀಬ ಯಾಕಾಗಿದ್ದೇನು ಈಕಿ ..... ಮ್ಯಾರೇಜು.

೩೪೩೩. ಬಂಗಾರದಂಥ ಬಾಯಿ ತಗದು
ಬೆಳದಿಂಗಳದಾಗ ಆಡೇನಂತಾಳ .....

೩೪೩೪. ಬಂಗಾರದ ಅರಮನಿಯಾಗ
ಗಂಧದ ಬಾಗಿಲ ಮಂದಿರದಾಗ
ಸಿಂಗಾರಾಗಿ ನಿಂತು ಕೈಮುಗಿತಾಳ .....

೩೪೩೫. ಉದ್ದಾನ ತೇರು ಆಗ್ಯಾಳ
ಉದ್ದುದ್ದ ಮಾತಾಡತಾಳ
ಉದ್ದಾನ ಈರಭದ್ರಗ
ಎದ್ದೆದ್ದು ಕೈ ಮುಗಿತಾಳ .....

೩೪೩೬. ಸಡಗರದಿಂದ ಅಡ್ಡ್ಯಾಡತಾಳ
ಬಡಿವಾರದಾಗ ಕಾಲಾ ಕಳಿತಾಳ
ಗಡಗಿ ತೊಳಿ ಅಂದ್ರ ಗಳಗಳಾ ಅಳ್ತಾಳ.

೩೪೩೭. ಚೊಳಚ ಗುಡ್ಡದಾಗ ಎಲಿ ಬಾಳಾ
ನಮ್ಮಾಕಿದು ಎಮುಕು ಬಾಳಾ .....

೩೪೩೮. ಮಲೆನಾಡಿನ್ಯಾಗ ಬೆಳಿಯೂದು ಭತ್ತ ಬಾಳಾ
ನನ್ನಾಕಿಗೆ ಯಾವಾಗ್ಲೂ ನನ್ನ ಮ್ಯಾಲ ಚಿತ್ತ ಬಾಳಾ .....

೩೪೩೯. ಚಂದ್ರಕಾಳಿ ಸೀರಿ, ಗುಳೇದ ಗುಡ್ಡದ ಕುಬುಸಾ
ಹೊಲದಾಗಿನ ಚವಳಿಕಾಯಿ ಹರಕೊಂಡ ಬಾ ಅಂದ್ರ
ನಾಯಿ ತುಳಸಿ ಹರಕೊಂಡ ಬರ್ತಾಳ .....

೩೪೪೦. ತೆಳ್ಳಗ ಅದಾಳ
ಬೆಳ್ಳಗ ಕಾಣ್ತಾಳ
ಕುಳ್ಳು ಹಚ್ಚಾಕ ಕುಂತ್ರ
ಮೆಳ್ಳಗಣ್ಣೀಲೆ ನನ್ನ ನೋಡ್ತಾಳ .....

೩೪೪೧. ಜೆಡಿ ಹಿಡಿದು ಜಗ್ಗಿದರ ಸಾಕು
ಮಡಿಮಡಿ ಅಂತಾ ಮೈಮ್ಯಾಗ ಬೀಳ್ತಾಳ .....

೩೪೪೨. ತಂದ್ರ ಹಿಗ್ಗತಾಳ
ತರದಿದ್ರ ಕುಗ್ಗತಾಳ
ಸಿಟ್ಟೀಲೆ ನನ್ನ ಜಗ್ಗತಾಳ
ಮಂದಿ ಮುಂದ ಅಗ್ಗ ಮಾಡ್ತಾಳ .....

೩೪೪೩. ಕಾಕಂಬಿ ಬಣ್ಣದಾಕಿ
ಗೊಳಗೊಳಕಿ ಮಕದಾಕಿ
ಚೊಗಚಿ ಹೂ ತೆಲಗೇರಿಸಿಕೊಂಡು
ಚೆಲ್ಲಾಟ ಆಡಿಕೋತ
ತವರಮನಿಗೆ ಓಡ್ತಾಳ .....

೩೪೪೪. ದೇಶಭಕ್ತರು ಹೋದರು
ದೇಶಾ ನುಂಗಾವ್ರು ಬಂದ್ರು
ನನ್ನ ............. ಮಾರಾಯ್ತು
ಕಾಡಬ್ಯಾಡ ಒಂದೀಟು ನಿಂದ್ರು.

೩೪೪೫. ಸೊಲಗಿ ಹಿಟ್ಟಿನ ರೊಟ್ಟಿ ತಿಂದು
ಸೂಲಗಿತ್ತಿ ಮನೀಗೆ ಹೋಗ್ತಾಳ .....

೩೪೪೬. ಗಂಟು ಮಾರಿ ಹಾಕ್ಕೊಂಡು
ಕಂಠಿ ಸರಾ ಹಾಕ್ಕೊಂಡು
ಪಂಟ ಬಡಕೋತ ಬಡಿವಾರ ಮಾಡ್ತಾಳ .....

೩೪೪೭. ಹೋಳಿದಂಡೀಗೆ ಬಿದರ ಬಾಳಾ
ನನ್ನ ............. ಕಿಗೆ ಟೆಬರು ಬಾಳಾ.

೩೪೪೮. ಮಳಿ ಹೆಚ್ಚಾದ್ರ ಕೆರಿ ಕೋಡಿ ಬೀಳತೈತಿ
ಮಳಿ ಆಗದಿದ್ದ್ರ ಬರಗಾಲ ಬೀಳತೈತಿ
ನನ್ನ ........... ಈಕಿ ಇರದಿದ್ದ್ರ ಸಂಸಾರ ಹಾಳ ಬೀಳತೈತಿ.

೩೪೪೯. ಕುರಿ ಸೊಕ್ಕಿದರ ಕುರಿಗಾರಗ ಲಾಭ, ಕುರಿಗೆ ಕೇಡು
ನನ್ನಾಕಿ ............. ಚೊಲೋ ಇದ್ದ್ರ ನನಗ ಲಾಭ ಮನೀಗೆ ಬೆಳಕು.

೩೪೫೦. ಇಲ್ಲದವರಿಗೆ ಇಲ್ಲದ ಚಿಂತಿ
ಇದ್ದವರಿಗೆ ಕಾಯೊ ಚಿಂತಿ
ನನಗ ನನ್ನಾಕಿ ........... ಗೆ ಚಿನ್ನದ ಚಿಂತಿ.

೩೪೫೧. ನನಗ ಬಾಳಾ ಪ್ರೀತಿ ಸಂಡಿಗೆ
ನನಗ ಸಿಕ್ಕಾಳ ನನ್ನ ಹೆಣ್ತಿ .............
ಹುಚ ಮುಂಡೆ.

೩೪೫೨. ದಿಲ್ಲ್ಯಾಗೈತಿ ಕಾಂಗ್ರೆಸ್ ಸರಕಾರ
ರಾಜ್ಯದಾಗೈತಿ ಬಿ.ಜೆ.ಪಿ. ಸರಕಾರ
ನಮ್ಮನಿಯಾಗ ನನ್ನಾಕಿ ............. ದ ಕಾರಭಾರ.

೩೪೫೩. ಹುಚ್ಚಿರಪ್ಪ ಅಜ್ಜನಮಠ ಇರುವುದು ಕೋಡಿಕೊಪ್ಪ
ನನ್ನ ಹೇಣ್ತಿ ............ ತವರಮನಿ ಕೊಂಡಿಕೊಪ್ಪ.

೩೪೫೪. ತಾಟನ್ಯಾಗ ಪುರೆ ಬಟ್ಟಲದಾಗ ಖೀರು
ಸರಾಸರಾ ತಿಂದು ಬರಾಬರಾ ಓಡ್ತಾಳ .....

೩೪೫೫. ಆರು ರೂಪಾಯಿ ನತ್ತು
ಮೂರು ರೂಪಾಯಿ ಮುತ್ತು ಕೊಟ್ರ
ಮುಂದಕ ಕರದ ಮುತ್ತು ಕೊಡ್ತಾಳ .....

೩೪೫೬. ಕೈಕೆಯಿಯಿಂದ ಶ್ರೀರಾಮ
ವನವಾಸಕ್ಕ ಹೋದ
ನನ್ನಾಕಿ ............... ಕಟಿಗೊಂಡು ಈಕಿಗೆ
ಸಾಲ ಕೊಟ್ಟಾವ ನನ್ನ ನಡಾ ಮುರುದ.

೩೪೫೭. ಪೌಡರ ಬಡಕೊಂಡು ಊರ್ತುಂಬಾ
ಪವಾಡ ಮಾಡ್ತಾಳ ......

೩೪೫೮. ಎತ್ತ ಏರಿಗೆಳೀತು
ಕ್ವಾಣ ಕರೀಗೆಳಿತು
ನನ್ನಾಕಿ ............ ತಯಾರಾಗಿ
ಬರೋದ್ರೊಳಗ ನನ್ನ ತೇರ ಎಳೀತು.

೩೪೫೯. ಎಡಿ ಹೊಡಿಯುವಾಗ ಎತ್ತು ಹೊಡಿವಾರ‍್ದು
ತವರಿನ್ಯಾಗ ನನ್ನ ಹೇಣ್ತಿ ............ ಹೊಡಿಬಾರ‍್ದು.

೩೪೬೦. ಕತ್ತಿ ಹೊರಾಕ ಗಟ್ಟಿ
ಎತ್ತು ಎಳಿಯಾಕ ಗಟ್ಟಿ
ನನ್ನಾಕಿ .......... ಅದಾಳ ಜಗಜಟ್ಟಿ.

೩೪೬೧. ಚೀಟಿ ಹಾಕ್ತಾಳ, ಸಾಲಾ ಮಾಡ್ತಾಳ
ರೊಕ್ಕ ಕಳಕೊಂಡು ಬಕ್ಬರ‍್ಲೆ ಬೀಳ್ತಾಳ .....

೩೪೬೨. ತಾಯತ ಕಟ್ಟಿಸಿಕೊಂಡು ಬಂದಾಳ
ನಾನ್ಯಾರು ಅಂತಾಳ, ನೀನ್ಯಾರು ಅಂದ್ರ
ನಾನಽ ನಿನ್ನ ಗಂಡ ಅಂತಾಳ .....

೩೪೬೩. ಬಂಜೀಗೆ ಬ್ಯಾನಿ ಗೊತ್ತಿಲ್ಲ
ಸಂಜೀಗೆ ಸೂರ‍್ಯಾ ಗೊತ್ತಿಲ್ಲ
ನನ್ನ .............ಗೆ ಅತ್ತಿ ಮಾವನ ಹಂಗಿಲ್ಲ.

೩೪೬೪. ಖೊಟ್ಟಿ ಆಡ್ತಾಳ, ಕೆಟ್ಟಗಣ್ಣೀಲೆ ನೋಡ್ತಾಳ
ಹುಟ್ಟೀದ ಮನಿಗೆ ಹುಲ್ಲ ತರತಾಳ .....

೩೪೬೫. ಶಿಲ್ಲಕಲೆಯಲ್ಲಿ ದೊಡ್ಡಾತ ಜಕ್ಕಣ
ನನ್ನ .............. ಳು ಖಾಲಿ ಮಾಡಿದಳು ನನ್ನ ಬಕ್ಕಣ.

೩೪೬೬. ಹಂಪಿಯ ಹರಿಹರ ರಗಳಿ ಕವಿಯೆನಿಸಿದ್ರ
ಮನ್ಯಾಗ ನನ್ನಾಕಿ ............. ರಗಳಿ ಮಾಡಕ ಸುಭದ್ರ.

೩೪೬೭. ಮಹಾತ್ಮಗಾಂಧಿ ಸತ್ಯ ಅಹಿಂಸೆಯ ಅವತಾರ
ನನ್ನವಳು ............... ಕ್ರೋಧ ಸಿಟ್ಟಿನ ಪರಮಾವತಾರ.

೩೪೬೮. ಮಳಿ ಬಂದ್ರ ಕೆರಿ
ಬೆಳಿ ಬಂದ್ರ ಸಿರಿ
ನನಗ ನನ್ನ ಹೇಣ್ತಿ ............. ನ ದೊರಿ.

೩೪೭೯. ಎತ್ತು ಬಂಡಿಗೆ ಬೇಕು
ಎಮ್ಮಿ ಹೈನಕ ಬೇಕು
ಹುತ್ತಾ ಹಾವಿಗೆ ಬೇಕು
ಬಿತ್ತಿಗ್ಗೆ ಭೂಮಿಗೆ ಬೇಕು
ರಾಗಕ್ಕ ತಾಳ ಬೇಕು
ಹಾಡುಗಾರಗ ಕಂಠಬೇಕು
ಸದಾ ನನ್ನಾಕಿ ನಗತಾ ಇರಬೇಕು .....

೩೪೮೦. ನೀತಿ ಪ್ರೀತಿ ಎರಡೂ ಇಲ್ಲ
ನನ್ನ ............ ಗೆ ತೆಲೀನ ಇಲ್ಲ.

೩೪೮೧. ಮ್ಯೂಗಿನ್ಯಾಗ ಮಾರಿಗಿ ನತ್ತು
ಕೊರಳಾಗ ಕೋಟಾ ಮುತ್ತು
ನನಗೆಲ್ಲಾ ಗೊತ್ತು ಈಕಿ ಕಿಮ್ಮತ್ತು .....

೩೪೮೨. ಎಲ್ಲ ವೀರಾಧಿವೀರ ಎರೆಸೀಮೆ ಶೂರ ನಿಮ್ಮಪ್ಪ
ಕೊಡಲಿಲ್ಲ ಬಾಕಿ ವರದಕ್ಷಿಣಾ ಕುಂತಾನ ಗಪ್ಪಚುಪ್ಪ
ನನ್ನ ರಂಭಿ ಗಜನಿಂಬಿ ............ ಮಾಡಿಬಿಡು ನೆಪ್ಪ.

೩೪೮೩. ಒಂದನೇ ತಾರೀಖಿಗೆ ತಪ್ಪದೇ
ಇವಳ ಕೈಗೆ ಹೋಗುತ್ತದೆ ನನ್ನ ಪಗಾರ
ಇಲ್ಲಾಂದ ಮಾಡತಾಳ ...... ನನ್ನ ಹೆಣ ಸಿಂಗಾರ.

೩೪೮೪. ತುಂಬಾ ಪ್ರಸಿದ್ಧ ಇಲಕಲ್ಲ ಸೀರಿ
ಅದನ್ನ ತರದಿದ್ದರೆ ಇವಳು .......... ಮಾಡ್ತಾಳ ಕಿರಿಕಿರಿ.

೩೪೮೫. ಚವಳಿ ಸಾಲಿನ್ಯಾಗ ಕುಂತ
ಚಾಡಿ ಹೇಳ್ತಾಳ ನನ್ನಾಕಿ
ನೆವಣಿ ಹೊಲ್ದಾಗ ಕುಂತ
ನೆವಾ ಹೇಳ್ತಾಳ .....

೩೪೮೬. ಬಾಗಲ್ದಾಗ ನಿಂತು ಬಾಯಿ ಬಾಯಿ
ಬಡಕೊಂತಾಳ ನನ್ನಾಕಿ ....

೩೪೮೭. ಚಕ್ಕಡಿಮ್ಯಾಲ ಕುಂತಾಳ
ನಕ್ಷತ್ರ ಎಣಿಸ್ತಾಳ ನನ್ನಾಕಿ .....

೩೪೭೮. ಒಂಟಿ ಎಲುಬು ಗಂಟು ಮೂಗು
ಪಂಟ ಬಡಕೊಂತ ಎಂಟು ಮನಿ ತಿರಗತಾಳ
ಸಂಜೀಕಿ ಬಂದ ಬಿಸಿರೊಟ್ಟಿ
ಕೈಯಾಗ ಕೊಡ್ತಾಳ .....

೩೪೭೯. ಹರಕ ತೆವಿ ಮುರುಕ ಕೋಣಮಿಗಿ
ರೊಟ್ಟಿ ಏಳ್ವಲ್ಲಂತ ಹೊಟ್ಟಿ ಹೊಟ್ಟಿ ಬಡಕೋತಾಳ .....

೩೪೮೦. ಬೆಳಕು ಕೊಡಾವ ಸೂರ್ಯ
ನಮ್ಮನ್ಯಾಗ ಈಕಿದ್ರ ಎಲ್ಲಾ ಕಾರ್ಯ .....

೩೪೮೧. ಕಿತ್ತೂರ ಚೆನ್ನಮ್ಮನ ಶೌರ್ಯ
ಬೆಳವಡಿ ಮಲ್ಲಮ್ಮನ ಧೈರ್ಯ
ಝಾಂಸಿರಾಣಿಯ ಆತ್ಮಸ್ಥೈರ್ಯ
ನನ್ನ ............ಳೇ ನನಗೆ ಒಳ್ಳೇ ವೈಡೂರ್ಯ.

೩೪೮೨. ಮನೆ ಮನೆಗೆ ಕಿಡಕಿ
ನನ್ನಾಕಿ ............. ಬಾಳ ಬಾಯ್ಬಡಕಿ.

೩೪೮೩. ಬಗಲಾಗ ಕೊಡ, ತೆಲಿಮ್ಯಾಲ ಸಿಂಬಿ
ಸಿಂಬಿ ಮ್ಯಾಗ ಕೊಡ ನನ್ನಾಕಿ ..... ಮುಟ್ಯಾಳ
ಸಂಸಾರ ಸಾಗರದ ದಡ.

೩೪೮೪. ಗಲ್ಲಾ ಹಿಡಿದ್ರ ಬರ್ತಾಳ
ಗುಲ್ಲು ಮಾಡ್ದ ಇರ್ತಾಳ .....

೩೪೮೫. ಬೆಡಗು ಬೇಲಿ ಮ್ಯಾಲ
ಹೆಡಗಿ ಹೆಗಲ ಮ್ಯಾಲ
ನನ್ನ ಕಣ್ಣು ನನ್ನಾಕಿ ............ ಮ್ಯಾಲ.

೩೪೮೬. ಬೆಳಗಿನ್ಯಾಗ ಕೂಗತೈತಿ ಕೋಳಿ
ಉಪ್ಪು ತಗೆಯೂ ಜಾಗಕ್ಕೆ ಅಂತಾರ ಮಾಳಿ
ಹಣಕ ಮೈಮಾರಿಕೊಂಡಾಕಿಗಂತಾರ ಸೂಳಿ
ನನ್ನ ಮ್ಯಾಲ ನನ್ನಾಕಿ ........... ಆಗ್ತಾಳ ಒಮ್ಮೊಮ್ಮೆ ಕಾಳಿ.

೩೪೮೭. ತಾನೇ ತಾನು ದೇವರಂತಾಳ ಖೋಡಿ
ಕಾಣದ ದೇವರನ್ನ ಹ್ಯಾಂಗ ಕಂಡೀತು ಹೇಡಿ
ನನಗ ತೊಳಿಯುದೇ ಆಗೇತಿ
ನನ್ನಾಕಿ .......... ಹಗರಣದ ರಾಡಿ.

೩೪೮೮. ರವದಿಲೆ ಹೊಡಿದ್ರೆ
ರೊಂಯ್ ಅಂತ ಬರ್‍ತಾಳ
ಕಲ್ಲೀಲೆ ಹೊಡದ್ರೆ
ಗುಲ್ಲು ಮಾಡ್ತಾಳ .....

೩೪೮೯. ಕುಂಬಿ ಮ್ಯಾಲ ಕುಂತ
ಕುಂಕುಮಾ ಹಚಿಗೊಂತಾಳ
ಗಿಡದ ಮ್ಯಾಲ ಏರಿ
ಗಡದ್ದ ನಿದ್ವೀ ಹೊಡೀತಾಳ .....

೩೪೯೦. ಸವರಾತ್ರ್ಯಾಗೆದ್ದು ಸರಗಿ ಬೇಡ್ತಾಳ
ಮುಂಜಾನೆದ್ದು ಮುರಗಿಸರ ಬೇಕಂತಾಳ .....

೩೪೯೧. ಕಂಟ್ಯಾಗ ಕಂಟಿ ಜಾಲಿಕಂಟಿ
ನನ್ನ ಹೇಣ್ತಿ ........... ಬಾಳಾ ಜಗಳಗಂಟಿ.

೩೪೯೨. ಸೀತಾ ಸ್ವಯಂವರದಲ್ಲಿ
ಶ್ರೀರಾಮಚಂದ್ರನು ಮುರಿದನು ಧನುಸ್ಸು
ಆಗ ಮುಕ್ಕೋಟಿ ದೇವತೆಗಳು
ಕೊಂಡಾಡಿದರು ರಾಮನ ಯಶಸ್ಸು
ನಾನು ನನ್ನ .............ಳಿಗೆ ಅರ್ಪಿಸುವೆ ಪೂರಾ ಮನಸ್ಸು.

೩೪೯೩. ಮಂಥರೆಯ ಕಿಲಾಪತಿಯಿಂದ
ರಾಮಚಂದ್ರ ಸೀತೆ ಕಾಡಿಗೆ ಹೋದರು
ನನ್ನ ............... ಳ ಕಿತಾಪತಿಯಿಂದ
ನನ್ನ ತಂದೆ ತಾಯಿ ದೂರವಾದರು.

೩೪೯೪. ವಾಮನಮೂರ್ತಿ ಬೇಡಿದ
ಮೂರಡಿ ಭೂದಾನ
ಬಲಿಕೊಟ್ಟು ಹೋದ ಪಾತಾಳಕ್ಕೆ
ಮೂರ್ತಿಗಾಯಿತು ಸಮಾಧಾನ
ನನ್ನಾಕಿ .......... ಕೊಡುತ್ತಾಳೆ ನಿತ್ಯ
ಬಡ ಬಗ್ಗರಿಗ ದಾನ.

೩೪೯೫. ತಿರುಪತಿ ತಿಮ್ಮಪ್ಪ ಕೋಟ್ಯಾಧಿಪತಿ
ಯಾರದೋ ಹರಾಮಿ ಹಣ ತಿಂತಾನ ಭೂಪತಿ
ವರದಕ್ಷಿಣ ಮುಳುಗುಸಿದ ನಮ್ಮ ಮಾವ ಲಕ್ಷ್ಮೀಪತಿ
ನನ್ನಾಕಿ ............. ಮನ್ಯಾಗ ಒಕ್ಕರಿಸ್ಯಾಳ ಕುಲಾಧಿಪತಿ.

೩೪೯೬. ತೂತಿನ ಕೊಡ ಹೊತಗೊಂಡು
ತೂಗಡಿಸಿಗೋತ ಬರ್ತಾಳ
ಕೆಟ್ಟಿರುವ ಕುಂಬಳಕಾಯಿ ಹೊತ್ತು
ಸೋರ್ಯಾಡಿಸಿಗೊಂತ ಬರ್ತಾಳ .....

೩೪೯೭. ಸೀನೇಮಾದ ನಟಿ ನೋಡ್ರಿ ಹುಣ್ವಿ ಚಂದಿರ
ನನ್ನಾಕಿ .............. ದಿಟ್ಟಿಸಿ ನೋಡ್ರಿ ಎಲಿಬಿನ ಹಂದಿರ.

೩೪೯೮. ಕೂಳು ಹಾಕಿದ್ರ ನಾಯಿ ಈಲ ಆಗ್ತಾವು
ನನ್ನಾಕಿ .............ಗೆ ಬಂಗಾರ ಸರಾ ಹಾಕಿದ್ರ ಈಲ ಆಗ್ತಾಳ.

೩೪೯೯. ಗುಬ್ಬಿ ಕಟ್ಟತಾವ ಚೆಂದದ ಗೂಡು
ನನ್ನಾಕಿ .............. ಆಗ್ಯಾಳ ಮದ್ದಾನಿ ಗೂಡು.

೩೫೦೦. ಒಂಟಿ ಎಲುವು ಗಂಟ ಮಕಾ
ಎಂಟು ಗಂಟೆಗೆ ಎದ್ದು ಕಂಠಮಟಾ ಹಿಗ್ಗಿ
ನನ್ನ ಕೂಡಾ ಪಂಟ ಹೊಡಿತಾಳ ......

೩೫೦೧. ಬಾರಕೋಲಿಲ್ಲೆ ಬಾರಿಸಿದರೆ
ಭಾವಿ ಹಾರತೀನಿ ಅಂತಾಳ .....

೩೫೦೨. ದುಬಾರಿ ಆಗ್ಯೆತಿ ದೇಶದಾಗ ಪೆಟ್ರೋಲು
ಬದಕೂದುಕಷ್ಟ ಧಾರಣಿ ಏರ್ಯಾವಬಾಳ ಮೇಲು
ಕಾಫೀಗೆ ಬೇಕು ದಿನಾ ಹಾಲು
ನನ್ನಾಕಿ ....... ಮಾಡ್ತಾಳ ಹಣಾ ಪೋಲು.

೩೫೦೩. ಹಪ್ಪಳಾ ಕರದು ಕೊಡು ಅಂದ್ರ
ಸಪ್ಪಳಾಗತ್ತ ಅಂತಾಳ ......

೩೫೦೪. ನಮ್ಮ ಎಮ್ಮಿ ಹಿಂಡತ್ಯೆತಿ ಕೊಡ ಹಾಲು
ಹೊತ್ತು ಮುಳುಗೊದ್ರೊಳಗನ
ನನ್ನ ಹೇಣ್ತಿ ........... ಪಾಲು.

೩೫೦೫. ನನ್ನ ಹೇಣ್ತಿ ಅಂದ್ರ
ನನಗ ಅಚ್ಚಿನ ಬೆಲ್ಲ
ಅದಕ ಕೊಟ್ಟೀನಿ ಆಸ್ತಿಯೆಲ್ಲಾ
ಆದ್ರೂ ನನ್ನಾಕಿ ............ ಗೆ ಸಮಾಧಾನ ಇಲ್ಲ.

೩೫೦೬. ಗಟ್ಟಿ ಮನಸ್ಸು ದಿಟ್ಟಮಾತು
ಸೊಟ್ಟಗಿದ್ದವರನ್ನ ನೆಟ್ಟಗ ಮಾಡ್ತಾಳ ನನ್ನಾಕಿ .....

೩೫೦೭. ಬೇಲಿ ಹಾರಾವ್ರನ್ನ ಸಾಲಿ ಮಾಸ್ತರಂತ
ಮಾಡತೈತಿ ಸರಕಾರ
ಮಾಸ್ತರಿಗಿಲ್ಲ ಯಾತರದರಕಾರ
ನನ್ನಾಕಿ ............ ಆಗ್ಯಾಳ ಅಕ್ಕವ್ವನವರು
ಒಸೂ ಅಕ್ಷರ ಬಾರದವರು.

೩೫೦೮. ಸ್ಟೇಶನ್ ಮಾಸ್ತರಗ ನಿದ್ಧಿಲ
ಕನ್ನಡಸಾಲಿ ಮಾಸ್ತರಗ ಬುದ್ಧಿ ಇಲ್ಲ
ಮಾಸ್ತರಕಿ ಮಾಡೂ ನನ್ನಾಕಿ ..........ಗೆ ಎರಡೂ ಇಲ್ಲ.

೩೫೦೯. ತಾಯಿಗಿಂತ ಬಂಧು ಇಲ್ಲ
ಉಪ್ಪಿಗಿಂತ ರುಚಿ ಇಲ್ಲ
ರುಚಿಯಾದ ಅಡಿಗೆ ಮಡಿ ಮಡಿಯಿಂದ
ಹಿರಿಯರಿಗೆ ಎಡಿ ಹಿಡಿತಾಳ ನನ್ನ ನಲ್ಲೆ .....

೩೫೧೦. ತಿಪ್ಪಿ ಮ್ಯಾಲೆ ಮಲಗಿ ಉಪ್ಪರಿಗಿ ಕನಸ ಕಾಣತಾಳ .....

೩೫೧೧. ನೂರ ಸುಳ್ಳು ಹೇಳಿ ಒಂದ ಲಗ್ನ ಮಾಡು
ಅನ್ನೂದು ಓದಿದ ನಮ್ಮಾವ ಮಾಸ್ತರ
ನನಗ ತನ್ನ ಮಗಳು .............ನ
ನನ್ನ ಕೊಳ್ಳಿಗೆ ಕಟ್ಟಿದ ಜಾಣ.

೩೫೧೨. ಮಾರಿ ನೋಡಿ ಮೊಳ ಹಾಕ್ತಾಳ
ಹದನೋಡಿ ಕದ ತಗೀತಾಳ ......

೩೫೧೩. ಕಟ್ಟಿಮ್ಯಾಲ ಕುಂತ ಕಣ್ಣು ಹೊಡಿತಾಳ
ಮಾಳಗಿ ಮ್ಯಾಗ ಕುಂತು ಮಗನ್ನ ಆಡಿಸ್ತಾಳ .....

## ೩. ಉಭಯುತರ ಸಂವಾದ ಒಗಟು ಒಡಪುಗಳು

೩೫೧೪. ಮಡಿ ಮೈಲಿಗೆ ಅರಿಯದು
ಅಡುಗೆ ಮನೆ ಸೇರುವುದು
ಮಾಡಿದಡಿಗೆಯ ಮೊದಲು ತಾ ಉಣ್ಣುವುದು
ಇದರ್ಹೆಸರ ಹೇಳಿದರೆ ಆನಂದ ಹರಿಯುವುದು ನನ್ನರಸಾ .....

ಇದರ ಉತ್ತರ 'ನೊಣ' ಇಹುದು ನನ್ನರಸಿ .....

೩೫೧೫. ಹಲ್ಲು ನಾಲಿಗೆ ಇಲ್ಲ, ಕಾಲು ಕೈಗಳಿಲ್ಲ
ಕೊಲ್ಲದೇ ಮೃಗವ ಹಿಡಿಯುವುದು
ಇದ್ಯಾವುದು ಹೇಳಿ ದೇವಿ .....

ಇದ್ಯಾವ ಸೋಜಿಗವು 'ಬಲೆ' ಅಲ್ಲವೇನು ಒಡೆಯ .....

೩೫೧೬. ಹತ್ತು ಸಾವಿರ ಕಣ್ಣುಗಳುಂಟು
ನೆತ್ತಿಯಲಿ ಬಾಲವುಂಟು
ಹುತ್ತದ ಹುಳ ಮೆಯ್ಯುವುದುಂಟು
ಇದರ್ಹೆಸರ ಹೇಳೆನ್ನ ಅರಸಾ .....

ಇದ್ಯಾವ ಸೋಜಿಗವು 'ನವಿಲು' ಅಲ್ಲವೇನು ನನ್ನರಸಿ .....

೩೫೧೭. ಭೂತಳದಲ್ಲಿರುವುದು, ಪಾತಾಳಕ್ಕೆ ಇಳಿಯುವುದು
ಶೀತಳ ತರುವುದು ಇದನ್ನು ತಿಳಿದು ಹೇಳುವುದು
ನನ್ನರಸ ......

ಇದ್ಯಾವ ಸೋಜಿಗವುಇದರ ಉತ್ತರ 'ಕಪ್ಪಲಿ' ಅಲ್ಲವೇನು ನನ್ನರಸಿ .....

೩೫೧೮. ಕಚ್ಚಿದರೆ ಕಚ್ಚುವುದು ಕಿಚ್ಚಲ್ಲ ಕಿಡಿಯಲ್ಲ.
ಚುಚ್ಚುವ ಚೇಳಲ್ಲ
ಈ ಒಗಟ ಬಿಡಿಸಿದರೆ ನಿಮ್ಮ ಬಾಯಿ ಉರಿಯುವುದು
ನನ್ನ ರಾಯ .....

ಈ ಒಗಟಿನುತ್ತರ 'ಮೆಣಸು' ಹೌದಲ್ಲವೇನು ನನ ರಾಣಿ ......

೩೫೧೯. ನಾಲ್ಕು ಭಾವಿ ನೀರು ಏಕಾಗಿ ಬರ್ತಾವು
ಇದರುತ್ತರ ಹೇಳ ನನ್ನಾಕಿ ......

ಇದ್ಯಾವ ಸೋಜಿಗವು 'ಎಮ್ಮಿ ಕೆಚ್ಚಲ' ತಾನೇ ನನ್ನಾತ .....

೩೫೨೦. ನಡಾ ಸಣ್ಣ ನಾಗರಬಣ್ಣ

ಹಿಡಿಯಾಕ ಹೋದ್ರ ನನ್ನಾಕಿ ಕಡಿಯಾಕ ಬರ್ತಾಳ ಇದರುತ್ತವೇನು ನನ್ನರಸಿ.

ಇದರ ಉತ್ತರ 'ಕಡಜಿರಗಿ ಹುಳ' ನಿಮ್ಮ ಗುಣದ್ದಲ್ಲವೆ ನನ್ನ ಅರಸ .....

೩೫೨೧. ತಮ್ಮಂದು ಇಲಿ, ಅಣ್ಣಂದು ನವಿಲು, ಅಪ್ಪಂದು ಎತ್ತು
ಈ ಒಗಟ ರಾಣಿ ಬಿಡಿಸಿದರ ಹೊಸ ನತ್ತು
ಇದರಾಗೇನೈತಿ ಜಗತ್ತಿಗೇ ಗೊತ್ತೈತಿ ನನ್ನರಸಿ ......

'ಗಣಪ, ಷಣ್ಮುಕ, ಶಿವ' ಅಲ್ಲೇನು ನನ ರಾಯ ......

೩೫೨೨. ತಾಯಿ ಪಾತಾಳಕ್ಕದ ಹೋದಳು
ತಂದೆ ಆಕಾಶಕ್ಕ ಹೋದ
ಮಕ್ಕಳೆಲ್ಲಾ ದಿಕ್ಕಾಪಾಲಾದರು
ನನ್ನ ರಾಣಿ ...... ಈ ಒಗಟಿನ ಉತ್ತರ ಏನು?

ನನ್ನರಸಾ ಇದೇನು ಸೋಜಿಗವು ಇದರುತ್ತರ 'ತೆಂಗಿನಗಿಡ' ಅಲ್ಲೇನು ಕಾಮನಂಥವನೆ ......

೩೫೨೩. 'ತಿಂದರೆ ರಸಾ ಉಗುಳಿದರೆ ಕಸಾ'
ಈ ಒಗಟಿನುತ್ತರವೇನು ನನ್ನ ಹೃದಯದ ರಾಜಾ .....

ಇದ್ಯಾವ ಒಗಟು 'ಕಬ್ಬು' ಉತ್ತರವಿಹುದು ನನ್ನರಸಿ .....

೩೫೨೪. 'ತಂಗಿ ಮನಿಗೆ ಅಕ್ಕ ಎಂದೂ ಹೋಗುದಿಲ್ಲ
ಆದ್ರ ಅಕ್ಕನ ಮನಿಗೆ ತಂಗಿ ಸರಳ ಹೋಗಿ ಬರ್ತಾಳ'
ಇದರ ಉತ್ತರವೇನು? ನನ್ನ ಜೀವದ ಗೆಳೆಯ .....

ಇದೇನು ಸೋಜಿಗವು 'ಅಳೆಯುವ ಸೇರು, ಪಾವು' ಅಲ್ಲೇನು ನನ ಗೆಳತಿ ....

೩೫೨೫. 'ಗಿಡ್ಡಿ ಗುದ್ದಿದರ ಮನೆ ತುಂಬಾ ಮಕ್ಕಳು'
ಇದಕ ಉತ್ತರ ಹೇಳಿದರ ನಮಗೂ
ಮನೆತುಂಬ ಮಕ್ಕಳ ಆಶೆ ರಾಜಾ ......

'ಇದ್ಯಾವ ಸೋಜಿಗವು ನಾವು ದಿನಾ ತಿನ್ನುವ 'ಬಳ್ಳೊಳ್ಳಿ' ಅಲ್ಲೇನು ನನ ರಾಣಿ ......

೩೫೨೬. 'ಊರೆಲ್ಲಾ ಸುತ್ತತೈತಿ
ಮನ್ಯಾಗ ಬಂದ ಮೂಲ್ಯಾಗ ಕುಂದರತೈತಿ'
ಈ ಒಗಟ ಬಿಡಿಸುವೆಯಾ ನನ ಮುದ್ದು ರಾಣಿ.

ಉತ್ತರವ ಹೇಳಲಿಕೆ ಇದ್ಯಾವ ಸೋಜಿಗವು ನಾವು ದಿನ ಮೆಟ್ಟುವ 'ಚಪ್ಪಲಿ' ಅಲ್ಲೇನು ನನ್ನ ರಾಜಾ .....

೩೫೨೭. 'ಊಟಕ್ಕೆ ಕುಳಿತವರು ಹನ್ನೆರಡು ಮಂದಿ
ಬಡಿಸುವವರು ಇಬ್ಬರು
ಒಬ್ಬನು ಒಬ್ಬರಿಗೆ ಬಡಿಸುವಷ್ಟರಲ್ಲಿ
ಇನ್ನೊಬ್ಬ ಹನ್ನೆರಡು ಜನರಿಗೂ ಬಡಿಸುತ್ತಾನೆ'
ಈ ಒಗಟಿನುತ್ತರ ಹೇಳಿದರೆ ಒಂದು ಹೊಸ ವಾಚು
ಬಹುಮಾನವಿದೆ ನನ್ನ ರಾಜಾ .....

'ಈ ಒಗಟಿನುತ್ತರವೆ? ಇದೇನು ಸೋಜಿಗವು ಇದರುತ್ತರ 'ಗಡಿಯಾರ'ವಲ್ಲೇನು ಮುದ್ದಿನರಾಣಿ .....

೩೫೨೮. ಒಂಟಿ ಕಾಲಿರುವುದು ಮಂಟಪವ ಸುತ್ತುವುದು
ಶಂಭೋಶಂಕರನ ವರವೀಲಿ ಬೆಳೆಯುವುದು
ನೀ ತಿಳಿದರ್ಹೇಳ ನನ್ನಾಕಿ .....

ಇದಕ್ಕೆ ಉತ್ತರ 'ಜೋಳದ ದಂಟಲ್ಲ'ವೇನು ನನ ಒಡೆಯ ......

೩೫೨೯. 'ಹಾದ್ಯಾಗ ಹುಟ್ಟುವುದು ಹಾದ್ಯಾಗ ಬೆಳೆಯುವುದು
ಹಾದ್ಯಾಗ ಹೋಗ್ವಾರ ಸೆರಗ್ಹಿಡಿದು ಜಗ್ಗುವುದು
ಇದಕ ಉತ್ತರ ನೀ ಬಲ್ಲರ್ಹೇಳು ನನ್ನಾಕಿ .....

ಈ ಒಟಗಿನುತ್ತರಕೆ ಅದ್ಯಾವ ಸೋಜಿಗವು 'ಉತ್ರಾಣಿ ಕಡ್ಡಿ' ಅಲ್ಲೇನು ನನ ರಾಜಾ .....

೩೫೩೦. 'ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು
ಅದು ಒಂದು ಗಿಡದ ಪ್ರಕಾರ ನನ ರಾಣಿ .....
ಈ ಒಗಟಿನುತ್ತರವ ತಿಳಿದ್ಹೇಳು .....

ಈ ಒಗಟಿನುತ್ತರ 'ತಾವರೆ' ಅಲ್ಲವೆ? ನನ ರಾಜಾ .....

೩೫೩೧. 'ಬಾಯೀಲೆ ತಿನ್ನೋದು ಬೆನ್ನೀಲೆ ಕಾರೋದು
ನಾಡ ಬಾಲ್ಯಾರು ವನವನದು ಹಾಡೋದು
ನನ ರಾಜಾ ...... ಇದರರ್ಥ ಬಿಡಿಸ್ಹೇಳ .....

ಇದರ ಉತ್ತರಕೆ ಅದ್ಯಾವ ಸೋಜಿಗವು 'ಬೀಸುವ ಕಲ್ಲು' ಅಲ್ಲೇನು ನನ ರಾಣಿ .....

೩೫೩೨. 'ಮುಂಜಾನೆ ಏಳುವುದು
ನೆಲ ನೆಕ್ಕಿ ನಿಲ್ಲುವುದು
ನಾರಿಯರ ಕೈಯಾಗ ಕುಣಿದಾಡುವುದು'
ಈ ಒಗಟಿನುತ್ತರವ ತಿಳಿದ್ಹೇಳ ನನ ಗೆಳತಿ .....

ಈ ಒಗಟಿನುತ್ತರಕ ತಡಕಾಟ ನನಗಿಲ್ಲ 'ಕಸಬರಿಗೆ' ಅಲ್ಲೇನು ನನ್ನ ಗೆಳೆಯ .....

೩೫೩೩. 'ಭೂಮ್ಯಾಗ ಮೂರ್‍ಕಾಲು
ಆಕಾಶಕ್ಕ ಆರ್‍ಕಾಲು
ಒಂಬತ್ತು ಕಾಲಿದ್ದೂ ತೆಲಿ ಒಂದಃಹೊಲ್ದಾಗ'
ಈ ಒಗಟ ತಿಳಿದ್ಹೇಳ ನನ ರಾಜಾ' .....

ಈ ಒಗಟಿನುತ್ತರಕೆ ನನಗಿಲ್ಲ ಸೋಜಿಗವು 'ಕೂರಿಗಿ ಶೆಡ್ಡಿ' ಅಲ್ಲೇನು ನನ ರಾಣಿ ......

೩೫೩೪. 'ನೀರಲ್ಲೇ ಹುಟ್ಟೋದು
ನೀರಲ್ಲೆ ಬೆಳೆಯೋದು
ನೀರು ತಾಕಿದರೆ ಮಟಮಾಯ'
ನನ್ನಾಕಿ ............. ಈ ಒಗಟಿನುತ್ತರ ತಿಳಿದ್ಹೇಳ'

ಈ ಒಗಟಿನುತ್ತರವ ಬಲ್ಲೆ ನಾ ಮಹಾರಾಯ 'ಉಪ್ಪು' ಅಲ್ಲೇನು ಮನಿ ಪುರುಷ .....

೩೫೩೫. 'ಬಾಲ ಚುರಕಾಗಿಹುದು ಹನುಮಂತನಲ್ಲ
ಲೀಲೆಯಿಂದಾಡುವುದು ಪಕ್ಷಿ ತಾನಲ್ಲ
ಮೇಲೆರಡು ಕೊಂಬುಂಟು ವೃಷಭನಲ್ಲ
ಈ ಒಗಟ ಒಡದ್ಹೇಳ ಬಲ್ಲೆಯಾ ಪ್ರಿಯಾ ......

ಈ ಒಗಟ ಬಿಡಿಸಲಿಕೆ ನನಗೇನೂ ಕಟಿಯಿಲ್ಲ 'ಗಾಳಿಪಟ' ಅಲ್ಲೇನು ಮರೆಯಲಾಗದ ಪ್ರಿಯೆ .....

೩೫೩೬. 'ಆಕಾಶಕ್ಕ ಬಾಯಿ ತಗದೈತಿ
ಬಡಿಗೆಯಿಂದ ಬಾಯಿ ಬಾಯಿ ಬಡಿಸಿಕೊಳ್ಳತೈತಿ
ಹೆಣ್ಣುಗಳ ಕೈಯಲ್ಲಿ ಬಾಯಿ ತೊಳಸಿಕೊಳ್ಳತೈತಿ
ಈ ಒಗಟಿನುತ್ತರವ ಹೇಳುವೆಯಾ ಪತಿ ದೇವಾ .....

ಈ ಒಗಟಿನುತ್ತರಕೆ ಇದ್ಯಾವ ತೊಂದರೆಯು 'ಒರಳು' ಅಲ್ಲದೇ ಮತ್ತೇನು ನನ ರಾಣಿ .....

೩೫೩೭. 'ಅಂಗಾಲು ಮೇಲ್ಮಾಡಿ ನೀರು ಕುಡಿವಣ್ಣಾ
ಮೂಗಿಲ್ಲದವ ಬರುವ ಕಡೆಗೆ ಸಾರಣ್ಣಾ
ನಿನಗಾವ ಹೇಳಿದನ್ನು ತಲೆಯಿಲ್ಲದಣ್ಣಾ
ನನಗೊಬ್ಬ ಹೇಳಿದನು ಕರುಳಿಲ್ಲದಣ್ಣಾ
ಈ ಬೆಡಗ ನೀ ತಿಳಿದು ಹೇಳಲಿಬೇಕು
ಇದಕಾಗಿ ಕಾದಿದೆ ನನ್ನೊಳಗ ಮುತ್ತುರಾಜಾ .....

ಈ ಒಗಟಿನುತ್ತರವು ಬಲು ಜಟಿಲ ಬಲು ಜಟಿಲ ನಾಲ್ಕು ಉತ್ತರವಿರುವುದು ಈ ಒಗಟಿಗೆ ಆಡು, ಸಿಂಹ, ಏಡಿ, ಜಿಗಳ' – ಈ ಎಲ್ಲ ಉತ್ತರವು ಸಮ್ಮತವೆ ಅರ್ಧಾಂಗಿ ......

೩೫೩೮. 'ಅರ್ಧಚಂದ್ರಮನಂತೆ ಆಕಾರವಿರುವುದು
ಮುದ್ದು ಕೊಟ್ಟರೆ ಗದ್ದರಿಸುತಿಹುದು
ಗದ್ದಲವು ನಡೆದಲ್ಲಿ ಗಮಕ ತೋರುವುದು
ಬುದ್ಧಿವಂತರು ನೀವು .......... ತಿಳಿದು ಒಡೆಯುವುದು.

ಈ ಒಗಟಿನುತ್ತರವು 'ಕಹಳೆ' ಅಲ್ಲವೇ ಗೆಳತಿ .....

೩೫೩೯. 'ಮುಟ್ಟಿದರೆ ಚುಚ್ಚುವುದು ಕಿಚ್ಚು ತಾನಲ್ಲ
ಬಿಟ್ಟರೆ ಓಡುವುದು ಕುದುರೆ ತಾನಲ್ಲ
ಸಿಟ್ಟಾಗಿ ಕೊಂದರೆ ಹನಿ ರಕ್ತವಿಲ್ಲ
ನನ್ನವರು ನೀವು ಜಾಣರ ಜಾಣರು ......
ಈ ಒಗಟ ಬಿಡಿಸ್ಥೇಳಿ.

ಈ ಒಗಟಿನುತ್ತರಕ್ಕೆ ಇಷ್ಟೇಕೆ ಸೋಜಿಗವು 'ಚೇಳು' ಅಲ್ಲದೇ ಮತ್ತೇನು? ನನ್ನ ರಾಣಿ .....

೩೫೪೦. ಹಂಡಗುದುರಿ ಹತ್ತೋದಲ್ಲ
ಬೆಳ್ಳಿ ಬೆತ್ತ ಹಿಡಿಯೋದಲ್ಲ
ಕೆಂಪು ನೀರು ಕುಡಿಯೋದಲ್ಲ
ಈ ಒಗಟಿನುತ್ತರವ ತಿಳಿದ್ಹೇಳ ನನ್ನಾಕಿ .....

ಈ ಒಗಟಿನುತ್ತರಕ್ಕೆ ಇಷ್ಟೇಕೆ ಸೋಜಿಗವು ಇದರುತ್ತರ ಒಂದಿಲ್ಲ ನನ ರಾಜಾ, 'ಹುಲಿ, ಹಾವು, ರಕ್ತ', ಅಲ್ಲದೇ ಮತ್ತೇನು ರಾಯಾ .....

೩೫೪೧. 'ಹಾಲು ಉಕ್ಕಿದರ ನೀರು ಹಾಕತಾರ
ನೀರು ಉಕ್ಕಿದರ ಏನ ಹಾಕತಾರ'
ತಡಮಾಡದ ಹೇಳ ನನ ಪ್ರಿಯಾ .....

ಹೇಳತೀನ ಕೇಳ ಚಿತ್ತವಿಟ್ಟು, ನೀರು ಉಕ್ಕಿದರ ಹಾಕ್ತಾರ 'ಹರಿಗೋಲ' ಹೌದಲ್ಲ ಹೇಳ ನನ ರಾಣಿ .....

೩೫೪೨. 'ತಕ್ಕಡ್ಯಾಗಿಟ್ಟು ತೂಗೂದಲ್ಲ
ದುಡ್ಡೀಗೆ ಕೊಡೂದಿಲ್ಲ
ಅದಿಲ್ದ ನಡಿಯೂದಿಲ್ಲ'
ಈ ಒಗಟ ಬಿಡಿಸ್ಬೇಳ ನನ್ನ ಸಿಂಗಾರಿ .....

ಈ ಒಗಟು ಬಿಡಸಲಿಕೆ ಅದ್ಯಾವ ಸೋಜಿಗವು 'ಬೆಂಕಿ' ಉತ್ತರವಲ್ಲೇನು ನನ್ನ ರಾಜಾ .....

೩೫೪೩. 'ತೂಕದ ಗುಂಡು ತುಬಾಕಿ ಗುಂಡು
ನೀರಲ್ಲಿ ಹಾಕಿದರೆ ಮುಳುಗದ ಗುಂಡು
ಇದ್ಯಾವ ಗುಂಡು ಒಡದ್ಹೇಳು ಗೆಳತಿ .....

ಗುಂಡು ಅಂದರೆ ನೀವು ಹಾಕುವ ಗುಂಡಲ್ಲ ಮಾವಾ ಇದು 'ಬೆಣ್ಣೆ ಗುಂಡು' ಹೌದಲ್ಲೊ ನನ ರಾಜಾ ......

೩೫೪೪. 'ಅಕ್ಕೀಗೆ ಅಗುಳಿಲ್ಲ, ತುಪ್ಪಕ್ಕ ಕಂಪಿಲ್ಲ
ಮಕ್ಕಳ ತಾಯಿಗೆ ಮೊಲೆ ಇಲ್ಲ'
ಈ ಒಗಟಿನುತ್ತರ ತಡಮಾಡದಲೆ ಹೇಳ ಗೆಳತಿ ......

ಈ ಒಗಟಿನುತ್ತರ ಹೇಳಲಿಕೆ ಭಯವಿಲ್ಲ 'ಯಾಲಕ್ಕಿ, ಜೇನು ತುಪ್ಪ, ಕೋಳಿ' ಈ ಮೂರು ಉತ್ತರ ಸರಿಯಾಯ್ತು ನನರಾಜಾ .....

೩೫೪೫. 'ಹೆಡಿ ಐತಿ ಸರ್ಪಲ್ಲ, ನುಡಿತೈತಿ ಅರಗಿಳಿಯಲ್ಲ
ದೇಹ ಐತಿ ಗಣಪ ಅಲ್ಲ.
ಈ ಒಗಟ ತಿಳಿದ್ಹೇಳ ನನ್ನ ರಾಜಾ .....

ಈ ಒಗಟಿನುತ್ತರ 'ತಂಬೂರಿ' ಅಲ್ಲವೇನು ನನ ರಾಣಿ .....

೩೫೪೬. ಗುಡೂರಿಂದ ಎರಡು ಹೋರಿ ತಂದೀನಿ
ಬಲಕ್ಕಿಂದು ಎಡಕ್ಕ ಬರವಲ್ದು
ಎಡಕ್ಕಿಂದು ಬಲಕ ಬರವಲ್ದು
ಅವುನ್ನ ಕಡೇತನಾ ಹೀಂಗs ಹೂಡಡಬೇಕು'
ಅವು ಎರಡು ಹೋರಿ ಯಾವವು
ಒಡದ ಹೇಳು ನನ್ನ ಮುದ್ದಿನರಾಣಿ .....

ಈ ಒಗಟಿಗೆ ನಾ ಹೆದರಾಕೆಲ್ಲಾ ಇದರುತ್ತರ 'ಚಪ್ಪಲಿ' ಅಲ್ಲೇನು ಹೇಳಿ .....

೩೫೪೭. 'ಕುಂತಾಗ ಬರಬ್ಯಾಡ
ನಿಂತಾಗ ಬರಬ್ಯಾಡ
ಮಲಕೊಂಡಾಗ ಬರಬ್ಯಾಡ
ಈ ಮೂರೂ ವ್ಯಾಳೇದಾಗ ಬಿಟ್ಟು ಬಾ'
ಅಂದ್ರ ಈ ಒಗಟಿಗೆ ಏನಂತ ಉತ್ತರಾ ಕೊಡ್ತೀ ನನ್ನರಸಾ .....

ಈ ಒಗಟಿಗೆ ಉತ್ತರಾ ಕೊಡಾಕ ಹೆದರಿಲ್ಲ ನಿನಗs ಹೊಂದಿಕೊಂಡು ಒಗಟಲ್ಲಾ? 'ಹೊರಗ ಕುಂತಾಗ, ಮುಟ್ಟಾದಾಗ, ಹಡದಾಗ, ನಿನ್ನ ಹಂತೇಲಿ ಬರಬ್ಯಾಡಂದಾಗಾಯ್ತು ಹೌದಲ್ಲ ನನರಸಿ .....

೩೫೪೮. 'ಕೆಂಪು ಕುದುರಿ, ಕರಿಥಡಿ
ಒಬ್ಬಾವ ಹತ್ತಾನ ಒಬ್ಬಾವ ಇಳಿತಾನ'
ಈ ಒಗಟಿನ್ಯಾಗ ಯಾವ ಹತ್ತಾನ
ಯಾವ ಇಳಿತಾನ ಹೇಳ ನನ್ನ ರಾಯ .....

ಈ ಒಗಟಿನ ಉತ್ತರಾ 'ಹಂಚು-ರೊಟ್ಟಿ' ಹೌದಿಲ್ಲೋ ಅಲ್ಲೇ ನನ ಸುಂದರಿ ....

೩೫೪೯. 'ಗಚ್ಚಿನ ಮನಿಗೆ ಬಾಗಿಲೇ ಇಲ್ಲ'
ಇದೇನ ಮಾರಾಯ ನೀ ಒಡದ್ಹೇಳು
ಕೈಯಾಗ ಕಡಗಾ ಕಟ್ಟಿತೀನಿ ನಿನ್ನ ಅರ್ಧಾಗಿ .....

ಇದೆಂಥ ಒಗಟು ಇದರುತ್ತರ 'ತತ್ತಿ' ಅಲ್ಲೇನ ನನ ಮಡದಿ .....

೩೫೫೦. 'ಗ್ವಾಡಿ ಗುಮ್ಮಣ್ಣ, ಹಾರೋ ತಮ್ಮಣ್ಣ ಹತ್ತೋ ಅಮ್ಮಣ್ಣ'
ಏನೇ ಈ ಒಗಟಿಗೆ ಉತ್ತರಾ ಒಡದ ಹೇಳು ......
ನಿನಗ ಕೊಡ್ತೀನಿ ತಂದು ಗೋವಾದ ಮಾವಿನಹೋಳು.

ಈ ಒಗಟಿಗ್ಯಾಕ ಮಾವಿನ ಹೋಳು
ತಂದು ಇಡ್ರಿ ಮುತ್ತಿನ ಕಾಳು
ಈ ಒಗಟಿನ ಉತ್ತರಾ 'ತಗಣಿ, ಚಿಕ್ಕಾಡು, ಉಣ್ಣಿ'
ಹೌದಲ್ಲೇನ ನನ್ನರಸಾ ......

೩೫೫೧. 'ಗಿಡಗಿಡಕ ಗಿಣಿ ಕುಂತಾವು
ಗಿಡ್ಡ ಗಿಡಕ ಡೊಳ್ಳು ಕಟ್ಟ್ಯಾರ'
ಈ ಒಗಟಿನ ಉತ್ತರಾ ಹೇಳ ನನ ಜಾಣಾ .....

ಈ ಒಗಟಿನ ಉತ್ತರಾ 'ಕಡ್ಲಿ ಗಿಡ, ಬಸುರಿ ಹೆಂಗಸು'
ಹೌದು ಅಲ್ಲೇನ ಸುಂದರಿ .....

೩೫೫೨. 'ಗುಡ್ಡದಾಗಿರೋ ಗೋವಿಂದಭಟ್ಟ
ನಿನಗ್ಯಾರಿಟ್ಟರೋ ಸಾದಿನ ಬಟ್ಟ
ಇದ್ಯಾವ ಒಗಟೊ ಒಡದ್ಹೇಳ ನನ ಜಾಣೆ ......

ಈ ಒಗಟು ಬಿಡುಸೋಕೆ ಸೋಜಿಗ ಎನಗಿಲ್ಲ
ಇದರುತ್ತರ 'ಗುಲಗಂಜಿ' ಅಲ್ಲೇನ ನನ ರಾಜಾ .....

೩೫೫೩. 'ಹೊರಗ ಕಂಚಿನ ಕ್ವಾಟಿ
ಒಳಗ ಬೆಳ್ಳಿ ಕ್ವಾಟಿ
ನೀರುಂಟು ಅದರಲ್ಲಿ
ಮೀನಿಲ್ಲ ಮೊಸಳಿಲ್ಲ'
ಈ ಒಗಟಿನರ್ಥ ಒಡದ್ಹೇಳ ನನ್ನರಸಾ .....

ಈ ಒಗಟಿನರ್ಥವ ಬಿಡಿಸುವುದ್ಯಾವ ಸೊಜಿಗವು
ಇದರುತ್ತರ 'ತೆಂಗಿನಕಾಯಿ' ಅಲ್ಲೇನ ನನ್ನರಸಿ .....

೩೫೫೪. 'ಹೊಟ್ಟಿ ಡುಮ್ಮಾ ಹೊಲಕ ಹೊಂಟಾನ'
ಇದೇನ ನನರಾಯ ..... ಈ ಒಗಟ ಒಡದ್ಹೇಳು.

ಈ ಒಗಟ ಬಿಡಿಸೋದಕೆ ಯಾವ ಸೋಜಿಗವಿಲ್ಲ
ಇದರರ್ಥ 'ಮಣ್ಣಿನ ತತ್ರಾಣಿ' ಅಲ್ಲೇನ ನನ್ನರಸಿ .....

೩೫೫೫. 'ಏನೋ ಕಿಟ್ಟಿ, ಒಂಬತ್ತು ಪದರಿನ ಅಂಗಿ ತೊಟ್ಟಿ
ಮನ್ಯಾಗ ಬಂದ ಜೀವಾಬಿಟ್ಟಿ'
ಈ ಒಗಟ ಒಡದ್ಹೇಳೋ ನನ ಜಾಣ .....
ಬರೇ ರೊಕ್ಕಾ ಎಣಸ್ತೀದಿ ಝಣ ಝಣ.

ಈ ಒಗಟ ಬಿಡಿಸೋಕೆ ಏನೆಲ್ಲ ಸೋಜಿಗವು
'ಉಳ್ಳೇಗಡ್ಡಿ' ಅಲ್ಲೇ ನನಗೆಣತಿ .....

೩೫೫೬. 'ಯಾತಕ ಬಂದೆ ಪಾತಕರಂಡೆ
ಆಡೂ ಮಕ್ಕಳ ಅಳಸಾಕ ಬಂದೆ'
ಈ ಒಗಟಿನರ್ಥ ಬಿಡಿಸಿಗೆದರ ಸಿಗತ್ತೆ ..... ರಾಣಿಗೆ ಬಹುಮಾನ.

ಈ ಒಗಟ ಬಿಡಸಲಿಕೆ ಅದ್ಯಾವ ಸೋಜಿಗವು
'ಚೇಳು' ಅಲ್ಲವೇನು ನನ ರಾಜ .....

೩೫೫೭. 'ಮುತ್ತಿನಂಥಾ ಮಗಾ ಮುಳ್ಳಾಗ ಬಿದ್ದಾ,
ಏನ್ಮಾಡ್ತಿಯೇ ನನ ರಾಣಿ ......

'ಮುತ್ತಿನಂಥಾ ಮಗಾ ಮುಳ್ಳಾಗ ಬಿದ್ದ್ರ'
ಮಗಾ ಅಲ್ಲ ಕೇಳು ಅದು ಒಗಟು
ಅದರರ್ಥ 'ಕುಸುಬಿ' ಅಲ್ಲೇನ ನನ್ನರಸ .....

೩೫೫೮. 'ಮೂರು ಕಣ್ಣಿವೆ ಮುಕ್ಕಣ್ಣನಲ್ಲ
ಜೆಡಿ ಇದೆ ಬ್ರಾಹ್ಮಣನಲ್ಲ'
ಈ ಒಗಟ ಬಿಡಿಸ್ಥೇಳ ನನ್ನರಸ .....

ಈ ಒಗಟ ಬಿಡಿಸಲಿಕೆ ನನಗೇನು ಸೋಜಿಗವು
'ತೆಂಗಿನಕಾಯಿ' ಹೌದಲ್ಲವೇನು ಸುಂದರಿ ......

೩೫೫೯. 'ಅಂಗಳ ತುಂಬಾ ಇಂಗಳ ಗುಟಾ ಬಡದಾರ'
ಈ ಒಗಟ ಒಡದ್ದೇಳ ನನ್ನ ಮುದ್ದು ......

ಈ ಒಗಟ ಹೇಳಲಿಕೆ ನನಗೆ ಸೋಜಿಗವಿಲ್ಲ
ಇದರುತ್ತರ 'ಚಿಕ್ಕಿ' ಅಲ್ಲವೇ ನನ ಗೆಳತಿ ......

೩೫೬೦. 'ಅಂಗೈ ಅಗಲದ ಗದ್ದೆ
ಗದ್ದ್ಯಾಗ ನೀರು
ನೀರಿನ್ಯಾಗ ಬೇರು
ಬೇರಿನ ತುದಿಗೆ ಬೆಂಕಿ
ಬೆಂಕಿಗೆ ಸಾವಿರ ಕಣ್ಣು'
ಈ ಒಗಟ ಬಿಡಿಸ್ಥೇಳು ನನ ರಾಯಾ .....

ಈ ಒಗಟ ಬಿಡಿಸೋಕೆ ನನಗೇಕೆ ಸೋಜಿಗವು
ಇದರ ಉತ್ತರ 'ದೀಪ' ಅಲ್ಲವೇ ನನ ರಾಣಿ .....

೩೫೬೧. 'ಮಟಾ ಮದ್ಯಾಣದಾಗ
ಚಿಟಗುಬ್ಬಿ ತೆಲಿ ಒಡದೈತಿ'
ಇದೆಂಥ ದುರಂತ ಈ ಮಾತಿನರ್ಥ
ಬಿಡಿಸ್ಥೇಳ ನನ್ನಾಕಿ ಮುತ್ತಿನಂತಾಕಿ .....

ಈ ಒಗಟಿನರ್ಥ 'ಹತ್ತಿತೊಳೆ' ಅಲ್ಲೇನ ನನ ಪ್ರಾಣ ......

೩೫೬೨. ‘ಕಂಬ, ಕಂಬದ ಮೇಲೆ ಡಿಂಬ
ಡಿಂಬದ ಮೇಲೆ ಬಾಗೂರು
ಬಾಗೂರ ಮ್ಯಾಲೆ ಮೂಗೂರು
ಮೂಗೂರು ಮ್ಯಾಲೆ ಕಣ್ಣಿಗಾರ
ಕಣ್ಣೀಗಾರದ ಮೇಲೆ ಕರಿಗುಡ್ಡ
ಕರಗುಡ್ಡದ ತುಂಬಾ ಕುರಿಮೆಯ್ತಾವು’
ಈ ಒಗಟ ಬಿಡಿಸಿ ಹೇಳಲಿಕೆ ಎದೆ ಗಟ್ಟಿ ಇರಬೇಕು

ತಲೆ ಸುದ್ದ ಇದ್ದರ ಒಡದ್ಹೇಳು ನನ ರಾಜಾ .....

ಈ ಒಗಟಿನುತ್ತರಕ್ಕೆ ನನಗಾವ ಸೋಜಿಗವು
ಇದರ ಉತ್ತರ ‘ಹೇನು’ ಅಲ್ಲವೇ ನನ್ನರಸಿ .....

೩೫೬೩. ‘ಮುಟ್ಟಿ ಕೆಟ್ಟ, ಮುಟ್ಟದೇ ಕೆಟ್ಟ
ಕೊಟ್ಟು ಕೆಟ್ಟ, ಕೊಡದೆ ಕೆಟ್ಟ

ಈ ಒಗಟಿನುತ್ತರವ ಹೇಳುವುದು ರಾಜಾ .....
ಹೇಳಿದರೆ ದೊಡ್ಡ ಬಹುಮಾನವಿಹುದು.

ಈ ಒಗಟು ಬಿಡಿಸುದಕೆ ಅದ್ಯಾವ ಸೋಜಿಗವು
ನಮ್ಮ ಮಹಾಕಾವ್ಯಗಳೇ ಅಡಗಿರುವ ಇದರುತ್ತರ
‘ದುಶ್ಯಾಸನ, ರಾವಣ, ಕರ್ಣ, ದುರ್ಯೋಧನ, ಅಲ್ಲೇನು ನನ್ನರಸಿ .....

## ಒಡಪು ಹೇಳಿದವರು

| | | |
|---|---|---|
| ೧. | ಶ್ರೀಮತಿ ಶಶಿಕಲಾ ಸಂಗಪ್ಪ ಮಾರುತಿ | – ನಾಗನೂರ |
| ೨. | ಶ್ರೀಮತಿ ಮಲ್ಲವ್ವ ಕಾಶಪ್ಪನವರ | – ಗೋಕಾಕ |
| ೩. | ಶ್ರೀಮತಿ ಭೀಮವ್ವ ಮಲ್ಲಪ್ಪ ದೊಡ್ಡಮನಿ | – ಗೋಕಾಕ |
| ೪. | ಶ್ರೀಮತಿ ಹೂವವ್ವ ಶೇ. ಭಜಂತ್ರಿ | – ತಮದೊಡ್ಡಿ |
| ೫. | ಶ್ರೀಮತಿ ಬಸವ್ವ ಮಾದೇವಪ್ಪ ಬ್ಯಾಳಿ | – ಕಾಗವಾಡ |
| ೬. | ಶ್ರೀಮತಿ ನಿಂಗಮ್ಮ ದೇವರಮನಿ | – ಉತ್ತಂಗಿ |
| ೭. | ಶ್ರೀಮತಿ ಲಲಿತಾಬಾಯಿ ರಾಯಣ್ಣನವರ | – ಉತ್ತಂಗಿ |
| ೮. | ಶ್ರೀಮತಿ ಸರೋಜಾ ತುಕಾರಾಮ ಜಾಧವ | – ಚಿಗಟೇರಿ |
| ೯. | ಶ್ರೀಮತಿ ದೇವಕಿ ದುರ್ಗಣ್ಣವರ | – ಮೈಸೂರು |
| ೧೦. | ಶ್ರೀಮತಿ ಬಾಗವ್ವ ಚಂದ್ರಪ್ಪ ಚಲವಾದಿ | – ಮೈಗೂರು |
| ೧೧. | ಶ್ರೀಮತಿ ಶ್ಯಾಂವಂತ್ತೆವ್ವ ನಿಂ. ದೊಡ್ಡಮನಿ | – ನಂದಿಬೇವೂರು |
| ೧೨. | ಶ್ರೀಮತಿ ಗೌರವ್ವ ಉಡಚವ್ವ ಮಾದರ | – ಸೀತಿಮನಿ |
| ೧೩. | ಶ್ರೀಮತಿ ಶಾರವ್ವ ಬೇವಿನಕಟ್ಟಿ | – ಬ. ಬಾಗೇವಾಡಿ |
| ೧೪. | ಶ್ರೀ ಸಂಗಪ್ಪ ಬಾಳಪ್ಪ ಸಂಗಟ್ಟಿ | – ಬಸವನ ಬಾಗೇವಾಡಿ |
| ೧೫. | ಶ್ರೀಮತಿ ಪಾರ್ವತೆವ್ವ ಸಂಗಟ್ಟಿ | – ಬ. ಬಾಗೇವಾಡಿ |
| ೧೬. | ಶ್ರೀಮತಿ ತಂಗೆವ್ವ ಸಂಗಪ್ಪ ಸಂಗಟ್ಟಿ | – ಬ. ಬಾಗೇವಾಡಿ |
| ೧೭. | ಶ್ರೀ ಶರಣಪ್ಪ ಸಂ. ಪಾಟೀಲ | – ನವಲಗುಂದ |
| ೧೮. | ಶ್ರೀಸಂಗನಬಸಪ್ಪ ರಾಟಿ | – ನವಲಗುಂದ |
| ೧೯. | ಶ್ರೀಮತಿ ಶಾರವ್ವ ಸಂ. ರಾಟಿ | – ನವಲಗುಂದ |
| ೨೦. | ಶ್ರೀಮತಿ ದೇವಮ್ಮ ಬಡಿಗೇರ | – ಜಮಖಂಡಿ |
| ೨೧. | ಶ್ರೀಮತಿ ಸೋಮವ್ವ ಸಂ. ದೇವನೂರು | – ಜಮಖಂಡಿ |
| ೨೨. | ಶ್ರೀಮತಿ ನಿರ್ಮಲಾ ಸಂ ನೀರಲೋಟಿ | – ನರಗುಂದ |

೨೨. ಶ್ರೀಮತಿ ಮಹಾದೇವಿ ಪರಪ್ಪ ಪ್ಯಾಟಿ – ನರಗುಂದ
೨೩. ಶ್ರೀಮತಿ ತಂಗೆವ್ವ ತಮ್ಮಣ್ಣ ಭಜಂತ್ರಿ – ರಬಕವಿ
೨೪. ಶ್ರೀಮತಿ ಪಾರವ್ವ ಸಣ್ಣಪ್ಪ ಸೂರಣಗಿ – ರಬಕವಿ
೨೫. ಶ್ರೀಮತಿ ಎಲ್ಲಮ್ಮ ತಂಗೆವ್ವ ಹರಿಜನ – ಮನಗೂಳಿ
೨೬. ಶ್ರೀಮತಿ ಸೀತಾಬಾಯಿ ಮು. ಜೋಶಿ – ಸಿಂದಗಿ
೨೭. ಶ್ರೀಮತಿ ಸೋಮವ್ವ ಪರಪ್ಪನವರ – ಸಿಂದಗಿ
೨೮. ಶ್ರೀಮತಿ ಬಂಗಾರೆವ್ವ ಗು. ಯಾದವಾಡ – ಹಿಪ್ಪರಗಿ
೨೯. ಶ್ರೀಮತಿ ಸುವರ್ಣಲತಾ ಹೆಬಸೂರು – ಹಿಪ್ಪರಗಿ
೩೦. ಶ್ರೀಮತಿ ವಿಜಯಾ ರತ್ನಾಕರ ಕವಲೂರು – ಗದಗ
೩೧. ಶ್ರೀಮತಿ ನಳಿನಿ ಸುರೇಶ ಕವಲೂರು – ಗದಗ
೩೨. ಶ್ರೀಮತಿ ಅನನ್ಯ ಬಸರಡೆಪ್ಪ ಜಕರಡ್ಡಿ – ಮುಂಡವಾಡ
೩೩. ಶ್ರೀಮತಿ ಮಲ್ಲವ್ವ ನಿಂಗಪ್ಪ ಜಕರಡ್ಡಿ – ಮುಂಡವಾಡ
೩೪. ಶ್ರೀಮತಿ ಶ್ಯಾವಮ್ಮ ಸಂ. ಪಾಟೀಲ – ಮುಂಡರಗಿ
೩೫. ಶ್ರೀಮತಿ ಗಂಗಮ್ಮ ಶಿವನಗೌಡ ಪಾಟೀಲ – ನರೇಗಲ್ಲ
೩೬. ಶ್ರೀಮತಿ ಲತಾ ದೊ. ಪಾಟೀಲ – ನರೇಗಲ್ಲ
೩೭. ಶ್ರೀಮತಿ ಸಾವಿತ್ರಿ ಬ. ಪಾಟೀಲ – ನರೇಗಲ್ಲ
೩೮. ಶ್ರೀಮತಿ ಸುಲೋಚನಾ ಅಂದಪ್ಪ ತೋಟಗಂಟಿ – ರೋಣ
೩೯. ಶ್ರೀಮತಿ ನಿಂಗಮ್ಮ ಬ. ತೋಟಗಂಟಿ – ರೋಣ
೪೦. ಶ್ರೀಮತಿ ದಿ. ಬಸಮ್ಮ ಅಂದಪ್ಪ ತೋಟಗಂಟಿ – ರೋಣ
೪೧. ಶ್ರೀಮತಿ ಸಂಗಮ್ಮ ಶಿವಯ್ಯ ಹಿರೇಮಠ – ರೋಣ
೪೨. ಶ್ರೀಮತಿ ದಿ. ಶಿವಮ್ಮ ಹ. ಪಾಟೀಲ – ತೋಟಗಂಟಿ
೪೩. ಶ್ರೀಮತಿ ಶರಣಮ್ಮ ಪಾಟೀಲ – ತೋಟದಗಂಜಿ
೪೪. ಶ್ರೀಮತಿ ಸುವರ್ಣಾ ದ. ಹೆಬಸೂರು – ಲಕ್ಕುಂಡಿ
೪೫. ಶ್ರೀಮತಿ ನೀಲಾ ಬಾರಿಗಿಡದ – ಲಕ್ಕುಂಡಿ
೪೬. ಶ್ರೀಮತಿ ಸುಧಾರಾಣಿ ಪಿ. ಪಾಟೀಲ – ಹಾವೇರಿ
೪೭. ಶ್ರೀಮತಿ ಎಲ್ಲಮ್ಮ ಬ. ತುಂಗಳದ – ಹಾವೇರಿ
೪೮. ಶ್ರೀಮತಿ ಸಾವಿತ್ರಿ ಎಲ್ಲಪ್ಪ ತುಂಬಾಕದ – ಹಾವೇರಿ

| | | |
|---|---|---|
| ೪೯. | ಶ್ರೀಮತಿ ಧರಣೆವ್ವ ಸಂ. ಹಡಪದ | – ರಾಣಿಬೆನ್ನೂರ |
| ೫೦. | ಶ್ರೀಮತಿ ಶೀಲಾ ದ್ಯಾವಣ್ಣವರ | – ರಾಣಿಬೆನ್ನೂರ |
| ೫೧. | ಶ್ರೀಮತಿ ನಿಂಗಮ್ಮ ಸೂರಣಗಿ | – ಹುಬ್ಬಳ್ಳಿ |
| ೫೨. | ಶ್ರೀಮತಿ ಶಿವಲಿಂಗಮ್ಮ ಕಟ್ಟಿ | – ಹುಬ್ಬಳ್ಳಿ |
| ೫೩. | ಶ್ರೀಮತಿ ಸವಿತಾ ಕೇಟಬಾಗಿ | – ಹುಬ್ಬಳ್ಳಿ |
| ೫೪. | ಶ್ರೀಮತಿ ದಿ. ಶಾವಂತ್ರೆವ್ವಾ ಪಾಟೀಲ | – ಮುದ್ದೇಬಿಹಾಳ |
| ೫೫. | ಶ್ರೀಮತಿ ದಿ. ಲಕ್ಷ್ಮವ್ವಾ ಬ. ಪಾಟೀಲ | – ಮುದ್ದೇಬಿಹಾಳ |
| ೫೬. | ಶ್ರೀಮತಿ ಶಾರದಾ ದೇಸಾಯಿ | – ಮುದ್ದೇಬಿಹಾಳ |
| ೫೭. | ಶ್ರೀಮತಿ ಶಶಿಕಲಾ ಪಾಟೀಲ | – ಮುದ್ದೇಬಿಹಾಳ |
| ೫೮. | ಶ್ರೀಮತಿ ದಿ. ವೆಂಕಮ್ಮ ಬಾಪೂಗೌಡ ಪಾಟೀಲ | – ಮುದ್ದೇಬಿಹಾಳ |
| ೫೯. | ಶ್ರೀಮತಿ ಶಾಂತಾದೇವಿ ಬಸನಗೌಡ ಪಾಟೀಲ | – ಮುದ್ದೇಬಿಹಾಳ |
| ೬೦. | ಶ್ರೀಮತಿ ಗಿರಿಜಾ ರುದ್ರಗೌಡ ಪಾಟೀಲ | – ಮುದ್ದೇಬಿಹಾಳ |
| ೬೧. | ಶ್ರೀಮತಿ ಬೋರಮ್ಮ ರಾಂಪುರೆ | – ಮುದ್ದೇಬಿಹಾಳ |
| ೬೨. | ಶ್ರೀಮತಿ ಸಂಗಮ್ಮ ಹ. ಅಗಸರ | – ಮುದ್ದೇಬಿಹಾಳ |
| ೬೩. | ಶ್ರೀಮತಿ ಲತಾ ಬಂ. ಪಾಟೀಲ | – ಮುದ್ದೇಬಿಹಾಳ |
| ೬೪. | ಶ್ರೀಮತಿ ಮಾಲತಿಬಾಯಿ ಗಚ್ಚಿನಕಂಬ | – ಬಳ್ಳಾರಿ |
| ೬೫. | ಪಾರ್ವತಿಬಾಯಿ ಗಜ್ಜಿನಕಂಬ | – ಬಳ್ಳಾರಿ |
| ೬೬. | ಶ್ರೀಮತಿ ಬೇಬಿ ಜಂಬನಗೌಡ | – ಹೊಸಪೇಟೆ |
| ೬೭. | ಶ್ರೀಮತಿ ಶಾಂತಾದೇವಿ ಎಚ್. ಪಾಟೀಲ | – ಹೊಸಪೇಟೆ |
| ೬೮. | ಶ್ರೀಮತಿ ಮಂಗಳಾ ಬಿರಾದಾರ | – ತಾಳಿಕೋಟೆ |
| ೬೯. | ಶ್ರೀಮತಿ ಸುವಿಲಾಕ್ಷಿ ಎನ್. ಪಾಟೀಲ | – ತಾಳಿಕೋಟೆ |
| ೭೦. | ಶ್ರೀಮತಿ ಅಮೋಘಾ ಆಸೀಫ್ | – ತಾಳಿಕೋಟೆ |
| ೭೧. | ಶ್ರೀಮತಿ ನೀಲಗಂಗಾ ಚರಂತಿಮಠ | – ಬೆಳಗಾಂವ |
| ೭೨. | ಶ್ರೀಮತಿ ಸುನಂದಾ ನಾಯಕ | – ಬೆಳಗಾಂವ |
| ೭೩. | ಶ್ರೀಮತಿ ಸರಸ್ವತಿ ದೇವಕ್ಕನವರ | – ಸಿಂಧನೂರು |
| ೭೪. | ಶ್ರೀಮತಿ ಪಾರ್ವತಿ ಬ. ಪಾಟೀಲ | – ಸಿಂಧನೂರು |
| ೭೫. | ಶ್ರೀಮತಿ ಪೂರ್ಣಿಮಾ ಪಾಟೀಲ | – ರಾಯಚೂರು |

೭೬. ಶ್ರೀಮತಿ ಸಂಗಮ್ಮ ಪಾಟೀಲ – ರಾಯಚೂರು
೭೭. ಶ್ರೀಮತಿ ರೋಹಿಣಿ ರವಿ ಪಾಟೀಲ – ಗುಲಬರ್ಗಾ
೭೮. ಶ್ರೀಮತಿ ಗಿರಿಜಾ ಸುಭಾಸ ಪಾಟೀಲ – ಗುಲಬರ್ಗಾ
೭೯. ಶ್ರೀಮತಿ ಸುನಂದಾ ಪಿ. ಪಾಟೀಲ – ಗುಲಬರ್ಗಾ
೮೦. ಶ್ರೀಮತಿ ದಿ. ಸುವರ್ಣಾಬಾಯಿ ವೆಂ. ಭರಮಗೌಡರ – ಕೋಡಿಕೊಪ್ಪ
೮೧. ಶ್ರೀಮತಿ ತಂಗೆವ್ವ ಭರಮಗೌಡರ – ಕೋಡಿಕೊಪ್ಪ
೮೨. ಶ್ರೀಮತಿ ಗೀತಾ ಭರಮಗೌಡರ ಸಂತಿ – ಧಾರವಾಡ
೮೩. ಗೌರಾದೇವಿ ಉಮೇಶ ಹಾಲಭಾವಿ – ಧಾರವಾಡ
೮೪. ಶ್ರೀಮತಿ ಪಾರ್ವತಿ ಸುರೇಶ ಹಾಲಭಾವಿ – ಧಾರವಾಡ
೮೫. ಶ್ರೀಮತಿ ಶೋಭಾ ದೊಡ್ಡಪ್ಪಗೌಡರ ಪಾಟೀಲ, ಬೆಂ. – ಮುದ್ದೇಬಿಹಾಳ
೮೬. ಶ್ರೀಮತಿ ವತ್ಸಲಾ ಶಶಿಧರ ಹಾಲಭಾವಿ – ಬೆಂಗಳೂರು
೮೭. ಶ್ರೀಮತಿ ವಿದ್ಯಾ ಹಾಲಭಾವಿ – ಬೆಂಗಳೂರು
೮೮. ಶ್ರೀಮತಿ ದಿ. ಅಂದಮ್ಮ ಬಸಪ್ಪ ಚಳ್ಳಾರಿ – ಬಿನ್ನಾಳ (ಕೊಪ್ಪಳ)
೮೯. ಶ್ರೀಮತಿ ವಿಜಯಾ ಮುತ್ತಗಿ – ಧಾರವಾಡ
೯೦. ಶ್ರೀಮತಿ ಕಮಲಾ ಕುಲಕರ್ಣಿ – ಧಾರವಾಡ
೯೧. ಶ್ರೀಮತಿ ಸುಲೋಚನಾ ಕಮ್ಮಾರ – ಧಾರವಾಡ
೯೨. ಶ್ರೀಮತಿ ಶಾಂತಾಬಾಯಿ ಗಡಾದ – ಧಾರವಾಡ
೯೩. ಶ್ರೀಮತಿ ಶಾಂತಾ ಎನ್. ಭದ್ರಾಪೂರ – ಧಾರವಾಡ
೯೪. ಶ್ರೀಮತಿ ಈರಮ್ಮ ಹನುಮರೆಡ್ಡೆವ್ವ ಇಮ್ರಾಪೂರ – ಅಬ್ಬಿಗೇರಿ
೯೫. ಶ್ರೀಮತಿ ವಿದ್ಯಾ ಕಟಗಾವಲಿ – ಅಬ್ಬಿಗೇರಿ
೯೬. ಶ್ರೀಮತಿ ದಿ. ಮೀನಾಕ್ಷಮ್ಮ ಅವರಡ್ಡಿ – ಅಬ್ಬಿಗೇರಿ
೯೭. ಶ್ರೀಮತಿ ರತ್ನಾ ವಿರೂಪಾಕ್ಷಗೌಡ ಪಾಟೀಲ – ಧಾರವಾಡ
೯೮. ಶ್ರೀಮತಿ ವೀಣಾ ರಾಜು ಪಾಟೀಲ – ಧಾರವಾಡ
೯೯. ಶ್ರೀಮತಿ ವಿದ್ಯಾ ಶ್ರೀಹರ್ಷ ಇಮ್ರಾಪೂರ – ಧಾರವಾಡ
೧೦೦. ಶ್ರೀಮತಿ ಚೇತನಾ ಸುಧೀರ ಹಾಲಭಾವಿ – ಬೆಂಗಳೂರು
೧೦೧. ಶ್ರೀಮತಿ ಕಾಂಚನಾ ಹುಲ್ಲೂರ – ಧಾರವಾಡ
೧೦೨. ಶ್ರೀಮತಿ ಬಾಗವ್ವ ಸತ್ತಾರ – ಧಾರವಾಡ

೧೦೩. ಶ್ರೀಮತಿ ಸರೋಜಿನಿ ದಾಸರಡ್ಡಿ – ಹುಲಕೋಟೆ
೧೦೪. ಶ್ರೀಮತಿ ತುಳಸಾಬಾಯಿ ಪಾಟೀಲ – ಹುಲಕೋಟೆ
೧೦೫. ಶ್ರೀಮತಿ ಜಯಶ್ರೀ ದೇಸಾಯಿ – ಅಥಣಿ
೧೦೬. ಶ್ರೀಮತಿ ಜಯಶ್ರೀ ಸಜ್ಜನ – ವಿಜಾಪುರ
೧೦೭. ಶ್ರೀಮತಿ ಶಕುಂತಲಾ ನಾವಲಗಿ – ಬಾಗಲಕೋಟೆ
೧೦೮. ಶ್ರೀಮತಿ ಶಾಂತಾ ಕಾಲವಾಡ – ಹಾವೇರಿ
೧೦೯. ಶ್ರೀಮತಿ ಗಿರಿಜಾ ಭೂಸನೂರಮಠ – ಧಾರವಾಡ
೧೧೦. ಶ್ರೀಮತಿ ವಿಜಯಾದೇವಿ ಹಿರೇಮಠ – ಧಾರವಾಡ
೧೧೧. ಶ್ರೀಮತಿ ಸುಮಿತ್ರಾ ಕಾಡದೇವರಮಠ – ಧಾರವಾಡ
೧೧೨. ಶ್ರೀಮತಿ ಶ್ರೀದೇವಿ ಕುಲಕರ್ಣಿ – ಧಾರವಾಡ
೧೧೩. ಶ್ರೀಮತಿ ಜಯಶ್ರೀ ಹನುಮಂತಗೌಡ – ಧಾರವಾಡ
೧೧೪. ಶ್ರೀಮತಿ ಸುರೇಖಾ ಕುಲಕರ್ಣಿ – ಧಾರವಾಡ
೧೧೫. ಶ್ರೀಮತಿ ಸುವರ್ಣಾ ಪಾಟೀಲ – ಕುಷ್ಟಗಿ
೧೧೬. ಶ್ರೀಮತಿ ನಿರ್ಮಲಾ ಹಿರೇಮಠ – ಧಾರವಾಡ
೧೧೭. ಶ್ರೀಮತಿ ಉಷಾ ಕೋಹಳ್ಳಿ – ಧಾರವಾಡ
೧೧೮. ಶ್ರೀಮತಿ ಗಿರಿಜಾ ಯಾಬಣ್ಣವರ – ಧಾರವಾಡ
೧೧೯. ಶ್ರೀಮತಿ ಶುಭಾ ಪಾರ್ಶ್ವನಾಥ – ಧಾರವಾಡ
೧೨೦. ಶ್ರೀಮತಿ ಅನ್ನಪೂರ್ಣಾ ಪಾಟೀಲ – ಧಾರವಾಡ
೧೨೧. ಶ್ರೀಮತಿ ಸುಮಲತಾ ಸಾವಂತ – ಧಾರವಾಡ
೧೨೨. ಶ್ರೀಮತಿ ಸುರೇಖಾ ಬಾಂಡಲಕರ – ಧಾರವಾಡ
೧೨೩. ಶ್ರೀಮತಿ ಶಕುಂತಲಾ ಬಿರಾದಾರ – ವಿಜಾಪುರ
೧೨೪. ಶ್ರೀಮತಿ ರಾಜೇಶ್ವರಿ ಸಾಲಿ – ಹುಬ್ಬಳ್ಳಿ
೧೨೫. ಶ್ರೀಮತಿ ಸರಸ್ವತಿ ನಿಚ್ಚಣಕಿ – ಬೆಳಗಾಂವ
೧೨೬. ಶ್ರೀಮತಿ ಸುಮನ್ ಯಜುರ್ವೇದಿ – ಗುಲಬರ್ಗಾ
೧೨೭. ಶ್ರೀ ವಿರೂಪಾಕ್ಷಪ್ಪ ಅಲ್ಲಿಪುರ – ಮುಂಡವಾಡ
೧೨೮. ಶ್ರೀ ಅಂದಪ್ಪ ಬಂಡಿ – ಅಬ್ಬೀಗೇರಿ
೧೨೯. ಶ್ರೀ ಸಂಗಪ್ಪ ನೀರಲೋಟಿ – ಅಬ್ಬೀಗೇರಿ

| | | |
|---|---|---|
| ೧೩೦. | ಶ್ರೀ ಬಾಬು ವೀರಾಪುರ | – ಅಬ್ಬೀಗೇರಿ |
| ೧೩೧. | ಶ್ರೀ ಮಲ್ಲಪ್ಪ ಶರಣಪ್ಪ ಮಾಲಿ | – ರೋಣ |
| ೧೩೨. | ಶ್ರೀ ಸಿದ್ಧಲಿಂಗ ಅಂ. ತೋಟಗಂಜಿ | – ರೋಣ |
| ೧೩೩. | ಶ್ರೀ ಮಲ್ಲಿಕಾರ್ಜುನಪ್ಪ ವಡವಿ | – ಅಬ್ಬೀಗೇರಿ |
| ೧೩೪. | ಶ್ರೀ ದಿ. ಅಂದಪ್ಪ ಅಡೂರ | – ಬಿನ್ನಾಳ |
| ೧೩೫. | ಶ್ರೀ ನಿರಂಜನ ತಂಬಾಕದ | – ಯಲಬುರ್ಗಾ |
| ೧೩೬. | ಶ್ರೀ ದಿ. ಮಲ್ಲಕಾಜಪ್ಪ ಚಳ್ಳಾರಿ | – ಬಿನ್ನಾಳ |
| ೧೩೭. | ಶ್ರೀ ಶೇಖರಯ್ಯ ಮಠಪತಿ | – ಬಿನ್ನಾಳ |
| ೧೩೮. | ಶ್ರೀ ಅಂದಪ್ಪ ಶಿ. ಪಾಟೀಲ | – ಕೊಪ್ಪಳ |
| ೧೩೯. | ಶ್ರೀ ಬಸವಂತಪ್ಪ ಅಡೂರು | – ಕೊಪ್ಪಳ |
| ೧೪೦. | ಶ್ರೀ ಚನ್ನಪ್ಪ ಬ. ಮಾದರ | – ಹಾವೇರಿ |
| ೧೪೧. | ಶ್ರೀ ಬಾಲಚಂದ್ರ ಸಂ. ಮೇಟಿ | – ಗದಗ |
| ೧೪೨. | ಶ್ರೀ ಎಲ್ಲಪ್ಪ ಭೀಮಪ್ಪ ಆರೇರ | – ಅಣ್ಣೀಗೇರಿ |
| ೧೪೩. | ಶ್ರೀ ನಿಂಗಪ್ಪ ಬ. ಸೂರಣಗಿ | – ಬೀದರ |
| ೧೪೪. | ಶ್ರೀ ಗುರುಶಾಂತಪ್ಪ ಗೋವನಕೊಪ್ಪ | – ಶಹಾಪೂರ |
| ೧೪೫. | ಶ್ರೀ ಹೇಮಣ್ಣಾ ಪಡನಲಗಿ | – ನಿಡಗುಂದಿ |
| ೧೪೬. | ಶ್ರೀ ತುಕಾರಾಮ ಜಾಧವ | – ರೋಣ |
| ೧೪೭. | ಶ್ರೀ ಚನ್ನಬಸಪ್ಪ ಬಾಳಪ್ಪ ತಾಳಿಕೋಟೆ | – ಬೆಳಗಾಂವ |
| ೧೪೮. | ಶ್ರೀ ರಾಮಣ್ಣ ಬಸಪ್ಪ ಶಿರೂರ | – ಮಲ್ಲಾಪುರ |
| ೧೪೯. | ಶ್ರೀ ಅಲ್ಲಾಸಾಬ ದಾವಲಸಾಬ ಕೊಂಗಿ | – ಕೊಚಲಾಪುರ |
| ೧೫೦. | ಶ್ರೀ ಎಲ್ಲಪ್ಪ ಸೂರಣಗಿ | – ಧಾರವಾಡ |
| ೧೫೧. | ಶ್ರೀ ಮರಿತಿಮ್ಮಣ್ಣ ಹಂಗರಕಿ | – ಧಾರವಾಡ |
| ೧೫೨. | ಶ್ರೀ ಬಸಪ್ಪ ಮಲ್ಲಪ್ಪ ಮುಂದಿನಮನಿ | – ಮುಂಡರಗಿ |
| ೧೫೩. | ಶ್ರೀ ನಿಂಗಪ್ಪ ಬಸಪ್ಪ ರಾಜಣ್ಣವರ | – ಗದಗ |
| ೧೫೪. | ಶ್ರೀ ಪರಪ್ಪ ಬಸಪ್ಪ ತಾಳಿಕೋಟೆ | – ಬೆಟಗೇರಿ |
| ೧೫೫. | ಶ್ರೀಮತಿ ಶಾರದಾ ಚೆನ್ನಪ್ಪ ಗುದುಗಿ | – ಶಲವಡಿ |

## ಪ್ರಕಟಿತ ಒಡಪು ಸಂಗ್ರಹಗಳು

೧. ಒಗಟಿನ ಗೊಂಚಲು ಸಂ. ಶ್ರೀನಿವಾಸ ಪುರುಷೋತ್ತಮಭಟ್ಟ (೧೯೫೦).

೨. ಒಗಟಿನ ಮಾಲೆ ಸಂ. ಶಿವಕುಮಾರ ತಡಕೋಡ (೧೯೫೫).

೩. ದಂಪತಿ ಒಗಟುಗಳು ಸಂ. ಎಂ.ಜಿ. ಜಾನಕಿ, ಜಗದಂಬಾ ಪ್ರಕಾಶನ ಹುಬ್ಬಳ್ಳಿ (೧೯೫೯).

೪. ಹೆಸರ ಹೇಳ್ತೀನಿ ಒಡಪ ಕಟ್ಟಿ ಸಂ. ಜ್ಯೋತಿ ಹೊಸೂರ, ಜಾನಪದ ಮಂಟಪ ಹಾರೋಗೇರಿ (೧೯೭೦).

೫. ಉತ್ತರ ಕರ್ನಾಟಕದ ಜನಪದ ಒಡಪುಗಳು, ಸಂ. ಎಂ.ಎಸ್. ಲಠ್ಠೆ, ರವೀಂದ್ರ ಪ್ರಕಾಶನ ಕಲಬುರ್ಗಿ (೧೯೭೪).

೬. ಒಗಟುಗಳು ಸಂ. ಪ್ರೊ. ಚಂದ್ರರಾವ್ ಸೇಟ, ಮಂಗಳೂರು (೧೯೫೬).

೭. ಒಲವಿನ ಒಡಪುಗಳು ಸಂ. ಶ್ರೀರಾಮ ಬಿದರಿ, ಜಾನಪದ ಸಾಹಿತ್ಯ ಸಂಘ, ಬಿಲಹಳ್ಳಿ (೧೯೭೩).

೮. ಉತ್ತರ ಕರ್ನಾಟಕದ ಮದುವೆ ಸಂಪ್ರದಾಯಗಳು,
– ಡಾ. ಎಂ.ಎಲ್. ಸತ್ಯಸಾವಂತ (೧೯೭೪).

೯. ನಮ್ಮ ಒಡಪುಗಳು ಸಂ. ಮೈಲಹಳ್ಳಿ ರೇವಣ್ಣ ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು (೧೯೮೫).

೧೦. ಸಿರಿಗನ್ನಡ ಒಡಪುಗಳು ಸಂ. ಎಂ.ಎನ್. ವಾಲಿ ಸಮಾಜ ಪುಸ್ತಕಾಲಯ, ಧಾರವಾಡ (೧೯೮೫).

೧೧. ಕನ್ನಡ ಒಡಪುಗಳು ಸಂ. ಕಲಾವತಿ ತೋರಣಗಟ್ಟಿ ಕರ್ನಾಟಕ ಸಂಘ, ಮೈಸೂರು (೧೯೭೯).

೧೨. ಉತ್ತರ ಕರ್ನಾಟಕದ ಜನಪದ ಒಡಪುಗಳು ಸಂ. ದಸ್ತಗೀರ ಅಲ್ಲಿಬಾಯಿ ಸಾಹಿತ್ಯ ಭಂಡಾರ, ಹುಬ್ಬಳ್ಳಿ (೧೯೯೨).

೧೩. ಒಗಟಿನ ಮಾಲೆ ಪ್ರ. ಎಂ.ಜಿ. ಕರಡಿ ಆ್ಯಂಡ್ ಸನ್ಸ್, ಗದಗ (೧೯೯೨).

೧೪. ಒಗಟಿನ ಮಾಲೆ ಪ್ರ. ಶಾಬಾದಿಮಠ ಬುಕ್ ಡಿಪೊ, ಗದಗ (೧೯೯೨).

೧೫. ಜನಪದ ಒಡಪುಗಳು ಸಂ. ಡಾ. ಬಿ.ಎಸ್. ಭಜಂತ್ರಿ ಚೈತನ್ಯ ಪ್ರಕಾಶನ, ವಡಗಾಂವಿ (೧೯೯೫).

೧೬. ದಕ್ಷಿಣ ಕರ್ನಾಟಕದ ಒಡಪುಗಳು ಸಂ. ವಿ.ಎನ್. ಶಿವರಾಮು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಡಾಡೆಮಿ, ಬೆಂಗಳೂರು (೧೯೯೩).

೧೭. ಒಗಟಿನಲ್ಲಿ ಗಂಡ ಹೆಂಡಿರು ಸಂ. ವಾಣಿಶ್ರೀ ಪಾಟೀಲ, ಪಿ.ಸಿ. ಶಾಬಾದಿಮಠ ಬುಕ್ ಡಿಪೊ, ಗದಗ (೨೦೧೧).

೧೮. ಜನಪದ ಒಡಪುಗಳು ಸಂ. ಶಾಂತಕುಮಾರಿ ಪಾಟೀಲ, (ಇಮ್ರಾಪುರ) ಚೇತನಾ ಪ್ರಕಾಶನ, ಧಾರವಾಡ (೧೯೭೯).

೧೯. ಬಳ್ಳಾರಿ ಜಿಲ್ಲೆಯ ಒಡಪುಗಳು ಸಂ. ಸಾಹಿತ್ಯಾನಂದ, ನಿವೇದಿತ ಪ್ರಕಾಶನ, ಸುಬ್ರಹ್ಮಣ್ಯನಗರ, ಬೆಂಗಳೂರು (೧೯೭೭).

೨೦. ಜಾನಪದ ಒಡಪುಗಳು, ಸಂ. ಬಿ. ಬಸವರಾಜು, ಶಾಬಾದಿಮಠ ಪ್ರೆಸ್, ಗದಗ, (೨೦೧೦).

೨೧. ಒಡಪುಗಳು ಪ್ರ. ಎಂಎಂ. ಅರಳಿ ಬುಕ್ ಡಿಪೋ, ಗದಗ.

೨೨. ಒಡಪುಗಳು, ಸಂ. ರಾಘವೇಂದ್ರಪಾಟೀಲ, ನೇತ್ರ ಪ್ರಿಂಟರ್ಸ್.

೨೩. ಹೊಸ ಮಾದರಿಯ ಒಗಟುಗಳು ಸಂ. ಸೀತಾಬಾಯಿ ನಾರಾಯಣ ದೇಶಪಾಂಡೆ, ಗದಗ.

## ಕೆಲವು ದೇಶಿ ಶಬ್ದಾರ್ಥಗಳು

| | | |
|---|---|---|
| ಅಗ್ಗ | – | ಕಡಿಮೆ ಬೆಲೆ, ಸೋವಿಧಾರಣಿ |
| ಅಗುಣಿ | – | ಅಗುಳಿ |
| ಅಕಲು | – | ಬುದ್ಧಿವಂತಿಕೆ, ಹಂಚಿಕೆ |
| ಅತ್ತಿ | – | ಅತ್ತೆ (ಗಂಡನ ತಾಯಿ) |
| ಅಳ್ಳಿಟ್ಟು | – | ಗೋಧಿಯ ಹಿಟ್ಟಿನ ಸಿಹೀ ತಿನಿಸು, ಅಳ್ಳಿನ ಜೋಳದ ಹಿಟ್ಟಿನ ಸಿಹಿ ಖಾದ್ಯ. |
| ಅಡುವಾಗಿ | – | ದಟ್ಟವಾಗಿ, ಹೆಚ್ಚಾಗಿ |
| ಅಂಬಲಿ | – | ಜೋಳ ಅಥವಾ ರಾಗಿ ಹಿಟ್ಟಿನ ದ್ರವ ಪದಾರ್ಥ. |
| ಆಂಬರಾ | – | (ಆಮ್ರ) ಸಾರು |
| ಆರಾಕ | – | ಒಣಗಿಸಲು, ತಂಪಾಗಲು |
| ಇಕ್ಕಲಿಲ್ಲ | – | ನೀಡಲಿಲ್ಲ |
| ಇಬತ್ತಿ | – | ವಿಭೂತಿ |
| ಈಲ | – | ಆತ್ಮೀಯವಾಗು |
| ಉರಕೊಂತ | – | ಘಟಿಂಗ, ಉಡಾಳತನ |
| ಉರದಾಡು | – | ಸಿಟ್ಟಿಗೇಳು |
| ಊನ | – | ಕೇಡು |
| ಎರಗಿ | – | ನಮಸ್ಕರಿಸು |
| ಎಗರಿ | – | ಜಿಗಿದು |
| ಎರಿಗೆ | – | ಕಪ್ಪು ಭೂಮಿಗೆ |
| ಎಣೆಯಿಲ್ಲ | – | ಕೊನೆಯಿಲ್ಲ, ಶಕ್ತಿ ಇಲ್ಲ |
| ಎಮಕು | – | ಡೌಲು |
| ಐತಿ | – | ಅದೆ |
| ಒಗತನ | – | ಸಂಬಂಧ |
| ಒಣಗ್ಗಿ | – | ಪಲ್ಯ |

ಒಂದು ಕೊಟ್ಟರೆ – ಸರಿಯಾಗಿ ಹೊಡೆದರೆ
ಕಡಿದಾಡು – ಜಗಳಾಡು
ಕಗ್ಗ – ಕಾಡು ಮನುಷ್ಯ ಅನಾಗರಿಕ
ಕಸರು – ದೋಷ
ಕಟಿ – ಹೊಡೆ
ಕಡ – ಸಾಲ, ಕೈಗಡ
ಕಂತಿ – ಹೊಡೆತ
ಕಳಕಳಿ – ಕರುಳ ಪ್ರೀತಿ, ಕಾಳಜಿ
ಕರ್ಚಿಕಾಯಿ – ಸಿಹಿ ಖಾದ್ಯ
ಕಮ್ಮನ್ನ – ರುಚಿಕಟ್ಟಾದ
ಕತ್ತಿ – ಕತ್ತೆ, ಬೈಗುಳ, ಆಯುಧ
ಕಂಠಮಟಾ – ಹೊಟ್ಟೆ ತುಂಬಾ
ಕಡಿತಾಳ – ಬೆಣ್ಣೆಗಾಗಿ ಮಜ್ಜಿಗೆ ಕಡೆಯುವುದು
ಕಲಗಂಚಿ – ಮುಸುರಿ ಹಾಕುವ ಪಾತ್ರೆ
ಕಮ್ಮಿ – ಕಡಿಮೆ
ಕಾಳಿ – ಕಹಳೆ
ಕಾಟಿಲ್ಲ – ತೊಂದರೆಯಿಲ್ಲ
ಕಾದು – ಕಾಯ್ದು
ಕಾಟ – ಪಲ್ಲಂಗ
ಕೀರುತಿ – ಕೀರ್ತಿ
ಕುಂಕಿ – ಹೆಗಲು, ಭುಜದ ಮೇಲೆ ಮಕ್ಕಳ ಆಟದಲ್ಲಿ ಹಿರಿಯರು ಡಗ್ಗುವುದು.
ಕುಕ್ಕು – ಹೊಡೆ
ಕುಕ್ಕರಿಸು – ಕುಳಿತುಕೋ
ಕುತ್ತು – ಕುಳಿತು, ಸಂಕಟ
ಕುಂಟಲಿಪಿ – ಕುಂಟಾಟ
ಕುಳಬಾನ – ಸೆಗಣಿಯ (ಒಣಗಿದ) ಕುಳ್ಳುಗಳ ಬಣವೆ
ಕೂಳು – ಅನ್ನ, ಆಹಾರ
ಕೂನ – ಗುರುತು
ಕೆರಸಿ – ರೊಟ್ಟಿ ಇಡುವ ಬಿದಿರಿನ ಬುಟ್ಟಿ
ಕೆರಿ – ತುರಿಸು

| | | |
|---|---|---|
| ಕೊಣಮಗಿ | – | ರೊಟ್ಟಿ ಮಾಡುವ ಕಟ್ಟಿಗೆಯ ಪರಾತ |
| ಕೋಲಿ | – | ಜೋಳದ ದಂಟನ್ನು ಕೋಯ್ತು ನಂತರ ಉಳಿದ ಕೆಳಗಿನ ಭಾಗ |
| ಕೊರದು | – | ಥಾಳವಾಗಿ ಹಚ್ಚಿದ |
| ಕೊಂಕಿ | – | ಜಗಳಗಂಟಿ |
| ಖೂನ | – | ಗುರುತು |
| ಗಳಗಿ | – | ಕಾಳುತುಂಬುವ ಬಿದಿರಿನ ಬುಟ್ಟಿ. |
| ಸಟ್ನ | – | ಒಮ್ಮೆಲೆ, ಸದ್ದು ಮಾಡದೆ, ಕೂಡಲೆ |
| ಗತ್ತು | – | ಹಂಚಿಕೆ |
| ಗಡಾ | – | ಬೇಗನೆ |
| ಗಂಟು | – | ಹಣ |
| ಗಂಡಕ್ಕಾ | – | ಬೇಯದ ಅನ್ನ |
| ಗ್ಯಾನಿ | – | ನೆನಪು |
| ಗೂರು | – | ಕೆಮ್ಮು, ಕಷ್ಟ |
| ಗೇನಕಿ | – | ನೆನಪು ಮಾಡು |
| ಗೇಲಿ | – | ನಗೆ ಚಾಟಕಿ |
| ಗೊಂಗಡಿ | – | ಕಂಬಳಿ |
| ಗೊಂದಲ | – | ಜಗಳ, ದಾಂದಲೆ |
| ಚಾ | – | ಚಹ |
| ಚೂರು | – | ಸ್ವಲ್ಪ |
| ಚಟ್ಟಾ ಬೆಳಗು | – | ಸರಿಯಾಗಿ ಹೊಡೆ |
| ಜಡದ | – | ಸರಿಯಾಗಿ |
| ಜರ್ಲಿ | – | ಸಾಣಿಗೆಯ ಸಾಧನ |
| ಜತಿಗಿ | – | ಚಕ್ಕಡಿಯ ಎತ್ತಿಗೆ ಕಟ್ಟುವ ನಾರಿನ ಸಾಧನ |
| ಜಂತಿ | – | ಮನೆಯ ಮೇಲ್ಛಾವಣಿಗೆ ಸಂಬಂಧಿಸಿದ ತೊಲಿ |
| ಜಾಡಿಸು | – | ಹೊಡೆ, ಬಡಿ |
| ತಗಾದೆ | – | ತಂಟೆ |
| ತರು | – | ತರುವುದು |
| ತರ್ಲೆ | – | ಜಗಳ |
| ತತ್ರಾಣಿ | – | ನೀರು ತುಂಬುವ ಮಣ್ಣಿನ ಪಾತ್ರೆ |

ತಗಲು – ಸುಳ್ಳು
ತಂಬಿಗೆ ತಗೋ – ಮಲವಿಸರ್ಜನೆಗಾಗಿ ಹೋಗು
ತಂದಿ – ತಂದಿರುವೆ
ತಕ್ಕ – ತಕ್ಕಂತೆ
ತಿಡ್ಡು – ಸೊಕ್ಕು
ತಿಂತಾಳ – ತಿನ್ನುತ್ತಾಳೆ
ತೆಂವಿ – ಹಂಚು
ತುಸಾ – ಸ್ವಲ್ಪ
ತೂಗುಸ್ತಾರ – ನಿಭಾಯಿಸುತ್ತಾರೆ
ತೋಡಿ – ಸರಿಯಾಗಿ, ಜೊತೆಯಾಗಿ
ದಟ್ಟಿ – ಸೀರೆ
ದುಕ್ಕ – ದುಃಖ
ದಾಗದಾರ – ಡಾಕ್ಟರ
ದೀಡು – ಒಂದೂಧರೆ
ಧಡಗ್ಗನೆ – ಅವಸರದಿಂದ, ಒಮ್ಮೆಲೆ
ದ್ಯಾಸ – ನೆನಪು
ದ್ವಾಸಿ – ದೋಸೆ
ಡೌಲು – ಧೀಮಾಕ, ಚೈನಿ
ನಗ – ಚಕ್ಕಡಿಯ ನೊಗ
ನಕ್ಕಿ – ನಿಜಕ್ಕೂ
ನಂಗೆ – ನನಗೆ
ನಾರಿಗೂಟ – ನಾರಿಯ ಸಂಗಡ
ನಾಕ – ನಾಲ್ಕು
ನಿಲುವು – ಎತ್ತರ
ನೆದರು – ಕೆಟ್ಟ ದೃಷ್ಟಿ
ನೆರೆದಿಲ್ಲಾಂತ – ಋತುಮತಿಯಾಗಿಲ್ಲಂತ
ನೆನಸಿ – ನೆನಪಿಸಿ
ನೆಟೆ – ನೆಟ್ಟಗೆ
ನೆಪ್ಪು – ನೆನಪು
ನೆವಾ – ಕುಂಟು ಕಾರಣ

ಪರಿಯಾಣ – ಪಾತ್ರೆ
ಪಕ್ಕಕ್ಕೆ – ಪಕ್ಕದಲ್ಲಿ
ಪರಟ – ತೆಂಗಿನಕಾಯಿ ಗೊರಟು
ಪಂಟ – ಹರಟೆ
ಪುಗ್ಗದಾಕಿ – ಒನಪ್ಪು, ವೈಯಾರದಾಕಿ
ಬರಾದ – ಬರಬಹುದು
ಬಳ್ಳು – ಬೆರಳು
ಬದಿ – ಹೊಲದ ಅಂಚು
ಬಂದಿ – ಬಂದಿರುವೆ
ಬಕ್ಕಣಾ – ಕಿಸೆ
ಬಡೂರು – ಬಡವರು
ಬಳ್ಳಾಗ – ಬೆರಳಿನಲ್ಲಿ
ಬಳೆಗೈ – ಬಳೆ ಇರುವ ಕೈ
ಬಕ್ಕಬರ್ಲೆ – ಅಂಗಾತ, ಹೊಟ್ಟೆ ಮೇಲಾಗಿ
ಬಾಯ್ಬಡಕಿ – ಆತ್ಮ ಪ್ರಶಂಸೆ ಮಾಡಿಕೊಳ್ಳುವವಳು
ಬಾಳ – ಬಹಳ
ಬಿರಡಿ – ಅಂಗಿಯ ಬಟನ್
ಬಿಡಕಿ – ಸೂಳೆ, ಬಿಡಾಡಿ ಬೆಗುಳ
ಬಿತ್ತಗಿ – ಬಿತ್ತುವುದು
ಬೆಸಾ – ಇಜ್ಜೋಡು ಸರಿ ಇಲ್ಲದ
ಬೇತ – ಹಂಚಿಕೆ, ಹೊಂಚು
ಬೇಬರ್ಸಿ – ಬೈಗುಳ ನಡತೆ ಗೆಟ್ಟವಳು
ಬೇಸಿ – ಒಳ್ಳೆಯದು
ಮನಾರ – ಬಹಳ
ಮಗಿ – ಮಣ್ಣಿನ ಸಣ್ಣ ಕುಡಿಕಿ
ಮಡಿ – ರೇಶ್ಮೆ ಪೀತಾಂಬರ
ಮತ್ತ – ಮತ್ತೊಮ್ಮೆ
ಮಳಿ – ಮಳೆ
ಮರೀಗಿ – ಮರೆಯಲ್ಲಿ
ಮಕ – ಮುಖ

| | | |
|---|---|---|
| ಮಂಕು | – | ಕಳೆಗುಂಡಿದ |
| ಮಂಡಾಳ | – | ಚುರಮುರಿ |
| ಮದಗುಣಕಿ | – | ಒಂದು ಸಸ್ಯ |
| ಮಡ್ಡಿ | – | ಮಂದಬುದ್ಧಿಯವಳು |
| ಮನಿ | – | ಹೆಂಡತಿ |
| ಮುತ್ತೋದಿ | – | ಮುತ್ತೈದೆ |
| ಮಂಡಿ | – | ಹಟಮಾರಿ |
| ಮರ | – | ಕೇರುವ ಮೊರ |
| ಮಾಡಿ | – | ಮೇಲ್ಮಾಳಿಗೆ |
| ಮಾಲು | – | ಮಹಲು |
| ಮಾಲ್ದಿ | – | ಗೋಧಿಯ ಸಿಹಿಖಾದ್ಯ |
| ಮಾಲೀಸು | – | ಕಾಳಜಿ ಪರಾಂಬರಕಿ |
| ಮೊಕ | – | ಮೋರೆ |
| ಮ್ಯಾರಿ | – | ಉಪಹಾರ |
| ರಂಪು | – | ಕಾಟ |
| ರಂಗು | – | ಖುಸಿ, ಹುರುಪು ಶಕ್ತಿ |
| ರೊಕ್ಕ | – | ಹಣ |
| ಲತ್ತಿ | – | ಹೊಡೆತ |
| ಎಲ್ಲೆ ಹೊಡಿ | – | ಚಕ್ಕಂದವಾಡು |
| ಲಗೂ | – | ಬೇಗನೆ |
| ವಟಗಿ ಪಾವುಡ | – | ಮಸಿ ಅರಿವೆ |
| ವಜನ | – | ದೊಡ್ಡಿಸ್ತನ |
| ವಾರೀಗಿ | – | ಮಗ್ಗುಲ ಹೋಗಿ |
| ಸದರಿನ್ಯಾಗ | – | ಸಭೆಯೊಳಗೆ |
| ಸಭಾಕ | – | ಸಭೆಗೆ |
| ಸಂಬಾಳ | – | ಒಂದು ವಾದ್ಯದ ಹೆಸರು |
| ಸನುಮಂತ | – | ಸಮಾಧಾನ |
| ಸುದ್ದ | – | ಒಳ್ಳೆಯ |
| ಸುಂಕದವ | – | ಸುಂಕದ ಕಟ್ಟೆಯನು ತೆರಿಗೆ ವಸೂಲಿದಾರ |
| ಸಾರಿನಕಟ್ಟು | – | ಬೇಳೆ ಕುದಿಸಿದ ತಿಳಿ ನೀರಿನ ಸಾರು |

| | | |
|---|---|---|
| ಸಾಪಳಸ್ತಾಳ | – | ಬಯ್ಯುತ್ತಾಳೆ |
| ಸೀಗಡಿ | – | ಈಜಲು ಕಟ್ಟಿಕೊಳ್ಳುವ ಕುಂಬಳಕಾಯಿ |
| ಸಿಂದಿ | – | ಸಾರಾಯಿ |
| ಸುಲಿಗಾಯಿ | – | ಹಸಿ ಕಡಲೆಕಾಯಿ |
| ಸುರಿತಾಳ | – | ಸಪ್ಪಳ ಮಾಡುತ್ತ ಊಟಮಾಡುತ್ತಾಳೆ |
| ಸುತ್ತಾಳೆ | – | ಸುತ್ತುತ್ತಾಳೆ |
| ಸೆರೆ | – | ಸರಾಯಿ |
| ಹಸವು | – | ಹಸಿವು |
| ಹಂಡ | – | ನಸುಗೆಂಪು ಬಣ್ಣದ ದನ |
| ಹಲಪಿ | – | ಕರದಂಟು, ಬೆಲ್ಲದ ಸಿಹಿ ತಿನಿಸು |
| ಹರಕತಿ | – | ಹರಟೆ |
| ಹರ್ತ | – | ಹರಿತವಾದ |
| ಹ್ವಾರೆ | – | ಕೆಲಸ |
| ಹಾರೂ | – | ಹಾರುವ |
| ಹಾರಿಗ್ಗಾಲೆ | – | ತಡಮಾಡದೆ ಓಟದ ನಡಿಗೆ |
| ಹಾಸು ಹೊಯ್ಯು | – | ಚಂಚಲ ಮನಸು |
| ಹಿಗ್ಗು | – | ಸಂತೋಷಪಡು |
| ಹುಟ್ಟು | – | ಜೇನಹುಟ್ಟು |
| ಹುಲಿವರದು | – | ಸುತ್ತುಗಟ್ಟಿ |
| ಹೊಳ್ಳಿ | – | ಹೊರಳಿ |
| ಹೋತು | – | ಹೋಯಿತು |
| ಹೊರಗಡೆ | – | ಬಹಿರ್ದೆಸೆ |
| ಹೋತ್ಲು | – | ಹೋಲಿಕೆಯುಳ್ಳವಳು |
| ಹೋತಾರ | – | ಹೋಲಿಕೆ ಅವರದೇ ಇದೆ |
| ಹೊಕ್ಕಾರ | – | ಹೋಗುತ್ತಾರೆ |

* * * * *